"ಸೌಮ್ಯನಾದ ಅಕ್ರೂರನೇ! ಪ್ರಯಾಣದಲ್ಲಿ ತೊಂದರೆಯೇನೂ ಆಗಲಿಲ್ಲವಷ್ಟೇ? ನಿನಗೆ ಸ್ವಾಗತಬಯಸುತ್ತೇನೆ. ನಿನಗೆ ಮಂಗಳವಾಗಲಿ. ಮಥುರಾಪಟ್ಟಣದಲ್ಲಿ ನಮ್ಮ ಆತ್ಮೀಯಬಂಧುಗಳೂ ಸುಹೃದರೂ ಯಾವುದೂ ದುರ್ಘಟನೆಗಳಿಲ್ಲದೇ ಸ್ವಸ್ಥರಾಗಿರುವರೇ? ಹೆಸರಿಗೆ ಮಾತ್ರವೇ ಸೋದರಮಾವನಾಗಿರುವ, ನಮ್ಮ ಕುಲಕ್ಕೆ ವ್ಯಾಧಿರೂಪನಾಗಿರುವ ಕಂಸನು ವೃದ್ಧಿಹೊಂದುತ್ತಿರುವಾಗ ನಮ್ಮ ವಂಶೀಯರ, ಸಂತಾನದ ಮತ್ತು ಪ್ರಜೆಗಳ ಕುಶಲದ ವಿಷಯವಾಗಿ ಕೇಳುವುದೇನಿದೆ? ದುಷ್ಟನಾದ ಅವನು ಬದುಕಿರುವವರೆಗೂ ನಮ್ಮ ಬಂಧುಗಳಾಗಲೀ, ಪ್ರಜೆಗಳಾಗಲೀ ಸುಖ ದಿಂದಿರಲು ಸಾಧ್ಯವೇ ಇಲ್ಲ. ಸೌಮ್ಯನೇ! ನಮಗೆ ಇದೊಂದು ಅತ್ಯಂತ ದುಃಖದ ಸಂಗತಿಯಾಗಿದೆ. ನನ್ನ ಸಲುವಾಗಿ ನಿರಪರಾಧಿಗಳಾದ ಮತ್ತು ಸದಾಚಾರಸಂಪನ್ನರಾದ ನನ್ನ ತಾಯಿ-ತಂದೆಗಳು ಪಡಬಾರದ ಕಷ್ಟಪಡುತ್ತಿದ್ದಾರೆ. ಹಲವಾರು ಬಗೆಯ ಯಾತನೆಗಳನ್ನು ಅನುಭವಿಸುತ್ತಿದ್ದಾರೆ. ನನ್ನ ಕಾರಣದಿಂದಲೇ ಅವರ ಕಾಲುಗಳಿಗೆ ಸಂಕೋಲೆಗಳನ್ನು ತೊಡಿಸಿ ಸೆರೆಮನೆಯಲ್ಲಿಡಲಾಗಿದೆ. ನನ್ನ ಕಾರಣದಿಂದಲೇ ಆ ದುಷ್ಟನು ಅವರಿಗೆ ಹುಟ್ಟಿದ ಎಲ್ಲ ಮಕ್ಕಳನ್ನೂ ಸಂಹರಿಸಿದನು. ಇದನ್ನು ನಾನು ಹೇಗೆ ತಾನೇ ಸಹಿಸಿಕೊಳ್ಳಲಿ? ಸೌಭಾಗ್ಯವಶದಿಂದ ಇಂದು ನಿನ್ನ ದರ್ಶನವಾಗಿದೆ. ಬಹಳ ದಿವಸಗಳಿಂದಲೂ ನಾವು ನಿನ್ನ ಆಗಮನವನ್ನು ನಿರೀಕ್ಷಿಸುತ್ತಲೇ ಇದ್ದೆವು. ನಮ್ಮ ನಿರೀಕ್ಷಣೆಯಂತೆ ನೀನು ಆಗಮಿಸಿರುವೆ. ಪೂಜ್ಯನೇ! ನಿನ್ನ ಆಗಮನದ ಕಾರಣವನ್ನು ವಿವರಿಸಿ ಹೇಳು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಭಗವಾನ್ ಶ್ರೀಕೃಷ್ಣನು ಅಕ್ರೂರನನ್ನು ಹೀಗೆ ಪ್ರಶ್ನಿಸಲಾಗಿ ಆತನು ಎಲ್ಲ ವಿಷಯಗಳನ್ನೂ ವಿಶದವಾಗಿ ವರ್ಣಿಸಿ

ಹೇಳಿದನು. ಕಂಸನು ಯದುವಂಶೀಯರೊಡನೆ ದ್ವೇಷಕಟ್ಟಿಕೊಂಡಿರುವುದನ್ನೂ ವಸುದೇವನನ್ನು ವಧಿಸಲು ಕೂಡ ಪ್ರಯತ್ನಶೀಲನಾಗಿರುವುದನ್ನೂ ಅಕ್ರೂರನು ಶ್ರೀಕೃಷ್ಣನಿಗೆ ಹೇಳಿದನು. ಕಂಸನ ಸಂದೇಶವನ್ನೂ, ಯಾವ ಉದ್ದೇಶದಿಂದ ತನ್ನನ್ನು ದೂತನಾಗಿ ಕಂಸನು ಕಳುಹಿಸಿರುವನೆಂಬುದನ್ನೂ ಹೇಳಿದನು. ವಸುದೇವನ ಸೆರೆಮನೆಯಲ್ಲಿ ಹುಟ್ಟಿ ಗೋಕುಲದಲ್ಲಿ ಶತ್ರುವಾದ ಶ್ರೀಕೃಷ್ಣನು ಬೆಳೆಯುತ್ತಿರುವನೆಂದು ನಾರದರು ಕಂಸನಿಗೆ ಹೇಳಿದ ವಿಷಯವನ್ನೂ ಅಕ್ರೂರನು ಶ್ರೀಕೃಷ್ಣನಿಗೆ ಅರುಹಿದನು. ಅಕ್ರೂರನು ಹೇಳಿದುದೆಲ್ಲವನ್ನೂ ಕೇಳಿ ಶತ್ರುವಿನಾಶಕನಾದ ಬಲರಾಮನೂ, ಶ್ರೀಕೃಷ್ಣನೂ ಪಕ-ಪಕನೆ ನಕ್ಕುಬಿಟ್ಟರು. ಬಳಿಕ ಶ್ರೀಕೃಷ್ಣನು ತಂದೆಯಾದ ನಂದಗೋಪನಿಗೆ ಕಂಸನ ಆದೇಶವನ್ನು ತಿಳಿಸಿದನು. ಕಂಸನ ಆಜ್ಞೆಯನ್ನು ಶ್ರೀಕೃಷ್ಣನ ಮೂಲಕವಾಗಿ ಕೇಳುತ್ತಲೇ ನಂದಗೋಪನು ಗೋಪಾಲರಿಗೆ ಆಜ್ಞೆಮಾಡಿದನು:

"ಗೋಪಾಲರೇ! ಹಾಲು-ಮೊಸರು-ತುಪ್ಪಗಳನ್ನು ಸಂಗ್ರಹಿಸಿ ಒಯ್ಯಲು ಸಿದ್ಧಪಡಿಸಿರಿ. ರಾಜನಿಗೆ ಕೊಡಬೇಕಾದ ಕಪ್ಪ-ಕಾಣಿಕೆಗಳನ್ನು ಸಂಗ್ರಹಿಸಿರಿ. ಪ್ರಯಾಣಮಾಡಲು ಎತ್ತಿನ ಗಾಡಿಗಳು ಈಗಲೇ ಸಿದ್ಧವಾಗಲಿ. ನಾಳೆ ಪ್ರಾತಃಕಾಲವೇ ನಾವು ಮಥುರಾಪಟ್ಟಣಕ್ಕೆ ಪ್ರಯಾಣ ಮಾಡಬೇಕಾಗಿದೆ. ಅಲ್ಲಿಗೆ ಹೋಗಿ ಕಂಸನಿಗೆ ಹಾಲು-ಮೊಸರು-ತುಪ್ಪಗಳನ್ನೂ ಕಾಣಿಕೆಯನ್ನೂ ಒಪ್ಪಿಸಬೇಕಾಗಿದೆ. ಅಲ್ಲೀಗ ಅದ್ಭುತವಾದ ಧನುರ್ಯಾಗಮಹೋತ್ಸವವು ನಡೆಯುತ್ತಿದೆ. ಆ ಮಹೋತ್ಸವವನ್ನು ನೋಡಲು ದೇಶದ ಎಲ್ಲ ಕಡೆಗಳಿಂದಲೂ ಜನರು ಆಗಮಿಸಿದ್ದಾರೆ. ನಾವೂ ಕೂಡ ಮಥುರಾಪಟ್ಟಣಕ್ಕೆ ಹೋಗಿ ಅಲ್ಲಿ ನಡೆಯುತ್ತಿರುವ ಮಹೋತ್ಸವವನ್ನು ನೋಡಿ ಆನಂದಿಸೋಣ."–ಹೀಗೆ ನಂದಗೋಪನು ತಳವಾರನ ಮೂಲಕವಾಗಿ ನಂದಗೋಕುಲದಲ್ಲೆಲ್ಲಾ ಸಾರಿಸಿದನು.

ಪರೀಕ್ಷಿತಮಹಾರಾಜ! ರಾಮ-ಕೃಷ್ಣರನ್ನು ಮಥುರಾಪಟ್ಟಣಕ್ಕೆ ಕರೆದೊಯ್ಯಲು ಅಕ್ರೂರನು ಬಂದಿರುವನೆಂಬ ಸಮಾಚಾರವನ್ನು ಗೋಪಿಯರು ಕೇಳಿ ಬಹಳ ದುಃಖಿತರಾದರು. ತಮ್ಮ ಪ್ರೇಮಮೂರ್ತಿಯು ಮಥುರೆಗೆ ಅಕ್ರೂರನೊಡನೆ ಹೊರಡಲಿದ್ದಾನೆಂದು ಕೇಳಿ ಗೋಪಿಯರು ಪರಿತಾಪದಿಂದ

ನಿಟ್ಟುಸಿರುಬಿಟ್ಟರು. ಎಲ್ಲ ಗೋಪಿಯರ ಮುಖಗಳೂ ಬಾಡಿಹೋದುವು. ಉಟ್ಟಸೀರೆಗಳು ಜಾರಿಹೋಗುತ್ತಿದ್ದರೂ, ಕೈಕಡಗಗಳು ಕಳಚಿಬೀಳುತ್ತಿದ್ದರೂ, ತುರುಬುಗಳು ಬಿಚ್ಚಿಹೋಗುತ್ತಿದ್ದರೂ ಅವರಿಗೆ ಅದರ ಪರಿವೆಯೇ ಇರಲಿಲ್ಲ. ಶ್ರೀಕೃಷ್ಣನಲ್ಲಿಯೇ ನೆಟ್ಟಮನಸ್ಸುಳ್ಳವರಾಗಿ ಅವನ ಶ್ರೀವಿಗ್ರಹವನ್ನೇ ಧ್ಯಾನಿಸುತ್ತಿದ್ದ ಕೆಲವು ಗೋಪಿಯರಿಗೆ ಚಿತ್ತವೃತ್ತಿಯೇ ನಿಂತು ಹೋಗಿ ಅವರು ಸಮಾಧಿಸ್ಥರಾದರು. ಆತ್ಮನಲ್ಲಿಯೇ ಮನಸ್ಸನ್ನು ಲೀನಗೊಳಿಸಿಬಿಡುವಂತೆ ಶ್ರೀಕೃಷ್ಣನ ಶ್ರೀವಿಗ್ರಹದಲ್ಲಿಯೇ ಮನಸ್ಸನ್ನು ಲಯಗೊಳಿಸಿದ್ದ ಗೋಪಿಯರಿಗೆ ತಮಗೊಂದು ಪ್ರತ್ಯೇಕವಾದ ಶರೀರವಿರುವುದೆಂಬ ಭಾವನೆಯೂ ಹೊರಟುಹೋಯಿತು. ಅವರು ಪ್ರಪಂಚವನ್ನೇ ಮರೆತುಬಿಟ್ಟಿದ್ದರು. ಮತ್ತೆ ಕೆಲವು ಗೋಪಿಯರು ಶೌರಿಯ ಮಂದಹಾಸದಿಂದ ಕೂಡಿದ ಅನುರಾಗವನ್ನು ಸ್ಮರಿಸಿಕೊಂಡರು. ಕೆಲವರು ವಿಚಿತ್ರವಾದ ಪದಸಮೂಹಗಳಿಂದ ಕೂಡಿದ ಮನಮುಟ್ಟುವ ಶ್ರೀಕೃಷ್ಣನ ಸುಮಧುರವಾದ ಮಾತುಗಳನ್ನು ಸ್ಮರಿಸಿ ವಿಮೋಹಿತರಾದರು. ಕೆಲವರು ಗೋಪಿಯರು ಮುಕುಂದನ ಮನೋಹರವಾದ ನಡಿಗೆಯನ್ನೂ, ಆಟವನ್ನೂ ಸ್ಮರಿಸಿಕೊಂಡರು. ಅವನ ಭಾವ-ಭಂಗಿಗಳನ್ನು ಸ್ಮರಿಸಿಕೊಂಡರು. ಅವನ ಕಿರುನಗೆಯನ್ನೂ, ಪ್ರೇಮಪೂರ್ಣವಾದ ಕಡೆಗಣ್ಣಿನ ನೋಟವನ್ನೂ ಸ್ಮರಿಸಿಕೊಂಡರು. ಎಂತಹುದೇ ಶೋಕವನ್ನಾದರೂ ನಿವಾರಿಸಿ ನಗಿಸುವುದಾಗಿದ್ದ ಅವನ ಹಾಸ್ಯದ ಮಾತುಗಳನ್ನೂ ಸ್ಮರಿಸಿಕೊಂಡರು. ಅವನೆಸಗಿದ್ದ ಅದ್ಭುತವಾದ ಕಾರ್ಯಗಳನ್ನು ಸ್ಮರಿಸಿಕೊಂಡರು. ಅಂತಹ ತಮ್ಮ ಇನಿಯನು ತಮ್ಮನ್ನು ಬಿಟ್ಟುಹೋಗುವನೆಂಬುದನ್ನು ನೆನೆದೊಡನೆಯೇ ಅವರಿಗೆ ಬಹಳ ಭಯವಾಯಿತು. ಅವರು ವಿರಹತಾಪದಿಂದ ತತ್ತರಿಸಿಹೋದರು. ಅವರು ತಮ್ಮ ಸರ್ವಸ್ವವನ್ನೂ ಭಗವಂತನಿಗೇ ಸಮರ್ಪಿಸಿಕೊಂಡುಬಿಟ್ಟಿದ್ದರು. ವಿರಹದ ದುಃಖದಿಂದಾಗಿ ಅವರ ಕಣ್ಣುಗಳಲ್ಲಿ ಕಂಬನಿಯು ತುಂಬಿಹೋಗಿದ್ದಿತು. ಅಚ್ಯುತನಲ್ಲಿಯೇ ನೆಟ್ಟಮನಸ್ಸಿದ್ದ ಗೋಪಿಯರು ಗುಂಪಾಗಿ ಸೇರಿ ಹೇಳತೊಡಗಿದರು :

ಅಹೋ ವಿಧಾತಸ್ತವ ನ ಕ್ವಚಿದ್ದಯಾ
ಸಂಯೋಜ್ಯ ಮೈತ್ರ್ಯಾ ಪ್ರಣಯೇನ ದೇಹಿನಃ ।

ತಾಂಶ್ಚಾಕೃತಾರ್ಥಾನ್ ವಿಯುನಂಕ್ಷ್ಯಪಾರ್ಥಕಂ
ವಿಕ್ರೀಡಿತಂ ತೇಽರ್ಭಕಚೇಷ್ಟಿತಂ ಯಥಾ ॥೧೯॥



"ಓ ಬ್ರಹ್ಮದೇವನೇ! ನಿನ್ನ ಹೃದಯದಲ್ಲಿ ದಯೆಯೆಂಬುದು ಲೇಶಮಾತ್ರವೂ ಇಲ್ಲವಲ್ಲಾ! ಮೊದಲು ನೀನು ಸೌಹಾರ್ದದಿಂದಲೂ, ಪ್ರೇಮದಿಂದಲೂ ಪ್ರಪಂಚದಲ್ಲಿರುವ ಪ್ರಾಣಿಗಳನ್ನು ಪರಸ್ಪರವಾಗಿ ಸೇರಿಸುವೆ. ಆದರೆ ಅವರ ಆಶಯವು ಪೂರ್ಣವಾಗುವುದರೊಳಗಾಗಿಯೇ, ಅವರು ಪೂರ್ಣತೃಪ್ತಿಯನ್ನು ಹೊಂದುವ ಮೊದಲೇ, ಅವರನ್ನು ಬೇರ್ಪಡಿಸುವೆ. ನಿಶ್ಚಯವಾಗಿಯೂ ಈ ನಿನ್ನ ಕಾರ್ಯವು ಮಕ್ಕಳ ಆಟದಂತೆ ವ್ಯರ್ಥವಾದುದೇ ಸರಿ.

ಯಸ್ತ್ವಂ ಪ್ರದರ್ಶ್ಯಾಸಿತಕುನ್ತಲಾವೃತಂ
ಮುಕುನ್ದವಕ್ತ್ರಂ ಸುಕಪೋಲಮುನ್ನಸಮ್ ।
ಶೋಕಾಪನೋದಸ್ಮಿತಲೇಶಸುನ್ದರಂ
ಕರೋಷಿ ಪಾರೋಕ್ಷ್ಯಮಸಾಧು ತೇ ಕೃತಮ್ ॥೨೦॥

ಓ ವಿಧಾತನೇ! ನೀನು ಉಂಟುಮಾಡಿರುವುದು ಅದೆಷ್ಟು ದುಃಖಕರ ಪ್ರಸಂಗವೆಂಬುದನ್ನು ನೀನೇ ನೋಡು. ಮೊದಲು ನೀನು ಪ್ರೇಮವನ್ನು ಉಮ್ಮಡಿಸುವ ಶ್ಯಾಮಸುಂದರನ ದಿವ್ಯವಾದ ಮುಖಕಮಲವನ್ನು ನಮಗೆ ತೋರಿಸಿಕೊಟ್ಟೆ. ಅದೆಷ್ಟು ಚೆಲುವಿನ ಮುಖಕಮಲ! ಕಪ್ಪಾದ ಮುಂಗುರುಳಿ

ನಿಂದ ಅಲಂಕೃತವಾದುದು. ಸುಂದರವಾದ ಕಪೋಲಗಳಿಂದಲೂ ನೀಳವಾದ ಮೂಗಿನಿಂದಲೂ ಕೂಡಿ ಬೆಳಗುತ್ತಿರುವುದು. ದುಃಖವನ್ನು ಕಳೆದು ಆನಂದ ವನ್ನುಂಟುಮಾಡುವ ಚೇತೋಹಾರಿಯಾದ ಕಿರುನಗೆಯಿಂದ ಶೋಭಿಸು ತ್ತಿರುವುದು. ಅಂತಹ ಕಡುಚೆಲುವಿನ ಮುಖಕಮಲವನ್ನು ನಮಗೆ ತೋರಿಸಿ ಈಗ ಅದನ್ನು ನಮ್ಮಿಂದ ಮರೆಮಾಡಲು ಹವಣಿಸುತ್ತಿರುವೆ. ಹೀಗೆ ಮಾಡುವುದು ಖಂಡಿತವಾಗಿಯೂ ನಿನಗೆ ಯೋಗ್ಯವೆನಿಸುವುದಿಲ್ಲ.

ಕ್ರೂರಸ್ತ್ವಮಕ್ರೂರಸಮಾಖ್ಯಯಾ ಸ್ಮ ನ-
ಶ್ಚಕ್ಷುರ್ಹಿ ದತ್ತಂ ಹರಸೇ ಬತಾಜ್ಞವತ್ ।
ಯೇನೈಕದೇಶೇಽಖಿಲಸರ್ಗಸೌಷ್ಠವಂ
ತ್ವದೀಯಮದ್ರಾಕ್ಷ್ಮ ವಯಂ ಮಧುದ್ವಿಷಃ ॥೨೧॥

ವಿಧಾತನೇ! ಅತ್ಯಂತಕ್ರೂರಿಯಾದ ನೀನು 'ಅಕ್ರೂರ' ನೆಂಬ ಹೆಸರಿ ನಿಂದ ಕರೆಯಲ್ಪಡುತ್ತಾ ನಮ್ಮ ಕಣ್ಮಣಿಯನ್ನು ಮೂಢನಂತೆ ಅಪಹರಿಸು ತ್ತಿರುವೆಯಲ್ಲವೇ! ಮಧುಹಂತಕನಾದ ಶ್ರೀಕೃಷ್ಣನ ಒಂದೊಂದು ಅವಯವ ಗಳಲ್ಲಿಯೂ ನಿನ್ನ ಸೃಷ್ಟಿಯ ಚಾತುರ್ಯವನ್ನು ಯಾವ ಕಣ್ಣುಗಳಿಂದ ಕಂಡು ನಾವು ಬೆರಗಾಗಿ ನಿನ್ನನ್ನು ಕೊಂಡಾಡುತ್ತಿದ್ದೆವೋ ಅಂತಹ ನಮ್ಮ ಕಣ್ಣುಗಳನ್ನೇ ನೀನು ಅಪಹರಿಸುತ್ತಿರುವೆ. ನಮ್ಮ ಕಣ್ಮಣಿಯನ್ನು ಕಾಣದ ನಾವು ಕಣ್ಣಿಲ್ಲದ ಕುರುಡರಂತೆಯೇ ಸರಿ.

ನ ನನ್ದಸೂನುಃ ಕ್ಷಣಭಙ್ಗಸೌಹೃದಃ
ಸಮೀಕ್ಷತೇ ನಃ ಸ್ವಕೃತಾತುರಾ ಬತ ।
ವಿಹಾಯ ಗೇಹಾನ್ ಸ್ವಜನಾನ್ ಸುತಾನ್ ಪತೀಂ-
ಸ್ತದ್ದಾಸ್ಯಮದ್ಧೋಪಗತಾ ನವಪ್ರಿಯಃ ॥೨೨॥

ವಿಧಾತನನ್ನೇಕೆ ನಿಂದಿಸೋಣ! ನಂದಗೋಪನ ಮಗನಾದ ಶ್ಯಾಮ ಸುಂದರನೇ ಹೊಸಬರಲ್ಲಿ ವಿಶೇಷವಾದ ಪ್ರೀತಿಯುಳ್ಳವನಾಗಿರುತ್ತಾನೆ. ಆದುದರಿಂದಲೇ ಹೊಸಬರ ಸ್ನೇಹಮಾಡಲು ಆಶಿಸಿದ್ದಾನೆ. ಇವನ ಸ್ನೇಹ ವೆಂಬುದು ಕ್ಷಣಭಂಗುರವಾದುದು. ಸ್ಥಿರವಾದುದಲ್ಲ. ಅವನ ಕಿರುನಗೆ, ಸವಿ ಮಾತು, ಕುಡಿನೋಟ, ಮುಂಗುರುಳಿನಿಂದ ಕೂಡಿದ ಮುದ್ದಾದ ಮುಖ,

ಕೊಳಲಿನ ಇಂಚರ–ಇವುಗಳಿಂದ ಆಕರ್ಷಿಸಲ್ಪಟ್ಟವರಾಗಿ ಮನೆ-ಮಠಗಳನ್ನೂ, ಮಾತಾ-ಪಿತೃಗಳನ್ನೂ, ಪತಿ-ಸುತರನ್ನೂ, ಅಣ್ಣ-ತಮ್ಮಂದಿರನ್ನೂ ತೊರೆದು ಸರ್ವಸಮರ್ಪಣಭಾವದಿಂದ ನಾವು ಮುಕುಂದನ ಬಳಿಗೆ ಬಂದೆವು. ಆದರೆ ಈಗವನು ನಮ್ಮ ಕಡೆಗೂ ನೋಡುತ್ತಿಲ್ಲವಲ್ಲಾ!

ಸುಖಂ ಪ್ರಭಾತಾ ರಜನೀಯಮಾಶಿಷಃ
ಸತ್ಯಾ ಬಭೂವುಃ ಪುರಯೋಷಿತಾಂ ಧ್ರುವಮ್ ।
ಯಾಃ ಸಂಪ್ರವಿಷ್ಟಸ್ಯ ಮುಖಂ ವ್ರಜಸ್ಪತೇಃ
ಪಾಸ್ಯನ್ತ್ಯಪಾಙ್ಗೋತ್ಕಲಿತಸ್ಮಿತಾಸವಮ್ ॥೨೩॥

ಸಖಿಯರೇ! ಇಂದಿನ ರಾತ್ರಿಯು ಕಳೆದನಂತರ ಆಗುವ ಸುಪ್ರಭಾತವು ಮಥುರಾಪಟ್ಟಣದ ಸ್ತ್ರೀಯರಿಗೆ ಮಂಗಳಮಯವಾಗುತ್ತದೆ. ಆ ಮಥುರಾಪಟ್ಟಣದ ಸ್ತ್ರೀಯರ ಆಸೆ-ಆಕಾಂಕ್ಷೆಗಳೆಲ್ಲವೂ ಸತ್ಯವಾಗಿ ಪರಿಣಮಿಸುವುವು. ಯಾವಾಗ ನಮ್ಮ ವ್ರಜರಾಜನಾದ ಶ್ಯಾಮಸುಂದರನು ಮಥುರಾಪಟ್ಟಣವನ್ನು ಪ್ರವೇಶಿಸುವನೋ ಆಗ–ಅವನ ಕಡೆಗಣ್ಣಿನ ನೋಟದಿಂದ ಕೂಡಿದ ಕಿರುನಗೆಯೆಂಬ ಅಮೃತವುಳ್ಳ ಮುಖವನ್ನು ಪುರಸ್ತ್ರೀಯರು ಕಣ್ಣುಗಳ ಮೂಲಕವಾಗಿ ಪಾನಮಾಡುತ್ತಾರೆ.

ತಾಸಾಂ ಮುಕುನ್ದೋ ಮಧುಮಞ್ಜುಭಾಷಿತೈ-
ರ್ಗೃಹೀತಚಿತ್ತಃ ಪರವಾನ್ ಮನಸ್ವ್ಯಪಿ ।
ಕಥಂ ಪುನರ್ನಃ ಪ್ರತಿಯಾಸ್ಯತೇಽಬಲಾ
ಗ್ರಾಮ್ಯಾಃ ಸಲಜ್ಜಸ್ಮಿತವಿಭ್ರಮೈರ್ಭ್ರಮನ್ ॥೨೪॥

ಗೆಳತಿಯರೇ! ನಮ್ಮ ಮುಕುಂದನು ಧೈರ್ಯವಂತನೂ ಹೌದು ; ಮನನಶೀಲನೂ ಹೌದು. ನಂದನೇ ಮೊದಲಾದ ಗುರುಜನರ ಆಜ್ಞಾನುಸಾರವಾಗಿ ನಡೆದುಕೊಳ್ಳುತ್ತಾನೆ. ಆದರೆ ಪಟ್ಟಣದ ಬೆಡಗಿನ ಬಿನ್ನಾಣಗಿತ್ತಿಯರು, ಮಧುವಿಗೆ ಸಮಾನವಾದ ಸವಿಮಾತುಗಳಿಂದ ಅವನ ಮನಸ್ಸನ್ನು ಅಪಹರಿಸಿಬಿಡುತ್ತಾರೆ. ನಾಚಿಕೆಯಿಂದ ಕೂಡಿದ ಕಿರುನಗೆಯುಳ್ಳ ಸ್ತ್ರೀಯರ ಸೌಂದರ್ಯದಿಂದ ಭ್ರಾಂತನಾಗುವ ನಮ್ಮ ಪ್ರಿಯತಮನು ಹಳ್ಳಿಗರಾದ ಮತ್ತು ಅಬಲೆಯರಾದ ನಮ್ಮ ಬಳಿಗೆ ಪುನಃ ಹೇಗೆತಾನೇ ಬರುವನು?

ಅದ್ಯ ಧ್ರುವಂ ತತ್ರ ದೃಶೋ ಭವಿಷ್ಯತೇ
ದಾಶಾರ್ಹಭೋಜಾನ್ಧಕವೃಷ್ಣಿಸಾತ್ವತಾಮ್ ।
ಮಹೋತ್ಸವಃ ಶ್ರೀರಮಣಂ ಗುಣಾಸ್ಪದಂ
ದ್ರಕ್ಷ್ಯನ್ತಿ ಯೇ ಚಾಧ್ವನಿ ದೇವಕೀಸುತಮ್ ॥೨೫॥

ನಿಶ್ಚಯವಾಗಿಯೂ ಇಂದು ಮಥುರಾಪಟ್ಟಣದಲ್ಲಿ ಶ್ಯಾಮಸುಂದರನನ್ನು ಸಂದರ್ಶಿಸಲಿರುವ ದಾಶಾರ್ಹ-ಭೋಜ-ಅಂಧಕ-ವೃಷ್ಣಿ-ಸಾತ್ವತ ವಂಶೀಯರಿಗೆ ನೇತ್ರಾನಂದೋತ್ಸವವೇ ಆಗುತ್ತದೆ. ಇಷ್ಟು ಮಾತ್ರವಲ್ಲದೆ ಮಾರ್ಗದಲ್ಲಿ ಲಕ್ಷ್ಮೀರಮಣನಾದ, ಗುಣಸಾಗರನಾದ, ದೇವಕಿಯ ಮಗನಾದ ನಮ್ಮ ಪ್ರಿಯತಮನನ್ನು ಕಾಣುವ ದಾರಿಹೋಕರ ಕಣ್ಣುಗಳಿಗೂ ದೊಡ್ಡ ಹಬ್ಬವೇ ಆಗುತ್ತದೆ.

ಮೈತದ್ವಿಧಸ್ಯಾಕರುಣಸ್ಯ ನಾಮ ಭೂ-
ದಕ್ರೂರ ಇತ್ಯೇತದತೀವ ದಾರುಣಃ ।
ಯೋಽಸಾವನಾಶ್ವಾಸ್ಯ ಸುದುಃಖಿತಂ ಜನಂ
ಪ್ರಿಯಾತ್ಪ್ರಿಯಂ ನೇಷ್ಯತಿ ಪಾರಮಧ್ವನಃ ॥೨೬॥

ಅಕ್ರೂರನಾದರೋ ತನ್ನ ಹೆಸರಿಗೆ ವಿರುದ್ಧವಾಗಿ ಅತಿಕ್ರೂರನಾಗಿದ್ದಾನೆ. ಶ್ರೀಕೃಷ್ಣನ ವಿರಹದಿಂದ ಅತಿಯಾಗಿ ದುಃಖಿಸುತ್ತಿರುವ ನಮ್ಮನ್ನು ಸವಿಮಾತುಗಳಿಂದ ಸಂತೈಸುತ್ತಲೂ ಇಲ್ಲ. ನಮಗೆ ಅತ್ಯಂತ ಪ್ರಿಯನಾದ ಏಕಮಾತ್ರಸ್ವಾಮಿಯಾದ ಶ್ರೀಕೃಷ್ಣನನ್ನು ದೇಶಾಂತರಕ್ಕೆ ಕರೆದುಕೊಂಡು ಹೋಗುತ್ತಿದ್ದಾನೆ. ಛೀ! ಇಂತಹ ನಿಷ್ಕರುಣಿಗೆ ಅಕ್ರೂರನೆಂಬ ಹೆಸರು ಖಂಡಿತವಾಗಿಯೂ ಇರಬಾರದಾಗಿತ್ತು.

ಅನಾರ್ದ್ರಧೀರೇಷ ಸಮಾಸ್ಥಿತೋ ರಥಂ
ತಮನ್ವಮೀ ಚ ತ್ವರಯನ್ತಿ ದುರ್ಮದಾಃ ।
ಗೋಪಾ ಅನೋಭಿಃ ಸ್ಥವಿರೈರುಪೇಕ್ಷಿತಂ
ದೈವಂ ಚ ನೋಽದ್ಯ ಪ್ರತಿಕೂಲಮೀಹತೇ ॥೨೭॥

ಈಗಂತೂ ನಮ್ಮ ಪ್ರಿಯತಮನಿಗೆ ದಯಾರ್ದ್ರವಾದ ಮನಸ್ಸೇ ಇಲ್ಲವಾಗಿದೆ. ಅವನ ಮನಸ್ಸು ಅತ್ಯಂತ ಕಠಿಣವಾಗಿಬಿಟ್ಟಿದೆ. ನಾವು ದುಃಖಿಸು

ತ್ತಿರುವುದನ್ನೂ ಲೆಕ್ಕಿಸದೇ ನಮ್ಮ ಪ್ರಿಯತಮನು ಈಗಾಗಲೇ ಹೋಗಿ ರಥದಲ್ಲಿ ಕುಳಿತುಬಿಟ್ಟಿದ್ದಾನೆ. ಅವನನ್ನನುಸರಿಸಿ ಪ್ರಯಾಣಹೊರಟಿರುವ ದುರಹಂಕಾರಿಗಳಾದ ಈ ಗೋಪಾಲಕರೂ ಬಂಡಿಗಳಲ್ಲಿ ಕುಳಿತು ಮುಂದೆ ಹೋಗಲು ಅವಸರಪಡಿಸುತ್ತಿದ್ದಾರೆ. ಮುದುಕರಾದರೂ ಸಾವಕಾಶ ಮಾಡುತ್ತಿದ್ದಾರೆಯೇ ಎಂದರೆ ಅವರೂ ಔದಾಸೀನ್ಯದಿಂದ–'ನೀವೆಲ್ಲರೂ ಪ್ರಯಾಣಮಾಡಿರಿ ; ನಾವು ಹಿಂದಿನಿಂದ ಬರುತ್ತೇವೆ'–ಎಂದು ಪ್ರಯಾಣಕ್ಕೆ ಪ್ರೋತ್ಸಾಹಿಸುತ್ತಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ಇಂದು ನಮಗೆ ವಿಧಿಯು ಪ್ರತಿಕೂಲವಾಗಿಯೇ ಇದೆ.

ನಿವಾರಯಾಮಃ ಸಮುಪೇತ್ಯ ಮಾಧವಂ
ಕಿಂ ನೋಽಕರಿಷ್ಯನ್ ಕುಲವೃದ್ಧಬಾನ್ಧವಾಃ ।
ಮುಕುನ್ದಸಙ್ಗಾನ್ನಿಮಿಷಾರ್ಧದುಸ್ತ್ಯಜಾ-
ದ್ದೈವೇನ ವಿಧ್ವಂಸಿತದೀನಚೇತಸಾಮ್ ॥೨೮॥

ಹೀಗೆ ದುಃಖಿಸುತ್ತಾ ಕುಳಿತಿದ್ದರೆ ನಾವು ಯಾವ ಕಾರ್ಯವನ್ನೂ ಸಾಧಿಸಲಾರೆವು. ನಮ್ಮ ಪ್ರಿಯತಮನು ನಮ್ಮಿಂದ ತಪ್ಪಿಸಿಕೊಂಡು ಹೊರಟೇಹೋಗುತ್ತಾನೆ. ಆದುದರಿಂದ ಎಲ್ಲರೂ ಎದ್ದೇಳಿರಿ. ನಾವೆಲ್ಲರೂ ಒಟ್ಟಾಗಿ ರಥದ ಬಳಿಗೆ ಹೋಗಿ ಮಾಧವನ ರಥವು ಮುಂದೆ ಸಾಗದಂತೆ ತಡೆದೇ ಬಿಡೋಣ. ಕುಲದ ವೃದ್ಧರಾಗಲೀ, ನೆಂಟರಿಷ್ಟರಾಗಲೀ ನಮ್ಮನ್ನೇನು ಮಾಡುತ್ತಾರೆ? ನಮಗಂತೂ ಅರ್ಧನಿಮಿಷವಾದರೂ ಮುಕುಂದನನ್ನು ಬಿಟ್ಟಿರಲು ಸಾಧ್ಯವೇ ಇಲ್ಲ. ದೈವವಾದರೋ ನಮ್ಮ ಪ್ರಿಯತಮನೊಡನೆ ವಿರಹವನ್ನು ಕಲ್ಪಿಸಿ ಬಡಪಾಯಿಗಳಾದ ನಮ್ಮ ಬುದ್ಧಿಯನ್ನು ಹಾಳುಮಾಡಿಬಿಟ್ಟಿದೆ.

ಯಸ್ಯಾನುರಾಗಲಲಿತಸ್ಮಿತವಲ್ಗುಮನ್ತ್ರ-
ಲೀಲಾವಲೋಕಪರಿರಮ್ಭಣರಾಸಗೋಷ್ಠ್ಯಾಮ್ ।
ನೀತಾಃ ಸ್ಮ ನಃ ಕ್ಷಣಮಿವ ಕ್ಷಣದಾ ವಿನಾ ತಂ
ಗೋಪ್ಯಃ ಕಥಂ ನ್ವತಿತರೇಮ ತಮೋ ದುರನ್ತಮ್ ॥೨೯॥

ಗೆಳತಿಯರೇ! ನಾವು ನಮ್ಮ ಪ್ರಾಣಪ್ರಿಯನಾದ ಶ್ರೀಕೃಷ್ಣನ ಪ್ರೇಮ

ಪೂರ್ಣವಾದ ಮತ್ತು ಚೇತೋಹಾರಿಯಾದ ಕಿರುನಗೆ, ರಹಸ್ಯದಲ್ಲಿ ಅವನಾಡುತ್ತಿದ್ದ ಪ್ರೇಮಾಲಾಪಗಳು, ವಿಲಾಸಪೂರ್ಣವಾದ ಕಡೆಗಣ್ಣಿನ ನೋಟ, ಪ್ರೇಮಾಲಿಂಗನೆ–ಇತ್ಯಾದಿಗಳಿಂದ ರಾಸಕ್ರೀಡೆಯ ಸಭೆಯಲ್ಲಿ ಸುದೀರ್ಘವಾದ ರಾತ್ರಿಯನ್ನೂ ಕ್ಷಣದಂತೆ ಕಳೆಯುತ್ತಿದ್ದೆವು. ಆದರೆ ಈಗ ಅವನಿಲ್ಲದ ದುರಂತರೂಪವಾದ ವಿರಹವೆಂಬ ಅಂಧಕಾರವನ್ನು ಹೇಗೆತಾನೇ ದಾಟಿಹೋಗೋಣ?

ಯೋಽಹ್ನಃ ಕ್ಷಯೇ ವ್ರಜಮನನ್ತಸಖಃ ಪರೀತೋ
ಗೋಪೈರ್ವಿಶನ್ ಖುರರಜಶ್ಛುರಿತಾಲಸ್ರಕ್ ।
ವೇಣುಂ ಕ್ವಣನ್ ಸ್ಮಿತಕಟಾಕ್ಷನಿರೀಕ್ಷಣೇನ
ಚಿತ್ತಂ ಕ್ಷಿಣೋತ್ಯಮುಮೃತೇ ನು ಕಥಂ ಭವೇಮ ॥೩೦॥

ನಮ್ಮ ಪ್ರಿಯತಮನು ಅನುದಿನವೂ ಸಾಯಂಕಾಲವಾಗುತ್ತಲೇ ಬಲರಾಮನೊಡನೆ ಗೋಪಾಲರಿಂದ ಪರಿವೃತನಾಗಿ ಬರುತ್ತಿದ್ದನು. ಆ ಸಮಯದಲ್ಲಿ ಅವನ ಗುಂಗುರುಕೂದಲುಗಳು ಮತ್ತು ವನಮಾಲೆಯು ಹಸುಗಳ ಗೊರಸುಗಳಿಂದ ಎಬ್ಬಿಸಲ್ಪಟ್ಟಿದ್ದ ಧೂಳಿನಿಂದ ಮುಚ್ಚಿಹೋಗಿರುತ್ತಿದ್ದುವು. ಆದರೂ ನಮ್ಮ ಇನಿಯನು ನವಮನ್ಮಥನಂತೆಯೇ ತನ್ನ ಕಾಂತಿಯಿಂದ ಬೆಳಗುತ್ತಿದ್ದನು. ಆಹಾ! ಎಂತಹ ಚೇತೋಹಾರಿಯಾದ ದೃಶ್ಯವದು! ಕೊಳಲನ್ನೂದುತ್ತಾ ಮುಗುಳ್ನಗೆಯಿಂದಲೂ, ಕಡೆಗಣ್ಣಿನ ನೋಟದಿಂದಲೂ ನಮ್ಮ ಮನಸ್ಸನ್ನು ಸೂರೆಗೊಂಡುಬಿಡುತ್ತಿದ್ದನು. ಅಂತಹವನನ್ನು ಬಿಟ್ಟು ನಾವು ಬದುಕಿರುವುದಾದರೂ ಹೇಗೆ ಸಾಧ್ಯ?"

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ವಿರಹಪೀಡಿತರಾಗಿ ವ್ರಜಸ್ತ್ರೀಯರು ಬಾಯಿಂದ ಹೀಗೆ ಹೇಳುತ್ತಿದ್ದರೂ ಅವರ ಮನಸ್ಸುಗಳೆಲ್ಲವೂ ಪ್ರಿಯತಮನಾದ ಶ್ರೀಕೃಷ್ಣನ ಅಂಗಸ್ಪರ್ಶ, ಆಲಿಂಗನೆ, ಅಧರಪಾನ, ಚುಂಬನ–ಇತ್ಯಾದಿಗಳಲ್ಲಿಯೇ ಲೀನವಾಗಿಬಿಟ್ಟಿದ್ದಿತು. ಅವರೆಲ್ಲರೂ ಲಜ್ಜೆಯನ್ನು ಪರಿತ್ಯಜಿಸಿ 'ಗೋವಿಂದ! ದಾಮೋದರ! ಮಾಧವ! ನಮ್ಮನ್ನು ಬಿಟ್ಟು ಹೊರಟು ಹೋಗುವೆಯಾ? ಬೇಡ! ಹೋಗಬೇಡ! ನೀನಿಲ್ಲದೆ ನಾವು ಬದುಕಿರ

ಲಾರೆವು'–ಮುಂತಾಗಿ ಹೇಳುತ್ತಾ ಗಟ್ಟಿಯಾಗಿ ರಾಗ-ರಾಗವಾಗಿ ಗೋಳಾಡ ತೊಡಗಿದರು.

ಪರೀಕ್ಷಿತ! ಗೋಪಿಕಾಸ್ತ್ರೀಯರು ಹೀಗೆ ಗೋಳಾಡುತ್ತಿದ್ದಾಗಲೇ ರಾತ್ರಿಯು ಕಳೆದು ಸೂರ್ಯನು ಉದಯಿಸಿದನು. ಅಕ್ರೂರನು ಸಂಧ್ಯಾವಂದ ನೆಯೇ ಮೊದಲಾದ ಪ್ರಾತಃಕಾಲದ ಕರ್ಮಗಳೆಲ್ಲವನ್ನೂ ಮುಗಿಸಿಕೊಂಡು ರಥದಲ್ಲಿ ರಾಮ-ಕೃಷ್ಣರನ್ನು ಕುಳ್ಳಿರಿಸಿಕೊಂಡು ಹೊರಡಲನುವಾದನು. ನಂದನೇ ಮೊದಲಾದ ಗೋಪಾಲರು ಮಡಕೆಗಳಲ್ಲಿ ಹಾಲು-ಮೊಸರು-ತುಪ್ಪ-ಜೇನುತುಪ್ಪ–ಮುಂತಾದುವನ್ನು ತುಂಬಿಕೊಂಡು ಅಪಾರವಾದ ಕಾಣಿಕೆಗಳೊಡನೆ ಗಾಡಿಗಳಲ್ಲಿ ಕುಳಿತು ಅಕ್ರೂರನ ರಥವನ್ನು ಹಿಂಬಾಲಿಸಿ ದರು. ಪ್ರಿಯತಮನಾದ ಶ್ರೀಕೃಷ್ಣನ ರಥವನ್ನೇ ಅನುಸರಿಸಿಹೋಗುತ್ತಿದ್ದ ಗೊಲ್ಲತಿಯರು, ಶ್ರೀಕೃಷ್ಣನ ಮುಗುಳ್ನಗೆ, ಕುಡಿನೋಟ–ಇವೇ ಮುಂತಾದ ಪ್ರೇಮಪೂರ್ಣವಾದ ಹಾವಭಾವಗಳಿಂದ ಸಂತೋಷಗೊಳಿಸಲ್ಪಟ್ಟರೂ ಭಗವಂತನ ಆದೇಶವನ್ನು ಪಡೆದುಕೊಳ್ಳಬೇಕೆಂಬ ಆಕಾಂಕ್ಷೆಯಿಂದ ಅಲ್ಲಿಯೇ ನಿಂತರು. ತಾನು ಮಥುರಾಪಟ್ಟಣಕ್ಕೆ ಹೋಗುತ್ತಿರುವುದಕ್ಕಾಗಿ ಗೋಪಿಕಾ ಸ್ತ್ರೀಯರಿಗೆ ವಿರಹವೇದನೆಯುಂಟಾಗಿದೆಯೆಂಬುದು ಯದುಶ್ರೇಷ್ಠನಾದ ಶ್ರೀಕೃಷ್ಣನಿಗೆ ತಿಳಿಯಿತು. ಒಡನೆಯೇ ಭಕ್ತಪರಾಧೀನನಾದ ಶ್ರೀಕೃಷ್ಣನು 'ನಾನು ಪುನಃ ಬರುತ್ತೇನೆ. ನಿಮ್ಮನ್ನು ಬಿಟ್ಟು ಎಲ್ಲಿಯೂ ಹೋಗುವು ದಿಲ್ಲ'–ಎಂಬ ಪ್ರೇಮಸಂದೇಶವನ್ನು ದೂತರ ಮೂಲಕವಾಗಿ ಕಳುಹಿಸಿ ಗೋಪಿಯರನ್ನು ಸಮಾಧಾನಗೊಳಿಸಿದನು. ಶ್ರೀಕೃಷ್ಣನ ರಥದ ಧ್ವಜವು ಮತ್ತು ರಥಚಕ್ರಗಳಿಂದ ಹುಟ್ಟಿದ ಧೂಳಿಯು ಕಾಣುವವರೆಗೂ ಗೋಪಿ ಯರು ಎವೆಯಿಕ್ಕದೆ ನೋಡುತ್ತಾ ಚಿತ್ರಪಟಗಳಂತೆ ಸ್ತಬ್ಧರಾಗಿ ನಿಂತಿದ್ದರು. ಆದರೆ ಅವರ ಮನಸ್ಸು ಮಾತ್ರ ಪ್ರಾಣವಲ್ಲಭನಾದ ಶ್ರೀಕೃಷ್ಣನ ಜೊತೆ ಯಲ್ಲಿಯೇ ಹೊರಟುಹೋಯಿತು. ಶ್ರೀಕೃಷ್ಣನು ಪ್ರಯಾಣಹೊರಟ ನಂತರವೂ ಗೋಪಿಯರಿಗೆ ಅವನು ಹಿಂದಿರುಗಿ ಬಂದುಬಿಡುವನೆಂಬ ಆಶ ಯವೇ ಇದ್ದಿತು. ಬಹಳ ಹೊತ್ತಾದರೂ ತಮ್ಮ ಪ್ರಿಯತಮನು ಹಿಂದಕ್ಕೆ ಬಾರದಿರಲು ನಿರಾಶರಾಗಿ ಅವರು ತಮ್ಮ-ತಮ್ಮ ಮನೆಗಳಿಗೆ ಹಿಂದಿರುಗಿದರು. ಪರೀಕ್ಷಿತಮಹಾರಾಜ! ಗೋಪಿಯರು ಹಗಲು-ರಾತ್ರಿಗಳೆನ್ನದೆ ಸತತವಾಗಿ

ಗೋವಿಂದನ ಅದ್ಭುತವಾದ ಲೀಲಾಪ್ರಸಂಗಗಳನ್ನೇ ಗಾನಮಾಡುತ್ತಿದ್ದು ಅವನನ್ನೇ ಸದಾಕಾಲದಲ್ಲಿಯೂ ಸ್ಮರಿಸುತ್ತಾ ತಮ್ಮ ವಿರಹತಾಪವನ್ನು ಕಡಿಮೆಮಾಡಿಕೊಳ್ಳುತ್ತಿದ್ದರು.

ಇತ್ತಲಾಗಿ ಶ್ರೀಕೃಷ್ಣನು ಬಲರಾಮನೊಡನೆಯೂ, ಅಕ್ರೂರನೊಡನೆಯೂ ವಾಯುವೇಗಕ್ಕೆ ಸಮಾನವಾದ ವೇಗದಿಂದ ಕೂಡಿದ್ದ ರಥದಲ್ಲಿ ಕುಳಿತು ಪಾಪನಾಶಿನಿಯಾದ ಯಮುನಾನದಿಯ ತೀರಕ್ಕೆ ಬಂದನು. ಬಳಿಕ ಶ್ರೀಕೃಷ್ಣನು ಶುದ್ಧಾಚಮನಮಾಡಿ, ಮರಕತಮಣಿಯಂತೆ ನೀಲವಾಗಿಯೂ ಅಮೃತದಂತೆ ರುಚಿಕರವಾಗಿಯೂ ಇದ್ದ ಯಮುನೆಯ ನೀರನ್ನು ಕುಡಿದು, ಅಲ್ಲಿದ್ದ ವೃಕ್ಷಗಳ ತಂಪಾದ ನೆರಳಿನಲ್ಲಿ ಬಲರಾಮನೊಡನೆ ಸ್ವಲ್ಪ ಹೊತ್ತು ತಿರುಗಾಡುತ್ತಿದ್ದು ರಥವನ್ನೇರಿದನು. ಅಕ್ರೂರನು ಬಲರಾಮ-ಕೃಷ್ಣರನ್ನು ರಥದಲ್ಲಿದ್ದ ಸುಖಾಸನಗಳಲ್ಲಿ ಕುಳ್ಳಿರಿಸಿ, ಅವರ ಅನುಮತಿಯನ್ನು ಪಡೆದು ಕಾಳಿಂದೀನದಿಯ ಮಡುವಿಗೆ ಹೋಗಿ ವಿಧಿವತ್ತಾಗಿ ಸ್ನಾನಮಾಡತೊಡಗಿದನು. ಸನಾತನವಾದ ಅಘಮರ್ಷಣಮಂತ್ರಗಳನ್ನು ಜಪಿಸುತ್ತಾ ಯಮುನಾನದಿಯ ನೀರಿನಲ್ಲಿ ಅಕ್ರೂರನು ಮುಳುಗಿದಾಗ ಅಲ್ಲಿಯೇ ರಾಮ-ಕೃಷ್ಣರಿಬ್ಬರೂ ಜೊತೆಗೂಡಿ ಕುಳಿತಿರುವುದನ್ನು ನೋಡಿದನು. "ವಸುದೇವನ ಮಕ್ಕಳಿಬ್ಬರನ್ನೂ ಈಗ ತಾನೇ ರಥದ ಸುಖಾಸನಗಳಲ್ಲಿ ಕುಳ್ಳಿರಿಸಿ ಅವರ ಅನುಮತಿಯನ್ನು ಪಡೆದು ಬಂದಿರುತ್ತೇನೆ. ಅವರು ನೀರಿನೊಳಕ್ಕೆ ಹೇಗೆ ಬಂದರು? ಯಾವಾಗ ಬಂದರು?"–ಎಂಬ ಸಂಶಯವು ಅಕ್ರೂರನ ಮನಸ್ಸಿನಲ್ಲುಂಟಾಯಿತು. ನೀರಿನಲ್ಲಿರುವವರು ರಥದಲ್ಲಿ ಇರಲಾರರೆಂದು ಭಾವಿಸಿಕೊಂಡ ಅಕ್ರೂರನು ನೀರಿನಿಂದ ತಲೆಯನ್ನು ಮೇಲೆತ್ತಿ ರಥದ ಕಡೆಗೆ ನೋಡಿದನು. ರಾಮ-ಕೃಷ್ಣರಿಬ್ಬರೂ ಹಿಂದಿನಂತೆಯೇ ರಥದಲ್ಲಿ ಸುಖವಾಗಿ ಕುಳಿತಿದ್ದರು. ನೀರಿನಲ್ಲಿ ಮುಳುಗಿದಾಗ ರಾಮ-ಕೃಷ್ಣರು ಇದ್ದಾರೆಂಬ ಭ್ರಮೆಯು ತನಗೇನಾದರೂ ಉಂಟಾಗಿರಬಹುದೆಂದು ಅಕ್ರೂರನು ಭಾವಿಸಿ ಸಂದೇಹವನ್ನು ನಿವಾರಿಸಿಕೊಳ್ಳಲು ಪುನಃ ನೀರಿನಲ್ಲಿ ಮುಳುಗಿದನು. ಆ ಸಮಯದಲ್ಲಿ ಅಕ್ರೂರನು ರಾಮ-ಕೃಷ್ಣರನ್ನೂ ನೀರಿನಲ್ಲಿ ಕಂಡುದಲ್ಲದೇ ಇನ್ನೂ ಹಲವಾರು ಅದ್ಭುತಗಳನ್ನೂ ನೀರಿನಲ್ಲಿ ನೋಡಿದನು. ಸಿದ್ಧ - ಚಾರಣ - ಗಂಧರ್ವಾಸುರರು ತಲೆಗಳನ್ನು ತಗ್ಗಿಸಿ

ಕೊಂಡು ಕೈಗಳನ್ನು ಮುಗಿದುಕೊಂಡು ಶೇಷನಾಗನನ್ನು ಸ್ತುತಿಸುತ್ತಿದ್ದರು. ಆತನು ನೀಲಾಂಬರಧರನಾಗಿದ್ದನು. ಅವನಿಗೆ ಕಿರೀಟದಂತಹ ಹೆಡೆಗಳೂ ಸಾವಿರ



ತಲೆಗಳೂ ಇದ್ದುವು. ತಾವರೆಯ ದಂಟಿನಂತೆ ಶ್ವೇತವರ್ಣದಿಂದ ಕಂಗೊಳಿಸುತ್ತಾ ಸಾವಿರ ಶಿಖರಗಳುಳ್ಳ ಶ್ವೇತಪರ್ವತದಂತೆಯೇ ಅವನು ರಾರಾಜಿಸುತ್ತಿದ್ದನು. ಶೇಷನಾಗನ ಮೇಲೆ ಕುಳಿತಿದ್ದ ದಟ್ಟವಾದ ಮೇಘಗಳ ಕಾಂತಿಯಿಂದ ಕಂಗೊಳಿಸುತ್ತಿದ್ದ, ರೇಷ್ಮೆಯ ಪೀತಾಂಬರವನ್ನು ಉಟ್ಟಿದ್ದ ಚತುರ್ಭುಜನಾದ, ಶಾಂತವಾದ ಮುಖಮುದ್ರೆಯನ್ನು ಹೊಂದಿದ್ದ, ಕಮಲದ ಎಸಳಿನಂತೆ ಎಣ್ಣೆಗೆಂಪಿನ ಕಣ್ಣುಗಳಿಂದ ವಿರಾಜಮಾನನಾಗಿದ್ದ ದಿವ್ಯಮೂರ್ತಿಯನ್ನು ಅಕ್ರೂರನು ನೋಡಿದನು. ಆ ದಿವ್ಯಪುರುಷನ ಮುಖವು ಸುಂದರವಾಗಿಯೂ, ಪ್ರಸನ್ನವಾಗಿಯೂ ಇದ್ದಿತು. ಅವನ ಕಿರುನಗೆಯೂ ಕಟಾಕ್ಷವೀಕ್ಷಣವೂ ಚೇತೋಹಾರಿಗಳಾಗಿದ್ದುವು. ಅವನ ಹುಬ್ಬುಗಳು ಮತ್ತು ಮೂಗು ಅತ್ಯಂತ ಸುಂದರವಾಗಿದ್ದುವು. ಅವನ ಕಿವಿಗಳು ಕಡುಚೆಲುವಾಗಿದ್ದುವು. ಆ ಮಹಾಪುರುಷನು ಸುಂದರವಾದ ಕಪೋಲಗಳಿಂದ ಕಂಗೊಳಿಸುತ್ತಿದ್ದನು. ಅವನ ತುಟಿಗಳು ತೊಂಡೇಹಣ್ಣಿನಂತೆ ಕೆಂಪಾಗಿದ್ದುವು. ತೋಳುಗಳು ನೀಳವಾಗಿಯೂ ದಪ್ಪವಾಗಿಯೂ ಇದ್ದುವು. ಉಬ್ಬಿದ ವಕ್ಷಃಸ್ಥಳವಿದ್ದು ಅದು ಲಕ್ಷ್ಮೀದೇವಿಗೆ ನಿವಾಸಸ್ಥಾನವಾಗಿದ್ದಿತು. ಕುತ್ತಿಗೆಯ ಸುಳಿ ಶಂಖದಂತೆ ಕಂಗೊಳಿಸುತ್ತಿತ್ತು. ಶ್ಯಾಮಸುಂದರನಿಗೆ ಆಳವಾದ ಹೊಕ್ಕಳಿದ್ದು

ಹೊಟ್ಟೆಯು ಮೂರು ರೇಖೆಗಳಿಂದ ಸಮಲಂಕೃತವಾಗಿ ಚಿಗುರಾದ ಅರಳೀ ಮರದೆಲೆಯಂತೆ ತೆಳ್ಳಗಿದ್ದಿತು. ತೆಳುವಾದ ಸೊಂಟವಿದ್ದು ನಿತಂಬಗಳು ಸ್ಥೂಲವಾಗಿದ್ದುವು. ತೊಡೆಗಳು ಆನೆಯ ಸೊಂಡಿಲಿನಂತಿದ್ದುವು. ಮೇಘ ಶ್ಯಾಮನಿಗೆ ಸುಂದರವಾದ ಕಣಕಾಲು-ಮೊಣಕಾಲುಗಳಿದ್ದುವು. ಮಹಾ ಪುರುಷನ ಪಾದಗಳ ಹರಡುಗಳು ಎತ್ತರವಾಗಿದ್ದುವು. ಕೆಂಪಾದ ಕಾಲು-ಗುರುಗಳಿಂದ ಜ್ಯೋತಿರ್ಮಯವಾದ ಕಿರಣಗಳು ಹೊರಚೆಲ್ಲುತ್ತಿದ್ದುವು. ಕಮಲದ ಎಸಳುಗಳಂತಿದ್ದ ಹೊಚ್ಚಹೊಸದಾಗಿ ಕಾಣುತ್ತಿದ್ದ ಹೆಬ್ಬೆರಳು ಗಳಿಂದಲೂ ಕಿರುಬೆರಳುಗಳಿಂದಲೂ ಸಮಲಂಕೃತವಾಗಿದ್ದ ಆ ಮಹಾ ಪುರುಷನ ಪಾದಕಮಲಗಳು ಪ್ರಕಾಶಮಾನವಾಗಿ ಕಾಣುತ್ತಿದ್ದುವು.

ಆ ಮಹಾಪುರುಷನ ತಲೆಯಲ್ಲಿ ಬಹುಮೂಲ್ಯವಾದ, ರತ್ನಖಚಿತ ವಾದ ಕಿರೀಟವಿದ್ದಿತು. ತೋಳುಗಳಲ್ಲಿ ಸುವರ್ಣಮಯವಾದ ತೋಳ್ಬಳೆ ಗಳೂ ಕೈಗಳಲ್ಲಿ ಬಳೆಗಳೂ ಇದ್ದುವು. ಸೊಂಟದಲ್ಲಿ ಸುವರ್ಣಮಯವಾದ ಉಡಿದಾರವಿದ್ದಿತು. ಕತ್ತಿನಲ್ಲಿ ಯಜ್ಞೋಪವೀತವೂ, ರತ್ನಖಚಿತವಾದ ದಿವ್ಯ ಹಾರಗಳೂ, ವನಮಾಲೆಗಳೂ ಇದ್ದುವು. ಕಾಲುಗಳಲ್ಲಿ ಚಿನ್ನದ ಕಾಲ್ಕಡಗ ಗಳೂ ಕಿವಿಗಳಲ್ಲಿ ಜಾಜ್ವಲ್ಯಮಾನವಾದ ಕುಂಡಲಗಳೂ ಬೆಳಗುತ್ತಿದ್ದುವು. ಶೇಷಶಾಯಿಯ ಒಂದು ಕೈಯಲ್ಲಿ ಕಮಲವೂ ಉಳಿದ ಮೂರು ಕೈಗಳಲ್ಲಿ ಶಂಖ-ಚಕ್ರ-ಗದೆಗಳೂ ಇದ್ದುವು. ವಕ್ಷಃಸ್ಥಳದಲ್ಲಿ ಶ್ರೀವತ್ಸದ ಚಿಹ್ನೆಯಿದ್ದಿತು. ಕಂಠದಲ್ಲಿ ವನಮಾಲೆಗಳೊಡನೆ ಕೌಸ್ತುಭಮಣಿಯು ದೇದೀಪ್ಯಮಾನವಾಗಿ ಬೆಳಗುತ್ತಿದ್ದಿತು. ಅಂತಹ ದಿವ್ಯವಾದ ಶ್ರೀವಿಗ್ರಹವನ್ನು ನಂದ-ಸುನಂದರೇ ಮೊದಲಾದ ಪಾರ್ಷದರು ತಮ್ಮ ಒಡೆಯನೆಂಬ ಭಾವನೆಯಿಂದಲೂ, ಸನಕನೇ ಮೊದಲಾದ ಮಹರ್ಷಿಗಳು ಪರಬ್ರಹ್ಮನೆಂಬ ಭಾವನೆಯಿಂದಲೂ, ಬ್ರಹ್ಮ-ರುದ್ರರೇ ಮೊದಲಾದ ದೇವತೆಗಳು ಸರ್ವೇಶ್ವರನೆಂಬ ಭಾವನೆಯಿಂದಲೂ, ಮರೀಚಿಯೇ ಮೊದಲಾದ ಒಂಬತ್ತು ಮಂದಿ ಬ್ರಾಹ್ಮಣಶ್ರೇಷ್ಠರು ಪ್ರಜಾಪತಿಯೆಂಬ ಭಾವನೆಯಿಂದಲೂ, ಪ್ರಹ್ಲಾದ-ನಾರದ-ಉಪರಿಚರವಸು ಗಳೇ ಮೊದಲಾದ ಶುದ್ಧಾತ್ಮರಾದ ಭಕ್ತಶ್ರೇಷ್ಠರು ಪ್ರಿಯತಮನಾದ ಭಗವಂತ ನೆಂಬ ಭಾವನೆಯಿಂದಲೂ ನಿರ್ದುಷ್ಟವಾದ ವೇದಮಂತ್ರಗಳಿಂದ ಶೇಷಶಾಯಿ ಯಾದ ಭಗವಂತನನ್ನು ಸ್ತೋತ್ರಮಾಡುತ್ತಿದ್ದರು. ಇವರ ಜೊತೆಯಲ್ಲಿಯೇ

ಐಶ್ವರ್ಯ, ಬಲ, ಜ್ಞಾನ, ಶ್ರೀ, ಯಶಸ್ಸು ಮತ್ತು ವೈರಾಗ್ಯಗಳೆಂಬ ಷಡೈಶ್ವರ್ಯಗಳ ಅಧಿದೇವತೆಗಳಾದ ಲಕ್ಷ್ಮೀ, ಪುಷ್ಟಿ, ಸರಸ್ವತೀ, ಕಾಂತಿ, ಕೀರ್ತಿ, ತುಷ್ಟಿಯರೂ ಇಲಾ, ಊರ್ಜಾ, ವಿದ್ಯಾ, ಅವಿದ್ಯಾ, ಮಾಯಾ– ಎಂಬ ಶಕ್ತಿದೇವತೆಗಳೂ ಮೂರ್ತಿಮತ್ತಾಗಿ ನಿಂತು ಭಗವಂತನನ್ನು ಸೇವಿಸುತ್ತಿದ್ದರು. ಪರಮಾತ್ಮನ ಅಂತಹ ಭವ್ಯವಾದ ರೂಪವನ್ನು ಕಂಡು ಅಕ್ರೂರನಿಗೆ ಪರಮಾನಂದವಾಯಿತು. ಪರಾಭಕ್ತಿಯಿಂದ ಆತನು ರೋಮಾಂಚಿತನಾದನು. ಶ್ರೀಕೃಷ್ಣನೇ ಪರಮಪುರುಷಪರಮಾತ್ಮನೆಂಬ ಭಾವನೆಯನ್ನು ಹೊಂದಿ ಪ್ರೇಮಭಾವದ ಉದ್ರೇಕದಿಂದ ಆನಂದಬಾಷ್ಪವನ್ನು ಸುರಿಸಿದನು.

ಭಗವಂತನ ದಿವ್ಯವಾದ ಸ್ವರೂಪವನ್ನು ನೋಡಿದ ಅಕ್ರೂರನಿಗೆ ಜಂಘಾಬಲವೇ ಉಡುಗಿಹೋಗಿದ್ದಿತು. ಬಾಯಿಂದ ಮಾತೇ ಹೊರಡ ದಾಯಿತು. ಹಲವಾರು ಕ್ಷಣಗಳು ಹೀಗೆಯೇ ಕಳೆದನಂತರ ಆತನು ಪುನಃ ಚೇತರಿಸಿಕೊಂಡನು. ತಲೆಬಾಗಿ ಭಗವಂತನಿಗೆ ನಮಸ್ಕರಿಸಿದನು. ಕೈಗಳೆರ ಡನ್ನೂ ಜೋಡಿಸಿ ತಲೆಯ ಮೇಲಿಟ್ಟುಕೊಂಡು ಗದ್ಗದಧ್ವನಿಯಿಂದಲೇ ದಯಾಮಯನಾದ ಪರಮಾತ್ಮನನ್ನು ಮೆಲ್ಲ-ಮೆಲ್ಲನೆ ಸ್ತೋತ್ರಮಾಡಲು ಉಪಕ್ರಮಿಸಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೩೯ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೪೦ನೆಯ ಅಧ್ಯಾಯ

ಅಕ್ರೂರನು ಮಾಡಿದ ಶ್ರೀಕೃಷ್ಣಸ್ತೋತ್ರ

ನತೋಽಸ್ಮ್ಯಹಂ ತ್ವಾಖಿಲಹೇತುಹೇತುಂ
ನಾರಾಯಣಂ ಪೂರುಷಮಾದ್ಯಮವ್ಯಯಮ್ ।
ಯನ್ನಾಭಿಜಾತಾದರವಿನ್ದಕೋಶಾ-
ದ್ಬ್ರಹ್ಮಾವಿರಾಸೀದ್ಯತ ಏಷ ಲೋಕಃ ॥೧॥

"ಪ್ರಭುವೇ! ಜಗತ್ತಿಗೆ ಕಾರಣಭೂತಗಳಾದ ಪಂಚಭೂತಗಳಿಗೂ

ನೀನೇ ಪರಮಕಾರಣನಾಗಿರುವೆ. ಅವಿನಾಶಿಯಾದ, ಪುರುಷೋತ್ತಮನಾದ ನಾರಾಯಣನೂ ನೀನೇ ಆಗಿರುವೆ. ನಿನ್ನ ನಾಭಿಕಮಲದಿಂದಲೇ ಜಗತ್ತಿನ ಸೃಷ್ಟಿಕರ್ತನಾದ ಚತುರ್ಮುಖನು ಆವಿರ್ಭವಿಸಿದನು. ಅಂತಹ ಪರಮ ಪುರುಷನಾದ ನಿನಗೆ ನಮಸ್ಕರಿಸುತ್ತೇನೆ.

ಭೂಸ್ತೋಯಮಗ್ನಿಃ ಪವನಃ ಖಮಾದಿ-
ರ್ಮಹಾನಜಾದಿರ್ಮನ ಇನ್ದ್ರಿಯಾಣಿ ।
ಸರ್ವೇನ್ದ್ರಿಯಾರ್ಥಾ ವಿಬುಧಾಶ್ಚ ಸರ್ವೇ
ಯೇ ಹೇತವಸ್ತೇ ಜಗತೋಽಙ್ಗಭೂತಾಃ ॥೨॥

ಜಗದೀಶ್ವರನೇ! ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ, ಅಹಂಕಾರ, ಮಹತ್ತತ್ತ್ವ, ಪ್ರಕೃತಿ, ಪುರುಷ, ಮನಸ್ಸು, ಇಂದ್ರಿಯ, ಇಂದ್ರಿಯಗಳ ವಿಷಯಗಳು, ಇಂದ್ರಿಯಗಳ ಅಧಿಷ್ಠಾತೃದೇವತೆಗಳು, ಸಮಸ್ತವಾದ ಚರಾಚರಜಗತ್ತು, ಅದರಲ್ಲಿ ನಡೆಯುವ ವ್ಯವಹಾರಗಳು-ಇವೆಲ್ಲವೂ ವಿರಾಟ್ಪುರುಷನಾದ ನಿನ್ನ ಅವಯವಗಳೇ ಆಗಿವೆ.

ನೈತೇ ಸ್ವರೂಪಂ ವಿದುರಾತ್ಮನಸ್ತೇ
ಹ್ಯಜಾದಯೋಽನಾತ್ಮತಯಾ ಗೃಹೀತಾಃ ।
ಅಜೋಽನುಬದ್ಧಃ ಸ ಗುಣೈರಜಾಯಾ
ಗುಣಾತ್ಪರಂ ವೇದ ನ ತೇ ಸ್ವರೂಪಮ್ ॥೩॥

ಇವೆಲ್ಲವೂ ನಿನ್ನ ಅವಯವಗಳೇ ಆಗಿದ್ದರೂ ನಿನ್ನ ಆತ್ಮಸ್ವರೂಪವನ್ನು ಅವು ತಿಳಿದಿರುವುದಿಲ್ಲ. ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಒಳಗಾಗುವುದರಿಂದ ಪ್ರಕೃತಿ ಮತ್ತು ಪ್ರಕೃತಿಯಿಂದ ಹುಟ್ಟಿದ ಸಮಸ್ತಪದಾರ್ಥಗಳೂ ಅನಾತ್ಮ ಗಳೆಂದು ಗ್ರಹಿಸಲ್ಪಟ್ಟಿವೆ. ಬ್ರಹ್ಮನೂ ನಿನ್ನ ಸ್ವರೂಪನೇ ಆಗಿದ್ದಾನೆ. ಆದರೆ ಪ್ರಕೃತಿಯ ಗುಣವಾದ ರಜಸ್ಸಿನಿಂದ ಅವನು ಆವಿರ್ಭೂತನಾಗಿದ್ದಾನೆ. ಈ ಕಾರಣದಿಂದಲೇ ಅವನು ಕೂಡ ಗುಣಗಳ ಆಚೆ ಇರುವ, ನಿರ್ಗುಣನಾದ ಅಥವಾ ಗುಣಾತೀತನಾದ ನಿನ್ನ ಆತ್ಮಸ್ವರೂಪವನ್ನು ತಿಳಿದವನಾಗಿಲ್ಲ.*

---

* **ದೇವೋಽಸವೋಕ್ಷಾಮನವೋ ಭೂತಮಾತ್ರಾ ನಾತ್ಮಾನಮನ್ಯಂ ಚ ವಿದುಃ**

ತ್ವಾಂ ಯೋಗಿನೋ ಯಜನ್ತ್ಯದ್ಧಾ ಮಹಾಪುರುಷಮೀಶ್ವರಮ್ ।
ಸಾಧ್ಯಾತ್ಮಂ ಸಾಧಿಭೂತಂ ಚ ಸಾಧಿದೈವಂ ಚ ಸಾಧವಃ ॥೪॥

ಹೀಗೆ ನೀನು ದೇಹಧಾರಿಗಳ ಚರ್ಮಚಕ್ಷುಸ್ಸಿಗೆ ಗೋಚರನಾಗದಿದ್ದರೂ ಸತ್ಯನಿಷ್ಠರಾದ ಯೋಗಿಗಳು, ಮಹಾಪುರುಷನೂ ಈಶ್ವರನೂ ಆದ ನಿನ್ನನ್ನು ನಾನಾಪ್ರಕಾರವಾಗಿ ಉಪಾಸನೆಮಾಡುತ್ತಾರೆ. ಅಧಿಭೂತ-ಅಧಿದೈವ-ಅಧ್ಯಾತ್ಮಗಳೊಡನಿರುವ ನಿನ್ನನ್ನು ಸತ್ಪುರುಷರು ಉಪಾಸನೆ ಮಾಡುತ್ತಾರೆ.*

ಪರಂ ಯತ್ । ಸರ್ವೇ ಪುಮಾನ್ವೇದ ಗುಣಾಂಶ್ಚ ತಜ್ಜ್ಞೋ ನ ವೇದ ಸರ್ವಜ್ಞಮನನ್ತಮೀಡೇ ।

ಶರೀರ, ಪ್ರಾಣ, ಇಂದ್ರಿಯ, ಭೂತಸೂಕ್ಷ್ಮ ಮುಂತಾದುವು ತಮ್ಮನ್ನೂ ಇತರರನ್ನೂ ಸಹ ತಿಳಿಯಲಾರವು. ಪುರುಷನು ಅಚೇತನಸ್ವರೂಪವನ್ನೂ ತನ್ನ ಸ್ವರೂಪವನ್ನೂ ತಿಳಿದರೂ ಪರಮಾತ್ಮನ ಸ್ವರೂಪವನ್ನು ತಿಳಿಯಲಾರನೆಂಬ ಭಾವವು. (ಭಾವಾರ್ಥದೀಪಿಕಾ)

* ಭಗವದ್ಗೀತೆಯ ೭ನೆಯ ಅಧ್ಯಾಯದ ೨೯-೩೦ನೆಯ ಶ್ಲೋಕಗಳಲ್ಲಿ ಶ್ರೀಕೃಷ್ಣನು ಅಧಿಭೂತ-ಅಧಿದೈವಗಳ ವಿಷಯವಾಗಿ ಹೀಗೆ ಹೇಳುತ್ತಾನೆ :

ಜರಾಮರಣಮೋಕ್ಷಾಯ ಮಾಮಾಶ್ರಿತ್ಯ ಯತನ್ತಿ ಯೇ ।
ತೇ ಬ್ರಹ್ಮ ತದ್ವಿದುಃ ಕೃತ್ಸ್ನಮಧ್ಯಾತ್ಮಂ ಕರ್ಮ ಚಾಖಿಲಮ್ ॥
ಸಾಧಿಭೂತಾಧಿದೈವಂ ಮಾಂ ಸಾಧಿಯಜ್ಞಂ ಚ ಯೇ ವಿದುಃ ।
ಪ್ರಯಾಣಕಾಲೇಽಪಿ ಚ ಮಾಂ ತೇ ವಿದುರ್ಯುಕ್ತಚೇತಸಃ ॥

ಮುಪ್ಪು-ಸಾವುಗಳನ್ನು ತಪ್ಪಿಸಿಕೊಳ್ಳಲು ನನ್ನನ್ನು ಆಶ್ರಯಿಸಿ ಅದಕ್ಕಾಗಿ ಯಾರು ಪ್ರಯತ್ನಿಸುವರೋ–ಅವರು ಆ ಬ್ರಹ್ಮವನ್ನೂ, ಸಂಪೂರ್ಣವಾದ ಅಧ್ಯಾತ್ಮವನ್ನೂ ಅಖಿಲವಾದ ಕರ್ಮವನ್ನೂ ಅರಿತುಕೊಳ್ಳುವರು. ಅಧಿಭೂತ-ಅಧಿದೈವ-ಅಧಿಯಜ್ಞ ಇವುಗಳೊಡನೆ ನನ್ನನ್ನು ಯಾರು ಅರಿತುಕೊಳ್ಳುವರೋ–ಅವರು ಸಾಯುವ ಕಾಲದಲ್ಲಿಯೂ ಸಮಾಹಿತಮನಸ್ಕರಾಗಿದ್ದು ನನ್ನನ್ನು ಕಂಡುಕೊಳ್ಳುವರು–ಎಂದು ಹೇಳುತ್ತಾನೆ. ಅರ್ಜುನನು ೮ನೆಯ ಅಧ್ಯಾಯದಲ್ಲಿ ಅಧ್ಯಾತ್ಮ-ಅಧಿಭೂತ-ಅಧಿದೈವ–ಇವುಗಳ ವಿಷಯವಾಗಿಯೇ ಪ್ರಶ್ನಿಸುತ್ತಾನೆ :

ಕಿಂ ತದ್ಬ್ರಹ್ಮ ಕಿಮಧ್ಯಾತ್ಮಂ ಕಿಂ ಕರ್ಮ ಪುರುಷೋತ್ತಮ ।
ಅಧಿಭೂತಂ ಚ ಕಿಂ ಪ್ರೋಕ್ತಮಧಿದೈವಂ ಕಿಮುಚ್ಯತೇ ॥೧॥

ತ್ರಯ್ಯಾ ಚ ವಿದ್ಯಯಾ ಕೇಚಿತ್ ತ್ವಾಂ ವೈ ವೈತಾನಿಕಾ ದ್ವಿಜಾಃ ।
ಯಜನ್ತೇ ವಿತತೈರ್ಯಜ್ಞೈರ್ನಾನಾರೂಪಾಮರಾಖ್ಯಯಾ ॥೫॥

ಯಾಜ್ಞಿಕರಾದ ಕೆಲವರು ಬ್ರಾಹ್ಮಣರು ಕರ್ಮಕಾಂಡವನ್ನು ಪ್ರತಿಪಾದಿಸುವ ವೇದತ್ರಯಗಳ ಮೂಲಕವಾಗಿ ಮಾಡುವ ವಿಸ್ತಾರವಾದ ಯಜ್ಞಗಳಿಂದ ನಾನಾರೂಪಗಳುಳ್ಳ ದೇವತೆಗಳ ಹೆಸರಿನಿಂದ ನಿನ್ನನ್ನೇ ಪೂಜಿಸುತ್ತಾರೆ.*

ಏಕೇ ತ್ವಾಖಿಲಕರ್ಮಾಣಿ ಸಂನ್ಯಸ್ಯೋಪಶಮಂ ಗತಾಃ ।
ಜ್ಞಾನಿನೋ ಜ್ಞಾನಯಜ್ಞೇನ ಯಜನ್ತಿ ಜ್ಞಾನವಿಗ್ರಹಮ್ ॥೬॥

ಅಧಿಯಜ್ಞಃ ಕಥಂ ಕೋಽತ್ರ ದೇಹೇಽಸ್ಮಿನ್ಮಧುಸೂದನ ।
ಪ್ರಯಾಣಕಾಲೇ ಚ ಕಥಂ ಜ್ಞೇಯೋಽಸಿ ನಿಯತಾತ್ಮಭಿಃ ॥೨॥

ಇದಕ್ಕೆ ಶ್ರೀಕೃಷ್ಣನ ಉತ್ತರ :

ಅಕ್ಷರಂ ಬ್ರಹ್ಮ ಪರಮಂ ಸ್ವಭಾವೋಽಧ್ಯಾತ್ಮಮುಚ್ಯತೇ ।
ಭೂತಭಾವೋದ್ಭವಕರೋ ವಿಸರ್ಗಃ ಕರ್ಮಸಂಜ್ಞಿತಃ ॥೩॥

ಅಧಿಭೂತಂ ಕ್ಷರೋ ಭಾವಃ ಪುರುಷಶ್ಚಾಧಿದೈವತಮ್ ।
ಅಧಿಯಜ್ಞೋಽಹಮೇವಾತ್ರ ದೇಹೇ ದೇಹಭೃತಾಂ ವರ ॥೪॥

ಶ್ರೇಷ್ಠವಾದ ಅಕ್ಷರವೇ ಬ್ರಹ್ಮವು. ಸ್ವಭಾವವು ಅಧ್ಯಾತ್ಮವೆನಿಸುತ್ತದೆ. ಭೂತಭಾವಗಳ ಹುಟ್ಟಿಗೆ ಕಾರಣವಾದ ವಿಸರ್ಗವೇ ಕರ್ಮವೆಂಬ ಹೆಸರುಳ್ಳದ್ದು. ಅಧಿಭೂತವು ನಾಶವಾಗುವ ಸ್ವಭಾವದ್ದು. ಪುರುಷನೇ ಅಧಿದೈವತವು. ಈ ದೇಹದಲ್ಲಿರುವ ಅಧಿಯಜ್ಞನು ನಾನೇ ಆಗಿದ್ದೇನೆ. (ಇನ್ನೂ ಹೆಚ್ಚಿನ ವಿವರಗಳಿಗೆ ಮಹಾಭಾರತದ ೧೩ನೆಯ ಸಂಪುಟದ ೬೮೪ನೇ ಪುಟದಲ್ಲಿ ನೋಡಬಹುದು.)

* ಶ್ರೀಕೃಷ್ಣನು ಗೀತೆಯಲ್ಲಿ ಇದನ್ನೇ ಹೇಳುತ್ತಾನೆ :

ತ್ರೈವಿದ್ಯಾ ಮಾಂ ಸೋಮಪಾಃ ಪೂತಪಾಪಾ
ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯನ್ತೇ ।
ತೇ ಪುಣ್ಯಮಾಸಾದ್ಯ ಸುರೇನ್ದ್ರಲೋಕ-
ಮಶ್ನನ್ತಿ ದಿವ್ಯಾನ್ದಿವಿ ದೇವಭೋಗಾನ್ ॥

ಯಜ್ಞದಲ್ಲಿ ಸೋಮಪಾನಮಾಡಿ ಪೂತಾತ್ಮರಾಗಿರುವ ತ್ರೈವಿದ್ಯರು (ವೇದಗಳನ್ನರಿತವರು) ಯಜ್ಞಗಳಿಂದ ನನ್ನನ್ನು ಪೂಜಿಸಿ ಸ್ವರ್ಗವಾಸವನ್ನು ಪ್ರಾರ್ಥಿಸುತ್ತಾರೆ. ಅವರು ದಿವ್ಯವಾದ ದೇವೇಂದ್ರಲೋಕವನ್ನು ಸೇರಿ ದಿವ್ಯವಾದ ದೇವಭೋಗಗಳನ್ನು ಅನುಭವಿಸುತ್ತಾರೆ.

(ಭಗವದ್ಗೀತಾ ೯-೨೦)

ಮತ್ತೆ ಕೆಲವರು ಜ್ಞಾನಿಗಳು ಸಮಸ್ತಕರ್ಮಗಳನ್ನೂ ಪರಿತ್ಯಜಿಸಿ (ಕಾಮ್ಯಕರ್ಮಗಳ ಪರಿತ್ಯಾಗ ; ವಿಹಿತಕರ್ಮಗಳ ಫಲತ್ಯಾಗ) ಶಾಂತ ಮನಸ್ಕರಾಗಿ ಜ್ಞಾನಯಜ್ಞದ ಮೂಲಕ (ಸಮಾಧಿಯೋಗದ ಮೂಲಕವಾಗಿ) ಜ್ಞಾನಸ್ವರೂಪನಾದ ನಿನ್ನನ್ನೇ ಆರಾಧಿಸುತ್ತಾರೆ.*

ಅನ್ಯೇ ಚ ಸಂಸ್ಕೃತಾತ್ಮಾನೋ ವಿಧಿನಾಭಿಹಿತೇನ ತೇ ।
ಯಜನ್ತಿ ತ್ವನ್ಮಯಾಸ್ತ್ವಾಂ ವೈ ಬಹುಮೂರ್ತ್ಯೇಕಮೂರ್ತಿಕಮ್ ॥೭॥

ಸಂಸ್ಕಾರಗಳಿಂದ ಶುದ್ಧಿಗೊಳಿಸಲ್ಪಟ್ಟ ಮನಸ್ಸುಳ್ಳ ಮತ್ತೆ ಕೆಲವು ಉಪಾಸಕರು ನೀನು ಹೇಳಿದ ಪಾಂಚರಾತ್ರಾಗಮದ ವಿಧಿಯಂತೆ ಐಕಾಂತಿಕ ಭಾವದಿಂದ ನಿನ್ನಲ್ಲಿಯೇ ತನ್ಮಯರಾಗಿ, ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ ಎಂಬ ನಾಲ್ಕು ಮೂರ್ತಿರೂಪಗಳಿಂದಲೂ ಪರ ವಾಸುದೇವ ಅಥವಾ ನಾರಾಯಣನೆಂಬ ಏಕರೂಪದಿಂದಲೂ ಕೂಡಿರುವ ನಿನ್ನನ್ನೇ ಆರಾಧಿಸುತ್ತಾರೆ.[1]

---

* ಶ್ರೀಕೃಷ್ಣನು ಗೀತೆಯಲ್ಲಿ ಹೇಳುತ್ತಾನೆ :

ಶ್ರೇಯಾನ್ದ್ರವ್ಯಮಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ ।
ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥ ಭ. ಗೀ. ೪-೩೩

ಪರಂತಪನೇ! ಜ್ಞಾನಯಜ್ಞವು ದ್ರವ್ಯಯಜ್ಞಕ್ಕಿಂತ ಅತ್ಯುತ್ತಮವಾದುದು. ಕರ್ಮಗಳೆಲ್ಲವೂ ಜ್ಞಾನದಲ್ಲಿ ಕೊನೆಗೊಳ್ಳುತ್ತವೆ.

1 'ಸಂಸ್ಕೃತಾತ್ಮಾನಃ' ಎಂಬುದಕ್ಕೆ–'ಜಾತಕರ್ಮವೇ ಮುಂತಾದ ಸ್ಮೃತಿಪ್ರೋಕ್ತ ಕರ್ಮಗಳಿಂದ ಶುದ್ಧಗೊಳಿಸಲ್ಪಟ್ಟ ಮನಸ್ಸುಳ್ಳ'–ಎಂದೂ ಅರ್ಥವನ್ನು ಮಾಡಬಹುದು. ಆದರೆ ಮುಂದಿನ ಶ್ಲೋಕದಲ್ಲಿ ಶೈವಾಗಮದ ಉಲ್ಲೇಖವಿರುವುದರಿಂದ ಇಲ್ಲಿ ಹೇಳಿರುವುದು–ವೈಷ್ಣವಾಗಮದಲ್ಲಿ ಹೇಳಿರುವ ಪಂಚಸಂಸ್ಕಾರವೇ ಮುಂತಾದುವುಗಳಿಂದ ಶುದ್ಧಿಗೊಳಿಸಲ್ಪಟ್ಟ ದೇಹ ಮತ್ತು ಮನಸ್ಸುಳ್ಳವರಾದ–ಎಂದು ಅರ್ಥಮಾಡುವುದು ಉಚಿತವಾಗಿದೆ. ಹಿಂದಿನ ಶ್ಲೋಕದಲ್ಲಿ ಶ್ರೌತ-ಸ್ಮಾರ್ತಕರ್ಮಗಳ ಉಲ್ಲೇಖವಿದೆ. ಆದುದರಿಂದ ಇದು ತಾಂತ್ರಿಕವಾದ ಸಂಸ್ಕಾರವಿಧಿಯೇ ಆಗಿರಬೇಕೆಂದು ವ್ಯಾಖ್ಯಾನಿಸುವುದು ಉಚಿತವಾಗಿದೆ. ತಂತ್ರ ಅಥವಾ ಆಗಮಗಳಲ್ಲಿ 'ಪಾಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ತು ಭಗವಾನ್ ಸ್ವಯಂ' ಎಂಬಂತೆ ವಾಸುದೇವನಿಂದಲೇ ಹೇಳಲ್ಪಟ್ಟಿರುವ ಆಗಮವು ಶ್ರೀಪಾಂಚರಾತ್ರವೇ. ಶ್ರೀಪಾಂಚರಾತ್ರದಲ್ಲಿ ಎಲ್ಲ ವೈಷ್ಣವರಿಗೂ ಹೇಳಿರುವ ಪಂಚಸಂಸ್ಕಾರಗಳು–ತಾಪಃ ಪುಣ್ಡ್ರಂ **ದಾಸನಾಮ ಮನ್ತ್ರೋ ಯಾಗಸ್ತಥೈವ ಚ ।** ಎಂಬಂತೆ ತಾಪ, ದ್ವಾದಶಊರ್ಧ್ವಪುಂಡ್ರ

ತ್ವಾಮೇವಾನ್ಯೇ ಶಿವೋಕ್ತೇನ ಮಾರ್ಗೇಣ ಶಿವರೂಪಿಣಮ್ ।
ಬಹ್ವಾಚಾರ್ಯವಿಭೇದೇನ ಭಗವನ್ ಸಮುಪಾಸತೇ ॥೮॥

ಗಳು, ನಾರಾಯಣದಾಸನೆಂಬ ಅಂಕಿತ, ಅಷ್ಟಾಕ್ಷರ-ದ್ವಾದಶಾಕ್ಷರಾದಿ ಮಂತ್ರಗಳು ಮತ್ತು ಭಗವದಾರಾಧನೆ–ಎಂಬ ಐದು. ತಾಪಸಂಸ್ಕಾರಗಳಲ್ಲಿ ಸುದರ್ಶನವೇ ಮುಂತಾದ ಭಗವಂತನ ಆಯುಧಗಳನ್ನು ಅಗ್ನಿಯಲ್ಲಿ ಕಾಯಿಸಿ ಬಾಹುಮೂಲವೇ ಮುಂತಾದ ಸ್ಥಾನಗಳಲ್ಲಿ ಮುದ್ರಿಸಲಾಗುತ್ತದೆ. ವೈಖಾನಸಾದಿ ಕೆಲವು ಆಗಮಗಳಲ್ಲಿ ಪಾಯಸಕ್ಕೆ ಈ ಸಂಸ್ಕಾರವನ್ನು ಮಾಡಿ ಅದನ್ನು ಪುಂಸವನಸಮಯದಲ್ಲಿ ಗರ್ಭಿಣಿಗೆ ಕುಡಿಸುತ್ತಾರೆ. ಹೀಗೆ ಮಾಡಿದರೆ ಸಂಸ್ಕೃತವಾಗಿಯೇ ಶಿಶುವು ಹುಟ್ಟುತ್ತದೆ–ಎಂಬ ಭಾವನೆಯಿದೆ. **ಅತಪ್ತತನೂರ್ನತದಾಮೋ ಅಶ್ನುತೇ ।** ಎಂಬ ಶ್ರುತಿಯಂತೆ ಯಾವನ ದೇಹಕ್ಕೆ ತಾಪಸಂಸ್ಕಾರವಾಗಿರುವುದಿಲ್ಲವೋ ಆತನಿಗೆ ಉಪಾಸನೆಯ ಫಲವಿಲ್ಲ–ಎಂದು ಶ್ರೀಪಾಂಚರಾತ್ರರಕ್ಷೆ ಮುಂತಾದ ಗ್ರಂಥಗಳಲ್ಲಿ ತಾಪಸಂಸ್ಕಾರವನ್ನು ಸಮರ್ಥನೆ ಮಾಡಿದೆ. ಕೆಲವು ಪುರಾಣಗಳಲ್ಲಿ ಈ ಶಾರೀರಕತಾಪಸಂಸ್ಕಾರವನ್ನು ದ್ವಾರಕಾಕ್ಷೇತದಲ್ಲಿ ಮಾತ್ರ ಮಾಡಬೇಕೆಂದೂ ಉಳಿದ ಕಡೆಗಳಲ್ಲಿ ಗೋಪೀಚಂದನದಿಂದಲೇ ದಿವ್ಯಾಯುಧ ಮುದ್ರೆಗಳನ್ನು ಹಾಕಬೇಕೆಂದೂ ಹೇಳಿದೆ.

ತಪ್ತಮುದ್ರಾಧಾರಣವನ್ನು ಖಂಡಿಸುವ ಶ್ಲೋಕಗಳೂ ಸ್ಮೃತಿಗಳಲ್ಲಿ ಬೇಕಾದಷ್ಟಿವೆ. ತಾಂತ್ರಿಕರಿಗೆ ತಪ್ತಮುದ್ರಾಧಾರಣ. ವೈದಿಕಮಾರ್ಗದಲ್ಲಿ ಇದು ಇಲ್ಲ–ಎಂಬ ವ್ಯಾಖ್ಯಾನವೂ ಇದೆ. ಮುಂದಿನ ಸ್ಕಂಧದಲ್ಲಿ ಭಗವಂತನು ಉದ್ಧವನಿಗೆ ಪೂಜಾವಿಧಾನವನ್ನು ಉಪದೇಶಿಸುವಾಗ ವೈದಿಕ, ತಾಂತ್ರಿಕ ಮತ್ತು ವೈದಿಕತಾಂತ್ರಿಕ–ಎಂಬ ಮೂರು ವಿಧಾನಗಳನ್ನೂ ಉಪದೇಶಿಸುತ್ತಾನೆ. ಈ ಎಲ್ಲ ಉಪಾಸನಾವಿಧಿಗಳೂ ಅಧಿಕಾರಿ ಭೇದದಿಂದ ಸರಿಯಾಗಿವೆಯೆಂಬುದು ನಮ್ಮ ಅಭಿಪ್ರಾಯ. ಮುಂದಿನ ಶ್ಲೋಕದಲ್ಲಿ ಶೈವಾಗಮಕ್ಕೆ ಸೇರಿದ ಉಪಾಸನೆಯನ್ನು ಹೇಳಿರುವುದರಿಂದ ಇದು ವೈಷ್ಣವವಾಗಿ ವಾಸುದೇವಪ್ರೋಕ್ತವೂ ಆಗಿರುವ ಪಾಂಚರಾತ್ರಾಗಮವೇ ಆಗಿರಬೇಕೆಂದು ಊಹಿಸುವುದಕ್ಕೆ ಮತ್ತೊಂದು ಕಾರಣವೂ ಇದೆ. ಅದೇನೆಂದರೆ : ಬ್ರಹ್ಮಸೂತ್ರದಲ್ಲಿ **'ಪತ್ಯುರಸಾಮಞ್ಜಸ್ಯಾತ್-ಉತ್ಪತ್ತ್ಯಸಮ್ಭವಾಚ್ಚ'**–ಎಂಬ ಸೂತ್ರಗಳಲ್ಲಿ ಕ್ರಮವಾಗಿ ಶೈವಾಗಮ ಮತ್ತು ಭಾಗವತಾಗಮ (ಶ್ರೀಪಾಂಚರಾತ್ರಾಗಮ)ಗಳೇ ನಿರ್ದಿಷ್ಟವಾಗಿವೆ–ಎಂದು ಶ್ರೀಶಂಕರ ಮತ್ತು ಶ್ರೀರಾಮಾನುಜಭಾಷ್ಯಗಳಲ್ಲಿವೆ. ವೈಖಾನಸಾಗಮವು ವೈದಿಕಾಗಮ ಮತ್ತು ವೈಷ್ಣವಾಗಮವೆಂದು ಉಪಾದೇಯವಾಗಿದೆ. ಆದರೆ ಅದನ್ನು ಉಪದೇಶಮಾಡಿದವನು ವಾಸುದೇವ–ಎಂಬ ಉಲ್ಲೇಖವಿಲ್ಲ. ಈ ಎಲ್ಲ ಆಗಮಗಳೂ ಭಗವಂತನನ್ನೇ ಹೊಂದಿಸುತ್ತವೆ–ಎಂಬ ಅಭಿಪ್ರಾಯವನ್ನು ಭಕ್ತರೂ ಜ್ಞಾನಿಗಳೂ ಸಾರುತ್ತಾರೆ.

ಮತ್ತೆ ಕೆಲವರು ಶಿವನಿಂದ ಹೇಳಲ್ಪಟ್ಟಿರುವ ಶೈವಾಗಮದ ವಿಧಾನದಿಂದ ಹಲವಾರು ಮತಭೇದಗಳುಳ್ಳ ಶೈವ-ಪಾಶುಪತಾದಿ ಮಾರ್ಗಗಳಿಂದ ನಿನ್ನನ್ನೇ ಉಪಾಸನೆಮಾಡುತ್ತಾರೆ.

ಶ್ರೀಗೀತೆ ಮತ್ತು ಶ್ರೀಮದ್ಭಾಗವತಗಳಲ್ಲಿ ಇದು ಸ್ಪಷ್ಟವಾಗಿದೆ.

ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ ।
ನೃಣಾಮೇಕೋ ಗಮ್ಯಃ ತ್ವಮಸಿ ಪಯಸಾಮರ್ಣವ ಇವ ॥

(ಶಿವಮಹಿಮ್ನ ಸ್ತೋತ್ರ)

ಬಹುಧಾಪ್ಯಾಗಮೈರ್ಭಿನ್ನಾಃ ಪನ್ಥಾನಃ ಸಿದ್ಧಿಹೇತವಃ ।
ತ್ವಯ್ಯೇವ ನಿಪತನ್ತ್ಯೋಘಾಃ ಜಾಹ್ನವೀಯೇ ಇವಾರ್ಣವೇ ॥

(ರಘುವಂಶ : ದೇವಕೃತ ವಿಷ್ಣುಸ್ತುತಿ)

------ ೦ ------ ೦ ------ ೦ ------

ಮುದ್ರಾಂಕನದ ನಿಯಮಗಳು ಹೀಗಿವೆ :

ಅಗ್ನಿತಪ್ತಂ ಸದಾಧಾರ್ಯಂ ದ್ವಾರವತ್ಯಾಂ ವಿಚಕ್ಷಣೈಃ ।
ನಾನ್ಯಸ್ಥಾನೇ ಜಾತು ರಾಜನ್ ಸತ್ಯಮೇತದ್ಬ್ರವೀಮಿ ತೇ ॥
ಚತುರ್ಥಂ ದ್ವಾರಕಾಸ್ಥಾನಂ ಮದ್ಧಾಮ ಸುರಸೇವಿತಮ್ ।
ತತ್ರಾಹಂ ಹೇತುವಾ ಸಾಧ್ವಿ ತಪಯಾಮಿ ತಮಂ ನೃಣಾಮ್ ॥

ಪದ್ಮಪುರಾಣದಲ್ಲಿ ರುಕ್ಮಾಂಗದನನ್ನು ಕುರಿತು ನಾರದಮುನಿಯಿಂದ ಹೇಳಲ್ಪಟ್ಟಿರುವ ಈ ಶ್ಲೋಕಗಳಿಗೆ ಅನುಸಾರವಾಗಿ ದ್ವಾರಕೆಯಲ್ಲಿರುವ ವೈಷ್ಣವರು ಮಾತ್ರ ತಪ್ತಮುದ್ರಾಂಕನವನ್ನು ಧರಿಸಬೇಕಲ್ಲದೇ ಬೇರೆಕಡೆಯಲ್ಲಿ ಕೂಡದೆಂದೂ, ಬೃಹನ್ನಾರದೀಯವಚನಾನುಸಾರವಾಗಿ ಆ ದ್ವಾರಾವತಿಯಲ್ಲಿ ಪರಮಾಚಾರ್ಯನಾದ ಶ್ರೀಕೃಷ್ಣಮೂರ್ತಿಯೇ ಆಚಾರ್ಯ ರೂಪದಿಂದ ಅಲ್ಲಿನ ಜನರಿಗೆ ತಪ್ತಮುದ್ರಾಂಕನವನ್ನು ಮಾಡುವನೆಂದೂ ತಾತ್ಪರ್ಯವು.

ಕೃಷ್ಣಾಯುಧಾಙ್ಕಿತೋ ದೇಹೋ ಗೋಪೀಚನ್ದನ ಮೃತ್ಸ್ನಯಾ ।
ಪ್ರಯಾಗಾದಿಷು ತೀರ್ಥೇಷು ಸ ಗತ್ವಾ ಕಿಂ ಕರಿಷ್ಯತಿ ॥

ವರಾಹಪುರಾಣದಲ್ಲಿ ಸನತ್ಕುಮಾರೋಕ್ತಿಯಂತೆ ಬೇರೆ ಕಡೆಗಳಲ್ಲಿ ಆಚಾರ್ಯರು ಪಂಚಸಂಸ್ಕಾರಕಾಲದಲ್ಲಿ ಗೋಪೀಚಂದನಲಿಪ್ತಗಳಾದ ಮುದ್ರೆಗಳಿಂದಲೇ ಶಿಷ್ಯರನ್ನು ಸಂಸ್ಕರಿಸುವರು. ಪವಿತ್ರಮಿತ್ಯಗ್ನಿಃ । ಅಗ್ನಿರ್ವೈ ಸಹಸ್ರಾರಃ । ಸಹಸ್ರಾರೋ ನೇಮಿಃ । ನೇಮಿನಾ ತಪ್ತತನುಃ ಬ್ರಹ್ಮಣಃ ಸಾಯುಜ್ಯಂ ಸಲೋಕತಾಮಾಪ್ನೋತಿ ॥ ಸಾಮವೇದದ ಮೈತ್ರಾವರುಣಶಾಖೆಯಲ್ಲಿ ಹೇಳಿರುವ ಈ ಶ್ರುತ್ಯರ್ಥದಂತೆ ಅಗ್ನಿಯಲ್ಲದೇ ಸುದರ್ಶನವು ತಾನೇ ಪವಿತ್ರವಾದುದರಿಂದ ಶೀತಲಮುದ್ರಾಧಾರಣವನ್ನೂ ಕೂಡ ತಪ್ತಮುದ್ರಾಧಾರಣವೆಂದೇ ತಿಳಿಯಬೇಕೆಂದು ಭಾವವು. (ಸಿದ್ಧಾಂತದೀಪಿಕಾ)

ಸರ್ವ ಏವ ಯಜನ್ತಿ ತ್ವಾಂ ಸರ್ವದೇವಮಹೇಶ್ವರಮ್ ।
ಯೇಽಪ್ಯನ್ಯದೇವತಾಭಕ್ತಾ ಯದ್ಯಪ್ಯನ್ಯಧಿಯಃ ಪ್ರಭೋ ॥೯॥

ನಿನ್ನಿಂದ ಭಿನ್ನರಾದವರೆಂದು ಭಾವಿಸಿ ಇತರ ಹಲವಾರು ದೇವತೆಗಳನ್ನು ಯಾರು ಪೂಜಿಸುವರೋ–ಅಂತಹ ಅನ್ಯದೇವತಾಭಕ್ತರು ಕೂಡ ವಾಸ್ತವವಾಗಿ ಸರ್ವದೇವಮಯನಾದ ಸರ್ವೇಶ್ವರನಾದ ನಿನ್ನನ್ನೇ ಪೂಜಿಸುತ್ತಾರೆ.*

ಯಥಾದ್ರಿಪ್ರಭವಾ ನದ್ಯಃ ಪರ್ಜನ್ಯಾಪೂರಿತಾಃ ಪ್ರಭೋ ।
ವಿಶನ್ತಿ ಸರ್ವತಃ ಸಿನ್ಧುಂ ತದ್ವತ್ತ್ವಾಂ ಗತಯೋಽನ್ತತಃ ॥೧೦॥

ಪ್ರಭುವೇ! ಯಾವ ರೀತಿಯಲ್ಲಿ ಪರ್ವತದಲ್ಲಿ ಹುಟ್ಟಿದ ನದಿಗಳು ವರ್ಷಾಕಾಲದ ಮಳೆಯ ನೀರಿನಿಂದ ತುಂಬಿ ಹರಿಯುತ್ತಾ ಕಟ್ಟಕಡೆಗೆ ಸಮುದ್ರವನ್ನೇ ಸೇರುವುವೋ–ಅದೇ ರೀತಿಯಲ್ಲಿ ಶ್ರುತಿ-ಸ್ಮೃತಿ-ಪುರಾಣಗಳಲ್ಲಿ ಹೇಳಿರುವ ಎಲ್ಲ ಉಪಾಸನಾಮಾರ್ಗಗಳೂ ನಿನ್ನಲ್ಲಿಯೇ ಬಂದು ಸೇರುತ್ತವೆ.[1]

ಸತ್ತ್ವಂ ರಜಸ್ತಮ ಇತಿ ಭವತಃ ಪ್ರಕೃತೇರ್ಗುಣಾಃ ।
ತೇಷು ಹಿ ಪ್ರಾಕೃತಾಃ ಪ್ರೋತಾ ಆಬ್ರಹ್ಮಸ್ಥಾವರಾದಯಃ ॥೧೧॥

ದೇವದೇವನೇ! ಸತ್ತ್ವ-ರಜಸ್ತಮಗಳೆಂಬುವು ನಿನ್ನ ಪ್ರಕೃತಿಯ ಗುಣಗಳಾಗಿವೆ. ಬ್ರಹ್ಮನಿಂದ ಹಿಡಿದು ಸಕಲಚರಾಚರಪ್ರಾಣಿಗಳೂ ಕೂಡ

---

* ಶ್ರೀಕೃಷ್ಣನು ಗೀತೆಯಲ್ಲಿ :

ಯೇಽಪ್ಯನ್ಯದೇವತಾಭಕ್ತಾ ಯಜನ್ತೇ ಶ್ರದ್ಧಯಾನ್ವಿತಾಃ ।
ತೇಽಪಿ ಮಾಮೇವ ಕೌನ್ತೇಯ ಯಜನ್ತ್ಯವಿಧಿಪೂರ್ವಕಮ್ ॥ (೯-೨೩)

ಕೌಂತೇಯ! ಯಾರು ಇತರ ದೇವತೆಗಳ ಭಕ್ತರಾಗಿ ಆ ದೇವತೆಗಳನ್ನು ಶ್ರದ್ಧೆಯಿಂದ ಕೂಡಿದವರಾಗಿ ಪೂಜಿಸುತ್ತಾರೋ ಅವರೂ ನನ್ನನ್ನೇ ಅವಿಧಿಪೂರ್ವಕವಾಗಿ ಪೂಜಿಸುತ್ತಾರೆ. ಇತರ ದೇವತೆಗಳಿಗೆ ಮಾಡುವ ಪೂಜೆಯೂ ನನಗೇ ಸೇರುತ್ತದೆಂಬುದನ್ನು ಅವರು ತಿಳಿದಿರುವುದಿಲ್ಲ.

1 **ಆಕಾಶಾತ್ಪತಿತಂ ತೋಯಂ ಯಥಾಗಚ್ಛತಿ ಸಾಗರಮ್ ।**
ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ ॥

ಆಕಾಶದಿಂದ ಬಿದ್ದ ಮಳೆಯ ನೀರು ನದಿಯಾಗಿ ಹರಿಯುತ್ತಾ ಸಮುದ್ರವನ್ನು ಸೇರುವಂತೆ ಸಮಸ್ತದೇವತೆಗಳಲ್ಲಿ ಮಾಡಿದ ನಮಸ್ಕಾರವೂ ಕೇಶವನಿಗೇ ಸೇರುತ್ತದೆ.

ಬಟ್ಟೆಯಲ್ಲಿ ನೂಲು ಹಾಸುಹೊಕ್ಕಾಗಿರುವಂತೆ ತ್ರಿಗುಣಗಳಲ್ಲಿ ಹಾಸು-ಹೊಕ್ಕಾಗಿವೆ.*

ತುಭ್ಯಂ ನಮಸ್ತೇಽಸ್ತ್ವವಿಷಕ್ತದೃಷ್ಟಯೇ
ಸರ್ವಾತ್ಮನೇ ಸರ್ವಧಿಯಾಂ ಚ ಸಾಕ್ಷಿಣೇ ।
ಗುಣಪ್ರವಾಹೋಽಯಮವಿದ್ಯಯಾ ಕೃತಃ
ಪ್ರವರ್ತತೇ ದೇವನೃತಿರ್ಯಗಾತ್ಮಸು ॥೧೨॥

ನೀನು ಸರ್ವಸ್ವರೂಪನಾಗಿದ್ದರೂ ಅವುಗಳಲ್ಲಿ ಲಿಪ್ತನಾಗಿಲ್ಲ. ನೀನು ನಿರ್ಲಿಪ್ತನು. ನೀನು ಸಮಸ್ತರ ಬುದ್ಧಿಗಳಲ್ಲಿಯೂ ಸಾಕ್ಷಿಸ್ವರೂಪನಾಗಿರುವೆ. ಗುಣಗಳ ಪ್ರವಾಹದಿಂದ ಹುಟ್ಟಿರುವ ಈ ಸೃಷ್ಟಿಯು ಅವಿದ್ಯಾಮೂಲವಾಗಿದೆ ಮತ್ತು ಈ ಗುಣಪ್ರವಾಹವು ದೇವ-ಮನುಷ್ಯ-ತಿರ್ಯಕ್ ಪ್ರಾಣಿಗಳಲ್ಲಿಯೂ ವ್ಯಾಪ್ತವಾಗಿದೆ. ಆದರೆ ನೀನು ಮಾತ್ರ ಇವೆಲ್ಲದರಿಂದಲೂ ಪ್ರತ್ಯೇಕವಾಗಿಯೇ ಇರುವೆ. ತ್ರಿಗುಣಾತೀತನಾಗಿರುವೆ. ಅಂತಹ ಪರಾತ್ಪರನಾದ ನಿನಗೆ ನಮಸ್ಕರಿಸುತ್ತೇನೆ.

ಅಗ್ನಿರ್ಮುಖಂ ತೇಽವನಿರಙ್ಘ್ರಿರೀಕ್ಷಣಂ
ಸೂರ್ಯೋ ನಭೋ ನಾಭಿರಥೋ ದಿಶಃ ಶ್ರುತಿಃ ।
ದ್ಯೌಃ ಕಂ ಸುರೇನ್ದ್ರಾಸ್ತವ ಬಾಹವೋಽರ್ಣವಾಃ
ಕುಕ್ಷಿರ್ಮರುತ್ ಪ್ರಾಣಬಲಂ ಪ್ರಕಲ್ಪಿತಮ್ ॥೧೩॥

ದೇವದೇವನೇ! ಅಗ್ನಿಯು ನಿನ್ನ ಮುಖವಾಗಿದೆ. ಭೂಮಿಯು ನಿನ್ನ ಚರಣಕಮಲವಾಗಿದೆ. ಸೂರ್ಯ-ಚಂದ್ರರು ನಿನ್ನ ಕಣ್ಣುಗಳಾಗಿದ್ದಾರೆ. ಆಕಾಶವು ನಿನ್ನ ಹೊಕ್ಕುಳಾಗಿದೆ. ದಿಕ್ಕುಗಳೇ ನಿನ್ನ ಕಿವಿಯಾಗಿವೆ. ಸ್ವರ್ಗ ಲೋಕವು ನಿನ್ನ ತಲೆಯಾಗಿದೆ. ದೇವೇಂದ್ರಗಣಗಳು ನಿನ್ನ ಬಾಹುಗಳಾಗಿವೆ.

---

* ಶ್ರೀಕೃಷ್ಣನು ಗೀತೆಯಲ್ಲಿ :

ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಮ್ಭವಾಃ ।
ನಿಬಧ್ನನ್ತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್ ॥ (ಭ.ಗಿ. 14-5)

ಮಹಾಬಾಹುವೇ! ಪ್ರಕೃತಿಯಿಂದಲೇ ಹುಟ್ಟಿರುವ ಸತ್ತ್ವ-ರಜಸ್ತಮಸ್ಸುಗಳೆಂಬ ಮೂರು ಗುಣಗಳು ದೇಹದಲ್ಲಿರುವ ಅವ್ಯಯನಾದ ದೇಹಿಯನ್ನು ಕಟ್ಟಿಹಾಕುತ್ತವೆ.

ಸಮುದ್ರವು ಹೊಟ್ಟೆಯಾಗಿದೆ. ವಾಯುವು ನಿನ್ನ ಪ್ರಾಣಶಕ್ತಿಯ ರೂಪದಲ್ಲಿ ಕಲ್ಪಿತವಾಗಿದೆ.

ರೋಮಾಣಿ ವೃಕ್ಷೌಷಧಯಃ ಶಿರೋರುಹಾ
ಮೇಘಾಃ ಪರಸ್ಯಾಸ್ಥಿನಖಾನಿ ತೇಽದ್ರಯಃ ।
ನಿಮೇಷಣಂ ರಾತ್ರ್ಯಹನೀ ಪ್ರಜಾಪತಿ-
ರ್ಮೇಢ್ರಸ್ತು ವೃಷ್ಟಿಸ್ತವ ವೀರ್ಯಮಿಷ್ಯತೇ ॥೧೪॥

ವೃಕ್ಷಗಳು ಮತ್ತು ಓಷಧಿಲತೆಗಳು ಪರಮೇಶ್ವರನಾದ ನಿನ್ನ ರೋಮಗಳಾಗಿವೆ. ಮೇಘವು ತಲೆಕೂದಲಾಗಿದೆ. ಪರ್ವತಗಳು ನಿನ್ನ ಮೂಳೆಗಳೂ ಉಗುರುಗಳೂ ಆಗಿವೆ. ಹಗಲು ಮತ್ತು ರಾತ್ರಿಗಳು ರೆಪ್ಪೆಗಳನ್ನು ಮುಚ್ಚಿಕೊಳ್ಳುವ ಮತ್ತು ತೆರೆಯುವ ನಿಮೇಷಗಳಾಗಿವೆ. ಪ್ರಜಾಪತಿಯು ಜನನೇಂದ್ರಿಯನಾಗಿದ್ದಾನೆ. ವೃಷ್ಟಿಯು ನಿನ್ನ ರೇತಸ್ಸಾಗಿದೆ.

ತ್ವಯ್ಯವ್ಯಯಾತ್ಮನ್ ಪುರುಷೇ ಪ್ರಕಲ್ಪಿತಾ
ಲೋಕಾಃ ಸಪಾಲಾ ಬಹುಜೀವಸಂಕುಲಾಃ ।
ಯಥಾ ಜಲೇ ಸಂಜಿಹತೇ ಜಲೌಕಸೋಽ-
ಪ್ಯುದುಮ್ಬರೇ ವಾ ಮಶಕಾ ಮನೋಮಯೇ ॥೧೫॥

ಅವಿನಾಶಿಯಾದ ಪರಮಾತ್ಮನೇ! ನೀರಿನಲ್ಲಿ ಕೋಟಿ-ಕೋಟಿ ಜಲಚರಪ್ರಾಣಿಗಳಿರುವಂತೆಯೂ, ಅತ್ತಿಯ ಹಣ್ಣಿನಲ್ಲಿ ನೂರಾರು ಸೊಳ್ಳೆಗಳಿರುವಂತೆಯೂ, ಮನೋವೃತ್ತಿಗೆ ಮಾತ್ರವೇ ಲಕ್ಷ್ಯನಾಗತಕ್ಕ ಮಹಾಪುರುಷನಾದ ನಿನ್ನಲ್ಲಿ ಲೋಕಪಾಲರಿಂದಲೂ ಹಲವಾರು ಪ್ರಾಣಿಗಳಿಂದಲೂ ತುಂಬಿದ ಅನೇಕ ಕೋಟಿ ಬ್ರಹ್ಮಾಂಡಗಳು ನೆಲೆಸಿವೆ.

ಯಾನಿ ಯಾನೀಹ ರೂಪಾಣಿ ಕ್ರೀಡನಾರ್ಥಂ ಬಿಭರ್ಷಿ ಹಿ ।
ತೈರಾಮೃಷ್ಟಶುಚೋ ಲೋಕಾ ಮುದಾ ಗಾಯನ್ತಿ ತೇ ಯಶಃ ॥

ನೀನು ಲೀಲೆಗಾಗಿ ಈ ಲೋಕದಲ್ಲಿ ಯಾವ-ಯಾವ ಲೀಲಾವಿಗ್ರಹಗಳನ್ನು ಧರಿಸಿ ಅವತರಿಸುವೆಯೋ-ಅಂತಹ ಅವತಾರಗಳ ಪ್ರಭಾವದಿಂದ ಶೋಕ-ಮೋಹಗಳಿಂದ ವಿಮುಕ್ತರಾದ ಜನರು ಸಂತೋಷಭರಿತರಾಗಿ ನಿನ್ನ ನಿರ್ಮಲವಾದ ಯಶಸ್ಸನ್ನು ಹಾಡುತ್ತಿರುತ್ತಾರೆ.

ನಮಃ ಕಾರಣಮತ್ಸ್ಯಾಯ ಪ್ರಲಯಾಬ್ಧಿಚರಾಯ ಚ ।
ಹಯಶೀರ್ಷ್ಣೇ ನಮಸ್ತುಭ್ಯಂ ಮಧುಕೈಟಭಮೃತ್ಯವೇ ॥೧೭॥

ಪ್ರಭುವೇ! ಪ್ರಳಯಕಾಲದಲ್ಲಿ ಏಕಾರ್ಣವವಾಗಿದ್ದ ಸಮುದ್ರದಲ್ಲಿ ಓಡಾಡುತ್ತಿದ್ದ ಜಗತ್ಕಾರಣನಾದ ಮತ್ಸ್ಯಮೂರ್ತಿಗೆ ನಮಸ್ಕರಿಸುತ್ತೇನೆ. ಹಯಗ್ರೀವರೂಪಿಯಾಗಿ ಮಧು-ಕೈಟಭರಿಗೆ ಮೃತ್ಯುವಾದ ನಿನಗೆ ನಮಸ್ಕರಿಸುತ್ತೇನೆ.*

ಅಕೂಪಾರಾಯ ಬೃಹತೇ ನಮೋ ಮನ್ದರಧಾರಿಣೇ ।
ಕ್ಷಿತ್ಯುದ್ಧಾರವಿಹಾರಾಯ ನಮಃ ಸೂಕರಮೂರ್ತಯೇ ॥೧೮॥

ಭಗವಂತನೇ! ನೀನೇ ಕೂರ್ಮಾವತಾರವನ್ನು ಮಾಡಿ ಅಮೃತಮಂಥನದ ಕಾಲದಲ್ಲಿ ಮಂದರಪರ್ವತವನ್ನು ಬೆನ್ನಮೇಲೆ ಧರಿಸಿದೆ. ಅಂತಹ ನಿನಗೆ ನಮಸ್ಕರಿಸುತ್ತೇನೆ. ಹಿರಣ್ಯಾಕ್ಷರಾಕ್ಷಸನಿಂದ ಪಾತಾಳಕ್ಕೊಯ್ಯಲ್ಪಟ್ಟಿದ್ದ ಭೂಮಿಯನ್ನು ಉದ್ಧರಿಸುವ ಸಲುವಾಗಿ ವರಾಹಾವತಾರವನ್ನು ಮಾಡಿದೆ. ಅಂತಹ ಭೂಧರನಾದ, ವರಾಹಮೂರ್ತಿಯಾದ ನಿನ್ನನ್ನು ನಮಸ್ಕರಿಸುತ್ತೇನೆ.

ನಮಸ್ತೇಽದ್ಭುತಸಿಂಹಾಯ ಸಾಧುಲೋಕಭಯಾಪಹ ।
ವಾಮನಾಯ ನಮಸ್ತುಭ್ಯಂ ಕ್ರಾನ್ತತ್ರಿಭುವನಾಯ ಚ ॥೧೯॥

ಸತ್ಪುರುಷರ ಭಯವನ್ನು ಹೋಗಲಾಡಿಸುವ ಪ್ರಭುವೇ! ಅದ್ಭುತ ಸಿಂಹನಾಗಿ ಅವತರಿಸಿದ ನರಸಿಂಹಮೂರ್ತಿಗೆ ನಮಸ್ಕರಿಸುತ್ತೇನೆ. ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನೂ ಆಕ್ರಮಿಸಿದ ವಾಮನಮೂರ್ತಿಗೆ ನಮಸ್ಕರಿಸುತ್ತೇನೆ.

ನಮೋ ಭೃಗೂಣಾಂ ಪತಯೇ ದೃಪ್ತಕ್ಷತ್ರವನಚ್ಛಿದೇ ।
ನಮಸ್ತೇ ರಘುವರ್ಯಾಯ ರಾವಣಾನ್ತಕರಾಯ ಚ ॥೨೦॥

ದುರಹಂಕಾರಿಗಳಾಗಿದ್ದ ಕ್ಷತ್ರಿಯರೆಂಬ ಅರಣ್ಯವನ್ನೇ ಕತ್ತರಿಸಿಹಾಕಿದ ಭೃಗುಶ್ರೇಷ್ಠನಾದ ಪರಶುರಾಮನಿಗೆ ನಮಸ್ಕರಿಸುತ್ತೇನೆ. ರಘುವಂಶದಲ್ಲಿ

---

* ಹಯಗ್ರೀವನೇ ಮಧು-ಕೈಟಭರನ್ನು ಸಂಹರಿಸಿದನೆಂದು ಮಹಾಭಾರತದ ಹಯಶೀರ್ಷೋಪಾಖ್ಯಾನದಲ್ಲಿದೆ. (ಮ.ಭಾ. ಶಾಂತಿಪರ್ವ-ಅಧ್ಯಾಯ ೩೪೭)

ಶ್ರೀರಾಮನಾಗಿ ಅವತರಿಸಿ ರಾವಣನನ್ನು ಸಂಹರಿಸಿದ ನಿನಗೆ ನಮಸ್ಕರಿಸುತ್ತೇನೆ.

ನಮಸ್ತೇ ವಾಸುದೇವಾಯ ನಮಃ ಸಂಕರ್ಷಣಾಯ ಚ ।
ಪ್ರದ್ಯುಮ್ನಾಯಾನಿರುದ್ಧಾಯ ಸಾತ್ವತಾಂ ಪತಯೇ ನಮಃ ॥೨೧॥

ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧರೆಂಬ ಚತುರ್ವ್ಯೂಹ ಸ್ವರೂಪನಾಗಿರುವ ಮತ್ತು ಯದುವಂಶೀಯರಿಗೆ ಒಡೆಯನಾದ ನಿನಗೆ ನಮಸ್ಕಾರಮಾಡುತ್ತೇನೆ.

ನಮೋ ಬುದ್ಧಾಯ ಶುದ್ಧಾಯ ದೈತ್ಯದಾನವಮೋಹಿನೇ ।
ಮ್ಲೇಚ್ಛಪ್ರಾಯಕ್ಷತ್ರಹಂತ್ರೇ ನಮಸ್ತೇ ಕಲ್ಕಿರೂಪಿಣೇ ॥೨೨॥

ಆಕರ್ಷಕವಾದ ಮಾತುಗಳಿಂದ ದೈತ್ಯ-ದಾನವರನ್ನು ವಿಮೋಹಗೊಳಿಸುವ ಶುದ್ಧಾತ್ಮನಾದ ಬುದ್ಧನಿಗೆ ನಮಸ್ಕರಿಸುತ್ತೇನೆ. ಮ್ಲೇಚ್ಛಪ್ರಾಯರಾದ ಕ್ಷತ್ರಿಯರನ್ನು ಸಂಹರಿಸಲಿರುವ ಕಲ್ಕಿರೂಪಿಯಾಗುವ ನಿನಗೆ ನಮಸ್ಕರಿಸುತ್ತೇನೆ.

ಭಗವಞ್ಜೀವಲೋಕೋಽಯಂ ಮೋಹಿತಸ್ತವ ಮಾಯಯಾ ।
ಅಹಂಮಮೇತ್ಯಸದ್ಗ್ರಾಹೋ ಭ್ರಾಮ್ಯತೇ ಕರ್ಮವರ್ತ್ಮಸು ॥೨೩॥

ಭಗವಂತನೇ! ಈ ಸಮಸ್ತಜೀವಿಗಳೂ ನಿನ್ನ ಮಾಯೆಯಿಂದ ವಿಮೋಹಿತರಾಗಿದ್ದಾರೆ. ನಿನ್ನ ಮಾಯೆಯಿಂದ 'ನಾನು-ನನ್ನದು'–ಎಂಬ ದುರಾಗ್ರಹಕ್ಕೆ ಒಳಗಾಗಿ ಕರ್ಮಮಾರ್ಗದಲ್ಲಿ ಭ್ರಮಿಸುತ್ತಿದ್ದಾರೆ.

ಅಹಂ ಚಾತ್ಮಾತ್ಮಜಾಗಾರದಾರಾರ್ಥಸ್ವಜನಾದಿಷು ।
ಭ್ರಮಾಮಿ ಸ್ವಪ್ನಕಲ್ಪೇಷು ಮೂಢಃ ಸತ್ಯಧಿಯಾ ವಿಭೋ ॥೨೪॥

ವಿಭುವೇ! ಬೇರೆಯವರನ್ನೇಕೆ ಹಳಿಯಲಿ! ಸ್ವಪ್ನದಲ್ಲಿ ಕಾಣುವ ಪದಾರ್ಥಗಳಂತಿರುವ ದೇಹ-ಗೇಹ-ಪತ್ನೀ-ಪುತ್ರ-ಧನ-ಸ್ವಜನ–ಈ ಎಲ್ಲವನ್ನೂ ಮೂಢನಾದ ನಾನೂ ಸತ್ಯವಾದುದೆಂದೇ ಭ್ರಮಿಸಿ ವಿಮೋಹಿತನಾಗಿದ್ದೇನೆ.

ಅನಿತ್ಯಾನಾತ್ಮದುಃಖೇಷು ವಿಪರ್ಯಯಮತಿರ್ಹ್ಯಹಮ್ ।
ದ್ವಂದ್ವಾರಾಮಸ್ತಮೋವಿಷ್ಟೋ ನ ಜಾನೇ ತ್ವಾತ್ಮನಃ ಪ್ರಿಯಮ್ ॥೨೫॥

ನನ್ನ ಮೌಢ್ಯವನ್ನಾದರೂ ನೋಡು, ಪ್ರಭುವೇ! ಅನಿತ್ಯವಸ್ತುಗಳನ್ನು ನಿತ್ಯವೆಂದು ಭಾವಿಸಿದ್ದೇನೆ. ಅನಾತ್ಮವಾದ ಶರೀರವನ್ನು ಆತ್ಮವೆಂದು ಭಾವಿಸಿದ್ದೇನೆ. ದುಃಖವನ್ನೇ ಸುಖವೆಂದು ಭಾವಿಸಿದ್ದೇನೆ. ಅಜ್ಞಾನವಶ ದಿಂದ ಸಾಂಸಾರಿಕವಾದ ಸುಖ-ದುಃಖವೇ ಮೊದಲಾದ ದ್ವಂದ್ವಗಳಲ್ಲಿ ಬಿದ್ದೇಳುತ್ತಾ ನನಗೆ ಯಾವುದು ಪ್ರಿಯವಾದುದು–ಎಂಬುದನ್ನೂ ತಿಳಿಯ ದವನಾಗಿದ್ದೇನೆ.

ಯಥಾಬುಧೋ ಜಲಂ ಹಿತ್ವಾ ಪ್ರತಿಚ್ಛನ್ನಂ ತದುದ್ಭವೈಃ ।
ಅಭ್ಯೇತಿ ಮೃಗತೃಷ್ಣಾಂ ವೈ ತದ್ವತ್ತ್ವಾಹಂ ಪರಾಙ್ಮುಖಃ ॥೨೬॥

ಅಜ್ಞಾನಿಯಾದವನೊಬ್ಬನು ಸರೋವರದಲ್ಲಿ ನೀರಿನಿಂದಲೇ ಹುಟ್ಟಿದ ಪಾಚಿಯಿಂದ ಮರೆಯಾದ ನೀರನ್ನು ಗುರುತಿಸಲಾರದೆ ಇರುವಂತೆಯೂ ಮತ್ತು ಬಿಸಿಲ್ಗುದುರೆಯಿಂದ ದೂರದಲ್ಲಿ ನೀರಿನಂತೆ ಕಾಣುವ ಮರೀಚಿಕೆ ಯನ್ನು ಅರಿಸಿ ಹೋಗುವಂತೆಯೂ–ನಿನ್ನ ಮಾಯೆಯಿಂದಲೇ ಆವೃತ ನಾಗಿರುವ ನಾನು ಹತ್ತಿರದಲ್ಲಿಯೇ ಇರುವ ಆನಂದಕಂದನಾದ ನಿನ್ನನ್ನು ಗುರುತಿಸಲಾಗದೆ ನಿನ್ನಿಂದ ಪರಾಙ್ಮುಖನಾಗಿದ್ದೇನೆ. ಮರೀಚಿಕೆಯಂತಿರುವ ವಿಷಯಸುಖಗಳ ಆಸೆಯಿಂದ ಪರದಾಡುತ್ತಿದ್ದೇನೆ.

ನೋತ್ಸಹೇಽಹಂ ಕೃಪಣಧೀಃ ಕಾಮಕರ್ಮಹತಂ ಮನಃ ।
ರೋದ್ಧುಂ ಪ್ರಮಾಥಿಭಿಶ್ಚಾಕ್ಷೈರ್ಹ್ರಿಯಮಾಣಮಿತಸ್ತತಃ ॥೨೭॥

ಅತ್ಯಂತದುರ್ಬಲವಾದ ಬುದ್ಧಿಯುಳ್ಳ ನಾನು ಅತ್ಯಂತಬಲವತ್ತರವಾದ ಇಂದ್ರಿಯಗಳಿಂದ ಯದ್ವಾ-ತದ್ವಾ ಸೆಳೆಯಲ್ಪಡುತ್ತಿರುವ, ಕಾಮ ಕರ್ಮಗಳಿಂದ ಕೆಡಿಸಲ್ಪಟ್ಟಿರುವ ಮನಸ್ಸನ್ನು ತಡೆಗಟ್ಟಲು ಅಸಮರ್ಥ ನಾಗಿದ್ದೇನೆ.

ಸೋಽಹಂ ತವಾಙ್ಘ್ರ್ಯುಪಗತೋಽಸ್ಮ್ಯಸತಾಂ ದುರಾಪಂ
ತಚ್ಚಾಪ್ಯಹಂ ಭವದನುಗ್ರಹ ಈಶ ಮನ್ಯೇ ।
ಪುಂಸೋ ಭವೇದ್ಯರ್ಹಿ ಸಂಸರಣಾಪವರ್ಗ-
ಸ್ತ್ವಯ್ಯಬ್ಜನಾಭ ಸದುಪಾಸನಯಾ ಮತಿಃ ಸ್ಯಾತ್ ॥೨೮॥

ದಯಾಮಯನೇ! ಕಾಮೋಪಹತವಾದ ಮನಸ್ಸನ್ನು ನಿಯಂತ್ರಿಸ

ಲಾಗದಿದ್ದರೂ ಸತ್ಪುರುಷರಲ್ಲದವರಿಗೆ ಪಡೆಯಲು ದುಸ್ಸಾಧ್ಯವಾದ ನಿನ್ನ ಚರಣಕಮಲಗಳನ್ನು ಹೊಂದಿಬಿಟ್ಟಿದ್ದೇನೆ. ಈಶನೇ! ಇದೂ ಕೂಡ ನಿನ್ನ ಪರಮಾನುಗ್ರಹವೆಂದೇ ನಾನು ಭಾವಿಸಿದ್ದೇನೆ. ಪದ್ಮನಾಭನೇ! ಯಾವುದಾದರೂ ಜೀವಕ್ಕೆ ಸಂಸಾರದಿಂದ ಮುಕ್ತಿಹೊಂದುವ ಸಮಯವು ಹತ್ತಿರವಾದಾಗ ಸತ್ಪುರುಷರ ಸೇವೆಯಿಂದ ಚಿತ್ತವೃತ್ತಿಯು ನಿನ್ನ ಕಡೆಗೇ ಸಾಗುತ್ತದೆ.

ನಮೋ ವಿಜ್ಞಾನಮಾತ್ರಾಯ ಸರ್ವಪ್ರತ್ಯಯಹೇತವೇ ।
ಪುರುಷೇಶಪ್ರಧಾನಾಯ ಬ್ರಹ್ಮಣೇಽನನ್ತಶಕ್ತಯೇ ॥೨೯॥

ಶುದ್ಧಜ್ಞಾನಸ್ವರೂಪನಾದ ನಿನಗೆ ನಮಸ್ಕರಿಸುತ್ತೇನೆ. ಸಮಸ್ತವಾದ ಜ್ಞಾನಗಳಿಗೂ ಕಾರಣಭೂತನಾದ ನಿನಗೆ ನಮಸ್ಕರಿಸುತ್ತೇನೆ. ಜೀವ, ಈಶ್ವರ ಮತ್ತು ಪ್ರಕೃತಿಸ್ವರೂಪನೇ! ಪರಿಪೂರ್ಣನಾದವನೇ! ಅಪರಿಮಿತವಾದ ಶಕ್ತಿಯುಳ್ಳವನೇ! ನಿನಗೆ ನಮಸ್ಕರಿಸುತ್ತೇನೆ.

ನಮಸ್ತೇ ವಾಸುದೇವಾಯ ಸರ್ವಭೂತಕ್ಷಯಾಯ ಚ ।
ಹೃಷೀಕೇಶ ನಮಸ್ತುಭ್ಯಂ ಪ್ರಪನ್ನಂ ಪಾಹಿ ಮಾಂ ಪ್ರಭೋ ॥೩೦॥

ಚಿತ್ತಕ್ಕೆ ಅಧಿಷ್ಠಾತೃದೇವತೆಯಾದ ಮತ್ತು ಸಮಸ್ತಪ್ರಾಣಿಗಳಿಗೂ ಆಶ್ರಯಭೂತನಾದ ವಾಸುದೇವನಿಗೆ ನಮಸ್ಕರಿಸುತ್ತೇನೆ. ಹೃಷೀಕೇಶನೇ! ನಿನಗೆ ನಮಸ್ಕರಿಸುತ್ತೇನೆ. ಶರಣಾಗತನಾಗಿರುವ ನನ್ನನ್ನು ರಕ್ಷಿಸು ; ಪ್ರಭುವೇ!"

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೪೦ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೪೧ನೆಯ ಅಧ್ಯಾಯ

ಮಥುರೆಗೆ ಶ್ರೀಕೃಷ್ಣನ ಪ್ರವೇಶ

ಶ್ರೀಶುಕಮುನಿಗಳು ಹೇಳುತ್ತಾರೆ :

ಸ್ತುವತಸ್ತಸ್ಯ ಭಗವಾನ್ ದರ್ಶಯಿತ್ವಾ ಜಲೇ ವಪುಃ ।
ಭೂಯಃ ಸಮಾಹರತ್ ಕೃಷ್ಣೋ ನಟೋ ನಾಟ್ಯಮಿವಾತ್ಮನಃ ॥೧॥

ಪರೀಕ್ಷಿತಮಹಾರಾಜ! ಹೀಗೆ ಅನನ್ಯಭಕ್ತಿಯಿಂದ ಸ್ತೋತ್ರ ಮಾಡುತ್ತಿದ್ದ ಅಕ್ರೂರನಿಗೆ ನೀರಿನಲ್ಲಿ ತನ್ನ ದಿವ್ಯವಾದ ಸ್ವರೂಪವನ್ನು ತೋರಿಸಿ ಮರುಕ್ಷಣ ದಲ್ಲಿಯೇ-ನಟನು ನಾಟಕವಾಡಿದನಂತರ ತನ್ನ ವೇಷ-ಭೂಷಣಗಳನ್ನು ತೆಗೆದಿಟ್ಟು ಹಿಂದಿನ ಪುರುಷನೇ ಆಗುವಂತೆ– ಶ್ರೀಭಗವಂತನು ಪುನಃ ಗೋಕುಲದ ಶ್ರೀಕೃಷ್ಣನೇ ಆಗಿ ಅಕ್ರೂರನಿಗೆ ಕಾಣಿಸಿಕೊಂಡನು.

ದಿವ್ಯರೂಪವನ್ನು ಧರಿಸಿ ದರ್ಶನವಿತ್ತಿದ್ದ ಭಗವಂತನು ಮಾಯ ವಾದುದನ್ನು ನೀರಿನಲ್ಲಿ ಮುಳುಗಿದ್ದ ಅಕ್ರೂರನು ನೋಡಿ ಅಚ್ಚರಿಗೊಂಡವ ನಾಗಿ ನೀರಿನಿಂದ ಮೇಲೆ ಬಂದು ಆವಶ್ಯಕವೆನಿಸಿದ ಕರ್ಮಗಳನ್ನು ಶೀಘ್ರವಾಗಿ ಮಾಡಿ ರಥದಲ್ಲಿ ಕುಳಿತನು. ಅಕ್ರೂರನು ರಥದಲ್ಲಿ ಕುಳಿತನಂತರ ಶ್ರೀಕೃಷ್ಣನು ಪ್ರಶ್ನಿಸಿದನು :

"ಅಕ್ರೂರ! ನೀನು ಭೂಮಿಯಲ್ಲಾಗಲೀ, ಆಕಾಶದಲ್ಲಾಗಲೀ, ನೀರಿನಲ್ಲಾಗಲೀ ಯಾವುದಾದರೂ ಅದ್ಭುತವಾದ ದೃಶ್ಯವನ್ನು ಕಂಡೆಯಾ? ನಿನ್ನ ಮುಖಾವಲೋಕನದಿಂದ ನೀನು ಅಂತಹ ಅದ್ಭುತವಾದೊಂದು ದೃಶ್ಯವನ್ನು ಕಂಡುಬಂದಿರುವಂತೆ ನಮಗೆ ತಿಳಿಯುತ್ತಿದೆ."

ಅಕ್ರೂರನು ಉತ್ತರಿಸುತ್ತಾನೆ :

"ಸ್ವಾಮಿಯೇ! ಭೂಮಿಯಲ್ಲಾಗಲೀ, ಆಕಾಶದಲ್ಲಾಗಲೀ, ನೀರಿ ನಲ್ಲಾಗಲೀ ಎಷ್ಟೆಷ್ಟು ಅದ್ಭುತಗಳಿವೆಯೋ ಆ ಎಲ್ಲ ಅದ್ಭುತಗಳೂ ವಿಶ್ವಾತ್ಮ ನಾದ, ಭೂಮ್ಯಂತರಿಕ್ಷಜಲಗಳನ್ನೂ ಹೊಟ್ಟೆಯಲ್ಲೇ ಇಟ್ಟುಕೊಂಡಿರುವ ನಿನ್ನಲ್ಲೇ ಅಡಗಿವೆ. ನಿನ್ನನ್ನೇ ನೋಡುತ್ತಿರುವ ನಾನು ಯಾವ ಅದ್ಭುತವನ್ನು ತಾನೇ ಕಾಣದಿದ್ದೇನು? ಭೂಮ್ಯಂತರಿಕ್ಷಗಳಲ್ಲಿಯೂ ನೀರಿನಲ್ಲಿಯೂ ಇರುವ ಸಮಸ್ತವಾದ ಅದ್ಭುತದೃಶ್ಯಗಳೂ ಯಾವನಲ್ಲಿ ಅಡಗಿವೆಯೋ ಅಂತಹ ನಿನ್ನನ್ನೇ ನಾನು ಕಾಣುತ್ತಿರುವಾಗ, ಬ್ರಹ್ಮಸ್ವರೂಪನೇ! ನಾನು ಬೇರೆ ಯಾವ ಅದ್ಭುತವನ್ನು ಕಾಣಬೇಕಾಗಿದೆ?"

ಪರೀಕ್ಷಿತ! ಗಾಂದಿನೀನಂದನನಾದ ಅಕ್ರೂರನು ಶ್ರೀಕೃಷ್ಣನಿಗೆ ಹೀಗೆ ಹೇಳಿ ಕುದುರೆಗಳನ್ನು ಚಪ್ಪರಿಸಿದನು. ವೇಗವಾಗಿ ಹೊರಟ ಕುದುರೆಗಳು ರಾಮ-ಕೃಷ್ಣರಿದ್ದ ರಥವನ್ನು ಸಾಯಂಕಾಲದ ವೇಳೆಗೆ ಮಥುರಾಪಟ್ಟಣಕ್ಕೆ

ತಂದು ನಿಲ್ಲಿಸಿದುವು. ರಾಮ-ಕೃಷ್ಣರನ್ನು ನೋಡಲೆಂದೇ ಮಾರ್ಗದ ಸಮೀಪದಲ್ಲಿದ್ದ ಹಳ್ಳಿಗಳಿಂದ ಜನರು ಸಾವಿರಾರು ಸಂಖ್ಯೆಯಲ್ಲಿ ಬಂದು ಮಾರ್ಗದ ಎರಡು ಪಕ್ಕಗಳಲ್ಲಿಯೂ ಸಾಲಾಗಿ ಕಾಣಿಕೆಗಳೊಡನೆ ನಿಂತಿದ್ದರು. ರಾಮ-ಕೃಷ್ಣರ ದಿವ್ಯವಾದ, ಮಂದಹಾಸಯುಕ್ತವಾದ ಮುಖಾರವಿಂದಗಳನ್ನು ನೋಡುತ್ತಲೇ ಅವರೆಲ್ಲರೂ ಧನ್ಯತೆಯನ್ನು ಪಡೆದರು. ರಾಮ-ಕೃಷ್ಣರನ್ನು ನೋಡಿ ಆನಂದತುಂದಿಲರಾದ ಅವರಿಗೆ ತಮ್ಮ ದೃಷ್ಟಿಯನ್ನು ಅವರಿಂದ ಹಿಂದಕ್ಕೆ ತೆಗೆದುಕೊಳ್ಳಲು ಸಾಧ್ಯವೇ ಆಗಲಿಲ್ಲ. ಅವರನ್ನು ಬಹುದೂರದ ವರೆಗೂ ಎವೆಯಿಕ್ಕದೇ ನೋಡುತ್ತಿದ್ದು ಜನ್ಮವು ಸಾರ್ಥಕವಾಯಿತೆಂದು ಭಾವಿಸಿಕೊಂಡು ತಮ್ಮ-ತಮ್ಮ ಹಳ್ಳಿಗಳಿಗೆ ಹಿಂದಿರುಗಿದರು.

ಗೋಕುಲವಾಸಿಗಳಾದ ನಂದನೇ ಮೊದಲಾದ ಗೋಪಾಲಕರು, ರಾಮ-ಕೃಷ್ಣರು ಹೋಗುವುದಕ್ಕಿಂತ ಮೊದಲೇ ಮಥುರಾಪಟ್ಟಣಕ್ಕೆ ಹೋಗಿ ಮಥುರಾಪಟ್ಟಣದ ಸಮೀಪದಲ್ಲಿದ್ದ ಉದ್ಯಾನವನದಲ್ಲಿ ನಿಂತು ರಾಮ-ಕೃಷ್ಣರ ರಥವು ಬರುವುದನ್ನೇ ನಿರೀಕ್ಷಿಸುತ್ತಿದ್ದರು. ನಂದಾದಿಗಳಿದ್ದೆಡೆಗೆ ರಾಮ-ಕೃಷ್ಣರ ರಥವು ಬಂದು ನಿಂತಿತು. ಎಲ್ಲರೂ ರಥದಿಂದಿಳಿದರು. ಅಕ್ರೂರನು ಶ್ರೀಕೃಷ್ಣನ ಆಜ್ಞೆಯನ್ನು ನಿರೀಕ್ಷಿಸುತ್ತಾ ವಿನಯಭಾವದಿಂದ ನಿಂತಿದ್ದನು. ಜಗದೀಶ್ವರನಾದ ಶ್ರೀಕೃಷ್ಣನು ತನ್ನ ಕೈಯಿಂದ ಅಕ್ರೂರನ ಕೈಯನ್ನು ಹಿಡಿದುಕೊಂಡು ನಸುನಗುತ್ತಾ ಪ್ರೀತಿಪೂರ್ವಕವಾಗಿ ಹೇಳಿದನು :

ಭವಾನ್ ಪ್ರವಿಶತಾಮಗ್ರೇ ಸಹಯಾನಃ ಪುರೀಂ ಗೃಹಮ್ ।
ವಯಂ ತ್ವಿಹಾವಮುಚ್ಯಾಥ ತತೋ ದ್ರಕ್ಷ್ಯಾಮಹೇ ಪುರೀಮ್ ॥

"ಅಕ್ರೂರ! ನೀನು ರಥದೊಡನೆ ಮಥುರಾಪಟ್ಟಣವನ್ನು ಪ್ರವೇಶಿಸಿ ನಿನ್ನ ಮನೆಗೆ ಹೋಗು. ನಾವು ಇಲ್ಲಿಯೇ ಇಳಿದು ಸ್ವಲ್ಪಹೊತ್ತು ವಿಶ್ರಮಿಸಿ ಕೊಂಡನಂತರ ಪಟ್ಟಣವನ್ನು ನೋಡಲು ಬರುತ್ತೇವೆ."

ಅಕ್ರೂರನು ಹೇಳುತ್ತಾನೆ :

"ಪ್ರಭುವೇ! ನಾನು ನಿಮ್ಮಿಬ್ಬರನ್ನೂ ಬಿಟ್ಟು ಮಥುರಾಪಟ್ಟಣವನ್ನು ಪ್ರವೇಶಿಸಲಾರೆನು. ಭಕ್ತವತ್ಸಲನೇ! ಭಕ್ತನಾದ ನನ್ನನ್ನು ಪರಿತ್ಯಜಿಸುವುದು ನಿನಗೆ ಉಚಿತವಾಗಿ ಕಾಣುವುದಿಲ್ಲ.

ಅಧೋಕ್ಷಜನೇ! ಸುಹೃತ್ತಮನೇ! ನೀನು ನಿನ್ನ ಅಗ್ರಜನಾದ ಬಲ ರಾಮನೊಡನೆಯೂ, ಗೆಳೆಯರೂ ಬಂಧುಗಳೂ ಆದ ಗೋಪಾಲರೊಡ ನೆಯೂ ನಮ್ಮ ಮನೆಗೆ ಬಾ. ನಾವೆಲ್ಲರೂ ಜೊತೆಗೂಡಿಯೇ ಹೋಗೋಣ. ನಮ್ಮ ಮನೆಗೆ ಬಂದು ನೀನು ನಮ್ಮನ್ನು ಸನಾಥರನ್ನಾಗಿ ಮಾಡು. ನಾವು ಗೃಹಸ್ಥರಾಗಿದ್ದೇವೆ. ನಿನ್ನ ಚರಣಕಮಲಗಳ ಧೂಳಿಯಿಂದ ನಮ್ಮ ಮನೆ ಗಳನ್ನು ಪವಿತ್ರಗೊಳಿಸು. ನಿನ್ನ ದಿವ್ಯವಾದ ಪಾದಕಮಲಗಳನ್ನು ತೊಳೆಯುವುದರಿಂದ ಅಗ್ನಿಗಳೂ, ದೇವತೆಗಳೂ, ಪಿತೃದೇವತೆಗಳೂ ತೃಪ್ತ ರಾಗುತ್ತಾರೆ. ನಿನ್ನೆರಡು ಪಾದಕಮಲಗಳನ್ನೂ ತೊಳೆದು ವಿಷ್ಣುಪಾದೋ ದಕವನ್ನು ಶಿರಸ್ಸಿನಲ್ಲಿ ಧಾರಣೆಮಾಡಿದ್ದರಿಂದಲೇ ಬಲಿಚಕ್ರವರ್ತಿಯು ಪುಣ್ಯಶ್ಲೋಕನೆಂಬ ಕೀರ್ತಿಯನ್ನು ಗಳಿಸಿದನು. ಇಷ್ಟುಮಾತ್ರವಲ್ಲ ; ಅಪಾರ ವಾದ ಐಶ್ವರ್ಯವನ್ನು ಪಡೆದು ಅನನ್ಯಭಕ್ತರಾದವರಿಗೆ ಲಭಿಸುವ ಸ್ಥಾನ ವನ್ನೇ ಪಡೆದುಕೊಂಡನು. ನಿನ್ನ ದಿವ್ಯವಾದ ಚರಣಕಮಲಗಳಿಂದಲೇ ಹೊರಬಂದ ಪರಮಪವಿತ್ರವಾದ ಗಂಗೆಯ ಪ್ರವಾಹಗಳು ಮೂರು ಲೋಕ ಗಳನ್ನೂ ಪವಿತ್ರಗೊಳಿಸಿದುವು. ಪವಿತ್ರವಾದ ಆ ವಿಷ್ಣುಪಾದೋದಕವನ್ನು ಭಗವಾನ್ ಶಂಕರನು ತಲೆಯಲ್ಲಿ ಧರಿಸಿದನು. ವಿಷ್ಣುಪಾದೋದ್ಭವಳಾದ ಗಂಗಾಮಾತೆಯ ಸ್ಪರ್ಶಮಾತ್ರದಿಂದಲೇ, ಭಸ್ಮೀಭೂತರಾಗಿ ಹೋಗಿದ್ದ ಸಗರನ ಮಕ್ಕಳೆಲ್ಲರೂ ಸ್ವರ್ಗವನ್ನು ಸೇರಿದರು. ಭಗವಂತ! ನಿನ್ನ ಪಾದೋ ದಕಕ್ಕೆ ಅಷ್ಟೊಂದು ಅಪಾರವಾದ ಮಹಿಮೆಯಿರುವುದಪ್ಪಾ!

ದೇವದೇವ ಜಗನ್ನಾಥ ಪುಣ್ಯಶ್ರವಣಕೀರ್ತನ ।
ಯದೂತ್ತಮೋತ್ತಮಶ್ಲೋಕ ನಾರಾಯಣ ನಮೋऽಸ್ತು ತೇ ॥೧೬॥

ದೇವತೆಗಳಿಗೂ ದೇವತೆಯಾಗಿರತಕ್ಕವನೇ! ಲೋಕೇಶ್ವರನೇ! ಪುಣ್ಯ ತಮಗಳಾದ ಶ್ರವಣ-ಕೀರ್ತನಗಳುಳ್ಳವನೇ! ಯದುಶ್ರೇಷ್ಠರಲ್ಲಿ ಶ್ರೇಷ್ಠವಾದ ಕೀರ್ತಿಯನ್ನು ಗಳಿಸಿರತಕ್ಕವನೇ! ನಾರಾಯಣನೇ! ನಿನಗೆ ನಮಸ್ಕರಿಸುತ್ತೇನೆ."

ಭಗವಂತನು ಹೇಳುತ್ತಾನೆ :

"ಅಕ್ರೂರ! ಯದುವಂಶೀಯರಿಗೆ ದ್ರೋಹವೆಸಗಿರುವ ಕಂಸನನ್ನು

ಸಂಹರಿಸಿ ಸುಹೃದರೆಲ್ಲರಿಗೂ ಸಂತೋಷವನ್ನುಂಟುಮಾಡಿ ಅನಂತರ ಬಲರಾಮ, ನಂದ–ಇವರೇ ಮೊದಲಾದ ಹಿರಿಯರೊಡನೆ ನಾನು ನಿನ್ನ ಮನೆಗೆ ಬರುತ್ತೇನೆ. ನೀನು ನಿರಾತಂಕನಾಗಿ ಮಥುರೆಯನ್ನು ಪ್ರವೇಶಿಸು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತ! ಹೀಗೆ ಭಗವಂತನಿಂದ ಆದೇಶಿಸಲ್ಪಟ್ಟ ಅಕ್ರೂರನು ಭಗವಂತನನ್ನು ಬಿಟ್ಟುಹೋಗಲು ಮನಸ್ಸಿಲ್ಲದಿದ್ದರೂ ಅನ್ಯಮಾರ್ಗವಿಲ್ಲದೆ ಮಥುರಾಪಟ್ಟಣವನ್ನು ಪ್ರವೇಶಿಸಿ, ಮೊದಲು ಕಂಸನ ಅರಮನೆಗೆ ಹೋಗಿ ಬಲರಾಮ-ಕೃಷ್ಣರನ್ನು ಕರೆತಂದಿರುವ ಶುಭಸಮಾಚಾರವನ್ನು ಅವನಿಗೆ ತಿಳಿಸಿ ತನ್ನ ಮನೆಗೆ ಹೋದನು. ಇತ್ತಲಾಗಿ ಮರುದಿನ ಅಪರಾಹ್ಣ ಸಮಯದಲ್ಲಿ ಶ್ರೀಕೃಷ್ಣನು ಬಲರಾಮನೊಡನೆ ಗೋಪಾಲರಿಂದ ಸಮಾವೃತನಾಗಿ ಮಥುರಾಪಟ್ಟಣವನ್ನು ನೋಡುವ ಆಸೆಯಿಂದ ಆ ಪಟ್ಟಣವನ್ನು ಪ್ರವೇಶಿಸಿದನು.

ಸ್ಫಟಿಕಶಿಲಾಮಯವಾದ ಹೆಬ್ಬಾಗಿಲಿನಿಂದಲೂ, ಎತ್ತರವಾದ ಗೋಪುರದಿಂದಲೂ, ಸುವರ್ಣಮಯವಾದ ದೊಡ್ಡದಾದ ಬಾಗಿಲುಗಳಿಂದಲೂ ಶೋಭಾಯಮಾನವಾಗಿ ಕಾಣುತ್ತಿದ್ದ ಮಥುರಾಪಟ್ಟಣವನ್ನು ಶ್ರೀಕೃಷ್ಣನು ಗೋಪಾಲರೊಡನೆ ನೋಡಿದನು. ಅಲ್ಲಿನ ಮನೆಗಳಲ್ಲಿ ತಾಮ್ರ ಮತ್ತು ಹಿತ್ತಾಳೆಯಿಂದ ಮಾಡಲ್ಪಟ್ಟಿದ್ದ ಧಾನ್ಯದ ಕಣಜಗಳಿದ್ದುವು. ನಗರದ ಸುತ್ತಲೂ ಕಂದಕವಿದ್ದು ಅದನ್ನು ಪ್ರವೇಶಿಸುವುದು ದುಷ್ಕರವಾಗಿದ್ದಿತು. ಉದ್ಯಾನವನಗಳಿಂದಲೂ, ಉಪವನಗಳಿಂದಲೂ ಕೂಡಿದ್ದ ಮಥುರಾ ಪಟ್ಟಣದಲ್ಲಿ ಸುವರ್ಣದಿಂದ ಸಿಂಗರಿಸಲ್ಪಟ್ಟಿದ್ದ ನಾಲ್ಕು ಮಾರ್ಗಗಳು ಸೇರುವ ಚೌಕಗಳಿದ್ದುವು. ಕೈದೋಟಗಳಿಂದ ಸಮಲಂಕೃತವಾದ ಧನಿಕರ ದಿವ್ಯವಾದ ಸೌಧಗಳಿದ್ದುವು. ಮಥುರಾಪಟ್ಟಣವು ಸಾಲು-ಸಾಲಾಗಿದ್ದ ಸಭಾಮಂಟಪಗಳಿಂದಲೂ, ಭವನಗಳಿಂದಲೂ ಸಮಲಂಕೃತವಾಗಿದ್ದಿತು. ಸುಂದರವಾದ ಆ ಭವನಗಳಲ್ಲಿ ವಜ್ರ, ವೈಡೂರ್ಯ, ನೀಲ, ಹವಳ ಮತ್ತು ಪಚ್ಚೆಗಳಿಂದ ಸಮಲಂಕೃತವಾದ ಚಾವಣಿಗಳೂ, ಜಗುಲಿಗಳೂ ಇದ್ದುವು.

ರತ್ನಖಚಿತವಾದ ಕಿಟಕಿಗಳಲ್ಲಿಯೂ ಜಗುಲಿಗಳಲ್ಲಿಯೂ ಕುಳಿತು ಕಪೋತ ಪಾರಿವಾಳಪಕ್ಷಿಗಳೂ ಮತ್ತು ನವಿಲುಗಳೂ ಧ್ವನಿಮಾಡುತ್ತಿದ್ದುವು. ಅಂತಹ ನಿನಾದದಿಂದ ವ್ಯಾಪ್ತವಾಗಿದ್ದ ಸುಂದರವಾದ ಭವನಗಳನ್ನು ಶ್ರೀಕೃಷ್ಣನು ನೋಡಿದನು. ಮಥುರಾಪಟ್ಟಣದ ಅಂಗಡಿಬೀದಿಗಳನ್ನೂ, ರಾಜಬೀದಿ ಗಳನ್ನೂ, ಚೌಕಗಳನ್ನೂ ಚೆನ್ನಾಗಿ ಗುಡಿಸಿ ಸಾರಿಸಿದ್ದರು ಮತ್ತು ಅವು ಗಳನ್ನು ಪುಷ್ಪಮಾಲೆಗಳಿಂದಲೂ, ಧಾನ್ಯಗಳ ಮೊಳಕೆಗಳಿಂದಲೂ, ಅರಳಿ ನಿಂದಲೂ, ಅಕ್ಷತೆಯಿಂದಲೂ ಅಲಂಕರಿಸಿದ್ದರು. ಚಂದನದಿಂದಲೂ ಮತ್ತು ಮೊಸರಿನಿಂದಲೂ ನೆನೆಸಲ್ಪಟ್ಟಿದ್ದ ನೀರುತುಂಬಿದ ಕೊಡಗಳಿಂದಲೂ, ಚಿಗುರುಗಳಿಂದ ಕೂಡಿದ ಹೂದೀಪಗಳ ಸಾಲುಗಳಿಂದಲೂ, ಬಾವುಟ ಗಳಿಂದಲೂ, ಗೊನೆಗಳಿಂದ ಕೂಡಿದ ಬಾಳೆಯ ಗಿಡಗಳಿಂದಲೂ, ಅಡಕೇ ಮರದ ಹೊಂಬಾಳೆಗಳಿಂದಲೂ, ಕೆಂಪು ಅರಗಿನಿಂದಲೂ ಸಮಲಂಕೃತವಾದ ಬಾಗಿಲುಗಳುಳ್ಳ ಹಲವಾರು ಮನೆಗಳನ್ನು ಶ್ರೀಕೃಷ್ಣನು ಗೋಪಾಲಕರೊಡನೆ ನೋಡಿದನು.

ಪರೀಕ್ಷಿತ! ವಸುದೇವನ ಮಕ್ಕಳಾದ ಬಲರಾಮ-ಕೃಷ್ಣರು, ಗೆಳೆಯ ರಿಂದ ಪರಿವೃತರಾಗಿ ಮಥುರಾಪಟ್ಟಣದ ಸೊಬಗನ್ನು ನೋಡುತ್ತಾ ರಾಜ ಬೀದಿಯನ್ನು ಪ್ರವೇಶಿಸಿದೊಡನೆಯೇ ಮಥುರಾಪಟ್ಟಣದ ಸ್ತ್ರೀಯರು ರಾಮ-ಕೃಷ್ಣರನ್ನು ನೋಡುವ ಸಲುವಾಗಿ ಅವಸರದಿಂದ ಹೊರಬಂದರು. ಮತ್ತೆ ಕೆಲವರು ಉತ್ಸುಕರಾಗಿ ಮಹಡಿಗಳನ್ನೇರಿ ಅವರನ್ನು ನೋಡುತ್ತಾ ನಿಂತರು. ಜಗದಾನಂದಕಂದರಾದ ರಾಮ-ಕೃಷ್ಣರನ್ನು ನೋಡಬೇಕೆಂಬ ಕಾತರದಲ್ಲಿ ಕೆಲವರು ವಸ್ತ್ರಗಳನ್ನೂ, ಆಭರಣಗಳನ್ನೂ ಹಿಂದು-ಮುಂದಾಗಿ ಧರಿಸಿದ್ದರು. ಕೆಲವರು ಒಂದೇ ಬಳೆಯನ್ನೂ, ಒಂದೇ ಕಿವಿಗೆ ಓಲೆಯನ್ನೂ, ಒಂದೇ ಕಾಲಿಗೆ ಕಾಲ್ಬಳೆಯನ್ನೂ ಹಾಕಿಕೊಂಡು ಓಡಿದರು. ಅವರಿಗೆ ಮತ್ತೊಂದು ಕೈಗೂ ಮತ್ತೊಂದು ಕಿವಿಗೂ ಮತ್ತೊಂದು ಕಾಲಿಗೂ ಆಭರಣ ವನ್ನು ತೊಟ್ಟುಕೊಂಡು ಹೋಗಬೇಕೆಂಬ ಪರಿವೆಯೇ ಇಲ್ಲ ದೇಹೋಯಿತು. ಒಂದು ಕಣ್ಣಿಗೆ ಕಾಡಿಗೆಯನ್ನು ಹಚ್ಚಿಕೊಂಡಿದ್ದವಳೊಬ್ಬಳು ಬಲರಾಮ-ಕೃಷ್ಣರು ರಾಜಬೀದಿಯಲ್ಲಿ ಬರುತ್ತಿರುವರೆಂಬ ವಾರ್ತೆಯು ತಿಳಿದೊಡನೆಯೇ

ಮತ್ತೊಂದು ಕಣ್ಣಿಗೆ ಕಪ್ಪಿಡುವುದನ್ನೂ ಮರೆತು ಕಾಡಿಗೆಯನ್ನೂ ಒಗೆದು ಸೆರಗನ್ನೂ ಸರಿಯಾಗಿ ಹೊದ್ದುಕೊಳ್ಳದೆ ಬೀದಿಗೆ ಓಡಿದಳು. ಊಟ ಮಾಡುತ್ತಿದ್ದ ಕೆಲವರು ಸ್ತ್ರೀಯರು ಶ್ರೀಕೃಷ್ಣನು ರಾಜಮಾರ್ಗದಲ್ಲಿ ಬರುತ್ತಿರುವನೆಂಬುದನ್ನು ಕೇಳಿದೊಡನೆಯೇ ಊಟವನ್ನು ಅಲ್ಲಿಗೇ ನಿಲ್ಲಿಸಿ ಎಂಜಲಕೈಯಿನಿಂದಲೇ ಬೀದಿಗೆ ಧಾವಿಸಿದರು. ಎಲ್ಲರ ಮನಸ್ಸುಗಳೂ ಶ್ರೀಕೃಷ್ಣನನ್ನು ನೋಡಬೇಕೆನ್ನುವ ಉತ್ಸಾಹದಿಂದ ಕುಣಿದಾಡುತ್ತಿದ್ದುವು. ಎಣ್ಣೇ-ನೀರನ್ನು ಎರೆದುಕೊಳ್ಳಬೇಕೆಂದು ಬಚ್ಚಲಮನೆಯ ಕಡೆಗೆ ಹೋಗುತ್ತಿದ್ದವರು, ಶ್ರೀಕೃಷ್ಣಾಗಮನದ ವಾರ್ತೆಯನ್ನು ಕೇಳುತ್ತಲೇ ಸ್ನಾನವನ್ನೂ ಮಾಡದೆ ಮನೆಯಿಂದ ಹೊರಬಂದರು. ಮಲಗಿದ್ದ ಕೆಲವರು ಸ್ತ್ರೀಯರು ಸರ್ವತ್ರ ಸಡಗರದ ಧ್ವನಿಯನ್ನು ಕೇಳುತ್ತಲೇ ಬಿಚ್ಚಿದ್ದ ಮುಡಿಯನ್ನೂ ಕಟ್ಟಿಕೊಳ್ಳದೆ ಉಟ್ಟಿದ್ದ ಸೀರೆಯನ್ನೂ ಸರಿಮಾಡಿಕೊಳ್ಳದೆ ಜಗದಾನಂದ ಕಂದನನ್ನು ನೋಡಬೇಕೆಂಬ ಧಾವಂತದಿಂದ ಬೀದಿಗೆ ಓಡಿದರು. ಆ ಸಮಯದಲ್ಲಿ ಮಗುವಿಗೆ ಮೊಲೆಯುಣಿಸುತ್ತಿದ್ದ ಕೆಲವು ಮಾತೆಯರು ಶ್ರೀಕೃಷ್ಣನು ಬಲರಾಮನೊಡನೆ ರಾಜಬೀದಿಯಲ್ಲಿ ಬರುತ್ತಿರುವನೆಂಬ ಮಾತನ್ನು ಸಖಿಯರಿಂದ ಕೇಳುತ್ತಲೇ ಮಗುವನ್ನೆತ್ತಿ ಪಕ್ಕಕ್ಕೆ ಕುಕ್ಕರಿಸಿ ಮಗುವು ಅಳುತ್ತಿರುವುದನ್ನೂ ಲೆಕ್ಕಿಸದೆ ರಾಜಬೀದಿಗೆ ಓಡಿದರು. ಕಮಲ ನೇತ್ರನಾದ ಶ್ರೀಕೃಷ್ಣನು ಮದಿಸಿದ ಗಜರಾಜನಂತೆ ಮಂದ-ಮಂದವಾಗಿ ಹೆಜ್ಜೆಗಳನ್ನಿಡುತ್ತಿದ್ದನು. ಮಹಾಲಕ್ಷ್ಮಿಗೂ ಆನಂದವನ್ನುಂಟುಮಾಡುವ ತನ್ನ ಸುಂದರ ಶ್ರೀವಿಗ್ರಹದಿಂದ ಮಥುರಾಪಟ್ಟಣದ ಸ್ತ್ರೀಯರ ಕಣ್ಣುಗಳಿಗೆ ಆನಂದೋತ್ಸವವನ್ನುಂಟುಮಾಡಿದನು. ಶ್ಯಾಮಸುಂದರನನ್ನು ನೋಡಿದ ಅವರ ಕಣ್ಣುಗಳು ಸಾರ್ಥಕಗೊಂಡುವು. ಪ್ರೌಢವಾದ ಹಾವ-ಭಾವ ಗಳಿಂದಲೂ, ವಿಲಾಸಪೂರ್ಣವಾದ ಕಿರುನಗೆಯಿಂದಲೂ, ಚೇತೋಹಾರಿ ಯಾದ ಕಡೆಗಣ್ಣಿನ ನೋಟದಿಂದಲೂ ಶ್ರೀಕೃಷ್ಣನು ಮಥುರಾಪಟ್ಟಣದ ಸ್ತ್ರೀಯರ ಮನಸ್ಸುಗಳೆಲ್ಲವನ್ನೂ ಅಪಹರಿಸಿಬಿಟ್ಟನು.

ಪರೀಕ್ಷಿತ! ಮಥುರಾಪಟ್ಟಣದ ಸ್ತ್ರೀಯರು ಬಹಳ ದಿವಸಗಳಿಂದಲೂ ಶ್ರೀಕೃಷ್ಣನ ಹಲವಾರು ಅದ್ಭುತವಾದ ಕ್ರೀಡಾವಿನೋದಗಳ ಕಥೆಗಳನ್ನು ಕೇಳುತ್ತಲೇ ಇದ್ದರು. ಶ್ರೀಕೃಷ್ಣಚರಿತಾಮೃತವನ್ನು ಪದೇ-ಪದೇ ಸವಿಯು

ತ್ತಿದ್ದ ಅವರ ಮನಸ್ಸು ಶ್ರೀಕೃಷ್ಣನ ಹಿಂದೆಯೇ ಹೋಗಿಬಿಟ್ಟಿತು. ತಮ್ಮ ಆರಾಧ್ಯಮೂರ್ತಿಯಾಗಿದ್ದ ಶ್ರೀಕೃಷ್ಣನನ್ನು ಇಂದು ಮಥುರಾಪಟ್ಟಣದ ಸ್ತ್ರೀಯರು ಪ್ರತ್ಯಕ್ಷವಾಗಿಯೇ ನೋಡಿದರು. ಶ್ರೀಕೃಷ್ಣನೂ ಕೂಡ ಕುಡಿ ನೋಟ-ಹುಸಿನಗೆಯೆಂಬ ಅಮೃತವನ್ನು ಅವರ ಮೇಲೆ ಸುರಿಸಿ ಅವರನ್ನು ಸಮ್ಮಾನಿಸಿದನು. ಇದರಿಂದ ಪುಲಕಿತರಾದ ಮಥುರಾಪಟ್ಟಣದ ಸ್ತ್ರೀಯರು ಕಣ್ಣುಗಳೆಂಬ ಬಾಗಿಲುಗಳ ಮೂಲಕವಾಗಿ ಆನಂದಮೂರ್ತಿಯಾದ ಶ್ರೀಕೃಷ್ಣನನ್ನು ಹೃದಯಗುಹೆಯಲ್ಲಿರಿಸಿಕೊಂಡು ಗಾಢವಾಗಿ ಆಲಿಂಗಿಸಿ ಕೊಂಡರು. ಇದರಿಂದಾಗಿ ಅವರಿಗೆ ಬಹಳ ದಿವಸಗಳಿಂದಲೂ ಇದ್ದ ವಿರಹ ವ್ಯಾಧಿಯು ಹೋಗಿಬಿಟ್ಟಿತು. ತಮ್ಮ ಮನೆಯ ಉಪ್ಪರಿಗೆಯ ಮೇಲೆ ನಿಂತಿದ್ದ ಮಥುರಾಪಟ್ಟಣದ ಸ್ತ್ರೀಯರು ಶ್ರೀಕೃಷ್ಣನ ಮೇಲಿನ ಪ್ರೀತಿಯಿಂದ ಅರಳಿದ ಮುಖಾರವಿಂದವುಳ್ಳವರಾಗಿ ಬಲರಾಮ-ಕೃಷ್ಣರ ಮೇಲೆ ಘಮ- ಘಮಿಸುವ ಹೂವುಗಳ ಮಳೆಗರೆದರು.

ಬ್ರಾಹ್ಮಣ-ಕ್ಷತ್ರಿಯ-ವೈಶ್ಯರು ರಾಜಬೀದಿಯ ಎರಡು ಪಾರ್ಶ್ವ ಗಳಲ್ಲಿಯೂ ಗುಂಪು-ಗುಂಪಾಗಿ ನಿಂತು ಆನಂದತುಂದಿಲರಾಗಿ ರಾಜಬೀದಿ ಯಲ್ಲಿ ಬಿಜಯಮಾಡುತ್ತಿದ್ದ ಜಗದಾನಂದಕಂದರಾದ ರಾಮ-ಕೃಷ್ಣರನ್ನು ಮೊಸರು, ಅಕ್ಷತೆ, ಪೂರ್ಣಕುಂಭ, ಪುಷ್ಪಹಾರ, ಚಂದನ ಮತ್ತು ಉಪಾಯನ ಸಾಮಗ್ರಿಗಳು—ಇವುಗಳಿಂದ ಪೂಜಿಸುತ್ತಿದ್ದರು.

ಆ ಸಮಯದಲ್ಲಿ ಪಟ್ಟಣಿಗರು ತಮ್ಮ-ತಮ್ಮಲ್ಲಿಯೇ ಹೀಗೆ ಮಾತನಾಡಿಕೊಳ್ಳುತ್ತಿದ್ದರು :

“ಅಬ್ಬಾ! ಗೋಪಿಕಾಸ್ತ್ರೀಯರು ನಿಶ್ಚಯವಾಗಿಯೂ ಎಂತಹ ಮಹತ್ತರವಾದ ತಪಸ್ಸನ್ನು ಮಾಡಿದ್ದಿರಬೇಕು? ಮನುಷ್ಯಲೋಕಕ್ಕೇ ಪರಮಾನಂದದಾಯಕರಾದ ಈ ಬಾಲಕರನ್ನು ನಿರಂತರವಾಗಿ ನೋಡುತ್ತಿ ರುತ್ತಾರಲ್ಲಾ!”

ಹೀಗೆ ಮಥುರಾಪಟ್ಟಣದ ಸಮಸ್ತಪ್ರಾಣಿಗಳಿಗೂ ನೇತ್ರಾನಂದ ವನ್ನುಂಟುಮಾಡುತ್ತಾ ಬಲರಾಮನೊಡನೆಯೂ ಗೋಪಾಲಕರೊಡನೆಯೂ ರಾಜಬೀದಿಯಲ್ಲಿ ಆಗಮಿಸುತ್ತಿದ್ದ ಗದಾಗ್ರಜನಾದ ಶ್ರೀಕೃಷ್ಣನು, ಬಟ್ಟೆಗಳಿಗೆ

ಬಣ್ಣಹಾಕುವ ಕಸುಬನ್ನು ಮಾಡುತ್ತಿದ್ದ ಅಗಸನೊಬ್ಬನು ರಾಜಬೀದಿಯಲ್ಲಿ ತನಗೆ ಎದುರಾಗಿ ಬರುತ್ತಿದ್ದುದನ್ನು ಕಂಡು, ಒಗೆದು ಮಡಿಮಾಡಿದ ಶ್ರೇಷ್ಠವಾದ ವಸ್ತ್ರಗಳನ್ನು ಕೊಡುವಂತೆ ಯಾಚಿಸಿದನು :

ದೇಹ್ಯಾವಯೋಃ ಸಮುಚಿತಾನ್ಯಙ್ಗ ವಾಸಾಂಸಿ ಚಾರ್ಹತೋಃ ।
ಭವಿಷ್ಯತಿ ಪರಂ ಶ್ರೇಯೋ ದಾತುಸ್ತೇ ನಾತ್ರ ಸಂಶಯಃ ॥೩೩॥

"ಮಹಾಶಯನೇ! ನಮ್ಮಿಬ್ಬರಿಗೂ ತೊಡಲು ಯೋಗ್ಯವಾದ ವಸ್ತ್ರ ಗಳನ್ನು ಕೊಡು. ನಾವು ರಾಜಯೋಗ್ಯವಾದ ಈ ಬಟ್ಟೆಗಳನ್ನು ತೊಟ್ಟು ಕೊಳ್ಳಲು ಅರ್ಹರಾಗಿದ್ದೇವೆ. ನಮ್ಮ ಪ್ರಾರ್ಥನೆಯಂತೆ ಈ ವಸ್ತ್ರಗಳನ್ನು ನಮಗೆ ಕೊಡುವ ನಿನಗೆ ಬಹಳ ಶ್ರೇಯಸ್ಸುಂಟಾಗುತ್ತದೆ. ಇದರಲ್ಲಿ ಸಂಶಯವೇ ಇಲ್ಲ."

ಪರೀಕ್ಷಿತಮಹಾರಾಜ! ಭಗವಂತನು ಸರ್ವಪರಿಪೂರ್ಣನು. ಅವನಿಗೆ ಯಾವುದರಲ್ಲಿಯೂ ಕೊರತೆ ಎಂಬುದೇ ಇಲ್ಲ. ಬ್ರಹ್ಮಾಂಡದಲ್ಲಿರುವ ಸಕಲ ಸರ್ವಸ್ವವೂ ಅವನದೇ ಆಗಿದೆ. ಹೀಗಿದ್ದರೂ ಲೀಲಾಮಾನುಷವಿಗ್ರಹನಾದ ಭಗವಾನ್ ಕೃಷ್ಣಸ್ವಾಮಿಯು ಅಗಸನನ್ನು ಬಟ್ಟೆಗಳಿಗಾಗಿ ಯಾಚಿಸಿದನು. ಆದರೆ ಮೂರ್ಖನಾದ ರಜಕನಿಗೆ ಶ್ರೀಕೃಷ್ಣನು ಬಟ್ಟೆಗಳನ್ನು ಕೇಳಿದ್ದೇ ಅಪ ರಾಧವೆನಿಸಿತು. ಕಂಸನ ಸೇವಕನಾಗಿದ್ದ ಅವನು ಮಹಾಗರ್ವಿಷ್ಠನಾಗಿದ್ದನು.

ಈದೃಶಾನ್ಯೇವ ವಾಸಾಂಸಿ ನಿತ್ಯಂ ಗಿರಿವನೇಚರಾಃ ।
ಪರಿಧತ್ತ ಕಿಮುದ್ವೃತ್ತಾ ರಾಜದ್ರವ್ಯಾಣ್ಯಭೀಪ್ಸಥ ॥೩೪॥

ಯಾತಾಶು ಬಾಲಿಶಾ ಮೈವಂ ಪ್ರಾರ್ಥ್ಯಂ ಯದಿ ಜಿಜೀವಿಷಾ ।
ಬಧ್ನನ್ತಿ ಘ್ನನ್ತಿ ಲುಮ್ಪನ್ತಿ ದೃಪ್ತಂ ರಾಜಕುಲಾನಿ ವೈ ॥೩೬॥

"ಪರ್ವತಗಳಲ್ಲಿಯೂ ಅರಣ್ಯಗಳಲ್ಲಿಯೂ ಸದಾ ಸಂಚರಿಸುವ ಕಾಡು ಪಾಪಗಳೇ! ನೀವು ಇಂತಹುದೇ ವಸ್ತ್ರವನ್ನು ಪ್ರತಿದಿನವೂ ಉಡುವಿರಾ? ಉದ್ಧತರಾಗಿರುವ ನೀವು ರಾಜನ ವಸ್ತ್ರಗಳನ್ನು ಅಪೇಕ್ಷಿಸುತ್ತಿರುವಿರಲ್ಲವೇ? ಇದರ ಪರಿಣಾಮವನ್ನು ಬಲ್ಲಿರಾ? ರಾಜಭಟರು ನಿಮ್ಮಂತಹ ಕೊಬ್ಬಿರುವ ಹುಡುಗರನ್ನು ಬಂಧಿಸುತ್ತಾರೆ ; ಸಂಹರಿಸುತ್ತಾರೆ ; ನಿಮ್ಮಲ್ಲಿರುವ ಸರ್ವಸ್ವ ವನ್ನೂ ಕಿತ್ತುಕೊಳ್ಳುತ್ತಾರೆ. ಆದುದರಿಂದ, ತುಂಟಹುಡುಗರೇ! ನೀವು

ಇಲ್ಲಿಂದ ಬೇಗ ಹೊರಟುಹೋಗಿರಿ. ಬದುಕಿರುವ ಆಸೆಯಿದ್ದರೆ ಹೀಗೆಲ್ಲಾ ರಾಜನಿಗೆ ಸಂಬಂಧಿಸಿದ ವಸ್ತ್ರಗಳನ್ನು ಕೇಳಬಾರದು. ತಿಳಿಯಿತೇ?"

ಮಡಿವಾಳನ ಈ ತಲೆಹರಟೆಯ ಮಾತುಗಳನ್ನು ಕೇಳಿ ದೇವಕಿಯ ಮಗನಾದ ಶ್ರೀಕೃಷ್ಣನು ಕುಪಿತನಾಗಿ ಉಗುರುಗಳಿಂದಲೇ ಅವನ ಕುತ್ತಿಗೆಯನ್ನು ಜಿಗುಟಿ ದೇಹದಿಂದಲೇ ಬೇರ್ಪಡಿಸಿದನು. ಪ್ರಧಾನರಜಕನು*



ಪ್ರಾಣಗಳನ್ನು ತೊರೆದು ಕೆಳಗೆ ಬೀಳುತ್ತಲೇ ಅವನ ಅನುಯಾಯಿಗಳಾದ ಮಡಿವಾಳರು ಬಟ್ಟೆಯ ಮೂಟೆಗಳನ್ನು ಅಲ್ಲಿಯೇ ಬಿಟ್ಟು ದಿಕ್ಕಾಪಾಲಾಗಿ ಓಡಿಹೋದರು. ಬಳಿಕ ಶ್ರೀಕೃಷ್ಣನು ಆ ವಸ್ತ್ರಗಳಲ್ಲಿ ತನಗೆ ಇಷ್ಟವಾದುದನ್ನು ತೆಗೆದುಕೊಂಡನು. ಹೀಗೆ ಶ್ರೀಕೃಷ್ಣ-ಬಲರಾಮರು ಅವುಗಳಲ್ಲಿ ತಮಗೆ ಪ್ರಿಯವೆನಿಸಿದ ವಸ್ತ್ರಗಳನ್ನು ಉಟ್ಟುಕೊಂಡು ಉಳಿದ ವಸ್ತ್ರಗಳಲ್ಲಿ ಕೆಲವನ್ನು ಗೋಪಾಲರಿಗೂ ಉಡಲು ಕೊಟ್ಟರು. ಉಳಿದುವನ್ನು ಅಲ್ಲಿಯೇ ಬಿಸಾಡಿ ಹೊರಟುಹೋದರು. ಅನಂತರ ರಾಮ-ಕೃಷ್ಣರಿಬ್ಬರೂ ರಾಜಬೀದಿಯಲ್ಲಿ ಮುಂದೆ ಹೋಗುತ್ತಿದ್ದಾಗ ನೇಯ್ಗೆಯವನೊಬ್ಬನು (ದರ್ಜಿ) ದೇವೋಪಮರಾಗಿದ್ದ ರಾಮ-ಕೃಷ್ಣರನ್ನು ನೋಡಿದನು. ಅವರ ದಿವ್ಯವಾದ ರೂಪವನ್ನು ನೋಡಿ ಆನಂದತುಂದಿಲನಾದ ನೇಯ್ಗೆಯವನು ಅವರಿಬ್ಬರನ್ನೂ

* ಈ ಪ್ರಧಾನರಜಕನು ಕಂಸಾದಿಗಳಂತೆಯೇ ಅಸುರನು. ಆದುದರಿಂದ ಶ್ರೀಕೃಷ್ಣನು ಆತನನ್ನು ಸಂಹರಿಸಿಬಿಟ್ಟನು.

ಮನೆಗೆ ಕರೆದೊಯ್ದು ಅವರಿಗೆ ಅನುರೂಪವಾದ ಚಿತ್ರ-ವಿಚಿತ್ರವಾದ ಬಣ್ಣಗಳ ಬಟ್ಟೆಗಳನ್ನು ತೊಡಿಸಿ ಅವರನ್ನು ಸಿಂಗರಿಸಿದನು. ಉತ್ಸವದ ಸಮಯ ಗಳಲ್ಲಿ ಅಲಂಕರಿಸಲ್ಪಡುವ ಬಿಳಿಯ ಮತ್ತು ಕರಿಯ ಆನೆಯ ಮರಿಗಳಂತೆ ಅನೇಕ ಪ್ರಕಾರವಾದ ವಸ್ತ್ರಗಳಿಂದ ಸಮಾಲಂಕೃತರಾಗಿದ್ದ ರಾಮ-ಕೃಷ್ಣರು ಶೋಭಾಯಮಾನರಾಗಿ ಕಾಣುತ್ತಿದ್ದರು. ತಮ್ಮನ್ನು ನಾನಾಬಣ್ಣದ ಅನು ರೂಪವಾದ ವಸ್ತ್ರಗಳಿಂದ ಸಿಂಗರಿಸಿ ಆನಂದತುಂದಿಲನಾಗಿದ್ದ ನೇಯ್ಗೆಯವನ ವಿಷಯದಲ್ಲಿ ಅತ್ಯಂತಪ್ರಸನ್ನನಾದ ಶ್ರೀಕೃಷ್ಣನು ಆತನಿಗೆ ಇಹದಲ್ಲಿ ಐಶ್ವರ್ಯವನ್ನೂ, ಬಲವನ್ನೂ, ಅಧಿಕಾರವನ್ನೂ, ಸ್ಮರಣಶಕ್ತಿಯನ್ನೂ, ಇಂದ್ರಿಯಪಟುತ್ವವನ್ನೂ ಅನುಗ್ರಹಿಸಿ ಅವಸಾನಾನಂತರದಲ್ಲಿ ತನ್ನ ಸಾರೂಪ್ಯವನ್ನು ಹೊಂದುವಂತೆಯೂ ಅನುಗ್ರಹಿಸಿದನು.



ಬಳಿಕ ರಾಮ-ಕೃಷ್ಣರು ಸುದಾಮನೆಂಬ ಹೂವಾಡಿಗನ ಮನೆಗೆ ಹೋದರು. ಜಗದಾನಂದಕಂದರಾದ ರಾಮ-ಕೃಷ್ಣರನ್ನು ನೋಡಿದೊಡ ನೆಯೇ ಸುದಾಮನು ಮೇಲೆದ್ದು ಬಂದು ಅವರಿಗೆ ತಲೆಬಾಗಿ ದೀರ್ಘದಂಡ ನಮಸ್ಕಾರಮಾಡಿದನು. ಬಳಿಕ ಅವರಿಬ್ಬರನ್ನೂ ಅವರೊಡನಿದ್ದ ಗೋಪಾಲ ರನ್ನೂ ಆದರದಿಂದ ಸ್ವಾಗತಿಸಿ ಸುಖಾಸನಗಳಲ್ಲಿ ಕುಳ್ಳಿರಿಸಿ ಅರ್ಘ್ಯ-ಪಾದ್ಯಾದಿ ಗಳಿಂದಲೂ, ಗಂಧ-ಪುಷ್ಪ-ತಾಂಬೂಲಾದಿಗಳಿಂದಲೂ ಯಥೋಚಿತವಾಗಿ ಸತ್ಕರಿಸಿದನು. ಬಳಿಕ ಎರಡು ಕೈಗಳನ್ನೂ ಜೋಡಿಸಿ ತಲೆಯ ಮೇಲಿಟ್ಟು ಕೊಂಡು ವಿನಮ್ರನಾಗಿ ಹೂವಾಡಿಗನು ರಾಮ-ಕೃಷ್ಣರಿಗೆ ಹೇಳಿದನು :

"ಪ್ರಭುಗಳೇ! ತಮ್ಮ ಶುಭಾಗಮನದಿಂದಾಗಿ ನಮ್ಮ ಜನ್ಮವು ಸಾರ್ಥಕವಾಯಿತು. ನಮ್ಮ ಕುಲವೂ ಪವಿತ್ರವಾಯಿತು. ನಾವಿಂದು ದೇವರ್ಷಿ-ಪಿತೃಋಣಗಳಿಂದ ಮುಕ್ತರಾಗಿದ್ದೇವೆ. ಅವರು ನಮ್ಮ ವಿಷಯ ದಲ್ಲಿ ಸಂತುಷ್ಟರಾಗಿದ್ದಾರೆ. ಸಮಗ್ರವಾದ ಈ ಜಗತ್ತಿಗೆ ಪರಮಕಾರಣರು ನೀವೇ ಆಗಿರುವಿರಿ. ಜಗತ್ತಿನ ಕ್ಷೇಮಕ್ಕೂ ಮತ್ತು ಸ್ಥಿತಿಗೂ ನೀವು ಭಗವಂತನ ಅಂಶದಿಂದ ಅವತರಿಸಿರುವಿರಿ. ಯದ್ಯಪಿ ನೀವು ನಿಮ್ಮನ್ನು ಪ್ರೇಮಿಸುವವರನ್ನು ಪ್ರೇಮಿಸಿದರೂ, ಸೇವಿಸುವವರನ್ನು ಸೇವಿಸಿದರೂ ನಿಮಗೆ ಯಾರಲ್ಲಿಯೂ ಪಕ್ಷಪಾತವಿಲ್ಲ. ಏಕೆಂದರೆ : ನೀವು ಜಗತ್ತಿಗೇ ಪರಮಸುಹೃದರೂ ಆತ್ಮಸ್ವರೂಪರೂ ಆಗಿರುವಿರಿ. ಸಮಸ್ತಪ್ರಾಣಿಗಳ ಲ್ಲಿಯೂ ಸಮಸ್ತಪದಾರ್ಥಗಳಲ್ಲಿಯೂ ಸಮಸ್ತರೂಪದಿಂದಲೂ ಇರುವಿರಿ.

ಪುರುಷೋತ್ತಮರೇ! ನಾನು ತಮ್ಮ ದಾಸನಾಗಿದ್ದೇನೆ. ನಾನು ತಮಗೆ ಯಾವ ವಿಧವಾದ ಸೇವೆ ಮಾಡಬೇಕೆಂಬುದನ್ನು ಆಜ್ಞಾಪಿಸಿರಿ.



ಯಾವುದಾದರೂ ಕಾರ್ಯಕ್ಕಾಗಿ ನೀವು ಮನುಷ್ಯರನ್ನು ನಿಯೋಜಿಸುವು ದರಿಂದ ಅವರಿಗೆ ನೀವು ಅನುಗ್ರಹಿಸಿದಂತಾಗುತ್ತದೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಹೂವಾಡಿಗನಾದ ಸುದಾಮನು ಹೀಗೆ ಪ್ರಾರ್ಥಿಸಿದನಂತರ ಭಗವಂತನಾದ ಶ್ರೀಕೃಷ್ಣನ ಇಂಗಿತವನ್ನು ತಿಳಿದವನಾಗಿ

ಅತ್ಯಂತಸುಪ್ರೀತನಾಗಿ ಸುಂದರವೂ ಸುಗಂಧಯುಕ್ತವೂ ಆಗಿದ್ದ ಪುಷ್ಪ ಗಳಿಂದ ಕಡುಚೆಲುವಿನ ಮಾಲೆಗಳನ್ನು ಕಟ್ಟಿ ರಾಮ-ಕೃಷ್ಣರಿಗೆ ಅರ್ಪಿಸಿದನು. ಹೂವಾಡಿಗನು ಸಮರ್ಪಿಸಿದ ದಿವ್ಯವಾದ ಪುಷ್ಪಮಾಲೆಗಳಿಂದ ಸಮಲಂಕೃತ ರಾದ ಗೋಪಾಲರೊಡಗೂಡಿದ್ದ ರಾಮ-ಕೃಷ್ಣರು ಪರಮಪ್ರೀತರಾದರು. ಶರಣಾಗತನಾಗಿ ವಿನಮ್ರನಾಗಿ ನಿಂತಿದ್ದ ಸುದಾಮನಿಗೆ ವರದರಾದ ರಾಮ-ಕೃಷ್ಣರು ಶ್ರೇಷ್ಠವಾದ ವರಗಳನ್ನು ದಯಪಾಲಿಸಿದರು. ವಿನಮ್ರನಾದ ಸುದಾಮನು ಈ ವರವನ್ನು ಬೇಡಿಕೊಂಡನು :

"ಪ್ರಭುವೇ! ನೀನು ಸಮಸ್ತಪ್ರಾಣಿಗಳಲ್ಲಿಯೂ ಆತ್ಮಸ್ವರೂಪ ನಾಗಿರುವೆ. ಸರ್ವಸ್ವರೂಪನಾದ ನಿನ್ನ ಚರಣಕಮಲಗಳಲ್ಲಿ ನನ್ನ ಭಕ್ತಿಯು ಅಚಲವಾಗಿರುವಂತೆ ಅನುಗ್ರಹಿಸು. ನಿನ್ನ ಭಕ್ತರಲ್ಲಿ ನನಗೆ ಸೌಹಾರ್ದವೂ ಮೈತ್ರಿಯೂ ಇರುವಂತೆ ವರವನ್ನು ದಯಪಾಲಿಸು. ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ನನಗೆ ದಯಾಭಾವವುಂಟಾಗಲಿ."

ಪರೀಕ್ಷಿತಮಹಾರಾಜ! ಶ್ರೀಕೃಷ್ಣನು ಸುದಾಮನಿಗೆ ಅವನು ಪ್ರಾರ್ಥಿಸಿದ ಎಲ್ಲ ವರಗಳನ್ನೂ ದಯಪಾಲಿಸಿದನು. ಇಷ್ಟು ಮಾತ್ರವಲ್ಲ. ವಂಶಪಾರಂಪರ್ಯವಾಗಿ ವೃದ್ಧಿಹೊಂದುವ ಐಶ್ವರ್ಯವನ್ನೂ, ಬಲವನ್ನೂ, ದೀರ್ಘಾಯುಷ್ಯವನ್ನೂ, ಕೀರ್ತಿಯನ್ನೂ, ದೇಹಕಾಂತಿಯನ್ನೂ ಅನುಗ್ರಹಿಸಿ ಅಣ್ಣನಾದ ಬಲರಾಮನೊಡನೆ ಹೂವಾಡಿಗನ ಮನೆಯಿಂದ ಹೊರಬಿದ್ದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೪೧ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೪೨ನೆಯ ಅಧ್ಯಾಯ

ಕುಬ್ಜೆಯ ಮೇಲೆ ಕೃಪೆದೋರಿದುದು : ಧನುರ್ಭಂಗ : ಕಂಸನ ಬವಣೆ

ಶ್ರೀಶುಕಮುನಿಗಳು ಹೇಳುತ್ತಾರೆ :

ಅಥ ವ್ರಜನ್ ರಾಜಪಥೇನ ಮಾಧವಃ
ಸ್ತ್ರಿಯಂ ಗೃಹೀತಾಙ್ಗ ವಿಲೇಪಭಾಜನಾಮ್ ।
ವಿಲೋಕ್ಯ ಕುಬ್ಜಾಂ ಯುವತೀಂ ವರಾನನಾಂ
ಪಪ್ರಚ್ಛ ಯಾನ್ತೀಂ ಪ್ರಹಸನ್ ರಸಪ್ರದಃ ॥೧॥

ಪರೀಕ್ಷಿತಮಹಾರಾಜ! ಸುದಾಮನ ಮನೆಯಿಂದ ಹೊರಬಂದ ನಂತರ ಶ್ರೀಕೃಷ್ಣನು ತನ್ನ ಸಂಗಡಿಗರೊಡನೆಯೂ ಬಲರಾಮನೊಡನೆಯೂ ರಾಜಬೀದಿಯಲ್ಲೇ ಮುಂದುವರಿದು ಹೋಗುತ್ತಿದ್ದನು. ಆ ವೇಳೆಗೆ ಸರಿಯಾಗಿ ಯುವತಿಯೊಬ್ಬಳು ಗಂಧದ ಬಟ್ಟಲನ್ನೂ ಅಂಗರಾಗವನ್ನೂ ಹಿಡಿದುಕೊಂಡು ತನಗೆ ಎದುರಾಗಿ ಬರುತ್ತಿರುವುದನ್ನು ಶ್ರೀಕೃಷ್ಣನು ನೋಡಿದನು. ಅವಳು ಕಡುಚೆಲುವೆಯಾಗಿದ್ದಳು. ಆದರೆ ತುಂಬಾ ಕುಳ್ಳಾಗಿದ್ದಳು ಮತ್ತು ಡೊಂಕುದೇಹವುಳ್ಳವಳಾಗಿದ್ದಳು. ಅವಳು ಕುಬ್ಜಾ ಎಂಬ ಅನ್ವರ್ಥನಾಮಧೇಯದಿಂದಲೇ ಕರೆಯಲ್ಪಡುತ್ತಿದ್ದಳು. ಪ್ರೇಮರಸ ವನ್ನು ಭಕ್ತರಲ್ಲಿ ವಿತರಿಸುವ ಸ್ವಭಾವದವನಾಗಿದ್ದ ಶ್ರೀಕೃಷ್ಣನು ಅಂಗರಾಗ ವನ್ನೂ ಚಂದನದ ಬಟ್ಟಲನ್ನೂ ಹಿಡಿದು ಹೋಗುತ್ತಿದ್ದ ಕುಬ್ಜೆಯನ್ನು ಅನುಗ್ರಹಿಸುವ ಸಲುವಾಗಿ ಅವಳನ್ನು ಪ್ರಶ್ನಿಸಿದನು :

“ಸುಂದರಿ! ನೀನು ಯಾರು? ದಿವ್ಯವಾದ ಈ ಚಂದನವನ್ನು ಯಾರ ಸಲುವಾಗಿ ತೆಗೆದುಕೊಂಡು ಹೋಗುತ್ತಿರುವೆ? ಕಲ್ಯಾಣಿ! ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ನಮಗೆ ಹೇಳು. ಶ್ರೇಷ್ಠವಾದ ಚಂದನ ವನ್ನೂ ಅಂಗರಾಗವನ್ನೂ ನಮಗೂ ಲೇಪಿಸಿಕೊಳ್ಳಲು ಕೊಡು. ಇವುಗಳನ್ನು ನಮಗೆ ಕೊಡುವುದರಿಂದ ಅತ್ಯಲ್ಪಸಮಯದಲ್ಲಿಯೇ ನಿನಗೆ ಶ್ರೇಯಸ್ಸುಂಟಾಗುತ್ತದೆ.”

* ಸೈರಂಧ್ರಿಯು ಹೇಳುತ್ತಾಳೆ :

"ಸುಂದರಾಂಗನೇ! ಕಂಸನಿಗೆ ನಾನು ಅತಿಪ್ರಿಯಳಾದ ದಾಸಿಯಾಗಿದ್ದೇನೆ. ಕಂಸರಾಜನು ನನ್ನನ್ನು ಬಹಳವಾಗಿ ಸಮ್ಮಾನಿಸುತ್ತಾನೆ. ತ್ರಿವಕ್ರಾ (ಕುಬ್ಜಾ)–ಎಂದು ನನ್ನ ಹೆಸರು. ನಾನು ಕಂಸರಾಜನ ಮನೆಯಲ್ಲಿ ಚಂದನವನ್ನೂ ಅಂಗರಾಗವನ್ನೂ ಹಚ್ಚುವ ಕೆಲಸ ಮಾಡುತ್ತಿದ್ದೇನೆ. ನಾನು ಸಿದ್ಧಪಡಿಸಿದ ಚಂದನವೂ ಮತ್ತು ಅಂಗರಾಗವೂ ಭೋಜರಾಜನಾದ ಕಂಸನಿಗೆ ಅತ್ಯಂತಪ್ರಿಯವಾಗಿರುತ್ತದೆ. ಆದರೆ ಇಂತಹ ಅಮೋಘವಾದ ಚಂದನವನ್ನು ಲೇಪಿಸಿಕೊಳ್ಳಲು ಅರ್ಹರಾದವರು ನಿಮ್ಮಿಬ್ಬರನ್ನುಳಿದು ಬೇರೆ ಯಾರೂ ಇರುವುದಿಲ್ಲ."

ಪರೀಕ್ಷಿತಮಹಾರಾಜ! ಭಗವಂತನ ಸೌಂದರ್ಯ, ಸೌಕುಮಾರ್ಯ, ರಸಿಕತೆ, ಮಂದಹಾಸ, ಪ್ರೇಮಾಲಾಪ ಮತ್ತು ಕುಡಿನೋಟಗಳಿಂದ ಕದಡಿ ಹೋದ ಮನಸ್ಸಿನಿಂದ ಕೂಡಿದ್ದ ಕುಬ್ಜೆಯು ರಾಮ-ಕೃಷ್ಣರಿಬ್ಬರಿಗೂ ತಾನು ರಾಜನಿಗಾಗಿ ಒಯ್ಯುತ್ತಿದ್ದ ಘಮ-ಘಮಿಸುತ್ತಿದ್ದ ಗಂಧವನ್ನೂ ಅಂಗರಾಗವನ್ನೂ ಸಮರ್ಪಿಸಿಬಿಟ್ಟಳು.

ಅದನ್ನು ಸಂತೋಷದಿಂದ ಸ್ವೀಕರಿಸಿದ ರಾಮ-ಕೃಷ್ಣರು ತಮ್ಮ ಶರೀರಗಳ ಬಣ್ಣಕ್ಕೆ ಹೊಂದಿಕೊಳ್ಳುವ ಬೇರೆ ಬಣ್ಣದಿಂದ ಕೂಡಿದ ಅಂಗರಾಗಗಳಿಂದ ತಮ್ಮ ಮೇಲ್ಭಾಗದ ಶರೀರವನ್ನು ಅಲಂಕರಿಸಿಕೊಂಡು ಅತ್ಯಂತಶೋಭಾಯಮಾನವಾಗಿ ರಾರಾಜಿಸಿದರು. ಇದರಿಂದ ಪ್ರಸನ್ನನಾದ ಶ್ರೀಕೃಷ್ಣನು ತನ್ನ ದರ್ಶನದಿಂದ ಒಡನೆಯೇ ಫಲವುಂಟಾಗುವುದೆಂಬುದನ್ನು ಲೋಕಕ್ಕೆ ತೋರಿಸಿಕೊಡುವ ಸಲುವಾಗಿ ಶರೀರದ ಮೂರು ಕಡೆಗಳಲ್ಲಿ ವಕ್ರಳಾಗಿದ್ದ, ಸುಂದರವಾದ ಮುಖದಿಂದ ಕಂಗೊಳಿಸುತ್ತಿದ್ದ ಆ ಕುಬ್ಜೆಯನ್ನು ಋಜುವಾಗಿ (ನೇರವಾಗಿ) ಮಾಡಲು ಮನಸ್ಸುಮಾಡಿದನು. ಬಳಿಕ

---

* ಸೈರಂಧ್ರೀ = ಪರರಮನೆಯಲ್ಲಿ ಕೆಲಸಮಾಡುತ್ತಾ ಗಂಧ ಅರೆಯುವುದು ; ತಲೆ ಬಾಚುವುದು ಮುಂತಾದ ಕರಕುಶಲಕಲೆಗಳಲ್ಲಿ ನಿಪುಣೆಯಾಗಿ ವಿವಾಹವಿಷಯದಲ್ಲಿ ಪರಾಧೀನಳಲ್ಲದೇ ಮಾನಿಷ್ಠಳಾಗಿರುವ ಹೆಂಗಸು.

ಸೈರಂಧ್ರೀ ಪರವೇಶ್ಮಸ್ಥಾ ಸ್ವವಶಾ ಶಿಲ್ಪಕಾರಿಕಾ । (ಅಮರಕೋಶ)

ಶ್ರೀಕೃಷ್ಣನು ಕುಬ್ಜೆಯನ್ನು ತನಗೆ ಎದುರಾಗಿ ನಿಲ್ಲಿಸಿಕೊಂಡು ಕುಬ್ಜೆಯ ತುದಿಗಾಲುಗಳನ್ನು ತನ್ನ ಹೆಜ್ಜೆಯಿಂದ ಮೆಟ್ಟಿಕೊಂಡನು. ತನ್ನ ಬಲಗೈಯಿನ ಎರಡು ಬೆರಳುಗಳಿಂದ ಅವಳ ಗಲ್ಲವನ್ನು ಹಿಡಿದು ಅವಳ ಶರೀರವನ್ನು ಥಟ್ಟನೆ ಮೇಲೆತ್ತಿಬಿಟ್ಟನು. ಕ್ಷಣಮಾತ್ರದಲ್ಲಿ ಅವಳ ಶರೀರವು ನೆಟ್ಟಗಾಗಿಬಿಟ್ಟಿತು. ಕುಬ್ಜೆಯಾಗಿದ್ದವಳು ಭಗವಂತನ ಸ್ಪರ್ಶಮಾತ್ರದಿಂದಲೇ ವಿಶಾಲವಾದ ನಿತಂಬದಿಂದ ಕೂಡಿದವಳೂ, ಸ್ಥೂಲಸ್ತನಿಯೂ ಆಗಿ ರೂಪ-ಲಾವಣ್ಯಗಳಿಂದ ಕಂಗೊಳಿಸುವ ಪ್ರಮದೋತ್ತಮೆಯಾಗಿಬಿಟ್ಟಳು. ಆ ಕ್ಷಣದಿಂದಲೇ ಕುಬ್ಜೆಯು ರೂಪ, ಗುಣ, ಔದಾರ್ಯಗಳಿಂದ ಸಂಪನ್ನಳಾಗಿ ಮನ್ಮಥನಿಂದ ಪೀಡಿಸಲ್ಪಟ್ಟು ಮಂದಹಾಸವನ್ನು ಬೀರುತ್ತಾ ಶ್ರೀಕೃಷ್ಣನ ಅಂಗವಸ್ತ್ರದ ಸೆರಗನ್ನು ಹಿಡಿದೆಳೆಯುತ್ತಾ ಹೇಳಿದಳು :

ಏಹಿ ವೀರ ಗೃಹಂ ಯಾಮೋ ನ ತ್ವಾಂ ತ್ಯಕ್ತುಮಿಹೋತ್ಸಹೇ ।
ತ್ವಯೋನ್ಮಥಿತಚಿತ್ತಾಯಾಃ ಪ್ರಸೀದ ಪುರುಷರ್ಷಭ ॥೧೦॥

"ವೀರನೇ! ಬಾ ; ನಮ್ಮ ಮನೆಗೆ ಹೋಗೋಣ. ನಿನ್ನನ್ನು ಬಿಟ್ಟು ಹೋಗಲು ನನ್ನಿಂದ ಸಾಧ್ಯವೇ ಆಗುತ್ತಿಲ್ಲ. ನೀನು ನನ್ನ ಮನಸ್ಸನ್ನು ಬಹಳವಾಗಿ ಕಲಕಿಬಿಟ್ಟಿರುವೆ. ನನ್ನ ಮನಸ್ಸು ಈಗ ನನ್ನ ವಶದಲ್ಲಿಲ್ಲ. ನಿನ್ನಲ್ಲಿಯೇ ಸೇರಿಹೋಗಿದೆ. ಪುರುಷಶ್ರೇಷ್ಠನೇ! ಪ್ರಸನ್ನನಾಗು. ನನ್ನ ಪ್ರಾರ್ಥನೆಯನ್ನು ನಡೆಸಿಕೊಡು."

ಹೆಂಗಸೊಬ್ಬಳು ಅಣ್ಣನಾದ ರಾಮನೆದುರಿನಲ್ಲಿಯೇ ಕಾಮುಕಳಾಗಿ ಯಾಚಿಸುತ್ತಿದ್ದಾಳೆ. ಶ್ರೀಕೃಷ್ಣನು ಜೊತೆಗಾರರಾದ ಗೋವಳರ ಮುಖ ಗಳನ್ನೂ ನೋಡಿದನು. ಗಹಗಹಿಸಿ ನಗುತ್ತಾ ಕುಬ್ಜೆಗೆ ಹೇಳಿದನು :

"ಸುಂದರವಾದ ಹುಬ್ಬುಗಳುಳ್ಳವಳೇ! ಪುರುಷರಿಗೆ ಮಾನಸಿಕವಾದ ವ್ಯಾಧಿಯನ್ನು ದೂರಗೊಳಿಸುವ ನಿನ್ನ ಮನೆಗೆ ನಾನು ನನ್ನ ಕಾರ್ಯವು ಪೂರೈಸಿದನಂತರ ಅವಶ್ಯವಾಗಿ ಬರುತ್ತೇನೆ. ಮನೆ-ಮಠಗಳಿಲ್ಲದ ನಮ್ಮಂತಹ ದಾರಿಹೋಕರಿಗೆ ನಿಮ್ಮಂತಹವರ ಮನೆಯೇ ಪರಮಾಶ್ರಯವಲ್ಲವೇ!"

ಹೀಗೆ ಜೇನಿನಂತಹ ಸವಿಮಾತುಗಳನ್ನಾಡಿ ಶ್ರೀಕೃಷ್ಣನು ಕುಬ್ಜೆಯನ್ನು ಕಳುಹಿಸಿಕೊಟ್ಟನು. ಮುಂದೆ ಶ್ರೀಕೃಷ್ಣನು ಬಲರಾಮನೊಡನೆಯೂ

ಗೋಪಾಲರೊಡನೆಯೂ ರಾಜಬೀದಿಯನ್ನು ಬಿಟ್ಟು ಅಂಗಡೀಬೀದಿಗೆ ತಿರುಗುತ್ತಲೇ ಅಂಗಡಿಗಳಲ್ಲಿದ್ದ ವ್ಯಾಪಾರಿಗಳೆಲ್ಲರೂ ಒಟ್ಟಾಗಿ ಬಂದು ರಾಮ-ಕೃಷ್ಣರಿಗೆ ದೀರ್ಘದಂಡ ನಮಸ್ಕಾರಮಾಡಿ ಪುಷ್ಪಹಾರಗಳಿಂದಲೂ, ಘಮ-ಘಮಿಸುವ ಗಂಧಗಳಿಂದಲೂ, ತಾಂಬೂಲಗಳಿಂದಲೂ, ಬಗೆ-ಬಗೆಯ ಉಪಾಯನಗಳಿಂದಲೂ ಅವರನ್ನು ಯಥೋಚಿತವಾಗಿ ಸತ್ಕರಿಸಿದರು. ಜಗದಾನಂದಕಂದರಾದ ರಾಮ-ಕೃಷ್ಣರನ್ನು ನೋಡಿದೊಡನೆಯೇ ಮಥುರಾಪಟ್ಟಣದ ಸ್ತ್ರೀಯರಿಗೆ ಪ್ರೇಮದ ಆವೇಗವುಂಟಾಗುತ್ತಿದ್ದಿತು. ಅವರೊಡನೆ ಸೇರಬೇಕೆಂಬ ಆಕಾಂಕ್ಷೆಯುಂಟಾಗುತ್ತಿದ್ದಿತು. ಶ್ರೀಕೃಷ್ಣನಲ್ಲಿಯೇ ನೆಟ್ಟಮನಸ್ಸುಳ್ಳವರಾಗಿದ್ದ ಅವರಿಗೆ ತಮ್ಮ ಶರೀರದ ಮೇಲೆ ಪ್ರಜ್ಞೆಯೇ ಇರುತ್ತಿರಲಿಲ್ಲ. ಮೈಮರೆತುಬಿಡುತ್ತಿದ್ದರು. ಸೀರೆಯು ಜಾರಿಹೋಗುತ್ತಿರುವುದಾಗಲೀ, ತುರುಬು ಬಿಚ್ಚಿಹೋಗುತ್ತಿರುವುದಾಗಲೀ, ಬಳೆಗಳು ಕೈಯಿಂದ ಕಳಚಿಹೋಗುತ್ತಿರುವುದಾಗಲೀ ಅವರಿಗೆ ತಿಳಿಯುತ್ತಲೇ ಇರಲಿಲ್ಲ. ಚಿತ್ರದಲ್ಲಿರುವ ಗೊಂಬೆಗಳಂತೆ ಎಲ್ಲೆಂದರಲ್ಲೇ ಸ್ತಬ್ಧರಾಗಿ ನಿಂತುಬಿಡುತ್ತಿದ್ದರು.

ಶ್ರೀಕೃಷ್ಣನು ಗೆಳೆಯರೊಡನೆಯೂ ಅಣ್ಣನೊಡನೆಯೂ ಮುಂದೆ ಹೋಗುತ್ತಾ ಧನುರ್ಯಜ್ಞವು ನಡೆಯುತ್ತಿರುವ ಸ್ಥಳವು ಎಲ್ಲಿದೆಯೆಂಬುದನ್ನು ಪಟ್ಟಣಿಗರಿಂದ ಕೇಳಿ ತಿಳಿದುಕೊಂಡು, ರಂಗಶಾಲೆಯ ಬಳಿಗೆ ಹೋಗಿ ಅಲ್ಲಿ ಇಂದ್ರಧನುಸ್ಸಿಗೆ ಸಮಾನವಾಗಿದ್ದ ಅದ್ಭುತವಾದೊಂದು ಧನುಸ್ಸನ್ನು ನೋಡಿದನು.

ಪರಮವೈಭವದಿಂದ ಪ್ರತಿಷ್ಠಿತವಾದ, ಅನುದಿನವೂ ಪೂಜಿಸಲ್ಪಡುತ್ತಿದ್ದ, ಹಲವಾರು ಸೈನಿಕರಿಂದ ಸತತವಾಗಿ ರಕ್ಷಿಸಲ್ಪಡುತ್ತಿದ್ದ ಆ ಮಹಾಧನುಸ್ಸನ್ನೆತ್ತಿಕೊಳ್ಳಲು ಶ್ರೀಕೃಷ್ಣನು ಮುಂದೆ ಧಾವಿಸಿದನು. ರಾಜಭಟರು ಶ್ರೀಕೃಷ್ಣನನ್ನು ತಡೆಯಲು ಮುಂದಾದರು. ಅವರೆಲ್ಲರನ್ನೂ ಹಿಂದಕ್ಕೆ ತಳ್ಳಿ ಶ್ರೀಕೃಷ್ಣನು ಆ ಮಹಾಧನುಸ್ಸನ್ನು ಕ್ಷಣಮಾತ್ರದಲ್ಲಿ ಲೀಲಾಜಾಲವಾಗಿ ಎಡಗೈಯಿಂದ ಮೇಲೆತ್ತಿ ಹಿಡಿದು, ಎಲ್ಲರೂ ನೋಡುತ್ತಿದ್ದಂತೆಯೇ ಕಣ್ಣು ಮಿಟುಕಿಸುವಷ್ಟರಲ್ಲಿ ಅದರ ನಾಣನ್ನು ಬಿಗಿದು-ಮದಿಸಿದ ಆನೆಯು ಕಬ್ಬಿನ ಜಲ್ಲೆಯನ್ನು ಮುರಿದುಹಾಕುವಂತೆ–ನಾಣನ್ನು ಸುದೀರ್ಘವಾಗಿ ಸೆಳೆದು ಧನುಸ್ಸನ್ನು ಅದರ ಮಧ್ಯದಲ್ಲಿ ಮುರಿದುಹಾಕಿದನು. ಆ ಮಹಾಧನುಸ್ಸು

ಮುರಿದುಹೋಗುವಾಗ ಉಂಟಾದ ಅದರ ಶಬ್ದವು ಭೂಮ್ಯಾಕಾಶ ಗಳಲ್ಲಿಯೂ ದಿಕ್ಕುಗಳಲ್ಲಿಯೂ ತುಂಬಿಹೋಯಿತು. ಅದರ ಶಬ್ದವನ್ನು ಕೇಳಿ ಕಂಸನೂ ನಡುಗಿಹೋದನು. ಧನುಸ್ಸನ್ನು ರಕ್ಷಿಸುತ್ತಿದ್ದ, ಇತರರನ್ನು ಹಿಂಸಿಸುವ ಸ್ವಭಾವವುಳ್ಳ ರಾಕ್ಷಸರು ಶ್ರೀಕೃಷ್ಣನು ಧನುಸ್ಸನ್ನು ಮುರಿದು



ಹಾಕಿದುದನ್ನು ನೋಡಿ ಅತ್ಯಂತ ಕುಪಿತರಾದರು. ಶ್ರೀಕೃಷ್ಣನನ್ನು ಹಿಡಿಯುವ ಅಪೇಕ್ಷೆಯಿಂದ ಅವನ ಸುತ್ತಲೂ ನಿಂತು–'ಹಿಡಿಯಿರಿ! ಬಂಧಿಸಿರಿ! ತಪ್ಪಿಸಿಕೊಂಡು ಹೋಗಲು ಬಿಡಬೇಡಿರಿ'–ಎಂದು ಕೂಗಾಡತೊಡಗಿದರು.

ಆ ರಾಕ್ಷಸರ ದುರಭಿಪ್ರಾಯವನ್ನು ತಿಳಿದು ರಾಮ-ಕೇಶವರು ಕ್ರುದ್ಧರಾಗಿ ಮುರಿದುಹಾಕಿದ್ದ ಧನುಸ್ಸಿನ ತುಂಡುಗಳನ್ನೇ ಒಬ್ಬೊಬ್ಬರು ಒಂದೊಂದನ್ನು ಹಿಡಿದುಕೊಂಡು ಕಿರುಚಾಡುತ್ತಿದ್ದ ರಾಕ್ಷಸರನ್ನು ಕ್ಷಣ ಮಾತ್ರದಲ್ಲಿ ಧ್ವಂಸಮಾಡಿಬಿಟ್ಟರು. ಅವರ ಸಹಾಯಕ್ಕಾಗಿ ಕಂಸನು ಕಳುಹಿಸಿದ್ದ ಇತರ ಸೈನಿಕರನ್ನೂ ಕೃಷ್ಣ-ಬಲರಾಮರು ಕ್ಷಣಮಾತ್ರದಲ್ಲಿ ಸಂಹರಿಸಿ ಯಜ್ಞಶಾಲೆಯ ಮಹಾದ್ವಾರದಿಂದ ಹೊರಬಂದು ಮಥುರಾಪಟ್ಟಣದ ಸೊಬಗನ್ನು ವೀಕ್ಷಿಸುತ್ತಾ ಆನಂದದಿಂದ ಸಂಚರಿಸುತ್ತಿದ್ದರು. ಪುರವಾಸಿಗಳು ರಾಮ-ಕೇಶವರ ಅದ್ಭುತವಾದ ವೀರ್ಯ-ಪರಾಕ್ರಮಗಳನ್ನೂ, ಮಹಾ ತೇಜಸ್ಸನ್ನೂ, ಪ್ರೌಢಿಮೆಯನ್ನೂ, ರೂಪವನ್ನೂ ನೋಡಿ ಅವರಿಬ್ಬರೂ ಶ್ರೇಷ್ಠರಾದ ದೇವತೆಗಳೇ ಆಗಿರಬಹುದೆಂದು ಭಾವಿಸಿಕೊಂಡರು. ರಾಮ-ಕೇಶ

ವರು ಮಥುರಾಪಟ್ಟಣದಲ್ಲಿ ಸ್ವೇಚ್ಛೆಯಿಂದ ಸಂಚರಿಸುತ್ತಿರಲಾಗಿ ಸೂರ್ಯನು ಅಸ್ತಮಿಸಿದನು. ಬಳಿಕ ರಾಮ-ಕೃಷ್ಣರು ತಮ್ಮ ಸಂಗಡಿಗರಾದ ಗೋಪಾಲ ರೊಡನೆ ಮಥುರಾಪಟ್ಟಣದ ಹೊರಭಾಗದಲ್ಲಿದ್ದ ಬಂಡಿಗಳ ಬಳಿಗೆ ಹೋದರು. ಗೋಕುಲದಲ್ಲಿದ್ದ ಗೋಪಿಯರು ಶ್ರೀಕೃಷ್ಣನ ಅಗಲುವಿಕೆಯ ಸಮಯದಲ್ಲಿ ವಿರಹವೇದನೆಯಿಂದ, ಮಥುರೆಯಲ್ಲಿ ಏನಾಗುವುದೆಂದು ಹೇಳಿದ್ದರೋ ಅವೆಲ್ಲವೂ ಸತ್ಯವಾಗಿಯೇ ಪರಿಣಮಿಸಿತು. ಗೋಪಿಯ ರಂತೆಯೇ ಮಥುರಾಪಟ್ಟಣದ ಸ್ತ್ರೀಯರೂ ಕೂಡ ಶ್ರೀಕೃಷ್ಣನ ಕಿರುನಗೆಯನ್ನೂ ಕಡೆಗಣ್ಣಿನ ನೋಟವನ್ನೂ ನೋಡಿ ಮೈಮರೆತುಹೋದರು. ಲಕ್ಷ್ಮಿಯನ್ನು ಅನೇಕರು ಬಯಸಿ ಅವಳನ್ನು ಪಡೆಯಲು ಕಾತುರರಾಗಿದ್ದರು. ಆದರೆ ಅವಳು ತನ್ನನ್ನು ಬಯಸದೇ ಇದ್ದ ಶ್ರೀಕೃಷ್ಣನ ವಕ್ಷಃಸ್ಥಳವನ್ನೇ ತನ್ನ ನಿವಾಸಸ್ಥಾನವನ್ನಾಗಿ ಮಾಡಿಕೊಂಡಳು. ಲಕ್ಷ್ಮಿಯ ಪಾಡೇ ಹೀಗಾದಲ್ಲಿ ಬೇರೆ ಯವರ ವಿಷಯವಾಗಿ ಹೇಳುವುದೇನಿದೆ? ಅಂತಹ ಪುರುಷೋತ್ತಮನ ಶರೀರದ ದಿವ್ಯಕಾಂತಿಯನ್ನು ನೋಡುತ್ತಾ ಮಥುರಾಪಟ್ಟಣದ ಸ್ತ್ರೀಯರು ಆನಂದತುಂದಿಲರಾಗಿಬಿಟ್ಟರು. ರಾಮ-ಕೃಷ್ಣರು ತಮ್ಮ ಸಂಗಡಿಗರೊಡನೆ ಗಾಡಿಗಳ ಬಳಿಗೆ ಬಂದನಂತರ ಕೈ-ಕಾಲುಗಳನ್ನು ತೊಳೆದುಕೊಂಡು ಊಟ ಮಾಡಿ ಹಾಲುಕುಡಿದು, ಕಂಸನು ಮುಂದೇನು ಮಾಡಲಿರುವನೆಂಬುದನ್ನು ತಿಳಿದು ಆ ರಾತ್ರಿಯಲ್ಲಿ ಆರಾಮವಾಗಿ ನಿದ್ರಿಸಿದರು. ಬಲರಾಮ-ಕೃಷ್ಣರು ಮಹಾಧನುಸ್ಸನ್ನು ಮುರಿದುಹಾಕಿದುದು, ಅದನ್ನು ರಕ್ಷಿಸುತ್ತಿದ್ದ ರಾಕ್ಷಸರನ್ನು ಮತ್ತು ಅವರ ಸಹಾಯಕ್ಕಾಗಿ ತಾನು ಕಳುಹಿಸಿದ್ದ ಸೈನಿಕರನ್ನು ಧನುಸ್ಸಿನ ತುಂಡಿನಿಂದಲೇ ಬಡಿದು ಸಂಹಾರಮಾಡಿದುದು—ಈ ಎಲ್ಲ ವಾರ್ತೆಗಳನ್ನೂ ಕಂಸನು ಕೇಳಿದನು. ಮೇಲಾಗಿ ರಾಮ-ಕೃಷ್ಣರು ಯಾವ ಹೆಚ್ಚಿನ ಶ್ರಮವೂ ಇಲ್ಲದೆ ಲೀಲಾಜಾಲವಾಗಿ, ಆಟವಾಡುವಂತೆ, ಇಂತಹ ಮಹಾಕಾರ್ಯವನ್ನು ಸಾಧಿಸಿದ್ದಾರೆಂಬ ವಿಷಯವನ್ನೂ ಕಂಸನು ಗ್ರಹಿಸದೇ ಇರಲಿಲ್ಲ. ಮಕ್ಕಳ ಆಟಿಕೆಯಂತೆಯೇ ರಾಮ-ಕೃಷ್ಣರು ಧನುಸ್ಸನ್ನು ಮುರಿದು ರಾಕ್ಷಸರನ್ನು ಸಂಹರಿಸಿದ್ದರು.

ಕಂಸನು ಬಹಳವಾಗಿ ಗಾಬರಿಗೊಂಡನು. ಬಹಳ ಹೊತ್ತಿನವರೆಗೂ ಅವನಿಗೆ ನಿದ್ರೆಯೇ ಬರಲಿಲ್ಲ. ಜಾಗ್ರದವಸ್ಥೆಯಲ್ಲಿಯೂ ಮತ್ತು ಸ್ವಪ್ನ

ದಲ್ಲಿಯೂ ಕಂಸನು ಮೃತ್ಯುಸೂಚಕವಾದ ಹಲವಾರು ದೃಶ್ಯಗಳನ್ನು ಕಂಡನು. ನೀರಿನಲ್ಲಿ ನೋಡಿಕೊಂಡಾಗ ಮತ್ತು ಕನ್ನಡಿಯಲ್ಲಿ ನೋಡಿ ಕೊಂಡಾಗ ಅವನ ತಲೆಯೇ ಅವನಿಗೆ ಕಾಣುತ್ತಿರಲಿಲ್ಲ. ಬರೀ ಮುಂಡವೇ ಕಾಣುತ್ತಿದ್ದಿತು. ಸೂರ್ಯ-ಚಂದ್ರ-ನಕ್ಷತ್ರಗಳು ಒಂದೊಂದೇ ಇರುವು ದಾದರೂ ಇಬ್ಬರು ಸೂರ್ಯರಿರುವಂತೆಯೂ, ಇಬ್ಬರು ಚಂದ್ರರಿರು ವಂತೆಯೂ ಕಂಸನಿಗೆ ಕಾಣುತ್ತಿದ್ದಿತು. ತನ್ನ ನೆರಳಿನಲ್ಲಿಯೇ ರಂಧ್ರಗಳಿರುವಂತೆ ಕಾಣುತ್ತಿದ್ದಿತು. ಕಿವಿಗಳನ್ನು ಮುಚ್ಚಿಕೊಂಡರೆ ಪ್ರಾಣಧ್ವನಿಯು ಕೇಳಿ ಬರುತ್ತಿರಲಿಲ್ಲ. ಗಿಡ-ಮರ-ಬಳ್ಳಿಗಳು ಸ್ವರ್ಣಮಯವಾಗಿ ಕಾಣುತ್ತಿದ್ದುವು. ನಡೆಯುವಾಗ ಹೆಜ್ಜೆಗಳೇ ಕಾಣುತ್ತಿರಲಿಲ್ಲ. ಜಾಗ್ರದವಸ್ಥೆಯಲ್ಲಿ ಇಂತಹ ಅನುಭವಗಳಾದರೆ ಕಂಸನಿಗೆ ಸ್ವಪ್ನಾವಸ್ಥೆಯಲ್ಲಿ ಇನ್ನೂ ವಿಚಿತ್ರವಾದ ದೃಶ್ಯಗಳು ಕಾಣುತ್ತಿದ್ದುವು. ಪ್ರೇತಗಳನ್ನು ತಬ್ಬಿಕೊಂಡಂತೆ ಸ್ವಪ್ನವಾಗುತ್ತಿದ್ದಿತು. ಕತ್ತೆಯ ಮೇಲೆ ಕುಳಿತು ವಿಷಪಾನಮಾಡುತ್ತಿರು ವಂತೆಯೂ, ಕೆಂಪುದಾಸವಾಳದ ಹೂವಿನ ಮಾಲೆಯನ್ನು ಧರಿಸಿರು ವಂತೆಯೂ, ಮೈಗೆಲ್ಲಾ ಎಣ್ಣೆಯನ್ನು ಬಳಿದುಕೊಂಡು ದಿಗಂಬರನಾಗಿ ಹೋಗುತ್ತಿರುವಂತೆಯೂ ಕನಸಾಗುತ್ತಿತ್ತು. ನಿದ್ರೆಮಾಡುವಾಗಲೂ, ಎಚ್ಚರಗೊಂಡಾಗಲೂ ಮರಣಸೂಚಕವಾದ ಇಂತಹುದೇ ಹಲವಾರು ದೃಶ್ಯ ಗಳನ್ನು ಕಂಡು ಕಂಸನಿಗೆ ಮರಣದ ಚಿಂತೆಯಿಂದಾಗಿ ನಿದ್ರೆಯೇ ಬರಲಿಲ್ಲ.

ಪರೀಕ್ಷಿತಮಹಾರಾಜ! ರಾತ್ರಿಯು ಕಳೆದು ಸೂರ್ಯನಾರಾಯಣನು ಪೂರ್ವಸಮುದ್ರದಿಂದ ಹೊರಬರಲಾಗಿ ಕಂಸನು ಮಲ್ಲಕ್ರೀಡಾಮಹೋತ್ಸವ ವನ್ನು ಉದ್ಘಾಟಿಸಿದನು. ರಾಜಭಟರು ರಂಗಮಂಟಪವನ್ನು ಚೆನ್ನಾಗಿ ಸಿಂಗರಿಸಿದ್ದರು. ಸಮವಸ್ತ್ರಧಾರಿಗಳು ಭೇರಿ, ತುತ್ತೂರಿ, ಢಕ್ಕೆ-ಮೃದಂಗ– ಇವೇ ಮುಂತಾದ ವಾದ್ಯಗಳನ್ನು ಬಾರಿಸುತ್ತಿದ್ದರು. ಪ್ರೇಕ್ಷಕರು ಕುಳಿತು ಕೊಳ್ಳುವ ಮಂಚಗಳು ಹೂವಿನ ಮಾಲೆಗಳಿಂದಲೂ, ಬಾವುಟಗಳಿಂದಲೂ, ಮೇಲ್ಕಟ್ಟುಗಳಿಂದಲೂ, ತೋರಣಗಳಿಂದಲೂ ಸಿಂಗರಿಸಲ್ಪಟ್ಟಿದ್ದುವು. ಸುಂದರವಾಗಿದ್ದ ಆ ಮಂಚಗಳಲ್ಲಿ ಬ್ರಾಹ್ಮಣ-ಕ್ಷತ್ರಿಯರೇ ಮೊದಲಾದ ಗ್ರಾಮವಾಸಿಗಳೂ ಹಳ್ಳಿಯವರೂ ಯಥಾನುಕ್ರಮವಾಗಿ ಸುಖದಿಂದ ಕುಳಿತಿದ್ದರು. ಹಾಗೆಯೇ ರಾಜರೂ ಮತ್ತು ಪರಿವಾರದವರೂ ತಮ-ತಮಗೆ

ನಿಶ್ಚಿತವಾಗಿದ್ದ ಸಿಂಹಾಸನಗಳಲ್ಲಿ ಕುಳಿತಿದ್ದರು. ಕಂಸನು ಅಮಾತ್ಯರಿಂದ ಪರಿವೃತನಾಗಿ ಮಂಡಲೇಶ್ವರರ ಮಧ್ಯಭಾಗದಲ್ಲಿ ಶ್ರೇಷ್ಠವಾದ ರಾಜ ಸಿಂಹಾಸನದಲ್ಲಿ ಕುಳಿತಿದ್ದನು. ಆದರೆ ಅವನ ಮನಸ್ಸು ಮಾತ್ರ ದುಃಸ್ವಪ್ನ-ದುಃಶಕುನಗಳ ಕಾರಣದಿಂದಾಗಿ ತಳಮಳಿಸುತ್ತಿದ್ದಿತು.

ನಾನಾಬಗೆಯ ವಾದ್ಯಗಳು ಮೊಳಗುತ್ತಿರಲು, ಜಟ್ಟಿಗಳ ಕೈಚಪ್ಪಾಳೆಯ ಶಬ್ದವು ಗಟ್ಟಿಯಾಗಿ ಕೇಳಿಬರುತ್ತಿರಲು, ಗರ್ವಿಷ್ಠರಾದ ಜಟ್ಟಿಗಳು ಯಥೋಚಿತವಾಗಿ ಅಲಂಕರಿಸಿಕೊಂಡು ತಮ್ಮ ಗುರುಗಳೊಡನೆ ರಂಗ ಮಂಟಪದಲ್ಲಿ ಕುಳಿತುಕೊಂಡರು. ಚಾಣೂರ, ಮುಷ್ಟಿಕ, ಕೂಟ, ಶಲ, ತೋಶಲ-ಇವರೇ ಮುಂತಾದ ಮುಖ್ಯ-ಮುಖ್ಯರಾದ ಜಟ್ಟಿಗಳು ವಾದ್ಯಗಳ ಸುಮಧುರವಾದ ಧ್ವನಿಯಿಂದ ಉತ್ಸಾಹಿತರಾಗಿ ರಂಗಮಂಟಪಕ್ಕೆ ಬಂದು ಕುಳಿತರು. ಆ ಸಮಯದಲ್ಲಿ ಭೋಜರಾಜನಿಂದ ಆಹ್ವಾನಿತರಾಗಿದ್ದ ನಂದಗೋಪನೇ ಮೊದಲಾದ ಗೋಪಾಲಕರು ತಾವು ತಂದಿದ್ದ ಕಪ್ಪ-ಕಾಣಿಕೆಗಳನ್ನು ಕಂಸರಾಜನಿಗೆ ಅರ್ಪಿಸಿ ಅವನ ಅನುಮತಿಯನ್ನು ಪಡೆದು ರಂಗ ಮಂಟಪದ ಸಮೀಪದಲ್ಲಿಯೇ ಇದ್ದ ಮಂಚವೊಂದರಲ್ಲಿ ಕುಳಿತುಕೊಂಡರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೪೨ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ — ೪೩ನೆಯ ಅಧ್ಯಾಯ

ಕುವಲಯಾಪೀಡ ಆನೆಯ ಸಂಹಾರ : ರಂಗಮಂಟಪ ಪ್ರವೇಶ

ಶ್ರೀಶುಕಮುನಿಗಳು ಹೇಳುತ್ತಾರೆ :

ಅಥ ಕೃಷ್ಣಶ್ಚ ರಾಮಶ್ಚ ಕೃತಶೌಚೌ ಪರಂತಪ ।
ಮಲ್ಲದುನ್ದುಭಿನಿರ್ಘೋಷಂ ಶ್ರುತ್ವಾ ದ್ರಷ್ಟುಮುಪೇಯತುಃ ॥೧॥

ಶತ್ರುತಾಪಕನೇ! ಪರೀಕ್ಷಿತ! ಬಳಿಕ ರಾಮ-ಕೃಷ್ಣರಿಬ್ಬರೂ ಮುಖ ಪ್ರಕ್ಷಾಳನ-ಸ್ನಾನಾದಿ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಮಲ್ಲರ ಯುದ್ಧದ ತೂರ್ಯ-ದುಂದುಭಿಗಳ ಘೋಷವನ್ನು ಕೇಳಿ ಆ ಮಲ್ಲಯುದ್ಧವನ್ನು ನೋಡುವ ಆಶಯದಿಂದ ರಂಗಭೂಮಿಗೆ ಆಗಮಿಸಿದರು.

ಶ್ರೀಕೃಷ್ಣನು ಬಲರಾಮನೊಡನೆ ರಂಗಭೂಮಿಯ ಮಹಾದ್ವಾರಕ್ಕೆ ಬರುತ್ತಿದ್ದಂತೆಯೇ ಮಾವಟಿಗನು ತನ್ನನ್ನು ತಡೆಯುವ ಸಲುವಾಗಿಯೇ ಕುವಲಯಾಪೀಡವೆಂಬ ಮದಿಸಿದ ಆನೆಯೊಂದನ್ನು ಮಹಾದ್ವಾರಕ್ಕೆ ಅಡ್ಡಲಾಗಿ ನಿಲ್ಲಿಸಿದ್ದುದನ್ನು ಶ್ರೀಕೃಷ್ಣನು ನೋಡಿದನು. ಒಡನೆಯೇ ಶ್ರೀಕೃಷ್ಣನು ನಡುಕಟ್ಟನ್ನು ಸೊಂಟಕ್ಕೆ ಬಿಗಿದು, ಮುಖದ ಮೇಲೆ ನಲಿದಾಡುತ್ತಿದ್ದ ಗುಂಗುರುಕೂದಲುಗಳನ್ನು ಮೇಲೆತ್ತಿ ಕಟ್ಟಿ, ಗುಡುಗಿನ ಧ್ವನಿಯಂತೆ ಗಂಭೀರವಾದ ವಾಣಿಯಿಂದ ಮಾವಟಿಗನಿಗೆ ಹೇಳಿದನು :

ಅಮ್ಬಷ್ಠಾಮ್ಬಷ್ಠ ಮಾರ್ಗಂ ನೌ ದೇಹ್ಯಪಕ್ರಾಮ ಮಾಚಿರಮ್ ।
ನೋ ಚೇತ್ ಸಕುಞ್ಜರಂ ತ್ವಾದ್ಯ ನಯಾಮಿ ಯಮಸಾದನಮ್ ॥೪॥

“ಎಲವೋ ಮಾವಟಿಗನೇ! ಒಡನೆಯೇ ನಮಗೆ ದಾರಿಯನ್ನು ಬಿಡು. ದಾರಿಯನ್ನು ಬಿಟ್ಟು ಅತ್ತಕಡೆಗೆ ಹೋಗು. ಒಂದು ವೇಳೆ ನೀನು ದಾರಿಗೆ ಅಡ್ಡಲಾಗಿ ಆನೆಯನ್ನು ನಿಲ್ಲಿಸಿಕೊಂಡು ನಿಂತೇ ಇದ್ದರೆ ಆನೆಯೊಡನೆ ನಿನ್ನನ್ನೂ ಯಮನಪಟ್ಟಣಕ್ಕೆ ಕಳುಹಿಸಿಬಿಡುತ್ತೇನೆ.”

ಹೀಗೆಂದು ಗದರಿಸಿದ ಕೂಡಲೇ ಮಾವಟಿಗನು ಕೋಪದಿಂದ ಕಿಡಿ-ಕಿಡಿಯಾದನು. ಪ್ರಳಯಕಾಲದ ಯಮನಂತಿದ್ದ ಕುವಲಯಾಪೀಡವನ್ನು ಅಂಕುಶದಿಂದ ಚುಚ್ಚಿ ಕೆರಳಿಸಿ ಶ್ರೀಕೃಷ್ಣನ ಮೇಲೆ ನುಗ್ಗಿಸಿದನು. ಆನೆಯು ನುಗ್ಗಿಹೋಗಿ ಶ್ರೀಕೃಷ್ಣನನ್ನು ಸೊಂಡಿಲಿನಿಂದ ಹಿಡಿದುಬಿಟ್ಟಿತು. ಮರುಕ್ಷಣ ದಲ್ಲಿಯೇ ಶ್ರೀಕೃಷ್ಣನು ಸೊಂಡಿಲಿನಿಂದ ನುಣುಚಿಕೊಂಡು ಬಲವಾಗಿ ಪ್ರಹರಿಸಿ ಆನೆಯ ಕಾಲುಗಳ ಮಧ್ಯದಲ್ಲಿ ಸೇರಿಕೊಂಡನು. ವಾಸನೆಯಿಂದಲೇ ವಸ್ತು ಗಳನ್ನು ತಿಳಿಯುವ ಸಾಮರ್ಥ್ಯದಿಂದ ಕೂಡಿದ್ದ ಆ ಮಹಾಗಜವು ಕೋಪ ಗೊಂಡು ಕಣ್ಣುಗಳಿಗೆ ಕಾಣದಿದ್ದ ಶ್ರೀಕೃಷ್ಣನನ್ನು ಸೊಂಡಿಲಿನ ಮೂಲಕವಾಗಿ ಹುಡುಕತೊಡಗಿತು. ಆಗ ಕಾಲುಗಳ ನಡುವೆ ಅವಿತುಕೊಂಡಿದ್ದ ಶ್ರೀಕೃಷ್ಣನು ಬಲವಂತದಿಂದ ಹೊರಗೆ ಬಂದನು. ಪುನಃ ಮಹಾಬಲಿಷ್ಠನಾಗಿದ್ದ ಶ್ರೀಕೃಷ್ಣನು ಆನೆಯ ಹಿಂದಕ್ಕೆ ಹೋಗಿ ಅದರ ಬಾಲವನ್ನು–ಗರುಡಪಕ್ಷಿಯು ಹಾವನ್ನು ಹಿಡಿಯುವಂತೆ–ಲೀಲಾಜಾಲವಾಗಿ ಹಿಡಿದು ರಭಸದಿಂದ ಇಪ್ಪ

ತ್ತೈದು ಮಾರುಗಳಷ್ಟು ಹಿಂದಕ್ಕೆ ಸರಸರನೆ ಸೆಳೆದುಕೊಂಡು ಹೋದನು. ಪುನಃ ಶ್ರೀಕೃಷ್ಣನು ಅದರ ಬಾಲವನ್ನೇ ಹಿಡಿದು–ಆನೆಯು ತನ್ನನ್ನು ಹಿಡಿಯಲು ಬಲಕ್ಕೆ ತಿರುಗಿದಾಗ ಬಾಲವನ್ನು ಎಡಕ್ಕೆ ಎಳೆಯುತ್ತಲೂ ಎಡಕ್ಕೆ ತಿರುಗಿದಾಗ ಬಾಲವನ್ನು ಬಲಕ್ಕೆ ಎಳೆಯುತ್ತಲೂ–ಕರುವಿನೊಡನೆ ಅದರ ಬಾಲವನ್ನು ಹಿಡಿದು ಆಟವಾಡುವ ಬಾಲಕನಂತೆ–ಆನೆಯನ್ನು ಎಡಕ್ಕೂ-ಬಲಕ್ಕೂ ಎಳೆದಾಡುತ್ತಿದ್ದನು. ಮತ್ತೊಮ್ಮೆ ಶ್ರೀಕೃಷ್ಣನು ಆನೆಯ ಮುಂಭಾಗಕ್ಕೆ ಹೋಗಿ ಅದರ ಸೊಂಡಿಲನ್ನು ಕೈಯಿಂದ ಗುದ್ದಿ ಓಡಿದನು. ಶ್ರೀಕೃಷ್ಣನನ್ನು ಹಿಡಿಯಲು ಅದು ರಭಸದಿಂದ ಮುಂದೆ ಓಡಿಬಂದಾಗ ಒಂದೆಡೆಯಲ್ಲಿ ನಿಂತಂತೆ ಮಾಡಿ, ಅದು ಸೊಂಡಿಲನ್ನೆತ್ತಿಕೊಂಡು ಬಂದಾಗ ಪುನಃ ಹಿಂದಕ್ಕೂ-ಮುಂದಕ್ಕೂ ಓಡಿಹೋಗುತ್ತಾ ಆನೆಯು ಮುಗ್ಗರಿಸಿ ಕೆಳಕ್ಕೆ ಬೀಳುವಂತೆ ಮಾಡಿದನು. ಬಹಳವಾಗಿ ಯಾತನೆಯನ್ನು ಅನುಭವಿಸುತ್ತಿದ್ದರೂ ಆ ಮದಗಜವು ಪುನಃ ಮೇಲೆದ್ದು ಶ್ರೀಕೃಷ್ಣನನ್ನು ಅಟ್ಟಿಸಿಕೊಂಡು ಹೋಯಿತು. ಶ್ರೀಕೃಷ್ಣನ ಚಾತುರ್ಯದ ನಡಿಗೆಯಿಂದ ಭ್ರಾಂತಿಗೊಂಡ ಕುವಲಯಾಪೀಡಗಜವು ಪುನಃ ಕೆಳಕ್ಕೆ ಬಿದ್ದಿತು. ಹಾಗೆ ಬೀಳುವಾಗ ಅದು ಶ್ರೀಕೃಷ್ಣನು ಸಿಕ್ಕಿಬಿಟ್ಟನೆಂದೇ ಭ್ರಮಿಸಿ ಕೋಪಗೊಂಡು ತನ್ನ ತೀಕ್ಷ್ಣವಾದ ಕೋರೆದಾಡೆಗಳಿಂದ ಭೂಮಿಯನ್ನೇ ಬಡಿಯಿತು. ಶ್ರೀಕೃಷ್ಣನು ಸಿಕ್ಕಿಲ್ಲವೆಂಬ ಅರಿವಾದೊಡನೆಯೇ ಖತಿಗೊಂಡ ಕುವಲಯಾಪೀಡಗಜವನ್ನು ಮಾವಟಿಗನು ಅಂಕುಶದಿಂದ ಚುಚ್ಚಿ ಮತ್ತಷ್ಟು ಕೆರಳಿಸಿದನು. ಪುನಃ ಆನೆಯು ಶ್ರೀಕೃಷ್ಣನ ಬೆನ್ನಟ್ಟಿಹೋಯಿತು. ಆಗ ಶ್ರೀಕೃಷ್ಣನೇ ಅಟ್ಟಿಸಿಕೊಂಡು ಬರುತ್ತಿದ್ದ ಆನೆಗೆ ಎದುರಾಗಿ ಹೋಗಿ ಕೈಯಿಂದ ಅದರ ಸೊಂಡಿಲನ್ನು ಹಿಡಿದು ಜಗ್ಗಿಸಿ ಆ ಆನೆಯನ್ನು ನೆಲಕ್ಕುರುಳಿಸಿದನು. ಆನೆಯು ಕೆಳಕ್ಕೆ ಬಿದ್ದೊಡನೆಯೇ ಸಿಂಹದಂತೆಯೇ ಲೀಲಾಜಾಲವಾಗಿ ಆನೆಯನ್ನು ಮೆಟ್ಟಿಕೊಂಡು ಅದರ ದಂತವನ್ನು ಕಿತ್ತು ಆ ದಂತದಿಂದಲೇ ಆ ಆನೆಯನ್ನೂ ಮತ್ತು ಅದರ ಮಾವಟಿಗನನ್ನೂ ಸಂಹರಿಸಿದನು. ಬಳಿಕ ಶ್ರೀಕೃಷ್ಣನು ಸತ್ತುಹೋದ ಆನೆಯನ್ನು ಅಲ್ಲಿಯೇ ಬಿಟ್ಟು ಅದರ ದಂತವನ್ನು ಕೈಯಲ್ಲಿ ಹಿಡಿದುಕೊಂಡೇ ರಂಗಮಂಟಪವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ಶ್ರೀಕೃಷ್ಣನು ಆನೆಯ ಕೊಂಬನ್ನು ಹೆಗಲ ಮೇಲೆ ಇಟ್ಟುಕೊಂಡಿದ್ದನು. ಅವನ ಶರೀರವು

ಮದೋದಕದ ಮತ್ತು ರಕ್ತದ ಬಿಂದುಗಳಿಂದ ಸುಶೋಭಿತವಾಗಿದ್ದಿತು. ಶ್ರೀಕೃಷ್ಣನ ಮುಖಾರವಿಂದವೂ ಮುತ್ತಿನಂತಹ ಬೆವರಿನ ಬಿಂದುಗಳಿಂದ



ಸಮಲಂಕೃತವಾಗಿದ್ದಿತು. ರಾಮ-ಕೃಷ್ಣರಿಬ್ಬರೂ ಆನೆಯ ದಂತಗಳನ್ನೇ ಶ್ರೇಷ್ಠವಾದ ಆಯುಧಗಳನ್ನಾಗಿ ಮಾಡಿಕೊಂಡು ಹೆಗಲಮೇಲಿಟ್ಟುಕೊಂಡು ಕೆಲವೇ ಗೋಪಾಲಕರಿಂದ ಪರಿವೃತರಾಗಿ ರಂಗಭೂಮಿಯನ್ನು ಪ್ರವೇಶಿಸಿ ದರು.

ಪರೀಕ್ಷಿತಮಹಾರಾಜ! ಭಗವಂತನಾದ ಶ್ರೀಕೃಷ್ಣಮೂರ್ತಿಯು ಜಟ್ಟಿ ಗಳಿಗೆ ಸಿಡಿಲಿನ ಸ್ವರೂಪದಲ್ಲಿದ್ದನು. ಮನುಷ್ಯರಲ್ಲಿ ನರಶ್ರೇಷ್ಠನಾಗಿದ್ದನು. ಸ್ತ್ರೀಯರಿಗೆ ಮೂರ್ತಿಮತ್ತಾಗಿ ಬಂದ ಮನ್ಮಥನಂತೆಯೇ ಕಾಣುತ್ತಿದ್ದನು. ಗೋಪಾಲರಿಗೆ ಸ್ವಜನನೆನಿಸಿಕೊಂಡಿದ್ದನು. ದುಷ್ಟರಾಜರಿಗೆ ಶಿಕ್ಷಕನಾಗಿದ್ದನು. ತಂದೆ-ತಾಯಿಗಳಿಗೆ ಮಗುವಾಗಿದ್ದನು. ಕಂಸನಿಗೆ ಮೃತ್ಯುವಾಗಿದ್ದನು. ಮೂರ್ಖರಿಗೆ ವಿಕಟನಾಗಿ (ಸಾಧಾರಣಮನುಷ್ಯನಾಗಿ) ಕಾಣುತ್ತಿದ್ದನು. ಯೋಗಿಗಳಿಗೆ ಪರತತ್ತ್ವವಾಗಿದ್ದನು. ವೃಷ್ಣಿಗಳಿಗೆ ಪರದೇವತೆಯೇ ಆಗಿದ್ದನು. ಹೀಗೆ ಅವರವರ ಭಾವನೆಗಳಿಗೆ ತಕ್ಕಂತೆ ಇದ್ದ ಪುರುಷೋತ್ತಮನಾದ ಶ್ರೀಕೃಷ್ಣನು ಬಲರಾಮನೊಡನೆ ರಂಗಮಂಟಪವನ್ನು ಪ್ರವೇಶಿಸಿದನು.

ಮಹಾರಾಜ! ಕಂಸನು ಮಹಾಶೂರ-ವೀರನೇ ಹೌದು. ಆದರೆ ರಾಮ-ಕೃಷ್ಣರು ಕುವಲಯಾಪೀಡಮಹಾಗಜವನ್ನು ಸಂಹರಿಸಿದರೆಂಬ ವಾರ್ತೆಯನ್ನು ಕೇಳುತ್ತಲೇ ಕಂಸನಿಗೆ ಅವರು ದುರ್ಜಯರೆಂಬ ಅರಿವುಂಟಾ

ಯಿತು. ಆ ಸಮಯದಲ್ಲಿ ಅವನು ಬಹಳವಾಗಿ ಗಾಬರಿಗೊಂಡನು. ರಾಮ-ಕೃಷ್ಣರು ದೀರ್ಘಬಾಹುಗಳಾಗಿದ್ದರು. ವಿಚಿತ್ರವಾದ ಪುಷ್ಪಹಾರಗಳು, ವಿಚಿತ್ರವಾದ ವಸ್ತ್ರಗಳು, ವಿಚಿತ್ರವಾದ ಆಭರಣಗಳು ಇವುಗಳಿಂದ ಅವರು ವಿಚಿತ್ರವಾದ ವೇಷವುಳ್ಳವರಾಗಿದ್ದರು. ಅವರನ್ನು ನೋಡಿದರೆ ಉತ್ತಮವಾದ ವೇಷಗಳನ್ನು ಧರಿಸಿ ನಟಿಸಲು ಬಂದ ನಟರಂತೆಯೇ ಕಾಣುತ್ತಿದ್ದರು. ಅವರು ತಮ್ಮನ್ನು ನಿರೀಕ್ಷಿಸುತ್ತಿದ್ದ ಪ್ರೇಕ್ಷಕರ ಮನಸ್ಸುಗಳನ್ನು ತಮ್ಮ ಪ್ರಭೆಯಿಂದ ಅಪಹರಿಸಿಬಿಡುತ್ತಿದ್ದರು. ಹಾಗೆ ಸಮಸ್ತರ ಮನಸ್ಸನ್ನೂ ಸೆಳೆಯುತ್ತಾ ರಾಮ-ಕೃಷ್ಣರು ರಂಗಮಂಟಪವನ್ನು ಪ್ರವೇಶಿಸಿದರು. ಮಂಚಗಳಲ್ಲಿ ಕುಳಿತಿದ್ದ ಪೌರರು ಮತ್ತು ರಾಷ್ಟ್ರದ ಇತರ ಭಾಗಗಳಿಂದ ಬಂದಿದ್ದ ಪ್ರಜೆಗಳು ಪುರುಷಶ್ರೇಷ್ಠರಾದ ರಾಮ-ಕೃಷ್ಣರನ್ನು ನೋಡಿ ಅತ್ಯಂತಪ್ರಸನ್ನರಾದರು. ಹರ್ಷೋತ್ಕರ್ಷದಿಂದಾಗಿ ಅವರ ಮುಖಗಳು ಮತ್ತು ನೇತ್ರಗಳು ಕಮಲದಂತೆ ಅರಳಿದುವು. ದುಂಬಿಗಳ ರೂಪದಲ್ಲಿದ್ದ ಕಣ್ಣುಗಳಿಂದ ರಾಮ-ಕೃಷ್ಣರ ಮುಖಮಧುವನ್ನು ಎಷ್ಟು ಕುಡಿದರೂ ಅವರಿಗೆ ತೃಪ್ತಿಯೇ ಆಗಲಿಲ್ಲ.

ಪಿಬನ್ತ ಇವ ಚಕ್ಷುರ್ಭ್ಯಾಂ ಲಿಹನ್ತ ಇವ ಜಿಹ್ವಯಾ ।
ಜಿಘ್ರನ್ತ ಇವ ನಾಸಾಭ್ಯಾಂ ಶ್ಲಿಷ್ಯನ್ತ ಇವ ಬಾಹುಭಿಃ ॥೨೧॥

ಪ್ರೇಕ್ಷಕರು ಎವೆಯಿಕ್ಕದೇ ರಾಮ-ಕೃಷ್ಣರನ್ನು ನೋಡುತ್ತಿರುವುದನ್ನು ನೋಡಿದರೆ ಕಣ್ಣುಗಳೆಂಬ ಭ್ರಮರಗಳಿಂದ ಅವರ ಮುಖಕಮಲದ ಮಧುವನ್ನು ಕುಡಿಯುತ್ತಿರುವಂತೆಯೂ, ನಾಲಿಗೆಯಿಂದ ಅಧರಾಮೃತವನ್ನು ನೆಕ್ಕುತ್ತಿರುವಂತೆಯೂ, ಮೂಗುಗಳಿಂದ ಮುಖಾರವಿಂದದ ವಾಸನೆಯನ್ನು ಆಘ್ರಾಣಿಸುತ್ತಿರುವಂತೆಯೂ, ಬಾಹುಗಳಿಂದ ಅವರನ್ನು ತಬ್ಬಿ ಕೊಳ್ಳುತ್ತಿರುವಂತೆಯೂ ಕಾಣುತ್ತಿದ್ದರು.

ರಾಮ-ಕೃಷ್ಣರನ್ನು ನೋಡಿದೊಡನೆಯೇ ಅಲ್ಲಿ ಕುಳಿತಿದ್ದ ಜನರಿಗೆ ಹಿಂದೆ ತಾವು ಕೇಳಿದ್ದ ಶ್ರೀಕೃಷ್ಣನ ಅನುಪಮಸೌಂದರ್ಯ, ಗುಣಸಂಪತ್ತಿ, ಮಾಧುರ್ಯ, ನಿರ್ಭಯತೆ, ಅವನ ನಾನಾಪ್ರಕಾರವಾದ ಲೀಲಾಪ್ರಸಂಗ ಗಳು ಈ ಎಲ್ಲವೂ ಸ್ಮರಣೆಗೆ ಬಂದು ಅವರು ಪರಸ್ಪರವಾಗಿ ತಾವು ಕೇಳಿದ್ದನ್ನೂ ನೋಡಿದ್ದನ್ನೂ ಕುರಿತು ಮಾತನಾಡಿಕೊಂಡರು.

ಒಬ್ಬನು ಹೇಳಿದನು : "ಗೆಳೆಯರೇ! ಭೂಮಿಯಲ್ಲಿ ವಸುದೇವನ ಮನೆಯಲ್ಲಿ ಹುಟ್ಟಿದ ಈ ಬಾಲಕರಿಬ್ಬರೂ ಸಾಕ್ಷಾತ್ ಶ್ರೀಮನ್ನಾರಾಯಣನ ಅಂಶದಿಂದಲೇ ಹುಟ್ಟಿದವರಾಗಿದ್ದಾರೆ." ಮತ್ತೊಬ್ಬನು ತೋರುಬೆರಳಿನಿಂದ ಕೃಷ್ಣನ ಕಡೆಗೆ ತೋರಿಸುತ್ತಾ ಹೇಳುತ್ತಾನೆ : "ಅಣ್ಣಾ! ಇದೋ ಈ ಶ್ರೀಕೃಷ್ಣನೇ ದೇವಕಿದೇವಿಯ ಗರ್ಭದಲ್ಲಿ ಹುಟ್ಟಿದವನು. ಹುಟ್ಟಿದೊಡನೆಯೇ ಇವನನ್ನು ಕಂಸನ ಭಯದಿಂದಾಗಿ ಗೋಕುಲಕ್ಕೆ ಒಯ್ಯಲಾಯಿತು. ಗೋಕುಲದ ನಂದಗೋಪನ ಮನೆಯಲ್ಲಿ ಇಷ್ಟು ವರ್ಷಗಳವರೆಗೂ ಈ ಪೋರನು ನಿಗೂಢನಾಗಿಯೇ ಬೆಳೆದನು."

ಮತ್ತೊಬ್ಬನು ಹೇಳುತ್ತಾನೆ : "ನನಗೆ ತಿಳಿದಂತೆ ಅಥವಾ ನಾನು ಕೇಳಿದಂತೆ ಪೂತನೆ, ತೃಣಾವರ್ತ, ಶಂಖಚೂಡ, ಕೇಶೀ, ಧೇನುಕ–ಇವರೇ ಮೊದಲಾದ ದುಷ್ಟರಾಕ್ಷಸರನ್ನು ಸಂಹರಿಸಿದವನೂ ಇವನೇ. ಜೋಡಿ ಅತ್ತಿಮರಗಳ ಮಧ್ಯದಲ್ಲಿ ಒರಳುಕಲ್ಲಿನೊಡನೆ ನುಗ್ಗಿ ಅವುಗಳನ್ನು ಕೆಳಕ್ಕೆ ಬೀಳಿಸಿ ಶಾಪದಿಂದ ಅತ್ತಿಮರಗಳಾಗಿ ಹುಟ್ಟಿದ್ದ ಯಕ್ಷಕುಮಾರರನ್ನು ಉದ್ಧರಿಸಿದವನೂ ಈ ತುಂಟನೇ." ಮತ್ತೊಬ್ಬಳು ಹೇಳುತ್ತಾಳೆ : "ನನಗೆ ತಿಳಿದಿದ್ದನ್ನು ನಾನು ಹೇಳುತ್ತೇನೆ. ನೀವೆಲ್ಲರೂ ಕೇಳಿರಿ. ಕಾಡುಗಿಚ್ಚನ್ನೇ ಕುಡಿದು ಈ ಮಹಾನುಭಾವನು ಗೋವುಗಳನ್ನೂ ಗೋಪಾಲರನ್ನೂ ರಕ್ಷಿಸಿ ದನಂತೆ. ಯಮುನೆಯ ಮಡುವಿನಲ್ಲಿ ನಿವಾಸಮಾಡಿಕೊಂಡಿದ್ದ ಕಾಳಿಂಗ ಸರ್ಪವನ್ನು ಮೆಟ್ಟಿ ಅದನ್ನು ಪರಿವಾರಸಮೇತವಾಗಿ ಅಲ್ಲಿಂದ ಓಡಿಸಿ ಬಿಟ್ಟನಂತೆ. ಎಂತಹ ಪರಮಾದ್ಭುತವಾದ ಸಾಹಸ ಇವನದು! ಇಂದ್ರನಿಗೆ ಸಲ್ಲುತ್ತಿದ್ದ ಪೂಜೆಯನ್ನು ನಿಲ್ಲಿಸಿ ಅವನ ಮದವನ್ನು ಅಡಗಿಸಿಬಿಟ್ಟನಂತೆ. ಆ ಸಮಯದಲ್ಲೇ ಇವನು ಗೋವರ್ಧನಪರ್ವತವನ್ನು ಏಳು ದಿವಸಗಳ ಕಾಲ ತನ್ನೊಂದು ಕಿರುಬೆರಳಿನಿಂದಲೇ ಎತ್ತಿ ಹಿಡಿದು ಅಗಾಧವಾದ ಮಳೆ-ಗಾಳಿ-ಸಿಡಿಲುಗಳಿಂದ ಗೋಕುಲದ ಜನರನ್ನು ರಕ್ಷಿಸಿದನಂತೆ." ಮತ್ತೊಬ್ಬನು ತಾನು ಕೇಳಿದ್ದನ್ನು ಹೇಳುತ್ತಾನೆ : "ಗೆಳೆಯರೇ! ಈ ಜಗದಾನಂದಕಂದನ ಕಿರುನಗೆ-ಕುಡಿನೋಟವನ್ನು ನೋಡುತ್ತಾ ನಿತ್ಯವೂ ಆನಂದತುಂದಿಲರಾಗು ತ್ತಿದ್ದ ಗೋಪಿಯರು ಸ್ವಲ್ಪವೂ ಶ್ರಮವಿಲ್ಲದೆ ಅತ್ಯಂತ ಸಂತೋಷದೊಡನೆ ತಮ್ಮ ಹಲವಾರು ಕಷ್ಟಗಳಿಂದ ಪಾರಾಗುತ್ತಿದ್ದರಂತೆ. ಇವನು ಹುಟ್ಟಿರುವ

ಯದುವಂಶವು ಇವನಿಂದ ರಕ್ಷಿಸಲ್ಪಡುತ್ತಾ ವಿಖ್ಯಾತವಾಗುವುದೆಂದೂ ಸಂಪತ್ಸಮೃದ್ಧಿಯನ್ನೂ ಯಶಸ್ಸನ್ನೂ ಗೌರವವನ್ನೂ ಪಡೆದುಕೊಳ್ಳುವುದೆಂದೂ ಭವಿಷ್ಯವನ್ನು ತಿಳಿದ ವಿದ್ವಾಂಸರು ಹೇಳಿದ್ದಾರಂತೆ." ಮತ್ತೊಬ್ಬಳು ಹೇಳುತ್ತಾಳೆ : "ಶ್ಯಾಮಸುಂದರನ ಪಕ್ಕದಲ್ಲಿರುವವನೇ ಅವನ ಅಣ್ಣ ; ಕಮಲಲೋಚನನಾದ ಕಾಂತಿಮಂತನಾದ ಬಲರಾಮ. ಇವನೂ ಸಾಮಾನ್ಯ ನಲ್ಲ. ಇವನೂ ಕೂಡ ಪ್ರಲಂಬಾಸುರ, ವತ್ಸಾಸುರ, ಬಕಾಸುರ–ಇವರೇ ಮೊದಲಾದ ಹಲವಾರು ರಾಕ್ಷಸರನ್ನು ಸಂಹರಿಸಿದ್ದಾನಂತೆ. ಚಿಕ್ಕಬಾಲಕರಂತೆ ಕಾಣುತ್ತಿದ್ದರೂ ಎಂತಹ ಸಾಹಸಿಗಳಮ್ಮಾ! ಇಲ್ಲಾದರೂ ಏನು ಮಾಡುವ ರೆಂಬುದನ್ನು ನೋಡುವ ಭಾಗ್ಯ ಇಂದು ನಮಗೆ ಲಭಿಸಿದೆ." ಹೀಗೆ ಮಂಚದಲ್ಲಿ ಕುಳಿತಿದ್ದ ಹೆಂಗಸರು, ಗಂಡಸರು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದರು.

ಪರೀಕ್ಷಿತಮಹಾರಾಜ! ಜನಗಳೆಲ್ಲರೂ ಹೀಗೆ ಪರಸ್ಪರವಾಗಿ ಮಾತ ನಾಡಿಕೊಳ್ಳುತ್ತಿರಲಾಗಿ, ತುತ್ತೂರಿ-ಭೇರಿಗಳ ಘೋಷವಾಗುತ್ತಿರಲಾಗಿ ಕಂಸನ ಆಸ್ಥಾನದಲ್ಲಿ ಸುಪ್ರಸಿದ್ಧ ಜಟ್ಟಿಯಾಗಿದ್ದ ಚಾಣೂರನು ರಾಮ-ಕೃಷ್ಣರನ್ನು ಸಂಬೋಧಿಸಿ ಹೇಳಿದನು :

ಹೇ ನನ್ದಸೂನೋ ಹೇ ರಾಮ ಭವನ್ತೌ ವೀರಸಂಮತೌ ।
ನಿಯುದ್ಧಕುಶಲೌ ಶ್ರುತ್ವಾ ರಾಜ್ಞಾಹೂತೌ ದಿದೃಕ್ಷುಣಾ ॥೩೭॥

"ನಂದನಂದನರಾದ ಕೃಷ್ಣ-ಬಲರಾಮರೇ! ನೀವಿಬ್ಬರೂ ಮಹಾ-ಮಹಾ ವೀರಪುರುಷರಿಗೂ ಆದರಣೀಯರಾಗಿರುವಿರಿ. ನಮ್ಮ ಮಹಾರಾಜ ನಾದ ಕಂಸನು, ನೀವಿಬ್ಬರೂ ಮಲ್ಲಯುದ್ಧದಲ್ಲಿ ಅತ್ಯಂತ ಕುಶಲಿಗಳಾಗಿರುವಿ ರೆಂಬುದನ್ನು ತಿಳಿದು ನಿಮ್ಮ ಮಲ್ಲಯುದ್ಧದ ಕೌಶಲ್ಯವನ್ನು ನೋಡುವ ಸಲುವಾಗಿ ನಿಮ್ಮಿಬ್ಬರನ್ನೂ ಇಲ್ಲಿಗೆ ಆಹ್ವಾನಿಸಿರುತ್ತಾನೆ. ಮನಸ್ಸಿನಿಂದ, ಕ್ರಿಯೆಯಿಂದ ಮತ್ತು ಮಾತಿನಿಂದ ರಾಜನಿಗೆ ಪ್ರಿಯವನ್ನುಂಟುಮಾಡುವ ಪ್ರಜೆಗಳು ಶ್ರೇಯಸ್ಸನ್ನು ಹೊಂದುತ್ತಾರೆ. ರಾಜನ ಅಭಿಪ್ರಾಯಕ್ಕೆ ವಿರುದ್ಧವಾಗಿ ವರ್ತಿಸುವವರೂ, ಅಪ್ರಿಯವಾದ ಕಾರ್ಯಗಳನ್ನು ಮಾಡು ವವರೂ ಶಿಕ್ಷೆಗೆ ಗುರಿಯಾಗುತ್ತಾರೆ. ಹಸು-ಕರುಗಳನ್ನು ಮೇಯಿಸುವ ಗೊಲ್ಲರು ಪ್ರತಿನಿತ್ಯವೂ ಆನಂದತುಂದಿಲರಾಗಿ ಕಾಡಿನಲ್ಲಿ ಪರಸ್ಪರವಾಗಿ

ಕುಸ್ತಿಗಳನ್ನು ಮತ್ತು ಇತರ ಆಟಗಳನ್ನು ಆಡುತ್ತಾ ದನಗಳನ್ನೂ ಮೇಯಿಸುತ್ತಾರೆಂಬ ವಿಷಯವು ಎಲ್ಲರಿಗೂ ತಿಳಿದೇ ಇದೆ. ಆದುದರಿಂದ ನಾವಿಬ್ಬರೂ ಸೇರಿ ರಾಜನಿಗೆ ಪ್ರಿಯವಾದುದನ್ನು ಮಾಡೋಣ. (ರಾಜನ ಸಂತೋಷಕ್ಕಾಗಿ ಮಲ್ಲಯುದ್ಧವನ್ನು ಮಾಡೋಣ.)

ಭೂತಾನಿ ನಃ ಪ್ರಸೀದನ್ತಿ ಸರ್ವಭೂತಮಯೋ ನೃಪಃ ॥೩೫॥

ಮಹಾರಾಜನಿಗೆ ಪ್ರಿಯವಾದ ಕಾರ್ಯವನ್ನು ಮಾಡುವುದರಿಂದ ಪ್ರಾಣಿಗಳೆಲ್ಲವೂ ನಮ್ಮ ವಿಷಯದಲ್ಲಿ ಪ್ರಸನ್ನವಾಗುತ್ತವೆ. ಹೇಗೆಂದರೆ : ರಾಜನು ಸಮಸ್ತ ಪ್ರಾಣಿಗಳಿಗೂ ಪ್ರತೀಕನಾಗಿದ್ದಾನೆ."

ಪರೀಕ್ಷಿತಮಹಾರಾಜ! ಚಾಣೂರನ ಮಾತನ್ನು ಕೇಳಿ ಶ್ರೀಕೃಷ್ಣನು, ತನಗೆ ಇಷ್ಟವಾದ ದ್ವಂದ್ವಯುದ್ಧವೇ ಚಾಣೂರನೇ ಮೊದಲಾದ ಮಲ್ಲರಿಗೂ ಇಷ್ಟವಾಗಿರುವುದೆಂಬುದನ್ನು ತಿಳಿದು ಅವನ ಮಾತನ್ನು ಅಭಿನಂದಿಸುತ್ತಾ ದೇಶ-ಕಾಲೋಚಿತವಾದ ಈ ಮಾತನ್ನು ಚಾಣೂರನಿಗೆ ಹೇಳಿದನು :

"ಚಾಣೂರ! ವನವಾಸಿಗಳಾದ ನಾವೂ ಕೂಡ ಭೋಜರಾಜನ ಪ್ರಜೆಗಳೇ ಆಗಿದ್ದೇವೆ. ಅವನಿಗೆ ಪ್ರಿಯವಾದ ಕಾರ್ಯವನ್ನೇ ಮಾಡಲು ನಾವೂ ಸಿದ್ಧರಾಗಿದ್ದೇವೆ. ಇದು ರಾಜನು ನಮ್ಮ ಮೇಲೆ ತೋರಿರುವ ಪರಮಾನುಗ್ರಹವೇ ಆಗಿದೆ. ಆದರೆ, ಚಾಣೂರ! ನಾವು ಬಾಲಕರು. ನಮಗೆ ಸಮಾನವಯಸ್ಕರಾದ ಬಾಲಕರೊಡನೆ ಕಾಡಿನಲ್ಲಿ ದನಗಳನ್ನು ಮೇಯಿಸುವಾಗ ಕುಸ್ತಿಗಳನ್ನೂ ಆಟಗಳನ್ನೂ ಯಥೋಚಿತವಾಗಿ ಆಡುತ್ತೇವೆ. ಮಲ್ಲಯುದ್ಧವು ಸಮಾನಬಲವಿರುವವರಲ್ಲಿಯೇ ನಡೆಯಬೇಕು. ಇದರಿಂದ ಮಲ್ಲಯುದ್ಧವನ್ನು ವೀಕ್ಷಿಸುವ ಸಭಾಸದರು ಅಧರ್ಮದ ಪಾಪಕ್ಕೊಳಗಾಗುವುದಿಲ್ಲ."

ಚಾಣೂರನು ಹೇಳುತ್ತಾನೆ :

ನ ಬಾಲೋ ನ ಕಿಶೋರಸ್ತ್ವಂ ಬಲಶ್ಚ ಬಲಿನಾಂ ವರಃ ।
ಲೀಲಯೇಭೋ ಹತೋ ಯೇನ ಸಹಸ್ರದ್ವಿಪಸತ್ತ್ವಭೃತ್ ॥೩೯॥

"ಕೃಷ್ಣ! ಬಾಲಕನೆಂದು ಏಕೆ ಹೇಳಿಕೊಳ್ಳುವೆ? ನೀನು ಬಾಲಕನೂ ಅಲ್ಲ; ಕಿಶೋರನೂ ಅಲ್ಲ. ಮಹಾಬಲಿಷ್ಠ. ಅಷ್ಟು ಮಾತ್ರವಲ್ಲ ; ಬಲಿಷ್ಠ

ರಲ್ಲಿ ಶ್ರೇಷ್ಠನಾದವನು. ಸಾವಿರ ಆನೆಗಳ ಬಲದಷ್ಟು ಬಲಿಷ್ಠವಾಗಿದ್ದ ಕುವಲಯಾಪೀಡಗಜವನ್ನು ಲೀಲಾಜಾಲವಾಗಿ ಸಂಹರಿಸಿದವನನ್ನು ಬಾಲನೆಂದು ಹೇಳಲಾದೀತೇ?

ತಸ್ಮಾದ್ಭವದ್ಭ್ಯಾಂ ಬಲಿಭಿರ್ಯೋದ್ಧವ್ಯಂ ನಾನಯೋಽತ್ರ ವೈ ।
ಮಯಿ ವಿಕ್ರಮ ವಾರ್ಷ್ಣೇಯ ಬಲೇನ ಸಹ ಮುಷ್ಟಿಕಃ ॥೪೦॥

ಆದುದರಿಂದ ನೀವಿಬ್ಬರೂ ಬಲಿಷ್ಠರೆನಿಸಿಕೊಂಡಿರುವ, ವಯಸ್ಸಿನಲ್ಲಿಯೂ ಹಿರಿಯರಾಗಿರುವ ನಮ್ಮೊಡನೆಯೇ ಮಲ್ಲಯುದ್ಧವನ್ನು ಮಾಡಬೇಕು. ಇದರಲ್ಲಿ ಅನ್ಯಾಯದ ಅಥವಾ ಅಧರ್ಮದ ವಿಷಯವೇ ಇಲ್ಲ. ಆದುದರಿಂದ, ಕೃಷ್ಣ! ನೀನು ನನ್ನ ಮೇಲೆ ನಿನ್ನ ಪರಾಕ್ರಮವನ್ನು ತೋರಬೇಕು. ಬಲರಾಮನು ಮುಷ್ಟಿಕನೊಡನೆ ಮಲ್ಲಯುದ್ಧವನ್ನು ಮಾಡಲಿ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೪೩ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೪೪ನೆಯ ಅಧ್ಯಾಯ

ಚಾಣೂರ-ಮುಷ್ಟಿಕ-ಕಂಸಾದಿಗಳ ಸಂಹಾರ

ಶ್ರೀಶುಕಮುನಿಗಳು ಹೇಳುತ್ತಾರೆ :

ಏವಂ ಚರ್ಚಿತಸಂಕಲ್ಪೋ ಭಗವಾನ್ ಮಧುಸೂದನಃ ।
ಆಸಸಾದಾಥ ಚಾಣೂರಂ ಮುಷ್ಟಿಕಂ ರೋಹಿಣೀಸುತಃ ॥೧॥

ಪರೀಕ್ಷಿತಮಹಾರಾಜ! ಭಗವಾನ್ ಶ್ರೀಕೃಷ್ಣನು ಚಾಣೂರನೇ ಮೊದಲಾದವರನ್ನು ಸಂಹರಿಸಲು ನಿಶ್ಚಿತವಾದ ಸಂಕಲ್ಪವನ್ನು ಮಾಡಿಬಿಟ್ಟನು. ಶ್ರೀಕೃಷ್ಣನು ಚಾಣೂರನೊಡನೆಯೂ ಬಲರಾಮನು ಮುಷ್ಟಿಕನೊಡನೆಯೂ ಮಲ್ಲಯುದ್ಧವನ್ನು ಪ್ರಾರಂಭಿಸಿದರು. ಒಬ್ಬರು ಮತ್ತೊಬ್ಬರನ್ನು ಗೆಲ್ಲಬೇಕೆಂಬ ಛಲದಿಂದ ಪರಸ್ಪರವಾಗಿ ಒಬ್ಬರ ಕೈಯನ್ನು ಮತ್ತೊಬ್ಬರು ಹಿಡಿದುಕೊಂಡು ತೊಡರುಗಾಲುಕೊಟ್ಟುಕೊಂಡು ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಬಲಪೂರ್ವಕವಾಗಿ ಎಳೆದಾಡತೊಡಗಿದರು. ಕೃಷ್ಣ-

ಚಾಣೂರರೂ ಬಲರಾಮ-ಮುಷ್ಟಿಕರೂ ಪರಸ್ಪರವಾಗಿ ಮೊಣಕೈಗಳಿಂದ ಎದುರಾಳಿಯ ಮೊಣಕೈಗಳನ್ನು ತಳ್ಳುತ್ತಿದ್ದರು. ಮೊಣಕಾಲುಗಳಿಂದ ಎದುರಾಳಿಯ ಮೊಣಕಾಲುಗಳನ್ನು ತೊಡರಿಸುತ್ತಿದ್ದರು. ತಲೆಯಿಂದ ಎದುರಾಳಿಯ ತಲೆಗೆ ಡಿಕ್ಕಿಹೊಡೆಸುತ್ತಿದ್ದರು. ಎದುರಾಳಿಯ ವಕ್ಷಃಸ್ಥಳವನ್ನು ತಮ್ಮ ಉಬ್ಬಿದ ವಕ್ಷಃಸ್ಥಳದಿಂದ ಪ್ರಹರಿಸುತ್ತಿದ್ದರು. ಒಬ್ಬರು ಮತ್ತೊಬ್ಬರನ್ನು ಹಿಡಿದು ಗರ-ಗರನೆ ತಿರುಗಿಸುತ್ತಿದ್ದರು. ದೂರಕ್ಕೆ ತಳ್ಳಿಬಿಡುತ್ತಿದ್ದರು. ತೋಳಿನ ಸಂದಿಯಲ್ಲಿ ಸೇರಿಸಿಕೊಂಡು ಅಮುಕುತ್ತಿದ್ದರು. ನೆಲದ ಮೇಲೆ ಬೀಳಿಸಿ ಉರುಳಿಸುತ್ತಿದ್ದರು. ವೇಗದಿಂದ ನುಗ್ಗಿ ಬಂದು ಒಬ್ಬರು ಮತ್ತೊಬ್ಬರ ಮೇಲೆ ಬೀಳುತ್ತಿದ್ದರು. ಸಮಯವರಿತು ಹಿಂದಕ್ಕೂ ಸರಿಯುತ್ತಿದ್ದರು. ಕೆಲವು ಸನ್ನಿವೇಶಗಳಲ್ಲಿ ಮುದುರಿ ಮಟ್ಟೆಗಟ್ಟಿ ಎತ್ತಿಹಾಕುತ್ತಿದ್ದರು. ಹೆಕ್ಕತ್ತಿನ ಮೇಲೆ ತೋಳನ್ನಿಟ್ಟು ಬಗ್ಗಿಸುತ್ತಿದ್ದರು. ಎದುರಾಳಿಯು ಹಾಕಿದ ಪಟ್ಟುಗಳಿಂದ ಬಿಡಿಸಿಕೊಳ್ಳಲು ಸತತಪ್ರಯತ್ನಿಸುತ್ತಿದ್ದರು. ಈ ವಿಧವಾದ ಮಲ್ಲಯುದ್ಧದಿಂದ ಶರೀರಕ್ಕೆ ಆಗುತ್ತಿದ್ದ ಯಾತನೆಯನ್ನೂ ಲೆಕ್ಕಿಸದೆ ವಿಜಯಗಳಿಸುವ ಅಪೇಕ್ಷೆಯಿಂದ ಭಯಂಕರವಾದ ರೀತಿಯಲ್ಲಿ ಕೃಷ್ಣ- ಚಾಣೂರರೂ ಬಲರಾಮ-ಮುಷ್ಟಿಕರೂ ಸೆಣೆಸಾಡುತ್ತಿದ್ದರು.

ಪರೀಕ್ಷಿತಮಹಾರಾಜ! ಆ ಮಲ್ಲಯುದ್ಧವನ್ನು ನೋಡಲು ಹಲವಾರು ಸ್ತ್ರೀಯರೂ ರಂಗಮಂಟಪಕ್ಕೆ ಬಂದಿದ್ದರು. ದೊಡ್ಡ ದೊಡ್ಡ ಜಟ್ಟಿಗಳೊಡನೆ ಬಾಲಕರಾದ ರಾಮ-ಕೃಷ್ಣರು ಸೆಣೆಸಾಡುತ್ತಿರುವುದನ್ನು ಅವರು ನೋಡಿದರು. ಅವರ ಅನುಕಂಪವು ಸ್ವಾಭಾವಿಕವಾಗಿಯೇ ಬಾಲಕರಾದ ಶ್ರೀಕೃಷ್ಣ-ಬಲರಾಮರ ಮೇಲಿದ್ದಿತು. ಗುಂಪು-ಗುಂಪಾಗಿ ಕುಳಿತು ಅವರು ಹೀಗೆ ಮಾತನಾಡಿಕೊಳ್ಳುತ್ತಿದ್ದರು :

ಮಹಾನಯಂ ಬತಾಧರ್ಮ ಏಷಾಂ ರಾಜಸಭಾಸದಾಮ್ ।
ಯೇ ಬಲಾಬಲವದ್ಯುದ್ಧಂ ರಾಜ್ಞೋಽನ್ವಿಚ್ಛನ್ತಿ ಪಶ್ಯತಃ ॥೭॥

“ಕಂಸರಾಜನ ಸಭಾಸದರು ದೊಡ್ಡ ಅನ್ಯಾಯವನ್ನೂ ಮಹತ್ತರ ವಾದ ಅಧರ್ಮವನ್ನೂ ಮಾಡುತ್ತಿದ್ದಾರೆ. ರಾಜನ ಎದುರಿನಲ್ಲಿಯೇ ದೊಡ್ಡ ದೊಡ್ಡ ಜಟ್ಟಿಗಳಿಗೂ ನಿರ್ಬಲರಾದ ಬಾಲಕರಿಗೂ ಕಾಳಗವಾಗಲು ಅನು

ಮೋದಿಸಿ ಅಸಮತೆಯಿಂದ ಕೂಡಿದ ಈ ಕಾಳಗವನ್ನು ನೋಡುತ್ತಿದ್ದಾರೆ. ನಿಶ್ಚಯವಾಗಿಯೂ ಇದು ಎಂತಹ ಖೇದದ ವಿಷಯವಾಗಿದೆ? ನೋಡು, ಗೆಳತಿ! ಈ ಜಟ್ಟಿಗಳಲ್ಲಿ ಪ್ರತಿಯೊಬ್ಬರ ಅಂಗಸೌಷ್ಠವವೂ ವಜ್ರಕ್ಕೆ ಸಮಾನ ವಾಗಿ ಅತ್ಯಂತ ಕಠೋರವಾಗಿದೆ. ನೋಡಲು ಇವರು ಪರ್ವತಗಳಂತೆಯೇ ಇದ್ದಾರೆ. ಶ್ರೀಕೃಷ್ಣ-ಬಲರಾಮರಾದರೋ ಇನ್ನೂ ಯೌವನಾವಸ್ಥೆಯನ್ನು ಹೊಂದಿರುವುದಿಲ್ಲ. ಕಿಶೋರಾವಸ್ಥೆಯಲ್ಲೇ ಇದ್ದಾರೆ. ಅತ್ಯಂತ ಕೋಮಲ ವಾದ ಶರೀರವುಳ್ಳವರಾಗಿದ್ದಾರೆ. ಮಹಾಬಲಿಷ್ಠರಾದ, ವಜ್ರದಷ್ಟು ಕಠೋರ ವಾದ ಶರೀರವುಳ್ಳ ಜಟ್ಟಿಗಳೆಲ್ಲಿ? ಸುಕೋಮಲವಾದ ಶರೀರಗಳನ್ನು ಹೊಂದಿರುವ ಬಾಲಕರೆಲ್ಲಿ? ಇಂತಹ ಅಸಮಾನತೆಯ ಕಾಳಗವನ್ನು ನಾವು ಕಂಡವರೇ ಅಲ್ಲ.

ಧರ್ಮವ್ಯತಿಕ್ರಮೋ ಹ್ಯಸ್ಯ ಸಮಾಜಸ್ಯ ಧ್ರುವಂ ಭವೇತ್ ।
ಯತ್ರಾಧರ್ಮಃ ಸಮುತ್ತಿಷ್ಠೇನ್ನ ಸ್ಥೇಯಂ ತತ್ರ ಕರ್ಹಿಚಿತ್ ॥೯॥

ಇಂತಹ ಧರ್ಮವ್ಯತಿಕ್ರಮದಿಂದ ಪ್ರಾಪ್ತವಾಗುವ ಪಾಪವು ಈ ಕಾಳಗ ವನ್ನು ಅನುಮೋದಿಸಿರುವ ಮತ್ತು ನೋಡುತ್ತಿರುವ ಸಭಾಸದರಿಗೆ ತಪ್ಪಿ ದ್ದಲ್ಲ. ನಾವಾದರೂ ಈಗಲೇ ಇಲ್ಲಿಂದ ಹೊರಟುಹೋಗುವುದು ಯುಕ್ತ ವಾಗಿ ಕಾಣುತ್ತದೆ. ಏಕೆಂದರೆ ಅಧರ್ಮಕ್ಕೆ ಪ್ರಾಧಾನ್ಯವು ಎಲ್ಲಿರುವುದೋ ಅಲ್ಲಿ ಖಂಡಿತವಾಗಿಯೂ ಇರಬಾರದೆಂದು ಶಾಸ್ತ್ರವು ಹೇಳುತ್ತದೆ.

ನ ಸಭಾಂ ಪ್ರವಿಶೇತ್ ಪ್ರಾಜ್ಞಃ ಸಭ್ಯದೋಷಾನನುಸ್ಮರನ್ ।
ಅಬ್ರುವನ್ವಿಬ್ರುವನ್ನಜ್ಞೋ ನರಃ ಕಿಲ್ಬಿಷಮಶ್ನುತೇ ॥೧೦॥

ಸಭಾಸದರಲ್ಲಿ ದೋಷವಿರುವುದೆಂದು ತಿಳಿದನಂತರ ವಿದ್ವಾಂಸನಾದ ವನು ಅಂತಹ ಸಭ್ಯರಿರುವ ಸಭೆಯನ್ನು ಪ್ರವೇಶಿಸಬಾರದು. ಏಕೆಂದರೆ : ಅಂತಹ ಸಭೆಗಳಿಗೆ ಹೋಗಿ ಸಭಾಸದರ ಅವಗುಣಗಳನ್ನು ಹೇಳುವು ದಾಗಲೀ, ಹೇಳದೇ ಇರುವುದಾಗಲೀ, ತಿಳಿದಿದ್ದೂ ತನಗೆ ತಿಳಿಯದೆಂದು ಹೇಳುವುದಾಗಲೀ ದೋಷವಾಗುತ್ತದೆ.

ಸಖಿಯರೇ! ಶತ್ರುವಿನ ಸುತ್ತಲೂ ಸುತ್ತುತ್ತಿರುವ ಶ್ರೀಕೃಷ್ಣನ ಮುಖಕಮಲವನ್ನಾದರೂ ನೋಡಿರಿ. ಕಾಳಗದ ಆಯಾಸದಿಂದಾಗಿ ತಾವ

ರೆಯ ಎಲೆಯ ಮೇಲಿನ ನೀರಿನ ಬಿಂದುಗಳಂತೆ ಬೆವರಿನ ಬಿಂದುಗಳು ಕಂದನ ಮುಖಾರವಿಂದದ ಮೇಲೆ ಕಂಗೊಳಿಸುತ್ತಿವೆ.

ಸಖಿಯರೇ! ಬಲರಾಮನ ಮುಖವನ್ನಾದರೂ ನೋಡುತ್ತಿಲ್ಲವೇ! ಮುಷ್ಟಿಕನ ಮೇಲಿನ ಕೋಪದಿಂದಾಗಿ ಅವನ ಕಣ್ಣುಗಳು ತಾಮ್ರದಂತೆ ಕೆಂಪಾಗಿವೆ. ಆದರೂ ಹುಸಿನಗೆಯು ಅವನ ಮುಖವನ್ನು ಬಿಟ್ಟುಹೋಗಿಲ್ಲ. ಒಮ್ಮೆ ಕೋಪದಿಂದಲೂ ಮತ್ತೊಮ್ಮೆ ಹುಸಿನಗೆಯಿಂದಲೂ ಅವನ ಮುಖವು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದೆ.

ಗೆಳತಿಯರೇ! ನಿಜವಾಗಿ ಹೇಳುವುದಾದರೆ ಗೋಕುಲವೇ ಇತರ ಎಲ್ಲ ಕ್ಷೇತ್ರಗಳಿಗಿಂತಲೂ ಪರಮಪವಿತ್ರವೂ ಪುಣ್ಯಪ್ರದವೂ ಆದ ಕ್ಷೇತ್ರವಾಗಿದೆ. ಏಕೆಂದರೆ : ಪುರಾಣಪುರುಷನಾದ ಸಾಕ್ಷಾತ್ ಭಗವಂತನೇ ತನ್ನ ನಿಜ ಸ್ವರೂಪವನ್ನು ಮರೆಮಾಡಿಕೊಂಡು ಮನುಷ್ಯವೇಷಧರನಾಗಿ ಗೋಕುಲ ದಲ್ಲಿದ್ದಾನೆ. ಈಶ್ವರನಿಂದಲೂ, ಲಕ್ಷ್ಮೀದೇವಿಯಿಂದಲೂ ನಿರಂತರವಾಗಿ ಪೂಜಿಸಲ್ಪಡುವ ಪಾದಪದ್ಮಗಳನ್ನು ಹೊಂದಿರುವ ಸ್ವಾಮಿಯು, ವಿಚಿತ್ರವಾದ ವನಕುಸುಮಗಳ ಮಾಲೆಯನ್ನು ಧರಿಸಿ ಕೊಳಲನ್ನೂದುತ್ತಾ, ಹಲವಾರು ಬಗೆಯ ಆಟಗಳನ್ನಾಡುತ್ತಾ, ಬಲರಾಮನೊಡನೆ ದನಗಳನ್ನು ಮೇಯಿಸುತ್ತಾ ಆನಂದತುಂದಿಲನಾಗಿ ಬೃಂದಾವನದ ಕಾಡಿನಲ್ಲಿ ಸಂಚರಿಸುತ್ತಿರುತ್ತಾನೆ.

ಸಖಿಯರೇ! ಎರಡು ಕಣ್ಣುಗಳಿಂದಲೂ ನಿತ್ಯನಿರಂತರವಾಗಿ ಯಾವ ಶ್ರೀಕೃಷ್ಣನ ರೂಪವೆಂಬ ಮಧುವನ್ನು ಪಾನಮಾಡುವರೋ ಅಂತಹ ಗೋಪಿಯರು ಎಂತಹ ತಪಸ್ಸನ್ನು ಮಾಡಿರುವರೆಂಬುದು ನಮಗೆ ತಿಳಿಯ ದಾಗಿದೆ. ಅವನ ರೂಪವೆಂಬುದು ಲಾವಣ್ಯದ ಸಾರವೇ ಆಗಿದೆ. ಪ್ರಪಂಚ ದಲ್ಲಿ ಮನಮೋಹಕವಾದ ಶ್ರೀಕೃಷ್ಣನ ರೂಪವನ್ನು ಅತಿಶಯಿಸಿದ ಅಥವಾ ಅವನ ರೂಪಕ್ಕೆ ಸಮಾನವಾದ ರೂಪವು ಯಾರಲ್ಲಿಯೂ ಇರುವುದಿಲ್ಲ. ಅವನ ಈ ದಿವ್ಯರೂಪವು ವಸ್ತ್ರಾಭರಣಗಳನ್ನಾಗಲೀ, ಅಂಗರಾಗಗಳನ್ನಾಗಲೀ ಧರಿಸಿಕೊಂಡು ಸಿದ್ಧವಾದುದಲ್ಲ. ಸ್ವಯಂಸಿದ್ಧವಾದುದು. ಯಾವುದೇ ಅಲಂಕಾರವಿಲ್ಲದೆಯೇ ಅವನ ರೂಪವು ಮನಮೋಹಕವಾಗಿದೆ. ಅಂತಹ ಚೇತೋಹಾರಿಯಾದ ರೂಪವನ್ನು ನೋಡುತ್ತಿದ್ದರೆ ತೃಪ್ತಿಯೇ ಉಂಟಾಗು

ವುದಿಲ್ಲ. ಏಕೆಂದರೆ : ಆ ದಿವ್ಯರೂಪವು ಪ್ರತಿಕ್ಷಣದಲ್ಲಿಯೂ ನಿತ್ಯನೂತನ ವಾಗಿಯೇ ಕಾಣುತ್ತಿರುತ್ತದೆ. ಹಿಂದೆ ನೋಡಿದ ರೂಪವು ಈಗಿರುವುದಿಲ್ಲ. ಈಗ ನೋಡಿದ ರೂಪವು ಮುಂದೆ ಕಾಣುವುದಿಲ್ಲ. ನಿತ್ಯನೂತನವಾಗುತ್ತಲೇ ಇರುತ್ತದೆ. ಸಮಗ್ರವಾದ ಯಶಸ್ಸಿಗೂ, ಸೌಂದರ್ಯಕ್ಕೂ ಮತ್ತು ಐಶ್ವರ್ಯಕ್ಕೂ ಅವನ ದಿವ್ಯರೂಪವೇ ಆಶ್ರಯಸ್ಥಾನವಾಗಿದೆ. ಅಂತಹ ದಿವ್ಯರೂಪದ ದರ್ಶನವು ದುರ್ಭಾಗ್ಯರಿಗೆ ದುರ್ಲಭ. ಗೋಪಿಯರ ಭಾಗ್ಯ ದಿಂದಾಗಿ ಅದು ಅವರಿಗೆ ಸರ್ವದಾ ಲಭ್ಯವಾಗಿದೆ.

ಸಖಿಯರೇ! ಗೋಕುಲದ ಗೋಪಿಯರು ನಿಶ್ಚಯವಾಗಿಯೂ ಧನ್ಯರೇ ಸರಿ. ಏಕೆಂದರೆ : ಹಸುಗಳನ್ನು ಕರೆಯುವಾಗ, ಭತ್ತವನ್ನು ಕುಟ್ಟುವಾಗ, ಮೊಸರು ಕಡೆಯುವಾಗ, ಅರಿಶಿನವನ್ನು ಹಚ್ಚಿಕೊಳ್ಳುವಾಗ, ಗಂಧವನ್ನು ಲೇಪಿಸಿಕೊಳ್ಳುವಾಗ, ಮನೆಯನ್ನು ಸಾರಿಸುವಾಗ, ತೊಟ್ಟಿಲನ್ನು ತೂಗುವಾಗ, ಅಳುತ್ತಿರುವ ಮಕ್ಕಳನ್ನು ಸಮಾಧಾನಗೊಳಿಸುವಾಗ, ಮಕ್ಕಳಿಗೆ ನೀರೆರೆಯುವಾಗ, ನೀರನ್ನು ಚುಮುಕಿಸುವಾಗ–ಯಾವುದೇ ಕೆಲಸ ಮಾಡುತ್ತಿದ್ದರೂ ಶ್ರೀಕೃಷ್ಣನನ್ನೇ ಹೃತ್ಕಮಲದಲ್ಲಿ ನೆಲೆಗೊಳಿಸಿಕೊಂಡು ಆನಂದಾಶ್ರುವನ್ನು ಸುರಿಸುತ್ತಾ ಅವನ ಲೀಲಾ-ವಿನೋದಗಳನ್ನು ಗಾನ ಮಾಡುವರೋ ಅಂತಹ ವ್ರಜಸ್ತ್ರೀಯರಿಗಿಂತಲೂ ಧನ್ಯರಾದವರು ಬೇರೆ ಯಾರಿದ್ದಾರೆ? ಸಖಿಯರೇ! ಶ್ರೀಕೃಷ್ಣನು ಬೆಳಗಾಗುತ್ತಲೇ ಹಸುಗಳನ್ನು ಹೊಡೆದುಕೊಂಡು ಕಾಡಿಗೆ ಹೋಗುವಾಗ ಪುನಃ ಸಾಯಂಕಾಲವಾಗುತ್ತಲೇ ಕಾಡಿನಿಂದ ವ್ರಜಕ್ಕೆ ಹಿಂದಿರುಗಿ ಬರುವಾಗ ಕೊಳಲು ಬಾರಿಸುತ್ತಾನೆ. ಶ್ರೀಕೃಷ್ಣನ ಮುರಳಿಯ ಧ್ವನಿಯನ್ನು ಕೇಳುತ್ತಲೇ ಮೈಮರೆಯುವ ವ್ರಜಸ್ತ್ರೀಯರು ಯಾವುದೇ ಕೆಲಸಮಾಡುತ್ತಿದ್ದರೂ ಆ ಕೆಲಸವನ್ನು ಅಷ್ಟಕ್ಕೇ ನಿಲ್ಲಿಸಿ, ಮುರಳೀಧರನ ಕಿರುನಗೆಯನ್ನೂ ಕುಡಿನೋಟವನ್ನೂ ನೋಡುವ ಸಲುವಾಗಿ ಬೀದಿಗೆ ಓಡಿ ಬಂದು, ಹಾದಿಯ ಇಕ್ಕೆಡೆಗಳಲ್ಲೂ ನಿಂತು ಜಗದಾನಂದಕಂದನ ಮುಖಾರವಿಂದವನ್ನು ನೋಡಿ ಆನಂದತುಂದಿಲರಾಗುತ್ತಾರೆ. ನಿಶ್ಚಯ ವಾಗಿಯೂ ಗೋಪಿಯರು ಮಹಾಪುಣ್ಯವತಿಯರಲ್ಲವೇ!"

ಭರತವಂಶಶಿರೋಮಣಿಯೇ! ಪರೀಕ್ಷಿತ! ಮಥುರಾಪಟ್ಟಣದ ಸ್ತ್ರೀಯರು ಗುಂಪು-ಗುಂಪಾಗಿ ಕುಳಿತು ಹೀಗೆ ಮಾತನಾಡಿಕೊಳ್ಳುತ್ತಿದ್ದಾಗ

ಯೋಗೇಶ್ವರನಾದ ಭಗವಾನ್ ಶ್ರೀಹರಿಯು ಶತ್ರುವನ್ನು ಸಂಹರಿಸಲು ಮನಸ್ಸುಮಾಡಿದನು.

ಸಭೆಯಲ್ಲಿ ಕುಳಿತಿದ್ದ ಸ್ತ್ರೀಯರ ಭಯದಿಂದ ಕೂಡಿದ ಈ ಮಾತುಗಳನ್ನು ಪಕ್ಕದಲ್ಲಿಯೇ ಸೆರೆಮನೆಯಲ್ಲಿದ್ದ ದೇವಕೀ-ವಸುದೇವರೂ ಕೇಳಿಸಿಕೊಂಡರು. ಪುತ್ರಸ್ನೇಹದಿಂದಾಗಿ ಅವರು ಶೋಕದಿಂದ ಖಿನ್ನರಾದರು. ತಮ್ಮ ಮಕ್ಕಳಿಗೆ ಏನಾಗಿಬಿಡುವುದೋ ಎಂದು ಅವರು ಬಹಳ ಪರಿತಪಿಸತೊಡಗಿದರು. ತಮ್ಮ ಮಕ್ಕಳಾದ ಬಲರಾಮ-ಕೃಷ್ಣರ ಬಲವೆಷ್ಟೆಂಬುದನ್ನು ಅವರು ತಿಳಿದವರಾಗಿರಲಿಲ್ಲ. ಕೃಷ್ಣ-ಚಾಣೂರರಿಬ್ಬರೂ ಯಾವ ರೀತಿಯಲ್ಲಿ ಮಲ್ಲಯುದ್ಧದ ವಿಧಿನಿಯಮಗಳನ್ನು ಅನುಸರಿಸಿ ಕಾಳಗವಾಡುತ್ತಿದ್ದರೋ ಅದೇ ರೀತಿಯಲ್ಲಿಯೇ ಬಲರಾಮ-ಮುಷ್ಟಿಕರೂ ಕಾಳಗವಾಡುತ್ತಿದ್ದರು. ಶ್ರೀಕೃಷ್ಣನ ಅಂಗಾಂಗಗಳೆಲ್ಲವೂ ವಜ್ರದಷ್ಟೇ ಕಠಿನವಾಗಿದ್ದುವು. ಅಂತಹ ಅಂಗಗಳ (ಕೈ-ಕಾಲು-ಎದೆ-ಶಿರಸ್ಸುಗಳ) ಸತತಪ್ರಹಾರದಿಂದಾಗಿ ಚಾಣೂರನ ಅಂಗಾಂಗಗಳೆಲ್ಲವೂ ಜಜ್ಜಿಹೋದುವು. ಚಾಣೂರನು ಯಾತನೆಯನ್ನು ತಡೆದುಕೊಳ್ಳಲಾರದೆ ಬಾರಿ-ಬಾರಿಗೂ ಆಯಾಸಗೊಳ್ಳುತ್ತಿದ್ದನು. ಮರುಕ್ಷಣದಲ್ಲಿಯೇ ಚಾಣೂರನು ಅತ್ಯಂತಕ್ರುದ್ಧನಾಗಿ ಗಿಡಗಪಕ್ಷಿಯ ವೇಗ



ದಿಂದ ಶ್ರೀಕೃಷ್ಣನ ಕಡೆಗೆ ಹಾರಿ ಬಿಗಿದಿದ್ದ ಎರಡು ಕೈಗಳ ಮುಷ್ಟಿಗಳಿಂದಲೂ ಭಗವಂತನಾದ ವಾಸುದೇವನ ವಕ್ಷಃಸ್ಥಳವನ್ನು ಬಲವಾಗಿ ಪ್ರಹರಿಸಿದನು. ಇಂತಹ ಪ್ರಹಾರದಿಂದಲೂ ಶ್ರೀಕೃಷ್ಣನು ಸ್ವಲ್ಪವಾದರೂ ವಿಚಲಿತನಾಗಲಿಲ್ಲ.

ಮದಿಸಿದ ಆನೆಯನ್ನು ಪುಷ್ಪಹಾರದಿಂದ ಪ್ರಹರಿಸಿದಂತೆ–ಚಾಣೂರನ ಮುಷ್ಟಿ ಪ್ರಹಾರವು ಶ್ರೀಕೃಷ್ಣನ ಮೇಲೆ ಯಾವವಿಧವಾದ ಪರಿಣಾಮವನ್ನೂ ಉಂಟು ಮಾಡಲಿಲ್ಲ. ಚಾಣೂರನನ್ನು ಸಂಹರಿಸಲು ನಿಶ್ಚಯಿಸಿದ್ದ ಶ್ರೀಕೃಷ್ಣನು ಮರು ಕ್ಷಣದಲ್ಲಿಯೇ ಜೀವನದ ಕ್ಷಯವನ್ನು ಹೊಂದುವುದರಲ್ಲಿದ್ದ ಚಾಣೂರನ ಭುಜಗಳನ್ನು ಬಲವಾಗಿ ಹಿಡಿದು ಗರ-ಗರನೆ ಹತ್ತಾರು ಬಾರಿ ತಿರುಗಿಸಿ ರಭಸದಿಂದ ನೆಲದ ಮೇಲೆ ಅಪ್ಪಳಿಸಿದನು. ಚಾಣೂರನ ವೇಷ-ಭೂಷಣ ಗಳು ಅಸ್ತವ್ಯಸ್ತವಾದುವು. ಕೂದಲುಗಳು ಕೆದರಿಕೊಂಡುವು. ಪುಷ್ಪಮಾಲೆಗಳು ಛಿನ್ನ-ಭಿನ್ನವಾಗಿ ಚೆಲ್ಲಿದುವು. ಪೂಜೆಗಾಗಿ ಸಿದ್ಧಗೊಳಿಸಿದ ಇಂದ್ರಧ್ವಜವು ಕೆಳಗೆಬೀಳುವಂತೆ–ಚಾಣೂರನು ಗತಪ್ರಾಣನಾಗಿ ಕೆಳಗೆ ಬಿದ್ದಿದ್ದನು. ಇತ್ತಲಾಗಿ ಮುಷ್ಟಿಕಜಟ್ಟಿಯು ತನ್ನ ಮುಷ್ಟಿಯಿಂದ ಬಲವಾಗಿ ಬಲಭದ್ರ ನನ್ನು ಪ್ರಹರಿಸಿದನು. ಇದಕ್ಕೆ ಪ್ರತಿಯಾಗಿ ಬಲಭದ್ರನು ಅಂಗೈಯಿನಿಂದಲೇ ಮುಷ್ಟಿಕಜಟ್ಟಿಯನ್ನು ಬಲವಾಗಿ ಪ್ರಹರಿಸಿದನು. ಬಲರಾಮನು ಅಂಗೈ ಯಿನಿಂದ ಪ್ರಹರಿಸಿದೊಡನೆಯೇ ಮುಷ್ಟಿಕನು ತರ-ತರನೆ ನಡುಗತೊಡಗಿ ದನು. ಬಿರುಗಾಳಿಯಿಂದ ಬುಡಮೇಲಾದ ವೃಕ್ಷದಂತೆ ಮುಷ್ಟಿಕನು ಮರು ಕ್ಷಣದಲ್ಲಿಯೇ ಅತ್ಯಂತವ್ಯಥಿತನಾಗಿ ಪ್ರಾಣಗಳನ್ನು ತೊರೆದು ಬಾಯಿಂದ ರಕ್ತವನ್ನು ಕಾರುತ್ತಾ ಭೂಮಿಯ ಮೇಲೆ ಬಿದ್ದನು.

ಮುಷ್ಟಿಕನು ಹತನಾದನಂತರ ಅವನ ಅನುಯಾಯಿಯಾದ ಕೂಟ ನೆಂಬ ಜಟ್ಟಿಯು ಬಲರಾಮನೊಡನೆ ಕಾಳಗವಾಡಲು ಬಂದನು. ಪ್ರಹರಿಸು ವವರಲ್ಲಿ ಶ್ರೇಷ್ಠನಾದ ಬಲರಾಮನು ಕೂಟನೊಬ್ಬ ಜಟ್ಟಿಯೆಂದೂ ಪರಿಗಣಿ ಸದೆ ಕೇವಲ ವಿನೋದದಿಂದಲೇ ಎಡಗೈಯಿನ ಮುಷ್ಟಿಯಿಂದ ಕೂಟನನ್ನು ಪ್ರಹರಿಸಿ ಯಮಲೋಕಕ್ಕೆ ಕಳುಹಿಸಿದನು. ಅದೇ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನು ಶಲನೆಂಬ ಜಟ್ಟಿಯ ತಲೆಯನ್ನು ಕಾಲಿನಿಂದಲೇ ಒದ್ದು ಮುಂಡ ದಿಂದ ಬೇರ್ಪಡಿಸಿದನು. ಅನಂತರ ಕಾಳಗವಾಡಲು ಬಂದ ತೋಶಲಕನ ಅವಸ್ಥೆಯೂ ಹೀಗೆಯೇ ಆಯಿತು. ಶಲ-ತೋಶಲಕರಿಬ್ಬರೂ ಪ್ರಾಣಗಳನ್ನು ತೊರೆದು ಭೂಮಿಯ ಮೇಲೆ ಬಿದ್ದರು. ಮಲ್ಲಾಗ್ರಗಣ್ಯರೆನಿಸಿಕೊಂಡಿದ್ದ ಚಾಣೂರ-ಮುಷ್ಟಿಕ-ಕೂಟ-ಶಲ-ತೋಶಲಕರು ಅಸುಗಳನ್ನು ನೀಗಲಾಗಿ ಉಳಿದ ಮಲ್ಲರೆಲ್ಲರೂ ಪ್ರಾಣಗಳನ್ನು ಉಳಿಸಿಕೊಳ್ಳುವ ಆಶಯದಿಂದ ಕಂಸ

ಮಹಾರಾಜನಿಗೂ ಹೇಳದೇ-ಕೇಳದೇ ಓಡಿಬಿಟ್ಟರು. ಮಲ್ಲರೆಲ್ಲರೂ ರಂಗ ಮಂಟಪದಿಂದ ಓಡಿಹೋದರೂ ಬಲರಾಮ-ಕೃಷ್ಣರು ಪ್ರದರ್ಶನವನ್ನು ಮಾತ್ರ ನಿಲ್ಲಿಸಲಿಲ್ಲ. ನೋಡುತ್ತಾ ಕುಳಿತಿದ್ದ ತಮ್ಮ ಸಮವಯಸ್ಕರಾದ ಗೋಪಾಲರನ್ನೇ ರಂಗಭೂಮಿಗೆ ಎಳೆದುಕೊಂಡು ಮಲ್ಲಯುದ್ಧ-ನೃತ್ಯ ಮುಂತಾದುವನ್ನು ಪ್ರದರ್ಶಿಸತೊಡಗಿದರು. ಅಲ್ಲಿ ಬಾರಿಸಲ್ಪಡುತ್ತಿದ್ದ ಮಂಗಳವಾದ್ಯಗಳ ಶಬ್ದಕ್ಕೆ ತಮ್ಮ ಕಾಲಂದುಗೆಗಳ ಶಬ್ದವನ್ನು ಕೂಡಿಸಿ ಕುಣಿಯುತ್ತಿದ್ದರು. ಭಗವಾನ್ ಶ್ರೀಕೃಷ್ಣನ ಮತ್ತು ಬಲರಾಮನ ಅದ್ಭುತ ವಾದ ಆ ಲೀಲೆಗಳನ್ನು ನೋಡಿ ಪ್ರೇಕ್ಷಕರೆಲ್ಲರಿಗೂ ಮಹಾನಂದವಾಯಿತು. ಬ್ರಾಹ್ಮಣಶ್ರೇಷ್ಠರೂ ಮತ್ತು ಸಾಧು-ಸತ್ಪುರುಷರೂ–'ಸಾಧು ಕೃಷ್ಣ ಸಾಧು!' 'ಸಾಧು ಬಲಭದ್ರ ಸಾಧು!' 'ರಾಮ-ಕೃಷ್ಣರೇ! ನಿಮ್ಮ ಪ್ರದರ್ಶನವು ಮನೋರಂಜಕವಾಗಿ ಬಹಳ ಚೆನ್ನಾಗಿದೆ.'–ಮುಂತಾಗಿ ಶ್ಲಾಘಿಸಿದರು. ಆದರೆ ಕಂಸನೊಬ್ಬನಿಗೆ ಮಾತ್ರ ಬಹಳ ಸಂಕಟವೇ ಆಯಿತು.

ಮಹಾಬಲಿಷ್ಠರೆನಿಸಿಕೊಂಡಿದ್ದ ಐವರು ಜಟ್ಟಿಗಳೂ ಹತರಾಗಿ ಉಳಿದ ಜಟ್ಟಿಗಳೂ ಪಲಾಯನಮಾಡಿದನಂತರ ಭೋಜರಾಜನಾದ ಕಂಸನು ಮಂಗಳ ವಾದ್ಯಗಳನ್ನು ನಿಲ್ಲಿಸುವಂತೆ ಹೇಳಿ ತನ್ನ ಸೇವಕರಿಗೆ ಆಜ್ಞೆಮಾಡಿದನು :

ನಿಃಸಾರಯತ ದುರ್ವೃತ್ತೌ ವಸುದೇವಾತ್ಮಜೌ ಪುರಾತ್ ।
ಧನಂ ಹರತ ಗೋಪಾನಾಂ ನನ್ದಂ ಬಧ್ನೀತ ದುರ್ಮತಿಮ್ ॥೩೨॥

"ಕೆಟ್ಟನಡತೆಯುಳ್ಳ ವಸುದೇವನ ಈ ಇಬ್ಬರು ಮಕ್ಕಳನ್ನೂ ನಗರದಿಂದ ಹೊರಗಟ್ಟಿರಿ! ಈ ಗೋಪರಲ್ಲಿರುವ ಐಶ್ವರ್ಯವೆಲ್ಲವನ್ನೂ ಕಸಿದುಕೊಳ್ಳಿರಿ! ದುರ್ಬುದ್ಧಿಯವನಾದ ಈ ನಂದಗೋಪನನ್ನು ಸೆರೆಹಿಡಿಯಿರಿ!

ವಸುದೇವಸ್ತು ದುರ್ಮೇಧಾ ಹನ್ಯತಾಮಾಶ್ವಸತ್ತಮಃ ।
ಉಗ್ರಸೇನಃ ಪಿತಾ ಚಾಪಿ ಸಾನುಗಃ ಪರಪಕ್ಷಗಃ ॥೩೩॥

ಬಹಳ ಅಯೋಗ್ಯನಾದ, ಕೆಟ್ಟಬುದ್ಧಿಯ ವಸುದೇವನನ್ನು ಈಗಲೇ ಶೀಘ್ರವಾಗಿ ಕೊಂದುಹಾಕಿರಿ! ನಮ್ಮ ತಂದೆಯಾದರೂ ಶತ್ರುಪಕ್ಷಕ್ಕೆ ಸೇರಿದವನಾಗಿರುವುದರಿಂದ ಅವನ ಅನುಯಾಯಿಗಳ ಸಹಿತನಾಗಿ ಉಗ್ರ ಸೇನನನ್ನೂ ಕೊಂದುಹಾಕಿರಿ!"

ಪರೀಕ್ಷಿತಮಹಾರಾಜ! ಕಂಸನು ಹೀಗೆ ಬಡಬಡಿಸುತ್ತಿರಲು ಅವಿನಾಶಿ

ಯಾದ ಶ್ರೀಕೃಷ್ಣನು ಕುಪಿತನಾಗಿ ಅತ್ಯಂತ ವೇಗದಿಂದ ಛಂಗನೆ ಹಾರಿ ಕಂಸನು ಕುಳಿತಿದ್ದ ಎತ್ತರವಾದ ಮಂಚದ ಮೇಲೆ ನಿಂತುಕೊಂಡನು. ತನಗೆ ಮೃತ್ಯುರೂಪನಾದ ಶ್ರೀಕೃಷ್ಣನು ತನ್ನ ಬಳಿಗೆ ಬಂದಿರುವುದನ್ನು ನೋಡಿದೊಡನೆಯೇ ಮನಸ್ವಿಯಾದ ಕಂಸನು ಥಟ್ಟನೆ ಸಿಂಹಾಸನದಿಂದೆದ್ದು ಕತ್ತಿಯನ್ನು ಒರೆಯಿಂದ ಹೊರತೆಗೆದು ಮತ್ತೊಂದು ಕೈಯ್ಯಲ್ಲಿ ಗುರಾಣಿ ಯನ್ನು ಹಿಡಿದನು. ಕತ್ತಿ-ಗುರಾಣಿಗಳನ್ನು ಹಿಡಿದಿದ್ದ ಕಂಸನು ಶ್ರೀಕೃಷ್ಣನನ್ನು ಸಂಹರಿಸಲು ವರಸೆ-ವರಸೆಯಾಗಿ ಕತ್ತಿಯನ್ನು ಝಳಪಿಸುತ್ತಾ ಹಿಂದಕ್ಕೂ-ಮುಂದಕ್ಕೂ ಹೆಜ್ಜೆಗಳನ್ನಿಡುತ್ತಿದ್ದನು. ಆಕಾಶದಲ್ಲಿರುವ ಗಿಡಗಪಕ್ಷಿಯ ಗಮನದಂತೆ ಕಂಸನು ಕೆಲವು ವೇಳೆ ಬಲಕ್ಕೂ ಕೆಲವು ವೇಳೆ ಎಡಕ್ಕೂ ಹೆಜ್ಜೆಗಳನ್ನಿಡುತ್ತಿದ್ದನು. ಆದರೆ ಯಾರಿಂದಲೂ ಸಹಿಸಲಶಕ್ಯವಾದಷ್ಟು ಭಯಂಕರವಾದ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಶ್ರೀಕೃಷ್ಣನು–ಗರುಡನು ಹಾವನ್ನು ಹಿಡಿಯುವಂತೆ–ಅಷ್ಟೇ ಸುಲಭವಾಗಿ ಖಡ್ಗಪಾಣಿಯಾಗಿದ್ದ ಕಂಸನನ್ನು ಬಲಪೂರ್ವಕವಾಗಿ ಹಿಡಿದುಕೊಂಡನು. ಶ್ರೀಕೃಷ್ಣನು ಕಂಸ ನನ್ನು ಹಿಡಿದುಕೊಂಡೊಡನೆಯೇ ಅವನ ಕಿರೀಟವು ಬಿದ್ದುಹೋಯಿತು.



ಶ್ರೀಕೃಷ್ಣನು ಕಂಸನ ಮುಡಿಯನ್ನು ಹಿಡಿದೆಳೆದು ಎತ್ತರವಾಗಿದ್ದ ಮಂಚದಿಂದ ರಂಗಭೂಮಿಯ ಮೇಲೆ ಬೀಳಿಸಿದನು. ಮರುಕ್ಷಣದಲ್ಲಿಯೇ ವಿಶ್ವಕ್ಕೇ ಪರಮಾಶ್ರಯನಾದ, ಸರ್ವತಂತ್ರಸ್ವತಂತ್ರನಾದ ಪದ್ಮನಾಭಸ್ವಾಮಿಯು ತಾನು ನಿಂತಿದ್ದ ಆ ಮಂಚದ ಮೇಲಿಂದಲೇ ರಂಗಭೂಮಿಯಲ್ಲಿ ಬಿದ್ದಿದ್ದ

ಕಂಸನ ಮೇಲೆ ಥಂಗನೆ ಹಾರಿದನು. ಶ್ರೀಕೃಷ್ಣನು ಕಂಸನ ಮೇಲೆ ಬೀಳುತ್ತಿದ್ದಂತೆಯೇ ಕಂಸನ ಪ್ರಾಣಪಕ್ಷಿಯು ಹಾರಿಹೋಯಿತು. ಸಿಂಹವು ಆನೆಯನ್ನು ಸೆಳೆದಾಡುವಂತೆ ಸರ್ವರೂ ನೋಡುತ್ತಿದ್ದಂತೆಯೇ ಶ್ರೀಕೃಷ್ಣನು ಆ ಕಂಸನ ಮೃತಶರೀರವನ್ನು ಇಲ್ಲಿಂದಲ್ಲಿಗೂ ಅಲ್ಲಿಂದಿಲ್ಲಿಗೂ ಸೆಳೆದಾಡಿದನು. ಆ ಸಮಯದಲ್ಲಿ ಸಾರ್ವಜನಿಕರು ಕೂಗಿಕೊಳ್ಳುತ್ತಿದ್ದ ಹಾಹಾಕಾರವು ('ಅಯ್ಯೋ-ಅಯ್ಯೋ'–ಎಂಬ ಮಹಾಶಬ್ದವು) ಎಲ್ಲ ಕಡೆಗಳಲ್ಲಿಯೂ ಕೇಳಿ ಬರುತ್ತಿದ್ದಿತು. ಶ್ರೀಕೃಷ್ಣನೇ ತನಗೆ ಮೃತ್ಯುವೆಂದು ತಿಳಿದಿತ್ತಾದ್ದರಿಂದ ಕಂಸನು ಅನುದಿನವೂ ಉದ್ವಿಗ್ನನಾಗಿ ಶ್ರೀಕೃಷ್ಣನನ್ನೇ ಚಿಂತಿಸುತ್ತಿದ್ದನು. ಊಟಮಾಡುವಾಗ, ನೀರು ಕುಡಿಯುವಾಗ, ಮಲಗಿದ್ದಾಗ, ತಿರುಗಾಡುವಾಗ, ಮಾತನಾಡುವಾಗ, ಉಸಿರಾಡುವಾಗ ಕೂಡ ತನ್ನ ಮುಂದೆ ಚಕ್ರಪಾಣಿಯಾದ ಶ್ರೀಕೃಷ್ಣನು ನಿಂತಿರುವುದನ್ನೇ ನೋಡುತ್ತಿದ್ದನು. ದ್ವೇಷಭಾವದಿಂದಲೇ ಆದರೂ ನಿತ್ಯ-ನಿರಂತರಚಿಂತನದ ಫಲವಾಗಿ ಕಂಸನು ಪ್ರಾಣಪ್ರಯಾಣಸಮಯದಲ್ಲಿ ಚಕ್ರಪಾಣಿಯಾದ ಅದೇ ಶ್ರೀಕೃಷ್ಣನನ್ನೇ ಸಂದರ್ಶಿಸಿ ಮಹಾಮಹಾತಪಸ್ವಿಗಳಿಗೂ ಮತ್ತು ಯೋಗಿಗಳಿಗೂ ಹೊಂದಲು ಅಸಾಧ್ಯವಾದ ಸಾರೂಪ್ಯಮುಕ್ತಿಯನ್ನೇ ಪಡೆದುಕೊಂಡನು. ಹೀಗೆ ಕಂಸನು ಅಸುನೀಗಿದೊಡನೆಯೇ ಕಂಕ, ನ್ಯಗ್ರೋಧ–ಇವರೇ ಮೊದಲಾದ ಎಂಟು ಮಂದಿ ಕಂಸನ ಸಹೋದರರು ಅತಿಕ್ರುದ್ಧರಾಗಿ ಭ್ರಾತೃಹಂತಕರಿಗೆ ಪ್ರತೀಕಾರಮಾಡಲು ಬಲರಾಮ-ಕೃಷ್ಣರ ಮೇಲೆ ನುಗ್ಗಿಬಂದರು. ಹಾಗೆ ಅತ್ಯಂತರಭಸದಿಂದ ಜೊತೆಗೂಡಿ ಮೇಲೆ ಬೀಳಲು ಬಂದ ಕಂಸನ ಅನುಜರನ್ನು ರೋಹಿಣಿಯ ಮಗನಾದ ಬಲರಾಮನು ಪರಿಘಾಯುಧವನ್ನೆತ್ತಿ– ಸಿಂಹವು ಪಶುಗಳನ್ನು ಕೊಲ್ಲುವಂತೆ ಕ್ಷಣಮಾತ್ರದಲ್ಲಿ ಸಂಹರಿಸಿದನು. ಕಂಸಾಸುರನನ್ನೂ ಮತ್ತು ಅವನ ಅನುಜರನ್ನೂ ಸಂಹರಿಸಿದ ಆ ಸಮಯದಲ್ಲಿ ದೇವದುಂದುಭಿಗಳು ಮೊಳಗಿದುವು. ಭಗವಂತನ ವಿಭೂತಿಪುರುಷರಾದ ಬ್ರಹ್ಮೇಶಾನರೇ ಮೊದಲಾದ ದೇವತೆಗಳು ಆನಂದತುಂದಿಲರಾಗಿ ರಾಮ-ಕೃಷ್ಣರ ಮೇಲೆ ಪುಷ್ಪವೃಷ್ಟಿಯನ್ನು ಸುರಿಸುತ್ತಾ ಅವರನ್ನು ಸ್ತುತಿಸಿದರು. ಅಪ್ಸರಸ್ತ್ರೀಯರು ನೃತ್ಯಮಾಡತೊಡಗಿದರು.

ಪರೀಕ್ಷಿತಮಹಾರಾಜ! ಕಂಸನ ಮತ್ತು ಅವನ ಸಹೋದರರ ಭಾರ್ಯೆಯರು ಮತ್ತು ಅವರ ನಿಕಟಸಂಬಂಧಿಗಳು ಕಂಸನ ಮತ್ತು ಅವನ ಸಹೋದರರ ಮರಣದಿಂದಾಗಿ ಅತಿದುಃಖಿತರಾದರು. ಅವರು ತಮ್ಮ ತಲೆಗಳನ್ನೂ–ಎದೆಗಳನ್ನೂ ಚಚ್ಚಿಕೊಳ್ಳುತ್ತಾ ಕಂಬನಿದುಂಬಿದ ಕಣ್ಣುಗಳಿಂದ ಕೂಡಿದವರಾಗಿ ಅಲ್ಲಿಗೆ ಆಗಮಿಸಿದರು. ವೀರಶಯ್ಯೆಯಲ್ಲಿ ಮಲಗಿದ್ದ ಗಂಡಂದಿರನ್ನು ಆಲಿಂಗಿಸಿಕೊಂಡು ಆ ನಾರಿಯರು ಶೋಕಗ್ರಸ್ತರಾಗಿ ಬಾರಿ-ಬಾರಿಗೂ ಕಣ್ಣೀರುಸುರಿಸುತ್ತಾ ರಾಗರಾಗವಾಗಿ ಅಳುತ್ತಿದ್ದರು.

"ಹೇ ನಾಥನೇ! ಪ್ರಿಯನೇ! ಧರ್ಮಜ್ಞನೇ! ಕರುಣಾಮಯನೇ! ಅನಾಥವತ್ಸಲನೇ! ನೀನು ಮೃತ್ಯುವಶನಾದುದರಿಂದ ನಾವೆಲ್ಲರೂ ಮೃತ್ಯುವಶರಾದಂತೆಯೇ ಸರಿ. ನಮ್ಮ ಮನೆಗಳೂ ಹಾಳಾಗಿಹೋದುವು. ನಮ್ಮ ಸಂತಾನವೂ ಅನಾಥವಾಯಿತು. ಪುರುಷಶ್ರೇಷ್ಠನೇ! ಈ ಪಟ್ಟಣಕ್ಕೆ ನೀನೇ ಸ್ವಾಮಿಯಾಗಿದ್ದೆ. ನಿನ್ನ ವಿರಹದಿಂದಾಗಿ ನಮ್ಮಂತೆಯೇ ಈ ಪಟ್ಟಣವೂ ಶೋಭಿಸುತ್ತಿಲ್ಲ. ಇಲ್ಲಿ ಉತ್ಸವಾದಿಗಳೂ ಮಂಗಳಾರತಿಗಳೂ ನಿಂತು ಹೋಗಿವೆ.

ಅನಾಗಸಾಂ ತ್ವಂ ಭೂತಾನಾಂ ಕೃತವಾನ್ ದ್ರೋಹಮುಲ್ಬಣಮ್ ।
ತೇನೇಮಾಂ ಭೋ ದಶಾಂ ನೀತೋ ಭೂತಧ್ರುಕ್ ಕೋ
ಲಭೇತ ಶಮ್ ॥೪೭॥

ಸ್ವಾಮಿಯೇ! ನಿರಪರಾಧಿಗಳಾದ ಪ್ರಾಣಿಗಳಿಗೆ ನೀನು ಬಹಳ ದ್ರೋಹವೆಸಗಿದೆ. ಆದುದರಿಂದಲೇ ನಿನಗೆ ಇಂತಹ ದುರವಸ್ಥೆಯು ಪ್ರಾಪ್ತವಾಯಿತು. ಪ್ರಾಣಿಗಳಿಗೆ ದ್ರೋಹವೆಸಗಿದ ಯಾವನು ತಾನೇ ಸುಖವನ್ನು ಹೊಂದಿಯಾನು?

ಸರ್ವೇಷಾಮಿಹ ಭೂತಾನಾಮೇಷ ಹಿ ಪ್ರಭವಾಪ್ಯಯಃ ।
ಗೋಪ್ತಾ ಚ ತದವಧ್ಯಾಯೀ ನ ಕ್ವಚಿತ್ ಸುಖಮೇಧತೇ ॥೪೮॥

ಪ್ರಪಂಚದಲ್ಲಿರುವ ಸಮಸ್ತಪ್ರಾಣಿಗಳ ಉತ್ಪತ್ತಿಗೂ ಮತ್ತು ಲಯಕ್ಕೂ ಈ ಶ್ರೀಕೃಷ್ಣನೇ ಕಾರಣನಾಗಿದ್ದಾನೆ. ಸಮಸ್ತಪ್ರಾಣಿಗಳ ಸಂರಕ್ಷಕನೂ ಇವನೇ ಆಗಿದ್ದಾನೆ. ಅಂತಹವನಿಗೆ ಕೇಡನ್ನು ಬಯಸುವ ಯಾವನೂ ಸುಖಿಯಾಗಿರುವುದಿಲ್ಲ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಸಮಸ್ತಲೋಕಗಳಿಗೂ ಜೀವನದಾತೃವಾದ ಭಗವಂತನು ರಾಜಮಹಿಷಿಯರನ್ನು ಯಥಾಯೋಗ್ಯವಾಗಿ ಸಂತೈಸಿ ಲೌಕಿಕ ವಾದ ರೀತಿಯಲ್ಲಿ ಮರಣಹೊಂದಿದವರಿಗೆ ಯಾವ ಕರ್ಮಗಳು ವಿಹಿತ ವಾಗಿರುವುವೋ ಅಂತಹ ಅಪರಕರ್ಮಗಳನ್ನು ಕಂಸಾದಿಗಳಿಗೂ ಮಾಡಿಸಿದನು.

ಬಳಿಕ ತಂದೆ-ತಾಯಿಗಳಿಬ್ಬರನ್ನೂ ಸೆರೆಮನೆಯಿಂದ ಬಿಡಿಸಿ ರಾಮ-ಕೃಷ್ಣರಿಬ್ಬರೂ ತಮ್ಮ ತಲೆಗಳಿಂದ ಅವರ ಕಾಲುಗಳನ್ನು ಸ್ಪರ್ಶಿಸಿ ನಮಸ್ಕರಿಸಿದರು. ತಮ್ಮ ಮಕ್ಕಳಾದ ಬಲರಾಮ-ಕೃಷ್ಣರು ತಮಗೆ ಕಾಲುಮುಟ್ಟಿ ನಮಸ್ಕರಿಸಿದರೂ ದೇವಕೀ-ವಸುದೇವರು–ಅವರು ಜಗದೀಶ್ವರರೆಂಬ ಭಾವನೆಯಿಂದ ಮಕ್ಕಳನ್ನು ಬಾಚಿ ತಬ್ಬಿಕೊಳ್ಳಲಿಲ್ಲ. ಜಗದೀಶ್ವರರು ತಮ್ಮ ಪುತ್ರರು ಹೇಗಾದಾರೆಂಬ ಸಂದೇಹವೇ ಅವರು ಆಲಿಂಗಿಸಿಕೊಳ್ಳದೇ ಇರುವುದಕ್ಕೆ ಕಾರಣವಾಗಿದ್ದಿತು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೪೪ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೪೫ನೆಯ ಅಧ್ಯಾಯ

ಬಲರಾಮ-ಕೃಷ್ಣರ ಉಪನಯನ ಮತ್ತು ಗುರುಕುಲಪ್ರವೇಶ

ಶ್ರೀಶುಕಮುನಿಗಳು ಹೇಳುತ್ತಾರೆ :

ಪಿತರಾವುಪಲಬ್ಧಾರ್ಥೌ ವಿದಿತ್ವಾ ಪುರುಷೋತ್ತಮಃ ।
ಮಾ ಭೂದಿತಿ ನಿಜಾಂ ಮಾಯಾಂ ತತಾನ ಜನಮೋಹಿನೀಮ್ ॥೧॥

ಜನಮೇಜಯಮಹಾರಾಜ! ತನ್ನನ್ನು ಭಗವದ್ಭಾವನೆಯಿಂದ ತನ್ನ ತಾಯಿ-ತಂದೆಗಳು ನೋಡುತ್ತಿದ್ದಾರೆಂಬುದನ್ನು ಭಗವಂತನಾದ ಶ್ರೀಕೃಷ್ಣನು ತಿಳಿದುಕೊಂಡನು. ದೇವಕೀ-ವಸುದೇವರು ಹಾಗೆ ತನ್ನನ್ನು ಭಗವಂತನೆಂದು ಭಾವಿಸುವುದು ಕೃಷ್ಣನಿಗೆ ಸಮುಚಿತವಾಗಿ ಕಾಣಲಿಲ್ಲ. ಹಾಗೆ ಭಾವಿಸಿಬಿಟ್ಟರೆ ಪುತ್ರಸ್ನೇಹದ ಸುಖವೇ ದೇವಕೀ-ವಸುದೇವರಿಗೆ ಲಭಿಸುವುದಿಲ್ಲವೆಂದು

ಶ್ರೀಕೃಷ್ಣನು ಬಗೆದನು. ಹಾಗಾಗಬಾರದೆಂದು ಭಾವಿಸಿ ಜನರನ್ನು ವಿಮೋಹ ಗೊಳಿಸುವ ತನ್ನ ಮಾಯಾಜಾಲವನ್ನು ಅವರ ಮೇಲೆ ಬೀಸಿದನು.

ಬಳಿಕ ಮಾಯಾತೀತನಾದ ಸಾತ್ವತಶ್ರೇಷ್ಠನಾದ ಶ್ರೀಕೃಷ್ಣನು ಬಲ ರಾಮನೊಡನೆ ತನ್ನ ತಂದೆ-ತಾಯಿಗಳ ಬಳಿಗೆ ಹೋಗಿ ಆದರಪೂರ್ವಕ ವಾಗಿಯೂ ವಿನಯಪೂರ್ವಕವಾಗಿಯೂ ಅವರಿಗೆ ನಮಸ್ಕರಿಸಿ–'ಅಮ್ಮ!' 'ಅಪ್ಪಾ!'–ಎಂದೆನ್ನುತ್ತಾ ಅವರೊಡನೆ ಮಾತನಾಡತೊಡಗಿದನು.

ನಾಸ್ಮತ್ತೋ ಯುವಯೋಸ್ತಾತ ನಿತ್ಯೋತ್ಕಣ್ಠಿತಯೋರಪಿ ।
ಬಾಲ್ಯಪೌಗಣ್ಡಕೈಶೋರಾಃ ಪುತ್ರಾಭ್ಯಾಮಭವನ್ ಕ್ವಚಿತ್ ॥೩॥

"ಅಮ್ಮ! ಅಪ್ಪ! ನಾವಿಬ್ಬರೂ ನಿಮ್ಮ ಮಕ್ಕಳಾಗಿದ್ದೇವೆ. ನೀವು ನಮ್ಮನ್ನು ನೋಡಲು ಸದಾ ಔತ್ಸುಕ್ಯವುಳ್ಳವರಾಗಿದ್ದರೂ ನಮ್ಮ ಬಾಲ್ಯ-ಪೌಗಂಡ-ಕೈಶೋರಾವಸ್ಥೆಗಳ ದರ್ಶನಸುಖವನ್ನು ನಾವು ನಿಮಗೆ ಕೊಡಲಾಗ ಲಿಲ್ಲ. ಆ ಅವಸ್ಥೆಯಲ್ಲಿ ನೀವು ನಮ್ಮನ್ನು ಒಮ್ಮೆ ಕೂಡ ನೋಡಲು ಸಾಧ್ಯ ವಾಗಲಿಲ್ಲ.



ನ ಲಬ್ಧೋ ದೈವಹತಯೋರ್ವಾಸೋ ನೌ ಭವದನ್ತಿಕೇ ।
ಯಾಂ ಬಾಲಾಃ ಪಿತೃಗೇಹಸ್ಥಾ ವಿನ್ದನ್ತೇ ಲಾಲಿತಾ ಮುದಮ್ ॥೪॥

ದುರ್ದೈವವಶದಿಂದ ನಿಮ್ಮ ಜೊತೆಯಲ್ಲಿರುವ ಸೌಭಾಗ್ಯವು ನಮಗೆ ಲಭಿಸಲಿಲ್ಲ. ಈ ಕಾರಣದಿಂದಾಗಿ ಬಾಲಕರು ತಂದೆ-ತಾಯಿಗಳ ಬಳಿ ಇರುತ್ತಾ

ಯಾವ ಲಾಲನೆ-ಪೋಷಣೆಗಳ ಸುಖವನ್ನು ಅನುಭವಿಸುವರೋ ಅಂತಹ ಸುಖವೂ ನಮಗಿಲ್ಲವಾಯಿತು.

ಸರ್ವಾರ್ಥಸಂಭವೋ ದೇಹೋ ಜನಿತಃ ಪೋಷಿತೋ ಯತಃ।
ನ ತಯೋರ್ಯಾತಿ ನಿರ್ವೇಶಂ ಪಿತ್ರೋರ್ಮರ್ತ್ಯಃ ಶತಾಯುಷಾ ॥೫॥

ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ಸಕಲಪುರುಷಾರ್ಥಗಳಿಗೂ ಸಾಧನಭೂತವಾದ ಈ ದೇಹವು ಯಾರಿಂದ ಹುಟ್ಟಿತೋ ಮತ್ತು ಪೋಷಿಸಲ್ಪಟ್ಟಿತೋ ಅಂತಹ ತಂದೆ-ತಾಯಿಗಳಿಬ್ಬರ ಋಣವನ್ನು ನೂರು ವರ್ಷಗಳ ಸೇವೆಯಿಂದಲೂ ಮನುಷ್ಯನಾದವನು ತೀರಿಸುವುದಕ್ಕಾಗುವುದಿಲ್ಲ.

ಯಸ್ತಯೋರಾತ್ಮಜಃ ಕಲ್ಪ ಆತ್ಮನಾ ಚ ಧನೇನ ಚ ।
ವೃತ್ತಿಂ ನ ದದ್ಯಾತ್ತಂ ಪ್ರೇತ್ಯ ಸ್ವಮಾಂಸಂ ಖಾದಯನ್ತಿ ಹಿ ॥೬॥

ಯಾವ ಪುತ್ರನು ಸಮರ್ಥನಾಗಿದ್ದರೂ ತನ್ನ ತಂದೆ-ತಾಯಿಗಳಿಗೆ ದೇಹವನ್ನು ದಂಡಿಸಿ ಸೇವೆಮಾಡುವುದರಿಂದಲೂ ಧನಾದಿಗಳ ಪ್ರದಾನದಿಂದಲೂ ಸುಖಜೀವನವನ್ನು ಕಲ್ಪಿಸುವುದಿಲ್ಲವೋ ಅಂತಹ ದುಷ್ಪುತ್ರನಿಗೆ ಯಮಕಿಂಕರರು ಅವಸಾನಾನಂತರದಲ್ಲಿ ಅವನ ಮಾಂಸವನ್ನೇ ತಿನ್ನಿಸುತ್ತಾರೆ.

ಮಾತರಂ ಪಿತರಂ ವೃದ್ಧಂ ಭಾರ್ಯಾಂ ಸಾಧ್ವೀಂ ಸುತಂ ಶಿಶುಮ್ ।
ಗುರುಂ ವಿಪ್ರಂ ಪ್ರಪನ್ನಂ ಚ ಕಲ್ಪೋಽಬಿಭ್ರಚ್ಛ್ವಸನ್ ಮೃತಃ ॥೭॥

ಯಾವ ಪುರುಷನು ಸಮರ್ಥನಾಗಿದ್ದರೂ ವೃದ್ಧರಾದ ತಂದೆ-ತಾಯಿಗಳನ್ನೂ, ಸಾಧ್ವಿಯಾದ ಪತ್ನಿಯನ್ನೂ, ಬಾಲಕನನ್ನೂ, ಎಳೆಮಗುವನ್ನೂ, ಗುರುವನ್ನೂ, ಬ್ರಾಹ್ಮಣನನ್ನೂ, ಶರಣಾಗತನನ್ನೂ ರಕ್ಷಿಸಿ-ಪೋಷಿಸುವುದಿಲ್ಲವೋ ಅಂತಹವನು ಬದುಕಿದ್ದರೂ ಸತ್ತವನಂತೆಯೇ ಸರಿ.

ತನ್ನಾವಕಲ್ಪಯೋಃ ಕಂಸಾನ್ನಿತ್ಯಮುದ್ವಿಗ್ನಚೇತಸೋಃ ।
ಮೋಘಮೇತೇ ವ್ಯತಿಕ್ರಾನ್ತಾ ದಿವಸಾ ವಾಮನರ್ಚತೋಃ ॥೮॥

ಕಂಸನ ಭಯದಿಂದಾಗಿ ಸದಾ ಉದ್ವಿಗ್ನವಾದ ಮನಸ್ಸಿನಿಂದ ಕೂಡಿದ್ದ ನಾವು ನಿಮ್ಮ ಸೇವೆಮಾಡಲು ಸಮರ್ಥರಾಗಲಿಲ್ಲ. ಈ ಕಾರಣದಿಂದಲೇ ಇಷ್ಟು ದಿವಸಗಳೂ ತಮ್ಮ ಸೇವೆಯನ್ನು ಮಾಡಲಾಗದೇ ವ್ಯರ್ಥವಾಗಿ ಕಳೆದುಹೋದುವು.

ತತ್ ಕ್ಷನ್ತುಮರ್ಹಥಸ್ತಾತ ಮಾತರ್ನೌ ಪರತನ್ತ್ರಯೋಃ ।
ಅಕುರ್ವತೋರ್ವಾಂ ಶುಶ್ರೂಷಾಂ ಕ್ಲಿಷ್ಟಯೋರ್ದುರ್ಹೃದಾ
ಭೃಶಮ್ ॥೯॥

ಜನನೀ-ಜನಕರೇ! ಅಸ್ವತಂತ್ರರಾಗಿ ದುಷ್ಟನಾದ ಕಂಸನಿಂದ ಬಹಳ ವಾಗಿ ಕ್ಲೇಶಗೊಳಿಸಲ್ಪಡುತ್ತಿದ್ದ ನಿಮ್ಮ ಸೇವೆಯನ್ನು ಇಷ್ಟು ದಿವಸಗಳು ಮಾಡದೇ ಇದ್ದುದಕ್ಕಾಗಿ ನಮ್ಮನ್ನು ದಯಮಾಡಿ ಕ್ಷಮಿಸಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ತನ್ನ ಮಾಯಾಮಯವಾದ ಲೀಲೆಯಿಂದ ಮನುಷ್ಯನಾಗಿಬಿಟ್ಟಿದ್ದ ವಿಶ್ವಾತ್ಮನಾದ ಶ್ರೀಹರಿಯ ಈ ಮಾತುಗಳಿಂದ ವಿಮೋಹಿತರಾದ ದೇವಕೀ-ವಸುದೇವರು ರಾಮ-ಕೃಷ್ಣರನ್ನು ತಮ್ಮ ನಿಜವಾದ ಮಕ್ಕಳೆಂದೇ ಭಾವಿಸುತ್ತಾ ಅವರನ್ನು ತೊಡೆಯ ಮೇಲೆ ಮಲಗಿಸಿ ಕೊಂಡು ಗಾಢವಾಗಿ ಅಪ್ಪಿಕೊಂಡು ಪರಮಾನಂದವನ್ನು ಹೊಂದಿದರು. ಸ್ನೇಹಪಾಶದಿಂದ ನಿಬದ್ಧರಾಗಿದ್ದ ದೇವಕೀ-ವಸುದೇವರು ಧಾರಾಕಾರವಾಗಿ ಸುರಿಯುತ್ತಿದ್ದ ಆನಂದಬಾಷ್ಪಗಳಿಂದಲೇ ಇಬ್ಬರು ಮಕ್ಕಳನ್ನೂ ಅಭಿಷೇಚಿಸಿ ದರು. ವಿಮೋಹಿತರಾಗಿದ್ದ, ಕಣ್ಣೀರಿನ ಸುರಿಸುವಿಕೆಯಿಂದ ಗದ್ಗದಕಂಠರಾಗಿದ್ದ ವಸುದೇವ-ದೇವಕಿಯರು ಯಾವ ಮಾತನ್ನೂ ಆಡಲಿಲ್ಲ. ಆನಂದದ ಕಣ್ಣೀರು ಉಕ್ಕಿಬರುತ್ತಿದ್ದು ಅವರಿಗೆ ಮಾತನಾಡಲು ಸಾಧ್ಯವಾಗಲೇ ಇಲ್ಲ.

ಪರೀಕ್ಷಿತ! ಭಗವಂತನಾದ, ದೇವಕಿಯ ಮಗನಾದ ಶ್ರೀಕೃಷ್ಣನು ತಂದೆ-ತಾಯಿಗಳನ್ನು ಹೀಗೆ ಸವಿಮಾತುಗಳಿಂದ ಸಂತೈಸಿ ಮಾತಾಮಹನಾದ (ತಾಯಿಯ ತಂದೆ) ಉಗ್ರಸೇನನನ್ನು ಯಾದವರಿಗೆ ರಾಜನನ್ನಾಗಿ ಮಾಡಿ ಹೇಳಿದನು :

"ಮಹಾರಾಜ! ನಾವು ನಿನ್ನ ಪ್ರಜೆಗಳಾಗಿದ್ದೇವೆ. ನೀನು ನಮಗೆ ಯಾವ ಕಾರ್ಯ ಮಾಡಬೇಕೆಂಬುದನ್ನು ಆಜ್ಞಾಪಿಸು. ನಿನ್ನ ಆಜ್ಞೆಯನ್ನು ಶಿರಸಾವಹಿಸಿ ನಡೆಸಿಕೊಡುತ್ತೇವೆ. ಯಯಾತಿಯ ಶಾಪದ ಕಾರಣದಿಂದಾಗಿ ಯದುವಂಶೀಯರು ರಾಜಸಿಂಹಾಸನದಲ್ಲಿ ಕುಳಿತುಕೊಳ್ಳಬಾರದು.

(ಆದರೂ ನನ್ನ ಇಚ್ಛೆಯಂತೆ ನಿನ್ನನ್ನು ರಾಜನನ್ನಾಗಿ ಮಾಡುತ್ತಿದ್ದೇನೆ. ಇದರಿಂದ ನೀನು ಯಾದವನಾದರೂ ನಿನಗೆ ದೋಷವುಂಟಾಗುವುದಿಲ್ಲ.)*

ಮಯಿ ಭೃತ್ಯ ಉಪಾಸೀನೇ ಭವತೋ ವಿಬುಧಾದಯಃ ।
ಬಲಿಂ ಹರನ್ತ್ಯವನತಾಃ ಕಿಮುತಾನ್ಯೇ ನರಾಧಿಪಾಃ ॥೧೪॥



ಉಗ್ರಸೇನಮಹಾರಾಜ! ನಾನೇ ನಿನ್ನ ಭೃತ್ಯನಾಗಿ ಸೇವೆಯನ್ನು ಸಲ್ಲಿಸುತ್ತಿರುವಾಗ ದೊಡ್ಡ-ದೊಡ್ಡ ದೇವತೆಗಳೂ ತಲೆಗಳನ್ನು ತಗ್ಗಿಸಿಕೊಂಡು ನಿನಗೆ ಕಪ್ಪ-ಕಾಣಿಕೆಗಳನ್ನು ಒಪ್ಪಿಸುತ್ತಾರೆಂದಮೇಲೆ ಉಳಿದ ರಾಜರ ವಿಷಯವಾಗಿ ಹೇಳುವುದೇನಿದೆ?"–ಹೀಗೆ ಶ್ರೀಕೃಷ್ಣನು ಉಗ್ರಸೇನ ಮಹಾರಾಜನಿಗೆ ತನ್ನ ಸಂಪೂರ್ಣವಾದ ಬೆಂಬಲವನ್ನಿತ್ತನು.

ಮಹಾರಾಜ! ಕಂಸನ ಭಯದಿಂದಾಗಿ ಯದು-ವೃಷ್ಣಿ-ಅಂಧಕ-ಮಧು-ದಾಶಾರ್ಹ-ಕುಕುರ–ಇವೇ ಮುಂತಾದ ವಂಶೀಯರು ದೇಶವನ್ನೇ ಬಿಟ್ಟು ಓಡಿಹೋಗಿದ್ದರು. ವಿಶ್ವವನ್ನೇ ಸೃಷ್ಟಿಸಿದ ಶ್ರೀಕೃಷ್ಣನು ದಿಕ್ಕಾಪಾಲಾಗಿ ಹೊರಟುಹೋಗಿದ್ದ ಮತ್ತು ನಾನಾವಿಧವಾದ ಕಷ್ಟಗಳಿಗೆ ಒಳಗಾಗಿ ಸಂಕಟಪಡುತ್ತಿದ್ದ ಅವರೆಲ್ಲರನ್ನೂ ಹುಡುಕಿಸಿ, ಹಿಂದಕ್ಕೆ ಕರೆತಂದು ಅವರೆಲ್ಲರನ್ನೂ ಧನಸಂಪತ್ತಿಗಳಿಂದ ಸಂತೃಪ್ತಗೊಳಿಸಿ ಸಮಾಧಾನಗೊಳಿಸಿ, ಅವರು ಪುನಃ ತಮ್ಮ-ತಮ್ಮ ಮನೆಗಳಲ್ಲಿ ನಿಶ್ಚಿಂತರಾಗಿ ವಾಸಮಾಡುವಂತೆ ವ್ಯವಸ್ಥೆ

* ತವ ತು ಯಾದವತ್ವೇಪಿ ಮಮಾಜ್ಞಯಾ ನ ದೋಷ ಇತಿ ಭಾವಃ

(ಭಾವಾರ್ಥದೀಪಿಕೆ)

ಮಾಡಿದನು. ಹೀಗೆ ಶ್ರೀಕೃಷ್ಣ-ಬಲರಾಮರ ಭುಜಬಲದಿಂದ ರಕ್ಷಿಸಲ್ಪಡು ತ್ತಿದ್ದ ಸಮಸ್ತಯಾದವರೂ ತಮ್ಮ ಸಮಸ್ತವಾದ ಮನೋರಥಗಳನ್ನೂ ಈಡೇರಿಸಿಕೊಂಡರು. ಕೃಷ್ಣ-ಬಲರಾಮರ ಕೃಪೆಯಿಂದಾಗಿ ಯಾದವರಿಗೆ ಯಾವುದೇ ವಿಧವಾದ ದುಃಖವಾಗಲೀ, ವ್ಯಥೆಯಾಗಲೀ ಇರಲಿಲ್ಲ. ಕೃತಾರ್ಥ ರಾದ ಅವರು ತಮ್ಮ-ತಮ್ಮ ಮನೆಗಳಲ್ಲಿ ಆನಂದಿಸುತ್ತಿದ್ದರು. ಶ್ರೀಮುಕುಂದನ ಮುಖಕಮಲವು ನಿತ್ಯವೂ ವಿಕಸಿತವಾಗಿಯೇ ಇರುತ್ತಿದ್ದಿತು. ಆನಂದಯುಕ್ತ ವಾಗಿಯೇ ಇರುತ್ತಿದ್ದಿತು. ದಯೆ, ಮಂದಹಾಸ ಮತ್ತು ಕುಡಿನೋಟಗಳು ಮುಕುಂದನ ವದನಾಂಬುಜದ ಮೇಲೆ ಸದಾ ನೃತ್ಯವಾಡುತ್ತಿದ್ದುವು. ಇಂತಹ ಚೆಲುವಿನ ಖನಿಯಾದ ದಿವ್ಯಮುಖಾರವಿಂದವನ್ನು ಪ್ರತಿನಿತ್ಯವೂ ನೋಡುತ್ತಾ ಯಾದವರು ಪರಮಪ್ರೀತರಾಗಿ ಆನಂದತುಂದಿಲರಾಗುತ್ತಿದ್ದರು.

ತತ್ರ ಪ್ರವಯಸೋಽಪ್ಯಾಸನ್ ಯುವಾನೋಽತಿಬಲೌಜಸಃ ।
ಪಿಬನ್ತೋಽಕ್ಷೈರ್ಮುಕುನ್ದಸ್ಯ ಮುಖಾಮ್ಬುಜಸುಧಾಂ ಮುಹುಃ ॥

ಪರೀಕ್ಷಿತಮಹಾರಾಜ! ವಿಕಸಿತವಾದ ಕಣ್ಣುಗಳಿಂದ ಮುಕುಂದನ ಮುಖಕಮಲದ ಸುಧೆಯನ್ನು ಬಾರಿ-ಬಾರಿಗೂ ಪಾನಮಾಡುತ್ತಿದ್ದ ಮಥುರಾ ಪಟ್ಟಣನಿವಾಸಿಗಳಾದ ವೃದ್ಧರೂ ಅತಿಬಲದಿಂದಲೂ ಓಜಸ್ಸಿನಿಂದಲೂ ಕೂಡಿದ ಯುವಕರಾಗಿಬಿಟ್ಟರು. ಉಗ್ರಸೇನನನ್ನು ಮಥುರಾಪಟ್ಟಣಕ್ಕೆ ರಾಜನನ್ನಾಗಿ ಮಾಡಿ, ಕಂಸನ ಭಯದಿಂದ ಪರದೇಶಗಳಿಗೆ ಹೋಗಿದ್ದ ನಿರಾಶ್ರಿತರನ್ನು ಕರೆತಂದು ಅವರ ಅಶನ-ವಸತಿಗಳಿಗೆ ವ್ಯವಸ್ಥೆಮಾಡಿದ ನಂತರ ಶ್ರೀಕೃಷ್ಣ-ಬಲರಾಮರು ನಂದಗೋಪನ ಬಳಿಗೆ ಬಂದು ಅವನನ್ನು ಗಾಢವಾಗಿ ಆಲಿಂಗಿಸಿಕೊಂಡು ಈ ಮಾತನ್ನು ಹೇಳಿದರು :

“ಮಾತಾ-ಪಿತೃಗಳೇ! ಪ್ರೇಮಹೃದಯರಾದ ನೀವಿಬ್ಬರೂ ನಮ್ಮನ್ನು ಅಕ್ಕರೆಯಿಂದ ಲಾಲಿಸಿ-ಪೋಷಿಸಿರುವಿರಿ. **ಪಿತ್ರೋರಭ್ಯಧಿಕಾ ಪ್ರೀತಿರಾತ್ಮ-ಜೇಷ್ವಾತ್ಮನೋಽಪಿ ಹಿ ।** ತಂದೆ-ತಾಯಿಗಳಿಗೆ ತಮ್ಮ ಪ್ರಾಣಗಳಿಗಿಂತಲೂ ತಮ್ಮ ಮಕ್ಕಳ ಮೇಲೆ ಅಧಿಕವಾದ ಪ್ರೀತಿಯಿರುತ್ತದೆ.


ಸ ಪಿತಾ ಸಾ ಚ ಜನನೀ ಯೌ ಪುಷ್ಣೀತಾಂ ಸ್ವಪುತ್ರವತ್ ।
ಶಿಶೂನ್ ಬನ್ಧುಭಿರುತ್ಸೃಷ್ಟಾನಕಲ್ಪೈಃ ಪೋಷರಕ್ಷಣೇ ॥೨೨॥

ಪಾಲನ-ರಕ್ಷಣೆಗಳಲ್ಲಿ ಅಸಮರ್ಥರಾದ ಬಂಧುಗಳಿಂದ ಪರಿತ್ಯಜಿಸಲ್ಪಟ್ಟ ಮಕ್ಕಳನ್ನು ತಮ್ಮ ಮಕ್ಕಳೆಂದೇ ಭಾವಿಸಿ ರಕ್ಷಿಸುವವರೇ ನಿಜವಾದ ತಾಯಿ-ತಂದೆಗಳು.

ಅಪ್ಪ! ನೀವೆಲ್ಲರೂ ಗೋಕುಲಕ್ಕೆ ಹೋಗಿರಿ. ಇಲ್ಲಿರುವ ನಮ್ಮ ಸುಹೃದರೆಲ್ಲ ರೂ ಸುಖವಾಗಿರುವಂತೆ ವ್ಯವಸ್ಥೆ ಮಾಡಿ, ಸ್ನೇಹಪಾಶದಿಂದುಂಧಿಸಲ್ಪಟ್ಟು ನಮ್ಮಿಂದ ದೂರ ಉಳಿದು ಅತಿದುಃಖಿತರಾಗುವ ಜ್ಞಾತಿ-ಬಾಂಧವರಾದ ನಿಮ್ಮನ್ನು ಕಾಣಲು ಸಾಧ್ಯವಾದಷ್ಟು ಬೇಗ ಬಂದುಬಿಡುತ್ತೇವೆ."

ಭಗವಾನ್ ಶ್ರೀಕೃಷ್ಣನು ನಂದಗೋಪನನ್ನೂ ಮತ್ತು ಇತರ ವ್ರಜವಾಸಿಗಳನ್ನೂ ಈ ಪರಿಯಾಗಿ ಸಂತೈಸಿ ಅತ್ಯಂತ ಪ್ರೀತ್ಯಾದರಗಳಿಂದ ಅವರಿಗೆ ವಸ್ತ್ರಾಭರಣಗಳನ್ನೂ, ಪಾತ್ರೆಗಳನ್ನೂ ಕೊಟ್ಟು ಅವರನ್ನು ಯಥೋಚಿತವಾಗಿ ಸತ್ಕರಿಸಿದನು.

ಭಗವಂತನಾದ ಶ್ರೀಕೃಷ್ಣನ ಸಾಂತ್ವನದ ಮಾತುಗಳನ್ನು ಕೇಳಿ ಸ್ನೇಹದ ಕಾರಣದಿಂದ ಆತಂಕಗೊಂಡಿದ್ದ ನಂದಗೋಪನು ಕಣ್ಣೀರುಸುರಿಸುತ್ತಾ ಗೋಪಾಲರೊಡನೆ ಗೋಕುಲಕ್ಕೆ ಪ್ರಯಾಣಮಾಡಿದನು.



ಪರೀಕ್ಷಿತಮಹಾರಾಜ! ಅನಂತರದಲ್ಲಿ ಶೂರನ ಮಗನಾದ ವಸುದೇವನು ಕುಲಪುರೋಹಿತರಾದ ಗರ್ಗಾಚಾರ್ಯರಿಂದಲೂ ಇತರ ಬ್ರಾಹ್ಮಣರಿಂದಲೂ ತನ್ನ ಮಕ್ಕಳಾದ ಬಲರಾಮ-ಕೃಷ್ಣರಿಗೆ ದ್ವಿಜಾತಿಗೆ ಸಮುಚಿತವಾದ ಉಪನಯನಕರ್ಮವನ್ನು ಮಾಡಿಸಿದನು. ಉಪನಯನಕರ್ಮವನ್ನು ಸಂಪನ್ನಗೊಳಿಸಿದ ಗರ್ಗಾಚಾರ್ಯರನ್ನೂ ಮತ್ತು ಇತರ ಬ್ರಾಹ್ಮಣರನ್ನೂ

ವಸುದೇವನು ವಸ್ತ್ರಾದಿಗಳಿಂದಲೂ, ಆಭರಣಗಳಿಂದಲೂ, ದಕ್ಷಿಣೆಗಳಿಂದಲೂ ಸತ್ಕರಿಸಿದನು. ವಸ್ತ್ರಾಭರಣಗಳಿಂದ ಸಮಲಂಕೃತರಾದ ಗರ್ಗಪುರಃಸರರಾದ ಬ್ರಾಹ್ಮಣರಿಗೆ ಸುವರ್ಣಮಾಲೆಗಳಿಂದಲೂ, ರೇಷ್ಮೆಯ ವಸ್ತ್ರಗಳಿಂದಲೂ ಅಲಂಕರಿಸಲ್ಪಟ್ಟ, ಕರುಗಳಿಂದ ಕೂಡಿದ ಗೋವುಗಳನ್ನು ಅಪಾರಸಂಖ್ಯೆಯಲ್ಲಿ ದಾನಮಾಡಿದನು. ಬ್ರಾಹ್ಮಣಕಂಟಕನಾಗಿದ್ದ ಕಂಸನು ಬ್ರಾಹ್ಮಣರಲ್ಲಿದ್ದ ಗೋವುಗಳೆಲ್ಲವನ್ನೂ ಅಪಹರಿಸಿಬಿಟ್ಟಿದ್ದನು. ಇದನ್ನು ತಿಳಿದಿದ್ದ ಮಹಾ ಮತಿಯಾದ ವಸುದೇವನು ಬಲರಾಮ-ಕೃಷ್ಣರ ಜನ್ಮನಕ್ಷತ್ರದಂದು ಅವರ ಶ್ರೇಯಸ್ಸಿಗಾಗಿ ಮನಸ್ಸಿನಿಂದ ಮಾತ್ರವೇ ದಾನಮಾಡಿದ್ದ ಗೋವುಗಳನ್ನು ಕಂಸನ ಮೂಲಕವಾಗಿ ಗೋವುಗಳನ್ನು ಕಳೆದುಕೊಂಡಿದ್ದ ಬ್ರಾಹ್ಮಣರಿಗೆ ನಿಜರೂಪದಲ್ಲಿ ದಾನಮಾಡಿದನು. ಹೀಗೆ ಯದುವಂಶಕ್ಕೆ ಆಚಾರ್ಯರಾದ ಗರ್ಗಮುನಿಗಳಿಂದ ರಾಮ-ಕೃಷ್ಣರು ಉಪನಯನ ಸಂಸ್ಕಾರವನ್ನು ಹೊಂದಿ ದ್ವಿಜತ್ವವನ್ನು ಪಡೆದುಕೊಂಡರು. ಆಗ ಅವರು ಬ್ರಹ್ಮಚರ್ಯವ್ರತನಿಷ್ಠರಾಗಿದ್ದು ಗಾಯತ್ರೀಮಂತ್ರಪುನಶ್ಚರಣೆಯ ವ್ರತವನ್ನು ಕೈಗೊಂಡರು.

ಸಮಸ್ತವಿದ್ಯೆಗಳಿಗೂ ಉತ್ಪತ್ತಿಸ್ಥಾನರೂಪರಾದ, ಸರ್ವಜ್ಞರಾದ, ಜಗತ್ತಿಗೇ ಈಶ್ವರರಾದ ಬಲರಾಮ-ಕೃಷ್ಣರು ತಮ್ಮ ಮಾನುಷಲೀಲೆಗಳಿಂದ ಸ್ವತಃಸಿದ್ಧವಾದ ಶುದ್ಧಜ್ಞಾನವನ್ನು ಮರೆಸಿಕೊಂಡಿದ್ದರು. ಸಮಸ್ತವಿದ್ಯೆಗಳಿಗೂ ಸಾಗರಪ್ರಾಯರಾಗಿದ್ದರೂ ಕೂಡ ಬಲರಾಮ-ಕೃಷ್ಣರು ಗುರುಕುಲದಲ್ಲಿ ವಿದ್ಯಾಭ್ಯಾಸವನ್ನು ಮಾಡಬೇಕೆಂಬ ಆಶಯದಿಂದ ಅವಂತೀಪುರದಲ್ಲಿ (ಉಜ್ಜಯಿನಿಯಲ್ಲಿ) ವಾಸಿಸುತ್ತಿದ್ದ ಕಾಶ್ಯಪಗೋತ್ರೀಯನಾದ ಸಂದೀಪನೀ ಮುನಿಯ ಬಳಿಗೆ ಹೋದರು.* ನಿಯಮಪೂರ್ವಕವಾಗಿ ಬ್ರಹ್ಮಚರ್ಯ ವ್ರತದಲ್ಲಿದ್ದು ಗುರುವಿನಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದ ರಾಮ-ಕೃಷ್ಣರು ಬಹಿರಿಂದ್ರಿಯಗಳನ್ನು ನಿಗ್ರಹಿಸಿದ್ದರು. ಗುರುಗಳ ವಿಷಯದಲ್ಲಿ ನಿರ್ದುಷ್ಟ

---

* ಕಾಶ್ಯಂ–ಕಶಗೋತ್ರಜಂ–ಕಶವೆಂಬ ಗೋತ್ರದಲ್ಲಿ ಹುಟ್ಟಿದವನು.

(ಬಾಲಬೋಧಿನಿ)

ಕಾಶ್ಯಂ–ಕಶ್ಯಪ ಗೋತ್ರಜಂ–ಕಶ್ಯಪಗೋತ್ರದಲ್ಲಿ ಹುಟ್ಟಿದವನು.

(ವಿಜಯಧ್ವಜೀಯ)

ಕಾಶ್ಯಂ–ಕಾಶ್ಯಾಂ ಜಾತಂ–ಕಾಶಿಯಲ್ಲಿ ಹುಟ್ಟಿದವನು. (ತೋಷಣೀ)

ವಾದ ವ್ಯವಹಾರವುಳ್ಳವರಾಗಿದ್ದರು. ಗುರುಗಳಿಗೆ ಹೇಗೆ ಸೇವೆಮಾಡ ಬೇಕೆನ್ನುವ ಆದರ್ಶವನ್ನು ಲೋಕಕ್ಕೆ ತೋರಿಸಿಕೊಡುತ್ತಾ ಬಲರಾಮ-ಕೃಷ್ಣರು ಗುರುಗಳನ್ನು ಇಷ್ಟದೇವತೆಯೆಂದೇ ಭಾವಿಸಿ ಭಕ್ತಿಪೂರ್ವಕವಾಗಿ ಸ್ವಲ್ಪವಾದರೂ ಅಲಸಿಕೆಯಿಲ್ಲದೆ ಅವರ ಸೇವೆಯನ್ನು ಮಾಡುತ್ತಿದ್ದರು. ಶಿಷ್ಯರ ಶುದ್ಧಭಾವದಿಂದ ಕೂಡಿದ ಸೇವೆಯಿಂದ ಸಂತೃಪ್ತರಾದ, ಬ್ರಾಹ್ಮಣ ಶ್ರೇಷ್ಠರಾದ ಸಂದೀಪನೀಮುನಿಗಳು ಶಿಕ್ಷಾ-ವ್ಯಾಕರಣ-ಛಂದಸ್ಸು-ನಿರುಕ್ತ-ಜ್ಯೋತಿಷ-ಕಲ್ಪ–ಈ ಆರು ಅಂಗಗಳಿಂದಲೂ ಮತ್ತು ಉಪನಿಷತ್ತು ಗಳಿಂದಲೂ ಕೂಡಿದ ಸಮಸ್ತವೇದಗಳನ್ನೂ ರಾಮ-ಕೃಷ್ಣರಿಗೆ ಉಪದೇಶಿ ಸಿದರು. ಇಷ್ಟು ಮಾತ್ರವಲ್ಲದೆ ಮಂತ್ರಗಳ ರಹಸ್ಯದಿಂದ ಕೂಡಿದ ಧನುರ್ವೇದವನ್ನೂ, ಮನುಸ್ಮೃತಿಯೇ ಮೊದಲಾದ ಧರ್ಮಶಾಸ್ತ್ರಗಳನ್ನೂ ವೇದಾರ್ಥಗಳನ್ನು ನಿರೂಪಿಸುವ ಮೀಮಾಂಸವೇ ಮೊದಲಾದ ಶಾಸ್ತ್ರ ಗಳನ್ನೂ, ನ್ಯಾಯಶಾಸ್ತ್ರವನ್ನೂ (ತರ್ಕ) ಉಪದೇಶಿಸಿದರು. ಸಂಧಿ-ವಿಗ್ರಹ-ಯಾನ-ಆಸನ-ದ್ವೈಧ ಮತ್ತು ಆಶ್ರಯಗಳೆಂಬ ಆರು ವಿಧವಾದ ರಾಜನೀತಿ ಯನ್ನೂ ಗುರುಗಳು ಪ್ರಿಯಶಿಷ್ಯರಿಗೆ ಬೋಧಿಸಿದರು.

ಪರೀಕ್ಷಿತಮಹಾರಾಜ! ನಿಜವಾಗಿ ಹೇಳುವುದಾದರೆ ರಾಮ-ಕೃಷ್ಣರೇ ಸಮಸ್ತವಿದ್ಯೆಗಳ ಪ್ರವರ್ತಕರು. ಆದುದರಿಂದ ಅವರು ಮತ್ತೊಬ್ಬರಿಂದ ಕಲಿಯಬೇಕಾದುದೇನೂ ಇರಲಿಲ್ಲ. ಆದರೂ ಮನುಷ್ಯರಂತೆ ವ್ಯವಹರಿಸು ತ್ತಿದ್ದ ಅವರು ಏಕಸಂಧಿಗ್ರಾಹಿಗಳಾಗಿ ಗುರುಗಳು ಒಮ್ಮೆ ಹೇಳುತ್ತಿದ್ದಂತೆಯೇ ವಿದ್ಯೆಗಳನ್ನು ಗ್ರಹಿಸಿಬಿಡುತ್ತಿದ್ದರು. ಪ್ರಯತ್ನಶೀಲರಾದ ರಾಮ-ಕೃಷ್ಣರು ಅರುವತ್ತು ನಾಲ್ಕು ಕಲೆಗಳನ್ನೂ* ಕೇವಲ ಅರುವತ್ತು ನಾಲ್ಕು ದಿವಸ

* ಅರುವತ್ತು ನಾಲ್ಕು ಕಲೆಗಳು :

1) **ಗೀತಂ**–ಹಾಡುಗಾರಿಕೆ 2) **ವಾದ್ಯಂ**–ವೀಣೆ. ವೇಣು, ಮೃದಂಗ ಮುಂತಾ ದುವುಗಳಲ್ಲಿ ಪ್ರಾವೀಣ್ಯ. 3) **ನೃತ್ಯಂ**–ಭರತನಾಟ್ಯ, ಕುಣಿತ. 4) **ಆಲೇಖ್ಯಂ**–ಚಿತ್ರರಚನೆ 5) **ವಿಶೇಷಕಚ್ಛೇದ್ಯಂ**–ಹಣೆಯಲ್ಲಿ ಬರೆಯುವ ತಿಲಕವನ್ನು ಅನೇಕ ರೀತಿಯಲ್ಲಿ ತಿದ್ದಿಬರೆಯುವುದು. 6) **ತಂಡುಲಕುಸುಮಬಲಿವಿಕಾರಾಃ**–ಬಣ್ಣ-ಬಣ್ಣದ ಅಕ್ಕಿ ಮತ್ತು ಹೂಗಳಿಂದ ದೇವರ ಮುಂದೆ ಕಮಲವೇ ಮೊದಲಾದ ಚಿತ್ರಗಳನ್ನು ರಚಿಸುವುದು. 7) **ಪುಷ್ಪಾಸ್ತರಣಂ**–ಹೂವುಗಳನ್ನು ಹರಡಿ ಅಲಂಕರಿಸುವುದು. 8) **ದಶನ-ವಸನಾಂಗರಾಗಃ** – ಮೈ-ಹಲ್ಲು ಮತ್ತು ಬಟ್ಟೆಗಳಿಗೆ ಬಣ್ಣಹಾಕುವುದು. 9)

ಗಳಲ್ಲಿಯೇ ಕಲಿತು ಗುರುದಕ್ಷಿಣೆಯನ್ನು ಕೊಡುವ ಸಲುವಾಗಿ ಆಚಾರ್ಯ ರನ್ನು ಪ್ರಾರ್ಥಿಸಿಕೊಂಡರು.

ಪರೀಕ್ಷಿತಮಹಾರಾಜ! ಸಂದೀಪನೀಮುನಿಗಳು ಶ್ರೀಕೃಷ್ಣ-ಬಲ ರಾಮರು ಅದ್ಭುತವಾದ ಮಹಿಮೆಯುಳ್ಳವರೆಂಬುದನ್ನೂ ಅಲೌಕಿಕವಾದ ಬುದ್ಧಿಯುಳ್ಳವರೆಂಬುದನ್ನೂ ಆ ವೇಳೆಗಾಗಲೇ ತಿಳಿದುಕೊಂಡಿದ್ದರು. ತಮ್ಮ ಪತ್ನಿಯೊಡನೆಯೂ ಸಮಾಲೋಚಿಸಿ ರಾಮ-ಕೃಷ್ಣರಿಗೆ ಗುರುದಕ್ಷಿಣೆಯ ವಿಷಯವಾಗಿ ಹೇಳಿದರು : "ನನ್ನ ಪ್ರೀತಿಯ ಶಿಷ್ಯರೇ! ನಿಮ್ಮ ಶ್ರದ್ಧಾ- ಭಕ್ತಿಗಳೇ ಗುರುದಕ್ಷಿಣೆ. ಇಷ್ಟೇ ಸಾಕಾಗಿತ್ತು. ಆದರೂ ನಿಮ್ಮ ಅದ್ಭುತವಾದ ಲೀಲೆಗಳನ್ನು ನೋಡಿ ಅದ್ಭುತವಾದೊಂದು ಗುರುದಕ್ಷಿಣೆಯನ್ನೇ ಕೇಳುವ ಮನಸ್ಸಾಗಿದೆ. ಸ್ವಲ್ಪದಿವಸಗಳ ಹಿಂದೆ ನಮ್ಮ ಏಕಮಾತ್ರಪುತ್ರನು ಪ್ರಭಾಸಕ್ಷೇತ್ರದ ಸಮುದ್ರದಲ್ಲಿ ಮುಳುಗಿ ಸತ್ತುಹೋದನು. ಅವನನ್ನು ಕರೆತಂದರೆ ಅದೇ ನಮ್ಮ ಗುರುದಕ್ಷಿಣೆಯಾದೀತು."

ಮಣಿಭೂಮಿಕಾ ಕರ್ಮ–ರತ್ನಾಲಂಕಾರ ಕಾರ್ಯ. 10) **ಶಯನರಚನಂ**–ಹಾಸಿಗೆಯನ್ನು ಹಾಸಿ ಸಿಂಗರಿಸುವುದು. 11) **ಉದಕವಾದ್ಯಂ**–ಜಲತರಂಗ ವಾದ್ಯ. 12) **ಉದಕಾಘಾತಃ** –ಕೊಳವೆಯಿಂದ ನೀರನ್ನು ಹೊಡೆಯುವುದು ಅಥವಾ ಜಲಸ್ತಂಭನ. 13) **ಚಿತ್ರಾಶ್ಚ ಯೋಗಾಃ** – ಅನೇಕ ಕಷ್ಟಗಳನ್ನು ಕೊಡುವುದರ ಮೂಲಕ ಇಂದ್ರಿಯಗಳನ್ನು ನಿಃಸತ್ವವನ್ನಾಗಿ ಮಾಡುವುದು ಅಥವಾ ನಾನಾಶ್ಚರ್ಯಗಳನ್ನು ತೋರಿಸುವ ಉಪಾಯಗಳು. 14) **ಮಾಲ್ಯಗ್ರಥನವಿಕಲ್ಪಾಃ** – ಬಗೆ ಬಗೆಯ ಹಾರಗಳನ್ನು ರಚಿಸುವುದು. 15) **ಶೇಖರಕಾಪೀಡಯೋಜನಂ**–ತಲೆ ಗಂಟುಹಾಕಿ ಅಲಂಕರಿಸುವಿಕೆ. 16) **ನೇಪಥ್ಯಪ್ರಯೋಗಃ** –ವೇಷಹಾಕುವುದು. 17) **ಕರ್ಣಪತ್ರಭಂಗಾಃ** –ರತ್ನಖಚಿತವಾದ ಪತ್ರಾಕಾರದ ಆಭರಣಗಳಿಂದ ಕಿವಿಯನ್ನು ಅಲಂಕರಿಸುವುದು. 18) **ಗಂಧಯುಕ್ತಿಃ** – ಪರಿಮಳದ್ರವ್ಯಗಳನ್ನು ಸೇರಿಸಿ ಸಿದ್ಧಪಡಿಸುವುದು. 19) **ಭೂಷಣಯೋಜನಂ**– ಅವಯವಗಳಿಗೆ ತಕ್ಕಂತೆ ಒಡವೆಗಳನ್ನು ತೊಡಿಸುವುದು. 20) **ಐಂದ್ರಜಾಲಾಃ ಕೌಚುಮಾರಾಶ್ಚ ಯೋಗಾಃ** –ಯಕ್ಷಿಣಿ ಮತ್ತು ಶರೀರಸಂಬಂಧವಾದ ನಷ್ಟಗಳನ್ನೂ ಹೋಗಲಾಡಿಸಿ ಸೌಭಾಗ್ಯವನ್ನುಂಟುಮಾಡುವ ಯೋಗಗಳು. 21) **ಹಸ್ತಲಾಘವಂ**–ಕೈಚಳಕ, ಜಾಣತನ, ಚುರುಕು. 22) **ವಿಚಿತ್ರಶಾಕಾಪೂಪಭಕ್ಷ್ಯವಿಕಾರಕ್ರಿಯಾ**–ಬಗೆ-ಬಗೆಯ ಊಟದ ಪದಾರ್ಥಗಳನ್ನು ತಯಾರಿಸುವುದು (ಚಿತ್ರಾನ್ನ-ಹುಳಿ-ತಿಂಡಿ ಮುಂತಾದುವು). 23) **ಪಾನಕರಸರಾಗಾಸವ ಯೋಜನಂ**–ಪಾನಕ, ಆಸವ ಮೊದಲಾದ ಪಾನೀಯಗಳನ್ನು ಸಿದ್ಧಗೊಳಿಸುವುದು. 24) **ಸೂಚೀವಾನ**

ರಾಮ-ಕೃಷ್ಣರಿಗೆ ಇದು ಅಸಾಧ್ಯವೆನಿಸಲಿಲ್ಲ. ಅವರಿಬ್ಬರೂ ದುರಂತ ಪರಾಕ್ರಮರು. ಇಬ್ಬರೂ ಮಹಾರಥಿಗಳು. ಗುರುಗಳಿಗೆ ಹಾಗೆಯೇ ಆಗಲೆಂದು ಹೇಳಿ ಅವರ ಅನುಮತಿಯನ್ನು ಪಡೆದು ರಥದಲ್ಲಿ ಕುಳಿತು ಪ್ರಭಾಸಕ್ಷೇತ್ರಕ್ಕೆ ಹೊರಟೇಬಿಟ್ಟರು. ಪ್ರಭಾಸಕ್ಷೇತ್ರದ ಸಮುದ್ರತೀರಕ್ಕೆ ಹೋಗಿ ಅಲ್ಲಿ ಸ್ವಲ್ಪಹೊತ್ತು ಕುಳಿತರು. ತನ್ನನ್ನು ನೋಡುವ ಸಲುವಾಗಿ ಜಗದೀಶ್ವರರೇ ಆಗಮಿಸಿರುವರೆಂಬುದನ್ನು ತಿಳಿದು ಸಮುದ್ರರಾಜನು ಅತಿಥಿ ಸತ್ಕಾರಕ್ಕಾಗಿ ಅರ್ಘ್ಯ-ಪಾದ್ಯಗಳೇ ಮೊದಲಾದುವನ್ನು ತೆಗೆದುಕೊಂಡು ರಾಮ-ಕೃಷ್ಣರ ಬಳಿಗೆ ಆಗಮಿಸಿದನು. ದೇವೇಶ್ವರರನ್ನು ಯಥೋಚಿತವಾಗಿ ಸಮುದ್ರರಾಜನು ಸತ್ಕರಿಸಿದನಂತರ ಶ್ರೀಕೃಷ್ಣನು ಸಮುದ್ರರಾಜನಿಗೆ ಆಜ್ಞಾಪಿಸಿದನು : “ಸಮುದ್ರರಾಜ! ಈ ಹಿಂದೆ ನೀನು ನಿನ್ನ ದೊಡ್ಡ

ಕರ್ಮಾಣಿ – ಕಸೂತಿ ಕೆಲಸಗಳು ; ಹೊಲಿಗೆ ಕೆಲಸಗಳು. 25) **ಸೂತ್ರಕ್ರೀಡಾ** – ನೂಲಿನ ಆಟ ; ನೂಲನ್ನು ಕತ್ತರಿಸಿ ಪುನಃ ಅಖಂಡವಾಗಿ ತೋರಿಸುವುದು, ನೂಲನ್ನು ಸುಟ್ಟು ಪುನಃ ಮೊದಲಿನಂತೆಯೇ ನೂಲನ್ನು ತೋರಿಸುವುದು. 26) **ವೀಣಾಡಮರುಕ ವಾದ್ಯಾನಿ**–ವೀಣೆ, ಡಮರು (ಬುಡುಬುಡಿಕೆ) ಮೊದಲಾದ ವಾದ್ಯಗಳು. 27) **ಪ್ರಹೇಲಿಕಾ**–ಒಗಟು-ಗೂಢಾರ್ಥ ವಾಕ್ಯಪ್ರಯೋಗ. 28) **ಪ್ರತಿಮಾಲಾ**–ಅಂತ್ಯಾಕ್ಷರೀ ಪಠನ. 29) **ದುರ್ವಾಚಕಪ್ರಯೋಗಾಃ** –ವಾದಕ್ಕಾಗಿಯೂ ವಿನೋದಕ್ಕಾಗಿಯೂ ಉಚ್ಚರಿಸಲಾಗದ ಅಕ್ಷರಗಳಿಂದ ಕೂಡಿದ ಶಬ್ದಗಳ ಪ್ರಯೋಗ. 30) **ಪುಸ್ತಕ ವಾಚನಂ**–ಅತಿಶೀಘ್ರವಾಗಿ ಇಲ್ಲದಿರುವ ವರ್ಣಗಳನ್ನು ಕೂಡಿಸಿಕೊಂಡು ಓದುವುದು. 31) **ನಾಟಕಾಖ್ಯಾಯಿಕಾ ದರ್ಶನಂ**–ನಾಟಕ, ಕಥೆ ಮೊದಲಾದುವುಗಳನ್ನು ಅಭಿನಯಿಸಿ ತೋರಿಸುವುದು. 32) **ಕಾವ್ಯಸಮಸ್ಯಾಪೂರಣಂ**–ಪದ್ಯರೂಪದಿಂದ ಸಮಸ್ಯೆಗಳನ್ನು ಪೂರ್ತಿಗೊಳಿಸುವುದು. 33) **ಪಟ್ಟಿಕಾವೇತ್ರಬಾಣವಿಕಲ್ಪಾಃ** – ಬೆತ್ತದಿಂದ ಬುಟ್ಟಿ, ತಟ್ಟೆ ಮುಂತಾದುವನ್ನು ಹೆಣೆಯುವುದು. 34) **ತಕ್ಷಕರ್ಮಾಣಿ**–ಮರಗೆಲಸ. 35) **ತಕ್ಷಣಂ**–ಗುಡಿಗಾರಿಕೆ, ಮರಗಳನ್ನು ಕೆತ್ತಿ ಮಂಚ, ಆಸನ, ಬೊಂಬೆ ಮೊದಲಾ ದುವನ್ನು ತಯಾರಿಸುವುದು. 36) **ವಾಸ್ತುವಿದ್ಯಾ**– ಗೃಹನಿರ್ಮಾಣ ಮುಂತಾದ ಶಿಲ್ಪ ವಿದ್ಯೆ. 37) **ರೂಪ್ಯರತ್ನಪರೀಕ್ಷಾ**– ಬೆಳ್ಳಿ, ರತ್ನ ಮೊದಲಾದುವನ್ನು ಪರೀಕ್ಷಿಸುವುದು. 38) **ಧಾತುವಾದಃ**– ಕಲ್ಲು, ಮಣ್ಣು, ಲೋಹ, ರತ್ನ ಮೊದಲಾದ ಧಾತುಗಳ ಶೋಧನ–ಮೇಳನ ಮುಂತಾದ ಜ್ಞಾನಕ್ಕಾಗಿ–ಲೋಹವಿದ್ಯೆ. 39) **ಮಣಿರಾಗಾಕಾರಜ್ಞಾನಂ**–ರತ್ನಗಳ ಬಣ್ಣ ಮತ್ತು ವಿಕಾರಗಳನ್ನು ತಿಳಿಯುವುದು. 40) **ವೃಕ್ಷಾಯುರ್ವೇದ ಯೋಗಾಃ** –ಸಸಿ ಮರಗಳನ್ನು ಬೆಳೆಯಿಸಿ ತೋಟಗಳ ನಿರ್ಮಾಣ ಮತ್ತು ಚಿಕಿತ್ಸೆ ಮಾಡುವುದು. 41) **ಮೇಷಕುಕ್ಕುಟಲಾವಕಯುದ್ಧವಿಧಿಃ**–ಟಗರು, ಕೋಳಿ, ತಿತ್ತಿರಿ

ದೊಡ್ಡ ತೆರೆಗಳ ಮೂಲಕ ನಿನ್ನ ತೀರದಲ್ಲಿದ್ದ ನಮ್ಮ ಗುರುಗಳ ಮಗನನ್ನು ನುಂಗಿಹಾಕಿರುವೆ. ಅವನನ್ನು ಶೀಘ್ರವಾಗಿ ನಮಗೆ ಕೊಟ್ಟುಬಿಡು."

ಸಮುದ್ರರಾಜನು ಹೇಳುತ್ತಾನೆ :

"ದೇವದೇವನೇ! ಕೃಷ್ಣಸ್ವಾಮಿಯೇ! ನಾನು ಗುರುಪುತ್ರನನ್ನು ಸೆಳೆದುಕೊಂಡು ಹೋಗಿರುವುದಿಲ್ಲ. ನನ್ನ ನೀರಿನ ಕೆಳಭಾಗದಲ್ಲಿ ಪಂಚಜನ ನೆಂಬ ಹೆಸರಿನ ದೊಡ್ಡ ದೈತ್ಯನಿದ್ದಾನೆ. ಆ ಮಹಾಸುರನು ಶಂಖರೂಪ ವನ್ನು ಧರಿಸಿದ್ದಾನೆ. ನಿಶ್ಚಯವಾಗಿಯೂ ಅವನೇ ಗುರುಪುತ್ರನನ್ನು ಅಪಹರಿಸಿದನು."

ಸಮುದ್ರರಾಜನ ಮಾತನ್ನು ಕೇಳುತ್ತಲೇ ಶ್ರೀಕೃಷ್ಣನು ಸಮುದ್ರದ ತಳಭಾಗಕ್ಕೆ ಹೋಗಿ ಅಲ್ಲಿದ್ದ ಶಂಖಾಸುರನನ್ನು ಸಂಹರಿಸಿದನು. ಆದರೆ ಅವನ ಹೊಟ್ಟೆಯಲ್ಲಿ ಗುರುಪುತ್ರನಿರಲೇ ಇಲ್ಲ. ಅವನ ಶರೀರದಲ್ಲಿದ್ದ ಶಂಖವನ್ನು ತೆಗೆದುಕೊಂಡು ಶ್ರೀಕೃಷ್ಣನು ಸಮುದ್ರದ ಹೊರಗೆಬಂದು

ಪಕ್ಷಿ–ಇವುಗಳ ಕಾಳಗವನ್ನು ಮಾಡಿಸುವುದು. 42) **ಶುಕಶಾರಿಕಾಪ್ರಲಾಪನಂ**–ಗಿಳಿ ಮೊದಲಾದ ಪಕ್ಷಿಗಳಿಂದ ಮಾತನಾಡಿಸುವುದು. 43) **ಉತ್ಸಾದನೆ ಸಂವಾಹನೇ ದೇಹಮರ್ದನೇ ಚ ಕೌಶಲ್ಯಂ**–ಕಾಲಿನಿಂದ ತುಳಿಯುವುದು. ಮೈಯನ್ನು ಒತ್ತುವುದು, ತಲೆಗೆ ಎಣ್ಣೆ ಒತ್ತುವುದು ಇವುಗಳಲ್ಲಿ ನೈಪುಣ್ಯ. 44) **ಅಕ್ಷರಮುಷ್ಟಿಕಾ ಕಥನಂ**– ಗುಟ್ಟಾದ ವಿಷಯಗಳನ್ನು ಮಾತನಾಡುವುದಕ್ಕೂ ಗ್ರಂಥಗಳನ್ನು ಸಂಗ್ರಹಿಸಿ ಹೇಳುವುದಕ್ಕೂ ಬೆರಳುಗಳಿಂದ ಮುದ್ರೆಗಳ ಮೂಲಕ ಅಕ್ಷರಗಳನ್ನು ಸೂಚಿಸಿ ವಿಷಯಗಳನ್ನು ತಿಳಿಸುವುದು. 45) **ಮ್ಲೇಚ್ಛಿತವಿಕಲ್ಪಾಃ** –ಗುಟ್ಟಾದ ವಿಷಯಗಳನ್ನು ತಿಳಿಸಲು ಸರಿಯಾದ ಶಬ್ದಗಳನ್ನು ಉಪಯೋಗಿಸಿದರೂ ಇತರರಿಗೆ ಸ್ಪಷ್ಟವಾಗಿ ತಿಳಿಯದಿರಲು ಅಕ್ಷರಗಳನ್ನು ಬದಲಾಯಿಸಿ ಹೇಳುವುದು. 46) **ದೇಶಭಾಷಾ ವಿಜ್ಞಾನಂ**–ಆಯಾ ದೇಶಭಾಷೆಗಳನ್ನು ತಿಳಿಯುವುದು. 47) **ಪುಷ್ಪಶಕಟಿಕಾ**– ಹೂವಿನ ಬಂಡಿಯನ್ನು ತಯಾರಿಸುವುದು. 48) **ನಿಮಿತ್ತಜ್ಞಾನಂ**–ಶಕುನಗಳನ್ನು ತಿಳಿಯುವುದು. 49) **ಯಂತ್ರಮಾತೃಕಾ**–ಸಜೀವ ಮತ್ತು ನಿರ್ಜೀವಯಂತ್ರಗಳನ್ನು ಪ್ರಯಾಣ ಮತ್ತು ಜಲಯುದ್ಧಕ್ಕಾಗಿ ಜೋಡಿಸುವ ಶಾಸ್ತ್ರ. 50) **ಧಾರಣ ಮಾತೃಕಾ**–ಓದಿದ ಶಾಸ್ತ್ರವನ್ನು ಗ್ರಹಿಸಿ ದೃಢವಾಗಿಟ್ಟುಕೊಳ್ಳಲು ಅವಶ್ಯವಾದ ಶಾಸ್ತ್ರ. 51) **ಸಂಪಾಠ್ಯಂ**–ಚೆನ್ನಾಗಿ ಓದುವುದು, (ಪಾಠಾಂತರ) ಸಂಪಾಟ್ಯಂ–ವಜ್ರಾದಿ ಗಳನ್ನು ಕೊಯ್ಯುವುದು. 52) ಮಾನಸೀ–ಕಣ್ಣಿಗೆ ಕಾಣುವ ಮತ್ತು ಕಾಣಿಸದಿರುವ

ರಥದಲ್ಲಿ ಕುಳಿತನು. ಗುರುಪುತ್ರನು ಸಮುದ್ರದಲ್ಲಿ ಸಿಕ್ಕದಿರಲು ಶ್ರೀಕೃಷ್ಣನು ಬಲರಾಮನೊಡನೆ ಯಮರಾಜನಿಗೆ ಅತ್ಯಂತಪ್ರಿಯವಾಗಿದ್ದ ಸಂಯಮನೀ ಎಂಬ ಹೆಸರಿನ ಪಟ್ಟಣಕ್ಕೆ ಹೋಗಿ ಗಟ್ಟಿಯಾಗಿ ಶಂಖವನ್ನೂದಿದನು. ಶಂಖಧ್ವನಿಯನ್ನು ಕೇಳುತ್ತಲೇ ಸಮಸ್ತಪ್ರಜೆಗಳ ಶಾಸಕನಾದ ಯಮ ಧರ್ಮನು ಶ್ರೀಕೃಷ್ಣ-ಬಲರಾಮರನ್ನು ಆದರದಿಂದ ಸ್ವಾಗತಿಸಿ ಭಕ್ತಿಭಾವ ದಿಂದ ಕೂಡಿದವನಾಗಿ ಅವರಿಗೆ ವಿಧಿವತ್ತಾಗಿ ಮಹಾಪೂಜೆಯನ್ನು ಸಲ್ಲಿಸಿದನು. ಸಮಸ್ತಪ್ರಾಣಿಗಳ ಹೃದಯದಲ್ಲಿಯೂ ವಿರಾಜಮಾನನಾಗಿರುವ ಸಚ್ಚಿದಾನಂದಸ್ವರೂಪನಾದ ಶ್ರೀಕೃಷ್ಣನಿಗೆ ಯಮರಾಜನು ವಿನಮ್ರನಾಗಿ ಹೇಳಿದನು :

ಲೀಲಾಮನುಷ್ಯ ಹೇ ವಿಷ್ಣೋ ಯುವಯೋಃ ಕರವಾಮ ಕಿಮ್ ॥೪೪॥

"ಲೀಲಾಮಾನುಷವಿಗ್ರಹನಾದ ಹೇ ವಿಷ್ಣುವೇ! ನಾನು ನಿಮ್ಮಿಬ್ಬರಿಗೂ ಯಾವ ಕಾರ್ಯವನ್ನು ಮಾಡಿಕೊಡಲಿ?"


ಭಗವಂತನು ಹೇಳುತ್ತಾನೆ :

ಗುರುಪುತ್ರಮಿಹಾನೀತಂ ನಿಜಕರ್ಮನಿಬನ್ಧನಮ್ ।
ಆನಯಸ್ವ ಮಹಾರಾಜ ಮಚ್ಛಾಸನಪುರಸ್ಕೃತಃ ॥೪೫॥

ವಸ್ತುಗಳ ಭೇದವಿಷಯವಾದ ಚಿಂತೆ. 53) ಕಾವ್ಯಕ್ರಿಯಾ–ಕಾವ್ಯಗಳ ರಚನೆ (ಪಾಠಾಂತರ) ಮಾನಸೀ ಕಾವ್ಯಕ್ರಿಯಾ–ಇತರರ ಮನಸ್ಸಿನಲ್ಲಿರುವ ಅರ್ಥವನ್ನು ಶ್ಲೋಕದಿಂದ ಹೇಳುವುದು. 54) ಅಭಿಧಾನಕೋಶಃ –ನಿಘಂಟು. 55) ಛಂದೋಜ್ಞಾನಂ–ವೃತ್ತಗಳ ಜ್ಞಾನ. 56) ಕ್ರಿಯಾಕಲ್ಪಃ –ಕಾರ್ಯವಿಧಾನದ ತಿಳಿವಳಿಕೆ. 57) ಛಲಿತಕಯೋಗಾಃ – ಜೂಜು ಮೊದಲಾದುವುಗಳಲ್ಲಿ ಇತರರನ್ನು ಮರುಳುಮಾಡುವುದು. 58) ವಸ್ತ್ರಗೋಪನಾನಿ–ವಸ್ತ್ರಗಳ ರಕ್ಷಣೆ. 59) ದ್ಯೂತವಿಶೇಷಾಃ –ಬಗೆ-ಬಗೆಯ ಜೂಜುಗಳು. 60) ಆಕರ್ಷಕ್ರೀಡಾ–ಪಗಡೆಯಾಟ. 61) ಬಾಲ ಕ್ರೀಡನಕಾನಿ–ಮಕ್ಕಳ ಆಟಗಳು. 62) ವೈನಯಕೀನಾಂ–ವಿನಯವನ್ನು ಬೋಧಿಸುವ. 63) ವೈಜಯಕೀನಾಂ–ವಿಜಯದ ವಿಧಾನವನ್ನು ಬೋಧಿಸುವ. 64) ವ್ಯಾಯಾಮಕೀನಾಂ ಚ ವಿದ್ಯಾನಾಂ– ವ್ಯಾಯಾಮಕ್ರಮವನ್ನು ಬೋಧಿಸುವ ವಿದ್ಯೆಗಳ ಜ್ಞಾನ. (ಪಾಠಾಂತರ :) 62) ವೈನಾಯಃ 63) ವೈಜಯಃ 64) ವೈತಾಳಿಕೀ–ಈ ಮೂರು ವಿದ್ಯೆಗಳು ಪರಚಿತ್ತಜ್ಞಾನವನ್ನೂ ದೂರಶ್ರವಣ-ದರ್ಶನಾದಿಗಳನ್ನೂ ಉಂಟುಮಾಡುವುವು.

"ಯಮಧರ್ಮ! ಅವನ ಕರ್ಮಬಂಧನಕ್ಕೆ ಅನುಸಾರವಾಗಿ ನಮ್ಮ ಗುರುಪುತ್ರನು ಇಲ್ಲಿಗೆ ತರಲ್ಪಟ್ಟಿದ್ದಾನೆ. ಈಗ ನೀನು ಅವನ ಕರ್ಮಾನುಸಾರವಾದ ಫಲವನ್ನು ಕೊಡಹೋಗದೆ ನನ್ನ ಆಜ್ಞೆಯನ್ನು ಪುರಸ್ಕರಿಸಿ ನನ್ನ ಬಳಿಗೆ ಅವನನ್ನು ಕರೆದುಕೊಂಡು ಬಾ."

ಯಮರಾಜನು ಮರುಮಾತನಾಡದೆ ಶ್ರೀಕೃಷ್ಣನ ಆಜ್ಞಾನುಸಾರವಾಗಿ ಸಂದೀಪನೀಮುನಿಯ ಪುತ್ರನನ್ನು ಶ್ರೀಕೃಷ್ಣನಿಗೆ ತಂದೊಪ್ಪಿಸಿದನು. ಬಳಿಕ ಶ್ರೀಕೃಷ್ಣ-ಬಲರಾಮರು ಯಮರಾಜನಿಂದ ಬೀಳ್ಕೊಟ್ಟವರಾಗಿ ಗುರುಪುತ್ರ ನನ್ನೂ ರಥದಲ್ಲಿ ಕುಳ್ಳಿರಿಸಿಕೊಂಡು ಗುರುಗಳ ಆಶ್ರಮಕ್ಕೆ ಬಂದು ಬಾಲಕ ನನ್ನು ಗುರುಗಳಿಗೊಪ್ಪಿಸಿ ಮತ್ತೇನು ಬೇಕಾಗಿರುವುದೆಂದು ವಿನಯಪೂರ್ವಕ ವಾಗಿ ಪುನಃ ಗುರುಗಳನ್ನು ಪ್ರಾರ್ಥಿಸಿಕೊಂಡರು.



ಗುರುಗಳು ಹೇಳುತ್ತಾರೆ :

"ವತ್ಸರೇ! ನೀವಿಬ್ಬರೂ ಅನುಪಮವಾದ, ಊಹಿಸಲೂ ಕೂಡ ಅಸದಳವಾದ ಗುರುದಕ್ಷಿಣೆಯನ್ನೇ ಕೊಟ್ಟಿರುವಿರಿ. ಮತ್ತೇನನ್ನು ತಾನೇ ನಾನು ಕೇಳಲಿ? ನಿಮ್ಮಂತಹ ಪುರುಷೋತ್ತಮರನ್ನು ಶಿಷ್ಯರಾಗಿ ಹೊಂದಿರು ವಾಗ ಈಡೇರಲಾರದ ಮನೋರಥವು ಯಾವುದು ತಾನೇ ಇದ್ದೀತು?

ಮಕ್ಕಳೇ! ನೀವಿನ್ನು ನಿಮ್ಮ ಮನೆಗೆ ಹೋಗಿರಿ. ಲೋಕಗಳನ್ನೇ ಪಾವನಗೊಳಿಸುವ ಕೀರ್ತಿಯು ನಿಮಗೆ ಪ್ರಾಪ್ತವಾಗಲಿ. ನೀವು ಇಲ್ಲಿ ಕಲಿ

ತಿರುವ ವಿದ್ಯೆಗಳು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ನಿತ್ಯ ನವೀನವಾಗಿರಲಿ. ಯಾವಾಗಲೂ ವಿಸ್ಮೃತವಾಗದಿರಲಿ."

ಮಗು! ಪರೀಕ್ಷಿತ! ಗುರುಗಳಾದ ಸಂದೀಪನೀಮುನಿಗಳು ಹೀಗೆ ಹೇಳಲು ಶ್ರೀಕೃಷ್ಣ-ಬಲರಾಮರು ಅವರ ಅನುಜ್ಞೆಯನ್ನು ಪಡೆದು ವಾಯು ವೇಗಕ್ಕೆ ಸಮಾನವಾದ ವೇಗದಿಂದಲೂ ಗುಡುಗಿನ ಶಬ್ದಕ್ಕೆ ಸಮಾನವಾದ ಗಡ-ಗಡಾಶಬ್ದದಿಂದಲೂ ಕೂಡಿದ್ದ ರಥದಲ್ಲಿ ಕುಳಿತು ಮಥುರಾಪಟ್ಟಣಕ್ಕೆ ಹಿಂದಿರುಗಿದರು. ಮಥುರಾಪಟ್ಟಣವಾಸಿಗಳಾದ ಪ್ರಜೆಗಳು ಬಹಳ ದಿವಸ ಗಳಿಂದಲೂ ಜಗದಾನಂದಕಂದರಾದ ಬಲರಾಮ-ಶ್ರೀಕೃಷ್ಣರನ್ನು ನೋಡದೆ ಅತಿದುಃಖಿತರಾಗಿದ್ದರು. ರಾಮ-ಕೃಷ್ಣರನ್ನು ಕಂಡೊಡನೆಯೇ–ಕಳೆದು ಹೋಗಿದ್ದ ಹಣವು ಪುನಃ ಸಿಕ್ಕಿದಂತೆ–ಪ್ರಜೆಗಳೆಲ್ಲರೂ ಆನಂದಸಾಗರದಲ್ಲಿ ಮುಳುಗಿಹೋದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೪೫ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೪೬ನೆಯ ಅಧ್ಯಾಯ

ಉದ್ಧವನ ವ್ರಜಯಾತ್ರೆ

ಶ್ರೀಶುಕಮುನಿಗಳು ಹೇಳುತ್ತಾರೆ :

ವೃಷ್ಣೀನಾಂ ಪ್ರವರೋ ಮನ್ತ್ರೀ ಕೃಷ್ಣಸ್ಯ ದಯಿತಃ ಸಖಾ ।
ಶಿಷ್ಯೋ ಬೃಹಸ್ಪತೇಃ ಸಾಕ್ಷಾದುದ್ಧವೋ ಬುದ್ಧಿಸತ್ತಮಃ ॥೧॥

ಪರೀಕ್ಷಿತಮಹಾರಾಜ! ಉದ್ಧವನು ವೃಷ್ಣಿವಂಶೀಯರಲ್ಲಿ ಪ್ರಧಾನ ಪುರುಷನಾಗಿದ್ದನು. ಬೃಹಸ್ಪತಿಯ ಸಾಕ್ಷಾತ್ ಶಿಷ್ಯನಾಗಿದ್ದ ಅವನು ಪರಮ ಬುದ್ಧಿಶಾಲಿಯೂ ಆಗಿದ್ದನು. ಎಲ್ಲಕ್ಕಿಂತಲೂ ಮಿಗಿಲಾಗಿ ಉದ್ಧವನು ಶ್ರೀಕೃಷ್ಣನ ಮಂತ್ರಿಯೂ ಪ್ರಿಯಸಖನೂ ಆಗಿದ್ದನು. ಶರಣಾಗತರಾದವರ ಸಮಸ್ತದುಃಖಗಳನ್ನೂ ಪರಿಹರಿಸುವ ಶ್ರೀಕೃಷ್ಣನು ಒಂದು ದಿನ ತನ್ನ ಪ್ರಿಯಭಕ್ತನೂ ಏಕಾಂತಪ್ರೇಮಿಯೂ ಆಗಿದ್ದ ಉದ್ಧವನ ಕೈಯನ್ನು ತನ್ನ ಕೈಯಿಂದ ಹಿಡಿದುಕೊಂಡು ಪ್ರಾಣಸಖನಿಗೆ ಈ ಮಾತನ್ನು ಹೇಳಿದನು :

"ಸೌಮ್ಯನೇ! ಉದ್ಧವ! ನೀನೀಗಲೇ ಗೋಕುಲಕ್ಕೆ ಹೋಗು. ಅಲ್ಲಿರುವ ನನ್ನ ತಂದೆ-ತಾಯಿಗಳಾದ ನಂದಗೋಪ-ಯಶೋದೆಯರನ್ನು ನನ್ನ ಸಂಬಂಧವಾದ ಮಾತುಗಳಿಂದ ಆನಂದಗೊಳಿಸು. ಗೋಪಿಯರಿಗೆ ನನ್ನ ವಿಯೋಗದಿಂದ ಉಂಟಾಗಿರುವ ಮನೋರೋಗವನ್ನು ನನ್ನ ಸಂದೇಶವೆಂಬ ಔಷಧಿಯನ್ನು ಕೊಟ್ಟು ಹೋಗಲಾಡಿಸು.

ಪ್ರಿಯಸಖನೇ! ಗೋಪಿಕಾಸ್ತ್ರೀಯರ ಮನಸ್ಸು ನಿತ್ಯನಿರಂತರವಾಗಿ ನನ್ನಲ್ಲಿಯೇ ಸೇರಿಹೋಗಿಬಿಟ್ಟಿದೆ. ಅವರ ಪ್ರಾಣ, ಅವರ ಜೀವನ, ಅವರ ಸರ್ವಸ್ವವೂ ನಾನೇ ಆಗಿಬಿಟ್ಟಿದ್ದೇನೆ. ನನಗಾಗಿ ಅವರು ಪತಿ-ಪುತ್ರರನ್ನೂ, ಸಹೋದರರರನ್ನೂ, ಜ್ಞಾತಿ-ಬಂಧುಗಳನ್ನೂ ತೊರೆದುಬಿಟ್ಟಿದ್ದಾರೆ. ನನ್ನನ್ನೇ ಅವರು ಪ್ರಿಯತಮನೆಂದೂ ಸರ್ವಶ್ರೇಷ್ಠನಾದ ತಮ್ಮ ಆತ್ಮಸ್ವರೂಪನೇ–ಎಂದೂ ತಮ್ಮ ಸಂಪೂರ್ಣಮನಸ್ಸಿನಿಂದ ಭಾವಿಸಿಕೊಂಡುಬಿಟ್ಟಿದ್ದಾರೆ.

ಯೇ ತ್ಯಕ್ತಲೋಕಧರ್ಮಾಶ್ಚ ಮದರ್ಥೇ ತಾನ್ ಬಿಭರ್ಮ್ಯಹಮ್ ॥

ಯಾರು ನನ್ನ ಸಲುವಾಗಿ ಲೌಕಿಕಧರ್ಮಗಳನ್ನೂ ಪಾರಲೌಕಿಕಧರ್ಮಗಳನ್ನೂ ಪರಿತ್ಯಾಗಮಾಡಿಬಿಟ್ಟಿರುವರೋ ಅಂತಹವರ ಭರಣ-ಪೋಷಣೆಗಳನ್ನು ನಾನೇ ಮಾಡುತ್ತೇನೆ. ಇದು ನನ್ನ ಧರ್ಮವಾಗಿದೆ.*

ಉದ್ಧವ! ನಾನು ಆ ಗೋಪಿಯರಿಗೆ ಅತ್ಯಂತ ಪ್ರಿಯತಮನಾಗಿದ್ದೇನೆ. ನಾನು ಇಲ್ಲಿಗೆ ಬಂದನಂತರ ಅವರು ನನ್ನನ್ನು ಅತ್ಯಂತ ದೂರದಲ್ಲಿರುವನೆಂದು ಭಾವಿಸಿ, ನನ್ನನ್ನೇ ಯಾವಾಗಲೂ ಸ್ಮರಿಸುತ್ತಾ ವಿಮೋಹಗೊಳ್ಳುತ್ತಾರೆ. ಕೆಲವೊಮ್ಮೆ ಮೂರ್ಛಿತರೂ ಆಗುತ್ತಾರೆ. ವಿರಹವೇದನೆಯಿಂದ ದುಃಖಿತೆಯರಾದ ಅವರು, ತಮಗೆ ಇಷ್ಟನಾದ ನನ್ನನ್ನು ಹೊಂದಲು ತವಕಪಡುತ್ತಿರುತ್ತಾರೆ. ನನ್ನ ಪ್ರೇಯಸಿಯರಾದ ಗೋಪಿಯರು ಇದುವರೆಗೂ ಬಹಳ ಕಷ್ಟದಿಂದ ಮತ್ತು ಹೆಚ್ಚಿನ ಪ್ರಯತ್ನದಿಂದ ತಮ್ಮ ಪ್ರಾಣಗಳನ್ನು ಉಳಿಸಿಕೊಂಡಿ

---

* ಶ್ರೀಕೃಷ್ಣನು ಗೀತೆಯಲ್ಲಿ :

ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥ (೧೮-೬೬)

ಸರ್ವಧರ್ಮಗಳನ್ನು ಬಿಟ್ಟು ನನ್ನೊಬ್ಬನನ್ನೇ ಶರಣುಹೊಂದು. ನಾನು ನಿನ್ನನ್ನು ಸಕಲ ಪಾಪಗಳಿಂದಲೂ ಬಿಡುಗಡೆಗೊಳಿಸುವೆನು. ದುಃಖಿಸಬೇಡ.

ದ್ದಾರೆ. 'ನಾನು ಪುನಃ ನಿಮ್ಮಲ್ಲಿಗೆ ಬರುತ್ತೇನೆ'–ನನ್ನ ಈ ಒಂದು ಸಂದೇಶವೇ ಅವರಿಗೆ ಜೀವನದ ಆಧಾರವಾಗುತ್ತದೆ. ಗೋಪಿಯರ ಜೀವನಕ್ಕೆ ಆಧಾರಭೂತವಾದ ಈ ಸಂದೇಶವನ್ನು ನೀನು ಅವರಿಗೆ ಮುಟ್ಟಿಸಬೇಕಾಗಿದೆ. ಪ್ರಿಯಸಖನೇ! ಹೆಚ್ಚೇನು ಹೇಳಲಿ? ಅವರ ಆತ್ಮನು ನಾನೇ ಆಗಿದ್ದೇನೆ. ನಿತ್ಯನಿರಂತರವಾಗಿ ಆ ನನ್ನ ಪ್ರಿಯಗೋಪಿಯರು ನನ್ನಲ್ಲಿಯೇ ತನ್ಮಯರಾಗಿ ಬಿಟ್ಟಿರುತ್ತಾರೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಭಗವಾನ್ ಶ್ರೀಕೃಷ್ಣನು ಹೀಗೆ ಹೇಳಿದೊಡನೆಯೇ ಉದ್ಧವನು ಅತ್ಯಂತ ಆದರದಿಂದ ತನ್ನ ಸ್ವಾಮಿಯ ಸಂದೇಶವನ್ನು ಹೊತ್ತು ರಥದಲ್ಲಿ ಕುಳಿತು ನಂದಗೋಕುಲಕ್ಕೆ ಪ್ರಯಾಣಮಾಡಿದನು. ಶ್ರೀಮಂತನಾದ ಉದ್ಧವನು ಸೂರ್ಯಾಸ್ತಮಯಕ್ಕೆ ಸರಿಯಾಗಿ ಗೋಕುಲವನ್ನು ಸೇರಿದನು. ಆ ವೇಳೆಗೆ ಸರಿಯಾಗಿ ಗೋಕುಲದ ಹಸುಗಳು ಅರಣ್ಯದಿಂದ ಹಿಂದಿರುಗುತ್ತಿದ್ದುವು. ಅವುಗಳ ಗೊರಸುಗಳಿಂದ ಎದ್ದ ಧೂಳು ಉದ್ಧವನ ರಥವನ್ನೇ ಮುಚ್ಚಿಬಿಟ್ಟಿತು. ಗೋವುಗಳನ್ನು ಸಂಪರ್ಕಿಸಲು ಕೊಬ್ಬಿದ ಹೋರಿಗಳು ತಮ್ಮ-ತಮ್ಮಲ್ಲಿಯೇ ಸ್ಪರ್ಧಿಸುತ್ತಿದ್ದುವು. ಅವುಗಳ ಗರ್ಜನೆಯು ಗೋಕುಲದಲ್ಲಿ ಸರ್ವತ್ರ ಪ್ರತಿಧ್ವನಿಸುತ್ತಿದ್ದಿತು. ಸ್ವಲ್ಪ ದಿವಸಗಳ ಹಿಂದೆ ಈಯ್ದ ಹಸುಗಳು ತಮ್ಮ ಕೆಚ್ಚಲುಗಳು ಅತಿಭಾರವಾಗಿರುವುದನ್ನೂ ಲೆಕ್ಕಿಸದೆ ಕೊಟ್ಟಿಗೆಯಲ್ಲಿದ್ದ ಕರುಗಳ ಬಳಿಗೆ ನಾಗಾಲೋಟದಿಂದ ಓಡಿಹೋಗುತ್ತಿದ್ದುವು. ಅತ್ತಲಿತ್ತ ನೆಗೆ-ನೆಗೆದುಕೊಂಡು ಓಡಾಡುತ್ತಿದ್ದ ಬಿಳಿಯ ಕರುಗಳಿಂದ ಗೋಕುಲವು ಸಮಲಂಕೃತವಾಗಿದ್ದಿತು. ವೇಣುನಾದದೊಡನೆ ಹಸುಗಳ ಹಾಲುಕರೆಯುವ 'ಘರ್-ಘರ್' ಶಬ್ದವೂ ಕೇಳಿ ಬರುತ್ತಿದ್ದು ಕಿವಿಗಳಿಗೆ ಆಪ್ಯಾಯಮಾನವಾಗಿದ್ದಿತು. ವಸ್ತ್ರಾಭರಣಗಳಿಂದ ಸಮಲಂಕೃತರಾಗಿ ಬಲರಾಮ-ಕೃಷ್ಣರ ಶುಭಕರ್ಮಗಳನ್ನು ಗಾನಮಾಡುತ್ತಿದ್ದ ಗೋಪಿಯರಿಂದಲೂ ಮತ್ತು ಗೋಪಾಲರಿಂದಲೂ ಗೋಕುಲವು ವಿರಾಜಮಾನವಾಗಿ ಕಾಣುತ್ತಿದ್ದಿತು. ಗೋಪಾಲರ ಮನೆಗಳಲ್ಲಿ ಆ ಸಾಯಂಕಾಲದ ವೇಳೆಯಲ್ಲಿ ಅಗ್ನಿ, ಸೂರ್ಯ, ಅತಿಥಿಗಳು, ಗೋವುಗಳು, ಬ್ರಾಹ್ಮಣರು, ದೇವತೆಗಳು, ಪಿತೃಗಳು–ಇವರೆಲ್ಲರಿಗೂ ಯಥೋಚಿತವಾಗಿ

ಯಥಾವಿಧಿಯಾಗಿ ಪೂಜೆಗಳಾಗುತ್ತಿದ್ದುವು. ಧೂಪಗಳ ಸುವಾಸನೆಯು ಸರ್ವತ್ರ ಹರಡಿದ್ದಿತು. ಸರ್ವತ್ರ ಪ್ರಕಾಶಮಾನವಾಗಿ ದೀಪಗಳು ಬೆಳಗುತ್ತಿದ್ದುವು. ಅವರ ಮನೆಗಳನ್ನು ಪುಷ್ಪಹಾರಗಳಿಂದ ಅಲಂಕರಿಸಿದ್ದರು. ಅಂತಹ ಮನೋಹರವಾದ ಮನೆಗಳಿಂದ ಕೂಡಿದ್ದ ಗೋಕುಲವು ಮನಸ್ಸಿಗೆ ಆನಂದವನ್ನುಂಟುಮಾಡುವುದಾಗಿದ್ದಿತು. ಗೋಕುಲದ ನಾಲ್ಕು ಕಡೆಗಳಲ್ಲಿಯೂ ದುಂಬಿಗಳಿಂದ ಝೇಂಕರಿಸಲ್ಪಡುತ್ತಿದ್ದ ಹೂದೋಟಗಳಿದ್ದು ಅಲ್ಲಿ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದುವು. ಕಮಲದ ದಂಟುಗಳಿಂದ ಸಮಲಂಕೃತವಾದ ಮತ್ತು ಹಂಸ-ಕಾರಂಡವಪಕ್ಷಿಗಳಿಂದ ವ್ಯಾಪ್ತವಾದ ಸುಂದರವಾದ ಸರೋವರಗಳಿಂದಲೂ ಕೂಡಿದ್ದು ಗೋಕುಲವು ಅತ್ಯಂತಶೋಭಾಯಮಾನ ವಾಗಿ ಕಾಣುತ್ತಿದ್ದಿತು.

ಶ್ರೀಕೃಷ್ಣನ ಅನುಚರನೂ ಮತ್ತು ಅವನಿಗೆ ಅತ್ಯಂತಪ್ರಿಯನೂ ಆದ ಉದ್ಧವನು ಗೋಕುಲಕ್ಕೆ ಬಂದೊಡನೆಯೇ ನಂದಗೋಪನು ಮುಂದಾಗಿ ಹೋಗಿ ಅವನನ್ನು–ವಾಸುದೇವನೇ ಬಂದಿರುವನೆಂದು ಭಾವಿಸಿ ಅತ್ಯಂತ ಪ್ರೀತಿಯಿಂದ ಆಲಿಂಗಿಸಿಕೊಂಡು ಸಮ್ಮಾನಿಸಿದನು. ಪಾಯಸಾದಿಗಳಿಂದ ಕೂಡಿದ ಭೋಜನವನ್ನು ಮಾಡಿಸಿದನು. ಬಳಿಕ ಉದ್ಧವನನ್ನು ಮೆತ್ತೆಯ ಮೇಲೆ ಕುಳ್ಳಿರಿಸಿ ಕೈ-ಕಾಲುಗಳನ್ನೊತ್ತಿ ಗಾಳಿಯನ್ನು ಬೀಸಿದನು. ಇಂತಹ ಉಪಚಾರಗಳಿಂದ ಆಯಾಸವನ್ನು ಪರಿಹರಿಸಿಕೊಂಡು ಸುಖಾಸೀನನಾಗಿದ್ದ ಉದ್ಧವನನ್ನು ನಂದಗೋಪನು ಪ್ರಶ್ನಿಸಿದನು :

"ಪರಮಭಾಗ್ಯಶಾಲಿಯಾದ ಉದ್ಧವನೇ! ಶೂರನ ಮಗನೂ ನನ್ನ ಗೆಳೆಯನೂ ಆದ ವಸುದೇವನು ಸೆರೆಮನೆಯಿಂದ ಮುಕ್ತನಾಗಿ ತನ್ನ ಆತ್ಮೀಯರಾದ ಸ್ವಜನರಿಂದಲೂ, ಸುಹೃದರಿಂದಲೂ, ಭಾರ್ಯಾಪುತ್ರರಿಂದಲೂ ಕೂಡಿ ಕುಶಲಿಯಾಗಿರುವನಲ್ಲವೇ? ಸೌಭಾಗ್ಯದ ಕಾರಣದಿಂದ ಪಾಪಿಷ್ಠನಾದ ಕಂಸನು ತಾನೇ ಮಾಡಿದ ಪಾಪಗಳ ಫಲವಾಗಿ ತನ್ನ ಅನುಯಾಯಿಗಳೊಡನೆ ಮರಣಹೊಂದಿದನು. ಧರ್ಮಶೀಲರಾದ, ಸ್ವಭಾವತಃ ಸಾಧುಗಳಾದ ಯಾದವರನ್ನು ಆ ಕಂಸನು ಸದಾಕಾಲದಲ್ಲಿಯೂ ನಿಷ್ಕಾರಣವಾಗಿ ದ್ವೇಷಿಸುತ್ತಿದ್ದನು. ಅದಿರಲಿ, ಉದ್ಧವ! ಜಗದಾನಂದಕಂದನಾದ ನಮ್ಮ ಕೃಷ್ಣನು ನಮ್ಮನ್ನು ಸ್ಮರಿಸಿಕೊಳ್ಳುತ್ತಿರುವನೇ? ತನ್ನ ತಾಯಿಯಾದ ಯಶೋದೆ

ಯನ್ನೂ, ಸುಹೃದರನ್ನೂ, ಗೆಳೆಯರನ್ನೂ, ಗೋಪರನ್ನೂ, ಗೋಕುಲ ವನ್ನೂ, ಅವನ ಒಡೆತನಕ್ಕೇ ಸೇರಿದ ಗೋವುಗಳನ್ನೂ, ವೃಂದಾವನವನ್ನೂ, ಗೋವರ್ಧನಪರ್ವತವನ್ನೂ ಯಾವಾಗಲಾದರೂ ಜ್ಞಾಪಿಸಿಕೊಳ್ಳುವನೇ? ಯಾವಾಗಲಾದರೂ ಒಮ್ಮೆ ಗೋವಿಂದನು ಸ್ವಜನರನ್ನು ಕಾಣಲು ಬರುವನೇ? ಹಾಗೇನಾದರೂ ಬಂದುದಾದರೆ ಆಗ ನಾವು ಅವನ ವಿಕಸಿತ ವದನಾರವಿಂದವನ್ನೂ, ಸುಂದರವಾದ ಮೂಗನ್ನೂ, ಮುಖದ ಮೇಲೆ ಮಿಂಚಿನಂತೆ ಕಾಣುವ ಕಿರುನಗೆಯನ್ನೂ, ಕುಡಿನೋಟವನ್ನೂ ನೋಡಿ ಆನಂದಿಸುವೆವು.

ಕೃಷ್ಣಪ್ರಿಯನೇ! ಮುಕುಂದನ ಹೃದಯವು ಉದಾರವಾದದ್ದು, ಅವನ ಶಕ್ತಿಯು ಅನಂತವಾದದ್ದು. ಅತಿಕ್ರಮಿಸಲು ಅಸಾಧ್ಯವಾಗಿದ್ದ ಹಲವಾರು ಮೃತ್ಯುಸಂಕಟಗಳಿಂದ ಅವನು ನಮ್ಮನ್ನು ಪಾರುಮಾಡಿದ್ದಾನೆ. ಕಾಡುಗಿಚ್ಚಿನಿಂದ ಪಾರುಮಾಡಿದ. ಪ್ರಚಂಡವಾದ ಗಾಳಿ-ಮಳೆಗಳಿಂದ ಪಾರು ಮಾಡಿದ. ವೃಷಭಾಸುರ, ಅಜಗರ, ಕಾಳಿಂಗಸರ್ಪ–ಇವೇ ಮೊದಲಾದ ಮೃತ್ಯುರೂಪರಾದ ಅಸುರ-ರಾಕ್ಷಸ-ಸರ್ಪಗಳಿಂದ ದಯಾಮಯನಾದ ಶ್ರೀಕೃಷ್ಣನು ನಮ್ಮನ್ನು ರಕ್ಷಿಸಿದನು. ಶ್ರೀಕೃಷ್ಣನ ವೀರ್ಯ-ಪರಾಕ್ರಮ ಗಳನ್ನೂ, ವಿಲಾಸಪೂರ್ಣವಾದ ಕಟಾಕ್ಷವೀಕ್ಷಣವನ್ನೂ, ಕಿರುನಗೆಯನ್ನೂ, ಮೃದು-ಮಧುರವಾದ ಮಾತುಗಳನ್ನೂ ಸ್ಮರಿಸಿಕೊಳ್ಳುತ್ತಾ ನಮ್ಮನ್ನೇ ನಾವು ಮರೆತುಬಿಡುತ್ತೇವೆ. ತನ್ಮಯರಾಗಿಬಿಡುತ್ತೇವೆ. ಯಾವ ಕಾರ್ಯವನ್ನೂ ಮಾಡಲು ತೋಚುವುದಿಲ್ಲ. ಕಾರ್ಯಗಳೆಲ್ಲವೂ ಹಾಗೆಯೇ ಉಳಿದುಬಿಡುತ್ತವೆ. ನಾವು ಯಮುನಾನದಿಗೆ ಹೋದೊಡನೆಯೇ ಶ್ರೀಕೃಷ್ಣನು ಕಾಳಿಂಗಮರ್ದನಮಾಡಿದುದು, ಗೋಪಿಯರೊಡನೆ ಜಲಕ್ರೀಡೆ ಯಾಡಿದುದು ನೆನಪಿಗೆ ಬರುತ್ತದೆ. ಗೋವರ್ಧನಪರ್ವತವನ್ನು ನೋಡಿ ದೊಡನೆ ಏಳು ದಿವಸಗಳ ಕಾಲ ಒಂದೇ ಕೈಯಲ್ಲಿ ಅದನ್ನು ಎತ್ತಿ ಹಿಡಿದುದು ನೆನಪಿಗೆ ಬರುತ್ತದೆ. ವೃಂದಾವನಕ್ಕೆ ಹೋದೊಡನೆಯೇ ಮುಕುಂದನು ತನ್ನ ಗೆಳೆಯರೊಡನೆ ಹಸುಗಳನ್ನು ಮೇಯಿಸುತ್ತಿದ್ದುದು ನೆನಪಿಗೆ ಬರುತ್ತದೆ. ಈಗಲೂ ಆ ಸ್ಥಳಗಳಲ್ಲಿ ಅಲಂಕಾರಪ್ರಾಯವಾಗಿರುವ ಅವನ ಪುಟ್ಟ ಹೆಜ್ಜೆಗಳು ಅಚ್ಚಳಿಯದೇ ಕಾಣುತ್ತವೆ. ಇವೆಲ್ಲವನ್ನೂ ನೋಡಿದೊಡನೆಯೇ

ನಮ್ಮ ಮನಸ್ಸು ಬಾಲಮುಕುಂದನ ತಾದಾತ್ಮ್ಯವನ್ನು ಹೊಂದಿಬಿಡುತ್ತದೆ. ಅವನಲ್ಲಿಯೇ ನಮ್ಮ ಮನಸ್ಸು ಸೇರಿಹೋಗುತ್ತದೆ.

ದೇವಶ್ರೇಷ್ಠರಾದ ರಾಮ-ಕೃಷ್ಣರು ದೇವತೆಗಳ ಪ್ರಯೋಜನಸಿದ್ಧಿಗಾಗಿ ಇಲ್ಲಿ ಅವತರಿಸಿರುವರೆಂದು ನಾನು ಭಾವಿಸುತ್ತೇನೆ. ಗರ್ಗಾಚಾರ್ಯರೂ ಇದನ್ನು ಹೀಗೆಯೇ ನಮಗೆ ಹೇಳಿದ್ದಾರೆ. ಹತ್ತುಸಾವಿರ ಆನೆಗಳ ಬಲದಷ್ಟು ಬಲಿಷ್ಠನಾಗಿದ್ದ ಕಂಸನನ್ನೂ, ಅಜೇಯರೆನಿಸಿದ್ದ ಮುಷ್ಟಿಕ-ಚಾಣೂರಮಲ್ಲ ರನ್ನೂ, ಕುವಲಯಾಪೀಡಗಜವನ್ನೂ ಇವರಿಬ್ಬರೂ ಸೇರಿ ಸಿಂಹವು ಕ್ಷುದ್ರ ಪಶುಗಳನ್ನು ಸಂಹರಿಸುವಂತೆ–ಆಟವಾಡುತ್ತಲೇ ಸಂಹರಿಸಿದರು. ಮೂರು ಧನುಸ್ಸುಗಳಷ್ಟು ಉದ್ದವಾಗಿದ್ದ ಅತ್ಯಂತದೃಢವಾಗಿದ್ದ ಮಹಾಧನುಸ್ಸನ್ನು–ಗಜರಾಜನು ಕೋಲನ್ನು ಅಥವಾ ಕಬ್ಬಿನಜಲ್ಲೆಯನ್ನು ಮುರಿದುಹಾಕುವಂತೆ ಶ್ರೀಕೃಷ್ಣನು ಮುರಿದುಹಾಕಿದನು. ಒಂದೇ ಕೈಯಲ್ಲಿ ಗೋವರ್ಧನಪರ್ವತ ವನ್ನು ಏಳು ದಿವಸಗಳವರೆಗೆ ಹಿಡಿದೆತ್ತಿ ನಿಂತಿದ್ದನು. ನಮ್ಮ ಬಾಲ ಮುಕುಂದನು ನಮ್ಮೆಲ್ಲರ ಸಮಕ್ಷದಲ್ಲಿಯೇ ಆಡುತ್ತಾಡುತ್ತಲೇ ಪ್ರಲಂಬ-ಧೇನುಕ-ಅರಿಷ್ಟ-ತೃಣಾವರ್ತ-ಬಕ–ಇವರೇ ಮೊದಲಾದ ಮಹಾಮಹಾ ದೈತ್ಯರನ್ನು ಸಂಹರಿಸಿದನು. ಈ ದೈತ್ಯರೆಲ್ಲರೂ ದೇವತೆಗಳನ್ನೂ ಅಸುರ ರನ್ನೂ ಜಯಿಸಿದವರೇ ಆಗಿದ್ದು ಅಪ್ರತಿಮಪರಾಕ್ರಮಿಗಳಾಗಿದ್ದರು. ಅಂತಹ ಅದ್ಭುತಕಾರ್ಯಗಳನ್ನು ಮಾಡಿರುವ ಬಲರಾಮ-ಕೃಷ್ಣರು ದೇವತಾ ಸ್ವರೂಪರೇ–ಎಂಬುದರಲ್ಲಿ ಸಂದೇಹವೇನಿದೆ?"

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಶ್ರೀಕೃಷ್ಣನಲ್ಲಿಯೇ ಅನುರಕ್ತವಾದ ಮನಸ್ಸಿನಿಂದ ಕೂಡಿದ್ದ ನಂದಗೋಪನು ಹೀಗೆ ಶ್ರೀಕೃಷ್ಣನ ಬಾಲಲೀಲೆಗಳೆಲ್ಲ ವನ್ನೂ ಒಂದಾದ ಮೇಲೆ ಒಂದರಂತೆ ಸ್ಮರಿಸುತ್ತಾ ಪ್ರೇಮಾವೇಶದಿಂದ ಗದ್ಗದ ನಾಗಿ ಮುಂದೆ ಮಾತನಾಡಲಾಗದೆ ಸುಮ್ಮನಾಗಿಬಿಟ್ಟನು. ಅವನಿಗೆ ಶ್ರೀಕೃಷ್ಣ ನನ್ನು ನೋಡಬೇಕೆಂಬ ಕಾತುರವು ಹೆಚ್ಚಾಗಿಬಿಟ್ಟಿತು. ಯಶೋದಾ ದೇವಿಯೂ ನಂದನು ವರ್ಣಿಸುತ್ತಿದ್ದ ತನ್ನ ಬಾಲಮುಕುಂದನ ಚರಿತ್ರೆಗಳನ್ನು ಕೇಳುತ್ತಾ ಆನಂದಬಾಷ್ಪಗಳನ್ನು ಧಾರಾಕಾರವಾಗಿ ಸುರಿಸುತ್ತಿದ್ದಳು. ಪುತ್ರ ಸ್ನೇಹದ ಸ್ಮರಣೆಯಿಂದಾಗಿ ಅವಳ ಸ್ತನಗಳಿಂದ ಹಾಲು ಸ್ರವಿಸತೊಡಗಿತು.

ಭಗವಂತನಾದ ಶ್ರೀಕೃಷ್ಣನಲ್ಲಿ ನಂದ-ಯಶೋದೆಯರಿಗಿದ್ದ ಅಗಾಧವಾದ ಪುತ್ರಪ್ರೇಮವನ್ನು ಕಂಡು ಉದ್ಧವನು ಆನಂದಭರಿತನಾಗಿ ದಂಪತಿಗಳಿಗೆ ಹೇಳಿದನು :

"ಮಾನದನೇ! ನಂದಗೋಪ! ನೀವಿಬ್ಬರೂ ದೇಹಧಾರಿಗಳಲ್ಲಿಯೇ ಅತ್ಯಂತ ಶ್ಲಾಘ್ಯತಮರಾಗಿರುವಿರಿ. ಅಖಿಲಲೋಕಗುರುವಾದ ಶ್ರೀಮನ್ನಾರಾಯಣನಲ್ಲಿ ನಿಮಗೆ ಈ ವಿಧವಾದ ಪುತ್ರವಾತ್ಸಲ್ಯವಿರುವುದಲ್ಲವೇ? ನಂದ! ನಿನ್ನ ಮಕ್ಕಳಾದ ರಾಮ-ಕೃಷ್ಣರು ಸಾಮಾನ್ಯರಲ್ಲ. ಪುರಾಣಪುರುಷರು. ಅವರು ಈ ಅಖಂಡವಿಶ್ವಕ್ಕೂ ಉಪಾದಾನಕಾರಣರೂ ನಿಮಿತ್ತಕಾರಣರೂ ಆಗಿರುತ್ತಾರೆ. ಮುಕುಂದನು ಪುರುಷನಾದರೆ ರಾಮನು ಪ್ರಕೃತಿಯಾಗಿರು ತ್ತಾನೆ. ರಾಮ-ಕೃಷ್ಣರು ಸಕಲಪ್ರಾಣಿಗಳಲ್ಲಿಯೂ ಪ್ರವೇಶಿಸಿ ನಾನಾಭೇದ ವುಳ್ಳ ಚೈತನ್ಯಾತ್ಮಕವಾದ ಜೀವರನ್ನು ನಿಯಂತ್ರಿಸುತ್ತಾರೆ. (ಪ್ರಾಣಿಗಳಲ್ಲಿ ಅಂತರ್ಯಾಮಿತ್ವದಿಂದ ಪ್ರವೇಶಿಸಿ ಅವುಗಳಿಗೆ ಅಪ್ರಾಕೃತಜ್ಞಾನವನ್ನು ಕೊಡುವವರಾಗುತ್ತಾರೆ. ಭಕ್ತರಿಗೆ ಭಗವಂತನ ಜ್ಞಾನವನ್ನೂ, ಜ್ಞಾನಿಗಳಿಗೆ ಬ್ರಹ್ಮಜ್ಞಾನವನ್ನೂ, ಕರ್ಮಠರಿಗೆ ಸ್ವರ್ಗಾದಿಗಳ ಸಾಧನಭೂತವಾದ ಪ್ರಾಕೃತಜ್ಞಾನವನ್ನೂ ದಯಪಾಲಿಸುವವರಾಗುತ್ತಾರೆ.)

ಯಸ್ಮಿಞ್ಜನಃ ಪ್ರಾಣವಿಯೋಗಕಾಲೇ
ಕ್ಷಣಂ ಸಮಾವೇಶ್ಯ ಮನೋ ವಿಶುದ್ಧಮ್ ।
ನಿರ್ಹೃತ್ಯ ಕರ್ಮಾಶಯಮಾಶು ಯಾತಿ
ಪರಾಂ ಗತಿಂ ಬ್ರಹ್ಮಮಯೋऽರ್ಕವರ್ಣಃ ॥೩೨॥

ಯಾವ ಜೀವನು ಪ್ರಾಣಪ್ರಯಾಣದ ಸಮಯದಲ್ಲಿ ಶುದ್ಧವಾದ ಮನಸ್ಸನ್ನು ಒಂದು ಕ್ಷಣವಾದರೂ ಭಗವಂತನಲ್ಲಿ ಸಮಾವೇಶಗೊಳಿಸುವನೋ ಅಂತಹವನು ಅತ್ಯಂತಶೀಘ್ರವಾಗಿ ಸಮಸ್ತವಾದ ಕರ್ಮವಾಸನೆಗಳನ್ನೂ ಕಳೆದುಕೊಂಡು ಸೂರ್ಯನಂತೆ ತೇಜಸ್ವಿಯೂ ಬ್ರಹ್ಮಮಯನೂ ಆಗಿ ಪರಮಗತಿಯನ್ನು ಹೊಂದುತ್ತಾನೆ.*

---

* ಶ್ರೀಕೃಷ್ಣನು ಗೀತೆಯಲ್ಲಿ :

ಅನ್ತಕಾಲೇ ಚ ಮಾಮೇವ ಸ್ಮರನ್ಮುಕ್ತ್ವಾ ಕಲೇವರಮ್ ।
ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ ॥ (5-8)

ತಸ್ಮಿನ್ ಭವನ್ತಾವಖಿಲಾತ್ಮಹೇತೌ
ನಾರಾಯಣೇ ಕಾರಣಮರ್ತ್ಯಮೂರ್ತೌ ।
ಭಾವಂ ವಿಧತ್ತಾಂ ನಿತರಾಂ ಮಹಾತ್ಮನ್
ಕಿಂ ವಾವಶಿಷ್ಟಂ ಯುವಯೋಃ ಸುಕೃತ್ಯಮ್ ॥೩೩॥

ಭಗವಂತನಾದ ಶ್ರೀಕೃಷ್ಣನು ಸಮಸ್ತಪ್ರಾಣಿಗಳ ಆತ್ಮಸ್ವರೂಪನೂ ಪರಮಕಾರಣನೂ ಆಗಿದ್ದಾನೆ. ಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸಿ ಕೊಡುವುದಕ್ಕಾಗಿಯೂ ಮತ್ತು ಭೂಭಾರವನ್ನು ಇಳಿಸುವ ಸಲುವಾಗಿಯೂ ಅವನಿಲ್ಲಿ ಅವತರಿಸಿದ್ದಾನೆ. ಮಹಾತ್ಮರಾದ ದಂಪತಿಗಳೇ! ಅಂತಹ ಪರಮ ಪುರುಷನಾದ ಪರಮಾತ್ಮನಲ್ಲಿ ನೀವು ನಿರತಿಶಯವಾದ ಪುತ್ರವಾತ್ಸಲ್ಯವನ್ನು ಹೊಂದಿರುವಿರಿ. ಇದಕ್ಕಿಂತಲೂ ಮಿಗಿಲಾದ ಶುಭಕರ್ಮವು ಬೇರೆ ಯಾವುದಿದೆ? ಬೇರಾವ ಶುಭಕರ್ಮವನ್ನು ನೀವು ಮಾಡಿ ಮುಗಿಸಬೇಕಾಗಿದೆ? ನಂದ! ಭಕ್ತವತ್ಸಲನಾದ, ಯದುವಂಶಶಿರೋಮಣಿಯಾದ ಭಗವಾನ್ ಶ್ರೀಕೃಷ್ಣನು ಸ್ವಲ್ಪ ದಿವಸಗಳಲ್ಲಿಯೇ ವ್ರಜಕ್ಕೆ ಬರುವನು. ಮಾತಾ-ಪಿತೃ ಗಳಾದ ನಿಮ್ಮನ್ನು ತನ್ನ ಕರುಣಾಕಟಾಕ್ಷವೀಕ್ಷಣದಿಂದ ಆನಂದಗೊಳಿಸುತ್ತಾನೆ. ಸಮಸ್ತಯದುವಂಶೀಯರಿಗೂ ದ್ರೋಹಿಯಾದ ಕಂಸನನ್ನು ರಂಗಮಂಟಪ ದಲ್ಲಿ ಸಂಹರಿಸಿದನಂತರ ನಿಮ್ಮ ಬಳಿಗೆ ಬಂದು–'ನಾನು ವ್ರಜಕ್ಕೆ ಶೀಘ್ರವಾಗಿಯೇ ಬರುತ್ತೇನೆ'–ಎಂಬ ಯಾವ ಮಾತನ್ನು ಹೇಳಿದ್ದನೋ ಆ ಮಾತನ್ನು ಶ್ರೀಕೃಷ್ಣನು ಸತ್ಯದ ಮಾತನ್ನಾಗಿ ಮಾಡುತ್ತಾನೆ.

ಮಹಾಭಾಗ್ಯಶಾಲಿಗಳೇ! ನಂದ-ಯಶೋದೆಯರೇ! ದುಃಖಿಸಬೇಡಿರಿ. ಕಟ್ಟಿಗೆಯೊಳಗೆ ಬೆಂಕಿಯಿರುವಂತೆ–ಸಮಸ್ತಪ್ರಾಣಿಗಳ ಹೃದಯದಲ್ಲಿಯೂ ಇರುವ ಜಗದಾನಂದಕಂದನಾದ ಶ್ರೀಕೃಷ್ಣನನ್ನು ನೀವು ನಿಮ್ಮ ಸಮೀಪದಲ್ಲೇ ಕಾಣುವಿರಿ.

ನ ಹ್ಯಸ್ಯಾಸ್ತಿ ಪ್ರಿಯಃ ಕಶ್ಚಿನ್ನಾಪ್ರಿಯೋ ವಾಸ್ತ್ಯಮಾನಿನಃ ।
ನೋತ್ತಮೋ ನಾಧಮೋ ನಾಪಿ ಸಮಾನಸ್ಯಾಸಮೋಽಪಿ ವಾ ॥೩೭॥

ಅಂತ್ಯಕಾಲದಲ್ಲಿ ನನ್ನನ್ನೇ ಸ್ಮರಿಸುತ್ತಾ ಯಾವನು ಶರೀರವನ್ನು ಬಿಡುತ್ತಾನೋ ಅವನು ನಿಸ್ಸಂಶಯವಾಗಿಯೂ ನನ್ನ ಸ್ವರೂಪವನ್ನೇ ಪಡೆಯುತ್ತಾನೆ.

ಅಹಂಕಾರಾದಿ ಮಾಯಾಗುಣಗಳಿಗೆ ಅಧೀನನಾಗದ ಅವನಿಗೆ ಈ ಲೋಕದಲ್ಲಿ ಪ್ರಿಯನಾದವನೂ ಇಲ್ಲ ; ಅಪ್ರಿಯನಾದವನೂ ಇಲ್ಲ. ಸರ್ವರಲ್ಲಿಯೂ ಸಮದೃಷ್ಟಿಯಿರುವ ಅವನಿಗೆ (ಅವನ ದೃಷ್ಟಿಯಲ್ಲಿ) ಉತ್ತಮನೆಂಬುವವನೂ ಇಲ್ಲ ; ಅಧಮನೆಂಬುವವನೂ ಇಲ್ಲ ; ಅಸಮಾನನೆಂಬುವವನೂ ಇಲ್ಲ.*

ನ ಮಾತಾ ನ ಪಿತಾ ತಸ್ಯ ನ ಭಾರ್ಯಾ ನ ಸುತಾದಯಃ ।
ನಾತ್ಮೀಯೋ ನ ಪರಶ್ಚಾಪಿ ನ ದೇಹೋ ಜನ್ಮ ಏವ ಚ ॥೩೮॥

ಪರಮಪುರುಷನಾದ ಶ್ರೀಕೃಷ್ಣನಿಗೆ ತಾಯಿಯೆಂಬುವಳೂ ಇಲ್ಲ ; ತಂದೆಯೆಂಬುವನೂ ಇಲ್ಲ. ಭಾರ್ಯೆಯೂ ಇಲ್ಲ ; ಮಕ್ಕಳೂ ಇಲ್ಲ. ಆತ್ಮೀಯನೂ ಇಲ್ಲ ; ಪರಕೀಯನೂ ಇಲ್ಲ. ದೇಹವೂ ಇಲ್ಲ ; ಜನ್ಮವೂ ಇಲ್ಲ.

ನ ಚಾಸ್ಯ ಕರ್ಮ ವಾ ಲೋಕೇ ಸದಸನ್ಮಿಶ್ರಯೋನಿಷು ।
ಕ್ರೀಡಾರ್ಥಃ ಸೋಽಪಿ ಸಾಧೂನಾಂ ಪರಿತ್ರಾಣಾಯ ಕಲ್ಪತೇ ॥೩೯॥

ಅವನಿಗೆ ಈ ಲೋಕದಲ್ಲಿ ಮಾಡಬೇಕಾದ ಕರ್ಮವೇನೂ ಇರುವುದಿಲ್ಲ. ಆದರೂ ಸಾಧುಗಳ ರಕ್ಷಣೆಗಾಗಿಯೂ ತನ್ನ ಲೀಲಾವಿನೋದಗಳನ್ನು ಭಕ್ತರಿಗೆ ತೋರಿಸುವ ಸಲುವಾಗಿಯೂ ದೇವತೆಯೇ ಮೊದಲಾದ ಸಾತ್ತ್ವಿಕಯೋನಿಗಳಲ್ಲಿಯೂ, ಮತ್ಸ್ಯವೇ ಮೊದಲಾದ ತಾಮಸಿಕ ಯೋನಿಗಳಲ್ಲಿಯೂ, ಮನುಷ್ಯನೇ ಮೊದಲಾದ ಮಿಶ್ರಯೋನಿಗಳಲ್ಲಿಯೂ ಭಗವಂತನು ಅವತರಿಸುತ್ತಾನೆ.[1]

---

* ಶ್ರೀಕೃಷ್ಣನು ಗೀತೆಯಲ್ಲಿ :

ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।
ಯೇ ಭಜನ್ತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥ (9-29)

ನಾನು ಎಲ್ಲ ಭೂತಗಳಲ್ಲಿಯೂ ಸಮನಾಗಿರುವೆನು. ನನಗೆ ದ್ವೇಷ್ಯನೂ ಇಲ್ಲ ; ಪ್ರಿಯನೂ ಇಲ್ಲ. ಆದರೆ ಯಾರು ನನ್ನನ್ನು ಭಕ್ತಿಯಿಂದ ಪೂಜಿಸುವರೋ ಅವರು ನನ್ನಲ್ಲಿರುವರು ಮತ್ತು ನಾನು ಅವರಲ್ಲಿರುವೆನು.

1 ಶ್ರೀಕೃಷ್ಣನು ಗೀತೆಯಲ್ಲಿ :

ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥ (3-22)

ಸತ್ತ್ವಂ ರಜಸ್ತಮ ಇತಿ ಭಜತೇ ನಿರ್ಗುಣೋ ಗುಣಾನ್ ।
ಕ್ರೀಡನ್ನತೀತೋಽತ್ರ ಗುಣೈಃ ಸೃಜತ್ಯವತಿ ಹನ್ತ್ಯಜಃ ॥೪೦॥

ನಂದಗೋಪ! ಭಗವಂತನು (ಶ್ರೀಕೃಷ್ಣನು) ಹುಟ್ಟು-ಸಾವುಗಳಿಲ್ಲದವನು ; ನಿರ್ಗುಣನು. ಸತ್ತ್ವ-ರಜಸ್ತಮಗಳೆಂಬ ಯಾವ ಗುಣಗಳೂ ಅವನಲ್ಲಿಲ್ಲ. ಯದ್ಯಪಿ ಅವನು ಗುಣಾತೀತನಾಗಿದ್ದರೂ ಮಾಯಾಮಯವಾದ ಕ್ರೀಡೆಯನ್ನಾಡುತ್ತಾ ಸತ್ತ್ವ-ರಜಸ್ತಮಗಳೆಂಬ ಮೂರು ಗುಣಗಳನ್ನೂ ಸ್ವೀಕರಿಸಿ ಈ ಜಗತ್ತನ್ನು ಸೃಷ್ಟಿಸುತ್ತಾನೆ ; ಪೋಷಿಸುತ್ತಾನೆ ಮತ್ತು ಲಯಗೊಳಿಸುತ್ತಾನೆ.

ಯಥಾ ಭ್ರಮರಿಕಾದೃಷ್ಟ್ಯಾ ಭ್ರಾಮ್ಯತೀವ ಮಹೀಯತೇ ।
ಚಿತ್ತೇ ಕರ್ತರಿ ತತ್ರಾತ್ಮಾ ಕರ್ತೇವಾಹಂಧಿಯಾ ಸ್ಮೃತಃ ॥೪೧॥

ಹುಡುಗರು ಅಪ್ಪಾಲೆ-ತಿಪ್ಪಾಲೆಯಾಡುವಾಗ ಅವರ ಸುತ್ತಲೂ ಇರುವ ಪದಾರ್ಥಗಳೆಲ್ಲವೂ ತಿರುಗುತ್ತಿರುವಂತೆ ಕಾಣುತ್ತವೆ. ಆದರೆ ಆ ವಸ್ತುಗಳು ವಾಸ್ತವವಾಗಿ ತಿರುಗುತ್ತಿರುವುದಿಲ್ಲ. ಅಂತೆಯೇ ಚಿತ್ತವೇ ಎಲ್ಲವನ್ನೂ ಮಾಡುವುದಾಗಿರುತ್ತದೆ. ಆದರೆ ಆ ಶುದ್ಧಚೈತನ್ಯದಲ್ಲಿ ಅಹಂಬುದ್ಧಿಯ ಪ್ರವೇಶವಾಗುವುದರಿಂದ ಆತ್ಮನು ಕರ್ತೃವಿನಂತೆ ಪ್ರತೀತ ನಾಗುತ್ತಾನೆ.

ಯುವಯೋರೇವ ನೈವಾಯಮಾತ್ಮಜೋ ಭಗವಾನ್ ಹರಿಃ ।
ಸರ್ವೇಷಾಮಾತ್ಮಜೋ ಹ್ಯಾತ್ಮಾ ಪಿತಾ ಮಾತಾ ಸ ಈಶ್ವರಃ ॥೪೨॥

ನಂದ! ಕೃಷ್ಣಸ್ವಾಮಿಯು ನಿಮ್ಮಿಬ್ಬರಿಗೆ ಮಾತ್ರವೇ ಪುತ್ರನಾಗಿಲ್ಲ. ಸಮಸ್ತಪ್ರಾಣಿಗಳಿಗೂ ಆತ್ಮಸ್ವರೂಪನು ಇವನೇ ಆಗಿದ್ದಾನೆ. ಪುತ್ರನೂ, ತಂದೆ ಮತ್ತು ತಾಯಿಯೂ ಆಗಿದ್ದಾನೆ.

ದೃಷ್ಟಂ ಶ್ರುತಂ ಭೂತಭವದ್ಭವಿಷ್ಯತ್
ಸ್ಥಾಸ್ನುಶ್ಚರಿಷ್ಣುರ್ಮಹದಲ್ಪಕಂ ಚ ।

ಪಾರ್ಥ! ಮೂರು ಲೋಕಗಳಲ್ಲಿಯೂ ನಾನು ಮಾಡಬೇಕಾದುದೇನೂ ಇಲ್ಲ. ಅಥವಾ ನಾನು ಇದುವರೆಗೆ ಪಡೆಯದೇ ಮುಂದೆ ಪಡೆಯಬೇಕಾದುದೂ ಇಲ್ಲ. ಆದರೂ ನಾನು ಕರ್ಮದಲ್ಲಿಯೇ ತೊಡಗಿರುವೆನು.

ವಿನಾಚ್ಯುತಾದ್ವಸ್ತು ತರಾಂ ನ ವಾಚ್ಯಂ
ಸ ಏವ ಸರ್ವಂ ಪರಮಾರ್ಥಭೂತಃ ॥೪೩॥

ನಂದಗೋಪ! ಲೋಕದಲ್ಲಿ ಕಾಣಲ್ಪಡುವ ಮತ್ತು ಹೇಳಲ್ಪಡುವ ವಸ್ತುಗಳಲ್ಲಿ ಹಿಂದಕ್ಕೆ ಸಂಬಂಧಿಸಿದ, ವರ್ತಮಾನಕ್ಕೆ ಸಂಬಂಧಿಸಿದ ಮತ್ತು ಭವಿಷ್ಯತ್ತಿಗೆ ಸಂಬಂಧಿಸಿದ ವಸ್ತುಗಳಲ್ಲಿ, ಸ್ಥಾವರ-ಜಂಗಮವಸ್ತುಗಳಲ್ಲಿ ಮಹತ್ತರ ಮತ್ತು ಅಲ್ಪವಾದ ವಸ್ತುಗಳಲ್ಲಿ ಯಾವುದೇ ವಸ್ತುವಾದರೂ ಅಚ್ಯುತನಿಗಿಂತ ಬೇರೆಯಾದ ವಸ್ತುವೆಂದು ಹೇಳಬಾರದು. ಎಲ್ಲ ವಸ್ತುಗಳಲ್ಲಿಯೂ ಅಚ್ಯುತನಿದ್ದಾನೆ. ಸರ್ವಂ ವಿಷ್ಣುಮಯಂ ಜಗತ್. ಪರಮಾರ್ಥದಲ್ಲಿ ಸರ್ವಸ್ವವೂ ಅಚ್ಯುತನೇ ಆಗಿದ್ದಾನೆ."

ಪರೀಕ್ಷಿತಮಹಾರಾಜ! ನಂದಗೋಪನೂ ಮತ್ತು ಕೃಷ್ಣನ ಗೆಳೆಯನಾದ ಉದ್ಧವನೂ ಹೀಗೆ ಅಚ್ಯುತನ ಮಹಿಮೆಯ ವಿಷಯವಾಗಿ ಮಾತನಾಡುತ್ತಿರುವಾಗಲೇ ರಾತ್ರಿಯು ಕಳೆದುಹೋಯಿತು. ರಾತ್ರಿಯು ಕಳೆದುಹೋಗುತ್ತಿರುವಾಗಲೇ ಗೋಪಿಕಾಸ್ತ್ರೀಯರು ಬಾಗಿಲನ್ನು ಗುಡಿಸಿ-ಸಾರಿಸಿ, ರಂಗೋಲೆಯನ್ನಿಟ್ಟು, ದೀಪವನ್ನು ಹಚ್ಚಿ ವಾಸ್ತುಪುರುಷನನ್ನು ಸಂಪೂಜಿಸಿ ಮೊಸರುಕಡೆಯಲು ಪ್ರಾರಂಭಿಸಿದರು. ಗೋಪಿಕಾಸ್ತ್ರೀಯರು ಕಡೆಗೋಲಿನ ಹಗ್ಗಗಳನ್ನು ವರಸೆ-ವರಸೆಯಾಗಿ ತಿರುಗಿಸುತ್ತಾ ಎಡ-ಬಲ ತೋಳುಗಳಿಂದ ಸೆಳೆಯುತ್ತಿರುವಾಗ ಅವರು ತೊಟ್ಟಿದ್ದ ತೋಳ್ಬಳೆಗಳು ಹಾರಗಳಂತೆಯೇ ಕಾಣುತ್ತಿದ್ದುವು. ಅವರ ನಿತಂಬ, ಸ್ತನ ಮತ್ತು ಕಂಠಗಳಲ್ಲಿದ್ದ ಹಾರಗಳು ಕಂಪಿಸುತ್ತಿದ್ದುವು. ಅಳ್ಳಾಡುತ್ತಿದ್ದ ಕುಂಡಲಗಳ ಕಾಂತಿಯಿಂದ ಅವರ ಕಪೋಲಗಳು ಬೆಳಗುತ್ತಿದ್ದುವು. ಅವರ ಮುಖವು ಅರುಣಗೆಂಪಿನ ಕುಂಕುಮದಿಂದ ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದಿತು. ದೀಪದ ಬೆಳಕಿನಿಂದ ಜಗ-ಜಗಿಸುತ್ತಿದ್ದ ಮಣಿಯ ಹಾರಗಳಿಂದ ಗೋಪಿಯರು ರಾರಾಜಿಸುತ್ತಿದ್ದರು.

ಕಮಲನಯನನಾದ ಭಗವಾನ್ ಶ್ರೀಕೃಷ್ಣನ ಮಂಗಳಮಯವಾದ ಲೀಲಾಪ್ರಸಂಗಗಳನ್ನು ಉಚ್ಚಸ್ವರದಿಂದ ಹಾಡುತ್ತಿದ್ದ ಗೋಪಿಕಾಸ್ತ್ರೀಯರ ಕಂಠಧ್ವನಿಯು ಸ್ವರ್ಗಲೋಕವನ್ನು ಮುಟ್ಟುತ್ತಿತ್ತು. ಘರ್-ಘರ್ ಎಂಬ

ಕಡೆಯುವ ಶಬ್ದದೊಡನೆ ಮಿಶ್ರವಾದ ಅವರ ಗಾಯನವು ದಿಕ್ಕುಗಳಲ್ಲಿನ ಅಮಂಗಳವನ್ನು ತೊಡೆದುಹಾಕುವುದಾಗಿದ್ದಿತು. ಭಗವಾನ್ ಸೂರ್ಯ ದೇವನು ಪೂರ್ವದಿಕ್ಕಿನಲ್ಲಿ ಉದಯಿಸಲಾಗಿ ಮನೆಗಳಿಂದ ಹೊರಬಂದ ಗೋಪ-ಗೋಪಿಯರು ನಂದಮಹಾರಾಜನ ಮನೆಯ ಮುಂದೆ ಸುವರ್ಣ ಮಯವಾದ ರಥವೊಂದು ನಿಂತಿರುವುದನ್ನು ಕಂಡು ಇದು ಯಾರ ರಥವಾಗಿರ ಬಹುದೆಂದು ತಮ್ಮ-ತಮ್ಮಲ್ಲಿಯೇ ಪರಸ್ಪರವಾಗಿ ಪ್ರಶ್ನಿಸತೊಡಗಿದರು :

'ಕಮಲಲೋಚನನಾದ ಶ್ಯಾಮಸುಂದರನನ್ನು ಮಥುರಾಪಟ್ಟಣಕ್ಕೆ ಕರೆದೊಯ್ದ ಕಂಸನ ಕಾರ್ಯಸಾಧಕನಾದ ಅಕ್ರೂರನೇನಾದರೂ ಪುನಃ ಬಂದುಬಿಟ್ಟನೇನು?'–ಎಂದೊಬ್ಬ ಗೋಪಿಯು ಪ್ರಶ್ನಿಸಿದಳು : 'ತನ್ನ ಒಡೆಯನಾದ ಕಂಸನ ಪ್ರೇತಕ್ಕೆ ನಮ್ಮಿಂದ ಪಿಂಡಹಾಕಿಸಲೇನಾದರೂ ಬಂದಿರುವನೋ?'–ಎಂದು ಮತ್ತೊಬ್ಬ ಗೋಪಿಯು ರೋಷದಿಂದ ಹೇಳಿದಳು. ಹೀಗೆ ಗೋಪಿಕಾಸ್ತ್ರೀಯರು ಪರಸ್ಪರ ಮಾತನಾಡಿಕೊಳ್ಳುತ್ತಿದ್ದಾಗ ಉದ್ಧವನು ತನ್ನ ನಿತ್ಯಕರ್ಮವನ್ನು ಮುಗಿಸಿ ಅಲ್ಲಿಗೆ ಆಗಮಿಸಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೪೬ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೪೭ನೆಯ ಅಧ್ಯಾಯ

ಉದ್ಧವ-ಗೋಪಿಯರ ಮಾತುಕತೆ : ಭ್ರಮರಗೀತೆ

ಶ್ರೀಶುಕಮುನಿಗಳು ಹೇಳುತ್ತಾರೆ :

ತಂ ವೀಕ್ಷ್ಯ ಕೃಷ್ಣಾನುಚರಂ ವ್ರಜಸ್ತ್ರಿಯಃ
ಪ್ರಲಮ್ಬಬಾಹುಂ ನವಕಞ್ಜಲೋಚನಮ್ ।
ಪೀತಾಮ್ಬರಂ ಪುಷ್ಕರಮಾಲಿನಂ ಲಸ-
ನ್ಮುಖಾರವಿನ್ದಂ ಮಣಿಮೃಷ್ಟಕುಣ್ಡಲಮ್ ॥೧॥

ಗೋಕುಲದ ಗೋಪಿಕಾಸ್ತ್ರೀಯರು ಶ್ರೀಕೃಷ್ಣನಂತೆಯೇ ಇದ್ದ ಕೃಷ್ಣಾನುಚರನಾದ ಉದ್ಧವನನ್ನು ನೋಡಿದರು. ಅವನು ದೀರ್ಘಬಾಹು

ವಾಗಿದ್ದನು. ಅವನಿಗೆ ನೂತನವಾದ ಕಮಲದಳಕ್ಕೆ ಸಮಾನವಾದ ಕಣ್ಣುಗಳಿದ್ದುವು. ಪೀತಾಂಬರವನ್ನುಟ್ಟಿದ್ದನು. ಕಮಲದ ಮಾಲೆಯಿಂದ ಸಮಲಂಕೃತನಾಗಿದ್ದನು. ಕಿವಿಗಳಲ್ಲಿ ಮಣಿಗಳಿಂದ ಮಂಡಿತವಾದ ಕುಂಡಲಗಳು ಜಗ-ಜಗಿಸುತ್ತಿದ್ದುವು. ಅವನ ಮುಖಾರವಿಂದವು ಪ್ರಫುಲ್ಲವಾಗಿದ್ದಿತು. ಅಂತಹ ಸುಂದರಾಂಗನನ್ನು ನೋಡಿ ಶುಭ್ರವಾದ ಕಿರುನಗೆಯುಳ್ಳ ಗೋಪಿಯರು ಪರಸ್ಪರವಾಗಿ ಮಾತನಾಡಿಕೊಂಡರು :

'ಗೆಳತಿಯರೇ! ನೋಡಲು ಈ ಪುರುಷನು ಕಡುಚೆಲುವನಾಗಿ ಕಾಣುತ್ತಿದ್ದಾನೆ. ಇವನಾರು? ಎಲ್ಲಿಂದ ಬಂದಿರಬಹುದು? ಯಾರ ದೂತನಾಗಿ ಬಂದಿರಬಹುದು? ಕೃಷ್ಣನಂತೆಯೇ ಇವನೇಕೆ ವೇಷವನ್ನು ಧರಿಸಿದ್ದಾನೆ?'

ಹೀಗೆ ಜಿಜ್ಞಾಸೆಮಾಡುತ್ತಿದ್ದ ಗೋಪಿಯರು ಅವನಾರೆಂಬುದನ್ನು ತಿಳಿಯಬೇಕೆನ್ನುವ ಉತ್ಸುಕತೆಯಿಂದ ಉತ್ತಮಶ್ಲೋಕನಾದ ಶ್ರೀಕೃಷ್ಣನ ಚರಣಕಮಲಗಳನ್ನೇ ಪರಮಾಶ್ರಯವನ್ನಾಗಿ ಹೊಂದಿದ್ದ ಉದ್ಧವನನ್ನು ಸುತ್ತುವರಿದು ನಿಂತರು. ಉದ್ಧವನು ತಮಗೆ ರಮಾಪತಿಯ ಸಂದೇಶವನ್ನು ತಂದಿರುವನೆಂಬುದನ್ನು ತಿಳಿದನಂತರ ಗೋಪಿಯರು ಉದ್ಧವನಿಗೆ ತಲೆಬಾಗಿ ನಮಸ್ಕರಿಸಿ ಹೇಳಿದರು. ನಾಚಿಕೆಯಿಂದಲೂ, ಮಂದಹಾಸದಿಂದಲೂ, ಕಡೆಗಣ್ಣಿನ ನೋಟದಿಂದಲೂ, ಸುಮಧುರವಾದ ಮಾತುಗಳಿಂದಲೂ, ಅವನನ್ನು ಸತ್ಕರಿಸಿ, ಸುಖಾಸನದಲ್ಲಿ ಕುಳಿತಿದ್ದ ಉದ್ಧವನನ್ನು ಕುರಿತು ಏಕಾಂತದಲ್ಲಿ ಹೇಳಿದರು : "ಉದ್ಧವ! ನಾವು ನಿನ್ನನ್ನು ಯದುಪತಿಯ ಪಾರ್ಷದನೆಂದು ತಿಳಿಯುತ್ತೇವೆ. ನಿನ್ನ ಸ್ವಾಮಿಯ ಸಂದೇಶವನ್ನು ಹೊತ್ತು ನೀನು ಇಲ್ಲಿಗೆ ಆಗಮಿಸಿರುವೆ. ಯದುಪತಿಯು ತನ್ನ ತಂದೆ-ತಾಯಿಗಳಿಗೆ ಸಂತೋಷವನ್ನು ಉಂಟುಮಾಡುವ ಸಲುವಾಗಿ ನಿನ್ನನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾನೆ. ಅಲ್ಲವೇ? ಅದು ಹೊರತಾಗಿ ಈ ಗೊಲ್ಲರಹಳ್ಳಿಯಲ್ಲಿ ಅವನು ಸ್ಮರಿಸಬೇಕಾದ ಅಥವಾ ಅವನ ಸ್ಮರಣೆಗೆ ಬರುವ ವಸ್ತುಗಳು ಬೇರೆ ಯಾವುದೂ ಇಲ್ಲ. ಆದರೆ ತಂದೆ-ತಾಯಿಗಳ, ನೆಂಟರಿಷ್ಟರ ಸ್ನೇಹಬಂಧವನ್ನು ಕಡಿದು ಹಾಕುವುದು ಮುನಿಯಾದವನಿಗೂ ಬಹಳ ಕಷ್ಟವೇ ಸರಿ. ಸ್ನೇಹಾನುಬನ್ಧೋ ಬನ್ಧೂನಾಂ **ಮುನೇರಪಿ ಸುದುಸ್ತ್ಯಜಃ ॥**

ಅನ್ಯೇಷ್ವರ್ಥಕೃತಾ ಮೈತ್ರೀ ಯಾವದರ್ಥವಿಡಮ್ಬನಮ್ ।
ಪುಮ್ಭಿಃ ಸ್ತ್ರೀಷು ಕೃತಾ ಯದ್ವತ್ಸುಮನಸ್ಸ್ವಿವ ಷಟ್ಪದೈಃ ॥೬॥

ತಂದೆ-ತಾಯಿಗಳನ್ನು ಬಿಟ್ಟು ಬೇರೆಯವರೊಡನೆ ಮಾಡುವ ಮೈತ್ರಿಯು ಕೇವಲ ಸ್ವಾರ್ಥಕ್ಕೆ ಸಂಬಂಧಿಸಿದುದು ; ಸಹಜವಾದುದಲ್ಲ. ಅಂತಹ ಮೈತ್ರಿಯು, ಸ್ವಾರ್ಥದ ಪ್ರಯೋಜನವು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೂ ಇರುತ್ತದೆ. ಅನಂತರ ಒಂದು ಕ್ಷಣಕಾಲವಾದರೂ ಇರುವುದಿಲ್ಲ. ಸ್ತ್ರೀ-ಪುರುಷರಲ್ಲಿ ಉಂಟಾಗುವ ಮೈತ್ರಿಯು ಇಂತಹುದು. ಹೂವಿನಲ್ಲಿ ಮಧುವಿರುವವರೆಗೆ ಹೂವಿಗೂ-ದುಂಬಿಗೂ ಸಂಬಂಧವಿರುತ್ತದೆ. ಹೂವಿನ ರಸವು ಮುಗಿದೊಡನೆಯೇ ದುಂಬಿಯು ಬೇರೆಯ ಹೂವನ್ನು ಅರಸಿಕೊಂಡು ಹೋಗುತ್ತದೆ.

ನಿಸ್ಸ್ವಂ ತ್ಯಜನ್ತಿ ಗಣಿಕಾ ಅಕಲ್ಪಂ ನೃಪತಿಂ ಪ್ರಜಾಃ ।
ಅಧೀತವಿದ್ಯಾ ಆಚಾರ್ಯಮೃತ್ವಿಜೋ ದತ್ತದಕ್ಷಿಣಮ್ ॥೭॥

ತನ್ನ ಬಳಿಗೆ ಬರುವ ವಿಟಪುರುಷನಲ್ಲಿ ಹಣವಿಲ್ಲವೆಂದು ತಿಳಿದೊಡನೆಯೇ ವೇಶ್ಯೆಯು ಅವನನ್ನು ತ್ಯಜಿಸುತ್ತಾಳೆ. ರಾಜನು ತನ್ನನ್ನು ರಕ್ಷಿಸಲಾರನೆಂದು ತಿಳಿದೊಡನೆಯೇ ಪ್ರಜೆಗಳು ಅವನನ್ನು ತ್ಯಜಿಸುತ್ತಾರೆ. ವಿದ್ಯಾಭ್ಯಾಸವು ಮುಗಿದನಂತರ ವಿದ್ಯಾರ್ಥಿಗಳು ಆಚಾರ್ಯನನ್ನು ಪುನಃ ಕಾಣಲು ಹೋಗುವುದಿಲ್ಲ. ಸಂಭಾವನೆಯು ಸಿಕ್ಕಿದನಂತರ ಋತ್ವಿಜರು ಯಜಮಾನನನ್ನು ಕಡೆಗಣಿಸುತ್ತಾರೆ.

ಖಗಾ ವೀತಫಲಂ ವೃಕ್ಷಂ ಭುಕ್ತ್ವಾ ಚಾತಿಥಯೋ ಗೃಹಮ್ ।
ದಗ್ಧಂ ಮೃಗಾಸ್ತಥಾರಣ್ಯಂ ಜಾರೋ ಭುಕ್ತ್ವಾ ರತಾಂ ಸ್ತ್ರಿಯಮ್ ॥೮॥

ವೃಕ್ಷಗಳಲ್ಲಿ ಫಲವು ಮುಗಿದುಹೋದನಂತರ ಪಕ್ಷಿಗಳು ಅಲ್ಲಿಂದ ಹಾರಿಹೋಗುತ್ತವೆ. ಊಟಮಾಡಿದನಂತರ ಅತಿಥಿಗಳು ಗೃಹಸ್ಥನ ಮನೆಯನ್ನು ಬಿಟ್ಟು ಹೊರಟುಹೋಗುತ್ತಾರೆ. ಕಾಡುಗಿಚ್ಚಿನಿಂದ ಉರಿದುಹೋದ ಕಾಡನ್ನು ಮೃಗಗಳು ಬಿಟ್ಟುಹೋಗುತ್ತವೆ. ನವಯುವತಿಯು ಎಷ್ಟೇ ಅನುರಾಗವನ್ನು ತೋರಿದರೂ ಜಾರಪುರುಷನು ಅವಳನ್ನು ಉಪಭೋಗಿಸಿದ

ನಂತರ ಪರಿತ್ಯಜಿಸಿ ಹೊರಟುಹೋಗುತ್ತಾನೆ. ಆದುದರಿಂದ ಗೋವಿಂದನು ತನ್ನ ತಂದೆ-ತಾಯಿಗಳನ್ನು ಹೊರತಾಗಿ ಮತ್ತಾರನ್ನೂ ಸ್ಮರಿಸಿರಲಾರನು.''

ಪರೀಕ್ಷಿತಮಹಾರಾಜ! ಹೀಗೆ ಗೋಪಿಯರು ಕೃಷ್ಣದೂತನಾದ ಉದ್ಧವನು ವ್ರಜಕ್ಕೆ ಬಂದಾಗ, ಕೃಷ್ಣನು ತಮ್ಮನ್ನು ಸ್ಮರಿಸಿಲ್ಲವೆಂದೇ ಭಾವಿಸಿ ಹೀಗೆಲ್ಲಾ ಉದ್ಧವನೊಡನೆ ದೂರಿದರು. ಆ ಸಮಯದಲ್ಲಿ ಅವರ ಮಾತು, ಮನಸ್ಸು ಮತ್ತು ಶರೀರಗಳು ಗೋವಿಂದನಲ್ಲೇ ಲೀನವಾಗಿಬಿಟ್ಟಿದ್ದುವು. ಬಾಲಮುಕುಂದನ ಬಾಲ್ಯ-ಕಿಶೋರಾವಸ್ಥೆಗಳನ್ನು ಅಡಿಗಡಿಗೂ ಸ್ಮರಿಸುತ್ತಾ ಅವನ ಅತಿಪ್ರಿಯವಾದ ಲೀಲಾಪ್ರಸಂಗಗಳನ್ನು ಹಾಡುತ್ತಾ, ಯಾವ ವಿಧವಾದ ನಾಚಿಕೆಯೂ ಇಲ್ಲದೆ ಅವರೆಲ್ಲರೂ ಉದ್ಧವನ ಮುಂದೆ ಗಳ-ಗಳನೆ ಅತ್ತುಬಿಟ್ಟರು.

ಪರೀಕ್ಷಿತ! ಆ ಸಮಯದಲ್ಲಿ ಶ್ರೀಕೃಷ್ಣನೊಡನೆ ಸೇರುವಿಕೆಯನ್ನೇ ಬಹಳವಾಗಿ ಚಿಂತಿಸುತ್ತಿದ್ದ ಗೋಪಿಯೊಬ್ಬಳು ತನ್ನ ಬಳಿಗೆ ಹಾರಿಕೊಂಡು ಬಂದ ದುಂಬಿಯನ್ನೇ ಕೃಷ್ಣದೂತನೆಂದು ಭಾವಿಸಿಕೊಂಡು ಆ ದುಂಬಿ ಯೊಡನೆ ಹೇಳಿದಳು :

ಮಧುಪ ಕಿತವಬನ್ಧೋ ಮಾ ಸ್ಪೃಶಾಙ್ಘ್ರಿಂ ಸಪತ್ನ್ಯಾಃ
ಕುಚವಿಲುಲಿತಮಾಲಾಕುಙ್ಕುಮಶ್ಮಶ್ರುಭಿರ್ನಃ ।
ವಹತು ಮಧುಪತಿಸ್ತನ್ಮಾನಿನೀನಾಂ ಪ್ರಸಾದಂ
ಯದುಸದಸಿ ವಿಡಮ್ಬ್ಯಂ ಯಸ್ಯ ದೂತಸ್ತ್ವಮೀದೃಕ್ ॥

“ಮಧುಪನೇ! ನೀನು ಮಹಾಕಪಟಿಯಾದ ಮುಕುಂದನ ಸ್ನೇಹಿತ ನಾಗಿರುವೆ. ಆದುದರಿಂದ ನೀನೂ ಕಪಟಿಯೆಂಬುದರಲ್ಲಿ ಯಾವ ಸಂಶ ಯವೂ ಇಲ್ಲ. ನೀನು ನಮ್ಮ ಕಾಲುಗಳನ್ನು ಮುಟ್ಟಬೇಡ. ನಿನ್ನ ತೋರಿಕೆಯ ವಿನಯವನ್ನು ತೋರಿಸಬೇಡ. ನಮ್ಮ ಸವತಿಯರ ಕುಚಗಳ ಸ್ಪರ್ಶದಿಂದ ಕೆಂಪಾದ ನಮ್ಮ ಇನಿಯನ ವನಮಾಲೆಯ ಮಧುವನ್ನು ಪಾನಮಾಡಲು ಹೋದ ನಿನ್ನ ಮೀಸೆಯ ಕೂದಲುಗಳು ಕೆಂಪಾಗಿವೆ. ಆದುದರಿಂದ ಸವತಿಯರ ಸಂಬಂಧವನ್ನು ಹೊಂದಿರುವ ನೀನು ನಮ್ಮ ಕಾಲುಗಳನ್ನು ಮುಟ್ಟಬೇಡ. ಪುಷ್ಪದಿಂದ ಪುಷ್ಪಕ್ಕೆ ಹಾರಿಹೋಗುವ ನಿನ್ನಂತೆಯೇ ನಿನ್ನ

ಸ್ವಾಮಿಯೂ ಆಗಿದ್ದಾನೆ. ಯಾದವರ ಸಭೆಯಲ್ಲಿ ಪರಿಹಾಸ್ಯಕ್ಕೆ ಕಾರಣ ವಾಗುವ, ಮಧುರಾಪಟ್ಟಣದ ಮಾನಿನಿಯರ ಕುಂಕುಮಪ್ರಸಾದವನ್ನು ಅವನೇ ಇಟ್ಟುಕೊಂಡಿರಲಿ. ಅದು ನಮಗೆ ಬೇಡ. ನಿನ್ನ ಮೂಲಕವಾಗಿ ಆ ಪ್ರಸಾದವನ್ನು ನಮಗೆ ಕಳುಹಿಸುವುದು ಬೇಡ.

ಸಕೃದಧರಸುಧಾಂ ಸ್ವಾಂ ಮೋಹಿನೀಂ ಪಾಯಯಿತ್ವಾ
ಸುಮನಸ ಇವ ಸದ್ಯಸ್ತತ್ಯಜೇಽಸ್ಮಾನ್ ಭವಾದೃಕ್ ।
ಪರಿಚರತಿ ಕಥಂ ತತ್ಪಾದಪದ್ಮಂ ತು ಪದ್ಮಾ
ಹ್ಯಪಿ ಬತ ಹೃತಚೇತಾ ಉತ್ತಮಶ್ಲೋಕಜಲ್ಪೈಃ ॥೧೩॥

ಭ್ರಮರವೇ! ನಿನ್ನಂತೆಯೇ ನಿನ್ನ ಆ ಪ್ರಭುವೂ ಶ್ಯಾಮಲವರ್ಣನು. ಪುಷ್ಪರಸವನ್ನು ಹೀರಿಕೊಂಡನಂತರ ನೀನು ಮತ್ತೊಂದು ಪುಷ್ಪಕ್ಕೆ ಹಾರಿ ಹೋಗುವಂತೆಯೇ ನಿನ್ನ ಸ್ವಾಮಿಯೂ ಮಾಡುತ್ತಾನೆ. ನಿನ್ನ ಆ ಸ್ವಾಮಿಯು ನಮಗೆ ಒಂದೇ ಒಂದು ಬಾರಿಗೆ, ನಿಜವಾಗಿಯೂ ಒಂದೇ ಒಂದು ಬಾರಿಗೆ ತನ್ನ ಮನಮೋಹಕವಾದ ಮತ್ತುಬರಿಸುವ ಅಧರಾಮೃತವನ್ನು ಕುಡಿಸಿ, ನೀನು ಹೂವಿನಿಂದ ಹೂವಿಗೆ ಹಾರಿಹೋಗುವಂತೆ–ಹಳ್ಳಿಗರಾದ ನಮ್ಮನ್ನು ಪರಿತ್ಯಜಿಸಿ ಪಟ್ಟಣಕ್ಕೆ ಹೊರಟುಹೋದನು. ಇಂತಹವನ ಪಾದಕಮಲಗಳ ಸೇವೆಯನ್ನು ಪದ್ಮೆಯು ಹೇಗೆ ಮಾಡುವಳೋ ತಿಳಿಯದಾಗಿದೆ. ಅವನ ಕೀರ್ತಿ, ಯಶಸ್ಸು ಮತ್ತು ಚಾಟುನುಡಿ–ಇವುಗಳಿಗೆ ಮನಸೋತು ಅವಳು ಆ ಧೂರ್ತನ ಸೇವೆಯನ್ನು ಮಾಡುತ್ತಿದ್ದಿರಬಹುದು.

ಕಿಮಿಹ ಬಹು ಷಡಙ್ಘ್ರೇ ಗಾಯಸಿ ತ್ವಂ ಯದೂನಾ-
ಮಧಿಪತಿಮಗೃಹಾಣಾಮಗ್ರತೋ ನಃ ಪುರಾಣಮ್ ।
ವಿಜಯಸಖಸಖೀನಾಂ ಗೀಯತಾಂ ತತ್ಪ್ರಸಙ್ಗಃ
ಕ್ಷಪಿತಕುಚರುಜಸ್ತೇ ಕಲ್ಪಯನ್ತೀಷ್ಟಮಿಷ್ಟಾಃ ॥೧೪॥

ಆರು ಕಾಲುಗಳನ್ನು ಹೊಂದಿರುವ ದುಂಬಿಯೇ! ನಾವು ವನವಾಸಿ ಗಳಾಗಿದ್ದೇವೆ. ನಮಗೆ ಮನೆ-ಮಠಗಳೆಂಬುದು ಯಾವುದೂ ಇರುವುದಿಲ್ಲ. ಅಂತಹ ನಮ್ಮ ಮುಂದೆ ನೀನು ಯದುಕುಲಶಿರೋಮಣಿಯಾದ ಶ್ರೀಕೃಷ್ಣನ ಗುಣಗಾನವನ್ನೇಕೆ ಮಾಡುತ್ತಿರುವೆ? ಇದು ನಮಗೆಲ್ಲಾ ಹಳೆಯದಾಗಿ

ಹೋಗಿದೆ. ಅವನ ಗುಣಗಣಗಳೆಲ್ಲವನ್ನೂ ನಾವು ತಿಳಿದವರಾಗಿದ್ದೇವೆ. ವಿಜಯಕ್ಕೆ* ಸಖನಾಗಿರುವ (ಸದಾ ವಿಜಯಿಯಾಗಿರುವ) ಶ್ರೀಕೃಷ್ಣನ ನೂತನಸಖಿಯರ ಮುಂದೆ ನೀನು ಅವನ ಲೀಲಾಪ್ರಸಂಗಗಳನ್ನು ಗಾನ ಮಾಡು. ಆಲಿಂಗನಾದಿಗಳಿಂದ ತಮ್ಮ ಸ್ತನಗಳ ಪೀಡೆಯನ್ನು ಕಳೆದು ಕೊಂಡಿರುವ, ಶ್ರೀಕೃಷ್ಣನಿಗೆ ಬಹಳವಾಗಿ ಇಷ್ಟವಾಗಿರುವ ಆ ನೂತನ ಸಖಿಯರಾದರೂ ನಿನಗೆ ಇಷ್ಟವಾದುದನ್ನು ಮಾಡಿಕೊಟ್ಟಾರು.

ದಿವಿ ಭುವಿ ಚ ರಸಾಯಾಂ ಕಾಃ ಸ್ತ್ರಿಯಸ್ತದ್ದುರಾಪಾಃ
ಕಪಟರುಚಿರಹಾಸಭ್ರೂವಿಜೃಮ್ಭಸ್ಯ ಯಾಃ ಸ್ಯುಃ ।
ಚರಣರಜ ಉಪಾಸ್ತೇ ಯಸ್ಯ ಭೂತಿರ್ವಯಂ ಕಾ
ಅಪಿ ಚ ಕೃಪಣಪಕ್ಷೇ ಹ್ಯುತ್ತಮಶ್ಲೋಕಶಬ್ದಃ ॥೧೫॥

ಎಲೈ ಕಪಟಿಯಾದ ದುಂಬಿಯೇ! ಸ್ವರ್ಗದಲ್ಲಾಗಲೀ, ಭೂಲೋಕ ದಲ್ಲಾಗಲೀ, ಪಾತಾಳಲೋಕದಲ್ಲಾಗಲೀ, ಮನೋಹರವಾದ ನಗೆ, ಹುಬ್ಬು ಹಾರಿಸುವುದು, ಕಡೆಗಣ್ಣಿನನೋಟ ಇತ್ಯಾದಿಗಳುಳ್ಳ ಮುಕುಂದನಿಗೆ ವಶ ರಾಗದಿರುವ ಸ್ತ್ರೀಯರು ಯಾರು ತಾನೇ ಇದ್ದಾರೆ? ಐಶ್ವರ್ಯರೂಪಿಣಿಯಾದ ಮಹಾಲಕ್ಷ್ಮಿಯೇ ಯಾವನ ಚರಣಕಮಲಗಳನ್ನು ಸದಾ ಸೇವಿಸುವಳೋ ಅಂತಹ ಶ್ಯಾಮಸುಂದರನಿಗೆ ನಾವು ಎಷ್ಟು ಮಾತ್ರದವರು? ಆದರೆ ದೀನರ ವಿಷಯದಲ್ಲಿ ಅವನಿಗಿರುವ ಪುಣ್ಯಕೀರ್ತಿ ಎಂಬರ್ಥದ ಉತ್ತಮ ಶ್ಲೋಕ ಶಬ್ದವು ಅನ್ವರ್ಥವಾಗುವುದೇನು?

---

* ವಿಜಯಸಖ–ಎಂಬ ಪದಕ್ಕೆ ಅರ್ಜುನಮಿತ್ರ ಎಂದೇ ಅರ್ಥಮಾಡಬಹುದು. ಆದರೆ ಶ್ರೀಕೃಷ್ಣನು ಮುಂದೆ ಮಿತ್ರನಾಗುವುದು ಗೋಪಿಯರಿಗೆ ಹೇಗೆ ತಿಳಿದಿದ್ದೀತು?–ಎಂಬ ಪ್ರಶ್ನೆ ಏಳುತ್ತದೆ. ಆದರೆ ಗೋಪಿಯರು ಶ್ರೀಕೃಷ್ಣನನ್ನು 'ಶ್ರಯತ ಇನ್ದಿರಾ ಶಶ್ವದತ್ರ ಹಿ'–ಎಂದು ಗೋಪಿಕಾಗೀತೆಯು ಹೇಳುವಂತೆ ಇಂದಿರಾರಮಣ ಎಂಬ ಭಾವದಿಂದ ಅನೇಕ ಕಡೆ ಕರೆದಿದ್ದಾರೆ. ಆತನು ಲಕ್ಷ್ಮೀಪತಿ ಎಂಬುದು ತಿಳಿದಿದ್ದ ಗೋಪಿಯರಿಗೆ ಆತನು ಅರ್ಜುನನ ಮಿತ್ರನಾಗುವವನು–ಎಂಬುದೂ ಏಕೆ ತಿಳಿದಿರಲಾರದು?–ಎಂದೂ ಕೆಲವರು ಕೇಳಬಹುದು. ಆದುದರಿಂದ ವಿಜಯನಿಗೆ ಅಂದರೆ ಅರ್ಜುನನಿಗೆ ಸಖಾ ಮಿತ್ರನಾದವನು–ಎಂದೇ ಅರ್ಥಮಾಡುವುದೂ ಅನುಚಿತ ವಾಗುವುದಿಲ್ಲ.

ವಿಸೃಜ ಶಿರಸಿ ಪಾದಂ ವೇದ್ಮ್ಯಹಂ ಚಾಟುಕಾರೈ-
ರನುನಯವಿದುಷಸ್ತೇಽಭ್ಯೇತ್ಯ ದೌತ್ಯೈರ್ಮುಕುನ್ದಾತ್ ।
ಸ್ವಕೃತ ಇಹ ವಿಸೃಷ್ಟಾಪತ್ಯಪತ್ಯನ್ಯಲೋಕಾ
ವ್ಯಸೃಜದಕೃತಚೇತಾಃ ಕಿಂ ನು ಸನ್ಧೇಯಮಸ್ಮಿನ್ ॥೧೬॥

ಭ್ರಮರವೇ! ತಲೆಯಮೇಲಿಟ್ಟಿರುವ ನಿನ್ನ ಕಾಲನ್ನು ತೆಗಿ ; ದೂರ ಸರಿ. ಚಮತ್ಕಾರದ ಮಾತುಗಳನ್ನಾಡಿ ಸಂಧಾನಮಾಡುವುದರಲ್ಲಿ ನೀನು ನಿಪುಣನೆಂಬುದನ್ನು ನಾನು ತಿಳಿದಿರುತ್ತೇನೆ. ಚಮತ್ಕಾರವಾಗಿ ಮಾತನಾಡು ವುದನ್ನು ಶ್ರೀಕೃಷ್ಣನಿಂದಲೇ ನೀನು ಕಲಿತುಬಂದಿರುವಂತೆ ತೋರುತ್ತದೆ. ಆದರೆ ನಿನ್ನ ಮಾತು ನಮ್ಮಲ್ಲಿ ಪರಿಣಾಮಕಾರಿಯಾಗುವುದಿಲ್ಲ. ಏಕೆಂದರೆ ನಿನ್ನ ಪ್ರಭುವಿಗಾಗಿಯೇ ನಾವು ಪತಿಯನ್ನೂ, ಪುತ್ರರನ್ನೂ, ಬಂಧುಗಳನ್ನೂ, ಪರಲೋಕಸಾಧ್ಯವಾದ ಸಮಸ್ತಧರ್ಮಗಳನ್ನೂ ಪರಿತ್ಯಜಿಸಿದೆವು. ಆದರೂ ಅನಿಶ್ಚಿತಬುದ್ಧಿಯವನಾದ ಅವನು ನಮ್ಮೆಲ್ಲರನ್ನೂ ತೊರೆದು ಹೊರಟೇ ಹೋದನು. ಅಂತಹವನ ವಿಷಯದಲ್ಲಿ ಸಂಧಿಮಾಡಿಕೊಳ್ಳುವುದೇನಿದೆ?

ಮೃಗಯುರಿವ ಕಪೀನ್ದ್ರಂ ವಿವ್ಯಧೇ ಲುಬ್ಧಧರ್ಮಾ
ಸ್ತ್ರಿಯಮಕೃತ ವಿರೂಪಾಂ ಸ್ತ್ರೀಜಿತಃ ಕಾಮಯಾನಾಮ್ ।
ಬಲಿಮಪಿ ಬಲಿಮತ್ತ್ವಾಽವೇಷ್ಟಯದ್ಧ್ವಾಂಕ್ಷವದ್ಯ-
ಸ್ತದಲಮಸಿತಸಖ್ಯೈರ್ದುಸ್ತ್ಯಜಸ್ತತ್ಕಥಾರ್ಥಃ ॥೧೭॥

ಭ್ರಮರವೇ! ನಿನ್ನ ಪ್ರಭುವಿನ ನಿರ್ದಯತೆಯನ್ನು ಎಷ್ಟೆಂದು ವರ್ಣಿ ಸೋಣ? ಜನ್ಮ-ಜನ್ಮಾಂತರಗಳಲ್ಲಿಯೂ ಇವನು ಇದೇ ಸ್ವಭಾವದವನಾಗಿ ದ್ದಾನೆ. ರಾಮಾವತಾರದಲ್ಲಿ–ವ್ಯಾಧನೊಬ್ಬನು ಬಚ್ಚಿಟ್ಟುಕೊಂಡು ಮೃಗಗಳನ್ನು ಬೇಟೆಯಾಡುವಂತೆ–ಮರೆಯಲ್ಲಿ ನಿಂತು ಕಪಿರಾಜನಾದ ವಾಲಿಯನ್ನು ಸಂಹರಿಸಿದನು. ಅದೇ ಅವತಾರದಲ್ಲಿಯೇ ಸ್ತ್ರೀಜಿತನಾದ ಇವನು, ಕಾಮಿಸಿ ಬಂದ ಶೂರ್ಪಣಖೆಯ ಕಿವಿ-ಮೂಗುಗಳನ್ನು ಕತ್ತರಿಸಿ ಅವಳನ್ನು ವಿರೂಪಗೊಳಿಸಿದನು. ವಾಮನಾವತಾರದಲ್ಲಿ ತಾನೇ ಮಾಡಿದ್ದೇನು? ವಟು ವಿನ ವೇಷದಲ್ಲಿ ಬಂದ ಇವನನ್ನು ಬಲಿಚಕ್ರವರ್ತಿಯು ಯಥೋಚಿತವಾಗಿ ಸತ್ಕರಿಸಿದನು. ಅವನು ಅಪೇಕ್ಷಿಸಿದುದನ್ನೂ ಕೊಟ್ಟುಬಿಟ್ಟನು. ಹೀಗೆ ಬಲಿಚಕ್ರ

ವರ್ತಿಯು ಅರ್ಪಿಸಿದ ಬಲಿಯನ್ನು (ಪೂಜೆಯನ್ನು) ಕಾಗೆಯಂತೆ ತಿಂದು (ಸ್ವೀಕರಿಸಿ) ವಾಮನನು ಆ ರಾಕ್ಷಸರಾಜನನ್ನು ವರುಣಪಾಶಗಳಿಂದ ಬಂಧಿಸಿ ಪಾತಾಲದಲ್ಲಿ ಹಾಕಿದನು. ಆದುದರಿಂದ ಈ ಕರಿಯನೊಡನೆ ಸ್ನೇಹವೇ ಬೇಡವೆನಿಸಿದೆ. ಆದರೂ ಏನು ಮಾಡುವುದು? ಅವನ ಲೀಲಾಪ್ರಸಂಗಗಳನ್ನು ಗಾನಮಾಡದಿರುವುದಕ್ಕಾಗುವುದಿಲ್ಲ.

ಯದನುಚರಿತಲೀಲಾಕರ್ಣಪೀಯೂಷವಿಪ್ರುಟ್-
ಸಕೃದದನವಿಧೂತದ್ವನ್ದ್ವಧರ್ಮಾ ವಿನಷ್ಟಾಃ ।
ಸಪದಿ ಗೃಹಕುಟುಮ್ಬಂ ದೀನಮುತ್ಸೃಜ್ಯ ದೀನಾ
ಬಹವ ಇಹ ವಿಹಙ್ಗಾ ಭಿಕ್ಷುಚರ್ಯಾಂ ಚರನ್ತಿ ॥೧೮॥

ಶ್ರೀಕೃಷ್ಣನ ಲೀಲಾರೂಪವಾದ ಕರ್ಣಾಮೃತದ ಒಂದು ತೊಟ್ಟನ್ನು ಪಾನಮಾಡಿದವರೂ ಕೂಡ ಒಡನೆಯೇ ರಾಗ-ದ್ವೇಷ, ಸುಖ-ದುಃಖ, ಶೀತೋಷ್ಣ–ಇವೇ ಮುಂತಾದ ದ್ವಂದ್ವಗಳಿಂದ ಬಿಡುಗಡೆಯನ್ನು ಹೊಂದಿ ದಯನೀಯವಾದ ಸಂಸಾರವನ್ನೂ ಮನೆ-ಮಠಗಳನ್ನೂ ತೊರೆದು, ಅತ್ಯಂತ ದೀನರಾಗಿ ಸಂಗ್ರಹ-ಪರಿಗ್ರಹಗಳನ್ನೂ ಮಾಡದೆ–ಪ್ರಾಣಧಾರಣೆಗೆ ಬೇಕಾದಷ್ಟು ಮಾತ್ರವೇ ಆಹಾರವನ್ನು ಸಂಗ್ರಹಿಸುವ ಪಕ್ಷಿಗಳಂತೆ–ಈ ವೃಂದಾವನದಲ್ಲಿ ಬಹುಮಂದಿ ಭಿಕ್ಷಾಟನೆಯಿಂದ ಜೀವಿಸುತ್ತಿದ್ದಾರೆ.

ವಯಮೃತಮಿವ ಜಿಹ್ಮವ್ಯಾಹೃತಂ ಶ್ರದ್ದಧಾನಾಃ
ಕುಲಿಕರುತಮಿವಾಜ್ಞಾಃ ಕೃಷ್ಣವಧ್ವೋ ಹರಿಣ್ಯಃ ।
ದದೃಶುರಸಕೃದೇತತ್ತನ್ನಖಸ್ಪರ್ಶತೀವ್ರ-
ಸ್ಮರರುಜ ಉಪಮನ್ತ್ರಿನ್ ಭಣ್ಯತಾಮನ್ಯವಾರ್ತಾ ॥೧೯॥

ಧೂರ್ತನ ಉಪಮಂತ್ರಿಯೇ! ಕೃಷ್ಣಸಾರಮೃಗದ ಪತ್ನಿಯರಾದ ಹೆಣ್ಣುಜಿಂಕೆಗಳು ವ್ಯಾಧನ ಸುಮಧುರವಾದ ಗಾನಕ್ಕೆ ಮರುಳಾಗಿ ಅವನು ಬೀಸಿರುವ ಬಲೆಯಲ್ಲಿ ಬಿದ್ದು ಪ್ರಾಣನೀಗುವಂತೆ–ಕೃಷ್ಣನ ಪತ್ನಿಯರಾದ ನಾವೂ (ಗೋಪಿಯರೂ) ಕುಟಿಲನಾದ ಕೃಷ್ಣನ ಅಮೃತಮಯವಾದ ಮಾತನ್ನು ಸತ್ಯವೆಂದೇ ಬಗೆದು ಆ ಕೃಷ್ಣನ ಉಗುರುಗಳ ಸ್ಪರ್ಶದಿಂದ ಉಂಟಾದ ಕಾಮಬಾಧೆಯನ್ನು ಹಲವಾರು ಬಾರಿ ಅನುಭವಿಸಿದೆವು. ಆದುದ

ರಿಂದ ಕೃಷ್ಣನ ವಿಷಯದಲ್ಲಿ ಬೇರೆ ಯಾವ ಮಾತನ್ನೂ ಆಡಬೇಡ. ಬೇರೇನಾದರೂ ವಾರ್ತೆಯಿದ್ದರೆ ತಿಳಿಸು.

ಪ್ರಿಯಸಖ ಪುನರಾಗಾಃ ಪ್ರೇಯಸಾ ಪ್ರೇಷಿತಃ ಕಿಂ
ವರಯ ಕಿಮನುರುನ್ಧೇ ಮಾನನೀಯೋಽಸಿ ಮೇಽಙ್ಗ ।
ನಯಸಿ ಕಥಮಿಹಾಸ್ಮಾನ್ ದುಸ್ತ್ಯಜದ್ವನ್ದ್ವಪಾರ್ಶ್ವಂ
ಸತತಮುರಸಿ ಸೌಮ್ಯ ಶ್ರೀರ್ವಧೂಃ ಸಾಕಮಾಸ್ತೇ ॥೨೦॥

ನಮ್ಮ ಪ್ರಿಯತಮನ ಪ್ರಿಯಸಖನೇ! ನೀನು ನಿನ್ನ ಸ್ವಾಮಿಯ ಬಳಿಗೆ ಹೋಗಿ ಪುನಃ ಆಗಮಿಸಿದಂತೆ ಕಾಣುತ್ತದೆ. ನಮ್ಮನ್ನಲ್ಲಿಗೆ ಕರೆದುಕೊಂಡು ಹೋಗಲು ನಮ್ಮ ಪ್ರಿಯತಮನು ಪುನಃ ನಿನ್ನನ್ನು ಕಳುಹಿಸಿರಬೇಕಲ್ಲವೇ? ಪ್ರಿಯಭ್ರಮರವೇ! ನೀನು ನಮಗೆ ಮಾನನೀಯನಾಗಿರುವೆ. ನಿನ್ನ ಇಚ್ಛೆಯೇನೆಂಬುದನ್ನು ಹೇಳು. ನೀನು ಹೇಳಿದಂತೆ ಮಾಡುತ್ತೇವೆ. ನಿಜಹೇಳು. ನಾವಲ್ಲಿಗೆ ಬರಲು ನೀನು ಅಪೇಕ್ಷಿಸುವೆಯಾ? ನಮ್ಮ ಪ್ರಿಯಕರನ ಜೊತೆಯಲ್ಲಿ ಯಾವಾಗಲೂ ಸೇರಿಯೇ ಇರುವ ಪ್ರೇಯಸಿಯೊಬ್ಬಳಿದ್ದಾಳೆ. ಅವಳನ್ನು ಬಿಟ್ಟಿರಲು ಅವನಿಗೆ ಸಾಧ್ಯವೇ ಇಲ್ಲ. ಸೌಮ್ಯನೇ! ಪತ್ನಿಯಾದ ಸ್ತ್ರೀಯು ಅವನ ವಕ್ಷಃಸ್ಥಳದಲ್ಲಿಯೇ ಇದ್ದುಬಿಟ್ಟಿದ್ದಾಳೆ. ಅಂತಹವನ ಬಳಿಗೆ ನೀನು ನಮ್ಮನ್ನು ಹೇಗೆತಾನೇ ಕರೆದುಕೊಂಡು ಹೋಗುವೆ?

ಅಪಿ ಬತ ಮಧುಪುರ್ಯಾಮಾರ್ಯಪುತ್ರೋಽಧುನಾಸ್ತೇ
ಸ್ಮರತಿ ಸ ಪಿತೃಗೇಹಾನ್ ಸೌಮ್ಯ ಬನ್ಧೂಂಶ್ಚ ಗೋಪಾನ್ ।
ಕ್ವಚಿದಪಿ ಸ ಕಥಾ ನಃ ಕಿಙ್ಕರೀಣಾಂ ಗೃಣೀತೇ
ಭುಜಮಗುರುಸುಗನ್ಧಂ ಮೂರ್ಧ್ನ್ಯಧಾಸ್ಯತ್ ಕದಾ ನು ॥

ನಮ್ಮ ಪ್ರಿಯತಮನ ಪ್ರಿಯಸಖನೇ! ಆರ್ಯಪುತ್ರನಾದ ಭಗವಾನ್ ಶ್ರೀಕೃಷ್ಣನು ಗುರುಕುಲದಿಂದ ಹಿಂದಿರುಗಿ ಬಂದು ಈಗ ಮಥುರಾಪಟ್ಟಣದಲ್ಲಿಯೇ ಇರುವನಲ್ಲವೇ? ತಂದೆ-ತಾಯಿಗಳು, ಮನೆ-ಮಠಗಳು, ಬಂಧುಗಳು, ಇಲ್ಲಿ ಪ್ರಿಯಸಖರಾಗಿದ್ದ ಗೋಪರು–ಇವರೆಲ್ಲರನ್ನೂ ಸ್ಮರಿಸಿಕೊಳ್ಳುವನೇ? ದಾಸಿಯರಾದ ನಮ್ಮ ಸಂಬಂಧವಾಗಿಯೂ ಯಾವಾಗಲಾದರೂ ಎರಡು ಮಾತುಗಳನ್ನಾಡುವನೇ? ಮುಂದೆಂದಾದರೂ ಅಗುರು-ಸುಗಂಧ

ಯುಕ್ತವಾದ ತನ್ನ ತೋಳನ್ನು ನಮ್ಮ ಹೆಗಲ (ತಲೆಯ) ಮೇಲಿಟ್ಟಾನೆಯೇ? ಹೇಳು ; ಭ್ರಮರವೇ!"

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಉದ್ಧವನು, ಶ್ರೀಕೃಷ್ಣನನ್ನು ಸಂದರ್ಶಿಸುವುದರಲ್ಲಿ ಅತ್ಯಂತ ಉತ್ಸುಕರಾಗಿದ್ದ ಗೋಪಿಕಾಸ್ತ್ರೀಯರ ಈ ಮಾತು ಗಳನ್ನು ಕೇಳಿ ಶ್ರೀಕೃಷ್ಣನ ಪ್ರಿಯಸಂದೇಶಗಳಿಂದ ಸಂತೈಸುತ್ತಾ ಅವರನ್ನು ಕುರಿತು ಹೇಳಿದನು :

"ಗೋಪಿಯರೇ! ನೀವೇ ಕೃತಕೃತ್ಯರು. ನಿಮ್ಮ ಜೀವನವು ಸಫಲವಾಗಿದೆ. ನೀವು ಮೂರು ಲೋಕಗಳಲ್ಲಿಯೂ ಪೂಜ್ಯರಾಗಿರುವಿರಿ. ನೀವು ಹೀಗೆ ನಿಮ್ಮ ಸಕಲ ಸರ್ವಸ್ವವನ್ನೂ ಭಗವಂತನಾದ ಶ್ರೀಕೃಷ್ಣನಿಗೇ ಅರ್ಪಿಸಿಕೊಂಡು ಬಿಟ್ಟಿರುವಿರಲ್ಲವೇ! ನೀವೇ ಧನ್ಯರು. ದಾನ, ನೃತ್ಯ, ತಪಸ್ಸು, ಹೋಮ-ಹವನಾದಿಗಳು, ಜಪ, ವೇದಾಧ್ಯಯನ, ಧ್ಯಾನ, ಧಾರಣ, ಸಮಾಧಿ ಮತ್ತು ಶ್ರೇಯಸ್ಕರವಾದ ವಿಧ-ವಿಧವಾದ ಇತರ ಸಾಧನಗಳ ಮೂಲಕವಾಗಿ ಶ್ರೀಕೃಷ್ಣನಲ್ಲಿ ಭಕ್ತಿಯು ಹುಟ್ಟಲು ಸಾಧ್ಯವಾಗುತ್ತದೆ. ಆದರೆ ಉತ್ತಮಕೀರ್ತಿಯುಳ್ಳ ಭಗವಂತನಲ್ಲಿ ನಿಮ್ಮಿಂದ ಅತ್ಯಂತಶ್ರೇಷ್ಠವಾದ ಪ್ರೇಮದ ಭಕ್ತಿಪಂಥವು ಪ್ರಾರಂಭವಾಗಿದೆ. ಇದು ನಿಶ್ಚಯವಾಗಿಯೂ ಸೌಭಾಗ್ಯವೇ ಸರಿ. ಇದು ಮುನಿಗಳಿಗೂ ಕೂಡ ಅತ್ಯಂತದುರ್ಲಭವಾದುದು. ಪ್ರಪಂಚದ ಸೌಭಾಗ್ಯದ ಕಾರಣದಿಂದ ನೀವು ಅನನ್ಯಪ್ರೇಮಭಕ್ತಿಯ ಮಾರ್ಗವನ್ನು ತೋರಿಸಿಕೊಡುತ್ತಾ ನಿಮ್ಮ ಪತಿ-ಸುತ-ದೇಹ-ಸ್ವಜನ-ಮನೆ-ಮಠಗಳನ್ನೂ ಪರಿತ್ಯಜಿಸಿ ಕೃಷ್ಣನೆಂಬ ಹೆಸರಿನ ಪುರುಷಶ್ರೇಷ್ಠನನ್ನು ವರಿಸಿರುವಿರಿ. ಮಹಾಭಾಗ್ಯಶಾಲಿನಿಯರಾದ ಗೋಪಿಯರೇ! ವಿರಹದ ಕಾರಣದಿಂದಾಗಿ ನಿಮಗೆ ಭಗವಂತನಾದ ಅಧೋಕ್ಷಜನಲ್ಲಿ ಸಮಸ್ತವೂ ಆತ್ಮಸ್ವರೂಪನಾದ ಅವನೇ ಆಗಿರುವನೆಂಬ ಭಾವವು ರೂಢಮೂಲವಾಗಿ ಬಿಟ್ಟಿದೆ. ಶ್ರೀಕೃಷ್ಣನಲ್ಲಿ ನಿಮಗಿರುವ ಇಂತಹ ಅನನ್ಯಪ್ರೇಮಭಕ್ತಿಯನ್ನು ಪರಿಚಯಿಸಿಕೊಟ್ಟು ನನ್ನನ್ನು ನೀವು ಅನುಗ್ರಹಿಸಿರುವಿರಿ. ನಾನು ನಿಮ್ಮ ಸ್ವಾಮಿಯ ನಿಗೂಢವಾದ ಕಾರ್ಯಗಳನ್ನು ನಿರ್ವಹಿಸುವ ದೂತನಾಗಿದ್ದೇನೆ. ನಿಮ್ಮ ಪ್ರಿಯತಮನಾದ ಭಗವಾನ್ ಶ್ರೀಕೃಷ್ಣನು ನಿಮ್ಮೆಲ್ಲರಿಗೂ ಪರಮ

ಸುಖವನ್ನುಂಟುಮಾಡಲು ಪ್ರೀತಿಯ ಈ ಸಂದೇಶವನ್ನು ಕಳುಹಿಸಿರುತ್ತಾನೆ. ಕಲ್ಯಾಣಿಯರೇ! ಮಹತ್ತರವಾದ ಈ ದಿವ್ಯಸಂದೇಶವನ್ನೇ ಹೊತ್ತು ನಾನು ನಿಮ್ಮ ಬಳಿಗೆ ಬಂದಿರುತ್ತೇನೆ. ನಿಮ್ಮ ಪ್ರಿಯತಮನ ಪ್ರೀತಿಯ ಸಂದೇಶವನ್ನು ಯಥಾವತ್ತಾಗಿ ಲಾಲಿಸಿರಿ.

ಭಗವಂತನು ಹೇಳುತ್ತಾನೆ :

ಭವತೀನಾಂ ವಿಯೋಗೋ ಮೇ ನ ಹಿ ಸರ್ವಾತ್ಮನಾ ಕ್ವಚಿತ್ ।
ಯಥಾ ಭೂತಾನಿ ಭೂತೇಷು ಖಂ ವಾಯ್ವಗ್ನಿರ್ಜಲಂ ಮಹೀ ।
ತಥಾಹಂ ಚ ಮನಃಪ್ರಾಣಭೂತೇನ್ದ್ರಿಯಗುಣಾಶ್ರಯಃ ॥೨೯॥

"ನಾನು ಎಲ್ಲಕ್ಕೂ ಮೂಲಕಾರಣನಾಗಿರುವುದರಿಂದ ಸರ್ವರಿಗೂ ಆತ್ಮಸ್ವರೂಪನಾಗಿದ್ದೇನೆ. ಎಲ್ಲದರಲ್ಲಿಯೂ ನಾನೇ ಇದ್ದೇನೆ. ಆದುದರಿಂದ ನನಗೆ ನಿಮ್ಮೊಡನೆ ವಿಯೋಗವು ಯಾವಾಗಲೂ ಆಗಲು ಸಾಧ್ಯವೇ ಇಲ್ಲ. ನಿಮ್ಮಲ್ಲಿಯೂ ಆತ್ಮಸ್ವರೂಪನಾಗಿ ಸೇರಿಕೊಂಡಿರುವ ನನ್ನಿಂದ ನೀವು ಯಾವಾಗಲೂ ವಿಯೋಗವನ್ನು ಹೊಂದಲಾರಿರಿ. ಪ್ರಪಂಚದಲ್ಲಿರುವ ಎಲ್ಲ ಭೌತಿಕವಾದ ಪದಾರ್ಥಗಳಲ್ಲಿಯೂ ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ ಎಂಬ ಪಂಚಭೂತಗಳು ಸೇರಿಕೊಂಡೇ ಇರುತ್ತವೆ. ಹಾಗೆಯೇ ನಾನು ಮನಸ್ಸು, ಪ್ರಾಣ, ಪಂಚಭೂತಗಳು, ಇಂದ್ರಿಯಗಳು ಮತ್ತು ಅವುಗಳ ವಿಷಯಗಳು–ಇವೆಲ್ಲಕ್ಕೂ ಆಶ್ರಯನಾಗಿದ್ದೇನೆ. ಅವುಗಳೆಲ್ಲವೂ ನನ್ನಲ್ಲಿವೆ ಮತ್ತು ನಿಜವಾಗಿ ಹೇಳುವುದಾದರೆ ಅವುಗಳ ರೂಪದಲ್ಲಿ ನಾನೇ ಪ್ರಕಟವಾಗುತ್ತೇನೆ.

ಆತ್ಮನ್ಯೇವಾತ್ಮನಾತ್ಮನಂ ಸೃಜೇ ಹನ್ಮ್ಯನುಪಾಲಯೇ ।
ಆತ್ಮಮಾಯಾನುಭಾವೇನ ಭೂತೇನ್ದ್ರಿಯಗುಣಾತ್ಮನಾ ॥೩೦॥

ನಾನೇ ನನ್ನ ಮಾಯೆಯ ಪ್ರಭಾವದಿಂದ ಇಂದ್ರಿಯ, ಪಂಚಭೂತಗಳು ಮತ್ತು ಅವುಗಳ ವಿಷಯರೂಪವಾದ ಆತ್ಮನಲ್ಲಿಯೇ ಆತ್ಮದಿಂದ ಆತ್ಮನನ್ನು ಸೃಷ್ಟಿಸುತ್ತೇನೆ, ಪಾಲಿಸುತ್ತೇನೆ ಪುನಃ ಲಯಗೊಳಿಸುತ್ತೇನೆ.

ಆತ್ಮಾ ಜ್ಞಾನಮಯಃ ಶುದ್ಧೋ ವ್ಯತಿರಿಕ್ತೋಽಗುಣಾನ್ವಯಃ ।
ಸುಷುಪ್ತಿಸ್ವಪ್ನಜಾಗ್ರದ್ಭಿರ್ಮಾಯಾವೃತ್ತಿಭಿರೀಯತೇ ॥೩೧॥

ಆತ್ಮನು ಜ್ಞಾನಮಯನು (ಚಿನ್ಮಾತ್ರನು.) ಶುದ್ಧನು (ಉಪಾಧಿರಹಿತನು.) ವ್ಯತಿರಿಕ್ತನು. ವಿಲಕ್ಷಣನು. ಇಂದ್ರಿಯಗಳಿಂದ ವ್ಯತಿರಿಕ್ತನಾದವನು. ಸತ್ತ್ವಾದಿಗುಣಗಳ ಸಂಬಂಧವಿಲ್ಲದವನು. ನಿರ್ಗುಣನು. ಮಾಯಾ ವೃತ್ತಿಗಳಾದ ನಿದ್ರೆ-ಕನಸು-ಜಾಗರಗಳಿಂದ ಪ್ರಾಜ್ಞಾತ್ಮನಾಗಿಯೂ, ತೈಜಸಾತ್ಮನಾಗಿಯೂ, ವಿಶ್ವಾತ್ಮನಾಗಿಯೂ ಚಿನ್ಮಯನಾದ ಪರಮಾತ್ಮನು ತೋರುತ್ತಾನೆ.

ಯೇನೇನ್ದ್ರಿಯಾರ್ಥಾನ್ ಧ್ಯಾಯೇತ ಮೃಷಾ ಸ್ವಪ್ನವದುತ್ಥಿತಃ ।
ತನ್ನಿರುನ್ಧ್ಯಾದಿನ್ದ್ರಿಯಾಣಿ ವಿನಿದ್ರಃ ಪ್ರತ್ಯಪದ್ಯತ ॥೩೨॥

ಸ್ವಪ್ನದಲ್ಲಿ ಕಾಣುವ ಇಂದ್ರಿಯವಿಷಯಗಳು ಹೇಗೆ ಸುಳ್ಳಾಗಿರುತ್ತವೆಯೋ ಹಾಗೆಯೇ ಜಾಗ್ರದವಸ್ಥೆಯಲ್ಲಿಯೂ ಇಂದ್ರಿಯವಿಷಯಗಳು ಸುಳ್ಳಾದುವೆಂದು ಭಾವಿಸಿಕೊಂಡು ವಿಷಯಗಳ ಕಡೆಗೆ ಹರಿದುಹೋಗುವ ಮನಸ್ಸನ್ನೂ ಮತ್ತು ತನ್ಮೂಲಕವಾಗಿ ಇಂದ್ರಿಯಗಳನ್ನೂ ತಡೆಗಟ್ಟಬೇಕು. ನಾವು ಸ್ವಪ್ನವನ್ನು ಕಾಣುತ್ತಿರುವಾಗ–'ಇದು ಸ್ವಪ್ನ ; ಸುಳ್ಳಾದುದು. ಕಾಣುತ್ತಿರುವುದು ನಿಜವಲ್ಲ'–ಎಂದು ಕ್ಷಣಮಾತ್ರವಾದರೂ ಯೋಚಿಸುವುದಿಲ್ಲ. ಜಾಗ್ರದವಸ್ಥೆಯಲ್ಲಿರುವಂತೆಯೇ ಸ್ವಪ್ನದಲ್ಲಿಯೂ ನಾವು ಸುಖ- ದುಃಖಗಳನ್ನು ಅನುಭವಿಸುತ್ತೇವೆ. ಎಚ್ಚರವಾದೊಡನೆಯೇ ಅನುಭವಿಸಿದ್ದೆಲ್ಲವೂ ಸುಳ್ಳೆಂದು ಭಾವಿಸುತ್ತೇವೆ. ಸ್ವಪ್ನವು ಸುಳ್ಳೆಂದು ಭಾವಿಸುವಂತೆಯೇ ಜಾಗ್ರತ್ತನ್ನೂ ಸುಳ್ಳೆಂದು ಭಾವಿಸಬೇಕು. ಹಾಗೆ ಭಾವಿಸಿ ಮನಸ್ಸನ್ನೂ ಇಂದ್ರಿಯಗಳನ್ನೂ ತಡೆಹಿಡಿಯಬೇಕು. ಹಾಗೆ ತಡೆಹಿಡಿದು ಮನಸ್ಸನ್ನು ಆತ್ಮನಲ್ಲೇ ಲೀನಗೊಳಿಸಿ ಸಾಕ್ಷಾತ್ಕರಿಸಿಕೊಂಡರೆ ಜಾಗ್ರತ್ತೂ ಕೂಡ ಸುಳ್ಳೆಂಬುದು ಅನುಭವಕ್ಕೆ ಬರುತ್ತದೆ.

ಏತದನ್ತಃ ಸಮಾಮ್ನಾಯೋ ಯೋಗಃ ಸಾಙ್ಖ್ಯಂ ಮನೀಷಿಣಾಮ್ ।
ತ್ಯಾಗಸ್ತಪೋ ದಮಃ ಸತ್ಯಂ ಸಮುದ್ರಾನ್ತಾ ಇವಾಪಗಾಃ ॥೩೩॥

ನದಿಗಳು ಹೇಗೆ ಸಮುದ್ರವನ್ನೇ ಪರಮಗುರಿಯನ್ನಾಗಿಟ್ಟುಕೊಂಡು ಅದರಲ್ಲಿ ಸೇರಿಕೊಳ್ಳುತ್ತವೆಯೋ ಅದೇ ರೀತಿಯಲ್ಲಿ ಮಹಾತ್ಮರಾದವರು ಮಾಡುವ ವೇದಾಭ್ಯಾಸ, ಯೋಗಸಾಧನೆ, ಆತ್ಮಾನಾತ್ಮವಿವೇಕ, ತ್ಯಾಗ, ತಪಸ್ಸು, ಇಂದ್ರಿಯಸಂಯಮ, ಸತ್ಯ–ಇವೇ ಮುಂತಾದ ಧರ್ಮಗಳೆಲ್ಲವೂ

ನನ್ನಲ್ಲಿ ಸೇರುವಿಕೆಯನ್ನೇ ಪರಮಗುರಿಯನ್ನಾಗಿ ಹೊಂದಿವೆ. ವೇದಾಭ್ಯಾಸವೇ ಮುಂತಾದುವುಗಳ ಫಲವೆಲ್ಲವೂ ನನ್ನ ಸಾಕ್ಷಾತ್ಕಾರವೇ ಆಗಿದೆ. ಅಂತಹ ಸಚ್ಛಾಸ್ತ್ರಗಳೆಲ್ಲವೂ ಮನಸ್ಸನ್ನು ಇಂದ್ರಿಯಗಳಿಂದ ಹಿಂದಿರುಗಿಸಿ ನನ್ನ ಕಡೆಗೆ ಒಯ್ಯುತ್ತವೆ.

ಯತ್ತ್ವಹಂ ಭವತೀನಾಂ ವೈ ದೂರೇ ವರ್ತೇ ಪ್ರಿಯೋ ದೃಶಾಮ್ ।
ಮನಸಃ ಸನ್ನಿಕರ್ಷಾರ್ಥಂ ಮದನುಧ್ಯಾನಕಾಮ್ಯಯಾ ॥೩೪॥

ಪ್ರಿಯಗೋಪಿಯರೇ! ನಿಮಗೆ ಅತ್ಯಂತಪ್ರಿಯನಾದ, ನಿಮ್ಮ ಜೀವನ ಸರ್ವಸ್ವವೂ ಆಗಿರುವ ನಾನು ನಿಮ್ಮ ದೃಷ್ಟಿಗಳಿಗೆ ಬಹಳ ದೂರದಲ್ಲಿದ್ದೇನೆ. ಇದಕ್ಕೆ ಕಾರಣವಿಲ್ಲದಿಲ್ಲ. 'ನೀವು ನಿತ್ಯನಿರಂತರವಾಗಿ ನನ್ನನ್ನು ಧ್ಯಾನಿಸುತ್ತಿರಬೇಕು. ಶರೀರದಿಂದ ದೂರವಾಗಿದ್ದರೂ ಮನಸ್ಸಿನಿಂದ ನೀವು ನನ್ನ ಸಾನ್ನಿಧ್ಯದಲ್ಲಿರುವ ಅನುಭವವನ್ನು ಪಡೆದುಕೊಳ್ಳಬೇಕು. ನಿಮ್ಮ ಮನಸ್ಸು ಯಾವಾಗಲೂ ನನ್ನಲ್ಲಿಯೇ ಇದ್ದು ನಲಿದಾಡುತ್ತಿರಬೇಕು.' ಇದು ನನ್ನ ಆಶಯವಾಗಿದೆ.

ಯಥಾ ದೂರಚರೇ ಪ್ರೇಷ್ಠೇ ಮನ ಆವಿಶ್ಯ ವರ್ತತೇ ।
ಸ್ತ್ರೀಣಾಂ ಚ ನ ತಥಾ ಚೇತಃ ಸನ್ನಿಕೃಷ್ಟೇಽಕ್ಷಿಗೋಚರೇ ॥೩೫॥

ಸ್ತ್ರೀಯರಿಗೆ ದೂರದಲ್ಲಿರುವ ಪ್ರಿಯತಮನ ಮೇಲೆ ಮನಸ್ಸು ನೆಲೆಸಿರುವಂತೆ ಹತ್ತಿರವೇ ಯಾವಾಗಲೂ ಕಣ್ಣೆದುರಿಗೇ ಇರುವ ಪ್ರಿಯತಮನ ಮೇಲೆ ಮನಸ್ಸು ನೆಲೆಸಿರುವುದಿಲ್ಲ.

ಮಯ್ಯಾವೇಶ್ಯ ಮನಃ ಕೃತ್ಸ್ನಂ ವಿಮುಕ್ತಾಶೇಷವೃತ್ತಿ ಯತ್ ।
ಅನುಸ್ಮರನ್ತ್ಯೋ ಮಾಂ ನಿತ್ಯಮಚಿರಾನ್ಮಾಮುಪೈಷ್ಯಥ ॥೩೬॥

ನನ್ನಲ್ಲಿಯೇ ಮನಸ್ಸನ್ನೂ ನೆಲೆಗೊಳಿಸಿ, ಇತರ ಸಮಸ್ತವ್ಯವಹಾರಗಳಿಂದಲೂ ನಿವೃತ್ತರಾಗಿ ನಿತ್ಯನಿರಂತರವಾಗಿ ನನ್ನನ್ನು ಸದಾಕಾಲದಲ್ಲಿಯೂ ಧ್ಯಾನಿಸುತ್ತಿದ್ದರೆ ಬಹಳ ಬೇಗನೆ ನನ್ನನ್ನು ಹೊಂದುವಿರಿ.

ಯಾ ಮಯಾ ಕ್ರೀಡತಾ ರಾತ್ರ್ಯಾಂ ವನೇಽಸ್ಮಿನ್ ವ್ರಜ ಆಸ್ಥಿತಾಃ ।
ಅಲಬ್ಧರಾಸಾಃ ಕಲ್ಯಾಣ್ಯೋ ಮಾಪುರ್ಮದ್ವೀರ್ಯಚಿನ್ತಯಾ ॥೩೭॥

ಕಲ್ಯಾಣಿಯರೇ! ಶರತ್ಕಾಲದ ಹುಣ್ಣಿಮೆಯ ರಾತ್ರಿಯಲ್ಲಿ ನಾನು

ನಿಮ್ಮೆಲ್ಲರೊಡನೆ ರಾಸಕ್ರೀಡೆಯನ್ನಾಡಿದೆನು. ಆ ಸಮಯದಲ್ಲಿ ಹಲವಾರು ಗೋಪಿಯರು ಅವರ ಮನೆಯವರು ತಡೆದುದರಿಂದ ವ್ರಜದಲ್ಲೇ ಉಳಿಯ ಬೇಕಾಯಿತು. ಆದರೆ ಅವರ ಮನಸ್ಸೆಲ್ಲವೂ ನನ್ನಲ್ಲಿಯೇ ಸೇರಿಹೋಗಿತ್ತು. ಅಂತಹವರು ಕೂಡ ನನ್ನ ಲೀಲಾಪ್ರಸಂಗಗಳನ್ನೂ ವೀರ್ಯ-ಪರಾಕ್ರಮ ಗಳನ್ನೂ ಸದಾಕಾಲದಲ್ಲಿಯೂ ಚಿಂತಿಸುತ್ತಾ ನನ್ನನ್ನೇ ಧ್ಯಾನಿಸುತ್ತಿದ್ದರೆ ನನ್ನನ್ನೇ ಸೇರುತ್ತಾರೆ. ಹೀಗಿರುವಾಗ ಪತಿ-ಸುತರನ್ನೂ ಪರಿತ್ಯಜಿಸಿ ರಾಸ ಕ್ರೀಡೆಯಲ್ಲಿ ಭಾಗವಹಿಸಿದ ನಿಮ್ಮ ವಿಷಯವಾಗಿ ಹೇಳಬೇಕಾಗಿಯೇ ಇಲ್ಲ. ನಾನು ಖಂಡಿತವಾಗಿಯೂ ನಿಮ್ಮೊಡನೆ ಸೇರುತ್ತೇನೆ. ನೀವು ನನ್ನವರೇ ಆಗಿರುವಿರಿ. ಇದರಲ್ಲಿ ಸಂದೇಹವೇ ಇಲ್ಲ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಗೋಪಿಯರಿಗೆ ತಮ್ಮ ಪ್ರಿಯತಮನ ಸಂದೇಶವನ್ನು ಕೇಳಿ ಮಹಾನಂದವಾಯಿತು. ಶ್ರೀಕೃಷ್ಣನ ಸಂದೇಶದಿಂದಾಗಿ ಗೋಪಿಯರು ಅವನ ದಿವ್ಯಸ್ವರೂಪವನ್ನೂ ಲೀಲಾವಿನೋದಗಳನ್ನೂ ಸ್ಮರಿಸಿಕೊಂಡರು. ಇದರಿಂದ ಸುಪ್ರೀತರಾದ ಗೋಪಿಯರು ಉದ್ಧವನಿಗೆ ಹೇಳಿದರು :

"ಉದ್ಧವಮಹಾಶಯ! ಯಾದವರಿಗೆ ಉಪಟಳವನ್ನು ಕೊಡುತ್ತಿದ್ದು ಅವರ ವಿಷಯದಲ್ಲಿ ಹಲವಾರು ಪಾಪಕೃತ್ಯಗಳನ್ನು ಮಾಡಿದ ದುಷ್ಟ ಕಂಸನು ಅನುಯಾಯಿಗಳೊಡನೆ ಮರಣಹೊಂದಿದನೆಂಬುದು ಸೌಭಾಗ್ಯದ ಮತ್ತು ಆನಂದದ ವಿಷಯವೇ ಆಗಿದೆ. ಶ್ರೀಕೃಷ್ಣನ ನೆಂಟರಿಷ್ಟರು ಮತ್ತು ಗುರು ಜನರು ಪೂರ್ಣಮನೋರಥರಾದರೆಂಬುದೂ ಆನಂದಿಸಬೇಕಾದ ವಿಷಯವೇ ಆಗಿದೆ. ಈಗ ನಮ್ಮ ಶ್ಯಾಮಸುಂದರನು ತಂದೆ-ತಾಯಿಗಳ, ಬಂಧು-ಬಳಗ ದವರ ಮತ್ತು ಸುಹೃದರ ಜೊತೆಯಲ್ಲಿ ಸುಕುಶಲಿಯಾಗಿರುವ ಮಾತನ್ನು ಕೇಳಿ ನಾವು ಅಮೃತಪಾನಮಾಡಿದಷ್ಟು ಸಂತೋಷಗೊಂಡಿದ್ದೇವೆ. ಆದರೆ ಅವನ ವಿಷಯವಾಗಿ ನಾವು ಒಂದು ಮಾತನ್ನು ಕೇಳಬಯಸುತ್ತೇವೆ. ನಾವು ಸ್ನೇಹಪೂರ್ಣವಾದ ನಾಚಿಕೆಯಿಂದ ಕೂಡಿದ ಮಂದಹಾಸದಿಂದಲೂ, ಉದಾರವಾದ ನೋಟದಿಂದಲೂ ಅವನ ಸೇವೆಯನ್ನು ಮಾಡುತ್ತಿದ್ದೆವು. ಮುಕುಂದನೂ ಹಾಗೆಯೇ ಕಿರುನಗೆಯಿಂದಲೂ, ಕಡೆಗಣ್ಣಿನ ನೋಟ

ದಿಂದಲೂ, ಹುಬ್ಬುಹಾರಿಸುವಿಕೆಯಿಂದಲೂ, ಮಧುರವಾದ ಮಾತುಗಳಿಂದಲೂ ನಮ್ಮನ್ನು ಸಂತೃಪ್ತಿಗೊಳಿಸುತ್ತಿದ್ದನು. ಈಗ ಮಥುರಾಪಟ್ಟಣದಲ್ಲಿರುವ ಸ್ತ್ರೀಯರೂ ನಮ್ಮಂತೆಯೇ ಅವನನ್ನು ಸತ್ಕರಿಸುತ್ತಿರುವರೇ? ನಮ್ಮ ಇನಿಯನೂ ಅವರನ್ನು ಪ್ರೀತಿಸುತ್ತಿರುವನೇ?"

ಮತ್ತೊಬ್ಬ ಗೋಪಿಯು ಹೇಳುತ್ತಾಳೆ : "ಗೆಳತಿಯರೇ! ನಿಮ್ಮೆಲ್ಲರಿಗೂ ತಿಳಿದಿರುವಂತೆ ನಮ್ಮ ಪ್ರಿಯತಮನಾದ ಶ್ಯಾಮಸುಂದರನು ಪ್ರೇಮದ ಕಲೆಯಲ್ಲಿ ವಿಶೇಷವಾದ ಪಾಂಡಿತ್ಯವನ್ನು ಪಡೆದಿರುತ್ತಾನೆ. ಶ್ರೇಷ್ಠರೆನಿಸಿಕೊಂಡ ಸ್ತ್ರೀಯರೂ ಅವನನ್ನು ಪ್ರೀತಿಸುತ್ತಾರೆ. ಹೀಗಿರುವಾಗ ನಗರದ ಸ್ತ್ರೀಯರಾಡುವ ಮೃದು-ಮಧುರವಾದ ಮಾತುಗಳಿಂದಲೂ, ಅವರ ಹಾವ-ಭಾವಗಳಿಂದಲೂ, ಕಟಾಕ್ಷಗಳ ವೀಕ್ಷಣಗಳಿಂದಲೂ ಸತ್ಕೃತನಾದ ಅವನು ಹೇಗೆತಾನೇ ಅವರ ಪ್ರೇಮಪಾಶಗಳಿಂದ ಬಂಧಿಸಲ್ಪಡದೇ ಇದ್ದಾನು?"

ಮತ್ತೊಬ್ಬ ಗೋಪಿಯು ಪ್ರಶ್ನಿಸುತ್ತಾಳೆ : "ಸಾಧುಪುರುಷನೇ! ನಾನು ಕೇಳಲಿರುವ ಈ ಪ್ರಶ್ನೆಗೆ ನೀನು ಉತ್ತರವನ್ನು ಕೊಡಬೇಕು. ನಮ್ಮ ಪ್ರಿಯತಮನನ್ನು ಓಲೈಸುವ ಸಲುವಾಗಿ ಪುರಸ್ತ್ರೀಯರ ಒಂದು ದೊಡ್ಡ ಗೋಷ್ಠಿಯೇ ಸೇರಿರುತ್ತದೆ. ಅವರ ಮಧ್ಯದಲ್ಲಿ ನಮ್ಮ ಇನಿಯನು ಕುಳಿತು ಬೇಕು-ಬೇಕಾದಂತೆ ಸ್ವಚ್ಛಂದವಾಗಿ ಕಾಮಿನಿಯರ ಮನಸ್ಸನ್ನು ತಣಿಸುವ ಮಾತುಗಳನ್ನು ಆಡುತ್ತಿರುತ್ತಾನೆ. ಆ ಸಮಯದಲ್ಲಿ ಗೋಕುಲದ ಗೊಲ್ಲತಿಯರನ್ನು ಒಮ್ಮೆಯಾದರೂ ಸ್ಮರಿಸುವನೇ?"

ಮತ್ತೊಬ್ಬ ಗೋಪಿಯು ಪ್ರಶ್ನಿಸುತ್ತಾಳೆ : "ಉದ್ಧವಮಹಾಶಯ! ನಮ್ಮ ಪ್ರಿಯತಮನು ಆ ದಿವ್ಯರಾತ್ರಿಗಳನ್ನಾದರೂ ಸ್ಮರಿಸುವನೇ? ವಿಕಸಿತವಾದ ಬಿಳಿಯ ನೈದಿಲೆಗಳಿಂದಲೂ, ಮಲ್ಲಿಗೆಹೂವುಗಳಿಂದಲೂ, ಶರತ್ಕಾಲದ ಬೆಳದಿಂಗಳಿಂದಲೂ ವ್ಯಾಪ್ತವಾದ ವೃಂದಾವನದಲ್ಲಿ ಆ ರಾತ್ರಿಗಳಲ್ಲಿ ನಮ್ಮ ಪ್ರಿಯತಮನು ರಾಸಮಂಡಲವನ್ನು ಮಾಡಿಕೊಂಡು ನಮ್ಮೊಡನೆ ನೃತ್ಯವಾಡುತ್ತಿದ್ದನು. ನಿಶ್ಚಯವಾಗಿಯೂ ಎಷ್ಟು ಸುಂದರವಾದದ್ದು ಆ ರಾಸಲೀಲೆ! ನಂದಕಿಶೋರನ ಜೊತೆಯಲ್ಲಿ ನಾವು ನೃತ್ಯವನ್ನಾಡುವಾಗ ನಮ್ಮ ಕಾಲಂದುಗೆಗಳು ಝಣ-ಝಣಿಸುತ್ತಿದ್ದುವು. ನಾವೆಲ್ಲರೂ ಸೇರಿ ಶ್ರೀಕೃಷ್ಣನ ಲೀಲಾಪ್ರಸಂಗಗಳನ್ನು ಆನಂದದಿಂದ ಹಾಡು

ತ್ತಿದ್ದೆವು. ಹೀಗೆ ಅವನು ನಮ್ಮೊಡನೆ ನಾನಾಪ್ರಕಾರವಾಗಿ ಕ್ರೀಡಿಸುತ್ತಿದ್ದನು. ಅಂತಹ ರಾತ್ರಿಗಳನ್ನು ನಾವೆಂದೂ ಮರೆಯಲಾರೆವು. ಆದರೆ ಅವನಿಗೆ ಅದರ ಸ್ಮರಣೆಯಾದರೂ ಇರುವುದೇ?"

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

ಅಪ್ಯೇಷ್ಯತೀಹ ದಾಶಾರ್ಹಸ್ತಪ್ತಾಃ ಸ್ವಕೃತಯಾ ಶುಚಾ ।
ಸಂಜೀವಯನ್ನು ನೋ ಗಾತ್ರೈರ್ಯಥೇನ್ದ್ರೋ ವನಮಮ್ಬುದೈಃ ॥

"ಉದ್ಧವಮಹಾಶಯ! ನಾನಂತೂ ಇರುವುದನ್ನು ಇದ್ದ ಹಾಗೆಯೇ ಹೇಳಿಬಿಡುತ್ತೇನೆ. ನಾವೆಲ್ಲರೂ ಈಗ ಸ್ವಯಂಕೃತವಾದ ವಿರಹಾಗ್ನಿಯಿಂದ ಬೆಂದುಹೋಗುತ್ತಿದ್ದೇವೆ. ದೇವರಾಜನಾದ ಇಂದ್ರನು ಮಳೆಗರೆದು ಒಣಗಿ ಹೋಗಿರುವ ಅರಣ್ಯವನ್ನು ರಕ್ಷಿಸುವಂತೆ-ಆಲಿಂಗನ-ನಖಕ್ಷತಾದಿಗಳಿಂದ ನಮ್ಮ ವಿರಹವೇದನೆಯನ್ನು ಹೋಗಲಾಡಿಸಿ ನಮಗೆ ಜೀವದಾನಮಾಡಲು ಒಮ್ಮೆಯಾದರೂ ಶ್ರೀಕೃಷ್ಣನು ಇಲ್ಲಿಗೆ ಬರುವನೇ?"

ಮತ್ತೊಬ್ಬ ಗೋಪಿಯು ಹೇಳುತ್ತಾಳೆ : "ಗೆಳತಿ! ನೀನೊಬ್ಬಳು ಹುಚ್ಚಿಯೇ ಸರಿ. ಪ್ರಿಯತಮನು ಬರುವನೆಂದು ಹಲುಬುತ್ತಿರುವೆಯಲ್ಲಾ! ಶತ್ರುಗಳ ಸಂಹಾರವಾಯಿತು. ರಾಜ್ಯವು ಸಿಕ್ಕಿತು. ರಾಜಕುಮಾರಿಯರನ್ನು ಮದುವೆಯಾಗಿ ಸಮಸ್ತಸುಹೃದರಿಂದಲೂ ಪರಿವೃತನಾಗಿ ನಮ್ಮ ಪ್ರಿಯತಮನು ಆನಂದವಾಗಿರುತ್ತಾನೆ. ಗೊಲ್ಲಹಳ್ಳಿಯ ಗೊಲ್ಲತಿಯರ ಬಳಿಗೆ ಅವನೇಕೆ ಪುನಃ ಬರುತ್ತಾನೆ?"

ಮತ್ತೊಬ್ಬ ಗೋಪಿಯು ಹೇಳುತ್ತಾಳೆ : "ಸಖಿಯೇ! ಹಾಗೆಲ್ಲಾ ಆಕ್ಷೇಪಿಸಬೇಡ. ನಮ್ಮ ಪ್ರಿಯತಮನಾದ ಶ್ರೀಕೃಷ್ಣನು ಲಕ್ಷ್ಮೀದೇವಿಗೇ ಪತಿಯಾಗಿರತಕ್ಕವನು. ಆಪ್ತಕಾಮನು. ಅವನ ಆಸೆಗಳೆಲ್ಲವೂ ಪೂರ್ಣಗೊಂಡಿವೆ. ಅವನಿಗೆ ಬೇಕಾಗಿರುವುದು ಯಾವುದೂ ಇಲ್ಲ. ಅವನು ಕೃತಕೃತ್ಯನಾಗಿದ್ದಾನೆ. ಗೋಕುಲವಾಸಿಗಳಾದ ಗೊಲ್ಲತಿಯರಿಂದಾಗಲೀ ನಗರವಾಸಿಗಳಾದ ರಾಜಕುಮಾರಿಯರಿಂದಾಗಲೀ ಮಹಾತ್ಮನಾದ ಅವನಿಗೆ ಏನೂ ಆಗಬೇಕಾಗಿಲ್ಲ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ : "ಸಖಿಯರೇ! ಪಿಂಗಳೆ

ಯೆಂಬ ವೇಶ್ಯೆಯಾದರೂ ಎಂತಹ ಮಾತನ್ನು ಆಡಿರುವಳೆಂಬುದನ್ನು ಕೇಳಿರುವಿರಾ? **ಪರಂ ಸೌಖ್ಯಂ ಹಿ ನೈರಾಶ್ಯಂ ।** ಪ್ರಪಂಚದಲ್ಲಿ ಯಾವುದರ ಮೇಲೂ ಆಶೆಯನ್ನು ಇಟ್ಟುಕೊಳ್ಳದಿರುವುದೇ ಪರಮಸೌಖ್ಯವಾದುದು– ಇಂತಹ ಅಮೋಘವಾದ ಮಾತನ್ನು ಅವಳಾಡಿದ್ದಾಳೆ. ಈ ವಿಷಯವು ನಮಗೂ ತಿಳಿದಿದ್ದರೂ, ಆಶೆಯಿಂದಲೇ ದುಃಖವೆಂಬುದನ್ನು ನಾವು ಅನುಭವಿಸುತ್ತಿದ್ದರೂ ಶ್ರೀಕೃಷ್ಣನ ಮೇಲಿನ ಆಶೆಯನ್ನು ತೊರೆಯುವುದು ನಮ್ಮಿಂದ ಸಾಧ್ಯವೇ ಇಲ್ಲವಾಗಿದೆ. ಅವನು ಯಾವಾಗಲಾದರೂ ಒಮ್ಮೆ ಬಂದಾನೆಂಬ ಆಶೆಯನ್ನು ಇಟ್ಟುಕೊಂಡಿರುವುದರಿಂದಲೇ ನಮಗೆ ಬದುಕಿರಲು ಸಾಧ್ಯವಾಗಿದೆ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ : "ಸಖಿಯರೇ! ಉತ್ತಮ ಶ್ಲೋಕನಾದ ಶ್ರೀಕೃಷ್ಣನ ಸಹವಾಸವನ್ನು ತೊರೆಯಲು ಯಾರುತಾನೇ ಇಷ್ಟಪಡುತ್ತಾರೆ? ಪ್ರಭುವಾದ ನಾರಾಯಣನಿಗೆ ಇಚ್ಛೆಯಿಲ್ಲದಿದ್ದರೂ ಲಕ್ಷ್ಮೀದೇವಿಯು ಸದಾಕಾಲದಲ್ಲಿಯೂ ಅವನ ಚರಣಕಮಲಗಳಿಗೆ ಅಂಟಿ ಕೊಂಡಂತೆಯೇ ಇರುತ್ತಾಳೆ. ಅವನ ವಕ್ಷಃಸ್ಥಳವನ್ನು ಕ್ಷಣಕಾಲವೂ ಬಿಟ್ಟುಹೋಗುವುದೇ ಇಲ್ಲ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ : "ಓ ಉದ್ಧವಮಹಾಶಯ! ಇದೋ ನೋಡು ಈ ನದಿಯನ್ನು. ಇಲ್ಲಿಯೇ ನಮ್ಮ ಪ್ರಿಯತಮನು ನಮ್ಮೊಡನೆ ಜಲಕ್ರೀಡೆಯನ್ನಾಡುತ್ತಿದ್ದನು. ಈ ಗೋವರ್ಧನಪರ್ವತವನ್ನು ನೋಡು. ಇದರ ಶಿಖರದ ಮೇಲೆ ಕುಳಿತು ನಮ್ಮ ಇನಿಯನು ಕೊಳಲು ಬಾರಿಸುತ್ತಿದ್ದನು. ಈ ವೃಂದಾವನವನ್ನಾದರೂ ನೋಡು. ಇಲ್ಲಿಯೇ ನಮ್ಮ ಪ್ರೇಮಮೂರ್ತಿಯು ನಮ್ಮೊಡನೆ ಶರದ್ರಾತ್ರಿಯ ಬೆಳದಿಂಗಳಿನಲ್ಲಿ ರಾಸಕ್ರೀಡೆಯಾಡುತ್ತಿದ್ದನು. ಪ್ರಾತಃಕಾಲದಲ್ಲಿ ಹಸುಗಳನ್ನು ಗೋಕುಲದಿಂದ ಅರಣ್ಯಕ್ಕೆ ಬಲರಾಮನೊಡನೆ ಹೊಡೆದುಕೊಂಡು ಹೋಗುವಾಗಲೂ ಸಾಯಂಕಾಲದಲ್ಲಿ ಹಿಂದಕ್ಕೆ ಹಸುಗಳನ್ನು ಹೊಡೆದುಕೊಂಡು ಬರುವಾಗಲೂ ಕೊಳಲನ್ನೂದುತ್ತಾ ಬರುವ ಜಗದಾನಂದಕಂದನನ್ನೇ ನೋಡಿ ನಲಿಯಲು ಸಾಲು-ಸಾಲಾಗಿ ನಿಂತಿರುತ್ತಿದ್ದ ನಮಗೆ, ಕಿರುನಗೆಯನ್ನೂ ಕಡೆಗಣ್ಣಿನ ನೋಟವನ್ನೂ ಅನುಗ್ರಹಿಸುತ್ತಿದ್ದನು. ನಾವೂ ಅವನನ್ನು ಕಟಾಕ್ಷ–ವೀಕ್ಷಣ ಮಂದಹಾಸಗಳಿಂದಲೇ ಸತ್ಕರಿಸುತ್ತಿದ್ದೆವು. ಅವನು ಮೇಯಿಸು

ತ್ತಿದ್ದ ಹಸುಗಳೇ ಇವು. ಬಲರಾಮನ ಮತ್ತು ಗೋಪಾಲಕರ ಜೊತೆಯಲ್ಲಿ ಈ ಹಸುಗಳನ್ನು ಗೋಪಾಲನು ಮೇಯಿಸುತ್ತಿದ್ದನು."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ : "ಪ್ರಿಯತಮನ ಪ್ರಿಯ ತಮನೇ! ಈ ಗೋಕುಲದಲ್ಲಿರುವ ಕಲ್ಲು-ಮಣ್ಣುಗಳು, ಗಿಡ-ಮರ-ಬಳ್ಳಿಗಳು, ನದಿಗಳು, ಕೆರೆಗಳು, ಪರ್ವತಗಳು–ಪ್ರತಿಯೊಂದೂ ಬಾಲ ಮುಕುಂದನನ್ನು ಸ್ಮರಣೆಗೆ ತರುತ್ತವೆ. ಲಕ್ಷ್ಮೀದೇವಿಗೆ ನೆಲೆಮನೆಯಾದ ಅವನ ಪಾದಾರವಿಂದಗಳ ಚಿಹ್ನೆಗಳಿಲ್ಲದ ಸ್ಥಳವೇ ಗೋಕುಲದಲ್ಲಿರುವುದಿಲ್ಲ. ಹೀಗಿರುವಾಗ ಅವನನ್ನು ಮರೆಯುವುದಾದರೂ ಹೇಗೆ? ಸತ್ತರೂ ಮರೆಯಲಾರೆವು."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ : "ಉದ್ಧವನೇ! ನಮ್ಮ ಇನಿಯನ ಹಂಸದ ನಡಿಗೆಯಂತಹ ಗಂಭೀರವಾದ ನಡಿಗೆ, ಮನೋಹರವಾದ ಕಿರುನಗೆ, ಚೇತೋಹಾರಿಯಾದ ಕುಡಿನೋಟ, ಮೃದು-ಮಧುರವಾದ ಮಾತು, ಎಲ್ಲರನ್ನೂ ಹುಚ್ಚಾಗಿಸುವ ಕೊಳಲಿನ ಕರೆ–ಇತ್ಯಾದಿಗಳಿಂದ ಕೃಷ್ಣಸ್ವಾಮಿಯು ನಮ್ಮ ಮನಸ್ಸನ್ನೇ ಅಪಹರಿಸಿಬಿಟ್ಟಿದ್ದಾನೆ. ನಮ್ಮ ಮನಸ್ಸೇ ಅವನಲ್ಲಿ ಸೇರಿಹೋಗಿರುವಾಗ ಅವನನ್ನು ಬಿಟ್ಟು ಬೇರೊಂದರ ಸ್ಮರಣೆಯೇ ನಮಗೆ ಆಗದಿರುವಾಗ ಘನಶ್ಯಾಮನನ್ನು ಮರೆಯುವುದಂತೂ ಅಸಾಧ್ಯ ; ಅಸಂಭವ.

ಹೇ ನಾಥ ಹೇ ರಮಾನಾಥ ವ್ರಜನಾಥಾರ್ತಿನಾಶನ ।
ಮಗ್ನಮುದ್ಧರ ಗೋವಿನ್ದ ಗೋಕುಲಂ ವೃಜಿನಾರ್ಣವಾತ್ ॥೫೨॥

ನಮ್ಮೆಲ್ಲರಿಗೂ ಏಕೈಕಸ್ವಾಮಿಯಾಗಿರತಕ್ಕವನೇ! ಪ್ರಾಣನಾಥನೇ! ಲಕ್ಷ್ಮೀರಮಣನೇ! ಗೋಕುಲನಾಥನೇ! ನಮ್ಮೆಲ್ಲರ ಕಷ್ಟಗಳನ್ನೂ ಪರಿಹರಿ ಸಿರತಕ್ಕವನೇ! ಗೋವಿಂದನೇ! ತಂದೆ-ತಾಯಿಗಳಿಂದಲೂ, ಸುಹೃದ ರಿಂದಲೂ, ನಮ್ಮಂತಹ ವಿರಹಿಣಿಯರಿಂದಲೂ, ನಿನಗೆ ಅತಿಪ್ರಿಯವಾದ ಗೋವುಗಳಿಂದಲೂ ಕೂಡಿರುವ ಗೋಕುಲವೀಗ ನಿನ್ನನ್ನು ಕಾಣದ ದುಃಖಸಾಗರದಲ್ಲಿ ಮುಳುಗಿಹೋಗಿದೆ. ಅದನ್ನು ಉದ್ಧರಿಸು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಶ್ರೀಕೃಷ್ಣನ ಸಂದೇಶವನ್ನು ಕೇಳಿ ಉದ್ಧವನ ಮುಂದೆ ಹೀಗೆಲ್ಲಾ ತಮ್ಮ ವಿರಹವೇದನೆಯನ್ನು ಹೇಳಿಕೊಂಡ ನಂತರ ಗೋಪಿಯರಿಗೆ ವಿರಹತಾಪವು ಸ್ವಲ್ಪ ಕಡಿಮೆಯಾಯಿತು. ಅವರು ಇಂದ್ರಿಯಾತೀತನಾದ ಅಧೋಕ್ಷಜನನ್ನೇ ತಮ್ಮ ಆತ್ಮಸ್ವರೂಪನೆಂದು ತಿಳಿದುಕೊಂಡರು. ಪ್ರಾಣಸಖನ ಸಂದೇಶವೆಂಬ ಅಮೃತವನ್ನು ಹೊತ್ತು ತಂದಿದ್ದ ಉದ್ಧವನಿಗೆ ಅತ್ಯಂತ ಆದರದಿಂದ ಸತ್ಕಾರಮಾಡಿದರು. ಉದ್ಧವನು ಕೂಡ ಗೋಪಿಯರಿಗೆ ಸಮಾಧಾನ ಹೇಳಿ ಅವರ ವ್ಯಥೆಯನ್ನು ದೂರಗೊಳಿಸಲು ಕೆಲವು ಮಾಸಗಳು ಗೋಕುಲದಲ್ಲೇ ಇದ್ದನು. ಅವನೂ ಕೂಡ ಶ್ರೀಕೃಷ್ಣನ ಲೀಲಾಪ್ರಸಂಗಗಳನ್ನು ಸುಮಧುರವಾಗಿ ಗಾನಮಾಡುತ್ತಾ ಗೋಕುಲವಾಸಿಗಳನ್ನು ಆನಂದಗೊಳಿಸುತ್ತಿದ್ದನು. ಶ್ರೀಕೃಷ್ಣನ ಸಾಹಸ ಪೂರ್ಣವಾದ ಕಥೆಗಳನ್ನು ಹೇಳುತ್ತಾ ಅವನ ಕೀರ್ತಿಯನ್ನು ಸುಮಧುರ ವಾಗಿ ಗಾನಮಾಡುತ್ತಾ ಉದ್ಧವನು ನಂದಗೋಕುಲದಲ್ಲಿ ಹಲವಾರು ಮಾಸಗಳೇ ಇದ್ದನು. ಆದರೆ ಗೋಕುಲವಾಸಿಗಳಿಗೆ ಉದ್ಧವನಿದ್ದುದು ಕ್ಷಣ ಮಾತ್ರವೆಂಬ ಭಾವನೆಯುಂಟಾಯಿತು. ಯಾವಾಗಲೂ ಶ್ರೀಕೃಷ್ಣನ ಪ್ರಸಂಗ ಗಳಲ್ಲಿಯೇ ಮಗ್ನರಾಗಿ ಹೋಗಿದ್ದ ಪವಿತ್ರಾತ್ಮರಾದ ಗೋಕುಲವಾಸಿಗಳಿಗೆ ಮಾಸಗಳು ಕಳೆದುದು ಅರಿವಿಗೆ ಬರಲಿಲ್ಲ. ಹರಿದಾಸನಾದ ಉದ್ಧವನು ಗೋಕುಲದ ಗೋಪ-ಗೋಪಿಯರನ್ನು ಒಂದು ದಿನ ಶ್ರೀಕೃಷ್ಣನು ಕ್ರೀಡೆ ಯಾಡುತ್ತಿದ್ದ ಯಮುನಾನದಿಯ ತೀರಕ್ಕೆ ಕರೆದುಕೊಂಡು ಹೋಗುವನು. ಅಲ್ಲಿ ನಡೆದ ಜಲಕ್ರೀಡೆ, ಕಾಳಿಂಗಮರ್ದನ ಇತ್ಯಾದಿ ಪ್ರಸಂಗಗಳೆಲ್ಲ ವನ್ನೂ ಗೋಪ-ಗೋಪಿಯರಿಂದ ವಿಶದವಾಗಿ ಕೇಳಿ ಆನಂದಿಸುವನು. ಗೋಪ-ಗೋಪಿಯರೊಡನೆ ಶ್ರೀಕೃಷ್ಣನ ನಾಮಸಂಕೀರ್ತನೆಮಾಡುವನು. ಮತ್ತೊಂದು ದಿನ ಗೋವರ್ಧನಪರ್ವತಕ್ಕೆ ಹೋಗಿ ಅಲ್ಲಿ ನಡೆದ ಅದ್ಭುತ ಪ್ರಸಂಗಗಳೆಲ್ಲವನ್ನು ಗೋಪ-ಗೋಪಿಯರಿಂದ ಕೇಳಿ ತಿಳಿಯುವನು. ಅವರೊಡನೆಯೇ ತಾನೂ ಆನಂದಬಾಷ್ಪವನ್ನು ಸುರಿಸುವನು. ದಿಕ್ಕು-ದಿಕ್ಕು ಗಳಲ್ಲಿಯೂ ಪ್ರತಿಧ್ವನಿಸುವಂತೆ ಶ್ರೀಕೃಷ್ಣನ ಗೀತೆಗಳನ್ನು ಗೋಪಿಯರೊಡನೆ ಹಾಡುವನು. ಮತ್ತೊಂದು ದಿನ ಕುಸುಮಿತವಾದ ವೃಕ್ಷಗಳ ಬಳಿಗೆ ಹೋಗು

ವನು. ಅಲ್ಲಿ ಶ್ರೀಕೃಷ್ಣನ ಚರಣಾರವಿಂದಗಳ ಗುರುತುಗಳನ್ನು ನೋಡಿ ಮೈಮರೆಯುವನು. ಹೀಗೆ ಉದ್ಧವನು ಗೋಪ-ಗೋಪಿಯರಿಗೆ ಶ್ರೀಕೃಷ್ಣನ ಅದ್ಭುತವಾದ ಲೀಲಾಪ್ರಸಂಗಗಳೆಲ್ಲವನ್ನೂ ನೆನಪುಮಾಡಿಕೊಟ್ಟನು. ಉದ್ಧವನಿಗೆ ಕೂಡ ಶ್ರೀಕೃಷ್ಣನ ಭಕ್ತರಾದ ಗೋಪ-ಗೋಪಿಯರ ಜೊತೆ ಯಲ್ಲಿ ಹಲವಾರು ಕ್ಷಣಗಳನ್ನು ಮಾತ್ರವೇ ಕಳೆದಂತೆ ಭಾಸವಾಯಿತು. ಹೀಗೆ ಉದ್ಧವನು ಗೋಕುಲದಲ್ಲಿರುವಷ್ಟು ದಿವಸಗಳೂ ಶ್ರೀಕೃಷ್ಣನ ಲೀಲಾ ಪ್ರಸಂಗಗಳನ್ನು ಹಾಡುತ್ತಾ ಆನಂದದಿಂದ ಕಳೆದನು. ಇದೇ ಮುಂತಾಗಿ ಗೋಪಿಯರಿಗೆ ಶ್ರೀಕೃಷ್ಣನ ಆವೇಶದಿಂದುಂಟಾಗಿರುವ ಮಾನಸಿಕದುಃಖ ವನ್ನೂ ಅವರ ಶುದ್ಧಪ್ರೇಮದ ಚೇಷ್ಟೆಗಳನ್ನೂ ನೋಡಿ ಉದ್ಧವನು ಪರಮ ಪ್ರೀತನಾದನು. ಅವರಿಗೆ ನಮಸ್ಕರಿಸುತ್ತಾ ಈ ಮಾತನ್ನು ಹೇಳಿದನು :

ಏತಾಃ ಪರಂ ತನುಭೃತೋ ಭುವಿ ಗೋಪವಧ್ವೋ
ಗೋವಿನ್ದ ಏವ ನಿಖಿಲಾತ್ಮನಿ ರೂಢಭಾವಾಃ ।
ವಾಞ್ಛನ್ತಿ ಯದ್ಭವಭಿಯೋ ಮುನಯೋ ವಯಂ ಚ
ಕಿಂ ಬ್ರಹ್ಮಜನ್ಮಭಿರನನ್ತಕಥಾರಸಸ್ಯ ॥೫೮॥

"ಸಮಸ್ತವಸ್ತುಗಳಿಗೂ ಆತ್ಮಸ್ವರೂಪನಾಗಿರುವ ಗೋವಿಂದನಲ್ಲಿಯೇ ನೆಲೆಗೊಂಡ ಭಾವವುಳ್ಳವರಾಗಿರುವ ಈ ಗೋಪಿಯರ ಶರೀರಧಾರಣೆಯು ಪೂರ್ಣವಾಗಿ ಸಾರ್ಥಕ್ಯವನ್ನು ಹೊಂದಿದೆ. ಸಂಸಾರಕ್ಕೆ ಭಯಪಡುವ ಮುನಿಗಳು ಮತ್ತು ಭಕ್ತರಾದ ನಾವು ಇಂತಹುದೇ ಸ್ಥಿತಿಯನ್ನು ಬಯಸುತ್ತೇವೆ. ಆದರೆ ಅಂತಹ ಅನುಪಮವಾದ ಮತ್ತು ರೂಢಮೂಲವಾದ ಪ್ರೇಮವು ಭಗವಂತನಲ್ಲಿ ನಮಗಿನ್ನೂ ಉಂಟಾಗಿಲ್ಲ. ಅನಂತನ ಕಥಾರಸವನ್ನು ನಿರಂತರವಾಗಿ ಪಾನಮಾಡುವ ಪ್ರೇಮೀಭಕ್ತರಿಗೆ ಬ್ರಾಹ್ಮಣನ ಜನ್ಮ ದಿಂದಾಗಲೀ ಬ್ರಹ್ಮನ ಜನ್ಮದಿಂದಾಗಲೀ ಏನಾಗಬೇಕಾಗಿದೆ?

ಕ್ವೇಮಾಃ ಸ್ತ್ರಿಯೋ ವನಚರೀರ್ವ್ಯಭಿಚಾರದುಷ್ಟಾಃ
ಕೃಷ್ಣೇ ಕ್ವ ಚೈಷ ಪರಮಾತ್ಮನಿ ರೂಢಭಾವಃ ।
ನನ್ವೀಶ್ವರೋಽನುಭಜತೋಽವಿದುಷೋಽಪಿ ಸಾಕ್ಷಾ-
ಚ್ಛ್ರೇಯಸ್ತನೋತ್ಯಗದರಾಜ ಇವೋಪಯುಕ್ತಃ ॥೫೯॥

ವ್ಯಭಿಚಾರದಿಂದ ದೂಷಿತರಾದ ವನಚರಿಯರಾದ ಈ ಗೋಪಿಕಾ ಸ್ತ್ರೀಯರೆಲ್ಲಿ! ಪರಮಾತ್ಮನಾದ ಶ್ರೀಕೃಷ್ಣನಲ್ಲಿ ಅವರಿಗಿರುವ, ಋಷಿ-ಮುನಿ ಗಳಿಗೂ ಇಲ್ಲದ, ದೃಢವಾದ ಮತ್ತು ಗಾಢವಾದ ಪ್ರೇಮಭಾವವೆಲ್ಲಿ? ನಿಜ! ಅಮೃತವನ್ನು ತಿಳಿಯದೇ ಕುಡಿದರೂ ಅದು ಅಮೃತತ್ತ್ವವನ್ನು ಕೊಡುವಂತೆ ದಯಾಮಯನಾದ ಭಗವಂತನು ತನ್ನನ್ನೇ ಅನನ್ಯಶರಣರಾಗಿ ಭಜಿಸುವ ಮೂಢಜನರಿಗೂ ಶ್ರೇಯಸ್ಸನ್ನುಂಟುಮಾಡುವನು.

ನಾಯಂ ಶ್ರಿಯೋಽಙ್ಗ ಉ ನಿತಾನ್ತರತೇಃ ಪ್ರಸಾದಃ
ಸ್ವರ್ಯೋಷಿತಾಂ ನಲಿನಗನ್ಧರುಚಾಂ ಕುತೋಽನ್ಯಾಃ ।
ರಾಸೋತ್ಸವೇಽಸ್ಯ ಭುಜದಣ್ಡಗೃಹೀತಕಣ್ಠ-
ಲಬ್ಧಾಶಿಷಾಂ ಯ ಉದಗಾದ್ವ್ರಜವಲ್ಲವೀನಾಮ್ ॥೬೦॥

ಭಗವಂತನಾದ ಶ್ರೀಕೃಷ್ಣನು ರಾಸಕ್ರೀಡೆಯ ಸಮಯದಲ್ಲಿ ಗೋಕುಲದ ಗೊಲ್ಲತಿಯರ ಕಂಬುಕಂಠವನ್ನು ನೀಳವಾದ ತೋಳುಗಳಿಂದ ಅಪ್ಪಿಕೊಂಡು ಗೋಪಿಯರಿಗೆ ಪರಮಾನುಗ್ರಹವನ್ನುಂಟುಮಾಡಿದನು. ಭಗವಂತನ ಇಂತಹ ದಿವ್ಯಾಲಿಂಗನದ ಪ್ರಸಾದವು ಅವನ ವಕ್ಷಃಸ್ಥಳದಲ್ಲಿಯೇ ನಿರಂತರವಾಗಿ ವಾಸಿಸುತ್ತಿರುವ ಏಕಾಂತಪ್ರೇಮಿಯಾದ ಲಕ್ಷ್ಮೀದೇವಿಗಾಗಲೀ ಪದ್ಮಗಂಧೆಯರೂ ಪದ್ಮವರ್ಣೆಯರೂ ಆದ ದೇವಲೋಕದ ಸ್ತ್ರೀಯರಿ ಗಾಗಲೀ ಲಭಿಸಲಿಲ್ಲ. ಹೀಗಿರುವಾಗ ಉಳಿದ ಸಾಧಾರಣಸ್ತ್ರೀಯರಿಗೆ ಇಂತಹ ಪರಮಾನುಗ್ರಹವು ಹೇಗೆತಾನೇ ಲಭಿಸೀತು?

ಆಸಾಮಹೋ ಚರಣರೇಣುಜುಷಾಮಹಂ ಸ್ಯಾಂ
ವೃನ್ದಾವನೇ ಕಿಮಪಿ ಗುಲ್ಮಲತೌಷಧೀನಾಮ್ ।
ಯಾ ದುಸ್ತ್ಯಜಂ ಸ್ವಜನಮಾರ್ಯಪಥಂ ಚ ಹಿತ್ವಾ
ಭೇಜುರ್ಮುಕುನ್ದಪದವೀಂ ಶ್ರುತಿಭಿರ್ವಿಮೃಗ್ಯಾಮ್ ॥

ಪರಿತ್ಯಜಿಸಲಾಗದ ಪತಿ-ಸುತ-ಬಂಧುಗಳನ್ನೂ, ಪಾತಿವ್ರತ್ಯವೇ ಮೊದಲಾದ ಆರ್ಯಧರ್ಮಗಳನ್ನೂ ಪರಿತ್ಯಜಿಸಿ ಶ್ರುತಿ-ಸ್ಮೃತಿಗಳಿಂದ ಹುಡುಕಲ್ಪಡುತ್ತಿರುವ ಮುಕುಂದನ ಪರಮಪದವನ್ನು ಯಾರು ಸೇರಿಬಿಟ್ಟಿರು ವರೋ–ಅಂತಹ ಗೋಪಿಯರ ಪಾದಧೂಳಿಯನ್ನು ಸತತವಾಗಿ ಸೇವಿಸುವ

ವೃಂದಾವನದ ಯಾವುದಾದರೂ ಪೊದೆಗಳ ಅಥವಾ ಮರ-ಗಿಡ-ಬಳ್ಳಿಗಳ ಮಧ್ಯದಲ್ಲಿ ನಾನು ಹುಟ್ಟುವಂತಾಗಲಿ. ಮುಕುಂದನ ಪರಮಭಕ್ತೆಯರಾದ ಗೋಪಿಯರ ಪಾದಧೂಳಿಯ ಸತತಸೇವನೆಯಿಂದಾದರೂ ನನಗೆ ಮುಕುಂದನ ಪರಮಪದವು ಸಿಕ್ಕಬಹುದು.

ಯಾ ವೈ ಶ್ರಿಯಾರ್ಚಿತಮಜಾದಿಭಿರಾಪ್ತಕಾಮೈ-
ರ್ಯೋಗೇಶ್ವರೈರಪಿ ಯದಾತ್ಮನಿ ರಾಸಗೋಷ್ಠ್ಯಾಮ್ ।
ಕೃಷ್ಣಸ್ಯ ತದ್ಭಗವತಶ್ಚರಣಾರವಿನ್ದಂ
ನ್ಯಸ್ತಂ ಸ್ತನೇಷು ವಿಜಹುಃ ಪರಿರಭ್ಯ ತಾಪಮ್ ॥೬೨॥

ಭಗವತಿಯಾದ ಲಕ್ಷ್ಮಿಯಿಂದ ಅರ್ಚಿಸಲ್ಪಡುವ ಯಾವ ಪಾದಾರವಿಂದ ಗಳನ್ನು ಪೂರ್ಣಕಾಮರಾದ ಬ್ರಹ್ಮಾದಿಗಳೂ ಮತ್ತು ಯೋಗೇಶ್ವರರೂ ಕೇವಲ ಮನಸ್ಸಿನಿಂದ ಮಾತ್ರವೇ ಧ್ಯಾನಮಾಡುವರೋ–ಅಂತಹ ದಿವ್ಯವಾದ ಚರಣಾರವಿಂದಗಳನ್ನು ರಾಸಕ್ರೀಡೆಯ ಸಮಯದಲ್ಲಿ ಗೋಪಿಕಾಸ್ತ್ರೀಯರು ತಮ್ಮ ಸ್ತನಮಂಡಲದಲ್ಲಿಟ್ಟುಕೊಂಡು ಅದನ್ನೇ ಆಲಿಂಗಿಸಿಕೊಂಡು ವಿರಹ ತಾಪವನ್ನು ಕಳೆದುಕೊಂಡರು. ಇಂತಹ ಸುಕೃತವು ಗೋಕುಲದ ಗೋಪಿ ಯರಿಗಲ್ಲದೆ ಮತ್ತಾರಿಗಿದೆ?

ವನ್ದೇ ನನ್ದವ್ರಜಸ್ತ್ರೀಣಾಂ ಪಾದರೇಣುಮಭೀಕ್ಷ್ಣಶಃ ।
ಯಾಸಾಂ ಹರಿಕಥೋದ್ಗೀತಂ ಪುನಾತಿ ಭುವನತ್ರಯಮ್ ॥೬೩॥

ನಂದಗೋಕುಲದಲ್ಲಿರುವ ಗೋಪಿಯರ ಪಾದಧೂಳಿಗೆ ನಾನು ಪುನಃ ಪುನಃ ನಮಸ್ಕರಿಸುತ್ತೇನೆ. ಆ ದಿವ್ಯಪಾದಧೂಳಿಯನ್ನು ನನ್ನ ಶಿರಸ್ಸಿನಲ್ಲಿ ಧರಿಸುತ್ತೇನೆ. ಆ ಗೋಪಿಯರು ತನ್ಮಯರಾಗಿ ಹಾಡುವ ಶ್ರೀಕೃಷ್ಣನ ಲೀಲಾ ಪ್ರಸಂಗದ ಗೀತೆಗಳು ಮೂರುಲೋಕಗಳನ್ನೂ ಪಾವನಗೊಳಿಸುತ್ತವೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಹೀಗೆ ಉದ್ಧವನು ಗೋಕುಲದಲ್ಲಿ ಹಲವಾರು

ಮಾಸಗಳಿದ್ದು ಮಥುರೆಗೆ ಪ್ರಯಾಣಮಾಡಲು ನಂದ-ಯಶೋದೆಯರ ಮತ್ತು ಗೋಪೀ-ಗೋಪಾಲರ ಅನುಜ್ಞೆಯನ್ನು ಪಡೆದು ರಥವನ್ನೇರಿದನು. ಹಾಗೆ ಪ್ರಯಾಣಹೊರಟ ಉದ್ಧವನ ರಥದ ಬಳಿಗೆ ನಂದಗೋಪನೇ ಮೊದಲಾದ ಗೋಪಾಲರು ಹಲವಾರು ಬಗೆಯ ಉಪಾಯನಗಳನ್ನು (ಕಾಣಿಕೆಗಳನ್ನು) ತಂದರು. ಕಣ್ಣುಗಳಲ್ಲಿ ಆನಂದಬಾಷ್ಪವನ್ನು ತುಂಬಿಕೊಂಡು ಪ್ರೇಮಪುರಸ್ಸರ ವಾಗಿ ಅವರು ಉದ್ಧವನಿಗೆ ಹೇಳಿದರು :

ಮನಸೋ ವೃತ್ತಯೋ ನಃ ಸ್ಯುಃ ಕೃಷ್ಣಪಾದಾಮ್ಬುಜಾಶ್ರಯಾಃ ।
ವಾಚೋಽಭಿಧಾಯಿನೀರ್ನಾಮ್ನಾಂ ಕಾಯಸ್ತತ್ಪ್ರಹ್ವಣಾದಿಷು ॥೬೬॥

"ಉದ್ಧವಮಹಾಶಯನೇ! ನಮ್ಮ ಚಿತ್ತವೃತ್ತಿಗಳು ಯಾವಾಗಲೂ ಶ್ರೀಕೃಷ್ಣನ ಪಾದಕಮಲಗಳನ್ನೇ ಆಶ್ರಯಿಸಿರಲಿ. ನಮ್ಮ ವಾಣಿಯು ನಿತ್ಯ ನಿರಂತರವಾಗಿ ಅವನ ಶುಭನಾಮಗಳನ್ನು ಹಾಡುತ್ತಿರಲಿ. ನಮ್ಮ ಶರೀರವು ಅವನಿಗೆ ಪ್ರಣಾಮಮಾಡುವುದಕ್ಕೂ ಮತ್ತು ಅವನ ಸೇವೆ ಮಾಡುವುದಕ್ಕೂ ಮೀಸಲಾಗಿರಲಿ.

ಕರ್ಮಭಿರ್ಭ್ರಾಮ್ಯಮಾಣಾನಾಂ ಯತ್ರ ಕ್ವಾಪೀಶ್ವರೇಚ್ಛಯಾ ।
ಮಙ್ಗಲಾಚರಿತೈರ್ದಾನೈ ರತಿರ್ನಃ ಕೃಷ್ಣ ಈಶ್ವರೇ ॥೬೭॥

ಪಾಪ-ಪುಣ್ಯಕರ್ಮಗಳ ಫಲದಿಂದ ನಾನಾಯೋನಿಗಳಲ್ಲಿ ಹುಟ್ಟುವ ನಮಗೆ ಪರಮಾತ್ಮನ ಇಚ್ಛೆಯಿಂದ ನಾವು ಯಾವುದೇ ಯೋನಿಯಲ್ಲಿ ಜನಿಸಿದ್ದರೂ ನಾವು ಮಾಡಿದ ಪುಣ್ಯಕಾರ್ಯಗಳ ಫಲವಾಗಿ ಮತ್ತು ದಾನಗಳ ಫಲವಾಗಿ ಸರ್ವೇಶ್ವರನಾದ ಶ್ರೀಕೃಷ್ಣನಲ್ಲಿಯೇ ನಮಗೆ ಅಚಲವಾದ ಭಕ್ತಿಯುಂಟಾಗಲಿ."

ಪರೀಕ್ಷಿತಮಹಾರಾಜ! ಹೀಗೆ–ಉದ್ಧವನು ಶ್ರೀಕೃಷ್ಣನ ಪರಮಭಕ್ತನೆಂಬ ಕಾರಣದಿಂದ ನಂದನಿಂದಲೂ, ಗೋಪಾಲರಿಂದಲೂ ಸಮ್ಮಾನಿತನಾಗಿ ಶ್ರೀಕೃಷ್ಣನಿಂದ ಪರಿಪಾಲಿಸಲ್ಪಡುತ್ತಿದ್ದ ಮಥುರಾಪಟ್ಟಣಕ್ಕೆ ಹಿಂದಿರುಗಿದನು. ಮಥುರಾಪಟ್ಟಣವನ್ನು ಸೇರಿದ ಬಳಿಕ ಉದ್ಧವನು ಶ್ರೀಕೃಷ್ಣನನ್ನು ಕಂಡು ಅವನಿಗೆ ನಮಸ್ಕರಿಸಿ ಗೋಕುಲವಾಸಿಗಳ ಅತಿಶಯವಾದ ಭಕ್ತಿಯನ್ನು ವಿವರಿಸಿ ಹೇಳಿದನು. ಅನಂತರ ತಾನು ತಂದಿದ್ದ ಕಾಣಿಕೆಗಳನ್ನು

ವಸುದೇವನಿಗೂ, ಬಲರಾಮನಿಗೂ ಮತ್ತು ರಾಜನಾದ ಉಗ್ರಸೇನನಿಗೂ ಸಮರ್ಪಿಸಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೪೭ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೪೮ನೆಯ ಅಧ್ಯಾಯ

ಭಗವಂತನು ಸೈರಂಧ್ರಿಯ (ಕುಬ್ಜೆಯ) ಮತ್ತು ಅಕ್ರೂರನ ಮನೆಗಳಿಗೆ ಹೋದುದು

ಶ್ರೀಶುಕಮುನಿಗಳು ಹೇಳುತ್ತಾರೆ :

ಅಥ ವಿಜ್ಞಾಯ ಭಗವಾನ್ ಸರ್ವಾತ್ಮಾ ಸರ್ವದರ್ಶನಃ ।
ಸೈರನ್ಧ್ರ್ಯಾಃ ಕಾಮತಪ್ತಾಯಾಃ ಪ್ರಿಯಮಿಚ್ಛನ್ ಗೃಹಂ ಯಯೌ ॥೧॥

ಪರೀಕ್ಷಿತಮಹಾರಾಜ! ಸಮಸ್ತರಿಗೂ ಆತ್ಮಸ್ವರೂಪನಾದ ಸರ್ವ ವನ್ನೂ ಅಂತರ್ದೃಷ್ಟಿಯಿಂದ ಕಾಣುತ್ತಿದ್ದ ಭಗವಂತನಾದ ಶ್ರೀಕೃಷ್ಣನು ತನ್ನನ್ನು ಸೇರಬೇಕೆನ್ನುವ ಆಸೆಯನ್ನಿಟ್ಟುಕೊಂಡು ಬಹಳವಾಗಿ ಪರಿತಪಿಸುತ್ತಿದ್ದ ಸೈರಂಧ್ರಿಗೆ ಪ್ರಿಯವನ್ನುಂಟುಮಾಡಬೇಕೆನ್ನುವ ಅಪೇಕ್ಷೆಯಿಂದ ಅವಳ ಮನೆಗೆ ಹೋದನು.

ಆಕೆಯ ಮನೆಯು ಬಹುಮೂಲ್ಯವಾದ ಸಾಮಗ್ರಿಗಳಿಂದ ಸಂಪನ್ನ ವಾಗಿದ್ದಿತು. ಕಾಮವನ್ನು ಉದ್ದೀಪನಗೊಳಿಸುವ ಹಲವಾರು ಸಾಧನ ಸಾಮಗ್ರಿಗಳೂ ಅಲ್ಲಿದ್ದುವು. ಸೈರಂಧ್ರಿಯ ಆ ಸುಂದರವಾದ ಭವನವು ಮುತ್ತಿನಹಾರಗಳಿಂದಲೂ, ಪತಾಕೆಗಳಿಂದಲೂ, ಮೇಲ್ಕಾವಣಿಗಳಿಂದಲೂ, ಹಂಸತೂಲಿಕಾತಲ್ಪಗಳಿಂದಲೂ, ಸುವರ್ಣಮಯವಾದ ಆಸನಗಳಿಂದಲೂ, ಸುಗಂಧಯುಕ್ತವಾದ ಧೂಪಗಳಿಂದಲೂ, ದೀಪಗಳಿಂದಲೂ, ಮಾಲೆ ಗಳಿಂದಲೂ, ಸುಗಂಧಚಂದನಗಳಿಂದಲೂ ಸಮಲಂಕೃತವಾಗಿದ್ದಿತು. ತನ್ನ ಸ್ವಾಮಿಯು ತನ್ನ ಮನೆಯೊಳಗೆ ಬಂದುದನ್ನು ಕಂಡು ಆಕೆಯು ಒಡನೆಯೇ ಆಸನದಿಂದ ಮೇಲೆದ್ದು ಅತ್ಯಂತಸಂಭ್ರಮದಿಂದ ತನ್ನ ಸಖಿಯರೊಡನೆ ಶ್ರೀಕೃಷ್ಣನನ್ನು ಆದರದಿಂದ ಸ್ವಾಗತಿಸಿ ಸುಖಾಸನವನ್ನಿತ್ತು ಅರ್ಘ್ಯ-ಪಾದ್ಯಾದಿ

ಗಳಿಂದ ಯಥಾವಿಧಿಯಾಗಿ ಸತ್ಕರಿಸಿದಳು. ಶ್ರೀಕೃಷ್ಣನನ್ನು ಸತ್ಕರಿಸಿದಂತೆಯೇ ಸೈರಂಧ್ರಿಯು ಶ್ರೀಕೃಷ್ಣನ ಪರಮಭಕ್ತನಾದ ಉದ್ಧವನನ್ನೂ ಸತ್ಕರಿಸಿ ಅವನಿಗೂ ಕುಳಿತುಕೊಳ್ಳಲು ಆಸನವನ್ನಿತ್ತಳು. ಆದರೆ ಉದ್ಧವನು ಸ್ವಾಮಿಯ ಜೊತೆಯಲ್ಲಿ ಕುಳಿತುಕೊಳ್ಳಲು ಇಷ್ಟಪಡದೆ ಆಕೆಯಿತ್ತ ಆಸನವನ್ನು ಕೈಯಿಂದ ಮುಟ್ಟಿ ನೆಲದಮೇಲೆ ಕುಳಿತನು. ಲೋಕಾಚಾರಗಳನ್ನು ಅನುಸರಿಸುವವ ನಾಗಿದ್ದ ಶ್ರೀಕೃಷ್ಣನು ಬಹುಮೂಲ್ಯವಾದ ಹಾಸಿಗೆಯಮೇಲೆ ಕುಳಿತನು. ಅನಂತರ ಸೈರಂಧ್ರಿಯು ಮಂಗಳಸ್ನಾನವನ್ನು ಮಾಡಿ, ಅಂಗರಾಗವನ್ನು ಲೇಪಿಸಿಕೊಂಡು, ದಿವ್ಯವಾದ ವಸ್ತ್ರವನ್ನುಟ್ಟು ಆಭರಣಗಳಿಂದ ಸಮಲಂಕೃತೆ ಯಾಗಿ, ಗಂಧವನ್ನು ಪೂಸಿಕೊಂಡು, ಹೂ ಮುಡಿದುಕೊಂಡು, ಆಸವವನ್ನು ಕುಡಿದು, ತಾಂಬೂಲವನ್ನು ಸೇವಿಸಿ ಸೌಂದರ್ಯದ ಖನಿಯಂತಾಗಿ ನಾಚಿಕೆಯಿಂದಲೂ, ಮಂದಹಾಸದಿಂದಲೂ, ಹಾವಭಾವದಿಂದಲೂ ಭಗವಂತನನ್ನು ಕಡೆಗಣ್ಣಿನಿಂದ ವೀಕ್ಷಿಸುತ್ತಾ ಅವನ ಬಳಿಗೆ ಸಾರಿದಳು. ಹೊಸಬನಾದ ತನ್ನೊಡನೆ ಸೇರಲು ನಾಚಿಕೆಯಿಂದ ಸಂಶಯಪಡುತ್ತಿದ್ದ ಕಡುಚೆಲುವೆಯಾದ ಆಕೆಯನ್ನು ಹತ್ತಿರಕ್ಕೆ ಕರೆದು ಶ್ರೀಕೃಷ್ಣನು ಬಳೆಗಳಿಂದ ಭೂಷಿತವಾದ ಅವಳ ಕೈಗಳನ್ನು ಹಿಡಿದುಕೊಂಡು ಮಂಚದ ಮೇಲಕ್ಕೆ ಹತ್ತಿಸಿಕೊಂಡು, ಪುರಪ್ರವೇಶಮಾಡಿದಾಗ ತನಗೆ ಅಂಗರಾಗವನ್ನು ಅರ್ಪಿಸಿ ಪುಣ್ಯವತಿಯಾಗಿದ್ದ ಸೈರಂಧ್ರಿಯೊಡನೆ ಕ್ರೀಡಿಸಿ ದನು. ಆಕೆಯು ಶ್ರೀಕೃಷ್ಣನ ಚರಣಾರವಿಂದಗಳನ್ನು ಕಾಮತಪ್ತವಾಗಿದ್ದ ಕುಚಗಳ ಮೇಲೂ ವಕ್ಷಃಸ್ಥಳದ ಮೇಲೂ ಇಟ್ಟುಕೊಂಡು ಕಣ್ಣಿಗೊತ್ತಿಕೊಂಡು ಆ ದಿವ್ಯಚರಣಾರವಿಂದಗಳ ಗಂಧವನ್ನು ಆಘ್ರಾಣಿಸುತ್ತಾ, ಮನಸ್ಸಿನಲ್ಲಿದ್ದ ಆಧಿ-ವ್ಯಾಧಿಗಳನ್ನು ಸಂಪೂರ್ಣ ವಾಗಿ ನಿವಾರಣೆಮಾಡಿಕೊಂಡಳು. ಸ್ತನಾಂತರಗಳಲ್ಲಿ ಸಿಕ್ಕಿದ ಮನೋಹರ ನಾದ, ಪ್ರಿಯತಮನಾದ ಆನಂದ ಮೂರ್ತಿಯನ್ನು ಎರಡು ತೋಳು ಗಳಿಂದಲೂ ಗಾಢವಾಗಿ ಆಲಿಂಗಿಸಿಕೊಂಡು ಬಹಳ ದಿವಸಗಳಿಂದಿದ್ದ ಕಾಮದ ತಾಪವನ್ನು ಪರಿಹರಿಸಿಕೊಂಡಳು.

ಶ್ರೀಕೃಷ್ಣನು ಮೋಕ್ಷಕ್ಕೇ ಸ್ವಾಮಿಯು. ಬೇಡಿದವರಿಗೆ ಮೋಕ್ಷವನ್ನೀ ಯಲು ಸಮರ್ಥನಾದವನು. ಸುಲಭವಾಗಿ ಸಿಕ್ಕತಕ್ಕವನಲ್ಲ. ಅಂತಹವನನ್ನು ಕೇವಲ ಅಂಗರಾಗಸಮರ್ಪಣದಿಂದ ಆಕೆಯು ಪಡೆದುಕೊಂಡಳು. ಎಂತಹ

ಅಚ್ಚರಿ! ಒಲಿದು ಬಂದ ಸ್ವಾಮಿಯನ್ನು ದುರ್ಭಾಗ್ಯಳಾದ ಸೈರಂಧ್ರಿಯು ಕೇಳಿದ್ದೇನು?

ಆಹೋಷ್ಯತಾಮಿಹ ಪ್ರೇಷ್ಠ ದಿನಾನಿ ಕತಿಚಿನ್ಮಯಾ ।
ರಮಸ್ವ ನೋತ್ಸಹೇ ತ್ಯಕ್ತುಂ ಸಙ್ಗಂ ತೇಽಮ್ಬುರುಹೇಕ್ಷಣ ॥೯॥

"ಪ್ರಿಯತಮನೇ! ನೀನು ಇನ್ನೂ ಹೆಚ್ಚು ದಿವಸಗಳವರೆಗೆ ನಮ್ಮ ಮನೆಯಲ್ಲಿಯೇ ಇದ್ದು ನನ್ನೊಡನೆ ರಮಿಸುತ್ತಿರು. ಕಮಲಾಕ್ಷನೇ! ನಿನ್ನ ಸಂಗವನ್ನು ನಾನು ಬಿಟ್ಟಿರಲಾರೆನು."

ಸಮಸ್ತರಿಗೂ ಮಾನದನಾದ ಸರ್ವೇಶ್ವರನಾದ ಮುಕುಂದನು ಅವಳ ಪ್ರಾರ್ಥನೆಯನ್ನು ಮನ್ನಿಸುತ್ತಾ ಅವಳು ಅಪೇಕ್ಷಿಸಿದ ವರವನ್ನೇ ಕೊಟ್ಟು ಉದ್ಧವನೊಡನೆ ಸಮಸ್ತರಿಂದಲೂ ಪೂಜಿಸಲ್ಪಡುತ್ತಿದ್ದ ತನ್ನ ಅರಮನೆಗೆ ಹಿಂದಿರುಗಿದನು.

ದುರಾರಾಧ್ಯಂ ಸಮಾರಾಧ್ಯ ವಿಷ್ಣುಂ ಸರ್ವೇಶ್ವರೇಶ್ವರಮ್ ।
ಯೋ ವೃಣೀತೇ ಮನೋಗ್ರಾಹ್ಯಮಸತ್ತ್ವಾತ್ ಕುಮನೀಷ್ಯಸೌ ॥೧೧॥

ಬ್ರಹ್ಮೇಂದ್ರರುದ್ರಾದಿ ಸರ್ವೇಶ್ವರರಿಗೂ ಈಶ್ವರನೂ, ಸುಲಭವಾಗಿ ಆರಾಧಿಸಲ್ಪಡದವನೂ ಆದ ವಿಷ್ಣುವನ್ನು ಯಾವುದೋ ರೂಪದಿಂದ ಆರಾಧಿಸಿ, ಅವನ ಒಲುಮೆಯನ್ನು ಪಡೆದು, ವರವನ್ನು ಬೇಡುವಾಗ ವಿಷಯಸುಖವನ್ನು ಬೇಡುವವನು ನಿಶ್ಚಯವಾಗಿಯೂ ಬುದ್ಧಿಹೀನನೇ ಸರಿ. ವಿಷಯಸುಖವೆಂಬುದು ತುಚ್ಛವಾದುದು. ತುಚ್ಛವಾದುದನ್ನು ಭಗವಂತನಿಂದ ಬೇಡಬಾರದು.

ಪರೀಕ್ಷಿತಮಹಾರಾಜ! ಕೆಲವು ದಿವಸಗಳು ಕಳೆದನಂತರ ಪ್ರಭುವಾದ ಶ್ರೀಕೃಷ್ಣನು ಅಕ್ರೂರನ ಅಭಿಲಾಷೆಯನ್ನು ಪೂರ್ಣಗೊಳಿಸುವ ಸಲುವಾಗಿ ಮತ್ತು ಅವನಿಗೆ ಒಂದು ಕಾರ್ಯವನ್ನು ವಹಿಸಿಕೊಡುವ ಸಲುವಾಗಿ ಉದ್ಧವ-ಬಲರಾಮರೊಡನೆ ಅವನ ಮನೆಗೆ ಹೋದನು. ತನ್ನ ಬಂಧುಗಳಾದ, ಮನುಷ್ಯಶ್ರೇಷ್ಠರಾದ ಶ್ರೀಕೃಷ್ಣ-ಬಲರಾಮ-ಉದ್ಧವರು ತನ್ನ ಮನೆಗೆ ಬರುತ್ತಿರುವುದನ್ನು ಅಕ್ರೂರನು ಕಂಡು ಆನಂದಭರಿತನಾಗಿ ಮೇಲೆದ್ದು ಅವರನ್ನು ಸ್ವಾಗತಿಸಿ, ಗಾಢವಾಗಿ ಒಬ್ಬೊಬ್ಬರನ್ನೂ ಆಲಿಂಗಿಸಿಕೊಂಡು

ಅಭಿನಂದಿಸಿದನು. ಅಕ್ರೂರನು ರಾಮ-ಕೃಷ್ಣರಿಗೆ ನಮಸ್ಕರಿಸಿದನು. ಅಂತೆಯೇ ರಾಮ, ಕೃಷ್ಣ ಮತ್ತು ಉದ್ಧವರು ಅಕ್ರೂರನಿಗೂ ನಮಸ್ಕರಿಸಿದರು. ಅಕ್ರೂರನು ಸಮರ್ಪಿಸಿದ ಸುಖಾಸನಗಳಲ್ಲಿ ಮೂವರೂ ಕುಳಿತ ನಂತರ ಅಕ್ರೂರನು ವಿಧಿವತ್ತಾಗಿ ಮೂವರನ್ನೂ ಸತ್ಕರಿಸತೊಡಗಿದನು. ಭಗವಂತನಾದ ಶ್ರೀಕೃಷ್ಣನ ದಿವ್ಯವಾದ ಪಾದಗಳನ್ನು ತೊಳೆದು ಪಾದೋದಕವನ್ನು ತನ್ನ ತಲೆಯಲ್ಲಿ ಧರಿಸಿದನು. ಬಳಿಕ ದಿವ್ಯವಾದ ವಸ್ತ್ರಗಳನ್ನು ಭಗವಂತನಿಗೆ ತೊಡಿಸಿ, ದಿವ್ಯವಾದ ಮಾಲೆಯನ್ನೂ ಆಭರಣಗಳನ್ನೂ ಕೊರಳಿನಲ್ಲಿ ಹಾಕಿ, ದಿವ್ಯಗಂಧವನ್ನು ಅನುಲೇಪಿಸಿ, ಭಕ್ಷ್ಯ-ಭೋಜ್ಯಾದಿ ಗಳನ್ನೂ ಫಲಗಳನ್ನೂ ಸಮರ್ಪಿಸಿ ತಲೆಬಾಗಿ ಅವನ ಪಾದಾರವಿಂದಗಳಲ್ಲಿ ನಮಸ್ಕರಿಸಿದನು. ಬಳಿಕ ಅಕ್ರೂರನು ಭಗವಂತನ ಚರಣಕಮಲಗಳನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಒತ್ತುತ್ತಾ ವಿನೀತನಾಗಿ ರಾಮ-ಕೃಷ್ಣರಿಗೆ ಹೇಳಿದನು :

ದಿಷ್ಟ್ಯಾ ಪಾಪೋ ಹತಃ ಕಂಸಃ ಸಾನುಗೋ ವಾಮಿದಂ ಕುಲಮ್ ।
ಭವದ್ಭ್ಯಾಮುದ್ಧೃತಂ ಕೃಚ್ಛ್ರಾದ್ದುರನ್ತಾಚ್ಚ ಸಮೇಧಿತಮ್ ॥೧೭॥

"ಪ್ರಭುಗಳೇ! ಅದೃಷ್ಟದಿಂದಾಗಿ ಪಾಪಿಯಾದ ಕಂಸನು ಅವನ ಅನುಯಾಯಿಗಳೊಡನೆ ಮರಣಹೊಂದಿದನು. ನೀವಿಬ್ಬರೂ ಸೇರಿ ಅವನನ್ನು ಸಂಹರಿಸಿ ಯದುವಂಶವನ್ನೇ ಮಹಾಸಂಕಟದಿಂದ ಪಾರುಮಾಡಿದುದು ಮಾತ್ರವಲ್ಲದೆ ವಂಶದ ಔನ್ನತ್ಯವನ್ನೂ ಸಮೃದ್ಧಿಯನ್ನೂ ಹೆಚ್ಚಿಸಿರುವಿರಿ.

ಯುವಾಂ ಪ್ರಧಾನಪುರುಷೌ ಜಗದ್ಧೇತೂ ಜಗನ್ಮಯೌ ।
ಭವದ್ಭ್ಯಾಂ ನ ವಿನಾ ಕಿಂಚಿತ್ ಪರಮಸ್ತಿ ನ ಚಾಪರಮ್ ॥೧೮॥

ನೀವಿಬ್ಬರೂ ಜಗತ್ತಿಗೆ ಕಾರಣಭೂತರೂ, ಜಗದ್ರೂಪರೂ ಮತ್ತು ಆದಿಪುರುಷರೂ ಆಗಿರುವಿರಿ. ನಿಮಗಿಂತ ಬೇರೆಯಾದ ಯಾವ ವಸ್ತುವೂ ಇಲ್ಲ. ಕಾರ್ಯವೂ ಇಲ್ಲ ; ಕಾರಣವೂ ಇಲ್ಲ.

ಆತ್ಮಸೃಷ್ಟಮಿದಂ ವಿಶ್ವಮನ್ವಾವಿಶ್ಯ ಸ್ವಶಕ್ತಿಭಿಃ ।
ಈಯತೇ ಬಹುಧಾ ಬ್ರಹ್ಮನ್ ಶ್ರುತಪ್ರತ್ಯಕ್ಷಗೋಚರಮ್ ॥೧೯॥

ಭಗವಂತ! ನೀನೇ ನಿನ್ನ ಶಕ್ತಿಯಿಂದ ಈ ವಿಶ್ವವನ್ನು ಸೃಷ್ಟಿಸಿರುವೆ.

ಕಾಲ-ಮಾಯೆ ಇವೇ ಮುಂತಾದ ಶಕ್ತಿಗಳೊಡನೆ ನೀನೇ ಸೃಷ್ಟಿಸಿರುವ ಜಗತ್ತಿನಲ್ಲಿ ಅನುಪ್ರವೇಶಮಾಡಿರುವೆ. ಕಂಡು-ಕೇಳಿದ ಎಲ್ಲ ವಸ್ತುಗಳಲ್ಲಿಯೂ ನೀನು ಬಹುಪ್ರಕಾರವಾಗಿ ಕಂಡುಬರುವೆ. ಪ್ರಪಂಚದಲ್ಲಿರುವ ಎಲ್ಲ ವಸ್ತುಗಳಲ್ಲಿಯೂ ನಿನ್ನ ಆವಿರ್ಭಾವವಿದೆ.

ಯಥಾ ಹಿ ಭೂತೇಷು ಚರಾಚರೇಷು
ಮಹ್ಯಾದಯೋ ಯೋನಿಷು ಭಾನ್ತಿ ನಾನಾ ।
ಏವಂ ಭವಾನ್ ಕೇವಲ ಆತ್ಮಯೋನಿ-
ಷ್ವಾತ್ಮಾತ್ಮತನ್ತ್ರೋ ಬಹುಧಾ ವಿಭಾತಿ ॥೨೦॥

ಪೃಥ್ವಿಯೇ ಮೊದಲಾದ ಪಂಚಭೂತಗಳು ಅವುಗಳಿಂದಲೇ ಉಂಟಾದ ಚರಾಚರಜಗತ್ತಿನಲ್ಲಿ ನಾನಾರೂಪವಾಗಿ ಹೇಗೆ ಸೇರಿಕೊಂಡಿವೆಯೋ ಅದೇ ರೀತಿಯಲ್ಲಿ ಸರ್ವತಂತ್ರಸ್ವತಂತ್ರನಾದ ನೀನು ಕೂಡ ಆತ್ಮ ನಿರ್ಮಿತವಾದ ಕಾರ್ಯರೂಪವಾದ ಈ ಬ್ರಹ್ಮಾಂಡದಲ್ಲಿ ಅಂತರಾತ್ಮನಾಗಿ ಬಹುರೂಪದಿಂದ ತೋರುತ್ತಿರುವೆ. ಇದೂ ಒಂದು ನಿನ್ನ ಲೀಲೆಯೇ ಆಗಿದೆ.

ಸೃಜಸ್ಯಥೋ ಲುಮ್ಪಸಿ ಪಾಸಿ ವಿಶ್ವಂ
ರಜಸ್ತಮಃ ಸತ್ತ್ವಗುಣೈಃ ಸ್ವಶಕ್ತಿಭಿಃ ।
ನ ಬಧ್ಯಸೇ ತದ್ಗುಣಕರ್ಮಭಿರ್ವಾ
ಜ್ಞಾನಾತ್ಮನಸ್ತೇ ಕ್ವ ಚ ಬನ್ಧಹೇತುಃ ॥೨೧॥

ಪ್ರಭುವೇ! ನೀನು ರಜೋಗುಣ-ಸತ್ತ್ವಗುಣ-ತಮೋಗುಣಗಳ ರೂಪವಾದ ನಿನ್ನ ಮಾಯಾಶಕ್ತಿಯಿಂದ ಕ್ರಮವಾಗಿ ಜಗತ್ತನ್ನು ಸೃಷ್ಟಿಸುವೆ, ಪಾಲಿಸುವೆ ಮತ್ತು ಸಂಹಾರಮಾಡುವೆ. ಆದರೆ ನೀನು ಈ ಗುಣ ಗಳಿಂದಾಗಲೀ, ಗುಣಗಳಿಂದಾಗುವ ಕರ್ಮಗಳಿಂದಾಗಲೀ ಬಂಧಿಸಲ್ಪಡು ವುದಿಲ್ಲ. ಶುದ್ಧಜ್ಞಾನಸ್ವರೂಪನಾಗಿರುವ ನಿನಗೆ ಬಂಧನದ ಕಾರಣವಾದರೂ ಎಲ್ಲಿಯದು?

ದೇಹಾದ್ಯುಪಾಧೇರನಿರೂಪಿತತ್ವಾ-
ದ್ಭವೋ ನ ಸಾಕ್ಷಾನ್ನಭಿದಾತ್ಮನಃ ಸ್ಯಾತ್ ।
ಅತೋ ನ ಬನ್ಧಸ್ತವ ನೈವ ಮೋಕ್ಷಃ
ಸ್ಯಾತಾಂ ನಿಕಾಮಸ್ತ್ವಯಿ ನೋಽವಿವೇಕಃ ॥೨೨॥

ಪ್ರಭುವೇ! ಸ್ವಯಂ ಆತ್ಮವಸ್ತುವಿಗೆ ಸ್ಥೂಲದೇಹ, ಸೂಕ್ಷ್ಮದೇಹ ಇವೇ ಮುಂತಾದ ಉಪಾಧಿಗಳು ಇಲ್ಲದ ಕಾರಣ ಅದಕ್ಕೆ ಹುಟ್ಟು-ಸಾವುಗಳೂ ಇಲ್ಲ. ಅದರಲ್ಲಿ ಯಾವುದೇ ವಿಧವಾದ ಭೇದಭಾವಗಳೂ ಇರುವುದಿಲ್ಲ. ಇದೇ ಕಾರಣದಿಂದ ನಿನಗೆ ಬಂಧನವಾಗಲೀ, ಮೋಕ್ಷವಾಗಲೀ ಇರುವುದಿಲ್ಲ. ನಿನ್ನ ತತ್ತ್ವವನ್ನರಿಯಲಾರದ ನಮ್ಮ ಅವಿವೇಕವೇ ಸತ್ಯಾತ್ಮನಾದ ನಿನ್ನಲ್ಲಿ ಬಂಧ-ಮೋಕ್ಷಗಳನ್ನು ಆರೋಪಿಸುವುದೇ ಹೊರತು ವಾಸ್ತವವಾಗಿ ನಿನಗೆ ಬಂಧವೂ ಇಲ್ಲ ; ಮೋಕ್ಷವೂ ಇಲ್ಲ.

ತ್ವಯೋದಿತೋಽಯಂ ಜಗತೋ ಹಿತಾಯ
ಯದಾ ಯದಾ ವೇದಪಥಃ ಪುರಾಣಃ ।
ಬಾಧ್ಯೇತ ಪಾಖಣ್ಡಪಥೈರಸದ್ಭಿ-
ಸ್ತದಾ ಭವಾನ್ ಸತ್ತ್ವಗುಣಂ ಬಿಭರ್ತಿ ॥೨೩॥

ಮುಕುಂದನೇ! ನೀನು ಜಗತ್ತಿನ ಕಲ್ಯಾಣಕ್ಕಾಗಿಯೇ ಸನಾತನವಾದ ವೇದಮಾರ್ಗವನ್ನು ಪ್ರಕಟಿಸಿರುವೆ. ಪಾಖಂಡಮತಾವಲಂಬಿಗಳಾದ ದುಷ್ಟರಿಂದ ಪ್ರಪಂಚವು ಯಾವಾಗ ಬಾಧಿಸಲ್ಪಡುತ್ತದೆಯೋ ಆಗ ನೀನು ಶುದ್ಧಸತ್ತ್ವಮಯವಾದ ಶರೀರದೊಡನೆ ಅವತರಿಸುವೆ.*

ಸ ತ್ವಂ ಪ್ರಭೋಽದ್ಯ ವಸುದೇವಗೃಹೇಽವತೀರ್ಣಃ
ಸ್ವಾಂಶೇನ ಭಾರಮಪನೇತುಮಿಹಾಸಿ ಭೂಮೇಃ ।
ಅಕ್ಷೌಹಿಣೀಶತವಧೇನ ಸುರೇತರಾಂಶ-
ರಾಜ್ಞಾಮಮುಷ್ಯ ಚ ಕುಲಸ್ಯ ಯಶೋ ವಿತನ್ವನ್ ॥೨೪॥

ಸ್ವಾಮಿಯೇ! ಈ ಸಮಯದಲ್ಲಿ ನೀನು ನಿನ್ನ ಅಂಶಸಂಭೂತನಾದ ಬಲರಾಮನೊಡನೆ ಭೂಭಾರವನ್ನು ಕಳೆಯುವ ಸಲುವಾಗಿ ವಸುದೇವನ

---

* ಶ್ರೀಕೃಷ್ಣನು ಗೀತೆಯಲ್ಲಿ :

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥

ಅಧ್ಯಾಯ ೪-ಶ್ಲೋಕ ೭

ಯಾವಾಗ ಧರ್ಮದ ಗ್ಲಾನಿಯುಂಟಾಗುವುದೋ ಅಧರ್ಮದ ಅಭ್ಯುದಯವಾಗುವುದೋ ಆಗ ನಾನು ಅವತರಿಸುತ್ತೇನೆ.

ಮನೆಯಲ್ಲಿ ಅವತರಿಸಿರುವೆ. ರಾಕ್ಷಸಾಂಶಸಂಭೂತರಾದ ರಾಜರ ನೂರಾರು ಅಕ್ಷೌಹಿಣೀಸೈನಿಕರನ್ನು ಸಂಹರಿಸಿ ಭೂಭಾರವನ್ನು ಕಳೆಯುವೆ ಮತ್ತು ನಿನ್ನ ವಂಶದ ಕೀರ್ತಿಯನ್ನೂ ವಿಸ್ತರಿಸುವೆ.

ಅದ್ಯೇಶ ನೋ ವಸತಯಃ ಖಲು ಭೂರಿಭಾಗಾ
ಯಃ ಸರ್ವದೇವಪಿತೃಭೂತನೃದೇವಮೂರ್ತಿಃ ।
ಯತ್ಪಾದಶೌಚಸಲಿಲಂ ತ್ರಿಜಗತ್ಪುನಾತಿ
ಸ ತ್ವಂ ಜಗದ್ಗುರುರಧೋಕ್ಷಜ ಯಾಃ ಪ್ರವಿಷ್ಟಃ ॥೨೫॥

ಇಂದ್ರಿಯಾತೀತನಾದ ಪರಮಾತ್ಮನೇ! ಸಮಸ್ತದೇವತೆಗಳೂ, ಪಿತೃಗಳೂ, ಭೂತಗಳೂ, ರಾಜರೂ ನಿನ್ನ ಸ್ವರೂಪರೇ ಆಗಿದ್ದಾರೆ. ನಿನ್ನ ದಿವ್ಯ ಚರಣಾರವಿಂದಗಳನ್ನು ತೊಳೆದು ಮುಂದೆ ಪ್ರವಹಿಸಿದ ಗಂಗಾದೇವಿಯು ಮೂರು ಲೋಕಗಳನ್ನೂ ಪವಿತ್ರಗೊಳಿಸುತ್ತಿದ್ದಾಳೆ. ಸಮಸ್ತಜಗತ್ತಿಗೂ ಸದ್ಗುರುವಾಗಿರುವ ನೀನು ಅದೃಷ್ಟವಶದಿಂದ ನಮ್ಮ ಮನೆಗೆ ಆಗಮಿಸಿರುವೆ. ನಿಶ್ಚಯವಾಗಿಯೂ ಇಂದು ನಮ್ಮ ಮನೆಗಳು ಮಹತ್ತರವಾದ ಸ್ಥಾನವನ್ನು ಪಡೆದುಕೊಂಡುವು.

ಕಃ ಪಣ್ಡಿತಸ್ತ್ವದಪರಂ ಶರಣಂ ಸಮೀಯಾ-
ದ್ಭಕ್ತಪ್ರಿಯಾದೃತಗಿರಃ ಸುಹೃದಃ ಕೃತಜ್ಞಾತ್ ।
ಸರ್ವಾನ್ದದಾತಿ ಸುಹೃದೋ ಭಜತೋಽಭಿಕಾಮಾ-
ನಾತ್ಮಾನಮಪ್ಯುಪಚಯಾಪಚಯೌ ನ ಯಸ್ಯ ॥೨೬॥

ಭಕ್ತರಿಗೆ ಪ್ರಿಯನಾದ, ಭಕ್ತರನ್ನು ಬಹಳವಾಗಿ ಪ್ರೀತಿಸುವ, ಸತ್ಯವಾದಿಯಾದ, ಸುಹೃದನಾದ, ಮಾಡಿದ ಅತ್ಯಲ್ಪವಾದ ಉಪಕಾರವನ್ನೂ ಸ್ಮರಿಸುವ, ತನ್ನನ್ನು ಭಜಿಸುವ ಮಿತ್ರರಿಗೆ ಸಮಸ್ತವಾದ ಮನೋರಥಗಳನ್ನೂ ಈಡೇರಿಸಿಕೊಡುವ, ಅನನ್ಯಶರಣರಾಗಿ ಪ್ರಾರ್ಥಿಸಿಕೊಳ್ಳುವ ಏಕಾಂತ ಭಕ್ತರಿಗೆ ತನ್ನನ್ನೇ ಕೊಟ್ಟುಕೊಳ್ಳುವ, ವೃದ್ಧಿ-ಕ್ಷಯರಹಿತನಾದ ಪರಮ ಪುರುಷಪರಮಾತ್ಮನಾದ ನಿನ್ನನ್ನು ಬಿಟ್ಟು ಪಂಡಿತನಾದ ಯಾವನು ತಾನೇ ಇತರರನ್ನು ಆಶ್ರಯಿಸಲು ಹೋಗುವನು?

ದಿಷ್ಟ್ಯಾ ಜನಾರ್ದನ ಭವಾನಿಹ ನಃ ಪ್ರತೀತೋ
ಯೋಗೇಶ್ವರೈರಪಿ ದುರಾಪಗತಿಃ ಸುರೇಶೈಃ ।
ಛಿನ್ಧ್ಯಾಶು ನಃ ಸುತಕಲತ್ರಧನಾಪ್ತಗೇಹ-
ದೇಹಾದಿಮೋಹರಶನಾಂ ಭವದೀಯಮಾಯಾಮ್ ॥

ಜನಾರ್ದನನೇ! ಯೋಗೇಶ್ವರರಿಂದಲೂ, ಸುರೇಶ್ವರರಿಂದಲೂ ತಿಳಿಯಲು ಅಶಕ್ಯವಾದ ಮಹಿಮೆಯುಳ್ಳ ನೀನು ಅದೃಷ್ಟವಶದಿಂದ ನಮಗೆ ಪ್ರತ್ಯಕ್ಷನಾಗಿ ನಮ್ಮ ಮನೆಯಲ್ಲಿಯೇ ದರ್ಶನವನ್ನಿತ್ತಿರುವೆ. ಸ್ವಾಮಿಯೇ! ನಾನು ಪತ್ನೀ-ಪುತ್ರ-ಸ್ವಜನ-ಐಶ್ವರ್ಯ-ಮನೆ-ಮಠಗಳು ಇವೇ ಮುಂತಾದ ಮೋಹಕವಾದ ಪಾಶಗಳಿಂದ ಬಂಧಿಸಲ್ಪಟ್ಟಿದ್ದೇನೆ. ನಿನ್ನ ಅನುಗ್ರಹರೂಪ ವಾಗಿ, ನಿನ್ನದೇ ಆಗಿರುವ ಈ ಮಾಯಾಜಾಲವನ್ನು ಕತ್ತರಿಸಿ ನನ್ನನ್ನು ಉದ್ಧರಿಸು.”

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಹೀಗೆ ಅಕ್ರೂರನು ತನ್ನ ಮನೆಗೆ ಆಗಮಿಸಿದ ಕೇಶವನನ್ನು ಯಥಾಯೋಗ್ಯವಾಗಿ ಸತ್ಕರಿಸಿ ಸ್ತೋತ್ರಮಾಡಿದನು. ಬಳಿಕ ಭಗವಂತನಾದ ಶ್ರೀಕೃಷ್ಣನು ತನ್ನ ಮೃದು-ಮಧುರವಾದ ವಾಣಿಯಿಂದ ಅಕ್ರೂರನನ್ನು ವಿಮೋಹಗೊಳಿಸುತ್ತಾ ಹೇಳಿದನು :

“ಅಕ್ರೂರಮಹಾಶಯ! ನೀನು ನಮ್ಮ ಗುರುವಾಗಿರುವೆ, ಚಿಕ್ಕಪ್ಪ ನಾಗಿರುವೆ. ಪ್ರಶಂಸನೀಯನಾದ ಹಿತೈಷಿಯೂ ಬಂಧುವೂ ಆಗಿರುವೆ. ನಾವು ನಿಮ್ಮ ಪ್ರಜಾವರ್ಗಕ್ಕೆ ಸೇರಿದವರಾಗಿದ್ದೇವೆ. ಆದುದರಿಂದಲೇ ನಿಮ್ಮಿಂದ ನಾವು ರಕ್ಷಿಸಲ್ಪಡತಕ್ಕವರೂ, ಪೋಷಿಸಲ್ಪಡತಕ್ಕವರೂ ಮತ್ತು ನಿಮ್ಮ ಕೃಪೆಗೆ ಅರ್ಹರಾದವರೂ ಆಗಿದ್ದೇವೆ. ಶ್ರೇಯಸ್ಕಾಮರಾದ ಮನುಷ್ಯರು ನಿಮ್ಮಂತಹ ಪೂಜ್ಯರಾದ, ಮಹಾಭಾಗ್ಯಶಾಲಿಗಳಾದ ಸಂತರ ಸೇವೆಯನ್ನು ಸದಾ ಮಾಡುತ್ತಿರಬೇಕು. ಪರಾರ್ಥವನ್ನೇ ಪ್ರಯೋಜನವನ್ನಾಗಿ ಹೊಂದಿರುವ ಸತ್ಪುರುಷರು ಸ್ವಾರ್ಥಿಗಳಾದ ದೇವತೆಗಳಿಗಿಂತಲೂ ಶ್ರೇಷ್ಠರು.

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ।
ತೇ ಪುನನ್ತ್ಯುರುಕಾಲೇನ ದರ್ಶನಾದೇವ ಸಾಧವಃ ॥೩೧॥

ನೀರುತುಂಬಿರುವ ಕೆರೆ-ಕಟ್ಟೆ-ಬಾವಿ-ನದಿ-ಸರೋವರಾದಿ ಜಲಾಶಯಗಳೇ ಆಗಲೀ, ಸರೋವರ-ನದಿಗಳಾಗಲೀ ತೀರ್ಥಗಳಲ್ಲ. ಮಣ್ಣಿನಿಂದ ಮಾಡಿದ ಅಥವಾ ಕಲ್ಲಿನಿಂದ ಕೆತ್ತಿದ ಮೂರ್ತಿಗಳೇ ದೇವತೆಗಳೂ ಆಗಿಬಿಡುವುದಿಲ್ಲ. ಒಂದು ವೇಳೆ ನೀರುತುಂಬಿರುವ ಕೊಳವನ್ನು ತೀರ್ಥವೆಂದು ಭಾವಿಸಿದರೂ ಮೃಣ್ಮಯವಾದ ಮತ್ತು ಶಿಲಾಮಯವಾದ ವಿಗ್ರಹವನ್ನು ದೇವತೆಯೆಂದು ಭಾವಿಸಿದರೂ ಅವುಗಳು ಫಲಕೊಡುವುದು ಹಲವಾರು ವರ್ಷಗಳು ಶ್ರದ್ಧೆಯಿಂದ ಸೇವೆಮಾಡಿದನಂತರವೇ. ಆದರೆ ಸತ್ಪುರುಷರಾದರೋ ದರ್ಶನಮಾತ್ರದಿಂದಲೇ ಒಡನೆಯೇ ಫಲವನ್ನು ಅನುಗ್ರಹಿಸುತ್ತಾರೆ. ದರ್ಶನಮಾತ್ರದಿಂದಲೇ ಮನುಷ್ಯರನ್ನು ಪಾವನಗೊಳಿಸುತ್ತಾರೆ.

ಚಿಕ್ಕಪ್ಪ! ಸುಹೃದರಲ್ಲಿ ಶ್ರೇಷ್ಠನಾಗಿರುವ ನೀನು ನಮ್ಮ ಸುಹೃದನೂ ಆಗಿರುವೆ. ಆದುದರಿಂದ ನೀನು ಪಾಂಡವರಿಗೆ ಹಿತವನ್ನುಂಟುಮಾಡುವ ಸಲುವಾಗಿ ಮತ್ತು ಅವರ ಕುಶಲವನ್ನು ತಿಳಿದುಬರುವ ಸಲುವಾಗಿ ಹಸ್ತಿನಾಪಟ್ಟಣಕ್ಕೆ ಹೋಗಿಬರಬೇಕು. ಪಾಂಡುರಾಜನು ಮರಣಹೊಂದಲಾಗಿ ಕುಂತಿಯೊಡನೆ ಯುಧಿಷ್ಠಿರನೇ ಮೊದಲಾದ ಅವನ ಮಕ್ಕಳು ಬಹಳ ದುಃಖಕ್ಕೀಡಾದರೆಂದೂ ಈ ವಾರ್ತೆಯನ್ನು ಕೇಳಿದ ಧೃತರಾಷ್ಟ್ರಮಹಾರಾಜನು ಅವರೆಲ್ಲರನ್ನೂ ಹಸ್ತಿನಾಪಟ್ಟಣಕ್ಕೆ ಕರೆಸಿಕೊಂಡನೆಂದೂ ಮತ್ತು ಈಗ ಅವರೆಲ್ಲರೂ ಅಲ್ಲಿಯೇ ವಾಸಮಾಡುತ್ತಿರುವರೆಂದೂ ನಾವು ಕೇಳಿದ್ದೇವೆ. ದುರ್ಬಲವಾದ ಬುದ್ಧಿಯುಳ್ಳ, ದುಷ್ಟಪುತ್ರನಾದ ದುರ್ಯೋಧನನಿಗೆ ಅಡಿಯಾಳಾಗಿರುವ, ಅಂಧನಾದ ಧೃತರಾಷ್ಟ್ರನು ತನ್ನ ಮಕ್ಕಳನ್ನೂ ತನ್ನ ತಮ್ಮನ ಮಕ್ಕಳನ್ನೂ ಸಮವಾಗಿ ನೋಡಿಕೊಳ್ಳುತ್ತಿಲ್ಲ. ತನ್ನ ಮಕ್ಕಳ ವಿಷಯದಲ್ಲಿ ಪಕ್ಷಪಾತತೋರಿಸುತ್ತಿದ್ದಾನೆ. ಆದುದರಿಂದ ನೀನು ಈಗಲೇ ಹಸ್ತಿನಾಪಟ್ಟಣಕ್ಕೆ ಹೋಗಿ ಪಾಂಡವರ ಸ್ಥಿತಿಯು ಚೆನ್ನಾಗಿರುವುದೇ ಅಥವಾ ದುರ್ಭರವಾಗಿರುವುದೇ ಎಂಬುದನ್ನು ತಿಳಿದುಕೊಂಡು ಬಾ. ನೀನು ಈ ವಿಷಯವನ್ನು ತಿಳಿದುಕೊಂಡು ಬಂದನಂತರ ನಮ್ಮ ಸುಹೃದರಾದ ಪಾಂಡವರಿಗೆ ಸುಖವಾಗುವ ರೀತಿಯಲ್ಲಿ ವ್ಯವಸ್ಥೆಮಾಡೋಣ."

ಪರೀಕ್ಷಿತಮಹಾರಾಜ! ಸರ್ವಶಕ್ತಿಮಂತನಾದ ಭಗವಾನ್ ಶ್ರೀಕೃಷ್ಣನು

ಅಕ್ರೂರನಿಗೆ ಹೀಗೆ ನಿರ್ದೇಶನವನ್ನಿತ್ತು ಬಲರಾಮ ಮತ್ತು ಉದ್ಧವರೊಡನೆ ತನ್ನ ಭವನಕ್ಕೆ ತೆರಳಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೪೮ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೪೯ನೆಯ ಅಧ್ಯಾಯ

ಹಸ್ತಿನಾಪುರಕ್ಕೆ ಅಕ್ರೂರನ ಪ್ರಯಾಣ

ಶ್ರೀಶುಕಮುನಿಗಳು ಹೇಳುತ್ತಾರೆ :

ಸ ಗತ್ವಾ ಹಾಸ್ತಿನಪುರಂ ಪೌರವೇನ್ದ್ರಯಶೋऽಙ್ಕಿತಮ್ ।
ದದರ್ಶ ತತ್ರಾಮ್ಬಿಕೇಯಂ ಸಭೀಷ್ಮಂ ವಿದುರಂ ಪೃಥಾಮ್ ॥೧॥

ಪರೀಕ್ಷಿತಮಹಾರಾಜ! ಭಗವಂತನಾದ ಶ್ರೀಕೃಷ್ಣನ ಆಜ್ಞಾನುಸಾರ ವಾಗಿ ಅಕ್ರೂರನು ಪುರುವಂಶೀಯರ ಯಶಸ್ಸಿನಿಂದ ಅಂಕಿತವಾದ ಹಸ್ತಿನಾ ಪಟ್ಟಣಕ್ಕೆ ಪ್ರಯಾಣಮಾಡಿ ಅಲ್ಲಿ ರಾಜನಾದ ಧೃತರಾಷ್ಟ್ರನನ್ನೂ, ಭೀಷ್ಮ-ವಿದುರರನ್ನೂ, ಕುಂತಿಯನ್ನೂ, ಬಾಹ್ಲೀಕನನ್ನೂ, ಅವನ ಮಗನಾದ ಸೋಮದತ್ತನನ್ನೂ, ದ್ರೋಣಾಚಾರ್ಯರನ್ನೂ, ಕೃಪಾಚಾರ್ಯರನ್ನೂ, ಕರ್ಣ-ದುರ್ಯೋಧನರನ್ನೂ, ದ್ರೋಣರ ಮಗನಾದ ಅಶ್ವತ್ಥಾಮನನ್ನೂ, ಯುಧಿಷ್ಠಿರನೇ ಮೊದಲಾದ ಐವರು ಪಾಂಡವರನ್ನೂ, ಇತರ ಇಷ್ಟ-ಮಿತ್ರ ರನ್ನೂ ಕಂಡನು. ಗಾಂದಿನೀಸುತನಾದ ಅಕ್ರೂರನನ್ನು ನೋಡಿದೊಡನೆಯೇ ಹಸ್ತಿನಾಪುರವಾಸಿಗಳಾದ ಧೃತರಾಷ್ಟ್ರನೇ ಮೊದಲಾದವರು, ಉಗ್ರಸೇನನೇ ಮೊದಲಾದ ಮಥುರಾಪಟ್ಟಣನಿವಾಸಿಗಳ ಯೋಗ-ಕ್ಷೇಮಗಳನ್ನು ವಿಚಾರಿಸಿ ದರು. ಅಂತೆಯೇ ಅಕ್ರೂರನು ಕೂಡ ಹಸ್ತಿನಾಪುರವಾಸಿಗಳ ಯೋಗ-ಕ್ಷೇಮಗಳನ್ನು ವಿಚಾರಿಸಿದನು. ದುಷ್ಪುತ್ರರನ್ನು ಹೊಂದಿದ್ದ ದುರ್ಬಲನಾಗಿದ್ದ, ಶಕುನಿಯೇ ಮೊದಲಾದ ನೀಚರ ಇಚ್ಛೆಯಂತೆಯೇ ವ್ಯವಹರಿಸುತ್ತಿದ್ದ ಧೃತರಾಷ್ಟ್ರನು ಪಾಂಡವರ ವಿಷಯದಲ್ಲಿ ಹೇಗೆ ವ್ಯವಹರಿಸು ತ್ತಿರುವನೆಂಬುದನ್ನು ತಿಳಿದುಕೊಳ್ಳಲು ಅಕ್ರೂರನು ಹಸ್ತಿನಾಪುರದಲ್ಲಿಯೇ ಹಲವಾರು ಮಾಸಗಳು ವಾಸವಾಗಿದ್ದನು. ಪಾಂಡವರಲ್ಲಿದ್ದ ಪ್ರತಾಪವನ್ನೂ

ಅಸ್ತ್ರ-ಶಸ್ತ್ರನೈಪುಣ್ಯವನ್ನೂ, ಬಲವನ್ನೂ, ವೀರ್ಯವನ್ನೂ, ವಿನಯವೇ ಮೊದಲಾದ ಸದ್ಗುಣಗಳನ್ನೂ ಮತ್ತು ಪ್ರಜೆಗಳಿಗೆ ಅವರ ಮೇಲಿರುವ ಪ್ರೀತಿಯನ್ನೂ ನೋಡಿ ಸಹಿಸಲಾಗದೆ ಅಸೂಯೆಯಿಂದ ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನನೇ ಮೊದಲಾದವರು ಪಾಂಡವರನ್ನು ವಿನಾಶಗೊಳಿಸಲು ಎಸಗಿದ-ಭೀಮಸೇನನಿಗೆ ವಿಷವಿಟ್ಟಿದ್ದು, ಸರ್ಪಗಳಿಂದ ಕಚ್ಚಿಸಿದ್ದು, ಕೈ-ಕಾಲುಗಳನ್ನು ಕಟ್ಟಿ ಗಂಗೆಯಲ್ಲಿ ಮುಳುಗಿಸಿದ್ದು–ಇವೇ ಮೊದಲಾದ ಹಲವಾರು ಬಗೆಯ ಅನ್ಯಾಯಗಳನ್ನು ಕುಂತೀ ಮತ್ತು ವಿದುರರು ಅಕ್ರೂರನಿಗೆ ವಿವರಿಸಿ ಹೇಳಿದರು. ಹೀಗೆಯೇ ಒಮ್ಮೆ ಅಕ್ರೂರನು ಕುಂತಿಯ ಮನೆಗೆ ಹೋದಾಗ ಸಹೋದರನಾದ ಅಕ್ರೂರನನ್ನು ಹತ್ತಿರದಲ್ಲಿ ಕುಳ್ಳಿರಿಸಿಕೊಂಡು ತವರುಮನೆಯನ್ನು ನೆನೆಸಿಕೊಳ್ಳುತ್ತಾ ಕಂಬನಿದುಂಬಿದ ಕಣ್ಣುಗಳಿಂದ ಕುಂತಿಯು ಅಕ್ರೂರನಿಗೆ ಹೇಳಿದಳು :

"ಪ್ರಿಯ ಸಹೋದರನೇ! ನನ್ನ ತಾಯಿ-ತಂದೆಗಳು, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಅಣ್ಣ-ತಮ್ಮಂದಿರ ಮಕ್ಕಳು, ನನ್ನ ಗೆಳತಿಯರು, ಸೊಸೆಯರು ಇನ್ನೂ ಇತರ ಬಂಧುಗಳು ನಮ್ಮನ್ನು ಯಾವಾಗಲಾದರೂ ಸ್ಮರಿಸಿಕೊಳ್ಳುವರೇ? ನಮ್ಮ ಅಣ್ಣನ ಮಗನಾದ, ಶರಣಾಗತ ರಕ್ಷಕನಾದ, ಭಕ್ತವತ್ಸಲನಾದ ಕೃಷ್ಣನೂ ಕಮಲನಯನನಾದ ಬಲರಾಮನೂ ತಮ್ಮ ಸೋದರತ್ತೆಯನ್ನೂ, ಸೋದರತ್ತೆಯ ಮಕ್ಕಳನ್ನೂ ಯಾವಾಗಲಾದರೂ ಸ್ಮರಿಸಿಕೊಳ್ಳುವರೇ? ತೋಳಗಳ ಮಧ್ಯದಲ್ಲಿರುವ ಜಿಂಕೆಯಂತೆ ನಾನು ಶತ್ರುಗಳ ಮಧ್ಯದಲ್ಲಿ ಬಹಳ ಸಂಕಟದಿಂದ ಕಾಲ ಕಳೆಯುತ್ತಿದ್ದೇನೆ. ನಮ್ಮ ಅಣ್ಣನ ಮಗನಾದ ಭಕ್ತವತ್ಸಲನಾದ ದಯಾಮಯನಾದ ಶ್ರೀಕೃಷ್ಣನು ಯಾವಾಗಲಾದರೂ ಇತ್ತಕಡೆ ಬಂದು ತಂದೆಯನ್ನು ಕಳೆದುಕೊಂಡಿರುವ ನಮ್ಮ ಮಕ್ಕಳನ್ನು ಸಮಾಧಾನದ ಮಾತುಗಳಿಂದ ಸಂತೈಸುವನೇ?"

ಗದ್ಗದಸ್ವರದಿಂದ ಕುಂತಿಯು ಶ್ರೀಕೃಷ್ಣನನ್ನೇ ಪ್ರಾರ್ಥಿಸುತ್ತಾಳೆ :

ಕೃಷ್ಣ ಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಭಾವನ ।
ಪ್ರಪನ್ನಾಂ ಪಾಹಿ ಗೋವಿನ್ದ ಶಿಶುಭಿಶ್ಚಾವಸೀದತೀಮ್ ॥೧೧॥

"ಕೃಷ್ಣ! ಕೃಷ್ಣ! ಮಹಾಯೋಗಿಯೇ! ವಿಶ್ವಕ್ಕೇ ಆತ್ಮವಾಗಿ ಇರುವವನೇ! ಜಗದ್ರಕ್ಷಕನೇ! ಮಕ್ಕಳೊಡನೆ ಅಡಿಗಡಿಗೂ ಕಷ್ಟಗಳನ್ನನುಭವಿಸುತ್ತಿರುವ ಶರಣಾಗತಳಾದ ನನ್ನನ್ನು ರಕ್ಷಿಸು. ನನ್ನ ಮಕ್ಕಳನ್ನು ಕಾಪಾಡು.

ನಾನ್ಯತ್ತವ ಪದಾಮ್ಭೋಜಾತ್ ಪಶ್ಯಾಮಿ ಶರಣಂ ನೃಣಾಮ್ ।
ಬಿಭ್ಯತಾಂ ಮೃತ್ಯುಸಂಸಾರಾದೀಶ್ವರಸ್ಯಾಪವರ್ಗಿಕಾತ್ ॥೧೨॥

ಮೃತ್ಯುರೂಪವಾದ ಸಂಸಾರದ ದೆಸೆಯಿಂದ ಭಯಪಡುತ್ತಿರುವ ಮನುಷ್ಯರಿಗೆ, ಈಶ್ವರನಾದ ನಿನ್ನ ಮೋಕ್ಷಪ್ರದವಾದ ಚರಣಕಮಲಗಳಿಗಿಂತಲೂ ಬೇರೆಯದಾದ ಆಶ್ರಯವನ್ನು ನಾನು ಕಾಣೆನಪ್ಪಾ.

ನಮಃ ಕೃಷ್ಣಾಯ ಶುದ್ಧಾಯ ಬ್ರಹ್ಮಣೇ ಪರಮಾತ್ಮನೇ ।
ಯೋಗೇಶ್ವರಾಯ ಯೋಗಾಯ ತ್ವಾಮಹಂ ಶರಣಂ ಗತಾ ॥೧೩॥

ಪರಬ್ರಹ್ಮಪರಮಾತ್ಮಸ್ವರೂಪನಾದ ಶುದ್ಧಸತ್ತ್ವನಾದ ಶ್ರೀಕೃಷ್ಣ ಪರಮಾತ್ಮನಿಗೆ ನಮಸ್ಕರಿಸುತ್ತೇನೆ. ಯೋಗೇಶ್ವರನಾದ, ಯೋಗಸ್ವರೂಪನಾದ ನಿನಗೆ ನಾನು ಶರಣಾಗತಳಾಗಿದ್ದೇನೆ. ನನ್ನನ್ನು ಕಾಪಾಡು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ನಿನ್ನ ಮುತ್ತಜ್ಜಿಯಾದ ಕುಂತೀದೇವಿಯು ಮಥುರಾಪಟ್ಟಣದಲ್ಲಿದ್ದ ತನ್ನ ಬಂಧುಗಳನ್ನೂ ಮತ್ತು ಜಗದೀಶ್ವರನಾದ ಶ್ರೀಕೃಷ್ಣನನ್ನೂ ಸ್ಮರಿಸಿಕೊಂಡು ಅಕ್ರೂರನ ಮುಂದೆ ಬಿಕ್ಕಿ ಬಿಕ್ಕಿ ಅತ್ತಳು. ಆಗ ಸುಖ-ದುಃಖಗಳೆರಡರಲ್ಲೂ ಸಮಬುದ್ಧಿಯುಳ್ಳ ಮಹಾಪ್ರಾಜ್ಞರಾದ ಮಹಾ ಯಶೋವಂತರಾದ ವಿದುರಾಕ್ರೂರರು ಕುಂತಿಗೆ–ಅವಳ ಎಲ್ಲ ಮಕ್ಕಳೂ ದೇವಾಂಶಸಂಭೂತರಾಗಿರುವುದು ; ಅವರ ವೀರ್ಯಪರಾಕ್ರಮಗಳು ಎಲ್ಲವನ್ನೂ ವಿವರಿಸಿ ಹೇಳಿ, ರಾಕ್ಷಸಾಂಶಸಂಭೂತರಾಗಿರುವ ದುರ್ಯೋಧನಾದಿಗಳ ಸಂಹಾರಕ್ಕಾಗಿಯೇ ದೇವಾಂಶಸಂಭೂತರಾದ ಪಾಂಡವರ ಅವತಾರವೂ ಆಗಿರುವುದೆಂಬುದನ್ನು ಮನಗಾಣಿಸಿಕೊಟ್ಟು ಅವಳನ್ನು ಸಮಾಧಾನಗೊಳಿಸಿದರು. ಶ್ರೀಕೃಷ್ಣನ ನಿರ್ದೇಶನದಂತೆ ಅಕ್ರೂರನು ಎಲ್ಲ ವಾರ್ತೆಗಳನ್ನೂ ಸಂಗ್ರಹಿಸಿದನು. ಶತ್ರುಗಳ ಮಧ್ಯದಲ್ಲಿ ಮಕ್ಕಳೊಡನೆ ಕುಂತಿಯು ಎಷ್ಟು ಕಷ್ಟಗಳನ್ನು ಅನುಭವಿಸುತ್ತಿದ್ದಾಳೆಂಬುದನ್ನೂ ತಿಳಿದುಕೊಂಡನು.

ಧೃತರಾಷ್ಟ್ರನು ತನ್ನ ಮಕ್ಕಳ ವಿಷಯದಲ್ಲಿ ಪಕ್ಷಪಾತತೋರುತ್ತಿದ್ದುದು ಸ್ಪಷ್ಟವಾಗಿ ಕಾಣುತ್ತಿದ್ದಿತು. ತನ್ನ ತಮ್ಮನ ಮಕ್ಕಳಲ್ಲಿ ತನ್ನ ಮಕ್ಕಳಂತೆ ಧೃತರಾಷ್ಟ್ರನು ವ್ಯವಹರಿಸುತ್ತಿರಲಿಲ್ಲ. ಮಥುರಾಪಟ್ಟಣಕ್ಕೆ ಹಿಂದಿರುಗಲಿದ್ದಾಗ ಅಕ್ರೂರನು ಧೃತರಾಷ್ಟ್ರನ ಬಳಿಗೆ ಹೋಗಿ, ಬಂಧುಗಳ ಮಧ್ಯದಲ್ಲಿ ಕುಳಿತಿದ್ದ ಧೃತರಾಷ್ಟ್ರನಿಗೆ ರಾಮ-ಕೃಷ್ಣಾದಿಗಳು ಕಳುಹಿಸಿದ್ದ ಸಂದೇಶವನ್ನು ಒಪ್ಪಿಸಿದನು :

ಭೋ ಭೋ ವೈಚಿತ್ರವೀರ್ಯ ತ್ವಂ ಕುರೂಣಾಂ ಕೀರ್ತಿವರ್ಧನ ।
ಭ್ರಾತರ್ಯುಪರತೇ ಪಾಣ್ಡಾವಧುನಾಸನಮಾಸ್ಥಿತಃ ॥೧೭॥

"ಕುರುವಂಶೀಯರ ಕೀರ್ತಿಯನ್ನು ಹೆಚ್ಚಿಸುವ ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನೇ! ನಿನ್ನ ತಮ್ಮನಾದ ಪಾಂಡುಮಹಾರಾಜನು ಅವಸಾನಹೊಂದಿದನಂತರ ಈಗತಾನೇ ನೀನು ರಾಜ್ಯಸಿಂಹಾಸನವನ್ನು ಏರಿರುವೆ.

ಧರ್ಮೇಣ ಪಾಲಯನ್ನುರ್ವೀಂ ಪ್ರಜಾಃ ಶೀಲೇನ ರಞ್ಜಯನ್ ।
ವರ್ತಮಾನಃ ಸಮಃ ಸ್ವೇಷು ಶ್ರೇಯಃ ಕೀರ್ತಿಮವಾಪ್ಸ್ಯಸಿ ॥೧೮॥

ಧರ್ಮದಿಂದ ರಾಜ್ಯಭಾರಮಾಡುತ್ತಾ, ಸದ್ವ್ಯವಹಾರದಿಂದ ಪ್ರಜೆಗಳನ್ನು ಸಂತೋಷಗೊಳಿಸುತ್ತಾ, ಸ್ವಜನರಲ್ಲಿ ಪಕ್ಷಪಾತವಿಲ್ಲದೆ ಸಮವಾಗಿ ವ್ಯವಹರಿಸುತ್ತಿದ್ದರೆ ಶ್ರೇಯಸ್ಸನ್ನೂ ಕೀರ್ತಿಯನ್ನೂ ಪಡೆಯುವೆ.

ಅನ್ಯಥಾ ತ್ವಾಚರನ್ ಲೋಕೇ ಗರ್ಹಿತೋ ಯಾಸ್ಯಸೇ ತಮಃ ।
ತಸ್ಮಾತ್ಸಮತ್ವೇ ವರ್ತಸ್ವ ಪಾಣ್ಡವೇಷ್ವಾತ್ಮಜೇಷು ಚ ॥೧೯॥

ಇದಕ್ಕೆ ವಿಪರೀತವಾಗಿ ವ್ಯವಹರಿಸಿ ಸ್ವಜನರಲ್ಲಿಯೇ ಪಕ್ಷಪಾತ ತೋರಿದೆಯಾದರೆ ಇಹದಲ್ಲಿ ನೀನು ನಿಂದ್ಯನಾಗುವೆ. ಅವಸಾನಾನಂತರದಲ್ಲಿ ತಮಸ್ಸಿನಿಂದ ಕೂಡಿದ ಘೋರನರಕಕ್ಕೂ ಬೀಳಬೇಕಾಗುವುದು. ಆದುದರಿಂದ ಪಾಂಡವರಲ್ಲಿಯೂ ಮತ್ತು ನಿನ್ನ ಮಕ್ಕಳಲ್ಲಿಯೂ ಸಮತ್ವದಿಂದ ವರ್ತಿಸು. ಪಕ್ಷಪಾತಮಾಡಬೇಡ.

ನೇಹ ಚಾತ್ಯನ್ತಸಂವಾಸಃ ಕರ್ಹಿಚಿತ್ ಕೇನಚಿತ್ಸಹ ।
ರಾಜನ್ ಸ್ವೇನಾಪಿ ದೇಹೇನ ಕಿಮು ಜಾಯಾತ್ಮಜಾದಿಭಿಃ ॥೨೦॥

ಮಹಾರಾಜ! ಯಾರೂ ಯಾವಾಗಲೂ ಯಾರೊಡನೆಯೂ ಹೆಚ್ಚು ಕಾಲ ಸೇರಿಕೊಂಡು ಇರುವುದಿಲ್ಲ. ತಾನೆಂದು ತನ್ನದೆಂದು ತಿಳಿದುಕೊಂಡಿರುವ ಶರೀರದಲ್ಲಿಯೇ ಹೆಚ್ಚುಕಾಲ ಇರಲಾಗುವುದಿಲ್ಲ. ಹೀಗಿರುವಾಗ ಪತ್ನೀ-ಪುತ್ರರ ವಿಷಯವಾಗಿ ಹೇಳುವುದೇನಿದೆ?

ಏಕಃ ಪ್ರಸೂಯತೇ ಜನ್ತುರೇಕ ಏವ ಪ್ರಲೀಯತೇ ।
ಏಕೋಽನುಭುಙ್ಕ್ತೇ ಸುಕೃತಮೇಕ ಏವ ಚ ದುಷ್ಕೃತಮ್ ॥೨೧॥

ಹುಟ್ಟುವಾಗ ಜೀವನು ಒಬ್ಬನೇ ಹುಟ್ಟುತ್ತಾನೆ. ಸಾಯುವಾಗಲೂ ಒಬ್ಬನೇ ಸಾಯುತ್ತಾನೆ. ತಾನು ಮಾಡಿದ ಪುಣ್ಯಫಲವನ್ನೂ ಒಬ್ಬನೇ ಅನುಭವಿಸುತ್ತಾನೆ. ಅಂತೆಯೇ ಪಾಪದ ಫಲವನ್ನೂ ಒಬ್ಬನೇ ಅನುಭವಿಸುತ್ತಾನೆ.

ಅಧರ್ಮೋಪಚಿತಂ ವಿತ್ತಂ ಹರನ್ತ್ಯನ್ಯೇಽಲ್ಪಮೇಧಸಃ ।
ಸಂಭೋಜನೀಯಾಪದೇಶೈರ್ಜಲಾನೀವ ಜಲೌಕಸಃ ॥೨೨॥

ಸತೀ-ಸುತ-ಬಂಧುಗಳು 'ನಾವು ನಿನ್ನವರು, ನಮ್ಮ ಭರಣ-ಪೋಷಣೆಗಳನ್ನು ನೀನು ಮಾಡಲೇಬೇಕು'–ಎಂದು ಹೇಳಿಕೊಂಡು ಅಲ್ಪಬುದ್ಧಿಯವನು ಅಧರ್ಮದಿಂದ ಸಂಪಾದಿಸಿದ ಹಣವನ್ನು–ಜಲಚರಪ್ರಾಣಿಗಳು ನೀರನ್ನು ಕುಡಿದುಬಿಡುವಂತೆ–ತಿಂದುಹಾಕುತ್ತಾರೆ.

ಪುಷ್ಣಾತಿ ಯಾನಧರ್ಮೇಣ ಸ್ವಬುದ್ಧ್ಯಾ ತಮಪಣ್ಡಿತಮ್ ।
ತೇಽಕೃತಾರ್ಥಂ ಪ್ರಹಿಣ್ವನ್ತಿ ಪ್ರಾಣಾ ರಾಯಃ ಸುತಾದಯಃ ॥೨೩॥

ಯಾವ ಮೂರ್ಖನು ಪತ್ನೀ-ಪುತ್ರ-ಬಂಧುಗಳನ್ನೂ ಐಶ್ವರ್ಯವನ್ನೂ 'ತನ್ನವರು ; ತನ್ನದು' ಎಂಬ ವ್ಯಾಮೋಹದಿಂದ ಅಧರ್ಮದಿಂದಲಾದರೂ ಪಾಲಿಸಿ ಪೋಷಿಸುವನೋ ಅಂತಹವನನ್ನು ಅವನು ಕೃತಕೃತ್ಯನಾಗುವುದಕ್ಕೆ ಮೊದಲೇ (ಸುಖೋಪಭೋಗಗಳನ್ನು ಅನುಭವಿಸುವುದಕ್ಕೆ ಮೊದಲೇ) ಪ್ರಾಣ-ಐಶ್ವರ್ಯ-ಪುತ್ರ-ಪತ್ನೀ–ಇವರೇ ಮುಂತಾದವರು ತೊರೆದು ಹೋಗುತ್ತಾರೆ.

ಸ್ವಯಂ ಕಿಲ್ಬಿಷಮಾದಾಯ ತೈಸ್ತ್ಯಕ್ತೋ ನಾರ್ಥಕೋವಿದಃ ।
ಅಸಿದ್ಧಾರ್ಥೋ ವಿಶತ್ಯಂಧಂ ಸ್ವಧರ್ಮವಿಮುಖಸ್ತಮಃ ॥೨೪॥

ಧರ್ಮದಿಂದ ವಿಮುಖನಾಗಿ, ಹೇಗೆ ಹಣವನ್ನು ಸಂಪಾದಿಸಬೇಕೆಂಬ ವಿವೇಚನೆಯೇ ಇಲ್ಲದೆ ಅಧರ್ಮಮಾರ್ಗದಿಂದ ಹಣವನ್ನು ಸಂಪಾದಿಸುವ ಮನುಷ್ಯನು ಅದರ ಪಾಪವನ್ನು ತಲೆಯ ಮೇಲೆ ಹೊತ್ತುಕೊಳ್ಳುತ್ತಾನೆ. ಅವನು ಯಾರಿಗಾಗಿ ದುರ್ಮಾರ್ಗದಿಂದ ಹಣವನ್ನು ಸಂಪಾದಿಸಿ ಪಾಪವನ್ನು ಹೊತ್ತನೋ ಅವರೆಲ್ಲರೂ ಅವನನ್ನು ಪರಿತ್ಯಜಿಸಿ ಹೊರಟುಹೋಗುತ್ತಾರೆ. ಅಂತಹವರಿಂದ ಅವನಿಗೆ ಐಹಿಕವಾದ ಸುಖಭೋಗಾದಿಗಳೂ ಸಿಕ್ಕುವುದಿಲ್ಲ. ಯಾವುದೊಂದನ್ನೂ ಸಾಧಿಸಲಾಗದೆ ತಾನು ಮಾಡಿದ ಅಧರ್ಮದಿಂದ ಕೇವಲ ಪಾಪಗಳನ್ನು ಹೊತ್ತ ಅವನು ಅದರ ಫಲವಾಗಿ ಅವಸಾನಾನಂತರ ದಲ್ಲಿ ಅಂಧತಮಸ್ಸೆಂಬ ನರಕವನ್ನು ಪ್ರವೇಶಿಸುತ್ತಾನೆ.

ತಸ್ಮಾಲ್ಲೋಕಮಿಮಂ ರಾಜನ್ ಸ್ವಪ್ನಮಾಯಾಮನೋರಥಮ್ ।
ವೀಕ್ಷ್ಯಾಯಮ್ಯಾತ್ಮನಾತ್ಮಾನಂ ಸಮಃ ಶಾನ್ತೋ ಭವ ಪ್ರಭೋ ॥೨೫॥

ಆದುದರಿಂದ, ಪ್ರಭುವೇ! ಧೃತರಾಷ್ಟ್ರಮಹಾರಾಜ! ಈ ಪ್ರಪಂಚವನ್ನು ಕನಸೆಂದೂ, ಇಂದ್ರಜಾಲವೆಂದೂ, ಕೇವಲ ಮನಸ್ಸಿನ ಮಂಡಿಗೆಯೆಂದೂ, ನಶ್ವರವಾದುದೆಂದೂ ಭಾವಿಸಿ ಬುದ್ಧಿಯಿಂದ ಮನಸ್ಸನ್ನು ನಿಗ್ರಹಿಸಿ ಮಕ್ಕಳೆಲ್ಲರನ್ನೂ ಸಮತ್ವದಿಂದ ಕಾಣುತ್ತಾ ಶಾಂತನಾಗಿರು."

ಧೃತರಾಷ್ಟ್ರನು ಹೇಳುತ್ತಾನೆ :

ಯಥಾ ವದತಿ ಕಲ್ಯಾಣೀಂ ವಾಚಂ ದಾನಪತೇ ಭವಾನ್ ।
ತಥಾನಯಾ ನ ತೃಪ್ಯಾಮಿ ಮರ್ತ್ಯಃ ಪ್ರಾಪ್ಯ ಯಥಾಮೃತಮ್ ॥೨೬॥

"ದಾನಪತಿಯೇ! ಅಕ್ರೂರ! ನೀನು ನಿಶ್ಚಯವಾಗಿಯೂ ನನಗೆ ಕಲ್ಯಾಣಕರವಾದ ಮಾತುಗಳನ್ನೇ ಹೇಳಿರುವೆ. ಮನುಷ್ಯನು ಅಮೃತವನ್ನು ಎಷ್ಟು ಕುಡಿದರೂ ತೃಪ್ತನಾಗದಿರುವಂತೆ ಅಮೃತಸ್ವರೂಪವಾದ ನಿನ್ನ ಮಾತುಗಳಿಂದ ನಾನು ತೃಪ್ತನಾಗಿಲ್ಲ. ಇನ್ನೂ ಕೇಳಬೇಕೆನ್ನಿಸುತ್ತದೆ.

ತಥಾಪಿ ಸೂನೃತಾ ಸೌಮ್ಯ ಹೃದಿ ನ ಸ್ಥೀಯತೇ ಚಲೇ ।
ಪುತ್ರಾನುರಾಗವಿಷಮೇ ವಿದ್ಯುತ್ ಸೌದಾಮಿನೀ ಯಥಾ ॥೨೭॥

ಆದರೂ ನಿನ್ನ ಹಿತಕರವಾದ ಒಳ್ಳೆಯ ಮಾತುಗಳು ಚಂಚಲವಾದ ನನ್ನ ಮನಸ್ಸಿನಲ್ಲಿ ಹೆಚ್ಚು ಕಾಲ ಸ್ಥಿರವಾಗಿ ಉಳಿಯಲಾರವು. ಹಿತಕರವಾದ ನಿನ್ನ ಮಾತುಗಳು ಮಕ್ಕಳ ವಿಷಯವಾದ ಅನುರಾಗದಿಂದ ಏರು-ಪೇರುಗಳನ್ನು ಹೊಂದಿರುವ ನನ್ನ ಮನಸ್ಸಿನಲ್ಲಿ ಮಿಂಚಿನಂತೆ ಹೊಳೆದು ಮಾಯವಾಗಿಬಿಡುತ್ತವೆ.

ಈಶ್ವರಸ್ಯ ವಿಧಿಂ ಕೋ ನು ವಿಧುನೋತ್ಯನ್ಯಥಾ ಪುಮಾನ್ ।
ಭೂಮೇರ್ಭಾರಾವತಾರಾಯ ಯೋಽವತೀರ್ಣೋ ಯದೋಃ ಕುಲೇ ॥

ಸರ್ವಶಕ್ತನಾದ ಭಗವಂತನು ಭೂಭಾರಹರಣಕ್ಕಾಗಿ ಯದುವಂಶದಲ್ಲಿ ಅವತರಿಸಿದ್ದಾನೆ. ಆ ಸರ್ವೇಶ್ವರನ ನಿಯಮವನ್ನು ವ್ಯತ್ಯಾಸಗೊಳಿಸಲು ಯಾವನು ತಾನೇ ಸಮರ್ಥನು? ಸರ್ವೇಶ್ವರನ ನಿಯಮವನ್ನು ವ್ಯತ್ಯಾಸಗೊಳಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಅವನ ನಿಯಮ ದಂತೆ ಏನಾಗಬೇಕಾಗಿದೆಯೋ ಅದು ಆಗಿಹೋಗಲಿ.

ಯೋ ದುರ್ವಿಮರ್ಶಪಥಯಾ ನಿಜಮಾಯಯೇದಂ
ಸೃಷ್ಟ್ವಾ ಗುಣಾನ್ ವಿಭಜತೇ ತದನುಪ್ರವಿಷ್ಟಃ ।
ತಸ್ಮೈ ನಮೋ ದುರವಬೋಧವಿಹಾರತನ್ತ್ರ-
ಸಂಸಾರಚಕ್ರಗತಯೇ ಪರಮೇಶ್ವರಾಯ ॥೨೯॥

ಅಕ್ರೂರ! ಭಗವಂತನ ಮಾಯೆಯು ಅಚಿಂತ್ಯವಾದುದು. ಅವನು ಮಾಯೆಯ ಮೂಲಕವಾಗಿ ಈ ಪ್ರಪಂಚವನ್ನು ಸೃಷ್ಟಿಸಿ ತಾನೂ ಅದರಲ್ಲಿಯೇ ಸೇರಿಕೊಂಡು ಗುಣ-ಕರ್ಮಗಳನ್ನು ಪ್ರಪಂಚಕ್ಕೆ ವಿಭಾಗಿಸಿ ಕೊಡುತ್ತಾನೆ. ತಿಳಿಯಲು ಅಶಕ್ಯವಾದ ತನ್ನ ಮಾಯೆಯಿಂದ ರಚಿಸಿದ ಸಂಸಾರದ ಚಕ್ರಕ್ಕೆ ಆಶ್ರಯನಾಗಿದ್ದಾನೆ. ಅಂತಹ ಪರಮೇಶ್ವರನಿಗೆ ನಮಸ್ಕರಿಸುತ್ತೇನೆ.

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಹೀಗೆ ಅಕ್ರೂರನು ಧೃತರಾಷ್ಟ್ರನ ಅಭಿಪ್ರಾಯವೇನೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡು, ಕುರುವಂಶೀಯ ಸುಹೃದರ ಮತ್ತು ಬಂಧುಗಳ ಅನುಮತಿಯನ್ನು ಪಡೆದು ಮಥುರಾ ಪಟ್ಟಣಕ್ಕೆ ಹಿಂದಿರುಗಿದನು. ತನ್ನನ್ನು ಹಸ್ತಿನಾಪುರಕ್ಕೆ ಕಳುಹಿಸಿದ್ದ ಶ್ರೀಕೃಷ್ಣನ ಆಶಯದಂತೆ ಅಕ್ರೂರನು ರಾಮ-ಕೃಷ್ಣರಿಗೆ ಧೃತರಾಷ್ಟ್ರನು ಪಾಂಡವರ ವಿಷಯದಲ್ಲಿ ಹೇಗೆ ವ್ಯವಹರಿಸುತ್ತಿರುವನೆಂಬುದನ್ನೂ ಕಡೆಯದಾಗಿ ಅವನು ಹೇಳಿದ ಮಾತನ್ನೂ ವಿವರಿಸಿ ಹೇಳಿದನು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ಪೂರ್ವಾರ್ಧದಲ್ಲಿ ೪೯ನೆಯ ಅಧ್ಯಾಯವು ಮುಗಿಯಿತು.

ಪೂರ್ವಾರ್ಧವು ಮುಗಿಯಿತು.

ಹರಿಃ ಓಂ

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು

ಓಂ ತತ್ಸತ್

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ಶ್ರೀಮದ್ಭಾಗವತ - ದಶಮಸ್ಕಂಧ

(ಉತ್ತರಾರ್ಧ)

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯನ್ತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥

ದಶಮಸ್ಕಂಧ ೫೦ನೆಯ ಅಧ್ಯಾಯ

ಜರಾಸಂಧನೊಡನೆ ಯುದ್ಧ: ದ್ವಾರಕಾಪಟ್ಟಣದ ನಿರ್ಮಾಣ

ಶ್ರೀಶುಕಮುನಿಗಳು ಹೇಳುತ್ತಾರೆ :

ಅಸ್ತಿಃ ಪ್ರಾಪ್ತಿಶ್ಚ ಕಂಸಸ್ಯ ಮಹಿಷ್ಯೌ ಭರತರ್ಷಭ ।
ಮೃತೇ ಭರ್ತರಿ ದುಃಖಾರ್ತೇ ಈಯತುಃ ಸ್ಮ ಪಿತುರ್ಗೃಹಾನ್ ॥೧॥

"ಪರೀಕ್ಷಿತಮಹಾರಾಜ! ಭರತವಂಶಶಿರೋಮಣಿಯೇ! ಕಂಸನಿಗೆ ಅಸ್ತಿ ಮತ್ತು ಪ್ರಾಪ್ತಿ ಎಂಬ ಇಬ್ಬರು ಪತ್ನಿಯರಿದ್ದರು. ಪತಿಯಾದ ಕಂಸನು ಮರಣಹೊಂದಲಾಗಿ ದುಃಖಪೀಡಿತೆಯರಾದ ಅವರು ತಮ್ಮ ತಂದೆಯ ಮನೆಗೆ ಹೊರಟುಹೋದರು.

ದುಃಖತಪ್ತೆಯರಾಗಿದ್ದ ಅಸ್ತಿ-ಪ್ರಾಪ್ತಿ ಎಂಬ ಕಂಸನ ಮಡದಿಯರು ತಮ್ಮ ತಂದೆಯಾದ, ಮಗಧರಾಜನಾದ ಜರಾಸಂಧನಿಗೆ ತಮಗೆ ವೈಧವ್ಯವು ಪ್ರಾಪ್ತವಾದುದಕ್ಕೆ ಕಾರಣವನ್ನು ವಿವರಿಸಿ ಹೇಳಿದರು. ಅಪ್ರಿಯವಾದ ಸಮಾಚಾರವನ್ನು ಕೇಳಿ ಜರಾಸಂಧನು ಬಹಳವಾಗಿ ಶೋಕಿಸಿದನು. ಹಿಂದೆಯೇ ಅವನನ್ನು ಮೃತ್ಯುರೂಪವಾದ ಕೋಪವೂ ಆವರಿಸಿತು. ಪೃಥ್ವಿಯನ್ನೇ ಯಾದವರಿಂದ ರಹಿತವನ್ನಾಗಿ ಮಾಡಿಬಿಡಲು ನಿಶ್ಚಯಿಸಿ ಪ್ರಯತ್ನ

ಶೀಲನಾದನು. ಇಪ್ಪತ್ತುಮೂರು ಅಕ್ಷೌಹಿಣೀಸೈನ್ಯಸಮೇತನಾಗಿ ಮಥುರಾಪಟ್ಟಣಕ್ಕೆ ಬಂದು ಯಾದವರ ಆ ರಾಜಧಾನಿಯನ್ನು ನಾಲ್ಕು ದಿಕ್ಕುಗಳಿಂದಲೂ ಮುತ್ತಿಗೆ ಹಾಕಿದನು. ಜರಾಸಂಧನ ಆ ಮಹಾಸೈನ್ಯವು ಉಕ್ಕಿಬರುವ ಸಮುದ್ರದಂತೆಯೇ ಕಾಣುತ್ತಿದ್ದಿತು. ಮಥುರಾಪಟ್ಟಣವನ್ನು ನಾಲ್ಕು ದಿಕ್ಕುಗಳಿಂದಲೂ ಪ್ರತಿಬಂಧಿಸಿದ್ದಿತು. ಯಾದವರೆಲ್ಲರೂ ಭಯಾ ಕುಲರಾಗಿದ್ದರು. ಅದನ್ನು ನೋಡಿ, ಭೂಭಾರಹರಣಕ್ಕಾಗಿ ಮನುಷ್ಯನಾಗಿ ಅವತರಿಸಿ ಬಂದಿದ್ದ ಭಗವಂತನು ತನ್ನ ಅವತಾರದ ಪ್ರಯೋಜನವನ್ನೂ ಮತ್ತು ಈ ಸಮಯದಲ್ಲಿ ದೇಶ-ಕಾಲಕ್ಕೆ ತಕ್ಕಂತೆ ತಾನು ಏನು ಮಾಡಬೇಕೆಂಬುದನ್ನೂ ಯೋಚಿಸಿ ಈ ನಿರ್ಧಾರಕ್ಕೆ ಬಂದನು :

ಹನಿಷ್ಯಾಮಿ ಬಲಂ ಹ್ಯೇತದ್ಭುವಿ ಭಾರಂ ಸಮಾಹಿತಮ್ ।
ಮಾಗಧೇನ ಸಮಾನೀತಂ ವಶ್ಯಾನಾಂ ಸರ್ವಭೂಭುಜಾಮ್ ॥೭॥

ಅಕ್ಷೌಹಿಣೀಭಿಃ ಸಂಖ್ಯಾತಂ ಭಟಾಶ್ವರಥಕುಞ್ಜರೈಃ ।
ಮಾಗಧಸ್ತು ನ ಹನ್ತವ್ಯೋ ಭೂಯಃ ಕರ್ತಾ ಬಲೋದ್ಯಮಮ್ ॥೮॥

"ಮಗಧರಾಜನಾದ ಜರಾಸಂಧನು ತನ್ನ ಸಾಮಂತರಾಜರಿಂದ ಮತ್ತು ಕಾಲಾಳುಗಳು, ಕುದುರೆಗಳು, ರಥಗಳು, ಆನೆಗಳು ಇವುಗಳಿಂದ ಕೂಡಿದ ಇಪ್ಪತ್ತುಮೂರು ಅಕ್ಷೌಹಿಣೀಸೈನ್ಯವನ್ನು ಸಂಗ್ರಹಿಸಿ ಇಲ್ಲಿಗೆ ತಂದಿರುತ್ತಾನೆ. ಭೂಮಿಯ ಭಾರವೆಲ್ಲವೂ ಒಂದೆಡೆಯಲ್ಲಿಯೇ ಕೇಂದ್ರೀಕೃತವಾಗಿದೆ. ಆದುದರಿಂದ ಭೂಭಾರವನ್ನು ಇಳಿಸಬೇಕೆನ್ನುವ ನನ್ನ ಸಂಕಲ್ಪದಂತೆ ಜರಾಸಂಧನ ಈ ಎಲ್ಲ ಸೈನ್ಯವನ್ನೂ ನಾನೀಗಲೇ ಸಂಹರಿಸಿಬಿಡುತ್ತೇನೆ. ಆದರೆ ಜರಾಸಂಧನನ್ನು ಮಾತ್ರ ನಾನು ಕೊಲ್ಲುವುದಿಲ್ಲ. ಏಕೆಂದರೆ ಅವನಿನ್ನೂ ಹಲವಾರು ಅಕ್ಷೌಹಿಣೀಸೈನ್ಯಗಳನ್ನು ಸಂಗ್ರಹಿಸಿ ಭೂಭಾರಹರಣಕ್ಕಾಗಿ ನನಗೆ ತಂದು ಒಪ್ಪಿಸಬೇಕಾಗಿದೆ.

ಏತದರ್ಥೋಽವತಾರೋಽಯಂ ಭೂಭಾರಹರಣಾಯ ಮೇ ।
ಸಂರಕ್ಷಣಾಯ ಸಾಧೂನಾಂ ಕೃತೋಽನ್ಯೇಷಾಂ ವಧಾಯ ಚ ॥೯॥

ಭೂಭಾರಹರಣಮಾಡಬೇಕೆಂಬುದೇ ನನ್ನ ಅವತಾರದ ಮುಖ್ಯ

ಪ್ರಯೋಜನವಾಗಿದೆ. ಸಾಧುಗಳ ಸಂರಕ್ಷಣೆ, ದುಷ್ಟಜನರ ಸಂಹಾರ–ಇವು ಈ ಅವತಾರದಲ್ಲಿ ನಾನು ಮಾಡಬೇಕಾಗಿರುವ ಮುಖ್ಯಕಾರ್ಯಗಳು.

ಅನ್ಯೋಽಪಿ ಧರ್ಮರಕ್ಷಾಯೈ ದೇಹಃ ಸಂಭ್ರಿಯತೇ ಮಯಾ ।
ವಿರಾಮಾಯಾಪ್ಯಧರ್ಮಸ್ಯ ಕಾಲೇ ಪ್ರಭವತಃ ಕ್ವಚಿತ್ ॥೧೦॥

ಧರ್ಮದ ರಕ್ಷಣೆಗಾಗಿಯೂ ಪ್ರಬಲವಾಗಿ ಬೆಳೆಯುತ್ತಿರುವ ಅಧರ್ಮವನ್ನು ತಡೆಗಟ್ಟುವ ಸಲುವಾಗಿಯೂ ಕೆಲವು ಸಮಯಗಳಲ್ಲಿ ನಾನು ಇತರ ದೇಹಗಳಲ್ಲಿಯೂ ಅವತರಿಸುತ್ತೇನೆ.''

ಪರೀಕ್ಷಿತಮಹಾರಾಜ! ಭಗವಂತನಾದ ಶ್ರೀಕೃಷ್ಣನು ಹೀಗೆ ಯೋಚಿಸುತ್ತಿರುವಾಗಲೇ ಆಕಾಶದಿಂದ ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕಂಗೊಳಿಸುತ್ತಿದ್ದ, ಸೂತರಿಂದ ಕೂಡಿದ್ದ, ಯುದ್ಧಸಾಮಗ್ರಿಗಳಿಂದ ಸಂಪನ್ನವಾಗಿದ್ದ ಎರಡು ರಥಗಳು ಬಂದುವು. ಅದೇ ಸಮಯದಲ್ಲಿ ಭಗವಂತನ ಪುರಾತನವಾದ ಆಯುಧಗಳೂ ತಾವೇತಾವಾಗಿ ಅಲ್ಲಿ ಉಪಸ್ಥಿತವಾದುವು. ಅವೆಲ್ಲವನ್ನೂ ನೋಡಿ ಭಗವಂತನಾದ ಶ್ರೀಕೃಷ್ಣನು ತನ್ನ ಅಗ್ರಜನಾದ ಬಲರಾಮನಿಗೆ ಹೇಳಿದನು :

``ಆರ್ಯನೇ! ಪ್ರಭುವೇ! ನಿನ್ನಿಂದ ರಕ್ಷಿಸಲ್ಪಡುತ್ತಿರುವ ಯಾದವರಿಗೆ ಇಂದು ಮಹಾಸಂಕಟವು ಪ್ರಾಪ್ತವಾಗಿದೆ. ಈ ಸಮಯದಲ್ಲಿ ಅವರ ಸಂಕಟವನ್ನು ನಿವಾರಣೆಮಾಡುವುದು ನಮ್ಮ ಮುಖ್ಯಕರ್ತವ್ಯವಾಗಿದೆ. ನಮ್ಮ ಕಾರ್ಯಕ್ಕೆ ಬೆಂಬಲವಾಗಿ ಆಕಾಶದಿಂದ ರಥವೂ ಆಗಮಿಸಿದೆ. ನಮಗೆ ಪ್ರಿಯವಾದ ಆಯುಧಗಳೂ ತಾವೇತಾವಾಗಿ ಬಂದಿವೆ. ಅಣ್ಣ! ನೀನು ಈ ರಥದಲ್ಲಿ ಹತ್ತಿ ಕುಳಿತು ಮಥುರಾಪಟ್ಟಣವನ್ನು ನಾಲ್ಕು ದಿಕ್ಕುಗಳಿಂದಲೂ ಮುತ್ತಿಗೆ ಹಾಕಿರುವ ಇಪ್ಪತ್ತುಮೂರು ಅಕ್ಷೌಹಿಣೀಸೈನ್ಯಗಳನ್ನೂ ಸಂಹರಿಸು. ನಮ್ಮ ಜನರನ್ನು ಕಷ್ಟದಿಂದ ಪಾರುಮಾಡು. ಉದ್ಧರಿಸು. ಸತ್ಪುರುಷರಿಗೆ ಸುಖವನ್ನುಂಟುಮಾಡುವುದೇ ನಮ್ಮ ಅವತಾರದ ಪ್ರಯೋಜನವಾಗಿದೆ. ಇಪ್ಪತ್ತುಮೂರು ಅಕ್ಷೌಹಿಣೀ ನಾಮಾಂಕಿತವಾದ ಭೂಮಿಯ ಈ ವಿಪುಲವಾದ ಭಾರವನ್ನು ಕಡಿಮೆಮಾಡು.''

ಪರೀಕ್ಷಿತಮಹಾರಾಜ! ಶ್ರೀಕೃಷ್ಣ-ಬಲರಾಮರು ಹೀಗೆ ತಮ್ಮ-

ತಮ್ಮಲ್ಲಿಯೇ ಸಮಾಲೋಚಿಸಿ ಕವಚಗಳನ್ನು ಧರಿಸಿ ರಥಗಳಲ್ಲಿ ಕುಳಿತು ಮಥುರಾನಗರದಿಂದ ಹೊರಟರು. ಆ ಸಮಯದಲ್ಲಿ ಅವರು ದಿವ್ಯಾಯುಧಗಳಿಂದ ಸಂಪನ್ನರಾಗಿದ್ದರು. ಅತ್ಯಲ್ಪವಾದ ಸೈನ್ಯದಿಂದ ಅವರು ಸಮಾವೃತರಾಗಿದ್ದರು. ಶ್ರೀಹರಿಯ ರಥಕ್ಕೆ ದಾರುಕನು ಸಾರಥಿಯಾಗಿದ್ದನು. ನಗರದಿಂದ ಹೊರಬರುತ್ತಲೇ ರಾಮ-ಕೃಷ್ಣರಿಬ್ಬರೂ ಶಂಖಗಳನ್ನು ಗಟ್ಟಿಯಾಗಿ ಊದಿದರು. ಶಂಖಧ್ವನಿಯನ್ನು ಕೇಳುತ್ತಲೇ ಶತ್ರುಸೈನಿಕರ ಮನಸ್ಸಿನಲ್ಲಿ ಭಯವುಂಟಾಗಿ ಅವರು ನಡುಗಿಹೋದರು. ರಥಗಳಲ್ಲಿ ಕುಳಿತು ಬಂದ ರಾಮ-ಕೃಷ್ಣರನ್ನು ನೋಡಿ ಜರಾಸಂಧನು ಶ್ರೀಕೃಷ್ಣನನ್ನು ಕುರಿತು ಹೇಳಿದನು:

"ಪುರುಷಾಧಮನೇ! ಕೃಷ್ಣ! ನಿನ್ನಂತಹ ಬಾಲಕನೊಬ್ಬನೊಡನೆ ಯುದ್ಧಮಾಡಲು ನನಗೆ ನಾಚಿಕೆಯಾಗುತ್ತದೆ. ಆದುದರಿಂದ ನಿನ್ನೊಡನೆ ಯುದ್ಧಮಾಡಲು ನಾನು ಇಚ್ಛಿಸುವುದಿಲ್ಲ. ಇಷ್ಟು ದಿವಸಗಳವರೆಗೂ ನೀನು ಎಲ್ಲೆಲ್ಲೋ ಬಚ್ಚಿಟ್ಟುಕೊಂಡೇ ಜೀವಿಸುತ್ತಿದ್ದೆ. ಈಗತಾನೇ ಹೊರಬಂದಿರುವೆ. ಸೋದರಮಾವನನ್ನೇ ಸಂಹರಿಸಿದ ಮೂರ್ಖನೇ! ಹೊರಟುಹೋಗು. ನಿನ್ನಂತಹವನೊಡನೆ ನಾನು ಯುದ್ಧಮಾಡುವುದಿಲ್ಲ. ಬಲರಾಮ! ಯುದ್ಧದಲ್ಲಿ ಮಡಿಯುವುದರಿಂದ ಸ್ವರ್ಗಪ್ರಾಪ್ತಿಯಾಗುವುದೆಂಬ ಹಿರಿಯರ ಮಾತಿನಲ್ಲಿ ನಿನಗೆ ಶ್ರದ್ಧೆಯಿರುವುದಾದರೆ ನನ್ನೊಡನೆ ಯುದ್ಧಮಾಡಲು ಧೈರ್ಯಮಾಡಿ ಬಾ. ನನ್ನ ಬಾಣಗಳಿಂದ ಛಿನ್ನ-ಭಿನ್ನವಾಗುವ ಶರೀರವನ್ನು ಇಲ್ಲಿಯೇ ಬಿಟ್ಟು ಸ್ವರ್ಗಕ್ಕೆ ಹೋಗು. ಒಂದು ವೇಳೆ ನಿನ್ನಲ್ಲಿ ಅಪಾರವಾದ ವೀರ್ಯ-ಸಾಹಸಗಳೇ ಇರುವುದಾದರೆ ಯುದ್ಧದಲ್ಲಿ ನನ್ನನ್ನೇ ಸಂಹರಿಸು."

ಜರಾಸಂಧನ ಈ ಮಾತುಗಳನ್ನು ಕೇಳಿ ಭಗವಂತನು ಹೇಳುತ್ತಾನೆ :

ನ ವೈ ಶೂರಾ ವಿಕತ್ಥನ್ತೇ ದರ್ಶಯನ್ತ್ಯೇವ ಪೌರುಷಮ್ ।
ನ ಗೃಹ್ಣೀಮೋ ವಚೋ ರಾಜನ್ನಾತುರಸ್ಯ ಮುಮೂರ್ಷತಃ ॥೨೦॥

"ಜರಾಸಂಧ! ಶೂರರಾದವರು ಯಾವಾಗಲೂ ನಿನ್ನಂತೆ ಜಂಬ ಕೊಚ್ಚುವುದಿಲ್ಲ. ಪರಾಕ್ರಮವನ್ನು ಮಾತ್ರವೇ ತೋರಿಸುತ್ತಾರೆ. ಸಾಯಲು

ಹೊರಟಿರುವ ರೋಗಿಯು ಬಡಬಡಿಸುವಂತೆ ರಗಳುತ್ತಿರುವ ನಿನ್ನ ಮಾತುಗಳನ್ನು ನಾವು ಗಣನೆಗೆ ತೆಗೆದುಕೊಳ್ಳುವುದಿಲ್ಲ."

ಶ್ರೀಶುಕಮುನಿಗಳು ಹೇಳುತ್ತಾರೆ :

ವಾಯುವು ಸೂರ್ಯನನ್ನು ಮೋಡಗಳಿಂದಲೂ ಅಗ್ನಿಯನ್ನು ಧೂಳಿನಿಂದಲೂ ಮುಚ್ಚಿಬಿಡುವಂತೆ ಪದಾತಿಗಳೇ ಮೊದಲಾದ ಚತುರಂಗಬಲ ಸಮೇತನಾಗಿದ್ದ ಜರೆಯ ಮಗನಾದ ಜರಾಸಂಧನು ಬಲರಾಮ-ಶ್ರೀಕೃಷ್ಣರನ್ನು ಬಲಿಷ್ಠವಾದ ಮಹಾಸೈನ್ಯದೊಡನೆ ಸುತ್ತುವರಿದು ಮುತ್ತಿಗೆ ಹಾಕಿದನು. ಯುದ್ಧವನ್ನು ನೋಡಲು ಹೆಬ್ಬಾಗಿಲುಗಳಲ್ಲಿಯೂ, ಉಪ್ಪರಿಗೆಗಳಲ್ಲಿಯೂ, ಮಹಡಿಗಳಲ್ಲಿಯೂ ಕುಳಿತಿದ್ದ ಮಥುರಾನಗರದ ಸ್ತ್ರೀಯರು ಗರುಡ-ತಾಲವೃಕ್ಷದ ಧ್ವಜಗಳನ್ನು ಹೊಂದಿದ್ದ ಶ್ರೀಕೃಷ್ಣ-ಬಲರಾಮರ ರಥಗಳನ್ನು ಯುದ್ಧದಲ್ಲಿ ಕಾಣದೆ ಶೋಕಾಭಿಭೂತರಾಗಿ ಮೂರ್ಛೆಹೊಂದಿದರು. ಶತ್ರುಸೈನ್ಯಗಳೆಂಬ ಮೇಘಗಳ ಮೂಲಕವಾಗಿ ಬಾಣಗಳೆಂಬ ಅತಿವೃಷ್ಟಿಯಿಂದ ಪೀಡಿಸಲ್ಪಡುತ್ತಿದ್ದ ತನ್ನ ಕಡೆಯ ಸೈನ್ಯವನ್ನು ನೋಡಿ ಶ್ರೀಹರಿಯು ದೇವತೆಗಳಿಂದಲೂ, ಅಸುರರಿಂದಲೂ ಅರ್ಚಿಸಲ್ಪಡುತ್ತಿದ್ದ ಶಾರ್ಙ್ಗವೆಂಬ ಶ್ರೇಷ್ಠವಾದ ಧನುಸ್ಸನ್ನು ಬಾರಿ-ಬಾರಿಗೂ ಟೇಂಕರಿಸತೊಡಗಿದನು. ಬಳಿಕ ಶ್ರೀಕೃಷ್ಣನು ಬತ್ತಳಿಕೆಯಿಂದ ಅತ್ಯಂತತೀಕ್ಷ್ಣವಾದ ಬಾಣಗಳನ್ನು ತೆಗೆದು ಮಹಾಧನುಸ್ಸಿನಲ್ಲಿ ಹೂಡಿ ನಾಣನ್ನು ಸುದೀರ್ಘವಾಗಿ ಸೆಳೆದು ಪುಂಖಾನುಪುಂಖವಾಗಿ ಜರಾಸಂಧನ ಚತುರಂಗಸೈನ್ಯದಲ್ಲಿದ್ದ ಆನೆ-ಕುದುರೆ-ರಥ-ಪದಾತಿಗಳ ಮೇಲೆ ಬಿಡುತ್ತಾ ಅವೆಲ್ಲವನ್ನೂ ಸಂಹರಿಸುತ್ತಿದ್ದನು. ಆ ಸಮಯದಲ್ಲಿ ಅವನ ಧನುಸ್ಸು ನಿರಂತರವಾಗಿ ತಿರುಗುವ ಕೊಳ್ಳಿಯ ಚಕ್ರದಂತೆಯೇ ಕಾಣುತ್ತಿದ್ದಿತು. ಸತತವಾದ ಬಾಣಗಳ ಪ್ರಹಾರದಿಂದ ಅನೇಕ ಕುದುರೆಗಳ ಶಿರಸ್ಸುಗಳು ಕತ್ತರಿಸಲ್ಪಡುತ್ತಿದ್ದುವು. ರಥಗಳಲ್ಲಿದ್ದ ಕುದುರೆಗಳೂ ಸೂತರೂ ನಾಯಕರೂ ಶ್ರೀಕೃಷ್ಣನ ತೀಕ್ಷ್ಣವಾದ ಬಾಣಪ್ರಹಾರಗಳಿಂದ ಹತರಾಗುತ್ತಿದ್ದರು. ಧ್ವಜದಂಡಗಳೂ ಕತ್ತರಿಸಲ್ಪಟ್ಟು ಕೆಳಕ್ಕೆ ಬೀಳುತ್ತಿದ್ದುವು. ಪದಾತಿಗಳು ಶ್ರೀಕೃಷ್ಣನ ಚೂಪಾದ ಬಾಣಗಳಿಂದ ಕತ್ತರಿಸಲ್ಪಟ್ಟ ತೋಳು-ತೊಡೆ-ಕುತ್ತಿಗೆಯುಳ್ಳವರಾಗಿ ಅಸುನೀಗಿ ಕೆಳಕ್ಕೆ ಬೀಳುತ್ತಿದ್ದರು. ಹೀಗೆ ಶ್ರೀಕೃಷ್ಣನ ಶಾರ್ಙ್ಗಧನುಸ್ಸಿನಿಂದ ಹೊರಬಂದ

ಬಾಣಗಳಿಂದ ಕತ್ತರಿಸಲ್ಪಡುತ್ತಿದ್ದ ಪದಾತಿಗಳ-ಕುದುರೆಗಳ ಮತ್ತು ಆನೆಗಳ ಶರೀರದಿಂದ ರಕ್ತವು ಧಾರಾಕಾರವಾಗಿ ಸುರಿದು ಅದರಿಂದಲೇ ನೂರಾರು ರಕ್ತನದಿಗಳು ಹುಟ್ಟಿಕೊಂಡು ಹರಿಯತೊಡಗಿದುವು. ಭಯಂಕರವಾಗಿ ಕಾಣುತ್ತಿದ್ದ ಆ ರಕ್ತನದಿಗಳಲ್ಲಿ ಸೈನಿಕರ ತೋಳುಗಳು ನೀರುಹಾವುಗಳಂತೆ ಕಾಣುತ್ತಿದ್ದುವು. ಸೈನಿಕರ ತಲೆಗಳು ಆಮೆಗಳಾಗಿದ್ದುವು. ಸತ್ತುಬಿದ್ದಿದ್ದ ಮಹಾಗಜಗಳ ಶರೀರಗಳು ಆ ರಕ್ತನದಿಯ ದ್ವೀಪಗಳಂತಿದ್ದುವು. ಕುದುರೆಗಳು ಮೊಸಳೆಗಳಂತೆ ಕಾಣುತ್ತಿದ್ದುವು. ಕತ್ತರಿಸಿಬಿದ್ದಿದ್ದ ಸೈನಿಕರ ಕೈ-ಕಾಲುಗಳು ರಕ್ತನದಿಯಲ್ಲಿನ ಮೀನುಗಳಂತೆ ಕಾಣುತ್ತಿದ್ದುವು. ಸೈನಿಕರ ತಲೆ ಕೂದಲುಗಳು ರಕ್ತನದಿಗಳ ಪಾಚಿಯಂತೆ ಕಾಣುತ್ತಿದ್ದುವು. ಕತ್ತರಿಸಲ್ಪಟ್ಟು ತಂಡ-ತಂಡವಾಗಿ ಬಿದ್ದಿದ್ದ ಧನುಸ್ಸುಗಳು ರಕ್ತನದಿಯ ಅಲೆಗಳಂತೆ ಕಾಣುತ್ತಿದ್ದುವು. ರಾಶಿ-ರಾಶಿಯಾಗಿ ಬಿದ್ದಿದ್ದ ಆಯುಧಗಳು ನದಿಯ ದಡದಲ್ಲಿರುವ ಪೊದೆಗಳಂತೆ ಕಾಣುತ್ತಿದ್ದುವು. ಗುರಾಣಿಗಳು ರಕ್ತನದಿಯ ಸುಳಿಗಳಂತೆ ಕಾಣುತ್ತಿದ್ದುವು. ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಯೋಧರ ಕಿರೀಟವೇ ಮೊದಲಾದ ಆಭರಣಗಳೂ ಮತ್ತು ಅದರಲ್ಲಿದ್ದ ರತ್ನಗಳೂ ನದಿಯಲ್ಲಿರುವ ಬಂಡೆಗಳಂತೆಯೂ ಮರಳುಗಳಂತೆಯೂ ಕಾಣುತ್ತಿದ್ದುವು.

ಪರೀಕ್ಷಿತಮಹಾರಾಜ! ಊಹಿಸಲು ಅಸಾಧ್ಯವಾದ ಶಕ್ತಿ-ಪರಾಕ್ರಮಗಳಿಂದ ಕೂಡಿದ್ದ ಬಲರಾಮನು ದುರ್ಮದರಾದ ಜರಾಸಂಧನ ಸೈನಿಕರನ್ನು ಮುಸಲಾಯುಧದಿಂದ ಸಂಹರಿಸುತ್ತಾ ಹೇಡಿಗಳಿಗೆ ಭಯವನ್ನೂ ವೀರರಿಗೆ ಸಂತೋಷವನ್ನೂ ಉಂಟುಮಾಡುವ ಅಂತಹ ನೂರಾರು ನದಿಗಳನ್ನು ರಣರಂಗದಲ್ಲಿ ಹರಿಸಿಬಿಟ್ಟನು. ಮಹಾರಾಜ! ನಿಶ್ಚಯವಾಗಿಯೂ ಜರಾಸಂಧನಿಂದ ರಕ್ಷಿಸಲ್ಪಡುತ್ತಿದ್ದ ಆ ಸೈನ್ಯವು ಸಮುದ್ರದಂತೆ ಅತಿದುರ್ಗಮವಾಗಿದ್ದಿತು. ಭಯಂಕರವಾಗಿದ್ದಿತು. ಸಾಮಾನ್ಯರಿಂದ ಜಯಿಸಲು ಅಸಾಧ್ಯವಾಗಿದ್ದಿತು. ಅಂತಹ ಅತ್ಯಂತಪ್ರಬಲವಾದ ಸೈನ್ಯವನ್ನು ವಸುದೇವನ ಮಕ್ಕಳಾದ, ಜಗದೀಶ್ವರರಾದ ರಾಮ-ಕೃಷ್ಣರು ಯುದ್ಧವೆಂಬ ಆಟವನ್ನಾಡುತ್ತಾ ಹುಟ್ಟಡಗಿಸಿಬಿಟ್ಟರು.

ಸ್ಥಿತ್ಯುದ್ಭವಾನ್ತಂ ಭುವನತ್ರಯಸ್ಯ ಯಃ
ಸಮೀಹತೇಽನನ್ತಗುಣಃ ಸ್ವಲೀಲಯಾ ।

ನ ತಸ್ಯ ಚಿತ್ರಂ ಪರಪಕ್ಷನಿಗ್ರಹ-
ಸ್ತಥಾಪಿ ಮರ್ತ್ಯಾನುವಿಧಸ್ಯ ವರ್ಣ್ಯತೇ ॥೩೦॥

ಪರೀಕ್ಷಿತಮಹಾರಾಜ! ಭಗವಂತನು ಅನಂತವಾದ ಗುಣಗಳುಳ್ಳವನು. ಮಹಾಮಹಿಮನಾದ ಅವನು ಆಡಾಡುತ್ತಲೇ ಮೂರು ಲೋಕಗಳ ಉತ್ಪತ್ತಿ-ಸ್ಥಿತಿ-ಲಯಗಳನ್ನೂ ಮಾಡಿಬಿಡುತ್ತಾನೆ. ಅಂತಹವನಿಗೆ ಈ ಶತ್ರುಪಕ್ಷದ ವಿಜಯವೆಂಬುದು ಹೆಚ್ಚಿನ ವಿಷಯವೇನಲ್ಲ. ಇವೆಲ್ಲವೂ ಅವನಿಗೆ ಅತ್ಯಲ್ಪವಾದ ಕಾರ್ಯಗಳು. ಆದರೂ ಮನುಷ್ಯನಾಗಿ ಅವತರಿಸಿದಾಗ, ಮನುಷ್ಯನಂತೆ ಲೀಲಾವಿನೋದಗಳನ್ನು ತೋರಿಸಿದಾಗ, ಅವುಗಳೂ ಯಥಾವತ್ತಾಗಿ ವರ್ಣಿಸಲ್ಪಡುತ್ತವೆ.

ಪರೀಕ್ಷಿತಮಹಾರಾಜ! ಹೀಗೆ ಜರಾಸಂಧನ ಇಪ್ಪತ್ತುಮೂರು ಅಕ್ಷೌಹಿಣೀಸೈನ್ಯಗಳೂ ನಿರ್ನಾಮವಾಗಿ ಹೋದುವು. ಜರಾಸಂಧನು ರಥವನ್ನು ಕಳೆದುಕೊಂಡಿದ್ದನು. ಮಹಾಬಲನಾದ ಜರಾಸಂಧನಲ್ಲಿ ಪ್ರಾಣವು ಮಾತ್ರವೇ ಉಳಿದುಕೊಂಡಿದ್ದಿತು. ಅಂತಹ ಸ್ಥಿತಿಯಲ್ಲಿದ್ದ ಅವನನ್ನು ಒಂದು ಸಿಂಹವು ಮತ್ತೊಂದು ಸಿಂಹವನ್ನು ಹಿಡಿಯುವಂತೆ ಬಲರಾಮನು ಬಲ ಪೂರ್ವಕವಾಗಿ ಹಿಡಿದುಕೊಂಡನು. ಹಲವಾರು ಶತ್ರುಗಳನ್ನು ಸಂಹರಿಸಿದ್ದ ಜರಾಸಂಧನನ್ನು ಮಾನುಷಪಾಶಗಳಿಂದಲೂ, ವಾರುಣಪಾಶಗಳಿಂದಲೂ ಬಂಧಿಸುತ್ತಿದ್ದ ಬಲರಾಮನನ್ನು ಶ್ರೀಗೋವಿಂದನು ಬಂಧಿಸದಂತೆ ತಡೆದನು. ಜರಾಸಂಧನಿಂದ ಕಾರ್ಯವನ್ನು ಮಾಡಿಸಿಕೊಳ್ಳಬೇಕೆಂಬ ಆಶಯವು ಶ್ರೀಕೃಷ್ಣನಿಗಿದ್ದಿತು. ಅವನು ಪುನಃ ಹಲವಾರು ಅಕ್ಷೌಹಿಣೀಸೈನ್ಯಗಳನ್ನು ಸಂಗ್ರಹಿಸಿಕೊಂಡು ಯುದ್ಧಮಾಡಲು ಮಥುರಾಪಟ್ಟಣಕ್ಕೆ ಬರಬೇಕೆಂಬುದು ಶ್ರೀಕೃಷ್ಣನ ಆಶಯವಾಗಿದ್ದಿತು. ಭೂಭಾರಹರಣಕ್ಕೆ ಇದೊಂದು ದೊಡ್ಡ ಯೋಜನೆಯೇ ಆಗಿದ್ದಿತು. ಈ ಕಾರಣದಿಂದಲೇ ಶ್ರೀಕೃಷ್ಣನು ಬಲರಾಮನಿಗೆ ಜರಾಸಂಧನನ್ನು ಬಂಧಿಸದಂತೆ ಸೂಚನೆಯನ್ನಿತ್ತನು.

ಜರಾಸಂಧನು ಮಹಾಮಹಾವೀರರಿಗೂ ಮಾನ್ಯನಾಗಿದ್ದನು. ಅದ ರಿಂದಲೇ ಈ ಸೋಲಿನಿಂದ ಅವನಿಗೆ ಬಹಳ ನಾಚಿಕೆಯಾಯಿತು. ಲೋಕ ನಾಥರಾದ ರಾಮ-ಕೃಷ್ಣರಿಬ್ಬರೂ ಅವನನ್ನು ಬಿಟ್ಟೊಡನೆಯೆ ಅತಿಯಾದ

ನಾಚಿಕೆಯಿಂದ ಯಾರಿಗೂ ಮುಖವನ್ನು ತೋರಿಸದೆ ತಪಸ್ಸಿಗೆ ಹೋಗ ಬೇಕೆಂದು ನಿಶ್ಚಯಿಸಿಬಿಟ್ಟನು. ಆದರೆ ಅವನ ಸಂಗಡಿಗರಾಗಿದ್ದ ರಾಜರು ಮಾರ್ಗದಲ್ಲಿ ಅವನನ್ನು ತಪಸ್ಸಿಗೆ ಹೋಗದಂತೆ ತಡೆದುಬಿಟ್ಟರು.

"ಜರಾಸಂಧಮಹಾರಾಜ! ಅಲ್ಪಬಲರಾದ ಯಾದವರೆಲ್ಲಿ? ಮಹಾ ಬಲನಾದ ನೀನೆಲ್ಲಿ? ನಿನ್ನ ಮುಂದೆ ಯಾದವರು ನಿಂತು ಯುದ್ಧಮಾಡಲು ಸಾಧ್ಯವಿರುವುದೇ? ಆದರೆ ಕೆಲವು ಸಮಯಗಳಲ್ಲಿ ಜಯಾಪಜಯಗಳು ದೈವಾಯತ್ತವಾದುವು. ಹೇಡಿಯೂ ಗೆದ್ದುಬಿಡಬಹುದು. ಮಹಾಶೂರನೂ ಸೋಲಬಹುದು. ಇದು ಕೇವಲ ತಾತ್ಕಾಲಿಕ. ಇದರಿಂದ ನೀನು ನಾಚಿಕೆಗೊಳ್ಳುವ ಅಥವಾ ತಪಸ್ಸಿಗೆ ಹೋಗಬೇಕಾದ ಕಾರಣವಿಲ್ಲ. ಹಲವಾರು ಪರಾಕ್ರಮಿಗಳಾದ ರಾಜರು ಈಗಲೂ ನಿನ್ನ ಸೆರೆಮನೆಯಲ್ಲಿ ಅವಸಾನದ ದಿನಗಳನ್ನು ಎಣಿಸುತ್ತಿದ್ದಾರೆ. ನೀನು ಇಷ್ಟು ಪರಾಕ್ರಮಿ ಯಾಗಿರುವಾಗ ಒಮ್ಮೆ ದುರ್ದೈವವಶದಿಂದ ಸಂಭವಿಸಿದ ಸೋಲಿಗಾಗಿ ಎದೆ ಗುಂದುವುದೇ? ಎಂದಿಗೂ ನಾವು ನಿನ್ನ ಅನುಯಾಯಿಗಳಾಗಿಯೇ ಇರುತ್ತೇವೆ. ಯಾದವರ ಮೇಲಿನ ಸೇಡನ್ನು ನಮ್ಮ ಬೆಂಬಲದಿಂದ ಸಾಧ್ಯವಾದಷ್ಟು ಬೇಗ ತೀರಿಸಿಕೊಳ್ಳುವೆಯಂತೆ." ಇವೇ ಮುಂತಾದ ಪರಿಶುದ್ಧವಾದ ಪದಗಳುಳ್ಳ ಮಾತುಗಳಿಂದಲೂ, ಲೌಕಿಕವಾದ ನೀತಿವಾಕ್ಯಗಳಿಂದಲೂ ಜರಾಸಂಧನನ್ನು ತಪಸ್ಸಿಗೆ ಹೋಗದಂತೆ ತಡೆದರು.

ಪರೀಕ್ಷಿತಮಹಾರಾಜ! ನಾನು ಈ ಹಿಂದೆ ಹೇಳಿದಂತೆ ಆ ಸಮಯ ದಲ್ಲಿ ಜರಾಸಂಧನ ಇಪ್ಪತ್ತುಮೂರು ಅಕ್ಷೌಹಿಣೀಸೈನ್ಯವೂ ನಾಶವಾಗಿ ಹೋಗಿದ್ದಿತು. ಭಗವಂತನಾದ ಬಲರಾಮನೂ ಅವನನ್ನು ಬಹಳ ಉಪೇಕ್ಷೆ ಯಿಂದಲೇ ಕಂಡನು. ಇದರಿಂದ ಅತಿದುಃಖದಿಂದಲೇ ಜರಾಸಂಧನು ಮಗಧದೇಶಕ್ಕೆ ಹಿಂದಿರುಗಿದನು. ಇದಕ್ಕೆ ಪ್ರತಿಯಾಗಿ ಶ್ರೀಕೃಷ್ಣನ ಅಲ್ಪಸೈನ್ಯವು ಸ್ವಲ್ಪವಾದರೂ ನಷ್ಟವಾಗಿರಲಿಲ್ಲ. ಅಂತಹ ಅಲ್ಪಸೈನ್ಯದಿಂದಲೇ ಶ್ರೀಕೃಷ್ಣನು ಮಗಧರಾಜನ ಸೈನ್ಯಸಮುದ್ರವನ್ನೇ ದಾಟಿ ಮಹಾವೀರನೆಂದು ಖ್ಯಾತನಾದನು. ದೇವತೆಗಳು ಕೂಡ ವಿಜಯಿಯಾದ ಶ್ರೀಕೃಷ್ಣನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿ ಅವನ ಕಾರ್ಯವನ್ನು ಅನುಮೋದಿಸಿದರು. ಜರಾಸಂಧನ ಪರಾಜಯದಿಂದಾಗಿ, ಭಯರಹಿತರಾಗಿ, ಆನಂದತುಂದಿಲ

ರಾಗಿದ್ದ ಮಥುರಾವಾಸಿಗಳೊಡನೆ ಶ್ರೀಕೃಷ್ಣನೂ ಸೇರಿಕೊಂಡನು. ವಂದಿ-ಮಾಗಧ-ಸೂತರು ಅವನ ವಿಜಯೋತ್ಸವದ ವೀರಗೀತೆಯನ್ನು ಸುಶ್ರಾವ್ಯ ವಾಗಿ ಹಾಡಿದರು. ಶ್ರೀಕೃಷ್ಣನು ವಿಜಯಿಯಾಗಿ ಮಥುರಾಪಟ್ಟಣವನ್ನು ಪ್ರವೇಶಿಸಿದಾಗ ಶಂಖನಾದವಾಯಿತು. ಭೇರೀ-ದುಂದುಭಿಗಳು ಮೊಳಗಿದುವು. ವೀಣಾ-ವೇಣು-ಮೃದಂಗವೇ ಮೊದಲಾದ ಹಲವಾರು ಬಗೆಯ ಮಂಗಳವಾದ್ಯಗಳು ನುಡಿಸಲ್ಪಡುತ್ತಿದ್ದುವು. ಗುಡಿಸಿ-ಸಾರಿಸಲ್ಪಟ್ಟ ಮಾರ್ಗ ಗಳಿಂದ ಕೂಡಿದ್ದ, ಪತಾಕೆಗಳಿಂದ ಸಮಲಂಕೃತವಾಗಿದ್ದ, ಅತ್ಯಾಸಕ್ತಿಯಿಂದ ಕಟ್ಟಲ್ಪಟ್ಟ ತೋರಣಗಳಿಂದ ಕೂಡಿದ್ದ, ಬ್ರಾಹ್ಮಣರ ಸ್ವಸ್ತಿವಾಚನಗಳಿಂದ ನಿನಾದಿತವಾಗಿದ್ದ, ಆನಂದತುಂದಿಲರಾದ ಜನರಿಂದ ವ್ಯಾಪ್ತವಾಗಿದ್ದ ಮಥುರಾ ನಗರಿಯನ್ನು ಶ್ರೀಕೃಷ್ಣನು ಪ್ರವೇಶಿಸಿದನು. ಆ ಸಮಯದಲ್ಲಿ ಮಥುರಾ ಪಟ್ಟಣದ ಸ್ತ್ರೀಯರು ಪ್ರೀತಿಯ ಕಾತರತೆಯಿಂದ ಕೂಡಿದ್ದ ಕಣ್ಣುಗಳಿಂದ ಶ್ರೀಕೃಷ್ಣನನ್ನು ನೋಡುತ್ತಾ ಪುಷ್ಪಮಾಲೆಗಳನ್ನೂ, ಮೊಸರು ಬೆರೆಸಿದ ಅಕ್ಷತೆಯನ್ನೂ, ಮೊಳಕೆಗಳನ್ನೂ ಶ್ರೀಕೃಷ್ಣನ ಮೇಲೆ ಎರಚುತ್ತಿದ್ದರು. ಹೀಗೆ ಪ್ರಜೆಗಳ ಜಯಕಾರದೊಡನೆ ಅರಮನೆಯನ್ನು ಪ್ರವೇಶಿಸಿದ ಶ್ರೀಕೃಷ್ಣನು ಯುದ್ಧರಂಗದಿಂದ ತಂದಿದ್ದ ವೀರಸೈನಿಕರ ಆಭರಣಗಳನ್ನೂ ಬಗೆ-ಬಗೆಯ ಧನ-ಕನಕ-ವಸ್ತ್ರಗಳನ್ನೂ ಉಗ್ರಸೇನಮಹಾರಾಜನಿಗೆ ಅರ್ಪಿಸಿದನು.

ಹೀಗೆ ಜರಾಸಂಧನು ಇಪ್ಪತ್ತುಮೂರು ಅಕ್ಷೌಹಿಣೀಸೈನ್ಯಸಮೇತ ನಾಗಿಯೇ ಹದಿನೇಳು ಬಾರಿ ಶ್ರೀಕೃಷ್ಣನಿಂದ ರಕ್ಷಿಸಲ್ಪಡುತ್ತಿದ್ದ ಯಾದವ ರೊಡನೆ ಯುದ್ಧಮಾಡಿದನು. ಪ್ರತಿಯೊಂದು ಬಾರಿಯೂ ಯಾದವರು ಶ್ರೀಕೃಷ್ಣನ ಪ್ರಭಾವದಿಂದ ಜರಾಸಂಧನ ಸೈನ್ಯವನ್ನು ಧ್ವಂಸಮಾಡಿಬಿಡು ತ್ತಿದ್ದರು. ಹೀಗೆ ಪ್ರತಿಯೊಂದು ಬಾರಿಯೂ ಜರಾಸಂಧನು ಅಪಾರ ಸೈನ್ಯ ವನ್ನು ಕಳೆದುಕೊಂಡು ಶತ್ರುಗಳಿಂದ ಉಪೇಕ್ಷಿತನಾಗಿ ರಾಜಧಾನಿಗೆ ಹಿಂದಿ ರುಗುತ್ತಿದ್ದನು. ಹದಿನೆಂಟನೆಯ ಬಾರಿ ಜರಾಸಂಧನಿಗೂ ಯಾದವರಿಗೂ ಯುದ್ಧವು ನಡೆಯಲಿದ್ದಾಗ ನಾರದರಿಂದ ಕಳುಹಿಸಲ್ಪಟ್ಟ ಕಾಲಯವನನೆಂಬ ರಾಕ್ಷಸನು ಅಲ್ಲಿಗೆ ಬಂದನು. ಕಾಲಯವನನಿಗೆ ಎದುರಾಗಿ ನಿಂತು ಯುದ್ಧ ಮಾಡುವವರು ಲೋಕದಲ್ಲಿಯೇ ಯಾರೂ ಇರಲಿಲ್ಲ. ಅವನು ಅಪ್ರತಿದ್ವಂದ್ವ ನೆಂಬ ಖ್ಯಾತಿಯನ್ನು ಗಳಿಸಿದ್ದನು. ಯಾದವರೂ ತನ್ನಂತೆಯೇ ಮಹಾ

ಶೂರ-ವೀರರಾಗಿರುವರೆಂಬುದನ್ನೂ ಅವರು ತನ್ನೊಡನೆ ಯುದ್ಧಮಾಡಬಲ್ಲ ರೆಂಬುದನ್ನೂ ನಾರದರಿಂದ ತಿಳಿದೊಡನೆಯೇ ಮೂರು ಕೋಟಿ ಮ್ಲೇಚ್ಛ ಸೈನಿಕರೊಡನೆ ಮಥುರಾಪಟ್ಟಣಕ್ಕೆ ಮುತ್ತಿಗೆಹಾಕಿದನು. ಕಾಲಯವನನು ಮಥುರಾಪಟ್ಟಣವನ್ನು ಆಕ್ರಮಿಸಿರುವುದನ್ನು ಕಂಡು ಸಂಕರ್ಷಣನಿಗೆ ಸಹಾಯಕನಾದ ಶ್ರೀಕೃಷ್ಣನು ಅವನೊಡನೆ ಯೋಚಿಸತೊಡಗಿದನು.

"ಈ ಸಮಯದಲ್ಲಿ ಜರಾಸಂಧ ಮತ್ತು ಕಾಲಯವನ ಈ ಇಬ್ಬರೂ ಯಾದವರ ಮೇಲೆ ಯುದ್ಧಮಾಡಲು ಸನ್ನದ್ಧರಾಗಿ ಬಂದಿರುತ್ತಾರೆ. ಎರಡು ವಿಪತ್ತುಗಳೂ ಏಕಕಾಲದಲ್ಲಿ ಸಂಭವಿಸಿವೆ. ಇಂದು ಕಾಲಯವ ನನು ಮೂರು ಕೋಟಿ ಮ್ಲೇಚ್ಛಸೈನ್ಯಸಮೇತನಾಗಿ ಮಥುರಾಪಟ್ಟಣ ವನ್ನು ಆಕ್ರಮಿಸಿಬಿಟ್ಟಿದ್ದಾನೆ. ಇಂದೋ, ನಾಳೆಯೋ, ನಾಡಿದ್ದೋ ಜರಾಸಂಧನೂ ನಮ್ಮನ್ನು ಆಕ್ರಮಿಸಲು ಬರುವುದು ನಿಶ್ಚಯ. ನಾವಿಬ್ಬರೂ * ಕಾಲಯವನನೊಡನೆ ಯುದ್ಧಮಾಡುತ್ತಿರುವಾಗ ಜರಾಸಂಧ ನೇನಾದರೂ ಬಂದುಬಿಟ್ಟರೆ ಬಲಿಷ್ಠನಾದ ಅವನು ರಕ್ಷಕರಿಲ್ಲದ ನಮ್ಮ ಜ್ಞಾತಿ-ಬಂಧುಗಳನ್ನು ಸಂಹರಿಸುತ್ತಾನೆ ಅಥವಾ ಸೆರೆಹಿಡಿದು ತನ್ನ ಪಟ್ಟಣಕ್ಕೆ ಒಯ್ದುಬಿಡುತ್ತಾನೆ. ಅಣ್ಣ! ಆದುದರಿಂದ ನಾವು ಈಗೊಂದು ಕಾರ್ಯಮಾಡೋಣ. ಯಾರಿಂದಲೂ ಪ್ರವೇಶಿಸಲು ಸಾಧ್ಯವಾಗದಂತೆ

---

* ಕಾಲಯವನ : ಗಾರ್ಗ್ಯಮುನಿಗಳ ಭಾವಮೈದುನನು. ಯಾದವರಿಗೆ ಕುಲಗುರುವೂ ನಿತ್ಯಬ್ರಹ್ಮಚಾರಿಯೂ ಆದ ಗಾರ್ಗ್ಯಮುನಿಯನ್ನು ಷಂಡನೆಂದು ಜರೆಯಲು ಅದನ್ನು ಯಾದವರು ಅನುಮೋದಿಸಿ ನಕ್ಕರು. ಗಾರ್ಗ್ಯನು ಕ್ರುದ್ಧನಾಗಿ ದಕ್ಷಿಣದಿಕ್ಕಿಗೆ ಹೋಗಿ ಯಾದವರನ್ನು ನಿಗ್ರಹಿಸುವ ಮಗನಾಗಬೇಕೆಂದು ಸಂಕಲ್ಪಿಸಿ ಹನ್ನೆರಡು ವರ್ಷ ಕಬ್ಬಿಣದ ಪುಡಿಯನ್ನು ತಿನ್ನುತ್ತಾ ಶಿವನನ್ನು ಕುರಿತು ಘೋರವಾದ ತಪಸ್ಸನ್ನಾಚರಿಸಿ ಅಂತೆಯೇ ವರವನ್ನು ಪಡೆದನು. ಈ ಸುದ್ದಿಯನ್ನು ತಿಳಿದ ಪುತ್ರಹೀನನಾಗಿದ್ದ ಯವನರಾಜನು ಆ ಗಾರ್ಗ್ಯಮುನಿಯನ್ನು ಕರೆಯಿಸಿ ಗೌರವಿಸಿದನು. ಗಾರ್ಗ್ಯನು ಆತನ ಪ್ರಾರ್ಥನೆಯಂತೆ ಅವನ ಮಡದಿಯಾದ ಅಕ್ಷರಾದೇವಿಯಲ್ಲಿ ನಿಯೋಗದಿಂದ ಪುತ್ರನನ್ನು ಪಡೆದನು. ಯವನ ರಾಜನು ಅವನಿಗೆ ರಾಜ್ಯಾಧಿಕಾರವನ್ನಿತ್ತು ಕಾಡಿಗೆ ಹೋದನು. ಬಳಿಕ ಅವನು ಬಲಾಧಿಕ ನಾಗಿ ಲೋಕದಲ್ಲಿ ಯಾರು ಬಲಿಷ್ಠರೆಂದು ವಿಚಾರಿಸಿ ನಾರದಮುನಿಗಳಿಂದ ಯಾದವರ ಶೌರ್ಯವನ್ನು ತಿಳಿದು ಅವರೊಡನೆ ಯುದ್ಧಮಾಡಲು ಹೋದನು. ಅವನೇ ಕಾಲಯವನನು. (ವಿಷ್ಣುಪುರಾಣ)

ಈಗಿರುವ ನಮ್ಮ ಕೋಟೆಯನ್ನು ಎರಡು ಪಟ್ಟು ಭದ್ರವಾಗಿ ಎರಡು ಪಟ್ಟು ದುರ್ಗಮವಾಗಿ ಮಾಡೋಣ. ನಮ್ಮ ಜ್ಞಾತಿ-ಬಂಧುಗಳನ್ನು ಅಂತಹ ಅತಿ ದುರ್ಗಮವಾದ ಸ್ಥಳದಲ್ಲಿಟ್ಟು ನಾವು ಕಾಲಯವನನೊಡನೆ ಯುದ್ಧಮಾಡಿ ಅವನನ್ನೂ ಸಂಹರಿಸೋಣ."

ಪರೀಕ್ಷಿತಮಹಾರಾಜ! ಶ್ರೀಕೃಷ್ಣನು ಬಲರಾಮನೊಡನೆ ಹೀಗೆಂದು ಸಮಾಲೋಚಿಸಿ, ಸರ್ವಾಶ್ಚರ್ಯಗಳಿಗೂ ನೆಲೆಮನೆಯಾದ ಹನ್ನೆರಡು ಯೋಜನಗಳಷ್ಟು ವಿಸ್ತಾರವಾದ ಅತಿದುರ್ಗಮವಾದ ನಗರವನ್ನು ಸಮುದ್ರದ ಮಧ್ಯದಲ್ಲಿ ನಿರ್ಮಿಸಿದನು. ಆ ನಗರದಲ್ಲಿದ್ದ ಪ್ರತಿಯೊಂದು ವಸ್ತುವಿನಲ್ಲಿಯೂ ತ್ವಷ್ಟೃವಿನ ಮಗನಾದ ವಿಶ್ವಕರ್ಮನ ವಾಸ್ತುವಿಜ್ಞಾನದ ಪಾಂಡಿತ್ಯವೂ ಮತ್ತು ಶಿಲ್ಪಕಲಾನೈಪುಣ್ಯವೂ ಎದ್ದು ಕಾಣುತ್ತಿದ್ದಿತು. ವಾಸ್ತುಶಿಲ್ಪಕ್ಕೆ ಅನುಸಾರವಾಗಿ ಆ ಪಟ್ಟಣದಲ್ಲಿ ರಾಜಬೀದಿಗಳೂ, ಸಣ್ಣ ಬೀದಿಗಳೂ, ನಾಲ್ಕು ಬೀದಿಗಳು ಸೇರಿರುವ ಚೌಕಗಳೂ ನಿರ್ಮಿಸಲ್ಪಟ್ಟಿದ್ದುವು. ಆ ನಗರದಲ್ಲಿ ಪಾರಿಜಾತವೇ ಮೊದಲಾದ ದೇವತಾವೃಕ್ಷಗಳಿಂದಲೂ ಲತೆಗಳಿಂದಲೂ ಸಂಪನ್ನವಾಗಿದ್ದ ಸುಂದರವಾದ ಉದ್ಯಾನವನಗಳೂ ಮತ್ತು ಚಿತ್ರ-ವಿಚಿತ್ರವಾದ ಉಪವನಗಳೂ ಇದ್ದುವು. ಆಕಾಶವನ್ನು ಮುಟ್ಟುತ್ತಿದ್ದ ಸ್ವರ್ಣಮಯವಾದ ಗೋಪುರಗಳಿಂದಲೂ, ಸ್ಫಟಿಕಮಯವಾದ ಉಪ್ಪರಿಗೆಗಳಿಂದಲೂ, ಬಹಿರ್ದ್ವಾರಗಳಿಂದಲೂ ಆ ಪಟ್ಟಣವು ಅತ್ಯಂತಸುಂದರವಾಗಿ ಕಾಣುತ್ತಿದ್ದಿತು. ಬಂಗಾರದ ಶಿಖರಗಳಿಂದ ಸಮಲಂಕೃತವಾದ ಹಿತ್ತಾಳೆಯ ಮತ್ತು ಬೆಳ್ಳಿಯ ಅಶ್ವಶಾಲೆಗಳಿಂದಲೂ ಮತ್ತು ಅನ್ನಶಾಲೆಗಳಿಂದಲೂ, ಪದ್ಮರಾಗವೇ ಮೊದಲಾದ ರತ್ನಮಯವಾದ ಶಿಖರಗಳುಳ್ಳ ಸುವರ್ಣಮಯವಾದ ಮನೆಗಳಿಂದಲೂ, ಮಹಾಮರಕತಮಯವಾದ ನೆಲದಿಂದ ಕೂಡಿದ

2) ಯಾದವರು ತಮ್ಮ ಪುರೋಹಿತನಾದ ಗರ್ಗಋಷಿಯನ್ನು ಒಮ್ಮೆ ಹಾಸ್ಯಮಾಡಲಾಗಿ ಕುಪಿತನಾದ ಋಷಿಯು ಶಿವನ ಅನುಗ್ರಹದಿಂದ ಯಾದವರನ್ನು ಶಿಕ್ಷಿಸುವ ಮಗನೊಬ್ಬನನ್ನು ಅಪ್ಸರೆಯೊಬ್ಬಳಲ್ಲಿ ಪಡೆದು ಯಾದವರ ಶತ್ರುವಾದ ಯವನರಾಜನಲ್ಲಿ ಸೇರಿಸಿದನು. ಯವನರಾಜನು ಅತ್ಯಂತ ವಿಶ್ವಾಸದಿಂದ ಆ ಮಗುವನ್ನು ಸಲಹಿದುದರಿಂದ ಮಗುವಿಗೆ ಕಾಲಯವನನೆಂದು ಹೆಸರಾಯಿತು. ಇವನು ಯಾದವರನ್ನೆಲ್ಲಾ ದ್ವೇಷಿಸುತ್ತಿದ್ದು ಒಮ್ಮೆ ಗುಹೆಯೊಂದರಲ್ಲಿ ಮಲಗಿ ನಿದ್ರಿಸುತ್ತಿದ್ದ ಮುಚುಕುಂದನನ್ನು ಕೆಣಕಿ ಅವನ ದೃಷ್ಟಿಪಾತದಿಂದ ಹತನಾದನು.

ಸುಂದರವಾದ ಗೃಹಗಳಿಂದಲೂ ನೂತನವಾಗಿ ನಿರ್ಮಿಸಿದ ಆ ದ್ವಾರಕಾಪಟ್ಟಣವು ಶೋಭಿಸುತ್ತಿದ್ದಿತು. ಚಂದ್ರಶಾಲೆಗಳೊಡನೆ ನಿರ್ಮಿಸಿದ ವಾಸ್ತುದೇವತೆಗಳ ಮಂದಿರಗಳಿಂದ ಪಟ್ಟಣವು ಶೋಭಾಯಮಾನವಾಗಿತ್ತು. ಬ್ರಹ್ಮ-ಕ್ಷತ್ರ-ವೈಶ್ಯ-ಶೂದ್ರರೆಂಬ ನಾಲ್ಕು ವರ್ಣದ ಜನಗಳಿಂದಲೂ ಆ ಪಟ್ಟಣವು ವ್ಯಾಪ್ತವಾಗಿದ್ದಿತು. ಆ ನಗರದ ಮಧ್ಯದಲ್ಲಿ ಯದುವಂಶಪ್ರಧಾನರಾದ ಉಗ್ರಸೇನ, ವಸುದೇವ, ಬಲರಾಮ, ಶ್ರೀಕೃಷ್ಣ–ಇವರೇ ಮೊದಲಾದವರ ಅರಮನೆಗಳು ಪ್ರಕಾಶಮಾನವಾಗಿ ಬೆಳಗುತ್ತಿದ್ದುವು.

ಪರೀಕ್ಷಿತಮಹಾರಾಜ! ಆ ಸಮಯದಲ್ಲಿ ದೇವರಾಜನಾದ ಇಂದ್ರನು ಭಗವಂತನಾದ ಶ್ರೀಕೃಷ್ಣನ ಸಲುವಾಗಿ ದೇವಲೋಕದಿಂದ ಸುಧರ್ಮಾ ಎಂಬ ಸಭೆಯನ್ನೂ ಪಾರಿಜಾತವೃಕ್ಷವನ್ನೂ ಕಳುಹಿಸಿಕೊಟ್ಟನು. 'ಸುಧರ್ಮಾ'–ಎಂಬ ಆ ದಿವ್ಯವಾದ ಸಭೆಯಲ್ಲಿ ಕುಳಿತವನಿಗೆ ಮರ್ತ್ಯ ಧರ್ಮವಿರುತ್ತಿರಲಿಲ್ಲ. ಹಸಿವು-ಬಾಯಾರಿಕೆಗಳಾಗಲೀ, ಆಯಾಸವಾಗಲೀ, ಮರಣವಾಗಲೀ ಉಂಟಾಗುತ್ತಿರಲಿಲ್ಲ. ಒಂದು ಕಿವಿಯು ಮಾತ್ರವೇ ಕಪ್ಪಾಗಿದ್ದು ಬಿಳಿಯ ಬಣ್ಣದಿಂದ ಪ್ರಕಾಶಿಸುತ್ತಿದ್ದ, ಮನೋವೇಗಕ್ಕೆ ಸಮಾನ ವಾದ ವೇಗವುಳ್ಳವುಗಳಾಗಿದ್ದ ಹಲವಾರು ಕುದುರೆಗಳನ್ನು ವರುಣದೇವನು ಶ್ರೀಕೃಷ್ಣನಿಗೆ ಕಳುಹಿಸಿಕೊಟ್ಟನು. ನಿಧಿಗಳಿಗೆ ಪತಿಯಾದ ಲೋಕಪಾಲನಾದ ಕುಬೇರನು ತನ್ನಲ್ಲಿದ್ದ ಅಷ್ಟನಿಧಿಗಳನ್ನೂ ಶ್ರೀಕೃಷ್ಣನಿಗೆ ಕಳುಹಿಸಿಕೊಟ್ಟನು.*

ಪರೀಕ್ಷಿತಮಹಾರಾಜ! ಸಮಸ್ತಲೋಕಪಾಲಕರಿಗೂ ಶ್ರೀಕೃಷ್ಣನು ಅವರವರ ಕಾರ್ಯವನ್ನು ನಿರ್ವಹಿಸಬೇಕಾದ ಶಕ್ತಿಯನ್ನೂ ಸಿದ್ಧಿಗಳನ್ನೂ ದಯಪಾಲಿಸಿದ್ದನು. ಯಾವಾಗ ಶ್ರೀಕೃಷ್ಣನು ಪೃಥ್ವಿಯಲ್ಲಿ ಅವತರಿಸಿ ತನ್ನ ಅದ್ಭುತವಾದ ಲೀಲೆಗಳನ್ನು ತೋರಿಸಲು ಪ್ರಾರಂಭಿಸಿದನೋ ಆ ಸಮಯದಲ್ಲಿ ಲೋಕಪಾಲಕರೆಲ್ಲರೂ ತಮ್ಮಲ್ಲಿದ್ದ ಸಿದ್ಧಿಯನ್ನು ಶ್ರೀಕೃಷ್ಣನಿಗೆ ಸಮರ್ಪಿಸಿಬಿಟ್ಟರು.

---

* ಅಷ್ಟನಿಧಿಗಳು : ಪದ್ಮಶ್ಚೈವ ಮಹಾಪದ್ಮೋ ಮತ್ಸ್ಯಕೂರ್ಮೌ ತಥೌದಕಃ ।
ನೀಲೋ ಮುಕುನ್ದಃ ಶಂಖಶ್ಚ ನಿಧಯೋಽಷ್ಟೌ ಪ್ರಕೀರ್ತಿತಾಃ ॥

ಪದ್ಮ, ಮಹಾಪದ್ಮ, ಮತ್ಸ್ಯ, ಕೂರ್ಮ, ಔದಕ, ನೀಲ, ಮುಕುಂದ ಮತ್ತು ಶಂಖ–ಇವು ಅಷ್ಟನಿಧಿಗಳು.

ಅನಂತರ ಶ್ರೀಕೃಷ್ಣನು ತನ್ನ ಯೋಗಮಾಯೆಯಿಂದಲೇ ಮಥುರೆಯಲ್ಲಿದ್ದ ಸಮಸ್ತಬಂಧುಗಳನ್ನೂ, ಸುಹೃದರನ್ನೂ, ಪ್ರಜೆಗಳನ್ನೂ ಹೊಸದಾಗಿ ಸಮುದ್ರಮಧ್ಯದಲ್ಲಿ ನಿರ್ಮಿತವಾಗಿದ್ದ ದ್ವಾರಕಾಪಟ್ಟಣಕ್ಕೆ ಕರೆತಂದನು. ಅವರೆಲ್ಲರನ್ನೂ ರಕ್ಷಿಸಿಕೊಂಡಿರುವಂತೆ ಬಲರಾಮನಿಗೆ ಹೇಳಿ ಶ್ರೀಕೃಷ್ಣನು ಅವನ ಅನುಮತಿಯನ್ನು ಪಡೆದು ಕಮಲದ ಮಾಲೆಯನ್ನು ಧರಿಸಿ ನಿರಾಯುಧನಾಗಿ ಮಥುರಾಪಟ್ಟಣದ ಮಹಾದ್ವಾರದಿಂದ ನಿರ್ಗಮಿಸಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೫೦ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೫೧ನೆಯ ಅಧ್ಯಾಯ

ಕಾಲಯವನನು ಭಸ್ಮವಾದುದು : ಮುಚುಕುಂದನ ಕಥೆ

ಶ್ರೀಶುಕಮುನಿಗಳು ಹೇಳುತ್ತಾರೆ :

ತಂ ವಿಲೋಕ್ಯ ವಿನಿಷ್ಕ್ರಾನ್ತಮುಜ್ಜಿಹಾನಮಿವೋಡುಪಮ್ ।
ದರ್ಶನೀಯತಮಂ ಶ್ಯಾಮಂ ಪೀತಕೌಶೇಯವಾಸಸಮ್ ॥೧॥

ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭಾಮುಕ್ತಕನ್ಧರಮ್ ।
ಪೃಥುದೀರ್ಘಚತುರ್ಬಾಹುಂ ನವಕಞ್ಜಾರುಣೇಕ್ಷಣಮ್ ॥೨॥

ನಿತ್ಯಪ್ರಮುದಿತಂ ಶ್ರೀಮತ್ಸುಕಪೋಲಂ ಶುಚಿಸ್ಮಿತಮ್ ।
ಮುಖಾರವಿನ್ದಂ ಬಿಭ್ರಾಣಂ ಸ್ಫುರನ್ಮಕರಕುಣ್ಡಲಮ್ ॥೩॥

ವಾಸುದೇವೋ ಹ್ಯಯಮಿತಿ ಪುಮಾನ್ ಶ್ರೀವತ್ಸಲಾಞ್ಛನಃ ।
ಚತುರ್ಭುಜೋಽರವಿನ್ದಾಕ್ಷೋ ವನಮಾಲ್ಯತಿಸುನ್ದರಃ ॥೪॥

ಲಕ್ಷಣೈರ್ನಾರದಪ್ರೋಕ್ತೈರ್ನಾನ್ಯೋ ಭವಿತುಮರ್ಹತಿ ।
ನಿರಾಯುಧಶ್ಚಲನ್ ಪದ್ಭ್ಯಾಂ ಯೋತ್ಸ್ಯೇಽನೇನ ನಿರಾಯುಧಃ ॥೫॥

ಪರೀಕ್ಷಿತಮಹಾರಾಜ! ಮಥುರಾಪಟ್ಟಣದ ಮಹಾದ್ವಾರದಿಂದ ಹೊರಬಂದ ಶ್ರೀಕೃಷ್ಣನು ಆಗತಾನೇ ಉದಯಿಸಿದ ಪೂರ್ಣಚಂದ್ರನಂತೆ

ಅತ್ಯಂತಸುಂದರನಾಗಿಯೂ ದರ್ಶನೀಯತಮನಾಗಿಯೂ ಕಾಣುತ್ತಿದ್ದನು. ಶ್ಯಾಮಲವರ್ಣನಾಗಿದ್ದ ಅವನು ದಿವ್ಯವಾದ ಪೀತಾಂಬರವನ್ನು ಉಟ್ಟಿದ್ದನು. ಅವನ ವಕ್ಷಃಸ್ಥಳದಲ್ಲಿ ಶ್ರೀವತ್ಸದ ಚಿಹ್ನೆಯಿದ್ದಿತು. ಕೌಸ್ತುಭಮಣಿಯಿಂದ ಅಲಂಕೃತವಾಗಿದ್ದ ಆತನ ಕಂಠವು ಅತ್ಯಂತಪ್ರಕಾಶಮಾನವಾಗಿ ಕಾಣುತ್ತಿದ್ದಿತು. ಶ್ರೀಕೃಷ್ಣನಿಗೆ ದಪ್ಪವಾಗಿಯೂ, ನೀಳವಾಗಿಯೂ ಇದ್ದ ನಾಲ್ಕು ತೋಳುಗಳಿದ್ದುವು. ಆಗತಾನೇ ಅರಳಿದ ಕಮಲದಂತಹ ಕಣ್ಣುಗಳನ್ನು ಹೊಂದಿದ್ದನು. ಶ್ರೀಕೃಷ್ಣನು ಯಾವಾಗಲೂ ಆನಂದವಾಗಿಯೇ ಇರುತ್ತಿದ್ದನು. ಶುಭ್ರವಾದ ನಗೆಯುಳ್ಳವನಾಗಿದ್ದನು. ಅವನು ನಕ್ಕರೆ ಹಾಲು ಹೊರಚೆಲ್ಲುವುದೋ ಎಂಬಂತೆ ಕಾಣುತ್ತಿದ್ದಿತು. ಥಳಥಳಿಸುತ್ತಿದ್ದ ಮಕರ ಕುಂಡಲಗಳಿಂದ ಪ್ರದೀಪ್ತವಾದ ಮುಖಾರವಿಂದವನ್ನು ಹೊಂದಿದ್ದನು. ಇಂತಹ ಸರ್ವಾಂಗಸುಂದರನಾದ ಶ್ರೀಕೃಷ್ಣನನ್ನು ಕಾಣುತ್ತಲೇ ಕಾಲಯವನನು ಇವನೇ ವಸುದೇವನ ಮಗನಾದ ಮತ್ತು ನಾರದರು ಹೇಳಿದ ಶ್ರೀಕೃಷ್ಣನೆಂದು ನಿರ್ಧರಿಸಿದನು. ನಾರದರು ಹೇಳಿದ್ದಂತೆ ಅವನು ಶ್ರೀವತ್ಸಲಾಂಛನನಾಗಿದ್ದನು. ಚತುರ್ಭುಜನಾಗಿದ್ದನು. ಕಮಲಾಕ್ಷನಾಗಿದ್ದನು. ವನಮಾಲಿಯಾಗಿದ್ದನು. ಕಡುಚೆಲುವನೂ ಆಗಿದ್ದನು. ಇವನು ಶ್ರೀಕೃಷ್ಣನಲ್ಲದೆ ಬೇರೆಯವನಲ್ಲವೆಂದು ಕಾಲಯವನನು ನಿಶ್ಚಯಿಸಿದನು. ಅವನು ಆಯುಧರಹಿತನಾಗಿ ಕಾಲ್ನಡಿಗೆಯಲ್ಲೇ ಹೋಗುತ್ತಿರುವುದರಿಂದ ತಾನೂ ನಿರಾಯುಧನಾಗಿಯೇ ಶ್ರೀಕೃಷ್ಣನೊಡನೆ ಯುದ್ಧಮಾಡುವುದಾಗಿ ಕಾಲಯವನನು ನಿಶ್ಚಯಿಸಿದನು. ತನಗೆ ಬೆನ್ನುತೋರಿಸಿಕೊಂಡು ಓಡಿಹೋಗುತ್ತಿದ್ದ, ಯೋಗಿಗಳಿಂದಲೂ ಹೊಂದಲು ಅಸಾಧ್ಯನಾಗಿದ್ದ ಶ್ರೀಕೃಷ್ಣನನ್ನು ಹಿಡಿಯುವ ಆಶಯದಿಂದ ಕಾಲಯವನನು ಅವನನ್ನು ಬೆನ್ನಟ್ಟಿಹೋದನು. ಪ್ರತಿಯೊಂದು ಹೆಜ್ಜೆಯಲ್ಲಿಯೂ ಕಾಲಯವನನಿಗೆ ಶ್ರೀಕೃಷ್ಣನು ಸಿಕ್ಕಿಬಿದ್ದನೆಂದೇ ಭಾಸವಾಗುತ್ತಿದ್ದಿತು. ಆದರೆ ಲೀಲಾಮಾನುಷವಿಗ್ರಹನಾದ ಶ್ರೀಕೃಷ್ಣನು ಮಾತ್ರ ಅವನ ಕೈಗೆ ಸಿಕ್ಕುತ್ತಿರಲಿಲ್ಲ. ಸಿಕ್ಕಿಬಿಡುವನೆಂಬ ಆಸೆಯನ್ನು ಕ್ಷಣ-ಕ್ಷಣಕ್ಕೂ ಹುಟ್ಟಿಸುತ್ತಾ ಶ್ರೀಕೃಷ್ಣನು ಕಾಲಯವನನನ್ನು ಪರ್ವತದ ಗುಹೆಯ ಬಳಿಗೆ ಕರೆದೊಯ್ದನು. ಶ್ರೀಕೃಷ್ಣನನ್ನು ಹಿಡಿದುಬಿಡಬೇಕೆಂದು ಅವನ ಹಿಂದೆಯೇ

ಹೋಗುತ್ತಿದ್ದ ಕಾಲಯವನನು ಗಟ್ಟಿಯಾಗಿ ಕೂಗಿ ಶ್ರೀಕೃಷ್ಣನಿಗೆ ಹೇಳಿದನು:

ಪಲಾಯನಂ ಯದುಕುಲೇ ಜಾತಸ್ಯ ತವ ನೋಚಿತಮ್ ।

"ಶ್ರೇಷ್ಠವಾದ ಯದುಕುಲದಲ್ಲಿ ಹುಟ್ಟಿರುವ ನಿನಗೆ ಯುದ್ಧದಿಂದ ಪಲಾಯನಮಾಡುವುದು ಖಂಡಿತವಾಗಿಯೂ ಉಚಿತವೆನಿಸುವುದಿಲ್ಲ"– ಹೀಗೆ ಶ್ರೀಕೃಷ್ಣನನ್ನು ಆಕ್ಷೇಪಿಸುತ್ತಾ ಮುಂದೆ ಮುಂದೆ ಹೋಗುತ್ತಿದ್ದರೂ ಕಾಲಯವನನಿಗೆ ಪಾಪಶೇಷವು ಇನ್ನೂ ಇದ್ದಿತಾದುದರಿಂದ ಭಗವಂತನು ಅವನ ಕೈಗೆ ಸಿಕ್ಕಲಿಲ್ಲ.

ಬೆನ್ನಟ್ಟಿ ಬರುತ್ತಿದ್ದ ಕಾಲಯವನನು ಹೀಗೆ ನಿಂದಿಸುತ್ತಿದ್ದರೂ ಶ್ರೀಕೃಷ್ಣನು ಅವನ ಮಾತನ್ನು ಲಕ್ಷಿಸದೆ ಪರ್ವತದ ಗುಹೆಯೊಂದರಲ್ಲಿ ಪ್ರವೇಶಿಸಿದನು. ಹಿಂಬಾಲಿಸಿ ಬರುತ್ತಿದ್ದ ಕಾಲಯವನನೂ ಗುಹೆಯನ್ನು



ಪ್ರವೇಶಿಸಿದನು. ಆದರೆ ಅಲ್ಲಿ ಅವನು ಓಡಿಹೋಗುತ್ತಿದ್ದ ಶ್ರೀಕೃಷ್ಣನನ್ನು ಕಾಣಲಿಲ್ಲ. ಅಲ್ಲಿ ಬೇರೊಬ್ಬನು ಮಲಗಿದ್ದನು. ಅಲ್ಲಿ ಮಲಗಿರುವವನು ಶ್ರೀಕೃಷ್ಣನೆಂದೇ ಭಾವಿಸಿ ಕಾಲಯವನನು ಆತನಿಗೆ ಹೇಳಿದನು :

ನನ್ವಸೌ ದೂರಮಾನೀಯ ಶೇತೇ ಮಾಮಿಹ ಸಾಧುವತ್ ।

'ನನ್ನನ್ನು ಇಷ್ಟು ದೂರಕ್ಕೆ ಕರೆತಂದು ಸಾಧುವಿನಂತೆ ಮಾಯಾವಿಯಾದ ಕೃಷ್ಣನು ಮಲಗಿರುವನಲ್ಲವೇ?'–ಹೀಗೆ ಹೇಳುತ್ತಾ ಮೂಢನಾದ

ಕಾಲಯವನನು ಮಲಗಿರುವವನು ಅಚ್ಯುತನೆಂದೇ ಭಾವಿಸಿ ಕಾಲಿನಿಂದ ಅವನನ್ನು ಒದೆದನು.

ಒಬ್ಬ ಪುರುಷನು ಅಲ್ಲಿ ಹಲವಾರು ವರ್ಷಗಳಿಂದಲೂ ಮಲಗಿಯೇ ಇದ್ದನು. ಕಾಲಿನ ಒದೆತವು ಬಿದ್ದೊಡನೆಯೇ ಮೇಲೆದ್ದು ಆ ಪುರುಷನು ಕಣ್ಣುಗಳನ್ನು ನಿಧಾನವಾಗಿ ಬಿಡುತ್ತಾ ಎಲ್ಲ ದಿಕ್ಕುಗಳನ್ನು ನೋಡುತ್ತಾ ಕಡೆಗೆ ತನ್ನ ಪಕ್ಕದಲ್ಲಿಯೇ ನಿಂತಿದ್ದ ಕಾಲಯವನನನ್ನು ನೋಡಿದನು. ಕೋಪಿಷ್ಠನಾಗಿದ್ದ ಆ ಪುರುಷನ ದೃಷ್ಟಿಯು ಬಿದ್ದೊಡನೆಯೇ ಕಾಲಯವನನು ತನ್ನ ದೇಹದಿಂದಲೇ ಹುಟ್ಟಿದ ಅಗ್ನಿಯಿಂದ ದಹಿಸಲ್ಪಟ್ಟು ಕ್ಷಣಮಾತ್ರದಲ್ಲಿ ಭಸ್ಮವಾಗಿಹೋದನು."

ರಾಜನು ಪ್ರಶ್ನಿಸುತ್ತಾನೆ :

"ಪೂಜ್ಯರೇ! ಯಾವನ ದೃಷ್ಟಿಪಾತದಿಂದಲೇ ಕಾಲಯವನನು ಭಸ್ಮವಾಗಿಹೋದನೋ ಅಂತಹ ಮಹಾಪುರುಷನಾರು? ಅವನು ಯಾವ ವಂಶಕ್ಕೆ ಸೇರಿದವನು? ಯಾರ ಮಗನು? ದೃಷ್ಟಿಪಾತದಿಂದಲೇ ಕಾಲ ಯವನನನ್ನು ಭಸ್ಮಮಾಡಿದ ಅವನು ಎಂತಹ ಪರಾಕ್ರಮಿ? ಅವನ ವೀರ್ಯಪರಾಕ್ರಮಗಳೆಷ್ಟು? ಅವನು ಪರ್ವತದ ಗುಹೆಯಲ್ಲಿ ಮಲಗಿದ್ದುದೇಕೆ?–ದಯಮಾಡಿ ಈ ಎಲ್ಲ ವಿಷಯಗಳನ್ನೂ ವಿಶದವಾಗಿ ಹೇಳಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಸುವಿಖ್ಯಾತನಾದ ಮುಚುಕುಂದನು ಇಕ್ಷ್ವಾಕುಕುಲದಲ್ಲಿ ಹುಟ್ಟಿದವನು. ಮಾಂಧಾತೃರಾಜನ ಮಗನು. ಆತನು ಬ್ರಾಹ್ಮಣಪ್ರಿಯನೂ, ಸತ್ಯನಿಷ್ಠನೂ, ಮಹಾಪುರುಷನೂ ಆಗಿದ್ದನು. ಒಮ್ಮೆ ಅಸುರರಿಂದ ಭೀತರಾಗಿದ್ದ ಇಂದ್ರನೇ ಮೊದಲಾದ ದೇವತೆಗಳು ಮುಚುಕುಂದನನ್ನು ರಕ್ಷಣೆಗಾಗಿ ಪ್ರಾರ್ಥಿಸಿಕೊಂಡರು. ಮುಚುಕುಂದನು ತನ್ನ ಶಕ್ತಿ-ಸಾಮರ್ಥ್ಯಗಳಿಂದ ಬಹಳ ದಿವಸಗಳವರೆಗೂ ದೇವತೆಗಳನ್ನು ಅಸುರರಿಂದ ರಕ್ಷಿಸಿದನು. ಬಹಳ ದಿವಸಗಳ ತರುವಾಯ ಇದರಿಂದ ಧೈರ್ಯತಳೆದ ದೇವತೆಗಳು ಅದುವರೆಗೂ ತಮ್ಮ ರಕ್ಷಕನಾಗಿದ್ದ ಮುಚುಕುಂದನಿಗೆ ಹೇಳಿದರು :

"ಮುಚುಕುಂದಮಹಾರಾಜ! ನೀನು ಇದುವರೆಗೂ ನಮ್ಮ ಪ್ರಾರ್ಥನೆ ಯಂತೆ ನಮ್ಮನ್ನು ಅಸುರರ ಉಪಟಳದಿಂದ ರಕ್ಷಿಸಿರುವೆ. ಈಗ ನಮಗೆ ಸೇನಾನಾಯಕನಾಗಿ ಕಾರ್ತಿಕೇಯನು ಬಂದಿರುತ್ತಾನೆ. ಇನ್ನು ನಮಗೆ ಅಸುರರಿಂದ ಭಯವಿರುವುದಿಲ್ಲ. ಆದುದರಿಂದ ನೀನಿನ್ನು ವಿಶ್ರಾಂತಿಯನ್ನು ತೆಗೆದುಕೊಳ್ಳಬಹುದು. ಮಹಾನುಭಾವನಾದ ನೀನು ನಮ್ಮನ್ನು ರಕ್ಷಿಸುವ ಸಲುವಾಗಿ ಯಾವ ವಿಧವಾದ ಈತಿ-ಬಾಧೆಗಳೂ ಇಲ್ಲದಿದ್ದ ಸಾಮ್ರಾಜ್ಯ ವನ್ನೂ ಭೂಲೋಕದ ಸಮಸ್ತವಾದ ಕಾಮೋಪಭೋಗಗಳನ್ನೂ ಪರಿತ್ಯಜಿಸಿ ಇಲ್ಲಿಗೆ ಆಗಮಿಸಿದೆ. ಈಗ ಭೂಲೋಕದಲ್ಲಿ ನಿನ್ನ ಕಾಲದಲ್ಲಿದ್ದ ನಿನ್ನ ಪತ್ನಿಯರಾಗಲೀ, ಪುತ್ರರಾಗಲೀ, ಜ್ಞಾತಿ-ಬಾಂಧವರಾಗಲೀ, ಅಮಾತ್ಯ-ಸೇನಾಪತಿಗಳಾಗಲೀ, ಪ್ರಜೆಗಳಾಗಲೀ ಯಾರೂ ಇರುವುದಿಲ್ಲ. ಎಲ್ಲರೂ ಕಾಲವಶರಾಗಿರುತ್ತಾರೆ.

ಕಾಲೋ ಬಲೀಯಾನ್ ಬಲಿನಾಂ ಭಗವಾನೀಶ್ವರೋಽವ್ಯಯಃ ।
ಪ್ರಜಾಃ ಕಾಲಯತೇ ಕ್ರೀಡನ್ ಪಶುಪಾಲೋ ಯಥಾ ಪಶೂನ್ ॥

ಕಾಲನೆಂಬುವನು ಸಮಸ್ತಬಲಿಷ್ಠರಿಗಿಂತಲೂ ಅತ್ಯಂತಬಲಿಷ್ಠನಾಗಿರ ತಕ್ಕವನು. ಅವನು ಅವಿನಾಶಿಯೂ ಭಗವತ್ಸ್ವರೂಪನೂ ಆಗಿದ್ದಾನೆ. ದನ ಗಳನ್ನು ಕಾಯುವ ಗೊಲ್ಲನು ಹಸುಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿರು ವಂತೆ ಕಾಲನು ಆಡಾಡುತ್ತಲೇ ಸಮಸ್ತಪ್ರಜಾಕೋಟಿಯನ್ನೂ ತನ್ನ ಅಧೀನ ದಲ್ಲಿಟ್ಟುಕೊಂಡಿರುತ್ತಾನೆ. ಮುಚುಕುಂದಮಹಾರಾಜ! ನಿನಗೆ ಮಂಗಳ ವಾಗಲಿ. ಮೋಕ್ಷಪದವಿಯನ್ನೊಂದನ್ನುಳಿದು ಬೇರೆ ಯಾವುದೇ ವರವನ್ನಾ ದರೂ ನೀನು ನಮ್ಮಿಂದ ಕೇಳಿ ಪಡೆದುಕೊಳ್ಳಬಹುದು. ಏಕೆಂದರೆ ಕೈವಲ್ಯ ಪದವಿಯನ್ನು ದಯಪಾಲಿಸುವ ಸಾಮರ್ಥ್ಯವು ನಮಗಿರುವುದಿಲ್ಲ.

ಏಕ ಏವೇಶ್ವರಸ್ತಸ್ಯ ಭಗವಾನ್ ವಿಷ್ಣುರವ್ಯಯಃ ॥೨೦॥

ಕೈವಲ್ಯಪದವಿಗೆ ಅವಿನಾಶಿಯೂ ಭಗವಂತನೂ ಆಗಿರುವ ವಿಷ್ಣು ವೊಬ್ಬನೇ ಈಶ್ವರನಾಗಿರುತ್ತಾನೆ. ಅವನೊಬ್ಬನೇ ಕೈವಲ್ಯಪದವಿಯನ್ನು ದಯಪಾಲಿಸಲು ಸಮರ್ಥನಾದವನು."

ಹೀಗೆಂದು ದೇವತೆಗಳಿಂದ ಹೇಳಲ್ಪಟ್ಟ ಮಹಾಯಶಸ್ವಿಯಾದ

ಮುಚುಕುಂದನು ದೇವತೆಗಳನ್ನು ಅಭಿನಂದಿಸಿ ಅವರನ್ನು ಕಳುಹಿಸಿ ಕೊಟ್ಟನು. ರಾಜನು ಬಹಳವಾಗಿ ದಣಿದಿದ್ದುದರಿಂದ ನಿದ್ರೆಯನ್ನೇ ವರವನ್ನಾಗಿ ಬೇಡಿದನು. ದೇವತೆಗಳು ಇತ್ತಿದ್ದ ವರರೂಪವಾದ ನಿದ್ರೆಯಿಂದ ಸಮಾಧಾನಹೊಂದಿ ಮುಚುಕುಂದನು ಪರ್ವತದಲ್ಲಿದ್ದ ಗುಹೆಯೊಂದನ್ನು ಪ್ರವೇಶಿಸಿ ಅಲ್ಲಿ ಮಲಗಿಬಿಟ್ಟನು. ಮುಚುಕುಂದನಿಗೆ ದೇವತೆಗಳಿತ್ತಿದ್ದ ವರವು ಈ ರೂಪದಲ್ಲಿದ್ದಿತು :

ಸ್ವಾಪಂ ಯಾತಂ ಯಸ್ತು ಮಧ್ಯೇ ಬೋಧಯೇತ್ತ್ವಾಮಚೇತನಃ ।
ಸ ತ್ವಯಾ ದೃಷ್ಟಮಾತ್ರಸ್ತು ಭಸ್ಮೀಭವತು ತತ್ಕ್ಷಣಾತ್ ॥೨೨॥

"ನೀನು ಮಲಗಿ ನಿದ್ರಿಸುತ್ತಿರುವಾಗ ಮಧ್ಯದಲ್ಲಿ ಯಾವ ಮೂರ್ಖನು ನಿನ್ನನ್ನು ಎಚ್ಚರಗೊಳಿಸುವನೋ ಅವನು ನಿನ್ನಿಂದ ನೋಡಲ್ಪಟ್ಟೊಡನೆಯೇ ಆ ಕ್ಷಣದಲ್ಲಿಯೇ ಬೂದಿಯಾಗಿ ಹೋಗಲಿ."*

---

* ಈ ಶ್ಲೋಕವು ಮೂಲದಲ್ಲಿಲ್ಲವೆಂದೂ ಹಳೆಯ ಪ್ರತಿಗಳ ಟಿಪ್ಪಣಿಯಲ್ಲಿರುವುದೆಂದೂ ಕೆಲವರು ವ್ಯಾಖ್ಯಾನಕಾರರು ಈ ಶ್ಲೋಕವನ್ನು ಮೂಲದಲ್ಲಿ ಉದ್ಧರಿಸಿರುವುದಿಲ್ಲ. ಈ ಪರ್ಯಾಯದಲ್ಲಿ ಇಲ್ಲೊಂದು ಅಧಿಕಪಾಠವೂ ಇದೆ.

ಏವಮುಕ್ತಃ ಸ ವೈ ದೇವಾನಭಿವಾದ್ಯ ಮಹಾಯಶಾಃ ।

ಹೀಗೆಂದು ದೇವತೆಗಳಿಂದ ಹೇಳಲ್ಪಟ್ಟ ಮಹಾಯಶಸ್ವಿಯಾದ ಮುಚುಕುಂದನು

ನಿದ್ರಾಮೇವ ತತೋ ವವ್ರೇ ಸ ರಾಜಾ ಶ್ರಮಕರ್ಶಿತಃ ।
ಯಃ ಕಶ್ಚಿನ್ಮಮ ನಿದ್ರಾಯಾ ಭಙ್ಗಂ ಕುರ್ಯಾತ್ಸುರೋತ್ತಮಾಃ ।
ಸ ಹಿ ಭಸ್ಮೀಭವೇದಾಶು ತಥೋಕ್ತಶ್ಚ ಸುರೈಸ್ತದಾ ॥

ಆಯಾಸಗೊಂಡಿದ್ದ ಮುಚುಕುಂದನು ತಾನು ಸುಖವಾಗಿ ನಿದ್ರಿಸಬೇಕೆಂದೂ ತನ್ನ ನಿದ್ರೆಯನ್ನು ಭಂಗಗೊಳಿಸಿದವನು ಕೂಡಲೇ ಭಸ್ಮವಾಗಬೇಕೆಂದೂ ವರವನ್ನು ಬೇಡಲು ದೇವತೆಗಳು ಹಾಗೆಯೇ ಆಗಲೆಂದರು. ಮೂಲದಲ್ಲಿ ಕೊಟ್ಟಿರುವ 'ಸ್ವಾಪಂ ಯಾತಂ' ಎಂಬ ಶ್ಲೋಕದಲ್ಲಿ 'ನಿದ್ರೆಗೆ ಭಂಗತಂದವನು ಭಸ್ಮವಾಗಲಿ'–ಎಂಬ ವರವನ್ನು ದೇವತೆಗಳು ತಾವಾಗಿಯೇ ಕೊಟ್ಟರೆಂಬ ಅಭಿಪ್ರಾಯವು ಆ ಶ್ಲೋಕದಲ್ಲಿ ಕಂಡುಬರುತ್ತದೆ. ಅಧಿಕಪಾಠದಲ್ಲಿ ಮುಚುಕುಂದನು ಬೇಡಿದನಂತರ ದೇವತೆಗಳು ಆ ವರವನ್ನು ಕೊಟ್ಟರೆಂಬ ಅಭಿಪ್ರಾಯವು ಬರುತ್ತದೆ. ದೇವತೆಗಳು ತಾವಾಗಿಯೇ ಕೊಟ್ಟರೂ ಮುಚುಕುಂದನಿಂದ ಪ್ರಾರ್ಥಿಸಲ್ಪಟ್ಟು ಆ ವರವನ್ನು ಕೊಟ್ಟಿದ್ದರೂ ಪರಿಣಾಮವು ಒಂದೇ ಆಗುತ್ತದೆ. ಆದರೆ ೨೦ನೆಯ ಶ್ಲೋಕದಲ್ಲಿ ವರವನ್ನು ಕೇಳುವಂತೆ ದೇವತೆಗಳು ಮುಚುಕುಂದನಿಗೆ ಹೇಳುತ್ತಾರೆ. 'ವರಂ

ಕಾಲಯವನನು ಮುಚುಕುಂದನ ದೃಷ್ಟಿಗೆ ಲಕ್ಷ್ಯನಾಗಿ ಭಸ್ಮವಾಗಿ ಹೋದನಂತರ ಯದುವಂಶಶಿರೋಮಣಿಯಾದ ಭಗವಾನ್ ಶ್ರೀಕೃಷ್ಣನು ಧೀಮಂತನಾದ ಮುಚುಕುಂದನಿಗೆ ಕಾಣಿಸಿಕೊಂಡನು.

ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನು ವರ್ಷಾಕಾಲದ ಮೋಡ ದಂತೆ ಶ್ಯಾಮಲವರ್ಣನಾಗಿದ್ದನು. ರೇಷ್ಮೆಯ ಪೀತಾಂಬರವನ್ನು ಉಟ್ಟಿದ್ದನು. ವಕ್ಷಃಸ್ಥಳದಲ್ಲಿ ಶ್ರೀವತ್ಸದ ಚಿಹ್ನೆಯಿದ್ದಿತು. ಕಂಠದಲ್ಲಿ ಕೌಸ್ತುಭಮಣಿಯು ರಾರಾಜಿಸುತ್ತಿದ್ದಿತು. ಆತನು ಚತುರ್ಭುಜನಾಗಿದ್ದನು. ವೈಜಯಂತೀ*

ವೃಣೀಷ್ವ ಭದ್ರಂ ತೇ ।'–ಇದಕ್ಕೆ ಅಧಿಕಪಾಠವು ಹೊಂದಿಕೊಳ್ಳುತ್ತದೆ. ವರವನ್ನು ಕೇಳಲು ಹೇಳಿ ಮುಚುಕುಂದನು ಕೇಳದೆ ದೇವತೆಗಳೇ ವರವನ್ನು ಕೊಟ್ಟರೆಂಬ ಅಭಿಪ್ರಾಯವು 'ಸ್ವಾಪಂ ಯಾತಂ'–ಎಂಬ ಶ್ಲೋಕದಿಂದ ಉಂಟಾಗುತ್ತದೆ. ಅಧಿಕಪಾಠವನ್ನೂ ಮೂಲಪ್ರತಿಯ ಟಿಪ್ಪಣಿಯಲ್ಲಿರುವ ಸ್ವಾಪಂ ಯಾತಂ–ಎಂಬ ಶ್ಲೋಕವನ್ನೂ ಬಿಟ್ಟು ಮೂಲದಲ್ಲಿರುವಂತೆ ವ್ಯಾಖ್ಯಾನಿಸಲು ಹೋದರೆ ದೇವತೆಗಳ ವರವು ಯಾವುದೆಂಬುದೇ ಅರ್ಥವಾಗುವುದಿಲ್ಲ. 'ನಿದ್ರಯಾ ದೇವದತ್ತಯಾ' ದೇವದತ್ತವಾದ ನಿದ್ರೆಯಿಂದ ಗುಹೆಯನ್ನು ಪ್ರವೇಶಿಸಿ ನಿದ್ರಿಸಿದನು. ॥೨೧॥ ಎಂಬ ಅಂಶವು ಮಾತ್ರವೇ ಇದೆ. ಎದ್ದೊಡನೆ ಕಣ್ಣಿಗೆ ಎದುರಾಗಿ ಬಂದವನು ಭಸ್ಮವಾಗುವನೆಂಬ ಅಭಿಪ್ರಾಯವು ಇಲ್ಲಿರುವ ಶ್ಲೋಕಗಳಿಂದ ಅಭಿವ್ಯಕ್ತವಾಗುವುದಿಲ್ಲ. ಆದುದರಿಂದ ವಿರೋಧಾಭಿಪ್ರಾಯಗಳಿರುವ ಶ್ಲೋಕಗಳು ಇಲ್ಲಿ ಸೇರಿರಬಹುದು. ಮುಚುಕುಂದನ ಕಥೆಯು ಹರಿವಂಶದಲ್ಲಿಯೂ ಬರುತ್ತದೆ. ಅಲ್ಲಿ ಮುಚುಕುಂದನೇ ವರವನ್ನು ಕೇಳಿದನೆಂದು ಹೇಳಿದೆ.

ಪ್ರಸುಪ್ತಂ ಬೋಧಯೇದ್ಯೋ ಮಾಂ ತಂ ದಹೇಯಮಹಂ ಸುರಾಃ ।
ಚಕ್ಷುಷಾ ಕ್ರೋಧದೀಪ್ತೇನ ಏವಮಾಹ ಪುನಃ ಪುನಃ ॥

ಹರಿವಂಶ, ವಿಷ್ಣುಪರ್ವ-ಅಧ್ಯಾಯ ೫೭ ಶ್ಲೋಕ ೪೫

ದೇವತೆಗಳೇ! ಮಲಗಿ ನಿದ್ರಿಸುತ್ತಿರುವ ನನ್ನನ್ನು ಯಾರಾದರೂ ಎಚ್ಚರಗೊಳಿಸಿದರೆ ಕ್ರೋಧದಿಂದ ಉದ್ದೀಪ್ತವಾದ ಕಣ್ಣುಗಳಿಂದ ನಾನು ಅವನನ್ನು ಸುಟ್ಟುಹಾಕುತ್ತೇನೆ. ಇಲ್ಲಿರುವ ಅಧಿಕಪಾಠವೂ ಇದೇ ಅಭಿಪ್ರಾಯವುಳ್ಳದ್ದಾಗಿದೆ.

* ವೈಜಯಂತೀಮಾಲೆ : ತುಲಸೀಕುನ್ದಮನ್ದಾರಪಾರಿಜಾತಾಮ್ಬುಜೈಸ್ತು ಯಾ ।
ಪಞ್ಚಭಿರ್ಗ್ರಥಿತಾ ಮಾಲಾ ವೈಜಯನ್ತೀತಿ ಕಥ್ಯತೇ ॥

ತುಲಸೀ, ಕುಂದ, ಮಂದಾರ, ಪಾರಿಜಾತ, ಕಮಲ. ಈ ಐದು ಪುಷ್ಪಗಳನ್ನು ಸೇರಿಸಿ ಪೋಣಿಸಿ ಸಿದ್ಧಪಡಿಸಿದ ಮಾಲೆಗೆ ವೈಜಯಂತೀಮಾಲೆಯೆಂದು ಹೆಸರು.

ಮಾಲೆಯನ್ನು ಧರಿಸಿ ದೇದೀಪ್ಯಮಾನನಾಗಿ ಕಾಣುತ್ತಿದ್ದನು. ಸುಂದರವೂ ಪ್ರಸನ್ನವೂ ಆದ ಮುಖಾರವಿಂದದಿಂದ ಬೆಳಗುತ್ತಿದ್ದನು. ಅವನ ಕರ್ಣ ಕುಂಡಲಗಳು ಝುಗ-ಝುಗಿಸುತ್ತಿದ್ದುವು. ಪ್ರೇಮದಿಂದ ಕೂಡಿದ ಮಂದ ಹಾಸದಿಂದಲೂ ಕಟಾಕ್ಷವೀಕ್ಷಣದಿಂದಲೂ ಮನೋಹರನಾಗಿದ್ದ ಅವನು ಲೋಕದ ಸಮಸ್ತಜನರಿಗೂ ಪ್ರೇಕ್ಷಣೀಯನಾಗಿದ್ದನು. ಯೌವನಾವಸ್ಥೆ ಯಲ್ಲಿದ್ದು ಮದಿಸಿದ ಸಿಂಹದಂತೆ ಗಂಭೀರವಾದ ನಡಿಗೆಯುಳ್ಳವನಾಗಿದ್ದನು. ಅಂತಹ ಪರಮಪುರುಷನನ್ನು ನೋಡಿ ಅವನ ತೇಜಸ್ಸಿನಿಂದ ತಿರಸ್ಕರಿಸಲ್ಪಟ್ಟ ಮುಚುಕುಂದಮಹಾರಾಜನು, ತನ್ನ ಅಪಾರವಾದ ತೇಜಸ್ಸಿನಿಂದ ಎದುರಿಸಲು ಅಸಾಧ್ಯನಾದವನಂತೆ ಕಾಣುತ್ತಿರುವವನು ಯಾರಾಗಿರಬಹುದೆಂಬುದನ್ನು ಶಂಕಿಸುತ್ತಾ ಮೆಲ್ಲ-ಮೆಲ್ಲನೆ ಹೇಳಿದನು :

"ನೀನು ಯಾರಪ್ಪ! ಮುಳ್ಳು-ಕಲ್ಲುಗಳಿಂದ ವ್ಯಾಪ್ತವಾಗಿರುವ ಈ ಅರಣ್ಯಕ್ಕೆ ತಾವರೆಯ ಎಲೆಗಳಂತೆ ಮೃದುವಾದ ಪಾದಗಳನ್ನು ಹೊಂದಿರುವ ನೀನು ನಡೆದುಕೊಂಡೇಕೆ ಬಂದೆ? ಪರ್ವತದ ಈ ಗುಹೆಯಲ್ಲಾದರೂ ನಿನಗೇನು ಕಾರ್ಯವಿದ್ದಿತು? ಮೂರ್ತಿಮತ್ತಾಗಿ ಬಂದಿರುವ ತೇಜಸ್ವಿಗಳ ತೇಜಸ್ಸೇ ನೀನಾಗಿರುವೆಯಾ? ನೀನೇನಾದರೂ ಭಗವಂತನಾದ ಅಗ್ನಿ ದೇವನೇ? ಸೂರ್ಯ-ಚಂದ್ರ-ಮಹೇಂದ್ರರಲ್ಲಿ ನೀನು ಯಾರಾದರೂ ಆಗಿರು ವೆಯಾ? ಲೋಕಪಾಲಕರಲ್ಲಿ ನೀನೊಬ್ಬನಾಗಿರುವೆಯಾ? ದೇವತೆಗಳಿಗೂ ದೇವತೆಗಳಾಗಿರುವ ಬ್ರಹ್ಮ-ವಿಷ್ಣು-ಮಹೇಶ್ವರರಲ್ಲಿ ನೀನು ಪುರುಷೋತ್ತಮ ನಾದ ನಾರಾಯಣನೆಂದು ಭಾವಿಸಿದ್ದೇನೆ. ಜಾಜ್ವಲ್ಯಮಾನವಾದ ಒಂದು ದೀಪವು ತನ್ನ ಪ್ರಭೆಯಿಂದ ಕತ್ತಲನ್ನು ಹೋಗಲಾಡಿಸುವಂತೆ ನಿನ್ನ ಶರೀರ ಕಾಂತಿಯಿಂದಲೇ ನೀನು ಈ ಗುಹೆಯ ಕತ್ತಲನ್ನು ಹೋಗಲಾಡಿಸುತ್ತಿರುವೆ. ಪುರುಷಶ್ರೇಷ್ಠನೇ! ನಿನಗೆ ಉಚಿತವೆನಿಸಿದರೆ ನಮಗೆ ನಿನ್ನ ಗೋತ್ರ, ಜನ್ಮ, ಕರ್ಮಗಳನ್ನು ಹೇಳು. ನಾವು ಶುದ್ಧವಾದ ಮನಸ್ಸಿನಿಂದ ನಿನ್ನ ಕುಲ-ಗೋತ್ರ ಗಳನ್ನು ಕೇಳಲು ಬಯಸುತ್ತೇವೆ. ನಮ್ಮ ವಿಷಯವನ್ನು ಕೇಳಬಯಸುವು ದಾದರೆ ಕೇಳು ; ಈಗಲೇ ಹೇಳಿಬಿಡುತ್ತೇನೆ. ನಾವು ಇಕ್ಷ್ವಾಕುವಂಶೀಯ ಕ್ಷತ್ರಿಯರು. ಮುಚುಕುಂದನೆಂದು ನನ್ನ ಹೆಸರು. ಯುವನಾಶ್ವನ ಮಗನಾದ ಮಾಂಧಾತನ ಮಗನಾಗಿದ್ದೇನೆ. ಪ್ರಭುವೇ! ನಾನು ಹಲವಾರು ವರ್ಷಗಳು

ನಿದ್ರೆಯೇ ಇಲ್ಲದೆ ಬಹಳವಾಗಿ ಆಯಾಸಗೊಂಡಿದ್ದೆನು. ಆಯಾಸಪರಿಹಾರಕ್ಕಾಗಿ ನಿರ್ಜನವಾಗಿದ್ದ ಈ ಗುಹೆಯಲ್ಲಿ ಮಲಗಿದೆನು. ವರದಿಂದ ಪ್ರಾಪ್ತವಾದ ನಿದ್ರೆಯಿಂದಾಗಿ ನನ್ನ ಇಂದ್ರಿಯಗಳೆಲ್ಲವೂ ಸುಪ್ತವಾಗಿಬಿಟ್ಟಿದ್ದುವು. ಈಗ ತಾನೇ ನನ್ನನ್ನು ಯಾರೋ ಎಚ್ಚರಗೊಳಿಸಿಬಿಟ್ಟರು. ತಾನು ಮಾಡಿದ್ದ ಪಾಪದ ಫಲವಾಗಿಯೇ ನನ್ನನ್ನು ಎಚ್ಚರಗೊಳಿಸಿದ ಆ ವ್ಯಕ್ತಿಯೂ ಭಸ್ಮವಾಗಿ ಹೋದನು. ಅನಂತರ ಶತ್ರುನಾಶಕನಾದ ಕಡುಚೆಲುವನಾದ ನೀನು ನನಗೆ ಕಾಣಿಸಿಕೊಂಡೆ. ನಿನ್ನ ಸಹಿಸಲಶಕ್ಯವಾದ ಭವ್ಯತೇಜಸ್ಸಿನಿಂದಾಗಿ ನಿನ್ನನ್ನು ದಿಟ್ಟಿಸಿ ನೋಡಲೂ ನನಗೆ ಸಾಧ್ಯವಾಗುತ್ತಿಲ್ಲ. ನಿನ್ನ ತೇಜಸ್ಸಿನ ಮುಂದೆ ನನ್ನ ತೇಜಸ್ಸು ಉಡುಗಿಹೋಗಿಬಿಟ್ಟಿದೆ. ಸಕಲಪ್ರಾಣಿಗಳಿಗೂ ನೀನು ಪೂಜ್ಯನಾಗಿರುವೆ."

ಪರೀಕ್ಷಿತಮಹಾರಾಜ! ಮುಚುಕುಂದಮಹಾರಾಜನು ಹೀಗೆ ಹೇಳಲು ಪ್ರಾಣಿಗಳ ನಿಯಾಮಕನಾದ ಪೂಜ್ಯನಾದ ಶ್ರೀಕೃಷ್ಣನು ನಗುತ್ತಾ ಮೇಘದಂತೆ ಗಂಭೀರವಾದ ಧ್ವನಿಯಿಂದ ಕೂಡಿದ ವಾಣಿಯಿಂದ ಮುಚುಕುಂದನಿಗೆ ಪ್ರತ್ಯುತ್ತರಿಸಿದನು:

ಜನ್ಮಕರ್ಮಾಭಿಧಾನಾನಿ ಸನ್ತಿ ಮೇಽಙ್ಗ ಸಹಸ್ರಶಃ ।
ನ ಶಕ್ಯನ್ತೇಽನುಸಂಖ್ಯಾತುಮನನ್ತತ್ವಾನ್ಮಯಾಪಿ ಹಿ ॥೩೭॥

"ಪ್ರಿಯಮುಚುಕುಂದನೇ! ನನ್ನ ಜನ್ಮ, ಕರ್ಮ ಮತ್ತು ನಾಮಧೇಯಗಳು ಸಾವಿರ-ಸಾವಿರ ಸಂಖ್ಯೆಗಳಲ್ಲಿವೆ. ಅವುಗಳು ಅಸಂಖ್ಯಾತವಾಗಿರುವುದರಿಂದ ಅವುಗಳನ್ನು ವಿವರಿಸಿ ಹೇಳಲು ನನಗೂ ಶಕ್ಯವಿಲ್ಲ.

ಕ್ವಚಿದ್ರಜಾಂಸಿ ವಿಮಮೇ ಪಾರ್ಥಿವಾನ್ಯುರುಜನ್ಮಭಿಃ ।
ಗುಣಕರ್ಮಾಭಿಧಾನಾನಿ ನ ಮೇ ಜನ್ಮಾನಿ ಕರ್ಹಿಚಿತ್ ॥೩೮॥

ಯಾವನಾದರೂ ಮನುಷ್ಯನು ಹಲವಾರು ಜನ್ಮಗಳನ್ನಾದರೂ ಪಡೆದು ಭೂಮಿಯಲ್ಲಿರುವ ಧೂಳಿನ ಕಣಗಳನ್ನಾದರೂ ಎಣಿಸಬಹುದು. ಆದರೆ ನನ್ನ ಜನ್ಮ-ಗುಣ-ಕರ್ಮ-ನಾಮಗಳನ್ನು ಯಾರೇ ಆದರೂ ಯಾವಾಗಲಾದರೂ ಎಣಿಕೆಮಾಡುವ ಅಥವಾ ತಿಳಿಯುವ ಸಾಧ್ಯತೆಯೇ ಇಲ್ಲ.

ಕಾಲತ್ರಯೋಪಪನ್ನಾನಿ ಜನ್ಮಕರ್ಮಾಣಿ ಮೇ ನೃಪ ।
ಅನುಕ್ರಮನ್ತೋ ನೈವಾನ್ತಂ ಗಚ್ಛನ್ತಿ ಪರಮರ್ಷಯಃ ॥೩೯॥

ಮಹಾರಾಜ! ಸನಕ-ಸನಂದನ ಇವರೇ ಮೊದಲಾದ ಮಹರ್ಷಿಗಳು ನನ್ನ ತ್ರಿಕಾಲಸಿದ್ಧವಾದ ಜನ್ಮ-ಕರ್ಮಗಳನ್ನು ವರ್ಣನೆಮಾಡುತ್ತಲೇ ಇರು ತ್ತಾರೆ. ಆದರೆ ಅದರ ಪಾರವನ್ನು ಅವರೆಂದಿಗೂ ಮುಟ್ಟುವುದಿಲ್ಲ. ನನ್ನ ಜನ್ಮ-ಕರ್ಮಗಳಿಗೆ ಅಂತ್ಯವೆಂಬುದೇ ಇಲ್ಲ.*

ಪ್ರಿಯಮುಚುಕುಂದನೇ! ಹಾಗಿದ್ದರೂ ನಿನ್ನ ಪ್ರಾರ್ಥನೆಯಂತೆ ಈಗಿನ ನನ್ನ ಜನ್ಮ-ಕರ್ಮಗಳನ್ನೂ ನಾಮಧೇಯಗಳನ್ನೂ ವರ್ಣಿಸುತ್ತೇನೆ. ಅವಧರಿಸು. ಹಿಂದೆ ಬ್ರಹ್ಮನು, ಅಸುರರನ್ನು ಸಂಹರಿಸಿ ಭೂಭಾರವನ್ನು ಇಳಿಸಬೇಕೆಂದು ನನ್ನನ್ನು ಪ್ರಾರ್ಥಿಸಿದ್ದನು. ಚತುರ್ಮುಖನ ಪ್ರಾರ್ಥನೆ ಯಂತೆ ನಾನು ಯದುವಂಶದಲ್ಲಿ ವಸುದೇವನ ಮನೆಯಲ್ಲಿ ಅವತರಿಸಿದೆನು. ಈಗ ನಾನು ಈ ಜನ್ಮದಲ್ಲಿ ವಸುದೇವನ ಮಗನಾಗಿದ್ದೇನೆ. ಈ ಕಾರಣ ದಿಂದ ನನ್ನನ್ನು ವಾಸುದೇವನೆಂದೂ ಕರೆಯುತ್ತಾರೆ. ಈ ಜನ್ಮದಲ್ಲಿ ನಾನು ಇದುವರೆಗೆ ಕಂಸನಾಗಿ ಹುಟ್ಟಿದ್ದ ಕಾಲನೇಮಿ ಎಂಬ ಅಸುರನನ್ನೂ ಪ್ರಲಂಬನೇ ಮೊದಲಾದ ಕಂಸನ ಅನುಯಾಯಿಗಳಾದ, ಸತ್ಪುರುಷರನ್ನು ದ್ವೇಷಿಸುತ್ತಿದ್ದ ಹಲವಾರು ರಾಕ್ಷಸರನ್ನೂ ಸಂಹಾರಮಾಡಿದ್ದೇನೆ. ಈಗ ನಿನ್ನ ದೃಷ್ಟಿಗೆ ಬಿದ್ದು ಹತನಾದವನು ಕಾಲಯವನನೆಂಬ ದೈವದ್ರೋಹಿ ಯಾದ ಮ್ಲೇಚ್ಛನು. ನನ್ನ ಪ್ರೇರಣೆಯಿಂದಲೇ ಅವನು ನಿನ್ನ ದೃಷ್ಟಿಪಥಕ್ಕೆ ಸಿಕ್ಕಿ ಭಸ್ಮವಾಗಿಹೋದನು. ನಿನ್ನನ್ನು ಅನುಗ್ರಹಿಸುವ ಸಲುವಾಗಿಯೇ ನಾನು ಈ ಗುಹೆಗೆ ಬಂದಿರುತ್ತೇನೆ. ಭಕ್ತವತ್ಸಲನಾದ ನನ್ನನ್ನು ಹಿಂದೆ ನೀನು ಬಹಳವಾಗಿ ಆರಾಧಿಸಿದ್ದೆ. ನಿನಗೆ ಯಾವ ವರವು ಬೇಕೆಂಬುದನ್ನು

---

* ಶ್ರೀಕೃಷ್ಣನು ಗೀತೆಯಲ್ಲಿ :

ನ ಮೇ ವಿದುಃ ಸುರಗಣಾಃ ಪ್ರಭವಂ ನ ಮಹರ್ಷಯಃ ।
ಅಹಮಾದಿರ್ಹಿ ದೇವಾನಾಂ ಮಹರ್ಷೀಣಾಂ ಚ ಸರ್ವಶಃ ॥ (2-10)

ನನ್ನ ಹುಟ್ಟನ್ನು ದೇವತೆಗಳೂ ಋಷಿಗಳೂ ಸಹ ತಿಳಿಯರು. ಏಕೆಂದರೆ : ಅವರೆಲ್ಲರಿಗೂ ನಾನೇ ಮೂಲಕಾರಣನಾಗಿದ್ದೇನೆ.

ಹೇಳು. ನಾನು ನಿನ್ನ ಯಾವುದೇ ಕಾಮನೆಯನ್ನಾದರೂ ಪೂರ್ಣಮಾಡಿ ಕೊಡುವೆನು.

ಮಾಂ ಪ್ರಪನ್ನೋ ಜನಃ ಕಶ್ಚಿನ್ನ ಭೂಯೋऽರ್ಹತಿ ಶೋಚಿತುಮ್ ॥

ನನಗೆ ಶರಣಾಗತನಾದ ಯಾವನೊಬ್ಬನೂ ಪುನಃ ಶೋಕಪಡಬಾರದು. ಇದು ನನ್ನ ಆಶಯವಾಗಿದೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಭಗವಂತನಾದ ಶ್ರೀಕೃಷ್ಣನು ಹೀಗೆ ಹೇಳಿದ ನಂತರ ಮುಚುಕುಂದನಿಗೆ ಯದುವಂಶದಲ್ಲಿ ಭಗವಂತನು ಅವತರಿಸುವ ನೆಂದು ಹೇಳಿದ್ದ ವೃದ್ಧರಾದ ಗರ್ಗಾಚಾರ್ಯರ ಮಾತು ನೆನಪಿಗೆ ಬಂದಿತು. ನಾರಾಯಣನೇ ಶ್ರೀಕೃಷ್ಣನಾಗಿ ಅವತರಿಸಿರುವನೆಂಬುದನ್ನು ನಿಶ್ಚಯಿಸಿ ಕೊಂಡು ಮುಚುಕುಂದನು ಆನಂದಭರಿತನಾಗಿ ಶ್ರೀಕೃಷ್ಣಸ್ವಾಮಿಗೆ ನಮಸ್ಕರಿಸಿ ಹೇಳಿದನು:



ವಿಮೋಹಿತೋऽಯಂ ಜನ ಈಶ ಮಾಯಯಾ
ತ್ವದೀಯಯಾ ತ್ವಾಂ ನ ಭಜತ್ಯನರ್ಥದೃಕ್ ।
ಸುಖಾಯ ದುಃಖಪ್ರಭವೇಷು ಸಜ್ಜತೇ
ಗೃಹೇಷು ಯೋಷಿತ್ಪುರುಷಶ್ಚ ವಞ್ಚಿತಃ ॥೪೬॥

"ಈಶನೇ! ಈ ಜನವು ನಿನ್ನ ಸಂಬಂಧವಾದ ಮಾಯೆಯಿಂದ ವಿಮೋ

ಹಿತವಾಗಿ ಅನರ್ಥಕಾರಿಯಾದ ಸಂಸಾರದಲ್ಲಿಯೇ ದೃಷ್ಟಿಯನ್ನಿಟ್ಟುಕೊಂಡು ನಿನ್ನನ್ನು ಭಜಿಸುತ್ತಿಲ್ಲ. ನಿನ್ನ ಮಾಯೆಯಿಂದ ವಂಚಿತರಾದ ಸ್ತ್ರೀ-ಪುರುಷರು ಸುಖವನ್ನು ಬಯಸಿ ದುಃಖಕ್ಕೆ ಮೂಲಕಾರಣವಾದ ಮನೆ-ಮಠಗಳೆಂಬ ಮಮಕಾರದಿಂದ ಕೂಡಿದ ಸಂಸಾರದಲ್ಲಿ ಆಸಕ್ತರಾಗಿರುತ್ತಾರೆ.

ಲಬ್ಧ್ವಾ ಜನೋ ದುರ್ಲಭಮತ್ರ ಮಾನುಷಂ
ಕಥಂಚಿದವ್ಯಙ್ಗಮಯತ್ನತೋಽನಘ ।
ಪಾದಾರವಿನ್ದಂ ನ ಭಜತ್ಯಸನ್ಮತಿ-
ರ್ಗೃಹಾನ್ಧಕೂಪೇ ಪತಿತೋ ಯಥಾ ಪಶುಃ ॥೪೭॥

ಪಾಪರೂಪವಾದ ಸಂಸಾರದಿಂದ ಸರ್ವಥಾ ರಹಿತನಾಗಿರುವ ಪ್ರಭುವೇ! ಈ ಭೂಮಿಯು ಅತ್ಯಂತಪವಿತ್ರವಾದ ಕರ್ಮಭೂಮಿಯಾಗಿದೆ. ಇಲ್ಲಿ ಮನುಷ್ಯಜನ್ಮವು ಲಭಿಸುವುದು ಅತ್ಯಂತದುರ್ಲಭವೇ ಸರಿ. ಅಂಗಲೋಪವಿಲ್ಲದ ಮನುಷ್ಯಶರೀರವನ್ನು ಪ್ರಯತ್ನವಿಲ್ಲದೆ ಹೇಗೋ ಹೊಂದಿಯೂ ಸದ್ಬುದ್ಧಿಯಿಲ್ಲದ ಜನವು ನಿನ್ನ ಪಾದಾರವಿಂದವನ್ನು ಸೇವಿಸುವುದಿಲ್ಲ. ಹುಲ್ಲುತಿನ್ನಲು ಹೋಗಿ ಹಸುವೊಂದು ಪಾಚಿಯಿಂದ ಮುಚ್ಚಿಹೋಗಿರುವ ಬಾವಿಯಲ್ಲಿ ಬೀಳುವಂತೆ ಮನುಷ್ಯನು ಸುಖಮಯವಾಗಿ ಕಾಣುವ ಸಂಸಾರವೆಂಬ ಕಗ್ಗತ್ತಲೆಯ ಬಾವಿಯಲ್ಲಿ ಬೀಳುತ್ತಾನೆ.

ಮಮೈಷ ಕಾಲೋಽಜಿತ ನಿಷ್ಫಲೋ ಗತೋ
ರಾಜ್ಯಶ್ರಿಯೋನ್ನದ್ಧಮದಸ್ಯ ಭೂಪತೇಃ ।
ಮರ್ತ್ಯಾತ್ಮಬುದ್ಧೇಃ ಸುತದಾರಕೋಶಭೂ-
ಷ್ವಾಸಜ್ಜಮಾನಸ್ಯ ದುರನ್ತಚಿನ್ತಯಾ ॥೪೮॥

ಅಜಿತನೇ! ಪ್ರಭುವೇ! ನಾನೊಬ್ಬ ರಾಜನಾಗಿದ್ದೆನು. ಸಂಪತ್ಸಮೃದ್ಧವಾದ ರಾಜ್ಯಲಕ್ಷ್ಮಿಯನ್ನು ಪಡೆದು ಮದಿಸಿದ್ದೆನು. ದೇಹಾತ್ಮಬುದ್ಧಿಯುಳ್ಳವನಾಗಿದ್ದೆನು. ಪತ್ನೀ-ಪುತ್ರರು-ಭಂಡಾರ-ರಾಜ್ಯ-ಐಶ್ವರ್ಯ– ಇತ್ಯಾದಿಗಳಲ್ಲಿಯೇ ಸರ್ವದಾ ಆಸಕ್ತನಾಗಿದ್ದೆನು. ಹಗಲು-ರಾತ್ರಿಗಳಲ್ಲಿಯೂ ನನಗೆ ಅವುಗಳದ್ದೇ ಚಿಂತೆಯಾಗಿತ್ತು. ಹೀಗಾಗಿ ಇದುವರೆಗಿನ ನನ್ನ ಜೀವನವು ವ್ಯರ್ಥವಾಗಿಹೋಯಿತು.

ಕಲೇವರೇಽಸ್ಮಿನ್ ಘಟಕುಡ್ಯಸಂನಿಭೇ
ನಿರೂಢಮಾನೋ ನರದೇವ ಇತ್ಯಹಮ್ ।
ವೃತೋ ರಥೇಭಾಶ್ವಪದಾತ್ಯನೀಕಪೈ-
ರ್ಗಾಂ ಪರ್ಯಟಂಸ್ತ್ವಾಗಣಯನ್ ಸುದುರ್ಮದಃ ॥೪೯॥

ದೇವದೇವನೇ! ಮಡಕೆಗೂ ಗೋಡೆಗೂ ಸಮಾನವಾಗಿರುವ ಈ ದೇಹ ದಲ್ಲಿ ನಾನು ನೆಲೆಗೊಂಡು ಅಭಿಮಾನವುಳ್ಳವನಾಗಿ, ಮಾನವರೆಲ್ಲರಿಗೂ ರಾಜನಾಗಿರುವೆನೆಂದು ಭಾವಿಸಿಕೊಂಡು, ರಥ-ಗಜಾಶ್ವ-ಪದಾತಿಗಳೆಂಬ ಚತುರಂಗಬಲದಿಂದ ಸಮಾವೃತನಾಗಿ ಪ್ರಪಂಚವನ್ನೆಲ್ಲಾ ಗೆಲ್ಲಬೇಕೆಂಬ ದುರಭಿಮಾನದಿಂದ ಭೂಮಿಯಲ್ಲಿ ಅಲೆದಾಡುತ್ತಿದ್ದೆನು. ಹೀಗೆ ಮದಾಂಧ ನಾಗಿದ್ದ ನಾನು ಒಮ್ಮೆಯಾದರೂ ನಿನ್ನ ವಿಷಯವಾಗಿ ಯೋಚಿಸಲೇ ಇಲ್ಲ.

ಪ್ರಮತ್ತಮುಚ್ಚೈರಿತಿಕೃತ್ಯಚಿನ್ತಯಾ
ಪ್ರವೃದ್ಧಲೋಭಂ ವಿಷಯೇಷು ಲಾಲಸಮ್ ।
ತ್ವಮಪ್ರಮತ್ತಃ ಸಹಸಾಭಿಪದ್ಯಸೇ
ಕ್ಷುಲ್ಲೇಲಿಹಾನೋಽಹಿರಿವಾಖುಮನ್ತಕಃ ॥೫೦॥

'ಆ ರಾಜ್ಯವನ್ನು ಗೆಲ್ಲಬೇಕು. ಅವನ ಬೊಕ್ಕಸವನ್ನು ಅಪಹರಿಸ ಬೇಕು'–ಇವೇ ಮುಂತಾದ ಆಲೋಚನೆಗಳಿಂದ ಹೆಚ್ಚಿಸಿಕೊಂಡ ಆಶೆಯುಳ್ಳ ವನಾಗಿ, ಯಾವಾಗಲೂ ವಿಷಯಸುಖಗಳಲ್ಲಿಯೇ ಆಸಕ್ತನಾದ ಅತಿಯಾಗಿ ಪ್ರಮಾದಕ್ಕೆ ವಶನಾಗಿರುವ ಮನುಷ್ಯನನ್ನು ನೀನು, ಅಪ್ರಮತ್ತನಾದ ಅಂತಕನಾಗಿ–ಹಸಿವಿನಿಂದ ಕಟವಾಯಿಗಳನ್ನು ಸವರಿಕೊಳ್ಳುತ್ತಾ ಇಲಿಯನ್ನು ಹಿಡಿಯುವ ಹಾವಿನಂತೆ–ಬೇಗನೆ ಹಿಡಿದುಬಿಡುವೆ.

ಪುರಾ ರಥೈರ್ಹೇಮಪರಿಷ್ಕೃತೈಶ್ಚರನ್
ಮತಙ್ಗಜೈರ್ವಾ ನರದೇವಸಂಜ್ಞಿತಃ ।
ಸ ಏವ ಕಾಲೇನ ದುರತ್ಯಯೇನ ತೇ
ಕಲೇವರೋ ವಿಟ್ಕೃಮಿಭಸ್ಮಸಂಜ್ಞಿತಃ ॥೫೧॥

ಹಿಂದೆ ಸುವರ್ಣಾಭರಣಗಳಿಂದ ಸಮಲಂಕೃತವಾದ ರಥಗಳಲ್ಲಿ ಅಥವಾ ಚಿನ್ನದ ಅಂಬಾರಿಯಿರುವ ಮದಿಸಿದ ಆನೆಗಳ ಮೇಲೆ ಕುಳಿತು ನರದೇವನೆಂಬ

ಅಭಿಧಾನವನ್ನು ಪಡೆದು ಪ್ರಪಂಚವನ್ನೆಲ್ಲಾ ಪರ್ಯಟನೆಮಾಡುತ್ತಿದ್ದ ಶರೀರವು, ನಾಶವಾಗಿಹೋಗಲು ಅಶಕ್ಯನಾದ ನಿನ್ನ ಕಾಲಕ್ಕೆ ಪರವಶವಾಗಿ, ಪಕ್ಷಿಗಳ ವಿಷ್ಠೆಯೋ, ಹುಳುವೋ ಅಥವಾ ಭಸ್ಮವೋ ಆಗಿಬಿಡುತ್ತದೆ.*

ನಿರ್ಜಿತ್ಯ ದಿಕ್ಚಕ್ರಮಭೂತವಿಗ್ರಹೋ
ವರಾಸನಸ್ಥಃ ಸಮರಾಜವನ್ದಿತಃ ।
ಗೃಹೇಷು ಮೈಥುನ್ಯಸುಖೇಷು ಯೋಷಿತಾಂ
ಕ್ರೀಡಾಮೃಗಃ ಪೂರುಷ ಈಶ ನೀಯತೇ ॥೫೨॥

ಪ್ರಭುವೇ! ಒಬ್ಬ ಚಕ್ರವರ್ತಿಯು ಸಮುದ್ರಾಂತವಾದ ಭೂಮಂಡಲ ವನ್ನು ನಾಲ್ಕು ದಿಕ್ಕುಗಳಲ್ಲಿಯೂ ಜಯಿಸುತ್ತಾನೆ. ಅವನನ್ನು ಎದುರಿಸಿ ಯುದ್ಧಮಾಡುವವರೇ ಪ್ರಪಂಚದಲ್ಲಿ ಯಾರೂ ಇರುವುದಿಲ್ಲ. ಅವನು ಸಿಂಹಾಸನದ ಮೇಲೆ ಕುಳಿತಾಗ ಅವನಿಗೆ ಸಮಾನರಾದ ಮತ್ತು ಸಾಮಂತ ರಾದ ರಾಜರು ನತಶಿರರಾಗಿ ಕಪ್ಪಕಾಣಿಕೆಗಳನ್ನು ಒಪ್ಪಿಸುತ್ತಾರೆ. ಅಂತಹ ರಾಜಾಧಿರಾಜನು ಗ್ರಾಮ್ಯಸುಖಗಳಿಗೆ ನೆಲೆಯಾಗಿರುವ ಮನೆಗಳಲ್ಲಿ ಹೆಂಗಸರ ಆಟದ ಪಶುವಾಗಿಬಿಡುತ್ತಾನೆ. ವಿಷಯಸುಖದ ಅಭಿಲಾಷೆಯಿಂದ ಪತ್ನಿಗೆ ದಾಸನಾಗಿಬಿಡುತ್ತಾನೆ.

ಕರೋತಿ ಕರ್ಮಾಣಿ ತಪಸ್ಸುನಿಷ್ಠಿತೋ
ನಿವೃತ್ತಭೋಗಸ್ತದಪೇಕ್ಷಯಾ ದದತ್ ।
ಪುನಶ್ಚ ಭೂಯೇಯಮಹಂ ಸ್ವರಾಡಿತಿ
ಪ್ರವೃದ್ಧತರ್ಷೋ ನ ಸುಖಾಯ ಕಲ್ಪತೇ ॥೫೩॥

ಕೆಲವರು ವಿಷಯೋಪಭೋಗಗಳೆಲ್ಲವನ್ನೂ ಪರಿತ್ಯಾಗಮಾಡಿ ತಪೋ ನಿಷ್ಠರಾಗಿ ಹಲವಾರು ದಾನಕರ್ಮಗಳನ್ನೂ ಯಜ್ಞಕರ್ಮಗಳನ್ನೂ ಮಾಡು

---

* ಸತ್ತುಹೋದ ಪ್ರಾಣಿಯನ್ನು ಹಾಗೆಯೇ ಬಿಸಾಡುವುದರಿಂದ ಅದನ್ನು ರಣಹದ್ದು-ಗಿಡಗ–ಇವೇ ಮುಂತಾದ ಪಕ್ಷಿಗಳು ಕುಕ್ಕಿ ತಿನ್ನುತ್ತವೆ. ಆ ಶರೀರವು ಅವುಗಳ ಮಲವಾಗಿ ಪರಿಣಮಿಸುತ್ತದೆ. ಭೂಮಿಯಲ್ಲಿ ಹೂಳುವುದರಿಂದ ಅದರಲ್ಲಿಯೇ ಹುಳುಗಳು ಹುಟ್ಟಿಕೊಂಡು ಆ ಶರೀರವನ್ನು ತಿಂದುಹಾಕುತ್ತವೆ. ಸತ್ತದೇಹವನ್ನು ಸುಟ್ಟುಹಾಕುವುದರಿಂದ ಅದು ಭಸ್ಮವಾಗುತ್ತದೆ.

ತ್ತಾರೆ. ಆದರೆ ಅವರ ಆ ತಪಸ್ಸಿನ ಸಂಕಲ್ಪವು–‘ಪುನಶ್ಚ ಭೂಯೇಯ ಮಹಂ ಸ್ವರಾಟ್’ ‘ನಾನು ಪುನಃ ಚಕ್ರವರ್ತಿಯಾಗಬೇಕು’–ಎಂಬುದೇ ಆಗಿರುತ್ತದೆ. ಆದರೆ ‘ಪ್ರವೃದ್ಧತರ್ಷೋ ನ ಸುಖಾಯ ಕಲ್ಪತೇ’ ‘ವೃದ್ಧಿಹೊಂದಿದ ತೃಷ್ಣೆಯು ಸುಖಕ್ಕೆ ಕಾರಣವಾಗುವುದಿಲ್ಲ’–ಆಸೆಯು ಹೆಚ್ಚಿದಷ್ಟೂ ಅಸುಖಕ್ಕೆ ಕಾರಣವಾಗುತ್ತದೆ.

ಭವಾಪವರ್ಗೋ ಭ್ರಮತೋ ಯದಾ ಭವೇ-
ಜ್ಜನಸ್ಯ ತರ್ಹ್ಯಚ್ಯುತ ಸತ್ಸಮಾಗಮಃ ।
ಸತ್ಸಙ್ಗಮೋ ಯರ್ಹಿ ತದೈವ ಸದ್ಗತೌ
ಪರಾವರೇಶೇ ತ್ವಯಿ ಜಾಯತೇ ಮತಿಃ ॥೫೪॥

ಅಚ್ಯುತನೇ! ಜೀವವು ಅನಾದಿಕಾಲದಿಂದಲೂ ಹುಟ್ಟು-ಸಾವುಗಳೆಂಬ ಸಂಸಾರಚಕ್ರದಲ್ಲಿ ಸಿಕ್ಕಿ ಸುತ್ತುತ್ತಲೇ ಇದೆ. ಸಂಸಾರಚಕ್ರದಿಂದ ಬಿಡುಗಡೆ ಯಾಗುವ ಕಾಲವು ಹತ್ತಿರಬಂದೊಡನೆಯೇ ಆ ಜೀವಿಗೆ ಸತ್ಪುರುಷರೊಡನೆ ಸಮಾಗಮವಾಗುತ್ತದೆ. ಸತ್ಸಂಗವಾದೊಡನೆಯೇ ಕಾರ್ಯ-ಕಾರಣರೂಪ ನಾದ, ಜಗತ್ತಿಗೆ ಏಕಮಾತ್ರಸ್ವಾಮಿಯಾದ, ಸತ್ಪುರುಷರಿಗೆ ಪರಮಾಶ್ರಯ ನಾದ ನಿನ್ನನ್ನು ಸೇವೆಮಾಡಬೇಕೆಂಬ ಬುದ್ಧಿಯು ಆ ಜೀವನಿಗೆ ಉಂಟಾಗು ತ್ತದೆ.*

ಮನ್ಯೇ ಮಮಾನುಗ್ರಹ ಈಶ ತೇ ಕೃತೋ
ರಾಜ್ಯಾನುಬನ್ಧಾಪಗಮೋ ಯದೃಚ್ಛಯಾ ।
ಯಃ ಪ್ರಾರ್ಥ್ಯತೇ ಸಾಧುಭಿರೇಕಚರ್ಯಯಾ
ವನಂ ವಿವಿಕ್ಷದ್ಭಿರಖಣ್ಡಭೂಮಿಪೈಃ ॥೫೫॥

---

* ಸತ್ಸಙ್ಗತ್ವೇ ನಿಃಸಙ್ಗತ್ವಂ ನಿಃಸಙ್ಗತ್ವೇ ನಿರ್ಮೋಹತ್ವಮ್ ।
ನಿರ್ಮೋಹತ್ವೇ ನಿಶ್ಚಲತತ್ತ್ವಂ ನಿಶ್ಚಲತತ್ತ್ವೇ ಜೀವನ್ಮುಕ್ತಿಃ ॥

(ಭಜಗೋವಿಂದ ಸ್ತೋತ್ರ)

ಸತ್ಸಂಗದಿಂದ ನಿಃಸಂಗವಾಗುತ್ತದೆ. ಪ್ರಾಪಂಚಿಕ ಸುಖೋಪಭೋಗಗಳ ಕಡೆಗೆ ಮನಸ್ಸು ಹೋಗುವುದಿಲ್ಲ. ನಿಃಸಂಗದಿಂದ ಸಂಸಾರದ ಮೇಲಿನ ವ್ಯಾಮೋಹವು ಕಡಿದುಹೋಗುತ್ತದೆ. ನಿರ್ಮೋಹತ್ವದಿಂದ ನಿಶ್ಚಲವಾದ ಆತ್ಮತತ್ತ್ವವು ತಿಳಿಯುತ್ತದೆ. ಆತ್ಮತತ್ತ್ವವನ್ನು ತಿಳಿಯು ವುದರಿಂದ ಜೀವನ್ಮುಕ್ತಿಯಾಗುತ್ತದೆ.

ಸ್ವಾಮಿಯೇ! ನೀನು ನನಗೆ ಪರಮಾನುಗ್ರಹವನ್ನು ಮಾಡಿರುವೆ ಯೆಂದೇ ನಾನು ಭಾವಿಸುತ್ತೇನೆ. ನಿನ್ನ ಅನುಗ್ರಹದಿಂದಾಗಿ ಯಾವ ಪರಿಶ್ರಮವೂ ಇಲ್ಲದೆ ನನಗೆ ರಾಜ್ಯದ ಸಂಬಂಧವು ಕಡಿದುಹೋಯಿತು. ಸಾಧುಸ್ವಭಾವದ ಚಕ್ರವರ್ತಿಗಳು ಕೂಡ ರಾಜ್ಯವನ್ನು ಬಿಟ್ಟು ಏಕಾಂತದಲ್ಲಿ ನಿನ್ನನ್ನು ಕುರಿತು ಧ್ಯಾನಮಾಡುವ ಸಲುವಾಗಿ ಕಾಡಿಗೆ ಹೋಗಲು ಅಪೇಕ್ಷಿಸಿದಾಗ ಅಹಂಕಾರ-ಮಮಕಾರಗಳಿಂದ ಮುಕ್ತರಾಗಲು ನಿನ್ನನ್ನು ಬಹಳವಾಗಿ ಪ್ರಾರ್ಥಿಸುತ್ತಾರೆ.

ನ ಕಾಮಯೇಽನ್ಯಂ ತವ ಪಾದಸೇವನಾ-
ದಕಿಂಚನಪ್ರಾರ್ಥ್ಯತಮಾದ್ವರಂ ವಿಭೋ ।
ಆರಾಧ್ಯ ಕಸ್ತ್ವಾಂ ಹ್ಯಪವರ್ಗದಂ ಹರೇ
ವೃಣೀತ ಆರ್ಯೋ ವರಮಾತ್ಮಬನ್ಧನಮ್ ॥೫೬॥

ಸರ್ವವ್ಯಾಪಕನಾದ ಸ್ವಾಮಿಯೇ! ಕಡುಬಡವರಿಂದಲೂ ಪ್ರಾರ್ಥಿಸಲ್ಪಡುವ ನಿನ್ನ ಪಾದಸೇವೆಗಿಂತಲೂ ಬೇರೆಯದಾದ ಯಾವ ವರವನ್ನೂ ನಾನು ಪ್ರಾರ್ಥಿಸುವುದಿಲ್ಲ. ಸಂಸಾರಬಂಧನದಿಂದ ವಿಮುಕ್ತಗೊಳಿಸಿ ಮೋಕ್ಷವನ್ನು ನೀಡುವ ನಿನ್ನನ್ನು ಆರಾಧಿಸಿ ಯಾವ ಸಂಭಾವಿತನಾದ ಮನುಷ್ಯನು ತಾನೇ ಆತ್ಮಬಂಧನರೂಪವಾದ ವರವನ್ನು ಅಪೇಕ್ಷಿಸುತ್ತಾನೆ?

ತಸ್ಮಾದ್ವಿಸೃಜ್ಯಾಶಿಷ ಈಶ ಸರ್ವತೋ
ರಜಸ್ತಮಃಸತ್ತ್ವಗುಣಾನುಬನ್ಧನಾಃ ।
ನಿರಞ್ಜನಂ ನಿರ್ಗುಣಮದ್ವಯಂ ಪರಂ
ತ್ವಾಂ ಜ್ಞಪ್ತಿಮಾತ್ರಂ ಪುರುಷಂ ವ್ರಜಾಮ್ಯಹಮ್ ॥೫೭॥

ಆದುದರಿಂದ, ಪ್ರಭುವೇ! ನಾನು ಸತ್ತ್ವ-ರಜಸ್ತಮೋಗುಣಗಳಿಗೆ ಸಂಬಂಧಿಸಿರುವ ಸಮಸ್ತವಾದ ಕಾಮನೆಗಳನ್ನೂ ಪರಿತ್ಯಾಗಮಾಡಿ ಮಾಯೆಯ ಲೇಶಮಾತ್ರಸಂಬಂಧವೂ ಇಲ್ಲದ, ಗುಣಾತೀತನಾದ, ಅದ್ವಿತೀಯನಾದ, ಚಿತ್ಸ್ವರೂಪನಾದ, ಪರಮಪುರುಷನಾದ, ಕೇವಲ ಶುದ್ಧಚಿತ್ತನಾದ ನಿನಗೆ ಶರಣಾಗುತ್ತೇನೆ.

ಚಿರಮಿಹ ವೃಜಿನಾರ್ತಸ್ತಪ್ಯಮಾನೋಽನುತಾಪೈ-
ರವಿತೃಷಷಡಮಿತ್ರೋಽಲಬ್ಧಶಾನ್ತಿಃ ಕಥಂಚಿತ್ ।
ಶರಣದ ಸಮುಪೇತಸ್ತ್ವತ್ಪದಾಬ್ಜಂ ಪರಾತ್ಮ-
ನ್ನಭಯಮೃತಮಶೋಕಂ ಪಾಹಿ ಮಾಪನ್ನಮೀಶ ॥೫೮॥

ಪರಮೇಶ್ವರನೇ! ಅನಾದಿಕಾಲದಿಂದಲೂ ನನ್ನ ಕರ್ಮಫಲಗಳನ್ನು ಅನುಭವಿಸುತ್ತಾ ನಾನು ಆರ್ತನಾಗಿಬಿಟ್ಟಿದ್ದೇನೆ. ಆ ದುಃಖದ ಜ್ವಾಲೆಯು ನನ್ನನ್ನು ಹಗಲು-ರಾತ್ರಿಗಳೆನ್ನದೆ ದಹಿಸುತ್ತಲೇ ಇದೆ. ನನ್ನ ಆಂತರಿಕ ಆರು ಶತ್ರುಗಳು* ಯಾವಾಗಲೂ ಶಾಂತರಾಗುವುದೇ ಇಲ್ಲ. ಅವರ ವಿಷಯ ತೃಷ್ಣೆಯು ದಿನ-ದಿನಕ್ಕೂ ವೃದ್ಧಿಸುತ್ತಲೇ ಇರುತ್ತದೆ. ಈಗ ನಾನು ಭಯ-ಶೋಕ-ಮೋಹಗಳಿಂದ ರಹಿತವಾದ ನಿನ್ನ ಪಾದಕಮಲಗಳಲ್ಲಿ ಶರಣಾಗತನಾಗಿದ್ದೇನೆ. ಪರಮಾತ್ಮನೇ! ಶರಣಾಗತನಾಗಿರುವ ನನ್ನನ್ನು ರಕ್ಷಿಸು."

ಭಗವಂತನು ಹೇಳುತ್ತಾನೆ :

"ಸಾರ್ವಭೌಮ! ಮಹಾರಾಜ! ನಿನ್ನ ಬುದ್ಧಿಯು ಪರಿಶುದ್ಧವಾಗಿಯೂ ಮತ್ತು ಉನ್ನತಮಟ್ಟದಲ್ಲಿಯೂ ಇದೆ. ನಾನು ಪುನಃ ಪುನಃ ನಿನಗೆ ವರದ ಲೋಭವನ್ನು ತೋರುತ್ತಿದ್ದರೂ ನಿನ್ನ ಬುದ್ಧಿಯು ಕಾಮನೆಗಳಿಗೆ ವಶವಾಗಲಿಲ್ಲ. ನಾನು ವರಗಳನ್ನು ಕೊಡಲು ನಿನ್ನನ್ನು ಪ್ರಲೋಭಿಸಿದ್ದು ನಿನ್ನ ಬುದ್ಧಿಯು ಪ್ರಮತ್ತವಾಗಿರುವುದೋ, ಅಪ್ರಮತ್ತವಾಗಿರುವುದೋ–ಎಂಬುದನ್ನು ತಿಳಿಯುವುದಕ್ಕಾಗಿ. ನನ್ನಲ್ಲಿ ಅನನ್ಯಭಕ್ತರಾಗಿರುವವರ ಬುದ್ಧಿಯು ಯಾವಾಗಲೂ ಯಾವುದೇ ಕಾರಣದಿಂದಲೂ ಕಾಮ್ಯಕವಾದ ಆಸೆಗಳಿಂದ ಭಿನ್ನವಾಗಿ ಹೋಗುವುದಿಲ್ಲ. ನನ್ನ ಭಕ್ತರಲ್ಲದವರು ಪ್ರಾಣಾಯಾಮವೇ ಮುಂತಾದ ಯೋಗಸಾಧನೆಗಳ ಮೂಲಕ ತಮ್ಮ ಮನಸ್ಸನ್ನು ವಶದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದರೂ ಅವರ ಕರ್ಮವಾಸನೆಗಳು ಕ್ಷೀಣಿಸುವುದೇ ಇಲ್ಲ. ಆದುದರಿಂದ ಅವರ ಜಿತವಾದ ಮನಸ್ಸು

---

* ಅವಿತೃಷ ಷಡಮಿತ್ರಃ : ಆಸೆಯನ್ನು ಬಿಡದ ಆರು ಶತ್ರುಗಳು. ಆಸೆಯಡಗದ ಅರಿಷಡ್ವರ್ಗಗಳುಳ್ಳವನು. ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯಗಳನ್ನು ಅರಿಷಡ್ವರ್ಗಗಳೆಂದು ಹೇಳುತ್ತಾರೆ. ಆದರೆ ಇಲ್ಲಿ ಪಂಚೇಂದ್ರಿಯಗಳು ಮತ್ತು ಮನಸ್ಸು–ಎಂದೂ ಅರ್ಥಮಾಡಬಹುದಾಗಿದೆ.

ಕೂಡ ಕೆಲವು ವೇಳೆ ವಿಷಯಗಳ ಕಡೆಗೆ ಹಾರುವುದು ಕಂಡುಬರುತ್ತದೆ. ಮಹಾರಾಜ! ನೀನು ನನ್ನಲ್ಲಿಯೇ ನೆಲೆಗೊಳಿಸಿದ ಮನಸ್ಸುಳ್ಳವನಾಗಿ ಸ್ವೇಚ್ಛೆಯಿಂದ ಈ ಭೂಮಂಡಲದಲ್ಲಿ ಸಂಚರಿಸುತ್ತಿರು. ನನ್ನಲ್ಲಿ ನಿನಗೆ ಸ್ಥಿರವಾದ ಭಕ್ತಿಯು ನಿತ್ಯ-ನಿರಂತರವಾಗಿ ಇದ್ದೇ ಇರುತ್ತದೆ. ನೀನು ರಾಜ ನಾಗಿ ಕ್ಷತ್ರಿಯಧರ್ಮವನ್ನು ಪರಿಪಾಲಿಸುತ್ತಿದ್ದಾಗ ಬೇಟೆಯೇ ಮುಂತಾ ದುವುಗಳ ಕಾರಣದಿಂದ ಹಲವಾರು ಪ್ರಾಣಿಗಳನ್ನು ವಧಿಸಿರುವೆ. ಈಗ ನೀನು ಏಕಾಗ್ರಚಿತ್ತನಾಗಿ ನನ್ನ ಉಪಾಸನೆಮಾಡುತ್ತಾ ಆ ಪಾಪವನ್ನು ಕಳೆದುಕೋ. ಮುಂದಿನ ಜನ್ಮದಲ್ಲಿ ನೀನು ಬ್ರಾಹ್ಮಣನಾಗಿ ಹುಟ್ಟಿ ಸಮಸ್ತ ಪ್ರಾಣಿಗಳಿಗೂ ಸುಹೃತ್‌ಶ್ರೇಷ್ಠನಾಗಿ ಸಕಲಪ್ರಾಣಿಗಳ ಹಿತೈಷಿಯಾಗಿ ಶುದ್ಧಜ್ಞಾನಸ್ವರೂಪನಾದ ನನ್ನನ್ನು ಸೇರುವೆ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ೫೧ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೫೨ನೆಯ ಅಧ್ಯಾಯ

ದ್ವಾರಕಾಗಮನ : ಬಲರಾಮನ ವಿವಾಹ : ರುಕ್ಮಿಣಿಯ ಸಂದೇಶವನ್ನು ಹೊತ್ತು ಬ್ರಾಹ್ಮಣನ ಆಗಮನ

ಶ್ರೀಶುಕಮುನಿಗಳು ಹೇಳುತ್ತಾರೆ :

ಇತ್ಥಂ ಸೋಽನುಗೃಹೀತೋಽಙ್ಗ ಕೃಷ್ಣೇನೇಕ್ಷ್ವಾಕುನನ್ದನಃ ।
ತಂ ಪರಿಕ್ರಮ್ಯ ಸನ್ನಮ್ಯ ನಿಶ್ಚಕ್ರಾಮ ಗುಹಾಮುಖಾತ್ ॥೧॥

ಪರೀಕ್ಷಿತಮಹಾರಾಜ! ಹೀಗೆ ಭಗವಾನ್ ಶ್ರೀಕೃಷ್ಣನು ಇಕ್ಷ್ವಾಕುಕುಲ ನಂದನನಾದ ಮುಚುಕುಂದನಿಗೆ ಅನುಗ್ರಹಿಸಿದನಂತರ ಮುಚುಕುಂದನು ಶ್ರೀಕೃಷ್ಣನಿಗೆ ಪ್ರದಕ್ಷಿಣಪೂರ್ವಕವಾಗಿ ನಮಸ್ಕರಿಸಿ ಗುಹೆಯ ಬಾಗಿಲಿನಿಂದ ಹೊರಬಿದ್ದನು.

ಗುಹೆಯಿಂದ ಹೊರಬಂದ ಮುಚುಕುಂದನು ಮನುಷ್ಯರನ್ನೂ, ಗಿಡ-ಮರ-ಬಳ್ಳಿಗಳನ್ನೂ, ಪ್ರಾಣಿಗಳನ್ನೂ ನೋಡಿದನು. ಅವೆಲ್ಲವೂ ಹಿಂದೆ

ಅವನು ನೋಡಿದ್ದುದಕ್ಕಿಂತ ಅತ್ಯಂತ ಚಿಕ್ಕದಾಗಿರುವಂತೆ ಕಂಡುಬಂದುವು. ಇದರಿಂದಲೇ ಅವನು ಕಲಿಯುಗವು ಕಾಲಿಟ್ಟಿರುವುದೆಂದು ತಿಳಿದು ಉತ್ತರ ದಿಕ್ಕಿನ ಕಡೆಗೆ ಪ್ರಯಾಣಮಾಡಿದನು. ಮುಚುಕುಂದಮಹಾರಾಜನು ತಪಸ್ಸಿನಲ್ಲಿ ಶ್ರದ್ಧೆಯುಳ್ಳವನಾಗಿದ್ದನು ; ಧೀರನಾಗಿದ್ದನು ; ಸಂಗರಹಿತನಾಗಿದ್ದನು. ಅವನಿಗೆ ಯಾವುದರಲ್ಲಿಯೂ ಸಂಶಯವೆಂಬುದೇ ಇರಲಿಲ್ಲ. ತನ್ನ ಮನಸ್ಸನ್ನು ಸಂಪೂರ್ಣವಾಗಿ ಶ್ರೀಕೃಷ್ಣನಲ್ಲಿಯೇ ವಿಲೀನಗೊಳಿಸಿ ಆತನು ಗಂಧಮಾದನಪರ್ವತಕ್ಕೆ ಹೋದನು. ಮುಂದೆ ಅವನು ನರ-ನಾರಾಯಣರ ನಿತ್ಯನಿವಾಸವಾದ ಬದರಿಕಾಶ್ರಮಕ್ಕೆ ಹೋಗಿ ಶಾಂತಭಾವದಿಂದ ಶೀತೋಷ್ಣ-ಸುಖ-ದುಃಖವೇ ಮೊದಲಾದ ದ್ವಂದ್ವಗಳನ್ನು ಸಹಿಸುತ್ತಾ ತಪಸ್ಸಿನ ಮೂಲಕವಾಗಿ ಭಗವಂತನನ್ನು ಆರಾಧಿಸಲು ಉಪಕ್ರಮಿಸಿದನು.

ಇತ್ತಲಾಗಿ ಶ್ರೀಕೃಷ್ಣನು ಮಥುರಾಪಟ್ಟಣಕ್ಕೆ ಹಿಂದಿರುಗಿದನು. ಅದುವರೆಗೂ ಯವನಸೈನಿಕರು ಮಥುರಾಪಟ್ಟಣವನ್ನು ಆಕ್ರಮಿಸಿಕೊಂಡೇ ಇದ್ದರು. ರಾಜನಾದ ಕಾಲಯವನನಿಂದ ರಹಿತವಾಗಿದ್ದ ಆ ಯವನಸೈನ್ಯವನ್ನು ಶ್ರೀಕೃಷ್ಣನು ಅನಾಯಾಸವಾಗಿ ಸಂಹರಿಸಿ ಅವರಲ್ಲಿದ್ದ ಐಶ್ವರ್ಯವೆಲ್ಲವನ್ನೂ ತೆಗೆದುಕೊಂಡು ದ್ವಾರಕಾಪಟ್ಟಣಕ್ಕೆ ಹೋದನು. ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನ ಆಜ್ಞಾನುಸಾರವಾಗಿ ಯವನರ ಐಶ್ವರ್ಯವನ್ನು ಎತ್ತುಗಳ ಮೇಲೂ, ಮನುಷ್ಯರ ಮೇಲೂ ಹೊರಿಸಿಕೊಂಡು ಹೋಗುತ್ತಿದ್ದಾಗ ಹದಿನೆಂಟನೆಯ ಬಾರಿಗೆ ಜರಾಸಂಧನು ಇಪ್ಪತ್ತುಮೂರು ಅಕ್ಷೌಹಿಣೀಸೈನ್ಯಸಮೇತನಾಗಿ ಆಗಮಿಸಿದನು. ಶತ್ರುಸೈನ್ಯವು ರಭಸದಿಂದ ಮಥುರಾಪಟ್ಟಣವನ್ನು ಆಕ್ರಮಿಸಲು ಬರುತ್ತಿರುವುದನ್ನು ನೋಡಿ ಶ್ರೀಕೃಷ್ಣ-ಬಲರಾಮರು ಮಾನುಷಲೀಲೆಯನ್ನು ತೋರ್ಪಡಿಸುತ್ತಾ ಭಯಗೊಂಡವರಂತೆ ಪಲಾಯನಮಾಡಿದರು. ನಿಶ್ಚಯವಾಗಿ ಹೇಳುವುದಾದರೆ ಅವರ ಮನಸ್ಸಿನಲ್ಲಿ ಭಯದ ಲೇಶವೂ ಇರಲಿಲ್ಲ. ಆದರೂ ಅತ್ಯಂತಭಯಗೊಂಡಿರುವಂತೆ ತೋರ್ಪಡಿಸಿಕೊಳ್ಳುತ್ತಾ ಯವನರಿಂದ ಅಪಹರಿಸಿ ತಂದಿದ್ದ ಐಶ್ವರ್ಯವೆಲ್ಲವನ್ನೂ ಅಲ್ಲಿಯೇ ಬಿಟ್ಟು, ಹಲವಾರು ಯೋಜನಗಳವರೆಗೆ ಕಮಲದ ಎಲೆಗಳಂತೆ ಸುಕೋಮಲವಾಗಿದ್ದ ಕಾಲುಗಳಿಂದಲೇ, ಒಮ್ಮೆ ಹಿಂದಕ್ಕೂ ನೋಡದೆ ಓಡಿಹೋದರು. ಮಹಾಬಲಿಷ್ಠನಾದ, ಮಗಧ

ರಾಜನಾದ ಜರಾಸಂಧನು ಶ್ರೀಕೃಷ್ಣ-ಬಲರಾಮರು ನಾಗಾಲೋಟದಿಂದ ಓಡಿಹೋಗುತ್ತಿರುವುದನ್ನು ನೋಡಿ ಗಹ-ಗಹಿಸಿ ನಗುತ್ತಾ ರಥಸೇನೆಯೊಡನೆ ಅವರನ್ನು ಹಿಂಬಾಲಿಸಿದನು. ಅವನು ಬಲರಾಮ-ಕೃಷ್ಣರ



ಪ್ರಭಾವವನ್ನು ತಿಳಿದವನಾಗಿರಲಿಲ್ಲ. ಹಲವಾರು ಯೋಜನಗಳು ಓಡಿಯೋಡಿ ಬಲರಾಮ-ಕೃಷ್ಣರು ಸ್ವಲ್ಪ ಆಯಾಸಗೊಂಡರು. ಬಳಿಕ ಅವರು ಸಮೀಪದಲ್ಲಿಯೇ ಇದ್ದ, ಬಹಳ ಎತ್ತರವಾಗಿದ್ದ ಪ್ರವರ್ಷಣಪರ್ವತವನ್ನು ಹತ್ತಿದರು. ಇಂದ್ರನ ಮೇಘಗಳು ಆ ಪರ್ವತದ ಮೇಲೆ ಸದಾಕಾಲದಲ್ಲಿಯೂ ಮಳೆಗರೆಯುತ್ತಿದ್ದುದರಿಂದ ಅದು ಪ್ರವರ್ಷಣಪರ್ವತವೆಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದಿತು. ಪರ್ವತವನ್ನೇರಿದ ಶ್ರೀಕೃಷ್ಣ-ಬಲ ರಾಮರು ಜರಾಸಂಧನಿಗೆ ಕಾಣಿಸಲಿಲ್ಲ. ಬಹಳವಾಗಿ ಹುಡುಕಿಸಿದರೂ ಬೆಟ್ಟದಲ್ಲಿ ಅವಿತಿಟ್ಟುಕೊಂಡಿದ್ದ ಶ್ರೀಕೃಷ್ಣ-ಬಲರಾಮರನ್ನು ಕಾಣದೆ ಜರಾಸಂಧನು ಪರ್ವತದ ಸುತ್ತಲೂ ಕಟ್ಟಿಗೆಗಳನ್ನಿಟ್ಟು ಬೆಂಕಿಹೊತ್ತಿಸಿಬಿಟ್ಟನು. ಪರ್ವತವು ನಾಲ್ಕು ಕಡೆಗಳಲ್ಲಿಯೂ ಧಗ-ಧಗಿಸಿ ಉರಿಯುತ್ತಿದ್ದಿತು. ಆ ಸಮಯದಲ್ಲಿ ಹನ್ನೊಂದು ಯೋಜನಗಳಷ್ಟು ಎತ್ತರವಾಗಿದ್ದ ಧಗ-ಧಗನೆ ಉರಿಯುತ್ತಿದ್ದ ಪ್ರವರ್ಷಣಪರ್ವತದ ಶಿಖರದ ಮೇಲಿನಿಂದ ಯದುಕುಮಾರರಿಬ್ಬರೂ ವೇಗದಿಂದ ಹಾರಿ ನಿರಾಯಾಸವಾಗಿ ಭೂಮಿಯ ಮೇಲೆ ಇಳಿದರು. ಪರ್ವತದ ಮೇಲಿಂದ ಧುಮುಕಿದ ಶ್ರೀಕೃಷ್ಣ-ಬಲರಾಮರು ಜರಾಸಂಧನಿಗೂ ಮತ್ತು

ಅವನ ಅನುಯಾಯಿಗಳಿಗೂ ಕಣ್ಣುತಪ್ಪಿಸಿ ಅವರಾರಿಗೂ ಕಾಣದಂತೆ ಸಮುದ್ರವೇ ಕಂದಕವಾಗಿದ್ದ ದ್ವಾರಕಾಪಟ್ಟಣಕ್ಕೆ ಬಂದು ಸೇರಿದರು. ಜರಾಸಂಧನು ಶ್ರೀಕೃಷ್ಣ-ಬಲರಾಮರನ್ನು ಕಾಣದ ಕಾರಣ ಅವರು ಬೆಂಕಿ ಯಲ್ಲಿ ಸುಟ್ಟುಹೋಗಿದ್ದಾರೆಂದು ತಪ್ಪಾಗಿ ತಿಳಿದುಕೊಂಡು, ತಾನು ತಂದಿದ್ದ ಮಹಾಸೈನ್ಯವನ್ನು ಹಿಂದಿರುಗಿಸಿಕೊಂಡು ಮಗಧದೇಶಕ್ಕೆ ಹೊರಟು ಹೋದನು.

ಪರೀಕ್ಷಿತಮಹಾರಾಜ! ನಾನು (ಹಿಂದಿನ ಒಂಬತ್ತನೆಯ ಸ್ಕಂಧ ದಲ್ಲಿಯೇ) ಆನರ್ತದೇಶದ ರಾಜನಾದ ರೈವತನು ತನ್ನ ಮಗಳಾದ ರೇವತಿ ಯನ್ನು ಬ್ರಹ್ಮನ ಪ್ರೇರಣೆಯಂತೆ ಬಲರಾಮನಿಗೆ ಕೊಟ್ಟು ಮದುವೆಮಾಡಿದ ನೆಂಬ ಸಮಾಚಾರವನ್ನು ಹೇಳಿದ್ದೆನು. ಭಗವಾನ್ ಶ್ರೀಕೃಷ್ಣನು ಕೂಡ ಸ್ವಯಂವರಕ್ಕೆ ಆಗಮಿಸಿದ್ದ ಶಿಶುಪಾಲನನ್ನೂ ಮತ್ತು ಅವನ ಪಕ್ಷದವ ರಾಗಿದ್ದ ಶಾಲ್ವನೇ ಮೊದಲಾದ ರಾಜರನ್ನೂ ಬಲಪೂರ್ವಕವಾಗಿ ಪರಾಜಯ ಗೊಳಿಸಿ ಅವರೆಲ್ಲರೂ ನೋಡುತ್ತಿದ್ದಂತೆಯೇ–ಗರುಡನು ಅಮೃತವನ್ನು ಅಪಹರಿಸಿದಂತೆ–ವಿದರ್ಭದೇಶದ ರಾಜಕುಮಾರಿಯಾದ, ಭೀಷ್ಮಕನ ಮಗಳಾದ ರುಕ್ಮಿಣಿಯನ್ನು ಅಪಹರಿಸಿ ತಂದು ಅವಳೊಡನೆ ವಿವಾಹವಾದನು. ಪರೀಕ್ಷಿತ! ಮಹಾಲಕ್ಷ್ಮಿಯೇ ರುಕ್ಮಿಣಿಯಾಗಿ ಅವತರಿಸಿದ್ದಳು.”

ಪರೀಕ್ಷಿತನು ಪ್ರಶ್ನಿಸುತ್ತಾನೆ :

“ಪೂಜ್ಯರೇ! ಭಗವಾನ್ ಶ್ರೀಕೃಷ್ಣನು ಭೀಷ್ಮಕನ ಮಗಳಾದ, ಚೆಲುವಾದ ಮುಖವುಳ್ಳ, ರುಕ್ಮಿಣಿಯನ್ನು ಬಲಾತ್ಕಾರವಾಗಿ ಕರೆತಂದು ರಾಕ್ಷಸವಿವಾಹದ ವಿಧಿಯಂತೆ ಮದುವೆಯಾದನೆಂದು ಕೇಳಿದ್ದೇನೆ. ಮಹಾ ತೇಜಸ್ವಿಯಾದ ಶ್ರೀಕೃಷ್ಣನೊಡನೆ ರುಕ್ಮಿಣಿಯ ಪಾಣಿಗ್ರಹಣವು ಹೇಗಾ ಯಿತು? ಯಾವ ರೀತಿಯಲ್ಲಿ ಭಗವಂತನು ಮಾಗಧ-ಶಾಲ್ವ ಇವರೇ ಮುಂತಾದ ರಾಜರನ್ನು ಪರಾಜಯಗೊಳಿಸಿ ಸ್ವಯಂವರಕ್ಕೆ ಸಿದ್ಧಳಾಗಿದ್ದ ಕನ್ಯೆಯನ್ನು ಅಪಹರಿಸಿಕೊಂಡುಬಂದನು? ಈ ಎಲ್ಲ ವಿಷಯಗಳನ್ನೂ ನಾನು ತಮ್ಮಿಂದ ಕೇಳಿ ತಿಳಿಯಬೇಕೆಂದಿರುತ್ತೇನೆ. ಬ್ರಹ್ಮರ್ಷಿಗಳೇ! ನಿಶ್ಚಯ ವಾಗಿಯೂ ಭಗವಾನ್ ಶ್ರೀಕೃಷ್ಣನ ಲೀಲಾಪ್ರಸಂಗಗಳು ಪುಣ್ಯತಮ ವಾದುವುಗಳು. ಜಗತ್ತಿನ ಪಾಪವನ್ನು ಹೋಗಲಾಡಿಸತಕ್ಕುವುಗಳು.

ರಮಣೀಯವಾದುವುಗಳು. ಅವುಗಳ ಮಾಧುರ್ಯವೆಷ್ಟೆಂದರೆ ಹಗಲು-ರಾತ್ರಿಗಳೆನ್ನದೇ ಸದಾಕಾಲದಲ್ಲಿಯೂ ಕೇಳುತ್ತಿದ್ದರೂ ನಿತ್ಯನೂತನಕಥೆಗಳಾಗಿ ಕೇಳುವವರಿಗೆ ಆಸ್ವಾದನೆಯನ್ನೂ, ಆನಂದವನ್ನೂ ಉಂಟುಮಾಡುತ್ತಲೇ ಇರುತ್ತವೆ. ಕೇಳಿ ತಿಳಿಯುವುದರಲ್ಲಿ ಆಸಕ್ತನಾದ ಯಾವನು ತಾನೇ ನಿತ್ಯ ನೂತನವಾದ ಶ್ರೀಕೃಷ್ಣನ ಕಥಾಪ್ರಸಂಗಗಳನ್ನು ಕೇಳುತ್ತಾ ತೃಪ್ತಿಹೊಂದು ವನು? ಎಷ್ಟು ಕೇಳಿದರೂ ಇನ್ನೂ ಕೇಳಬೇಕೆನ್ನಿಸುವುದೇ ಹೊರತು 'ಸಾಕಪ್ಪ! ನಿಲ್ಲಿಸು'–ಎನ್ನುವಂತಾಗುವುದೇ ಇಲ್ಲ."

ಶ್ರೀಶುಕಮುನಿಗಳು ಹೇಳುತ್ತಾರೆ :

"ಪರೀಕ್ಷಿತಮಹಾರಾಜ! ಭೀಷ್ಮಕನೆಂಬ ಹೆಸರಿನ ಮಹಾರಾಜನು ವಿದರ್ಭದೇಶಕ್ಕೆ ಅಧಿಪತಿಯಾಗಿದ್ದನು. ಅವನಿಗೆ ಐವರು ಪುತ್ರರೂ ಸುಂದರಿ ಯಾದ ಒಬ್ಬ ಪುತ್ರಿಯೂ ಇದ್ದಳು. ಆ ಐವರಲ್ಲಿ ಹಿರಿಯನ ಹೆಸರು ರುಕ್ಮಿ ಎಂದು. ಉಳಿದ ನಾಲ್ಕು ಮಕ್ಕಳ ಹೆಸರೂ ಅನುಕ್ರಮವಾಗಿ ರುಕ್ಮರಥ, ರುಕ್ಮಬಾಹು, ರುಕ್ಮಕೇಶ, ರುಕ್ಮಮಾಲೀ–ಎಂಬುದಾಗಿದ್ದಿತು. ಸತೀ ರುಕ್ಮಿಣಿಯು ಇವರೆಲ್ಲರ ತಂಗಿಯಾಗಿದ್ದಳು. ಭೀಷ್ಮಕನ ಅರಮನೆಗೆ ಬರುತ್ತಿದ್ದವರಲ್ಲಿ ಅನೇಕರು ಶ್ರೀಕೃಷ್ಣನ ಸೌಂದರ್ಯ, ಪರಾಕ್ರಮ, ಗುಣ ಮತ್ತು ವೈಭವಗಳನ್ನು ಹಾಡಿ-ಪಾಡುತ್ತಿದ್ದರು. ಅವನನ್ನು ಬಹಳವಾಗಿ ಪ್ರಶಂಸೆಮಾಡುತ್ತಿದ್ದರು. ಶ್ರೀಕೃಷ್ಣನ ಚೇತೋಹಾರಿಯಾದ ಲೀಲಾ ಪ್ರಸಂಗಗಳನ್ನು ಅನವರತವಾಗಿ ಕೇಳುತ್ತಿದ್ದ ರುಕ್ಮಿಣಿಯು ಶ್ರೀಕೃಷ್ಣನೇ ತನಗೆ ಅನುರೂಪನಾದ ಪತಿಯೆಂದು ನಿಶ್ಚಯಿಸಿಕೊಂಡಳು. ರುಕ್ಮಿಣಿಯು ಅತ್ಯಂತ ಸೌಂದರ್ಯವತಿಯಾಗಿರುವಳೆಂದೂ, ಅತ್ಯಂತ ಬುದ್ಧಿಶಾಲಿನಿ ಯೆಂದೂ, ಉದಾರಳೆಂದೂ, ಶುಭಲಕ್ಷಣಸಂಪನ್ನೆಯೆಂದೂ, ಒಳ್ಳೆಯ ಶೀಲ-ಸ್ವಭಾವದವಳೆಂದೂ, ಸದ್ಗುಣಗಳಿಗೆ ಪರಮಾಶ್ರಯಳಾಗಿರುವಳೆಂದೂ ಶ್ರೀಕೃಷ್ಣನು ತನ್ನ ಗೆಳೆಯರ ಮೂಲಕವಾಗಿ ತಿಳಿದುಕೊಂಡು, ಅವಳೇ ತನಗೆ ಅನುರೂಪಳಾದ ಪತ್ನಿಯೆಂದೂ ಅವಳನ್ನೇ ತಾನು ವಿವಾಹವಾಗಬೇಕೆಂದೂ ನಿಶ್ಚಯಿಸಿದನು. ರುಕ್ಮಿಣಿಯ ಸೋದರ-ಸಂಬಂಧಿಗಳು ಕೂಡ ತಂಗಿಯಾದ ರುಕ್ಮಿಣಿಯ ವಿವಾಹವು ಕೃಷ್ಣನೊಡನೆಯೇ ಆಗಬೇಕೆಂದು ಬಯಸಿದ್ದರು. ಆದರೆ ಶ್ರೀಕೃಷ್ಣನನ್ನು ಬಹಳವಾಗಿ ದ್ವೇಷಿಸುತ್ತಿದ್ದ, ಭೀಷ್ಮಕನ ಹಿರಿಯ

ಮಗನಾದ ರುಕ್ಮಿಯು ಮಾತ್ರ ತನ್ನ ತಂಗಿಯನ್ನು ಶಿಶುಪಾಲನಿಗೇ ಕೊಟ್ಟು ವಿವಾಹವನ್ನು ಮಾಡಬೇಕೆಂದೂ ಅವನೇ ರುಕ್ಮಿಣಿಗೆ ಅನುರೂಪನಾದ ವರನೆಂದೂ ನಿಶ್ಚಯಿಸಿ, ಶ್ರೀಕೃಷ್ಣನೊಡನೆ ರುಕ್ಮಿಣಿಯ ವಿವಾಹವಾಗುವು ದನ್ನು ತಡೆದನು. ಕಪ್ಪಾದ ಕಡೆಗಣ್ಣಿನಿಂದ ಕೂಡಿದ್ದ, ಕಡುಚೆಲುವೆಯಾದ ರುಕ್ಮಿಣೀದೇವಿಯು, ತನ್ನಣ್ಣನು ಶಿಶುಪಾಲನಿಗೆ ತನ್ನನ್ನು ಕೊಟ್ಟು ವಿವಾಹ ಮಾಡಲು ನಿಶ್ಚಯಿಸಿರುವುದನ್ನು ತಿಳಿದು ಅತ್ಯಂತದುಃಖಿತಳಾಗಿ, ಮುಂದೇನು ಮಾಡಬೇಕೆಂಬುದರ ಬಗೆಗೆ ಸುದೀರ್ಘವಾಗಿ ಸಮಾಲೋಚಿಸಿ, ವಿಶ್ವಾಸ ಪಾತ್ರನಾದ ಬ್ರಾಹ್ಮಣನೊಬ್ಬನನ್ನು ಸಂದೇಶದೊಡನೆ ಶ್ರೀಕೃಷ್ಣನ ಬಳಿಗೆ ಕಳುಹಿಸಿಕೊಟ್ಟಳು. ಆ ಬ್ರಾಹ್ಮಣನು ದ್ವಾರಕಾಪಟ್ಟಣವನ್ನು ಪ್ರವೇಶಿಸಿ ದೊಡನೆಯೇ ದ್ವಾರಪಾಲಕನು ಅವನ ಆಶಯವನ್ನು ತಿಳಿದು ಶ್ರೀಕೃಷ್ಣನ ಅರಮನೆಗೆ ಕರೆದುಕೊಂಡು ಹೋದನು. ಆ ಸಮಯದಲ್ಲಿ ಆದಿಪುರುಷ ನಾದ ಭಗವಾನ್ ಶ್ರೀಕೃಷ್ಣನು ಸ್ವರ್ಣಸಿಂಹಾಸನದ ಮೇಲೆ ವಿರಾಜಮಾನ ನಾಗಿದ್ದುದನ್ನು ಬ್ರಾಹ್ಮಣನು ನೋಡಿದನು. ಬ್ರಾಹ್ಮಣರ ಪರಮಭಕ್ತನಾದ ಶ್ರೀಕೃಷ್ಣನು ಆ ಬ್ರಾಹ್ಮಣನನ್ನು ನೋಡುತ್ತಲೇ ಆಸನದಿಂದಿಳಿದು ಬ್ರಾಹ್ಮಣನನ್ನು ಅದೇ ಆಸನದಲ್ಲಿ ಕುಳ್ಳಿರಿಸಿ–ಸ್ವರ್ಗದಲ್ಲಿ ದೇವತೆಗಳು ತನ್ನನ್ನು ಸತ್ಕರಿಸುವಂತೆ–ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿದನು. ಸ್ವಾಗತ-ಸತ್ಕಾರ-ಕುಶಲಪ್ರಶ್ನೆಗಳಾದನಂತರ ಭೋಜನಮಾಡಿ ವಿಶ್ರಾಂತಿಯನ್ನು ಪಡೆದ ಬ್ರಾಹ್ಮಣನ ಬಳಿಗೆ, ಸತ್ಪುರುಷರಿಗೆ ಪರಮಾಶ್ರಯನಾದ ಶ್ರೀಕೃಷ್ಣನು ಹೋಗಿ, ಅವನ ಕಾಲುಗಳನ್ನು ಒತ್ತುತ್ತಾ ಶಾಂತವಾದ ಮನಸ್ಸಿನಿಂದ ಬ್ರಾಹ್ಮಣನನ್ನು ಪ್ರಶ್ನಿಸಿದನು :

ಕಚ್ಚಿದ್ದ್ವಿಜವರಶ್ರೇಷ್ಠ ಧರ್ಮಸ್ತೇ ವೃದ್ಧಸಮ್ಮತಃ ।
ವರ್ತತೇ ನಾತಿಕೃಚ್ಛ್ರೇಣ ಸನ್ತುಷ್ಟಮನಸಃ ಸದಾ ॥೩೦॥

"ಬ್ರಾಹ್ಮಣಶ್ರೇಷ್ಠನೇ! ನಿನ್ನ ಮನಸ್ಸು ಸದಾ-ಸರ್ವದಾ ಸಂತುಷ್ಟ ವಾಗಿರುವುದಲ್ಲವೇ? ಹಿರಿಯರಿಗೆ ಒಪ್ಪಿಗೆಯಾದ ಧರ್ಮಕಾರ್ಯಗಳನ್ನು ಹೆಚ್ಚಿನ ಕಷ್ಟವಿಲ್ಲದೆ ಪರಿಪಾಲಿಸಲು ಸಾಧ್ಯವಾಗುತ್ತಿದೆಯಲ್ಲವೇ?

ಸನ್ತುಷ್ಟೋ ಯರ್ಹಿ ವರ್ತೇತ ಬ್ರಾಹ್ಮಣೋ ಯೇನ ಕೇನಚಿತ್ ।
ಅಹೀಯಮಾನಃ ಸ್ವಾದ್ಧರ್ಮಾತ್ ಸ ಹ್ಯಸ್ಯಾಖಿಲಕಾಮಧುಕ್ ॥೩೧॥

ಬ್ರಾಹ್ಮಣನು ಪರಮಾತ್ಮನ ಇಚ್ಛೆಯಂತೆ ಎಷ್ಟು ಸಿಕ್ಕಿದರೆ ಅಷ್ಟರಿಂದಲೇ ತೃಪ್ತನಾಗಬೇಕು. ತನ್ನ ಧರ್ಮವನ್ನು ಪರಿಪಾಲಿಸುತ್ತಿರಬೇಕು. ತನ್ನ ಧರ್ಮದಿಂದ ಅವನು ಎಂದಿಗೂ ಚ್ಯುತನಾಗಬಾರದು. ಸ್ವಧರ್ಮನಿಷ್ಠನಾದ ಬ್ರಾಹ್ಮಣನಿಗೆ ಅವನ ಆ ಧರ್ಮವೇ ಸಮಸ್ತವಾದ ಕಾಮನೆಗಳನ್ನೂ ಈಡೇರಿಸಿಕೊಡುತ್ತದೆ.

ಅಸನ್ತುಷ್ಟೋಽಸಕೃಲ್ಲೋಕಾನಾಪ್ನೋತ್ಯಪಿ ಸುರೇಶ್ವರಃ ।
ಅಕಿಞ್ಚನೋಽಪಿ ಸನ್ತುಷ್ಟಃ ಶೇತೇ ಸರ್ವಾಙ್ಗವಿಜ್ವರಃ ॥೩೨॥

ಸುರೇಶ್ವರನಾದ ಇಂದ್ರನು ಹಲವಾರು ಲೋಕಗಳಿಗೆ ಅಧಿಪತಿಯಾಗಿದ್ದರೂ ಅಸಂತುಷ್ಟನಾಗಿಯೇ ಇರುತ್ತಾನೆ. ಇನ್ನೂ ಹೆಚ್ಚು ಲೋಕಗಳ ಆಧಿಪತ್ಯವನ್ನು ಪಡೆಯಬೇಕೆಂಬ ಆಸೆಯು ಅವನಿಗಿರುತ್ತದೆ. ಆದುದರಿಂದ ಅವನ ಮನಸ್ಸಿಗೆ ಶಾಂತಿಯೆಂಬುದೇ ಇರುವುದಿಲ್ಲ. ದಟ್ಟದರಿದ್ರನಾಗಿದ್ದರೂ ಸಂತುಷ್ಟವಾದ ಮನೋಭಾವವನ್ನು ಹೊಂದಿದ್ದರೆ ಅಂತಹವನು ಸರ್ವ ಪ್ರಕಾರಗಳಿಂದಲೂ ಸಂತಾಪರಹಿತನಾಗಿ ಸುಖವಾಗಿ ನಿದ್ರಿಸುತ್ತಾನೆ.

ವಿಪ್ರಾನ್ ಸ್ವಲಾಭಸಂತುಷ್ಟಾನ್ ಸಾಧೂನ್ ಭೂತಸುಹೃತ್ತಮಾನ್ ।
ನಿರಹಙ್ಕಾರಿಣಃ ಶಾನ್ತಾನ್ ನಮಸ್ಯೇ ಶಿರಸಾಸಕೃತ್ ॥೩೩॥

ತಾನಾಗಿಯೇ ಲಭಿಸಿದ ದ್ರವ್ಯಗಳಿಂದ ಸಂತುಷ್ಟರಾದ, ಸಾಧುಸ್ವಭಾವದವರಾದ, ಪ್ರಾಣಿಗಳ ಹಿತೈಷಿಗಳಾದ, ಅಹಂಕಾರ-ಮಮಕಾರರಹಿತರಾದ, ರಾಗ-ದ್ವೇಷಗಳಿಲ್ಲದೆ ಶಾಂತಮನಸ್ಕರಾದ ಬ್ರಾಹ್ಮಣರನ್ನು ತಲೆಬಾಗಿ ಹಲವಾರು ಬಾರಿ ನಾನು ನಮಸ್ಕರಿಸುತ್ತೇನೆ.

ಕಚ್ಚಿದ್ವಃ ಕುಶಲಂ ಬ್ರಹ್ಮನ್ ರಾಜತೋ ಯಸ್ಯ ಹಿ ಪ್ರಜಾಃ ।
ಸುಖಂ ವಸನ್ತಿ ವಿಷಯೇ ಪಾಲ್ಯಮಾನಾಃ ಸ ಮೇ ಪ್ರಿಯಃ ॥೩೪॥

ಬ್ರಾಹ್ಮಣೋತ್ತಮ! ರಾಜನು ನಿಮ್ಮ ಯೋಗ-ಕ್ಷೇಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿರುವನೇ? ಯಾವನ ರಾಜ್ಯದಲ್ಲಿ ಪ್ರಜೆಗಳು ರಾಜನಿಂದ ಪರಿಪಾಲಿಸಲ್ಪಡುತ್ತಾ ಸುಖದಿಂದಿರುವರೋ ಅಂತಹ ರಾಜನು ನನಗೆ ಅತ್ಯಂತಪ್ರಿಯನು.

ವಿಪ್ರಶ್ರೇಷ್ಠನೇ! ಹಲವಾರು ದುರ್ಗಮವಾದ ಪ್ರದೇಶಗಳನ್ನೂ ದಾಟಿಕೊಂಡು ನೀನು ಯಾವ ಕಾರಣದಿಂದ ಇಲ್ಲಿಗೆ ಬಂದಿರುವೆ? ನಮ್ಮಿಂದಲೂ ಮುಚ್ಚಿಡಬಾರದ ವಿಷಯವಾಗಿದ್ದರೆ ನೀನು ಬಂದುದರ ಕಾರಣವನ್ನು ನಮಗೆ ಹೇಳಬಹುದು. ನಾವು ಯಾವ ಕಾರ್ಯವನ್ನು ನಿನಗೆ ಮಾಡಿಕೊಡೋಣ?"

ಪರೀಕ್ಷಿತಮಹಾರಾಜ! ಲೀಲಾಮಾನುಷವಿಗ್ರಹನಾದ ಪರಮಪುರುಷನಾದ ಶ್ರೀಕೃಷ್ಣನು ಹೀಗೆ ಪ್ರಶ್ನಿಸಲಾಗಿ ಬ್ರಾಹ್ಮಣನು ಶ್ರೀಕೃಷ್ಣನಿಗೆ ತಾನು ಬಂದುದರ ಕಾರಣವನ್ನು ಸವಿಸ್ತರವಾಗಿ ಹೇಳಿ ರುಕ್ಮಿಣಿಯ ಸಂದೇಶವನ್ನು ಶ್ರೀಕೃಷ್ಣನಿಗೆ ಒಪ್ಪಿಸಿದನು.

ರುಕ್ಮಿಣಿಯ ಸಂದೇಶವು ಹೀಗಿದ್ದಿತು :

ಶ್ರುತ್ವಾ ಗುಣಾನ್ ಭುವನಸುನ್ದರ ಶೃಣ್ವತಾಂ ತೇ
ನಿರ್ವಿಶ್ಯ ಕರ್ಣವಿವರೈರ್ಹರತೋಽಙ್ಗ ತಾಪಮ್ ।
ರೂಪಂ ದೃಶಾಂ ದೃಶಿಮತಾಮಖಿಲಾರ್ಥಲಾಭಂ
ತ್ವಯ್ಯಚ್ಯುತಾವಿಶತಿ ಚಿತ್ತಮಪತ್ರಪಂ ಮೇ ॥೩೭॥

"ತ್ರಿಭುವನಸುಂದರನೇ! ಕೇಳುವವರ ಕಿವಿಗಳ ಮೂಲಕ ಹೃದಯವನ್ನು ಪ್ರವೇಶಿಸುವ ನಿನ್ನ ದಯೆ, ಕರುಣೆ, ಭಕ್ತವಾತ್ಸಲ್ಯ, ಶರಣಾಗತ ರಕ್ಷಣೆ–ಇವೇ ಮುಂತಾದ ಸದ್ಗುಣಗಳು ಸರ್ವಾಂಗಗಳಲ್ಲಿಯೂ ಇರುವ ತಾಪವನ್ನು ಪರಿಹರಿಸುತ್ತವೆ. ನಿನ್ನ ರೂಪ-ಸೌಂದರ್ಯವಾದರೋ ಕಣ್ಣುಳ್ಳವರ ಕಣ್ಣುಗಳಿಗೆ ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ವಿಧವಾದ ಪುರುಷಾರ್ಥಗಳನ್ನೂ ಕೊಡುತ್ತವೆ. ನಿನ್ನ ದಿವ್ಯರೂಪವನ್ನು ಸಂದರ್ಶಿಸಿದವರಿಗೆ ಸಕಲಸಿದ್ಧಿಯೂ ಆಗುತ್ತದೆ. ಅಂತಹ ಗುಣಸಾಗರನಾದ ಮತ್ತು ತ್ರಿಭುವನಸುಂದರನಾದ ನಿನ್ನಲ್ಲಿ ನನ್ನ ಮನಸ್ಸು ಯಾವುದೇ ವಿಧವಾದ ನಾಚಿಕೆಯೂ ಇಲ್ಲದೆ ನೆಲೆಸಿಬಿಟ್ಟಿದೆ.

ಕಾ ತ್ವಾ ಮುಕುನ್ದ ಮಹತೀ ಕುಲಶೀಲರೂಪ-
ವಿದ್ಯಾವಯೋದ್ರವಿಣಧಾಮಭಿರಾತ್ಮತುಲ್ಯಮ್ ।
ಧೀರಾ ಪತಿಂ ಕುಲವತೀ ನ ವೃಣೀತ ಕನ್ಯಾ
ಕಾಲೇ ನೃಸಿಂಹ ನರಲೋಕಮನೋಽಭಿರಾಮಮ್ ॥೩೮॥

ಪ್ರೇಮಸ್ವರೂಪನೇ! ಶ್ಯಾಮಸುಂದರ! ಕುಲ, ಶೀಲ, ಸ್ವಭಾವ, ಸೌಂದರ್ಯ, ವಿದ್ಯೆ, ಐಶ್ವರ್ಯ, ಮನೆ-ಮಠ ಈ ಎಲ್ಲದರಲ್ಲಿಯೂ ನೀನು ಅದ್ವಿತೀಯನಾಗಿರುವೆ. ನಮಗೆ ಸಮಾನನಾಗಿರುವೆ. ನರಶ್ರೇಷ್ಠನೇ! ನೀನೇ ಹೇಳು. ಸತ್ಕುಲಪ್ರಸೂತೆಯಾದ, ಧೈರ್ಯಶಾಲಿನಿಯಾದ ಯಾವ ಕನ್ಯೆಯು ತಾನೇ ಕಾಲವು ಸನ್ನಿಹಿತವಾದಾಗ ಸಕಲಸದ್ಗುಣಸಂಪನ್ನನಾದ, ನರಲೋಕದ ಪ್ರಾಣಿಗಳ ಮನಸ್ಸನ್ನು ಆನಂದಗೊಳಿಸುವ ಸುಂದರಾಂಗನಾದ ನಿನ್ನನ್ನು ಪತಿಯನ್ನಾಗಿ ವರಿಸದೇ ಇದ್ದಾಳು?

ತನ್ಮೇ ಭವಾನ್ ಖಲು ವೃತಃ ಪತಿರಙ್ಗ ಜಾಯಾ-
ಮಾತ್ಮಾರ್ಪಿತಶ್ಚ ಭವತೋಽತ್ರ ವಿಭೋ ವಿಧೇಹಿ ।
ಮಾ ವೀರಭಾಗಮಭಿಮರ್ಶತು ಚೈದ್ಯ ಆರಾ-
ದ್ಗೋಮಾಯುವನ್ಮೃಗಪತೇರ್ಬಲಿಮಮ್ಬುಜಾಕ್ಷ ॥೩೯॥

ಪ್ರಿಯತಮನೇ! ನಾನು ನಿನ್ನನ್ನು ಪತಿಯನ್ನಾಗಿ ವರಿಸಿಬಿಟ್ಟಿದ್ದೇನೆ. ನನ್ನ ಶರೀರವನ್ನು ನಿನಗೆ ಅರ್ಪಿಸಿಕೊಂಡುಬಿಟ್ಟಿದ್ದೇನೆ. ನೀನು ಅಂತರ್ಯಾಮಿಯಾಗಿರುವೆ. ನನ್ನ ಹೃದಯದಲ್ಲಿ ಏನಿದೆಯೆಂಬುದು ನಿನಗೆ ತಿಳಿಯದೇ ಇಲ್ಲ. ನೀನು ಇಲ್ಲಿಗೆ ಆಗಮಿಸಿ ನನ್ನನ್ನು ಪತ್ನಿಯನ್ನಾಗಿ ಪ್ರತಿಗ್ರಹಿಸು. ಮೃಗೇಂದ್ರನಾದ ಸಿಂಹದ ಉಪಹಾರವನ್ನು ನರಿಯು ಮುಟ್ಟದಂತೆ ಜಗದೇಕವೀರನಾದ ನಿನಗೆ ಸೇರಿರುವ ನನ್ನನ್ನು ಶಿಶುಪಾಲನು ಹತ್ತಿರಕ್ಕೆ ಬಂದು ಮುಟ್ಟದಿರಲಿ.

ಪೂರ್ತೇಷ್ಟದತ್ತನಿಯಮವ್ರತದೇವವಿಪ್ರ-
ಗುರ್ವರ್ಚನಾದಿಭಿರಲಂ ಭಗವಾನ್ ಪರೇಶಃ ।
ಆರಾಧಿತೋ ಯದಿ ಗದಾಗ್ರಜ ಏತ್ಯ ಪಾಣಿಂ
ಗೃಹ್ಣಾತು ಮೇ ನ ದಮಘೋಷಸುತಾದಯೋಽನ್ಯೇ ॥

ಈ ಹಿಂದೆ ಇಷ್ಟಾಪೂರ್ತಾದಿಗಳಿಂದಲೂ*, ದಾನಗಳಿಂದಲೂ, ವ್ರತ-

---

* ಇಷ್ಟಾಪೂರ್ತ = ಒಟ್ಟರ್ಥದಲ್ಲಿ ಧರ್ಮಕಾರ್ಯಾಚರಣೆ : ಅಗ್ನಿಹೋತ್ರ, ತಪಸ್ಸು, ವೇದಾನುಪಾಲನ, ಆತಿಥ್ಯ, ವೈಶ್ವದೇವ–ಮುಂತಾದುವು ಇಷ್ಟವೆನಿಸುವುದು. ಬಾವಿ, ಕೆರೆ, ದೇವಾಲಯ, ಅನ್ನಸತ್ರ ಮುಂತಾದುವುಗಳ ನಿರ್ಮಾಣವು ಪೂರ್ತವೆನಿಸುವುದು.

ನಿಯಮಾದಿಗಳಿಂದಲೂ, ದೇವ-ಬ್ರಾಹ್ಮಣ-ಗುರುಜನರ ಸತ್ಕಾರಗಳ ಮೂಲಕವಾಗಿಯೂ ಪರೇಶನಾದ ಶ್ರೀಹರಿಯು ನನ್ನಿಂದ ಆರಾಧಿಸಲ್ಪಟ್ಟಿದ್ದರೆ ಮತ್ತು ನಾನು ಮಾಡಿದ ಈ ಪೂಜೆಗಳಿಂದ ಅವನು ಪ್ರಸನ್ನನಾಗಿದ್ದರೆ, ಭಗವಾನ್ ಶ್ರೀಕೃಷ್ಣನು ಆಗಮಿಸಿ ನನ್ನ ಪಾಣಿಗ್ರಹಣಮಾಡಲಿ. ದಮಘೋಷಸುತನೇ ಆಗಲಿ, ಬೇರೆ ಯಾರಾದರೂ ಸರಿಯೆ ; ನನ್ನ ಕೈಹಿಡಿಯುವುದು ಬೇಡ.

ಶ್ವೋಭಾವಿನಿ ತ್ವಮಜಿತೋದ್ವಹನೇ ವಿದರ್ಭಾನ್
ಗುಪ್ತಃ ಸಮೇತ್ಯ ಪೃತನಾಪತಿಭಿಃ ಪರೀತಃ ।
ನಿರ್ಮಥ್ಯ ಚೈದ್ಯಮಗಧೇನ್ದ್ರಬಲಂ ಪ್ರಸಹ್ಯ
ಮಾಂ ರಾಕ್ಷಸೇನ ವಿಧಿನೋದ್ವಹ ವೀರ್ಯಶುಲ್ಕಾಮ್ ॥

ಅಜಿತನೇ! ಯಾರಿಂದಲೂ ಪರಾಜಿತನಾಗದವನೇ! ಪ್ರಭೋ! ನಾಳೆ ನನ್ನ ವಿವಾಹವಾಗಲಿದೆ–ಎನ್ನುವಾಗ, ನೀನು ಹಿಂದಿನ ದಿನವೇ ನಮ್ಮ ರಾಜಧಾನಿಗೆ ಸೇನಾಪತಿಗಳ ಸಮೇತನಾಗಿ ಗುಟ್ಟಾಗಿ ಬಂದು, ಶಿಶುಪಾಲನ ಮತ್ತು ಜರಾಸಂಧನ ಸೈನ್ಯವನ್ನು ಧ್ವಂಸಮಾಡಿಬಿಡು. ಬಳಿಕ ವೀರ್ಯಶುಲ್ಕಳಾದ ನನ್ನನ್ನು ಬಲಾತ್ಕಾರದಿಂದ ಸೆಳೆದೊಯ್ದು ರಾಕ್ಷಸವಿವಾಹ ವಿಧಿಯಂತೆ ಪಾಣಿಗ್ರಹಣಮಾಡಿಕೊ.

ಅನ್ತಃಪುರಾನ್ತರಚರೀಮನಿಹತ್ಯ ಬನ್ಧೂಂ-
ಸ್ತ್ವಾಮುದ್ವಹೇ ಕಥಮಿತಿ ಪ್ರವದಾಮ್ಯುಪಾಯಮ್ ।
ಪೂರ್ವೇದ್ಯುರಸ್ತಿ ಮಹತೀ ಕುಲದೇವಿಯಾತ್ರಾ
ಯಸ್ಯಾಂ ಬಹಿರ್ನವವಧೂರ್ಗಿರಿಜಾಮುಪೇಯಾತ್ ॥

'ಅಂತಃಪುರದ ಮಧ್ಯಭಾಗದಲ್ಲಿ ರಾಣೀವಾಸದಲ್ಲಿರುವ ನನ್ನನ್ನು ಅಪಹರಿಸಿಕೊಂಡು ಬರಬೇಕಾದರೆ ತಡೆಯಲು ಬರುವ ರಾಜಭಟರನ್ನೂ

ಅಗ್ನಿಹೋತ್ರಂ ತಪಃ ಸತ್ಯಂ ವೇದಾನಾಞ್ಚಾನುಪಾಲನಮ್ ।
ಆತಿಥ್ಯಂ ವೈಶ್ವದೇವಂ ಚ ಪ್ರಾಹುರಿಷ್ಟಮಿತಿ ಸ್ಮೃತಮ್ ॥
ವಾಪೀಕೂಪ ತಟಾಕಾದಿ ದೇವತಾಯತನಾನಿ ಚ ।
ಅನ್ನಪ್ರದಾನಮಾರಾಮಃ ಪೂರ್ತಮಿತ್ಯಭಿಧೀಯತೇ ॥

ಬಂಧುಗಳನ್ನೂ ಸಂಹರಿಸಿಯೇ ಅಪಹರಿಸಿಕೊಂಡು ಬರಬೇಕಾಗುವುದಲ್ಲಾ! ಇದು ಹೇಗೆ?'–ಎಂದು ನೀನು ಸಂದೇಹಿಸಬಹುದು. ಹಾಗೆ ಬಂಧುಗಳ ರಕ್ತಪಾತವಾಗದ ರೀತಿಯಲ್ಲಿ ನನ್ನನ್ನು ಅಪಹರಿಸಿಕೊಂಡು ಬರಲು ಸಾಧ್ಯ ವಾಗುವಂತೆ ನಾನೊಂದು ಉಪಾಯವನ್ನು ಹೇಳುತ್ತೇನೆ. ನಮ್ಮ ಕುಲಾ ಚಾರದಂತೆ ವಿವಾಹದ ಹಿಂದಿನ ದಿವಸ ಕುಲದೇವತೆಯ ದರ್ಶನಮಾಡಲು ದೊಡ್ಡದೊಂದು ಯಾತ್ರೆಯೇ ಹೊರಡುತ್ತದೆ. ಆ ಯಾತ್ರೆಯ ಜೊತೆಯಲ್ಲಿ ವಿವಾಹವಾಗುವ ನವವಧುವು ಗಿರಿಜಾದೇವಿಯ ಮಂದಿರಕ್ಕೆ ಹೋಗಬೇಕು. ಆ ಸಮಯದಲ್ಲಿ ನೀನು ನನ್ನನ್ನು ಅಪಹರಿಸಿಕೊಂಡು ಹೋಗಬಹುದು.

ಯಸ್ಯಾಙ್ಘ್ರಿಪಙ್ಕಜರಜಃಸ್ನಪನಂ ಮಹಾನ್ತೋ
ವಾಞ್ಛನ್ತ್ಯುಮಾಪತಿರಿವಾತ್ಮತಮೋಽಪಹತ್ಯೈ ।
ಯರ್ಹ್ಯಮ್ಬುಜಾಕ್ಷ ನ ಲಭೇಯ ಭವತ್ಪ್ರಸಾದಂ
ಜಹ್ಯಾಮಸೂನ್ ವ್ರತಕೃಶಾನ್ ಶತಜನ್ಮಭಿಃ ಸ್ಯಾತ್ ॥

ಕಮಲಾಕ್ಷನೇ! ಉಮಾಪತಿಯಾದ ಭಗವಾನ್ ಶಂಕರನಿಗೆ ಸಮಾನ ರಾದ ದೊಡ್ಡ ದೊಡ್ಡ ಮಹಾಪುರುಷರೂ ಆತ್ಮಶುದ್ಧಿಗಾಗಿ ನಿನ್ನ ಚರಣ ಕಮಲಗಳ ಧೂಳಿಯಲ್ಲಿ ಸ್ನಾನಮಾಡಲು ಅಪೇಕ್ಷಿಸುತ್ತಾರೆ. ನನಗೇನಾದರೂ ನಿನ್ನ ಪ್ರಸಾದವನ್ನು, ಪಾದಪಂಕಜಧೂಳಿಯನ್ನು ಪಡೆಯಲಾಗದಿದ್ದರೆ– ವ್ರತೋಪವಾಸಗಳ ಮೂಲಕವಾಗಿ ಶರೀರವನ್ನು ಶೋಷಿಸಿ ಪ್ರಾಣಪರಿತ್ಯಾಗ ಮಾಡುತ್ತೇನೆ. ನೂರಾರು ಜನ್ಮಗಳ ಅನಂತರವಾದರೂ ನಾನು ನಿನ್ನನ್ನೇ ಮದುವೆಯಾದೇನೇ ಹೊರತು ಬೇರೆಯವರನ್ನು ಮದುವೆಯಾಗುವುದಿಲ್ಲ."

ಬ್ರಾಹ್ಮಣನು ಹೇಳುತ್ತಾನೆ :

"ಯದುವಂಶಶಿರೋಮಣಿಯೇ! ಇದು ರುಕ್ಮಿಣಿಯು ನಿನಗೆ ಕಳುಹಿಸಿರುವ ಗುಟ್ಟಿನ ಸಂದೇಶವಾಗಿದೆ. ಈ ಸಂಬಂಧದಲ್ಲಿ ಯಾವುದನ್ನು ಮಾಡಬೇಕಾಗಿದೆಯೋ ಅದನ್ನು ಪರ್ಯಾಲೋಚಿಸಿ ನಿಶ್ಚಯಿಸಿ ಅದರಂತೆ ಅತಿತ್ವರೆ ಯಿಂದ ಕಾರ್ಯಮಾಡು."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದಲ್ಲಿ ೫೨ನೆಯ ಅಧ್ಯಾಯವು ಮುಗಿಯಿತು.

ರುಕ್ಮಿಣೀಹರಣ

ಶ್ರೀಶುಕಮುನಿಗಳು ಹೇಳುತ್ತಾರೆ :

ವೈದರ್ಭ್ಯಾಃ ಸ ತು ಸನ್ದೇಶಂ ನಿಶಮ್ಯ ಯದುನನ್ದನಃ ।
ಪ್ರಗೃಹ್ಯ ಪಾಣಿನಾ ಪಾಣಿಂ ಪ್ರಹಸನ್ನಿದಮಬ್ರವೀತ್ ॥೧॥

ಪರೀಕ್ಷಿತ! ವಿದರ್ಭರಾಜಪುತ್ರಿಯಾದ ರುಕ್ಮಿಣಿಯ ಆ ಸಂದೇಶವನ್ನು ಕೇಳಿ ಯದುನಂದನನಾದ ಶ್ರೀಕೃಷ್ಣನು ತನ್ನ ಕೈಯಿಂದ ಬ್ರಾಹ್ಮಣನ ಕೈಹಿಡಿದುಕೊಂಡು ಗಹಗಹಿಸಿ ನಗುತ್ತಾ ಹೇಳಿದನು :

"ಬ್ರಾಹ್ಮಣೋತ್ತಮ! ರುಕ್ಮಿಣಿಯ ಮನಸ್ಸು ನನ್ನಲ್ಲಿ ನೆಲೆಸಿರುವಂತೆಯೇ ನನ್ನ ಮನಸ್ಸೂ ಅವಳಲ್ಲಿಯೇ ನೆಲೆಸಿಬಿಟ್ಟಿದೆ. ರಾತ್ರಿಯಲ್ಲಿ ನನಗೆ ನಿದ್ರೆಯೇ ಬರುವುದಿಲ್ಲ. ರುಕ್ಮಿಯು ದ್ವೇಷದಿಂದಾಗಿ ನನ್ನೊಡನೆ ಆಗಬೇಕಾಗಿದ್ದ ರುಕ್ಮಿಣಿಯ ವಿವಾಹವನ್ನು ತಡೆದನೆಂಬ ವಿಷಯವನ್ನು ನಾನೂ ಅರಿತಿದ್ದೇನೆ. ಆಗಲಿ; ಶಿಶುಪಾಲ, ಜರಾಸಂಧರೇ ಮೊದಲಾದ ಕ್ಷತ್ರಿಯಾಪಸದರನ್ನು ಯುದ್ಧದಲ್ಲಿ ಮಥಿಸಿ–ಎರಡು ಅರಣಿಗಳನ್ನು ಕಡೆದು ಅಗ್ನಿಜ್ವಾಲೆಯನ್ನು ಹೊರತರುವಂತೆ–ನನ್ನಲ್ಲಿಯೇ ಆಸಕ್ತಳಾಗಿರುವ ಸರ್ವಾಂಗಸುಂದರಿಯಾದ ರುಕ್ಮಿಣಿಯನ್ನು ಕರೆತರುತ್ತೇನೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಶ್ರೀಕೃಷ್ಣನು ಬ್ರಾಹ್ಮಣನಿಗೆ ಹೀಗೆ ಹೇಳಿದನಂತರ ಅವನಿಂದ ರುಕ್ಮಿಣಿಯ ವಿವಾಹಕ್ಕಾಗಿ ಇಟ್ಟಿರುವ ಮುಹೂರ್ತವು ಯಾವುದೆಂಬುದನ್ನು ತಿಳಿದುಕೊಂಡು ಪ್ರಯಾಣಕ್ಕಾಗಿ ರಥವನ್ನು ಬೇಗ ಸಿದ್ಧಗೊಳಿಸುವಂತೆ ಸಾರಥಿ ಯಾದ ದಾರುಕನಿಗೆ ಹೇಳಿದನು. ದಾರುಕನು ಶೈಬ್ಯ-ಸುಗ್ರೀವ-ಮೇಘಪುಷ್ಪ ಮತ್ತು ಬಲಾಹಕಗಳೆಂಬ ಕುದುರೆಗಳಿಂದ ಕೂಡಿದ ರಥವನ್ನು ಸಜ್ಜುಗೊಳಿಸಿ ಕೈಜೋಡಿಸಿಕೊಂಡು ಶ್ರೀಕೃಷ್ಣನ ಮುಂದೆ ನಿಂತನು. ಶೂರನ ಮಗನಾದ ಶೌರಿಯು ಮೊದಲು ಬ್ರಾಹ್ಮಣನನ್ನು ರಥದಲ್ಲಿ ಹತ್ತಿಸಿ ಅನಂತರ ತಾನೂ ಕುಳಿತು ಅತಿಶೀಘ್ರವಾಗಿ ಹೋಗುವ ಕುದುರೆಗಳ ಮೂಲಕವಾಗಿ ಒಂದೇ

ರಾತ್ರಿಯಲ್ಲಿ ಆನರ್ತದೇಶದಿಂದ ವಿದರ್ಭದೇಶಕ್ಕೆ ಪ್ರಯಾಣಮಾಡಿದನು. ಕುಂಡಿನನರೇಶನಾದ ಭೀಷ್ಮಕನು ತನ್ನ ಮಗನಾದ ರುಕ್ಮಿಯ ಮೇಲಿನ ವ್ಯಾಮೋಹದಿಂದಾಗಿ ಅವನ ಮಾತಿನಂತೆ ತನ್ನ ಕುಮಾರಿಯಾದ ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಟ್ಟು ಮದುವೆಮಾಡಲು ನಿಶ್ಚಯಿಸಿ ವಿವಾಹ ಮಹೋತ್ಸವಕ್ಕಾಗಿ ಸಿದ್ಧತೆಗಳನ್ನು ಮಾಡುತ್ತಿದ್ದನು.

ಕುಂಡಿನನಗರದ ರಾಜಬೀದಿಗಳನ್ನೂ, ಬೀದಿಗಳನ್ನೂ, ಓಣಿಗಳನ್ನೂ, ನಾಲ್ಕು ಮಾರ್ಗಗಳು ಸೇರುವ ಚೌಕಗಳನ್ನೂ ಗುಡಿಸಿ ಗಂಧೋದಕಗಳಿಂದ ಸಾರಿಸಿದ್ದರು. ಚಿತ್ರ-ವಿಚಿತ್ರವಾದ ಧ್ವಜಗಳಿಂದಲೂ, ಪತಾಕೆಗಳಿಂದಲೂ, ತೋರಣಗಳಿಂದಲೂ ಬೀದಿಗಳನ್ನು ಸಿಂಗರಿಸಿದ್ದರು. ಪುಷ್ಪಹಾರಗಳಿಂದಲೂ, ಸುಗಂಧಯುಕ್ತವಾದ ಮಾಲೆಗಳಿಂದಲೂ, ನಾನಾವಿಧವಾದ ಸುವರ್ಣಾಭರಣಗಳಿಂದಲೂ, ಶುದ್ಧವಸ್ತ್ರಗಳಿಂದಲೂ ಭೂಷಿತರಾಗಿದ್ದ ಸ್ತ್ರೀ-ಪುರುಷರಿಂದ ಸೇವಿಸಲ್ಪಡುತ್ತಿದ್ದ, ಧೂಪದಿಂದ ಸುವಾಸಿತವಾಗಿದ್ದ ಮನೆಗಳಿಂದ ಆ ಪಟ್ಟಣವು ಕಂಗೊಳಿಸುತ್ತಿದ್ದಿತು. ಮಹಾರಾಜನಾದ ಭೀಷ್ಮಕನು ದೇವ-ಪಿತೃಗಳನ್ನು ಯಥಾವಿಧಿಯಾಗಿ ಪೂಜಿಸಿ, ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ ನಿಯಮಾನುಸಾರವಾಗಿ ಅವರಿಂದ ಸ್ವಸ್ತಿವಾಚನವನ್ನು ಮಾಡಿಸಿದನು. ಸುಂದರವಾದ ಹಲ್ಲುಗಳ ಸಾಲುಗಳಿಂದ ಶೋಭಿಸುತ್ತಿದ್ದ ಪರಮಸುಂದರಿಯಾದ ರುಕ್ಮಿಣೀದೇವಿಗೆ ಯಥಾವಿಧಿಯಾಗಿ ಮಂಗಳ ಸ್ನಾನಮಾಡಿಸಿ, ನೂತನವಸ್ತ್ರಗಳನ್ನುಡಿಸಿ, ದಿವ್ಯಾಭರಣಗಳನ್ನು ತೊಡಿಸಿ ಕೈಗಳಿಗೆ ಮಂಗಳಸೂತ್ರದ ಕಂಕಣಗಳನ್ನು ಕಟ್ಟಿದರು. ದ್ವಿಜಶ್ರೇಷ್ಠರು ಋಗ್ಯಜುಃಸಾಮಮಂತ್ರಗಳಿಂದ ಮದುವೆಯಾಗುವ ಹೆಣ್ಣಿಗೆ ರಕ್ಷಾಬಂಧನವನ್ನು ಮಾಡಿದರು. ಅಥರ್ವವೇದವನ್ನು ಬಲ್ಲ ಪುರೋಹಿತನು ಕ್ರೂರ ಗ್ರಹಗಳ ಶಾಂತಿಗಾಗಿ ಹೋಮವನ್ನು ಮಾಡಿದನು. ವಿಧಿ-ನಿಯಮಗಳನ್ನು ಬಲ್ಲವರಲ್ಲಿ ಶ್ರೇಷ್ಠನಾದ ಭೀಷ್ಮಕಮಹಾರಾಜನು ಬ್ರಾಹ್ಮಣರಿಗೆ ಚಿನ್ನವನ್ನೂ, ಬೆಳ್ಳಿಯನ್ನೂ, ವಸ್ತ್ರಗಳನ್ನೂ, ಬೆಲ್ಲದೊಡನೆ ಬೆರೆತ ಎಳ್ಳನ್ನೂ, ಗೋವುಗಳನ್ನೂ ದಾನಮಾಡಿದನು. ಇದೇ ರೀತಿಯಲ್ಲಿ ಚೇದಿರಾಜನಾದ ದಮಘೋಷನೂ ತನ್ನ ಮಗನಾದ ಶಿಶುಪಾಲನ ವಿವಾಹಸಂಬಂಧವಾಗಿ ಮಂತ್ರಜ್ಞರಾದ ಬ್ರಾಹ್ಮಣರಿಂದ ಅಭ್ಯುದಯಕ್ಕೆ ಉಚಿತವಾದ ಸಮಸ್ತ

ಮಂಗಳಕಾರ್ಯಗಳನ್ನೂ ಮಾಡಿಸಿದನು. ಬಳಿಕ ಪರಿವಾರಸಮೇತನಾದ ದಮಘೋಷನು ಮದೋದಕವನ್ನು ಸುರಿಸುತ್ತಿದ್ದ ಗಜಸೈನ್ಯದಿಂದಲೂ, ಸುವರ್ಣಮಾಲೆಗಳಿಂದ ವಿಭೂಷಿತವಾಗಿದ್ದ ರಥಸೈನ್ಯದಿಂದಲೂ, ಪದಾತಿಗಳಿಂದಲೂ, ಅಶ್ವಸೈನ್ಯದಿಂದಲೂ ಪರಿವೃತನಾಗಿ ಕುಂಡಿನನಗರಕ್ಕೆ ವಿಜೃಂಭಣೆಯಿಂದ ಪ್ರಯಾಣಮಾಡಿದನು. ಕುಂಡಿನನಗರಕ್ಕೆ ದಿಬ್ಬಣವು ಬಂದಿತೆಂದು ತಿಳಿದೊಡನೆಯೇ ವಿದರ್ಭಾಧಿಪತಿಯಾದ ಭೀಷ್ಮಕನು ಸಪರಿವಾರನಾಗಿ ಮುಂದೆಹೋಗಿ ದಮಘೋಷನನ್ನೂ, ಶಿಶುಪಾಲನನ್ನೂ ಮತ್ತು ಅವರ ಪರಿವಾರದವರನ್ನೂ ಸಂಭ್ರಮದಿಂದ ಸ್ವಾಗತಿಸಿ, ಯಥೋಚಿತವಾಗಿ ಸತ್ಕರಿಸಿ ಹಿಂದೆಯೇ ವ್ಯವಸ್ಥೆಗೊಳಿಸಿದ್ದ ರಾಜಭವನಗಳಲ್ಲಿ ಬೀಗರನ್ನು ಇಳಿಸಿದನು. ಶಿಶುಪಾಲನ ಕಡೆಯವರಾಗಿ ಶಾಲ್ವ, ಜರಾಸಂಧ, ದಂತವಕ್ತ್ರ, ವಿದೂರಥ, ಪೌಂಡ್ರಕ ಇವರೇ ಮೊದಲಾದ ಸಾವಿರಾರು ರಾಜರು ಆಗಮಿಸಿದ್ದರು.

ಪರೀಕ್ಷಿತ! ಶಿಶುಪಾಲನ ಕಡೆಯ ಆ ರಾಜರೆಲ್ಲರೂ ಬಲರಾಮ-ಕೃಷ್ಣರ ವಿರೋಧಿಗಳೇ ಆಗಿದ್ದರು. ರುಕ್ಮಿಣಿಯ ವಿವಾಹವು ಶಿಶುಪಾಲನೊಡನೆಯೇ ಆಗಬೇಕೆಂಬ ದೃಢನಿರ್ಧಾರದಿಂದ ಬಂದಿದ್ದರು. ಈ ಕಾರ್ಯವನ್ನು ಸಾಧಿಸುವುದೇ ಅವರೆಲ್ಲರ ಆಗಮನದ ಮುಖ್ಯಧ್ಯೇಯವಾಗಿದ್ದಿತು. ಬಲರಾಮನೇ ಮೊದಲಾದ ಯಾದವರಿಂದ ಪರಿವೃತನಾಗಿ ಶ್ರೀಕೃಷ್ಣನೇನಾದರೂ ಬಂದು ರುಕ್ಮಿಣಿಯನ್ನು ಅಪಹರಿಸಿದ್ದೇ ಆದರೆ ಎಲ್ಲರೂ ಜೊತೆಗೂಡಿ ಶ್ರೀಕೃಷ್ಣಪ್ರಮುಖರಾದ ಯಾದವರೊಡನೆ ಯುದ್ಧಮಾಡಬೇಕೆಂಬುದೇ ಅವರೆಲ್ಲರ ದೃಢನಿಶ್ಚಯವಾಗಿದ್ದಿತು. ಈ ಕಾರಣದಿಂದಲೇ ಆ ಎಲ್ಲ ರಾಜರೂ ಚತುರಂಗ ಬಲಸಮೇತರಾಗಿಯೇ ಆಗಮಿಸಿದ್ದರು. ಶತ್ರುಪಕ್ಷದವರ ಈ ಸನ್ನಾಹವು ಬಲರಾಮನಿಗೆ ತಿಳಿದುಹೋಯಿತು. ಶ್ರೀಕೃಷ್ಣನೊಬ್ಬನೇ ರುಕ್ಮಿಣಿಯನ್ನು ಅಪಹರಿಸಿಕೊಂಡು ಬರಲು ಹೋಗಿರುವನೆಂದು ತಿಳಿದನಂತರ ಕನ್ಯೆಯ ಸಲುವಾಗಿ ಎರಡು ಪಕ್ಷದವರಿಗೂ ಯುದ್ಧವು ಅನಿವಾರ್ಯವಾಗಬಹು ದೆಂದು ಬಲರಾಮನು ಸಂದೇಹಿಸಿದನು. ಯದ್ಯಪಿ ಬಲರಾಮನು ಶ್ರೀಕೃಷ್ಣನ ಬಲ-ಪರಾಕ್ರಮಗಳನ್ನು ತಿಳಿದವನಾಗಿದ್ದರೂ ಭ್ರಾತೃಸ್ನೇಹವೆಂಬ ಸಾಗರದಲ್ಲಿ ಮುಳುಗಿಹೋಗಿದ್ದ ಅವನು ಗಜಾಶ್ವ-ರಥ-ಪದಾತಿಗಳಿಂದ ಕೂಡಿದ ದೊಡ್ಡಸೈನ್ಯದೊಡನೆ ಅತ್ಯಂತ ಅವಸರದಿಂದ ಕುಂಡಿನಪುರಕ್ಕೆ ಪ್ರಯಾಣ

ಮಾಡಿದನು. ಇತ್ತಲಾಗಿ ಪರಮಸುಂದರಿಯಾದ ರುಕ್ಮಿಣೀದೇವಿಯು ಭಗವಂತನಾದ ಶ್ರೀಕೃಷ್ಣನ ಶುಭಾಗಮನವನ್ನೇ ಪ್ರತೀಕ್ಷಿಸುತ್ತಿದ್ದಳು. ತನ್ನ ಸಂದೇಶವನ್ನು ಪ್ರಿಯತಮನಿಗೆ ಒಯ್ದಿದ್ದ ಬ್ರಾಹ್ಮಣನೂ ಹಿಂದಿರುಗಿಬಾರ ದಿದ್ದುದನ್ನು ಕಂಡು ರುಕ್ಮಿಣಿಯು ಚಿಂತಿಸತೊಡಗಿದಳು :

"ಅಯ್ಯೋ! ದುರ್ಭಾಗ್ಯಳಾದ ನನ್ನ ವಿವಾಹವಾಗಲು ಒಂದು ರಾತ್ರಿಯು ಮಾತ್ರವೇ ಉಳಿದಿದೆ. ಆದರೆ ನನ್ನ ಜೀವನಸರ್ವಸ್ವನಾದ, ಅರವಿಂದಾಕ್ಷನಾದ ಶ್ರೀಕೃಷ್ಣನು ನನ್ನ ಪ್ರೀತಿಯ ಸಂದೇಶಕ್ಕನುಸಾರವಾಗಿ ಇದುವರೆಗೂ ಬರಲೇ ಇಲ್ಲ. ಇದಕ್ಕೆ ಕಾರಣವೇನಿರಬಹುದು? ಯಾವುದೂ ತಿಳಿಯುತ್ತಿಲ್ಲ. ನನ್ನ ಸಂದೇಶವನ್ನು ಒಯ್ದಿದ್ದ ಬ್ರಾಹ್ಮಣನು ಕೂಡ ಇದುವರೆಗೂ ಹಿಂದಿರುಗಿಬರಲಿಲ್ಲ. ಪರಿಶುದ್ಧಹೃದಯನಾದ ಶ್ರೀಕೃಷ್ಣನೇನಾ ದರೂ ನನ್ನಲ್ಲಿ ಯಾವುದಾದರೂ ಜುಗುಪ್ಸಿತವಾದ ವ್ಯವಹಾರವನ್ನು ಕಂಡು ನನ್ನ ಪಾಣಿಗ್ರಹಣಕ್ಕೆ ಪ್ರಯತ್ನಿಸದೇ ಇರುವುದು ಅವನಿಲ್ಲಿಗೆ ಬಾರದಿರುವುದಕ್ಕೆ ಕಾರಣವಾಗಿರಬಹುದೇ?

ದುರ್ಭಗಾಯಾ ನ ಮೇ ಧಾತಾ ನಾನುಕೂಲೋ ಮಹೇಶ್ವರಃ ।
ದೇವೀ ವಾ ವಿಮುಖಾ ಗೌರೀ ರುದ್ರಾಣೀ ಗಿರಿಜಾ ಸತೀ ॥೨೫॥

ನಿಶ್ಚಯವಾಗಿಯೂ ನಾನು ದುರ್ಭಾಗ್ಯಳಾಗಿದ್ದೇನೆ. ಬ್ರಹ್ಮನಾಗಲೀ ಪರಶಿವನಾಗಲೀ ನನಗೆ ಅನುಕೂಲರಾಗಿಲ್ಲ. ನನ್ನ ಆಶಯವನ್ನು ಪೂರೈಸಿ ಕೊಡುವವರಾಗಿಲ್ಲ. ರುದ್ರನ ಪತ್ನಿಯಾದ, ಹಿಮವಂತನ ಮಗಳಾದ, ಸಾಧ್ವಿ ಯಾದ ಗೌರಿಯೂ ನನ್ನ ವಿಷಯದಲ್ಲಿ ವಿಮುಖಳಾಗಿದ್ದಾಳೆ. ಪ್ರಸನ್ನಳಾಗಿಲ್ಲ."

ಪರೀಕ್ಷಿತ! ಗೋವಿಂದನಿಂದ ಅಪಹರಿಸಲ್ಪಟ್ಟ ಮನಸ್ಸುಳ್ಳವಳಾಗಿದ್ದ ರುಕ್ಮಿಣೀದೇವಿಯು ಹೀಗೆಯೇ ಚಿಂತಿಸುತ್ತಿದ್ದು, ಕಾಲದ ಮಹತ್ತ್ವ ವೇನೆಂಬುದನ್ನು ತಿಳಿದಿದ್ದಳಾದುದರಿಂದ ಹೆಚ್ಚು ನಿರಾಶಳಾಗದೆ, ಇನ್ನೂ ಸಮಯವು ಮೀರಿಹೋಗಿಲ್ಲವೆಂದು ಭಾವಿಸಿ ಸಮಾಧಾನಪಟ್ಟುಕೊಂಡು, ಕಂಬನಿಯಿಂದ ತುಂಬಿಹೋಗಿದ್ದ ಕಣ್ಣುಗಳನ್ನು ಹಾಗೆಯೇ ಮುಚ್ಚಿ ಕೊಂಡಳು. ಹೀಗೆ ಶ್ರೀಕೃಷ್ಣನ ಆಗಮನವನ್ನೇ ಪ್ರತೀಕ್ಷಿಸುತ್ತಿದ್ದ ವಧುವಿನ

ಎಡತೊಡೆ, ಎಡಕಣ್ಣು, ಎಡಭುಜಗಳು ಪ್ರಿಯವಾರ್ತೆಯನ್ನು ಹೇಳುತ್ತಿವೆಯೋ ಎಂಬಂತೆ ಅದುರತೊಡಗಿದುವು. ಅಷ್ಟರಲ್ಲಿಯೇ ಶ್ರೀಕೃಷ್ಣನ ಬಳಿಗೆ ಸಂದೇಶವನ್ನು ಒಯ್ದಿದ್ದ ಅದೇ ಬ್ರಾಹ್ಮಣನು, ಅಂತಃಪುರದಲ್ಲಿ ಶ್ರೀಕೃಷ್ಣ ನನ್ನೇ ಧ್ಯಾನಿಸುತ್ತಾ ಅತ್ತಲಿತ್ತ ಓಡಾಡುತ್ತಿದ್ದ ರಾಜಪುತ್ರಿಯಾದ ರುಕ್ಮಿಣೀ ದೇವಿಯನ್ನು ಸಂದರ್ಶಿಸಿದನು.

ಆ ಸಮಯದಲ್ಲಿ ಬ್ರಾಹ್ಮಣನ ಮುಖವು ಪ್ರಫುಲ್ಲವಾಗಿದ್ದಿತು. ಮನಸ್ಸು ಶಾಂತವಾಗಿದ್ದಿತು. ನಡಿಗೆಯು ಗಂಭೀರವಾಗಿದ್ದಿತು. ಯಾವುದೇ ವಿಧವಾದ ಅಳುಕೂ ಅವನ ಮುಖದಲ್ಲಾಗಲೀ ನಡಿಗೆಯಲ್ಲಾಗಲೀ ಕಾಣುತ್ತಿರಲಿಲ್ಲ. ಲಕ್ಷಣಶಾಸ್ತ್ರವನ್ನು ಚೆನ್ನಾಗಿ ತಿಳಿದಿದ್ದ ರುಕ್ಮಿಣೀದೇವಿಯು ಬ್ರಾಹ್ಮಣನ ಮುಖಲಕ್ಷಣಗಳನ್ನು ಅವಲೋಕಿಸಿ ತನ್ನ ಕಾರ್ಯಸಿದ್ಧಿಯಾಗಿರುವುದೆಂಬುದನ್ನು ನಿಶ್ಚಯಿಸಿ ಮಂದಹಾಸವನ್ನು ಬೀರುತ್ತಾ ಅವನನ್ನು ಹೋದ ಕಾರ್ಯವೇನಾಯಿತೆಂದು ಪ್ರಶ್ನಿಸಿದಳು.

ರುಕ್ಮಿಣಿಯ ಪ್ರಶ್ನೆಗೆ ಉತ್ತರವಾಗಿ ಬ್ರಾಹ್ಮಣನು ಹೇಳಿದನು :

"ದೇವಿ! ನಿನ್ನ ಪ್ರಿಯತಮನಾದ ಶ್ರೀಕೃಷ್ಣನು ಇಲ್ಲಿಗೆ ಆಗಮಿಸಿದ್ದಾನೆ ಮತ್ತು ನಿನ್ನನ್ನು ಕರೆದುಕೊಂಡುಹೋಗಲು ಸತ್ಯಪ್ರತಿಜ್ಞೆಯನ್ನೂ ಮಾಡಿದ್ದಾನೆ." ಶ್ರೀಕೃಷ್ಣನು ಆಗಮಿಸಿರುವನೆಂಬ ಅಮೃತಧಾರೆಗೆ ಸಮಾನ ವಾದ ಈ ಮಾತನ್ನು ಕೇಳುತ್ತಲೇ ರುಕ್ಮಿಣಿಯು ಆನಂದಸಾಗರದಲ್ಲಿ ಮುಳುಗಿಹೋದಳು. ಇಂತಹ ಕರ್ಣಾನಂದಕರವಾದ ವಾರ್ತೆಯನ್ನು ತಂದ ಬ್ರಾಹ್ಮಣನಿಗೆ ಅತ್ಯಂತಪ್ರಿಯವಾದ ಯಾವ ವಸ್ತುವನ್ನು ಕೊಡಬೇಕೆಂಬುದು ತೋರದೇ ದೇವಿಯು ಭಕ್ತಿಯಿಂದ ನಮಸ್ಕರಿಸಿಬಿಟ್ಟಳು.

ಬಲರಾಮ-ಕೃಷ್ಣರೂ ತನ್ನ ಮಗಳ ವಿವಾಹವನ್ನು ನೋಡುವ ಉತ್ಸುಕತೆಯಿಂದ ಕುಂಡಿನಪುರಕ್ಕೆ ಆಗಮಿಸಿರುವರೆಂಬ ವಾರ್ತೆಯನ್ನು ಕೇಳುತ್ತಲೇ ಭೀಷ್ಮಕಮಹಾರಾಜನು ಮಂಗಳವಾದ್ಯಗಳ ಪುರಃಸರವಾಗಿ ಅವರನ್ನು ಇದಿರ್ಗೊಂಡು ಸ್ವಾಗತಿಸಿದನು. ಮಧುಪರ್ಕದಿಂದಲೂ, ಶುಭ್ರವಾದ ವಸ್ತ್ರಗಳಿಂದಲೂ, ಅಭೀಷ್ಟವಾದ ಕಾಣಿಕೆಗಳಿಂದಲೂ ಅವರನ್ನು ವಿಧಿಪೂರ್ವಕವಾಗಿ ಸತ್ಕರಿಸಿದನು. ಮೇಧಾವಿಯಾದ ಭೀಷ್ಮಕನು ಶ್ರೀಕೃಷ್ಣ-

ಬಲರಾಮರಿಗೂ ಮತ್ತು ಅವರೊಡನೆ ಬಂದಿದ್ದ ಸೈನಿಕರಿಗೂ ಸಮಸ್ತ ಸಾಮಗ್ರಿಗಳಿಂದಲೂ ಸಂಪನ್ನವಾಗಿದ್ದ ಸುಂದರವಾದ ಬಿಡಾರಗಳನ್ನು ಕಲ್ಪಿಸಿಕೊಟ್ಟು ಆದರಣೀಯರಾದ ಎಲ್ಲ ಅತಿಥಿಗಳನ್ನೂ ಆದರದಿಂದ ಸತ್ಕರಿಸಿದನು. ಹೀಗೆ ಭೀಷ್ಮಕಮಹಾರಾಜನು ತನ್ನ ಆಹ್ವಾನಕ್ಕೆ ಮನ್ನಣೆಯನ್ನಿತ್ತು ಮಗಳ ವಿವಾಹಮಹೋತ್ಸವಕ್ಕೆ ಆಗಮಿಸಿದ್ದ ಸಮಸ್ತರಾಜರನ್ನೂ ಅವರವರ ಪರಾಕ್ರಮ, ವಯಸ್ಸು, ಸೈನ್ಯಸಂಪತ್ತಿ, ಐಶ್ವರ್ಯ ಸಂಪತ್ತಿ–ಇವುಗಳಿಗೆ ಅನುಸಾರವಾಗಿ ಸಮಸ್ತವಾದ ಕಾಮನಾವಸ್ತುಗಳಿಂದಲೂ ಸತ್ಕರಿಸಿದನು. ಶ್ರೀಕೃಷ್ಣನೂ ವಿವಾಹಮಹೋತ್ಸವಕ್ಕೆ ಆಗಮಿಸಿರುವನೆಂಬ ವಾರ್ತೆಯನ್ನು ಕೇಳಿದೊಡನೆಯೇ ಕುಂಡಿನಪುರವಾಸಿಗಳೆಲ್ಲರೂ ಶ್ರೀಕೃಷ್ಣನು ಇಳಿದುಕೊಂಡಿದ್ದ ಬಿಡಾರಕ್ಕೆ ಬಂದು ಶ್ರೀಕೃಷ್ಣನ ಮುಖಕಮಲದಿಂದ ಸುರಿಯುತ್ತಿದ್ದ ಮಧುವಿನ ರಸವನ್ನು ಕಣ್ಣುಗಳೆಂಬ ಅಂಜಲಿಗಳಲ್ಲಿ ಸುರಿದುಕೊಂಡು ಮನಸ್ಸು ತಣಿಯುವಂತೆ ಕುಡಿಯ ತೊಡಗಿದರು. ಜಗದಾನಂದಕಂದನಾದ ಶ್ರೀಕೃಷ್ಣನನ್ನು ಪಟ್ಟಣಿಗರು ಎವೆಯಿಕ್ಕದೇ ನೋಡುತ್ತಾ ಪರಸ್ಪರವಾಗಿ ಹೀಗೆ ಮಾತನಾಡಿಕೊಂಡರು :

ಅಸ್ಯೈವ ಭಾರ್ಯಾ ಭವಿತುಂ ರುಕ್ಮಿಣ್ಯರ್ಹತಿ ನಾಪರಾ ।
ಅಸಾವಪ್ಯನವದ್ಯಾತ್ಮಾ ಭೈಷ್ಮ್ಯಾಃ ಸಮುಚಿತಃ ಪತಿಃ ॥೩೭॥

"ನಮ್ಮ ರಾಜಕುಮಾರಿಯಾದ ರುಕ್ಮಿಣಿಯೇ ಈ ಶ್ಯಾಮಸುಂದರನ ಅರ್ಧಾಂಗಿಯಾಗಲು ಯೋಗ್ಯಳಾಗಿದ್ದಾಳೆ. ದೋಷರಹಿತನಾದ ಈ ಶ್ರೀಕೃಷ್ಣನೇ ರಾಜಕನ್ಯೆಗೆ ಅನುರೂಪನಾದ ಪತಿಯಾಗಿದ್ದಾನೆ. ನಮ್ಮ ರಾಜಕುಮಾರಿಯನ್ನು ಬಿಟ್ಟು ಬೇರೆ ಯಾವಳೂ ಇವನಿಗೆ ಪತ್ನಿಯಾಗಲು ಅರ್ಹಳಲ್ಲ.

ಕಿಞ್ಚಿತ್ಸುಚರಿತಂ ಯನ್ನಸ್ತೇನ ತುಷ್ಟಸ್ತ್ರಿಲೋಕಕೃತ್ ।
ಅನುಗೃಹ್ಣಾತು ಗೃಹ್ಣಾತು ವೈದರ್ಭ್ಯಾಃ ಪಾಣಿಮಚ್ಯುತಃ ॥೩೮॥

ಜನ್ಮಜನ್ಮಾಂತರಗಳಲ್ಲಿ ಮಾಡಿದ ಅಲ್ಪ-ಸ್ವಲ್ಪ ಪುಣ್ಯವೇನಾದರೂ ನಮಗೆ ಇರುವುದಾದರೆ ಆ ಸುಕೃತದಿಂದ, ಮೂರು ಲೋಕಗಳನ್ನೂ ಸೃಷ್ಟಿ

ಸಿರುವ ಭಗವಂತನು, ರುಕ್ಮಿಣೀದೇವಿಯ ಪಾಣಿಯನ್ನು ಶ್ರೀಕೃಷ್ಣನು ಹಿಡಿಯುವ ಸುಂದರದೃಶ್ಯವನ್ನು ನೋಡಲು ಸಾಧ್ಯವಾಗುವಂತೆ ನಮ್ಮನ್ನು ಅನುಗ್ರಹಿಸಲಿ."

ಪರೀಕ್ಷಿತಮಹಾರಾಜ! ಕುಂಡಿನಪುರವಾಸಿಗಳೆಲ್ಲರೂ ಪ್ರೇಮಪರವಶರಾಗಿ ಹೀಗೆ ಮಾತನಾಡಿಕೊಳ್ಳುತ್ತಿರಲು ರಾಜಭಟರಿಂದ ರಕ್ಷಿಸಲ್ಪಡುತ್ತಿದ್ದ ಮದುವಣಗಿತ್ತಿಯು ಅಂತಃಪುರದಿಂದ ಹೊರಟು ಅಂಬಿಕಾಲಯಕ್ಕೆ ಹೋದಳು. ರುಕ್ಮಿಣಿಯಾದರೋ ಶ್ರೀಕೃಷ್ಣನ ಪಾದಪಂಕಜಗಳನ್ನೇ ಚೆನ್ನಾಗಿ ಧ್ಯಾನಮಾಡುತ್ತಾ ಭವಾನಿಯ ಪಾದಪಲ್ಲವವನ್ನು ಸಂದರ್ಶಿಸಲು ಕಾಲ್ನಡಿಗೆಯಲ್ಲಿಯೇ ದೇವಾಲಯಕ್ಕೆ ಹೋದಳು. ಆಕೆಯು ಮೌನವಾಗಿದ್ದಳು. ಮಾತೃವರ್ಗದವರಿಂದಲೂ, ಸಖಿಯರಿಂದಲೂ ಪರಿವೃತಳಾಗಿದ್ದಳು. ಆಯುಧಗಳನ್ನು ಹಿಡಿದು ಸನ್ನದ್ಧರಾಗಿದ್ದ ಶೂರರಾದ ರಾಜಭಟರಿಂದ ರಕ್ಷಿಸಲ್ಪಡುತ್ತಿದ್ದಳು. ಭೇರೀ-ಮೃದಂಗ-ಶಂಖ-ಪಣವ-ತೂರ್ಯ–ಇವೇ ಮುಂತಾದ ಮಂಗಳವಾದ್ಯಗಳು ಮೊಳಗುತ್ತಿದ್ದುವು. ಬ್ರಾಹ್ಮಣಪತ್ನಿಯರು ಪುಷ್ಪಮಾಲೆಗಳಿಂದಲೂ, ಚಂದನವೇ ಮೊದಲಾದ ಸುಗಂಧದ್ರವ್ಯಗಳಿಂದಲೂ, ನಯನಮನೋಹರವಾದ ವಸ್ತ್ರಗಳಿಂದಲೂ ಮತ್ತು ಆಭರಣಗಳಿಂದಲೂ ಸಮಲಂಕೃತರಾಗಿ ವಧುವಿನ ಜೊತೆಯಲ್ಲೇ ಹೋಗುತ್ತಿದ್ದರು. ಅನೇಕಪ್ರಕಾರವಾದ ಕಾಣಿಕೆಗಳನ್ನೂ, ದೇವತೆಗಳಿಗೆ ಅರ್ಪಿಸಬೇಕಾಗಿದ್ದ ಬಲಿಗಳನ್ನೂ, ಪೂಜಾಸಾಮಗ್ರಿಗಳನ್ನೂ ಎತ್ತಿಕೊಂಡು ಸಾವಿರಾರು ವಾರಾಂಗನೆಯರು ವಧುವನ್ನು ಹಿಂಬಾಲಿಸಿ ಹೋಗುತ್ತಿದ್ದರು. ಗಾಯಕರು ಗಾನಮಾಡುತ್ತಿದ್ದರು ಮತ್ತು ರಾಜನ ಬಿರುದಾವಳಿಗಳನ್ನು ಹೇಳಿಕೊಂಡು ಸ್ತೋತ್ರಮಾಡುತ್ತಿದ್ದರು. ವಾದ್ಯಗಾರರು ವಾದ್ಯಗಳನ್ನು ಬಾರಿಸುತ್ತಿದ್ದರು. ಸೂತ-ವಂದಿ-ಮಾಗಧರು ವಧುವನ್ನು ಸುತ್ತುವರಿದು ಜಯಕಾರ ಮಾಡುತ್ತಾ ಹೋಗುತ್ತಿದ್ದರು. ಇಂತಹ ವೈಭವದೊಡನೆ ದೇವೀಮಂದಿರವನ್ನು ತಲುಪಿದನಂತರ ರುಕ್ಮಿಣೀದೇವಿಯು ಕಮಲಸದೃಶವಾದ, ಸುಕೋಮಲವಾದ ತನ್ನ ಕೈ-ಕಾಲುಗಳನ್ನು ತೊಳೆದುಕೊಂಡು, ಆಚಮನ ಮಾಡಿ, ಪವಿತ್ರಳಾಗಿ, ಶಾಂತವಾದ ಮನಸ್ಸಿನಿಂದ ಕೂಡಿದವಳಾಗಿ ಅಂಬಿಕಾದೇವಿಯ ಗರ್ಭಗೃಹವನ್ನು ಪ್ರವೇಶಿಸಿದಳು. ವಿವಾಹಸಂಬಂಧವಾದ

ವಿಧಿ-ವಿಧಾನಗಳನ್ನು ತಿಳಿದಿದ್ದ ವೃದ್ಧೆಯರಾದ ಬ್ರಾಹ್ಮಣಸ್ತ್ರೀಯರು ರಾಜಪುತ್ರಿಯಿಂದ, ಭವನಿಂದ ಕೂಡಿದ್ದ, ಭವಪತ್ನಿಯಾದ ಭವಾನಿಗೆ ನಮಸ್ಕಾರವನ್ನು ಮಾಡಿಸಿದರು. ಅನಂತರ ರಾಜಕುಮಾರಿಯು ಭವಾನಿಯನ್ನು ಪ್ರಾರ್ಥಿಸಿಕೊಂಡಳು :

ನಮಸ್ಯೇ ತ್ವಾಮ್ಬಿಕೇಭೀಕ್ಷ್ಣಂ ಸ್ವಸನ್ತಾನಯುತಾಂ ಶಿವಾಮ್ ।
ಭೂಯಾತ್ ಪತಿರ್ಮೇ ಭಗವಾನ್ ಕೃಷ್ಣಸ್ತದನುಮೋದತಾಮ್ ॥

"ತಾಯೇ! ನಿನ್ನ ತೊಡೆಯ ಮೇಲೆ ಕುಳಿತಿರುವ ನಿನ್ನ ಪ್ರಿಯ ಪುತ್ರನಾದ ಗಣೇಶನನ್ನೂ ಮತ್ತು ದಯಾಮಯಿಯಾದ ನಿನ್ನನ್ನೂ ಪುನಃ ಪುನಃ ನಮಸ್ಕರಿಸಿ ಪ್ರಾರ್ಥಿಸಿಕೊಳ್ಳುತ್ತೇನೆ. ಶ್ರೀಕೃಷ್ಣಸ್ವಾಮಿಯೇ ನನಗೆ ಪತಿಯಾಗಲಿ. ಈ ನನ್ನ ಪ್ರಾರ್ಥನೆಯನ್ನು ನೀನು ದಯಮಾಡಿ ಅನುಮೋದಿಸಬೇಕು."

ಬಳಿಕ ರುಕ್ಮಿಣೀದೇವಿಯು ವೃದ್ಧೆಯರಾದ ಬ್ರಾಹ್ಮಣಸ್ತ್ರೀಯರ ನಿರ್ದೇಶನದಂತೆ ಜಲ, ಗಂಧ, ಅಕ್ಷತೆ, ಧೂಪ, ವಸ್ತ್ರ, ಪುಷ್ಪಮಾಲೆ, ಹಾರ, ಆಭೂಷಣ, ಅನೇಕ ಪ್ರಕಾರವಾದ ನೈವೇದ್ಯ, ಬಲಿ, ದೀಪಾವಳಿ, ಆರತಿ–ಇವೇ ಮೊದಲಾದುವುಗಳಿಂದ ಅಂಬಿಕಾದೇವಿಗೆ ಮಹಾಪೂಜೆಯನ್ನು ಸಲ್ಲಿಸಿದಳು. ಅನಂತರ ಸುಮಂಗಲಿಯರಾದ ಬ್ರಾಹ್ಮಣಸ್ತ್ರೀಯರಿಗೆ ಮೇಲೆ ಹೇಳಿದ ಪೂಜಾಸಾಮಗ್ರಿಗಳಿಂದಲೂ ಉಪ್ಪು, ಅಪೂಪ, ತಾಂಬೂಲ, ಕಂಠಸೂತ್ರ, ಹಣ್ಣುಗಳು, ಕಬ್ಬು–ಇತ್ಯಾದಿಗಳಿಂದಲೂ ವಿಧಿವತ್ತಾಗಿ ಪೂಜೆಯನ್ನು ಸಲ್ಲಿಸಿದಳು. ಬ್ರಾಹ್ಮಣಸ್ತ್ರೀಯರು ರಾಜಕುಮಾರಿಗೆ ಪ್ರಸಾದವನ್ನಿತ್ತು ಆಶೀರ್ವದಿಸಿದರು. ರಾಜಕುಮಾರಿಯು ದೇವಿಗೂ ಬ್ರಾಹ್ಮಣಸ್ತ್ರೀಯರಿಗೂ ಭಕ್ತಿಪೂರ್ವಕವಾಗಿ ನಮಸ್ಕರಿಸಿ ವಿನಮ್ರಭಾವದಿಂದ ಪ್ರಸಾದವನ್ನು ಸ್ವೀಕರಿಸಿದಳು. ಬಳಿಕ ರಾಜಕುಮಾರಿಯು ಮೌನವನ್ನೂ ವ್ರತವನ್ನೂ ಮುರಿದು ರತ್ನಖಚಿತವಾದ ಮುದ್ರೆಯುಂಗುರದಿಂದ ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದ ತನ್ನ ಕೈಯಿಂದ ಸೇವಕಿಯೊಬ್ಬಳ ಕೈಯನ್ನು ಹಿಡಿದುಕೊಂಡು ಅಂಬಾಲಯದಿಂದ ಹೊರಟುಬಿಟ್ಟಳು.

ಪರೀಕ್ಷಿತಮಹಾರಾಜ! ಪರಮಾತ್ಮನ ಮಾಯಾದೇವಿಯಂತೆಯೇ ಇದ್ದ ರುಕ್ಮಿಣೀದೇವಿಯು ವೀರಾಧಿವೀರರನ್ನೂ ವಿಮೋಹಗೊಳಿಸುತ್ತಿದ್ದಳು.

ಅವಳ ಕಟಿಪ್ರದೇಶವು ಸುಂದರವಾಗಿಯೂ ತೆಳುವಾಗಿಯೂ ಇದ್ದಿತು. ಥಳ-ಥಳಿಸುವ ಕುಂಡಲಗಳಿಂದ ಅವಳ ಮುಖಕಮಲವು ಸಮಲಂಕೃತ ವಾಗಿದ್ದಿತು. ಯೌವನದ ಹೊಸ್ತಿಲನ್ನು ಆಗತಾನೇ ದಾಟಿದ್ದಳು. ಅವಳ ನಿತಂಬವು ರತ್ನಮಯವಾದ ಸೊಂಟಪಟ್ಟಿಯಿಂದ ಸಮಲಂಕೃತವಾಗಿ ದ್ದಿತು. ಆಕೆಯ ಸ್ತನಗಳು ಆಗತಾನೇ ಎದ್ದುಕಾಣುತ್ತಿದ್ದುವು. ಗುಂಗುರುಕೂದಲುಗಳು ಮುಂದೆ ಚಾಚಿಕೊಂಡು ಇದ್ದುದರಿಂದ ಆಕೆಯ ನೋಟವು ಚಂಚಲವಾಗಿತ್ತು. ಅವಳು ಶುಭ್ರವಾದ ನಗೆಯುಳ್ಳವಳಾಗಿದ್ದಳು. ತೊಂಡೇಹಣ್ಣಿನಂತಿದ್ದ ಅವಳ ತುಟಿಯ ಕೆಂಪಿನಿಂದ ಮಲ್ಲಿಗೆ ಮೊಗ್ಗು ಗಳಂತಿದ್ದ ಅವಳ ಹಲ್ಲುಗಳು ಕೆಂಪಾಗಿ ಕಾಣುತ್ತಿದ್ದುವು. ಝಣ-ಝಣಿಸು ತ್ತಿದ್ದ ಕಾಲಂದುಗೆಗಳ ಕಾಂತಿಯಿಂದ ಮನೋಹರವಾಗಿ ಕಾಣುತ್ತಿದ್ದ, ಕೋಮಲವಾದ ಕಾಲುಗಳಿಂದ, ರಾಜಹಂಸದಂತೆ ರಾಜಕುಮಾರಿಯು ಗಂಭೀರವಾಗಿ ಮಂದ-ಮಂದವಾಗಿ ನಡೆದುಹೋಗುತ್ತಿದ್ದಳು. ರುಕ್ಮಿಣಿಯ ಅಂತಹ ಅನುಪಮವಾದ ಶರೀರಕಾಂತಿಯನ್ನು ನೋಡಿ, ಹೃದಯಾಂತರಾಳ ದಲ್ಲಿದ್ದ ಕಾಮದೇವನ ಬಾಣಗಳಿಂದ ಪೀಡಿತರಾಗಿ, ಅಲ್ಲಿಗೆ ಆಗಮಿಸಿದ್ದ ವೀರಾಧಿವೀರರೆಲ್ಲರೂ–ದೇವೀಮಂದಿರದ ಯಾತ್ರೆಯ ವ್ಯಾಜದಿಂದ ತನ್ನ ಸ್ವಾಮಿಯಾದ ಶ್ರೀಕೃಷ್ಣಸ್ವಾಮಿಗೆ ತನ್ನ ಸೌಂದರ್ಯ, ಹಾವ-ಭಾವ-ವಿಲಾಸಾದಿ ಗಳನ್ನು ಅರ್ಪಿಸುವ ಆಶಯದಿಂದ ಮಂದಗಮನೆಯಾಗಿ ನಡೆದು ಬರುತ್ತಿದ್ದ ರುಕ್ಮಿಣೀದೇವಿಯ ಲೋಕೋತ್ತರವಾದ ಮಂದಹಾಸವನ್ನೂ ನಾಚಿಕೆಯಿಂದ ಕೂಡಿದ ಕಡೆಗಣ್ಣಿನ ನೋಟವನ್ನೂ ಕಂಡು ಬುದ್ಧಿಗೆಟ್ಟು, ತಾವು ಹಿಡಿದಿದ್ದ ಆಯುಧಗಳು ಕೈಗಳಿಂದ ಜಾರಿಬಿದ್ದುದೂ ತಿಳಿಯದೇ ತಾವು ಕುಳಿತಿದ್ದ ರಥಾಶ್ವ-ಗಜಗಳ ಮೇಲಿನಿಂದ ಕೆಳಕ್ಕೆ ಬಿದ್ದುಹೋದರು. ಹೀಗೆ ರುಕ್ಮಿಣೀ ದೇವಿಯು ಭಗವಂತನಾದ ಶ್ರೀಕೃಷ್ಣನ ಶುಭಾಗಮನವನ್ನು ಪ್ರತೀಕ್ಷಿಸುತ್ತಾ ಕಮಲದಂತಹ ಸುಕೋಮಲವಾದ ಪಾದಪದ್ಮಗಳಿಂದ ಮೆಲ್ಲ-ಮೆಲ್ಲನೆ ನಡೆದುಹೋಗುತ್ತಿದ್ದಳು. ಆ ಸಮಯದಲ್ಲಿ ದೇವಿಯು ಕ್ಷಣ-ಕ್ಷಣಕ್ಕೂ ಮುಖವನ್ನು ಮುಚ್ಚುತ್ತಿದ್ದ ಗುಂಗುರುಕೂದಲನ್ನು ಎಡಗೈಯಿನ ಬೆರಳು ಗಳಿಂದ ಹಿಂದಕ್ಕೆ ಸರಿಸಿ ತಮ್ಮೆದುರಾಗಿ ಬರುತ್ತಿದ್ದ ರಾಜರನ್ನು ಲಜ್ಜೆಯಿಂದ ಕೂಡಿದ ಕಡೆಗಣ್ಣಿನಿಂದ ನೋಡುತ್ತಿದ್ದಳು. ಹೀಗೆಯೇ ಮುನ್ನಡೆದ ಅವಳು

ತನ್ನ ಪ್ರಿಯತಮನಾದ, ತ್ರಿಲೋಕಸುಂದರನಾದ ಶ್ರೀಕೃಷ್ಣನನ್ನು ನೋಡಿದಳು. ಒಡನೆಯೇ ಶ್ರೀಕೃಷ್ಣನ ರಥಕ್ಕೆ ಹತ್ತಲು ಅಪೇಕ್ಷಿಸಿದ ಆ ರಾಜಕನ್ಯೆಯನ್ನು ಶ್ರೀಕೃಷ್ಣನು, ಅಲ್ಲಿ ನೆರೆದಿದ್ದ ರಾಜಮಂಡಲವನ್ನು ಅತ್ಯಂತ ತಿರಸ್ಕಾರಭಾವದಿಂದ ಕಾಣುತ್ತಾ, ಶತ್ರುಗಳೆಲ್ಲರ ಸಮಕ್ಷದಲ್ಲಿಯೇ ಎತ್ತಿ



ಕೊಂಡು ಗರುಡನ ಚಿಹ್ನೆಯ ಧ್ವಜವುಳ್ಳ ರಥದಲ್ಲಿ ಕುಳ್ಳಿರಿಸಿಕೊಂಡನು. ಗುಳ್ಳೇನರಿಗಳ ಮಧ್ಯದಲ್ಲಿರುವ, ತನಗೆ ಸಲ್ಲಬೇಕಾದ ಪ್ರಾಣಿಯನ್ನು ಸಿಂಹವು ಯಾವ ಭಯವೂ ಇಲ್ಲದೆ ಎತ್ತಿಕೊಂಡು ಹೋಗುವಂತೆ–ನರಿಗಳಿಗೆ ಸದೃಶರಾಗಿದ್ದ ರಾಜರ ಮಧ್ಯದಿಂದ ರುಕ್ಮಿಣಿಯನ್ನು ಅಪಹರಿಸಿ ಶ್ರೀಕೃಷ್ಣನು–ಬಲರಾಮಪುರಸ್ಸರರಾದ ಯದುವಂಶೀಯಯೋಧರೊಡನೆ ಮೆಲ್ಲ-ಮೆಲ್ಲನೆ ಹೆಜ್ಜೆಗಳನ್ನಿಟ್ಟನು.

ಆ ಸಮಯದಲ್ಲಿ ಜರಾಸಂಧನ ಸಾಮಂತರಾಗಿದ್ದ, ಮಾನಿಷ್ಠರಾಗಿದ್ದ, ಅಭಿಮಾನಶಾಲಿಗಳಾಗಿದ್ದ ರಾಜರು ಯಶಃಕೀರ್ತಿನಾಶಕವಾದ ಇಂತಹ ತಿರಸ್ಕಾರವನ್ನು ಸಹಿಸಿಕೊಳ್ಳಲಿಲ್ಲ. ಅವರೆಲ್ಲರೂ ಒಟ್ಟಾಗಿ ಸೇರಿ ಕೂಗಾಡಲಾರಂಭಿಸಿದರು.

ಅಹೋ ಧಿಗಸ್ಮಾನ್ ಯಶ ಆತ್ತಧನ್ವನಾಂ
ಗೋಪೈರ್ಹೃತಂ ಕೇಸರಿಣಾಂ ಮೃಗೈರಿವ ॥೫೭॥

“ಆಹಾ! ಆಯುಧಗಳನ್ನು ಹಿಡಿದೇ ನಿಂತಿರುವ ನಮಗೆ ಧಿಕ್ಕಾರ

ವಿರಲಿ. ಸಿಂಹಗಳಿಗೆ ಸೇರಬೇಕಾದುದನ್ನು ಗುಳ್ಳೇನರಿಗಳು ಅಪಹರಿಸುವಂತೆ ನಮ್ಮ ಯಶಸ್ಸನ್ನು ಸಾಧಾರಣರಾದ ಗೊಲ್ಲರು ಇಂದು ಅಪಹರಿಸಿಬಿಟ್ಟರಲ್ಲವೇ!"

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ೫೩ನೆಯ ಅಧ್ಯಾಯವು ಮುಗಿಯಿತು.

ಶಿಶುಪಾಲನ, ಅವನ ಅನುಯಾಯಿಗಳ ಮತ್ತು ರುಕ್ಮಿಯ ಪರಾಜಯ : ಶ್ರೀಕೃಷ್ಣ-ರುಕ್ಮಿಣಿಯರ ವಿವಾಹ

ಶ್ರೀಶುಕಮುನಿಗಳು ಹೇಳುತ್ತಾರೆ :

ಇತಿ ಸರ್ವೇ ಸುಸಂರಬ್ಧಾ ವಾಹಾನಾರುಹ್ಯ ದಂಶಿತಾಃ ।
ಸ್ವೈಃ ಸ್ವೈರ್ಬಲೈಃ ಪರಿಕ್ರಾನ್ತಾ ಅನ್ವೀಯುರ್ಧೃತಕಾರ್ಮುಕಾಃ ॥೧॥

ಪರೀಕ್ಷಿತಮಹಾರಾಜ! ಹೀಗೆ ತಮ್ಮ ಸಮಕ್ಷದಲ್ಲಿಯೇ ಶ್ರೀಕೃಷ್ಣನು ರುಕ್ಮಿಣಿಯನ್ನು ಅಪಹರಿಸಿಕೊಂಡು ಹೋಗಲಾಗಿ ಎಲ್ಲ ರಾಜರೂ ಕೋಪದಿಂದ ಕಿಡಿ-ಕಿಡಿಯಾದರು. ಕವಚಗಳನ್ನು ಧರಿಸಿ ವಾಹನಗಳನ್ನೇರಿದರು. ತಮ್ಮ-ತಮ್ಮ ಸೈನಿಕರಿಂದ ಪರಿವೃತರಾಗಿ ಧನುಸ್ಸುಗಳನ್ನು ಹಿಡಿದು ಎಲ್ಲ ರಾಜರೂ ಶ್ರೀಕೃಷ್ಣನನ್ನು ಹಿಂಬಾಲಿಸಿದರು. ತಮ್ಮ ಮೇಲೆ ಬೀಳಲು ಶತ್ರುಗಳು ತಮ್ಮನ್ನು ಹಿಂಬಾಲಿಸಿ ಬರುತ್ತಿರುವುದನ್ನು ನೋಡಿ ಯಾದವ ಸೈನ್ಯದ ಸೇನಾನಾಯಕರು ಹಿಂದಕ್ಕೆ ತಿರುಗಿ ಧನುಸ್ಸುಗಳನ್ನು ಟೇಂಕರಿಸುತ್ತಾ ಶತ್ರುಸೈನ್ಯಕ್ಕೆ ಅಭಿಮುಖವಾಗಿ ನಿಂತರು. ಗಜಾಶ್ವ-ರಥಗಳ ಮೇಲೆ ಕುಳಿತಿದ್ದ ರಣಕೋವಿದರಾದ ಜರಾಸಂಧನ ಕಡೆಯ ಸೈನಿಕರು ಯಾದವಸೈನ್ಯದ ಮೇಲೆ—ಮೇಘವು ಪರ್ವತಶಿಖರಗಳ ಮೇಲೆ ಮಳೆಗರೆಯುವಂತೆ ಬಾಣಗಳ ವೃಷ್ಟಿಯನ್ನೇ ಸುರಿಸಿಬಿಟ್ಟರು. ಸುಂದರವಾದ ನಡುವನ್ನು ಹೊಂದಿದ್ದ ರುಕ್ಮಿಣೀದೇವಿಯು, ತನ್ನ ಪತಿಯ ಕಡೆಯ ಸೈನಿಕರು ಶತ್ರುಪಕ್ಷದವರ ಬಾಣಗಳ ವರ್ಷದಿಂದ ಮುಚ್ಚಿಹೋದುದನ್ನು ಕಂಡು ಭಯದಿಂದ ಕಳವಳಗೊಂಡ ಕಣ್ಣುಗಳುಳ್ಳವಳಾಗಿ ನಾಚಿಕೆಯಿಂದ ಶ್ರೀಕೃಷ್ಣನನ್ನು ನೋಡಿದಳು.

ಶ್ರೀಕೃಷ್ಣನು ಗಹ-ಗಹಿಸಿ ನಗುತ್ತಾ ರುಕ್ಮಿಣಿಗೆ ಹೇಳಿದನು :

"ಚೆಲುವಾದ ಕಣ್ಣುಗಳುಳ್ಳವಳೇ! ರುಕ್ಮಿಣಿ! ಭಯಪಡಬೇಡ. ನಿನ್ನ ಕಡೆಯ ಸೈನ್ಯವು ಈಗಿಂದೀಗಲೇ ಶತ್ರುಸೈನ್ಯವನ್ನು ಧ್ವಂಸಮಾಡಿಬಿಡುತ್ತದೆ."

ಶ್ರೀಕೃಷ್ಣನು ರುಕ್ಮಿಣಿಗೆ ಹೀಗೆ ಹೇಳುತ್ತಿದ್ದಾಗಲೇ ಶತ್ರುಗಳ ಪರಾಕ್ರಮವನ್ನೂ ಅವರ ವಿಧ್ವಂಸನಕಾರ್ಯವನ್ನೂ ನೋಡಿ ಸಹನೆಯನ್ನು ಕಳೆದುಕೊಂಡ ಯದುವೀರರಾದ ಗದ-ಸಂಕರ್ಷಣರೇ ಮೊದಲಾದವರು ನಾರಾಚಗಳಿಂದ ಶತ್ರುಪಕ್ಷದ ಗಜಾಶ್ವ-ರಥಸೈನಿಕರನ್ನು ತುಂಡರಿಸಿದರು. ರಥಸೈನಿಕರ, ಅಶ್ವಸೈನಿಕರ ಮತ್ತು ಗಜಸೈನಿಕರ ಕುಂಡಲಗಳಿಂದಲೂ, ಕಿರೀಟಗಳಿಂದಲೂ, ಉಷ್ಣೀಶಗಳಿಂದಲೂ ಸಮಲಂಕೃತವಾಗಿದ್ದ ಕೋಟಿ-ಕೋಟಿ ತಲೆಗಳು ಯದುಸೈನಿಕರ ಅವಿಚ್ಛಿನ್ನವಾದ ಬಾಣಗಳ ಪ್ರಹಾರಗಳಿಂದ ಕೆಳಗುರುಳಿದುವು. ಕತ್ತಿಗಳಿಂದಲೂ, ಗದೆಗಳಿಂದಲೂ, ಬಿಲ್ಲುಗಳಿಂದಲೂ ಕೂಡಿದ ಕೈಗಳೂ, ಆನೆಯ ಸೊಂಡಿಲುಗಳಂತಿದ್ದ ತೊಡೆಗಳೂ, ಕಾಲುಗಳೂ ಬಾಣಗಳಿಂದ ಕತ್ತರಿಸಲ್ಪಟ್ಟು ತೊಪ-ತೊಪನೆ ಕೆಳಗೆ ಬೀಳುತ್ತಿದ್ದುವು. ಕುದುರೆಗಳು, ಹೇಸರಕತ್ತೆಗಳು, ಆನೆಗಳು, ಒಂಟೆಗಳು, ಕತ್ತೆಗಳು ಮತ್ತು ಮನುಷ್ಯರ ತಲೆಗಳು ಲಕ್ಷ-ಲಕ್ಷ ಸಂಖ್ಯೆಯಲ್ಲಿ ಕೆಳಗು ರುಳಿದುವು. ಕೆಚ್ಚಿನಿಂದ ಹೋರಾಡುತ್ತಿದ್ದ, ಸತತವಾಗಿ ವಿಜಯವನ್ನಪೇಕ್ಷಿಸಿ ವೃಷ್ಣಿವಂಶೀಯ ಯೋಧರಿಂದ ಪ್ರಹರಿಸಲ್ಪಡುತ್ತಿದ್ದ ಜರಾಸಂಧನೇ ಮೊದ ಲಾದ ಶತ್ರುಪಕ್ಷದ ರಾಜರು ಪರಾಙ್ಮುಖರಾಗಿ ಯುದ್ಧದಿಂದ ಹಿಮ್ಮೆಟ್ಟಿದರು. ಯದ್ಯಪಿ ರುಕ್ಮಿಣಿಯನ್ನು ಮದುವೆಯಾಗದಿದ್ದರೂ ಶಿಶುಪಾಲನಿಗೆ ರುಕ್ಮಿಣಿಯ ಅಪಹರಣದಿಂದ–ಮದುವೆಯಾದ ಹೆಂಡತಿಯನ್ನೇ ಕಳೆದು ಕೊಂಡಷ್ಟು ದುಃಖವಾಗಿದ್ದಿತು. ಅವನು ಕಾಂತಿಹೀನನಾಗಿದ್ದನು. ಬದುಕುವ ಉತ್ಸಾಹವೇ ಅವನಲ್ಲಿ ಇರಲಿಲ್ಲ. ಆತನ ಮುಖವು ಬಾಡಿದ್ದಿತು. ಅಂತಹ ಅವಸ್ಥೆಯಲ್ಲಿದ್ದ ಶಿಶುಪಾಲನ ಬಳಿಗೆ ಯಾದವರಿಂದ ಪರಾಜಿತನಾದ ಜರಾಸಂಧನು ಹೋಗಿ ಅವನನ್ನು ಸಮಾಧಾನಗೊಳಿಸುತ್ತಾ ಹೇಳಿದನು :

ಭೋ ಭೋಃ ಪುರುಷಶಾರ್ದೂಲ ದೌರ್ಮನಸ್ಯಮಿದಂ ತ್ಯಜ ।
ನ ಪ್ರಿಯಾಪ್ರಿಯಯೋ ರಾಜನ್ ನಿಷ್ಠಾ ದೇಹಿಷು ದೃಶ್ಯತೇ ॥೧೧॥

"ಓ ಪುರುಷಶ್ರೇಷ್ಠನೇ! ದುಃಖದ ಮನೋಭಾವವನ್ನು ಪರಿತ್ಯಜಿಸು. ಪ್ರಿಯವಾದುದೇ ಆಗಲೀ, ಅಪ್ರಿಯವಾದುದೇ ಆಗಲೀ ಯಾವಾಗಲೂ ಚಿರ ಸ್ಥಾಯಿಯಾಗಿರುವುದು ಪ್ರಾಣಿಗಳಲ್ಲಿ ಕಂಡುಬರುವುದಿಲ್ಲ. ಪ್ರಿಯಾಪ್ರಿಯಗಳು ಚಕ್ರದಂತೆ ಸುತ್ತುತ್ತಿರುತ್ತವೆ. ಒಂದು ಕಾಲದಲ್ಲಿ ಒಬ್ಬ ಮನುಷ್ಯನಿಗೆ ಪ್ರಿಯವಾದುದು ಸಂಭವಿಸಿದರೆ ಅದೇ ಮನುಷ್ಯನಿಗೆ ಮತ್ತೊಂದು ಸಮಯದಲ್ಲಿ ಅಪ್ರಿಯವಾದುದೂ ಸಂಭವಿಸುತ್ತದೆ. ಇದು ಪ್ರಕೃತಿನಿಯಮ.

ಯಥಾ ದಾರುಮಯೀ ಯೋಷಿನ್ನೃತ್ಯತೇ ಕುಹಕೇಚ್ಛಯಾ ।
ಏವಮೀಶ್ವರತನ್ತ್ರೋಽಯಮೀಹತೇ ಸುಖದುಃಖಯೋಃ ॥೧೨॥

ಯಾವ ರೀತಿಯಲ್ಲಿ ಸೂತ್ರದ ಗೊಂಬೆಯು ಆಡಿಸುವವನ ಇಚ್ಛೆಗೆ ಅನುಸಾರವಾಗಿ ಕುಣಿಯುತ್ತದೆಯೋ ಅದೇ ರೀತಿಯಲ್ಲಿ ಈಶ್ವರನ ತಂತ್ರಕ್ಕೆ ಅಧೀನನಾದ ಈ ಜೀವನು ಸುಖ-ದುಃಖಗಳ ಮಧ್ಯದಲ್ಲಿ ಸಿಕ್ಕಿ ಪರಮಾತ್ಮನು ಕುಣಿಸಿದಂತೆ ಕುಣಿಯುತ್ತಿರುತ್ತಾನೆ.

ಶೌರೇಃ ಸಪ್ತದಶಾಹಂ ವೈ ಸಂಯುಗಾನಿ ಪರಾಜಿತಃ ।
ತ್ರಯೋವಿಂಶತಿಭಿಃ ಸೈನ್ಯೈರ್ಜಿಗ್ಯ ಏಕಮಹಂ ಪರಮ್ ॥೧೩॥

ಇಪ್ಪತ್ತುಮೂರು ಅಕ್ಷೌಹಿಣೀಸೈನ್ಯಸಮೇತನಾಗಿದ್ದ ನನ್ನನ್ನು ಕೃಷ್ಣನು ಹದಿನೇಳು ಬಾರಿ ಪರಾಜಯಗೊಳಿಸಿದನು. ಆದರೂ ನಾನು ಧೈರ್ಯಗೆಡಲಿಲ್ಲ; ನಿರುತ್ಸಾಹನಾಗಲಿಲ್ಲ. ಹದಿನೆಂಟನೆಯ ಬಾರಿ ನಾನು ಆತನನ್ನು ಪರಾಜಯಗೊಳಿಸಿದೆನು.

ತಥಾಪ್ಯಹಂ ನ ಶೋಚಾಮಿ ನ ಪ್ರಹೃಷ್ಯಾಮಿ ಕರ್ಹಿಚಿತ್ ।
ಕಾಲೇನ ದೈವಯುಕ್ತೇನ ಜಾನನ್ ವಿದ್ರಾವಿತಂ ಜಗತ್ ॥೧೪॥

ಹೀಗೆ ಹದಿನೇಳು ಬಾರಿ ಪರಾಜಿತನಾದುದಕ್ಕೆ ನಾನು ದುಃಖಿಸಲೂ ಇಲ್ಲ. ಒಮ್ಮೆಯಾದರೂ ವಿಜಯಗಳಿಸಿದುದಕ್ಕೆ ನಾನು ಸಂತೋಷಿಸಲೂ ಇಲ್ಲ. ದೈವಕ್ಕೆ ವಶವಾದ ಕಾಲನಿಂದ ಜಗತ್ತು ನಡೆಸಲ್ಪಡುತ್ತಿದೆಯೆಂದು ತಿಳಿದಿರುವ ನಾನು ಸುಖ-ದುಃಖಗಳೆರಡನ್ನೂ ಸಮವಾಗಿ ಕಾಣುತ್ತೇನೆ.

ಅಧುನಾಪಿ ವಯಂ ಸರ್ವೇ ವೀರಯೂಥಪಯೂಥಪಾಃ ।
ಪರಾಜಿತಾಃ ಫಲ್ಗುತನ್ತ್ರೈರ್ಯದುಭಿಃ ಕೃಷ್ಣಪಾಲಿತೈಃ ॥೧೫॥

ಈಗಲೂ ಕೂಡ ನಾವೆಲ್ಲರೂ ಸೇನಾನಾಯಕರಿಗೂ ನಾಯಕರಾಗಿದ್ದೇವೆ. ಮಹಾಬಲಿಷ್ಠರಾಗಿದ್ದೇವೆ. ಆದರೂ ಶ್ರೀಕೃಷ್ಣನಿಂದ ರಕ್ಷಿಸಲ್ಪಡುತ್ತಿರುವ ನಿಸ್ಸಾರವಾದ ಸೇನೆಯುಳ್ಳ ಯಾದವರಿಂದ ನಾವು ಪರಾಜಿತರಾದೆವು.

ರಿಪವೋ ಜಿಗ್ಯುರಧುನಾ ಕಾಲ ಆತ್ಮಾನುಸಾರಿಣಿ ।
ತದಾ ವಯಂ ವಿಜೇಷ್ಯಾಮೋ ಯದಾ ಕಾಲಃ ಪ್ರದಕ್ಷಿಣಃ ॥೧೯॥

ಕಾಲವು ಅವರಿಗೆ ಅನುಕೂಲವಾಗಿರುವುದರಿಂದ ನಮ್ಮ ಶತ್ರುಗಳು ನಮ್ಮನ್ನು ಪರಾಜಯಗೊಳಿಸಿದ್ದಾರೆ. ಕಾಲವು ಸುತ್ತಿಕೊಂಡು ನಮ್ಮ ಕಡೆಗೆ ಅನುಕೂಲವಾಗಿಬಂದಾಗ ನಾವು ವಿಜಯಗಳಿಸುತ್ತೇವೆ."

ಪರೀಕ್ಷಿತಮಹಾರಾಜ! ಜರಾಸಂಧನೇ ಮೊದಲಾದ ಮಿತ್ರರು ಶಿಶುಪಾಲನಿಗೆ ಹೀಗೆ ಸಮಾಧಾನಹೇಳಲು ಅವನು ಸಮಾಧಾನಮಾಡಿಕೊಂಡು ತನ್ನ ಅನುಯಾಯಿಗಳೊಡನೆ ತನ್ನ ರಾಜ್ಯಕ್ಕೆ ಹಿಂದಿರುಗಿದನು. ಅವನ ಮಿತ್ರರಾಜರು ಕೂಡ ಅಳಿದುಳಿದಿದ್ದ ಸೈನಿಕರೊಡನೆ ತಮ್ಮ-ತಮ್ಮ ದೇಶಗಳಿಗೆ ತೆರಳಿದರು.

ರುಕ್ಮಿಣಿಯ ಹಿರಿಯಣ್ಣನಾದ ರುಕ್ಮಿಯು ಶ್ರೀಕೃಷ್ಣನನ್ನು ಬಹಳವಾಗಿ ದ್ವೇಷಿಸುತ್ತಿದ್ದನು. ಆದುದರಿಂದಲೇ ಅವನು ಶಿಶುಪಾಲನಿಗೆ ತನ್ನ ತಂಗಿಯನ್ನು ಕೊಟ್ಟು ವಿವಾಹಮಾಡಲು ನಿಶ್ಚಯಿಸಿದ್ದನು. ಆದರೆ ಶ್ರೀಕೃಷ್ಣನು ರುಕ್ಮಿಣಿಯನ್ನು ಅಪಹರಿಸಿ ರಾಕ್ಷಸವಿಧಿಗೆ ಅನುಸಾರವಾಗಿ ವಿವಾಹವಾದುದನ್ನು ರುಕ್ಮಿಯು ಸಹಿಸಿಕೊಳ್ಳಲಿಲ್ಲ. ರಾಜರೆಲ್ಲರೂ ಯಾದವರಿಂದ ಪರಾಜಿತರಾಗಿ ಹಿಂದಿರುಗಿದುದನ್ನೂ ಲೆಕ್ಕಿಸದೆ ಅಕ್ಷೌಹಿಣೀಸೈನ್ಯಸಮೇತ ನಾಗಿ ರುಕ್ಮಿಯು ಶ್ರೀಕೃಷ್ಣನನ್ನು ಹಿಂಬಾಲಿಸಿದನು. ಅಸಹನಶೀಲನಾಗಿದ್ದ ರುಕ್ಮಿಯು ಆ ಸಮಯದಲ್ಲಿ ಮಹಾಕೋಪಿಷ್ಠನೂ ಆಗಿದ್ದನು. ಕವಚವನ್ನು ತೊಟ್ಟು ಧನುಸ್ಸನ್ನು ಹಿಡಿದು ಯುದ್ಧಸನ್ನದ್ಧನಾದ, ಮಹಾಬಾಹುವಾದ ಆತನು ಸಮಸ್ತರಾಜರೂ ಕೇಳಿಸಿಕೊಳ್ಳುವಂತೆ ಈ ಪ್ರತಿಜ್ಞೆಯನ್ನು ಮಾಡಿದನು :

ಅಹತ್ವಾ ಸಮರೇ ಕೃಷ್ಣಮಪ್ರತ್ಯೂಹ್ಯ ಚ ರುಕ್ಮಿಣೀಮ್ ।
ಕುಣ್ಡಿನಂ ನ ಪ್ರವೇಕ್ಷ್ಯಾಮಿ ಸತ್ಯಮೇತದ್ಬ್ರವೀಮಿ ವಃ ॥೨೦॥

"ಕೃಷ್ಣನನ್ನು ಯುದ್ಧದಲ್ಲಿ ಸಂಹರಿಸದೇ ಮತ್ತು ನನ್ನ ತಂಗಿಯಾದ ರುಕ್ಮಿಣಿಯನ್ನು ಹಿಂದಕ್ಕೆ ಕರೆತರದೆ ನಾನು ಕುಂಡಿನಪುರಿಯನ್ನು ಪ್ರವೇಶಿಸುವುದಿಲ್ಲ. ಸತ್ಯವಾದ ಈ ಮಾತನ್ನು ನಿಮಗೆ ಹೇಳುತ್ತಿದ್ದೇನೆ."

ಹೀಗೆ ಪ್ರತಿಜ್ಞೆಮಾಡಿ ರುಕ್ಮಿಯು ರಥವನ್ನು ಹತ್ತಿ ಅವಸರದಿಂದ ಸಾರಥಿಗೆ ಹೇಳಿದನು :

"ಸಾರಥಿಯೇ! ಕೃಷ್ಣನಿರುವಲ್ಲಿಗೆ ರಥವನ್ನು ಓಡಿಸು. ಇಂದು ಅವನೊಡನೆ ನಾನು ಯುದ್ಧಮಾಡಬೇಕಾಗಿದೆ. ನನ್ನ ತಂಗಿಯನ್ನು ಯಾವನು ಬಲಾತ್ಕಾರದಿಂದ ಸೆಳೆದುಕೊಂಡು ಹೋದನೋ ಅಂತಹ ದುರ್ಬುದ್ಧಿಯವನಾದ ಗೋಪಾಲನ ವೀರ್ಯಮದವನ್ನು ನಿಶಿತವಾದ ಬಾಣಗಳಿಂದ ತೊಡೆದುಹಾಕುತ್ತೇನೆ."

ಪರೀಕ್ಷಿತಮಹಾರಾಜ! ಕುಬುದ್ಧಿಯವನಾಗಿದ್ದ ರುಕ್ಮಿಯು ಸರ್ವೇಶ್ವರನಾದ ಶ್ರೀಕೃಷ್ಣನ ಪ್ರಭಾವವೆಷ್ಟಿರುವುದೆಂಬುದನ್ನು ತಿಳಿದವನಾಗಿರಲಿಲ್ಲ. ಆತನು ಮನಬಂದಂತೆ ಬಡಬಡಿಸುತ್ತಾ ರಥೈಕಸಹಾಯನಾಗಿ ಶ್ರೀಕೃಷ್ಣನ ರಥದ ಬಳಿಗೆ ಹೋಗಿ ನಿಲ್ಲು-ನಿಲ್ಲೆಂದು ಹೇಳುತ್ತಾ ಕೃಷ್ಣನನ್ನು ಯುದ್ಧಕ್ಕೆ ಆಹ್ವಾನಿಸಿದನು.

ಪರೀಕ್ಷಿತಮಹಾರಾಜ! ರುಕ್ಮಿಯು ಸುದೃಢವಾಗಿದ್ದ ಧನುಸ್ಸಿನ ನಾಣನ್ನು ಸುದೀರ್ಘವಾಗಿ ಸೆಳೆದು ಮೂರು ಬಾಣಗಳಿಂದ ಶ್ರೀಕೃಷ್ಣನನ್ನು ಹೊಡೆದು ಪುನಃ ಹೇಳಿದನು :

"ಯದುಕುಲಕಳಂಕನೇ! ಕ್ಷಣಕಾಲ ನಿಲ್ಲು. ಕಾಗೆಯು ಮಂತ್ರಪೂತವಾದ ಹವಿಸ್ಸನ್ನು ಎತ್ತಿಕೊಂಡು ಹೋಗುವಂತೆ–ನನ್ನ ತಂಗಿಯನ್ನು ಕದ್ದುಕೊಂಡು ಎಲ್ಲಿಗೆ ಹೋಗುತ್ತಿರುವೆ? ವಂಚಿಸಿ ಯುದ್ಧಮಾಡುವುದರಲ್ಲಿ ನಿಷ್ಣಾತನಾದ, ಮಾಯಾವಿಯಾದ, ಮಂದಬುದ್ಧಿಯವನಾದ ನಿನ್ನ ಮದವನ್ನು ಕ್ಷಣಮಾತ್ರದಲ್ಲಿ ಅಡಗಿಸುತ್ತೇನೆ. ನನ್ನ ಬಾಣಗಳಿಂದ ಹತನಾಗಿ ಭೂಮಿಯ ಮೇಲೆ ಪವಡಿಸುವುದರೊಳಗಾಗಿ ನನ್ನ ತಂಗಿಯನ್ನು ಬಿಟ್ಟು ಬಿಡು."

ರುಕ್ಮಿಯ ಮಾತುಗಳನ್ನು ಕೇಳಿ ಶ್ರೀಕೃಷ್ಣನು ನಗು-ನಗುತ್ತಲೇ ಅವನ

ಧನುಸ್ಸನ್ನು ಕತ್ತರಿಸಿ ಆರು ಬಾಣಗಳಿಂದ ರುಕ್ಮಿಯನ್ನು ಪ್ರಹರಿಸಿದನು. ಪುನಃ ಶ್ರೀಕೃಷ್ಣನು ಎಂಟು ಬಾಣಗಳಿಂದ ಆತನ ನಾಲ್ಕು ಕುದುರೆಗಳನ್ನೂ ಎರಡು ಬಾಣಗಳಿಂದ ಆತನ ಸೂತನನ್ನೂ ಮೂರು ಬಾಣಗಳಿಂದ ಧ್ವಜವನ್ನೂ ಪ್ರಹರಿಸಿದನು. ರುಕ್ಮಿಯಾದರೋ ಮತ್ತೊಂದು ಧನುಸ್ಸನ್ನೆತ್ತಿಕೊಂಡು ಹೆದೆಯೇರಿಸಿ ಐದು ಬಾಣಗಳಿಂದ ಶ್ರೀಕೃಷ್ಣನನ್ನು ಪ್ರಹರಿಸಿದನು. ಹೀಗೆ ಬಾಣಗಳ ಸಮೂಹಗಳಿಂದ ಪ್ರಹರಿಸಲ್ಪಟ್ಟ ಶ್ರೀಕೃಷ್ಣನು ಪುನಃ ರುಕ್ಮಿಯ ಧನುಸ್ಸನ್ನು ಕತ್ತರಿಸಿದನು. ಕ್ಷಣಮಾತ್ರದಲ್ಲಿ ರುಕ್ಮಿಯು ಮತ್ತೊಂದು ಧನುಸ್ಸನ್ನೆತ್ತಿಕೊಂಡನು. ಆದರೆ ಅದನ್ನು ಅವನು ಹೆದೆಯೇರಿಸುವ ಮೊದಲೇ ಅವ್ಯಯನಾದ ಶ್ರೀಕೃಷ್ಣನು ಆ ಧನುಸ್ಸನ್ನೂ ಕತ್ತರಿಸಿಬಿಟ್ಟನು. ಕುಪಿತನಾದ ರುಕ್ಮಿಯು ಕೃಷ್ಣನನ್ನು ಪ್ರಹರಿಸಲು ಪರಿಘಾಯುಧವನ್ನೆತ್ತಿಕೊಂಡನು. ಎವೆ ಯಿಕ್ಕುವುದರೊಳಗಾಗಿ ಶ್ರೀಕೃಷ್ಣನು ಅದನ್ನೂ ಧ್ವಂಸಮಾಡಿದನು. ಬಳಿಕ ಅನುಕ್ರಮವಾಗಿ ರುಕ್ಮಿಯು ಕೈಗೆತ್ತಿಕೊಂಡ ಪಟ್ಟಿಶ, ಶೂಲ, ಕತ್ತಿ-ಗುರಾಣಿ, ಶಕ್ತ್ಯಾಯುಧ, ತೋಮರ–ಈ ಎಲ್ಲವನ್ನೂ ಶ್ರೀಕೃಷ್ಣನು ಕ್ಷಣಮಾತ್ರದಲ್ಲಿ ಕತ್ತರಿಸಿಹಾಕಿದನು. ಇದರಿಂದ ಅತ್ಯಂತ ಕ್ರುದ್ಧನಾದ ರುಕ್ಮಿಯು ಕತ್ತಿ-ಗುರಾಣಿಗಳನ್ನು ಹಿಡಿದು ರಥದಿಂದ ಧುಮುಕಿ ಶ್ರೀಕೃಷ್ಣನನ್ನು ಕೊಂದು ಬಿಡಬೇಕೆಂಬ ಛಲದಿಂದ-ಪತಂಗದ ಹುಳುವು ಬೆಂಕಿಯ ಕಡೆಗೆ ರಭಸದಿಂದ ಹೋಗುವಂತೆ-ಶ್ರೀಕೃಷ್ಣನ ಕಡೆಗೆ ನುಗ್ಗಿಹೋದನು. ಹಾಗೆ ಕತ್ತಿಯನ್ನು ಹಿಡಿದು ತನ್ನ ಮೇಲೆ ಬೀಳಲು ರಭಸದಿಂದ ಮುನ್ನುಗ್ಗಿಬರುತ್ತಿದ್ದ ರುಕ್ಮಿಯ ಕತ್ತಿ-ಗುರಾಣಿಗಳನ್ನು ತನ್ನ ಬಾಣಗಳಿಂದ ನುಚ್ಚುನೂರಾಗಿ ಮಾಡಿ ರುಕ್ಮಿಯನ್ನು ಸಂಹರಿಸುವ ಆಶಯದಿಂದ ಶ್ರೀಕೃಷ್ಣನು ತೀಕ್ಷ್ಣವಾದ ಕತ್ತಿಯೊಂದನ್ನು ಕೈಗೆತ್ತಿಕೊಂಡನು. ತನ್ನ ಅಣ್ಣನನ್ನು ಕೊಲ್ಲಲು ಹೊರಟಿರುವ ಶ್ರೀಕೃಷ್ಣನನ್ನು ನೋಡಿ ಭಯದಿಂದ ವ್ಯಾಕುಲಳಾದ ರುಕ್ಮಿಣಿಯು ತನ್ನ ಪತಿಯ ಕಾಲುಗಳಿಗೆ ಬಿದ್ದು ದಯನೀಯವಾದ ಧ್ವನಿಯಿಂದ ಶ್ರೀಕೃಷ್ಣನಿಗೆ ಹೇಳಿದಳು :

ಯೋಗೇಶ್ವರಾಪ್ರಮೇಯಾತ್ಮನ್ ದೇವದೇವ ಜಗತ್ಪತೇ ।
ಹನ್ತುಂ ನಾರ್ಹಸಿ ಕಲ್ಯಾಣ ಭ್ರಾತರಂ ಮೇ ಮಹಾಭುಜ ॥೩೩॥

“ದೇವದೇವನೇ! ಜಗತ್ಪತಿಯೇ! ಯಾರಿಂದಲೂ ತಿಳಿಯಲಾಗದ ಆತ್ಮ

ಸ್ವರೂಪವುಳ್ಳವನೇ! ಮಹಾಭುಜನೇ! ಕಲ್ಯಾಣಸ್ವರೂಪನೇ! ಪ್ರಭುವೇ! ನಮ್ಮ ಅಣ್ಣನಾದ ರುಕ್ಮಿಯನ್ನು ಸಂಹರಿಸುವುದು ನಿನಗೆ ಯೋಗ್ಯವಲ್ಲ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಆ ಸಮಯದಲ್ಲಿ ರುಕ್ಮಿಣಿಯ ಒಂದೊಂದು ಅವಯವಗಳೂ ಭಯದಿಂದ ನಡುಗುತ್ತಿದ್ದುವು. ಶೋಕದ ಹೆಚ್ಚಳದಿಂದಾಗಿ ಆಕೆಯ ಮುಖವು ಬಾಡಿಹೋಗಿದ್ದಿತು. ಕುತ್ತಿಗೆಯು ಬಿಗಿದಿದ್ದಿತು. ಅಣ್ಣನೆಲ್ಲಿ ಸತ್ತು ಕೆಳಕ್ಕೆ ಬಿದ್ದುಬಿಡುವನೋ ಎಂಬ ಗಾಬರಿಯಿಂದಾಗಿ ಆಕೆಯ ಕಂಠದಲ್ಲಿದ್ದ ಸ್ವರ್ಣಹಾರವೂ ಕೆಳಕ್ಕೆ ಬಿದ್ದುಹೋಯಿತು. ಇಂತಹ ದೈನ್ಯಸ್ಥಿತಿಯಲ್ಲಿ ತನ್ನ ಪ್ರೇಯಸಿಯಾದ ರುಕ್ಮಿಣಿಯು ಕಾಲುಹಿಡಿದುಕೊಂಡು ಪ್ರಾರ್ಥಿಸುತ್ತಿರುವುದನ್ನು ಕಂಡು ಕರುಣಾಮಯನಾದ ಭಗವಂತನು ರುಕ್ಮಿಯನ್ನು ಕೊಲ್ಲಲಿಲ್ಲ. ಆದರೆ ತನ್ನ ಮೇಲಿನ ದ್ವೇಷದಿಂದ ತಂಗಿಗೆ ಇಷ್ಟವಾಗದ ಕಾರ್ಯವನ್ನು ಮಾಡಲು ಹೊರಟಿದ್ದ ರುಕ್ಮಿಯನ್ನು ಹಾಗೆಯೇ ಬಿಟ್ಟುಬಿಡಲೂ ಇಲ್ಲ. ಅವನ ಕೈ-ಕಾಲುಗಳನ್ನು ಬಟ್ಟೆಯಿಂದ ಬಿಗಿದು ಗಡ್ಡ-ತಲೆಕೂದಲುಗಳನ್ನು ಅಲ್ಲಲ್ಲಿ ಕತ್ತಿಯಿಂದಲೇ ಬೋಳಿಸಿ ವಿರೂಪಗೊಳಿಸಿದನು. ಅಷ್ಟರಲ್ಲಿಯೇ ಯದುವೀರರು ಅತ್ಯಂತಪ್ರಬಲವಾಗಿದ್ದ ರುಕ್ಮಿಯ ಅಕ್ಷೌಹಿಣೀಸೈನ್ಯವನ್ನೂ–ತಾವರೆದಂಟುಗಳನ್ನು ಮದಿಸಿದ ಆನೆಗಳು ಧ್ವಂಸ ಮಾಡುವಷ್ಟೇ ಸುಲಭವಾಗಿ–ಧ್ವಂಸಮಾಡಿಬಿಟ್ಟರು. ಹಾಗೆ ರುಕ್ಮಿಯ ಮಹಾಸೈನ್ಯವನ್ನು ಧ್ವಂಸಮಾಡಿದನಂತರ ಬಲರಾಮಪ್ರಮುಖರಾದ ಯದುನಾಯಕರು ಶ್ರೀಕೃಷ್ಣನ ಬಳಿಗೆ ಬಂದು ಅಲ್ಲಿ ಬಟ್ಟೆಯಿಂದ ಬಂಧಿಸಲ್ಪಟ್ಟು ವಿರೂಪಗೊಂಡು ಹತಪ್ರಾಯನಾಗಿದ್ದ ರುಕ್ಮಿಯನ್ನು ನೋಡಿದರು. ವಿಭುವಾದ ಬಲರಾಮನು ಕರುಣೆಯಿಂದ ಮುಂದೆ ಹೋಗಿ ರುಕ್ಮಿಯನ್ನು ಬಿಗಿದಿದ್ದ ವಸ್ತ್ರವನ್ನು ಬಿಚ್ಚಿ ಶ್ರೀಕೃಷ್ಣನಿಗೆ ಹೇಳಿದನು :

ಅಸಾಧ್ವಿದಂ ತ್ವಯಾ ಕೃಷ್ಣ ಕೃತಮಸ್ಮಜ್ಜುಗುಪ್ಸಿತಮ್ ।
ವಪನಂ ಶ್ಮಶ್ರುಕೇಶಾನಾಂ ವೈರೂಪ್ಯಂ ಸುಹೃದೋ ವಧಃ ॥೩೭॥

"ಕೃಷ್ಣ! ನೀನು ಮಾಡಬಾರದ ಕಾರ್ಯವನ್ನು ಮಾಡಿಬಿಟ್ಟೆ. ನೀನು

ಮಾಡಿರುವ ಈ ಕಾರ್ಯದಿಂದ ನಮಗೆ ಅತ್ಯಂತ ಜುಗುಪ್ಸೆಯಾಗಿದೆ. ಬಂಧು-ಮಿತ್ರರ ತಲೆ-ಗಡ್ಡಗಳನ್ನು ಬೋಳಿಸಿ ವಿರೂಪಗೊಳಿಸುವುದು ಒಂದು ವಿಧದಲ್ಲಿ ಅವರನ್ನು ವಧಿಸಿದಂತೆಯೇ ಆಗುತ್ತದೆ."

ಶ್ರೀಕೃಷ್ಣನಿಗೆ ಹೀಗೆ ಹೇಳಿದನಂತರ ಬಲರಾಮನು ರುಕ್ಮಿಣಿಯನ್ನು ಸಮಾಧಾನಗೊಳಿಸುತ್ತಾ ಹೇಳುತ್ತಾನೆ :

ಮೈವಾಸ್ಮಾನ್ ಸಾಧ್ವಸೂಯೇಥಾ ಭ್ರಾತುರ್ವೈರೂಪ್ಯಚಿನ್ತಯಾ ।
ಸುಖದುಃಖದೋ ನ ಚಾನ್ಯೋಽಸ್ತಿ ಯತಃ ಸ್ವಕೃತಭುಕ್ ಪುಮಾನ್ ॥

"ಸಾಧ್ವಿಯೇ! ರುಕ್ಮಿಣಿ! ಶ್ರೀಕೃಷ್ಣನು ನಿನ್ನ ಅಣ್ಣನನ್ನು ವೈರೂಪ್ಯ ಗೊಳಿಸಿದನೆಂಬ ಚಿಂತೆಯಿಂದಾಗಿ ನೀನು ನಮ್ಮಲ್ಲಿ ದೋಷವೆಣಿಸಬೇಡ. ಪ್ರಪಂಚದಲ್ಲಿ ಇತರರು ನಮಗೆ ಸುಖ-ದುಃಖಗಳನ್ನುಂಟುಮಾಡುವುದಿಲ್ಲ. ನಾವು ಮಾಡಿದ ಸುಕೃತ-ದುಷ್ಕೃತಗಳ ಫಲವಾಗಿಯೇ ನಾವು ಸುಖ-ದುಃಖ ಗಳನ್ನು ಅನುಭವಿಸುತ್ತೇವೆ."

ಬಲರಾಮನು ಪುನಃ ಶ್ರೀಕೃಷ್ಣನಿಗೆ ಹೇಳುತ್ತಾನೆ :

ಬನ್ಧುರ್ವಧಾರ್ಹದೋಷೋಽಪಿ ನ ಬನ್ಧೋರ್ವಧಮರ್ಹತಿ ।
ತ್ಯಾಜ್ಯಃ ಸ್ವೇನೈವ ದೋಷೇಣ ಹತಃ ಕಿಂ ಹನ್ಯತೇ ಪುನಃ ॥೩೯॥

"ಒಂದು ವೇಳೆ ನಮ್ಮ ಸಂಬಂಧಿಗಳು ವಧೆಗೆ ಅರ್ಹವಾದ ದೋಷ ವನ್ನೇ ಮಾಡಿದ್ದರೂ ನಾವು ಅವರನ್ನು ವಧಿಸಬಾರದು. ಹಾಗೆಯೇ ಬಿಟ್ಟು ಬಿಡಬೇಕು. ಅವರ ಕರ್ಮದಿಂದಲೇ ಅವರು ಬದುಕಿದ್ದರೂ ಸತ್ತವರಂತೆಯೇ ಆಗಿರುತ್ತಾರೆ. ಅಂತಹವರನ್ನು ಪುನಃ ಸಾಯಿಸಲು ಹೋಗುವುದೇ?"

ಬಲರಾಮನು ಪುನಃ ರುಕ್ಮಿಣಿಗೆ ಹೇಳುತ್ತಾನೆ :

ಕ್ಷತ್ರಿಯಾಣಾಮಯಂ ಧರ್ಮಃ ಪ್ರಜಾಪತಿವಿನಿರ್ಮಿತಃ ।
ಭ್ರಾತಾಪಿ ಭ್ರಾತರಂ ಹನ್ಯಾದ್ಯೇನ ಘೋರತರಸ್ತತಃ ॥೪೦॥

"ಸಾಧ್ವೀಮಣಿಯೇ! ಧರ್ಮಾಧರ್ಮಗಳ ಸೆಣೆಸಾಟವುಂಟಾದಾಗ ಧರ್ಮದ ಸ್ಥಾಪನೆಗಾಗಿ ಕ್ಷತ್ರಿಯನಾದವನು ತನ್ನ ಸೋದರನನ್ನೇ ಸಂಹರಿ ಸುವ ಪರಿಸ್ಥಿತಿಯೂ ಒದಗಿಬರುತ್ತದೆ. ಬ್ರಹ್ಮನೇ ಕ್ಷತ್ರಿಯರಿಗೆ ಈ ಧರ್ಮ

ವನ್ನು ವಿಧಿಸಿದ್ದಾನೆ. ಆದುದರಿಂದ ಕ್ಷತ್ರಿಯಧರ್ಮವು ಘೋರವಾದುದೆಂಬುದರಲ್ಲಿ ಸಂಶಯವಿಲ್ಲ. ಆದರೂ ಅದು ಅನಿವಾರ್ಯ ; ಧರ್ಮದ ಸ್ಥಾಪನೆಯಾಗಬೇಕಾದರೆ ಇಂತಹ ಘೋರತರವಾದ ಕ್ಷತ್ರಿಯಧರ್ಮವನ್ನು ಪರಿಪಾಲಿಸಲೇಬೇಕಾಗುವುದು.”

ಬಲರಾಮನು ಪುನಃ ಶ್ರೀಕೃಷ್ಣನಿಗೆ ಹೇಳುತ್ತಾನೆ :

ರಾಜ್ಯಸ್ಯ ಭೂಮೇರ್ವಿತ್ತಸ್ಯ ಸ್ತ್ರಿಯೋ ಮಾನಸ್ಯ ತೇಜಸಃ ।
ಮಾನಿನೋಽನ್ಯಸ್ಯ ವಾ ಹೇತೋಃ ಶ್ರೀಮದಾನ್ಧಾಃ ಕ್ಷಿಪನ್ತಿ ಹಿ ॥೪೧॥

“ಧನಮದದಿಂದ ಅಂಧರಾಗಿರುವ ದುರಹಂಕಾರಿಗಳಾದ ಮನುಷ್ಯರು ರಾಜ್ಯ, ಭೂಮಿ-ಕಾಣಿ, ಐಶ್ವರ್ಯ, ಸ್ತ್ರೀಯರು, ಮಾನ, ತೇಜಸ್ಸು–ಇವುಗಳ ಕಾರಣದಿಂದಲೋ ಅಥವಾ ಬೇರೆ ಯಾವುದಾದರೂ ಕಾರಣದಿಂದಲೋ ಬಂಧುಗಳನ್ನು ತಿರಸ್ಕಾರಭಾವದಿಂದ ಕಾಣುತ್ತಾರೆ.”

ಬಲರಾಮನು ಪುನಃ ರುಕ್ಮಿಣಿಗೆ ಹೇಳುತ್ತಾನೆ :

ತವೇಯಂ ವಿಷಮಾ ಬುದ್ಧಿಃ ಸರ್ವಭೂತೇಷು ದುರ್ಹೃದಾಮ್ ।
ಯನ್ಮನ್ಯಸೇ ಸದಾಭದ್ರಂ ಸುಹೃದಾಂ ಭದ್ರಮಜ್ಞವತ್ ॥೪೨॥

“ರುಕ್ಮಿಣಿ! ನಿನ್ನ ಬಂಧುಗಳು ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ದುರ್ಭಾವನೆಯನ್ನು ಇಟ್ಟುಕೊಂಡಿದ್ದಾರೆ. ದುರಹಂಕಾರದಿಂದಲೇ ವರ್ತಿಸುತ್ತಾರೆ. ಇತರರನ್ನು ತಿರಸ್ಕಾರಭಾವದಿಂದ ಕಾಣುತ್ತಾರೆ. ಅವರಿಗೆ ಒಳ್ಳೆಯದಾಗಲೆಂದೇ ಈ ಶಿಕ್ಷೆಯನ್ನು ನಾವು ಅವರಿಗೆ ವಿಧಿಸಿದೆವು. (ಶಿಕ್ಷೆಯಿಂದ ಮನುಷ್ಯನು ಪಾಪಗಳನ್ನು ಕಳೆದುಕೊಂಡು ಪರಿಶುದ್ಧನಾಗುತ್ತಾನೆ.) ಆದರೆ ನೀನು ಅಜ್ಞಾನಿಯಂತೆ ಇದು ಅಮಂಗಳವಾದ ಕಾರ್ಯವೆಂದು ಭಾವಿಸಿರುವೆ.

ಆತ್ಮಮೋಹೋ ನೃಣಾಮೇಷ ಕಲ್ಪ್ಯತೇ ದೇವಮಾಯಯಾ ।
ಸುಹೃದ್ದುರ್ಹೃದುದಾಸೀನ ಇತಿ ದೇಹಾತ್ಮಮಾನಿನಾಮ್ ॥೪೩॥

ದೇವಿ! ಯಾರು ಭಗವಂತನ ಮಾಯೆಯಿಂದ ವಿಮೋಹಿತರಾಗಿ ದೇಹಾತ್ಮಬುದ್ಧಿಯುಳ್ಳವರಾಗಿರುವರೋ ಅಂತಹವರಿಗೆ–‘ಇವನು ಶತ್ರು’, ‘ಇವನು ಮಿತ್ರ’, ‘ಇವನು ಉದಾಸೀನ’–ಎಂಬ ಭಾವನೆಯುಂಟಾಗುತ್ತದೆ.

ದೇಹಾತ್ಮಬುದ್ಧಿಯಿಲ್ಲದವರಿಗೆ ಆತ್ಮತತ್ತ್ವಚಿಂತಕರಿಗೆ ಸರ್ವರೂ ಆತ್ಮಭಾವ ದಿಂದ ಸಮಾನರಾಗಿ ಕಾಣುತ್ತಾರೆ.

ಏಕ ಏವ ಪರೋ ಹ್ಯಾತ್ಮಾ ಸರ್ವೇಷಾಮಪಿ ದೇಹಿನಾಮ್ ।
ನಾನೇವ ಗೃಹ್ಯತೇ ಮೂಢೈರ್ಯಥಾ ಜ್ಯೋತಿರ್ಯಥಾ ನಭಃ ॥೪೪॥

ಒಬ್ಬನೇ ಆತ್ಮನೇ ಸಮಸ್ತ ದೇಹಧಾರಿಗಳಲ್ಲಿಯೂ ಇದ್ದಾನೆ. ಕಾರ್ಯ-ಕಾರಣಸಂಬಂಧವಾಗಲೀ, ಮಾಯೆಯ ಸಂಬಂಧವಾಗಲೀ ಅವನಿಗಿರುವುದಿಲ್ಲ. ಸೂರ್ಯ-ಚಂದ್ರಬಿಂಬಗಳು ನೀರು ತುಂಬಿರುವ ಹಲವಾರು ಪಾತ್ರೆಗಳಲ್ಲಿ ಬಿದ್ದು ಹಲವಾರು ಸೂರ್ಯ-ಚಂದ್ರರಿರುವಂತೆಯೂ ಆಕಾಶವು ಘಟ-ಮಠಾದಿಗಳಲ್ಲಿ ಪ್ರತ್ಯೇಕವಾಗಿ ಕಾಣುತ್ತಿದ್ದು ಹಲವಾರು ಆಕಾಶಗಳಿರುವಂತೆ ಭಾಸವಾಗುವಂತೆಯೂ ಹಲವಾರು ಶರೀರಗಳಲ್ಲಿರುವ ಆತ್ಮನು ಪ್ರತ್ಯೇಕ-ಪ್ರತ್ಯೇಕವಾಗಿರುವಂತೆ ಮೂಢರಿಂದ ತಿಳಿಯಲ್ಪಡುತ್ತಾನೆ. ಆದರೆ ಆತ್ಮನೆಂದೂ ಭಿನ್ನನಲ್ಲ. ಒಬ್ಬನೇ ಆತ್ಮನು ಎಲ್ಲ ಶರೀರಗಳಲ್ಲಿಯೂ ಇದ್ದಾನೆ.

ದೇಹ ಆದ್ಯನ್ತವಾನೇಷ ದ್ರವ್ಯಪ್ರಾಣಗುಣಾತ್ಮಕಃ ।
ಆತ್ಮನ್ಯವಿದ್ಯಯಾ ಕ್ಲೃಪ್ತಃ ಸಂಸಾರಯತಿ ದೇಹಿನಮ್ ॥೪೫॥

ಈ ಶರೀರಕ್ಕೆ ಆದಿಯೂ ಇದೆ; ಅಂತ್ಯವೂ ಇದೆ. ಪಂಚಭೂತಗಳು, ಪಂಚಪ್ರಾಣಗಳು, ತನ್ಮಾತ್ರೆಗಳು, ಸತ್ತ್ವ-ರಜಸ್ತಮೋಗುಣಗಳಿಂದಲೇ ಈ ಶರೀರವು ಕಲ್ಪಿತವಾಗಿದೆ. ಇದು ಅಜ್ಞಾನದಿಂದ ಆತ್ಮನಲ್ಲಿ ಕಲ್ಪಿತವಾಗಿ 'ನಾನು-ನನ್ನದು' ಎಂಬ ಭಾವವನ್ನು ಕಲ್ಪಿಸಿ ಜೀವನನ್ನು ಜನನ-ಮರಣ ಗಳಿಂದ ಕೂಡಿದ ಸಂಸಾರಕಷ್ಟದಲ್ಲಿ ತಳ್ಳುತ್ತದೆ.*

ನಾತ್ಮನೋಽನ್ಯೇನ ಸಂಯೋಗೋ ವಿಯೋಗಶ್ಚಾಸತಃ ಸತಿ ।
ತದ್ಧೇತುತ್ವಾತ್ತತ್ಪ್ರಸಿದ್ಧೇರ್ದೃಗ್ರೂಪಾಭ್ಯಾಂ ಯಥಾ ರವೇಃ ॥೪೬॥

---

* ಶ್ರೀಕೃಷ್ಣನು ಗೀತೆಯಲ್ಲಿ :

ಅನ್ತವನ್ತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ ।
ಅನಾಶಿನೋಽಪ್ರಮೇಯಸ್ಯ..... (ಅಧ್ಯಾಯ ೨-ಶ್ಲೋಕ ೧೮)

ಅವಿನಾಶಿಯೂ, ಅಪ್ರಮೇಯನೂ ಆದ ಶರೀರಿಯ ಈ ದೇಹಗಳು ಅಂತ್ಯವುಳ್ಳವು. ನಶ್ವರ.

ನೋಡುವ ಕಣ್ಣು, ನೋಡಿಸಿಕೊಳ್ಳುವ ರೂಪ–ಈ ಎರಡೂ ಸೂರ್ಯನಿಂದಲೇ ಪ್ರಕಾಶವನ್ನು ಪಡೆಯುತ್ತವೆ. ಸೂರ್ಯನಿಲ್ಲದಿದ್ದರೆ ಕಣ್ಣು ರೂಪವನ್ನು ನೋಡುವುದಕ್ಕೆ ಆಗುವುದೇ ಇಲ್ಲ. ಆದುದರಿಂದ ಕಣ್ಣು ಮತ್ತು ರೂಪಗಳೆರಡಕ್ಕೂ ಸೂರ್ಯನೇ ಕಾರಣನು. ಆದರೆ ಸೂರ್ಯನಿಗೆ ಕಣ್ಣು ಮತ್ತು ರೂಪದ ಸಂಯೋಗವಾಗಲೀ ವಿಯೋಗವಾಗಲೀ ಇರುವುದಿಲ್ಲ. ಅಂತೆಯೇ ಅಸದ್ವಸ್ತುಗಳ ಪ್ರಕಾಶಕನು ಆತ್ಮನೇ ಆದರೂ ಅಸದ್ವಸ್ತು ಗಳೊಡನೆ ಆತ್ಮನಿಗೆ ಸಂಯೋಗವಾಗಲೀ ವಿಯೋಗವಾಗಲೀ ಇಲ್ಲ.

ಜನ್ಮಾದಯಸ್ತು ದೇಹಸ್ಯ ವಿಕ್ರಿಯಾ ನಾತ್ಮನಃ ಕ್ವಚಿತ್ ।
ಕಲಾನಾಮಿವ ನೈವೇನ್ದೋರ್ಮೃತಿರ್ಹ್ಯಸ್ಯ ಕುಹೂರಿವ ॥೪೭॥

ಹುಟ್ಟುವುದು-ಬಾಲ್ಯ-ಕೌಮಾರ-ಯೌವನ-ವೃದ್ಧಾಪ್ಯ-ಮರಣ–ಈ ಎಲ್ಲ ಅವಸ್ಥೆಗಳೂ ದೇಹಕ್ಕೇ ಹೊರತು ಆತ್ಮನಿಗಲ್ಲ. ಕೃಷ್ಣಪಕ್ಷದಲ್ಲಿ ಚಂದ್ರನ ಕಲೆಗಳು ವಿನಾಶಹೊಂದುತ್ತವೆಯೇ ಹೊರತು ಚಂದ್ರನೇ ನಾಶವಾಗು ವುದಿಲ್ಲ. ಅಮಾವಾಸ್ಯೆಯಲ್ಲಿ ಕೂಡ ಕಲಾರಹಿತನಾದ ಚಂದ್ರನು ಇದ್ದೇ ಇರುತ್ತಾನೆ. ಆದರೆ ಜನರು ಚಂದ್ರನಿಲ್ಲವೆಂದೇ ಭಾವಿಸುತ್ತಾರೆ. ಹಾಗೆಯೇ ಜನ್ಮಾದಿ ಅವಸ್ಥೆಗಳು ಆತ್ಮನಿಗೆ ಇಲ್ಲದಿದ್ದರೂ ಪ್ರಾಣಿಗಳಿಗೆ ದೇಹಾತ್ಮಬುದ್ಧಿ ಯಿರುವ ಕಾರಣ ಆತ್ಮಸ್ವರೂಪವಾದ ಜೀವನನ್ನು ಹುಟ್ಟಿಸುತ್ತಾನೆಂದು ಭಾವಿಸಿಕೊಳ್ಳುತ್ತಾರೆ.

ಯಥಾ ಶಯಾನ ಆತ್ಮಾನಂ ವಿಷಯಾನ್ ಫಲಮೇವ ಚ ।
ಅನುಭುಙ್ಕ್ತೇಽಪ್ಯಸತ್ಯರ್ಥೇ ತಥಾಪ್ನೋತ್ಯಬುಧೋ ಭವಮ್ ॥೪೮॥

ಮಲಗಿರುವ ಮನುಷ್ಯನು ಯಾವುದೇ ವಸ್ತುವಿಲ್ಲದಿದ್ದರೂ ಸ್ವಪ್ನದಲ್ಲಿ ಭೋಕ್ತೃವಾಗಿ ಭೋಗರೂಪವಾದ ಫಲಗಳನ್ನು ಅನುಭವಿಸುತ್ತಿರುವೆನೆಂದು ಭಾವಿಸಿಕೊಳ್ಳುವನೋ ಹಾಗೆಯೇ ಮೂರ್ಖನಾದವನು ತನ್ನದಲ್ಲದೇ ಇರುವುದನ್ನು ತನ್ನದೆಂದು ಭಾವಿಸಿಕೊಂಡು ಹುಟ್ಟು-ಸಾವುಗಳಿಂದ ಕೂಡಿದ ಸಂಸಾರಚಕ್ರದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ.

ತಸ್ಮಾದಜ್ಞಾನಜಂ ಶೋಕಮಾತ್ಮಶೋಷವಿಮೋಹನಮ್ ।
ತತ್ತ್ವಜ್ಞಾನೇನ ನಿರ್ಹೃತ್ಯ ಸ್ವಸ್ಥಾ ಭವ ಶುಚಿಸ್ಮಿತೇ ॥೪೯॥

ಆದುದರಿಂದ, ಶುಭ್ರವಾದ ಮಂದಹಾಸವುಳ್ಳವಳೇ! ರುಕ್ಮಿಣಿ! ಅಜ್ಞಾನದಿಂದ ಉಂಟಾಗಿರುವ ಈ ನಿನ್ನ ಶೋಕವನ್ನು ಪರಿತ್ಯಜಿಸು. ಶೋಕ ವೆಂಬುದು ಶರೀರವನ್ನೇ ಶೋಷಿಸಿಬಿಡುತ್ತದೆ ಮತ್ತು ಮನಸ್ಸನ್ನು ವಿಮೋಹ ಗೊಳಿಸುತ್ತದೆ. ಆದುದರಿಂದ ತತ್ತ್ವಜ್ಞಾನದ ಮೂಲಕವಾಗಿ ಈ ನಿನ್ನ ಶೋಕವನ್ನು ದೂರಮಾಡಿ ಸ್ವಸ್ಥಳಾಗಿರು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ರುಕ್ಮಿಣಿಯು ಭಗವಂತನಾದ ಬಲರಾಮ ನಿಂದ ಹೀಗೆ ಬೋಧಿಸಲ್ಪಟ್ಟವಳಾಗಿ ಅಣ್ಣನನ್ನು ವೈರೂಪ್ಯಗೊಳಿಸಿದುದ ರಿಂದ ಉಂಟಾಗಿದ್ದ ಅಸಮಾಧಾನವನ್ನು ತೊರೆದಳು. ಸಂದಿಗ್ಧವಾಗಿದ್ದ ಮನಸ್ಸನ್ನು, ಬಲರಾಮನ ಉಪದೇಶದಿಂದ ಪ್ರಾಪ್ತವಾದ ನಿಶ್ಚಯಜ್ಞಾನ ದಿಂದ ಸಮಾಧಾನಗೊಳಿಸಿಕೊಂಡಳು.

ರುಕ್ಮಿಯ ಸೈನ್ಯ ಮತ್ತು ಅವನ ತೇಜಸ್ಸು–ಎರಡೂ ಶತ್ರುಗಳಿಂದ ವಿನಾಶಹೊಂದಿತ್ತು. ರುಕ್ಮಿಣಿಯ ಪ್ರಾರ್ಥನೆಯಿಂದಾಗಿ ಅವನಲ್ಲಿ ಕೇವಲ ಪ್ರಾಣವು ಮಾತ್ರವೇ ಉಳಿದಿದ್ದಿತು. ಅವನ ಮನಸ್ಸಿನ ಆಸೆ-ಆಕಾಂಕ್ಷೆ ಗಳೆಲ್ಲವೂ ವ್ಯರ್ಥವಾಗಿಹೋಗಿದ್ದುವು. ಶತ್ರುಗಳು ಅವನನ್ನು ಅವಮಾನ ಗೊಳಿಸಿ ಬಿಟ್ಟುಬಿಟ್ಟಿದ್ದರು. ವಿರೂಪಕರಣವನ್ನು ಎಂದಿಗೂ ಅವನಿಗೆ ಮರೆಯಲು ಸಾಧ್ಯವಾಗಲೇ ಇಲ್ಲ. ಅದನ್ನೇ ಯಾವಾಗಲೂ ಸ್ಮರಿಸಿಕೊಳ್ಳು ತ್ತಿದ್ದನು.

ಅಹತ್ವಾ ದುರ್ಮತಿಂ ಕೃಷ್ಣಮಪ್ರತ್ಯೂಹ್ಯ ಯವೀಯಸೀಮ್ ।
ಕುಣ್ಡಿನಂ ನ ಪ್ರವೇಕ್ಷ್ಯಾಮೀತ್ಯುಕ್ತ್ವಾ ತತ್ರಾವಸದ್ರುಷಾ ॥೫೨॥

"ದುರ್ಮತಿಯಾದ ಶ್ರೀಕೃಷ್ಣನನ್ನು ಸಂಹರಿಸದೆ, ತಂಗಿಯಾದ ರುಕ್ಮಿಣಿಯನ್ನು ಹಿಂದಕ್ಕೆ ಕರೆತರದೆ ಕುಂಡಿನಪುರವನ್ನು ಪ್ರವೇಶಿಸುವುದಿಲ್ಲ"– ಎಂದು ಪ್ರತಿಜ್ಞೆಮಾಡಿದ್ದನಲ್ಲವೇ? ಹಾಗೆಯೇ ಮಾನಧನನಾದ ರುಕ್ಮಿಯು ಶ್ರೀಕೃಷ್ಣನಿಂದ ಪರಾಜಿತನಾಗಿ ತನ್ನ ಪ್ರತಿಜ್ಞೆಯನ್ನು ಪೂರೈಸಲಾರದೆ

ಹಿಂದಿರುಗಿದನಂತರ ವಾಸಕ್ಕಾಗಿ ಭೋಜಕಟವೆಂಬ ಊರನ್ನೇ ನಿರ್ಮಿಸಿ ಅಲ್ಲಿಯೇ ಕ್ರುದ್ಧನಾಗಿ ವಾಸಮಾಡುತ್ತಿದ್ದನು.

ಪರೀಕ್ಷಿತಮಹಾರಾಜ! ಹೀಗೆ ಭಗವಂತನಾದ ಶ್ರೀಕೃಷ್ಣನು ಎಲ್ಲ ರಾಜಕುಮಾರರನ್ನೂ ಪರಾಜಯಗೊಳಿಸಿ ರುಕ್ಮಿಣಿಯನ್ನು ದ್ವಾರಕೆಗೆ ಕರೆ ತಂದು ಅವಳನ್ನು ವಿಧಿಪೂರ್ವಕವಾಗಿ ವಿವಾಹವಾದನು.

ಯದುಪತಿಯಾದ ಶ್ರೀಕೃಷ್ಣನಲ್ಲಿ ಅನನ್ಯವಾದ ಪ್ರೇಮವನ್ನೂ, ಭಕ್ತಿಯನ್ನೂ ಇಟ್ಟುಕೊಂಡಿದ್ದ ಯದುಪುರಿಯ ನಿವಾಸಿಗಳ ಮನೆ-ಮನೆ ಗಳಲ್ಲಿಯೂ ಶ್ರೀಕೃಷ್ಣನ ವಿವಾಹದ ಸಂಬಂಧವಾಗಿ ದೊಡ್ಡ ಮಹೋತ್ಸವವೇ ನಡೆಯಿತು. ಜಗ-ಜಗಿಸುವ ರತ್ನದ ಕುಂಡಲಗಳನ್ನು ಧರಿಸಿದ್ದ, ಯದು ಪುರಿಯ ನರ-ನಾರಿಯರು ಶ್ರೀಕೃಷ್ಣ-ರುಕ್ಮಿಣಿಯರ ವಿವಾಹಮಹೋತ್ಸವ ದಿಂದ ಆನಂದಭರಿತರಾಗಿ ಚಿತ್ರ-ವಿಚಿತ್ರವಾದ ವಸ್ತ್ರಗಳನ್ನು ಧರಿಸಿದ್ದ ವಧೂ-ವರರಿಗೆ ನಾನಾಪ್ರಕಾರವಾದ ಕಾಣಿಕೆ-ಉಡುಗೊರೆಗಳನ್ನು ತಂದೊಪ್ಪಿಸಿದರು. ಆ ಸಮಯದಲ್ಲಿ ದ್ವಾರಕಾಪಟ್ಟಣವು ಅಪೂರ್ವವಾದ ಶೋಭೆಯಿಂದ ಬೆಳಗುತ್ತಿದ್ದಿತು. ಎತ್ತರವಾದ ಇಂದ್ರಧ್ವಜಗಳು ಎಲ್ಲೆಡೆಯಲ್ಲಿಯೂ ಹಾರಾಡುತ್ತಿದ್ದುವು. ಹಲವು ಬಣ್ಣದ ಪುಷ್ಪಹಾರಗಳ, ವಸ್ತ್ರಗಳ ಮತ್ತು ಮಣಿಗಳ ತೋರಣಗಳಿಂದ ಪಟ್ಟಣವು ಸಮಲಂಕೃತವಾಗಿದ್ದಿತು. ಪ್ರತಿ ಯೊಂದು ಮನೆಯ ಬಾಗಿಲುಗಳಲ್ಲಿಯೂ ಅರಳು, ಗರಿಕೆ, ಹೂವು ಮೊದ ಲಾದ ಮಂಗಳದ್ರವ್ಯಗಳನ್ನು ಇರಿಸಿದ್ದರು. ಬಾಳೆಯ ಕಂಬಗಳಿಂದ ಬಾಗಿಲು ಗಳನ್ನು ಅಲಂಕರಿಸಿದ್ದರು. ಪೂರ್ಣಕುಂಭಗಳನ್ನಿಟ್ಟು ಸಾಲುದೀಪಗಳನ್ನು ಹೊತ್ತಿಸಿದ್ದರು. ಎಲ್ಲ ಕಡೆಗಳಲ್ಲಿಯೂ ಅಗುರುಧೂಪಗಳನ್ನು ಹೊತ್ತಿಸಿ ಮನೆಗಳನ್ನು ಸುವಾಸಿತವನ್ನಾಗಿ ಮಾಡಿದ್ದರು. ವಿವಾಹಕ್ಕೆ ಆಹ್ವಾನಿಸಲ್ಪಟ್ಟಿದ್ದ ಮಿತ್ರರಾಜರ ಆನೆಗಳ ಮದೋದಕದಿಂದ ಬೀದಿಗಳು ತೋಯ್ದು ಹೋಗಿದ್ದುವು. ಬಾಗಿಲುಗಳು ಸಾರಿಸಲ್ಪಟ್ಟು ಬಾಳೆಯ ಕಂಬಗಳಿಂದಲೂ, ಹೊಂಬಾಳೆಗಳಿಂದಲೂ ಅಲಂಕರಿಸಲ್ಪಟ್ಟು ಅತ್ಯಂತಶೋಭಾಯಮಾನ ವಾಗಿ ಕಾಣುತ್ತಿದ್ದುವು. ಆ ವಿವಾಹಮಹೋತ್ಸವದ ಸಂದರ್ಭದಲ್ಲಿ ಸಂಭ್ರಮದಿಂದ ಓಡಾಡುತ್ತಿದ್ದವರಲ್ಲಿ ಕುರು-ಸೃಂಜಯ-ಕೇಕಯ-ವಿದರ್ಭ-ಯದು ಮತ್ತು ಕುಂತೀದೇಶದ ಅರಸರೂ ಪ್ರಜೆಗಳೂ ಪರಸ್ಪರವಾಗಿ

ಮಾತನಾಡಿಕೊಳ್ಳುತ್ತಾ ಆನಂದತುಂದಿಲರಾಗಿದ್ದರು. ಅಲ್ಲಲ್ಲಿ ಗಾಯಕರು ರುಕ್ಮಿಣೀಹರಣಪ್ರಸಂಗವನ್ನು ಮಧುರವಾಗಿ ಗಾನಮಾಡುತ್ತಿದ್ದರು. ಇದನ್ನು ಕೇಳಿದ ರಾಜರೂ ಮತ್ತು ರಾಜಕನ್ಯೆಯರೂ ಅತ್ಯಂತವಿಸ್ಮಿತರಾದರು. ಲಕ್ಷ್ಮೀದೇವಿಯು ರುಕ್ಮಿಣೀರೂಪದಲ್ಲಿದ್ದು ಸಾಕ್ಷಾತ್ ಲಕ್ಷ್ಮೀಪತಿಯಾದ ಶ್ರೀಕೃಷ್ಣನೊಡನೆ ಸೇರಿರುವುದನ್ನು ನೋಡಿ ದ್ವಾರಕಾವಾಸಿಗಳಾದ ನರ-ನಾರಿಯರೆಲ್ಲರೂ ಆನಂದಸಾಗರದಲ್ಲಿ ಮುಳುಗಿಹೋದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೫೪ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೫೫ನೆಯ ಅಧ್ಯಾಯ

ಪ್ರದ್ಯುಮ್ನನ ಜನ್ಮ : ಶಂಬರಾಸುರನ ಸಂಹಾರ

ಶ್ರೀಶುಕಮುನಿಗಳು ಹೇಳುತ್ತಾರೆ :

ಕಾಮಸ್ತು ವಾಸುದೇವಾಂಶೋ ದಗ್ಧಃ ಪ್ರಾಗ್ರುದ್ರಮನ್ಯುನಾ ।
ದೇಹೋಪಪತ್ತಯೇ ಭೂಯಸ್ತಮೇವ ಪ್ರತ್ಯಪದ್ಯತ ॥೧॥

ಪರೀಕ್ಷಿತಮಹಾರಾಜ! ರುದ್ರನ ಕ್ರೋಧಾಗ್ನಿಗೆ ಸಿಕ್ಕಿ ದಗ್ಧನಾಗಿ ಹೋದ ಕಾಮದೇವನು ವಾಸುದೇವನ ಅಂಶದಿಂದ ಹುಟ್ಟಿದವನು. ಪುನಃ ಶರೀರ ವನ್ನು ಹೊಂದುವುದಕ್ಕಾಗಿ ಕಾಮದೇವನು ತನ್ನ ಅಂಶಿಯಾದ ವಾಸುದೇವ ನನ್ನೇ ಆಶ್ರಯಿಸಿದನು. ಭಗವಂತನಾದ ಶ್ರೀಕೃಷ್ಣನಿಂದ ವಿದರ್ಭ ರಾಜ ಕುಮಾರಿಯಾದ ರುಕ್ಮಿಣೀದೇವಿಯಲ್ಲಿ ಹುಟ್ಟಿದ ಕಾಮದೇವನು ಪ್ರದ್ಯುಮ್ನ ನೆಂಬ ಹೆಸರಿನಿಂದ ಪ್ರಸಿದ್ಧನಾದನು. ವೀರ್ಯ-ಪರಾಕ್ರಮಗಳಲ್ಲಾಗಲೀ, ಸೌಂದರ್ಯದಲ್ಲಾಗಲೀ, ಸೌಶೀಲ್ಯಾದಿ ಗುಣಗಳಲ್ಲಾಗಲೀ, ಪ್ರದ್ಯುಮ್ನನು ತಂದೆಯಾದ ಶ್ರೀಕೃಷ್ಣನಿಗಿಂತ ಕಡಿಮೆಯವನಾಗಿರಲಿಲ್ಲ. ಪ್ರದ್ಯುಮ್ನನು ಮುಂದೆ ತನ್ನ ಶತ್ರುವಾಗುತ್ತಾನೆಂದು ಭಾವಿಸಿದ ಮಾಯಾವಿಯಾದ ಶಂಬರಾಸುರನು, ಪ್ರದ್ಯುಮ್ನನು ಹುಟ್ಟಿ ಹತ್ತುದಿನಗಳು ಕಳೆಯುವುದ ರೊಳಗೇ ವೇಷವನ್ನು ಬದಲಾಯಿಸಿಕೊಂಡು ಸೂತಿಕಾಗೃಹವನ್ನು ಪ್ರವೇಶಿಸಿ, ಮಗುವನ್ನು ಅಪಹರಿಸಿಕೊಂಡು ಹೋಗಿ ಸಮುದ್ರದಲ್ಲಿ ಹಾಕಿ ತನ್ನ ನಗರಿಗೆ

ತೆರಳಿದನು. ಶಂಬರಾಸುರನಿಂದ ಸಮುದ್ರಕ್ಕೆ ಎಸೆಯಲ್ಪಟ್ಟ ಮಗುವನ್ನು ದೊಡ್ಡದೊಂದು ಮೀನು ನುಂಗಿಹಾಕಿತು. ಮೀನುಹಿಡಿಯುವ ವೃತ್ತಿಯಲ್ಲಿದ್ದ ಬೆಸ್ತರು ದೊಡ್ಡದೊಂದು ಬಲೆಯನ್ನು ಬೀಸಿ ಇತರ ಮೀನುಗಳೊಡನೆ ಪ್ರದ್ಯುಮ್ನನಿದ್ದ ಮೀನನ್ನೂ ಹಿಡಿದರು. ಬಳಿಕ ಅವರು ಸುಂದರವಾಗಿದ್ದ ಪ್ರದ್ಯುಮ್ನನಿದ್ದ ಮೀನನ್ನು ಶಂಬರಾಸುರನಿಗೆ ಕಾಣಿಕೆಯಾಗಿಕೊಟ್ಟರು. ಶಂಬರಾಸುರನ ಅಪ್ಪಣೆಯಂತೆ ಅಡಿಗೆಯವರು ಅದ್ಭುತವಾಗಿದ್ದ ಆಮೀನನ್ನು ಅಡಿಗೆಯ ಮನೆಗೆ ತೆಗೆದುಕೊಂಡು ಹೋಗಿ ಕತ್ತಿಯಿಂದ ಕತ್ತರಿಸಿದರು. ಮೀನಿನ ಹೊಟ್ಟೆಯಲ್ಲಿ ಮಗುವಿದ್ದುದನ್ನು ಕಂಡು ಅಚ್ಚರಿಗೊಂಡ ಅಡಿಗೆ ಯವರು ಈ ಸಮಾಚಾರವನ್ನು ಶಂಬರಾಸುರನ ದಾಸಿಯಾಗಿದ್ದ ಮಾಯಾ ವತಿಗೆ ಹೇಳಿದರು. ಮಾಯಾವತಿಗೆ ಆ ಮಗುವು ಯಾರದ್ದಾಗಿರಬಹುದೆಂಬ ವಿಷಯದಲ್ಲಿ ಸಂದೇಹವುಂಟಾಯಿತು. ಆ ವೇಳೆಗೆ ಸರಿಯಾಗಿ ನಾರದರು ದಯಮಾಡಿಸಿ ಶ್ರೀಕೃಷ್ಣನ ಪತ್ನಿಯಾದ ರುಕ್ಮಿಣೀದೇವಿಯ ಗರ್ಭದಲ್ಲಿ ಕಾಮ ದೇವನು ಪ್ರದ್ಯುಮ್ನನೆಂಬ ಹೆಸರಿನಿಂದ ಜನ್ಮತಾಳಿದುದನ್ನೂ, ಪ್ರದ್ಯುಮ್ನನನ್ನು ತನ್ನ ಮೃತ್ಯುವೆಂದು ಭಾವಿಸಿದ ಶಂಬರಾಸುರನು ಮಗುವು ಹುಟ್ಟಿ ಹತ್ತು ದಿವಸಗಳು ಕಳೆಯುವುದರಲ್ಲಿಯೇ ಆ ಮಗುವನ್ನು ಅಪಹರಿಸಿಕೊಂಡು ಹೋಗಿ ಸಮುದ್ರಕ್ಕೆ ಹಾಕಿದುದನ್ನೂ, ಆ ಶಿಶುವು ಮೀನಿನಿಂದ ನುಂಗಲ್ಪಟ್ಟು ದನ್ನೂ ಆ ಮೀನನ್ನೇ ಬೆಸ್ತರು ಶಂಬರಾಸುರನಿಗೆ ಕಾಣಿಕೆಯಾಗಿ ಸಮರ್ಪಿಸಿದ ರೆಂಬುದನ್ನೂ, ಮೀನಿನ ಹೊಟ್ಟೆಯಲ್ಲಿರುವ ಸುಂದರವಾದ ಶಿಶುವು ಮನ್ಮಥ ನಲ್ಲದೆ ಬೇರೆ ಯಾರೂ ಅಲ್ಲವೆಂಬುದನ್ನೂ ಮಾಯಾವತಿಗೆ ವಿವರಿಸಿ ಹೇಳಿ ದರು. ಮಾಯಾವತಿಯು ಬೇರೆ ಯಾರೂ ಆಗಿರದೆ ಕಾಮನ ಪತ್ನಿಯಾದ, ಯಶಸ್ವಿನಿಯಾದ ರತೀದೇವಿಯೇ ಆಗಿದ್ದಳು. ರುದ್ರನ ಫಾಲನೇತ್ರದಿಂದ ದಗ್ಧನಾಗಿ ಹೋದ ತನ್ನ ಪತಿಯ ಪುನರುತ್ಪತ್ತಿಯನ್ನೇ ಆಕೆಯು ನಿರೀಕ್ಷಿಸು ತ್ತಿದ್ದಳು. ಶಂಬರಾಸುರನು ಅವಳನ್ನು ತೊವ್ವೆ ಮೊದಲಾದ ಪರಿಕರಗಳಿಂದ ಕೂಡಿದ ಅನ್ನವನ್ನು ಸಿದ್ಧಪಡಿಸಲು ನಿಯಮಿಸಿಕೊಂಡಿದ್ದನು. ಶಿಶುವಿನ ರೂಪದಲ್ಲಿ ತನ್ನ ಪತಿಯಾದ ಕಾಮದೇವನಿರುವನೆಂಬುದನ್ನು ತಿಳಿದನಂತರ ಮಾಯಾವತಿಯು ಆ ಮಗುವನ್ನು ಅತಿಯಾಗಿ ಪ್ರೀತಿಸತೊಡಗಿದಳು. ಸ್ವಲ್ಪ ದಿವಸಗಳಲ್ಲಿಯೇ ಶ್ರೀಕೃಷ್ಣಕುಮಾರನಾದ ಪ್ರದ್ಯುಮ್ನನು ಯುವಕನಾದನು.

ಪ್ರದ್ಯುಮ್ನನ ಅದ್ಭುತವಾದ ರೂಪ-ಲಾವಣ್ಯಗಳು ಅವನನ್ನು ನೋಡಿದ ಸ್ತ್ರೀಯರ ಮನಸ್ಸಿನಲ್ಲಿ ಶೃಂಗಾರರಸವನ್ನು ಉಕ್ಕಿಹರಿಸುತ್ತಿದ್ದುವು. ಕಮಲ ದಳದಂತೆ ಕೋಮಲವಾದ ಮತ್ತು ವಿಶಾಲವಾದ ಕಣ್ಣುಗಳುಳ್ಳವನಾಗಿಯೂ ಆಜಾನುಬಾಹುವಾಗಿಯೂ, ಮನುಷ್ಯಲೋಕದಲ್ಲೇ ಅತ್ಯಂತಸುಂದರ ನಾಗಿಯೂ ಇದ್ದ ಪ್ರದ್ಯುಮ್ನನನ್ನು ರತೀದೇವಿಯು ತನ್ನ ಪತಿಯನ್ನಾಗಿ ಭಾವಿಸಿ ಕಟಾಕ್ಷವೀಕ್ಷಣ, ನಾಚಿಕೆಯಿಂದ ಕೂಡಿದ ಮಂದಹಾಸ, ಹುಬ್ಬು ಗಳನ್ನು ಹಾರಿಸುವುದು–ಇವೇ ಮುಂತಾದ ಸುರತಕ್ರೀಡಾಲಕ್ಷಣಗಳಿಂದ ಅವನನ್ನು ಮೋಹಿಸಿದಳು. ಮಾಯಾವತಿಯಲ್ಲಾದ ಈ ಬದಲಾವಣೆಯನ್ನು ಪ್ರದ್ಯುಮ್ನನು ಗಮನಿಸದೇ ಇರಲಿಲ್ಲ. ಅಂತೆಯೇ ಅವಳನ್ನು ಕುರಿತು ಹೇಳಿದನು:

"ದೇವಿ! ನೀನಾದರೋ ನನಗೆ ತಾಯಿಗೆ ಸಮಾನಳಾಗಿರುವೆ. ಆದರೆ ಇತ್ತೀಚೆಗೆ ನಿನ್ನ ಬುದ್ಧಿಯು ವ್ಯತ್ಯಸ್ತವಾಗಿಬಿಟ್ಟಿದೆ. ತಾಯಿಯಲ್ಲಿರಬೇಕಾದ ಮಾತೃಭಾವವನ್ನು ಪರಿತ್ಯಜಿಸಿ ಕಾಮಿನಿಯಂತೆ ನನ್ನಲ್ಲಿ ಹಾವ-ಭಾವಗಳನ್ನು ತೋರಿಸುತ್ತಿರುವೆ."

ರತೀದೇವಿಯು ಹೇಳುತ್ತಾಳೆ :

"ಪ್ರಭುವೇ! ನೀನು ಸಾಕ್ಷಾತ್ ನಾರಾಯಣನ ಪುತ್ರನಾಗಿರುವೆ. ನಿನಗಿನ್ನೂ ಹತ್ತು ದಿವಸಗಳು ತುಂಬುವುದರಲ್ಲಿದ್ದಾಗಲೇ ಸೂತಿಕಾಗೃಹ ದಿಂದ ಶಂಬರಾಸುರನು ನಿನ್ನನ್ನು ಅಪಹರಿಸಿಕೊಂಡು ಬಂದನು. ನಾನು ನಿನ್ನ ಅಧಿಕೃತಪತ್ನಿಯಾದ ರತಿಯಾಗಿರುವೆನು. ನೀನು ಕಾಮದೇವನಾಗಿರುವೆ. ಸ್ವಾಮಿಯೇ! ನಿನಗಿನ್ನೂ ಹತ್ತು ದಿವಸಗಳೂ ತುಂಬದೇ ಇದ್ದಾಗ ಈ ಶಂಬರಾಸುರನು ನಿನ್ನನ್ನು ಅಪಹರಿಸಿ ಸಮುದ್ರದಲ್ಲಿ ಹಾಕಿಬಿಟ್ಟನು. ಹಾಗೆ ಸಮುದ್ರದಲ್ಲಿ ಬಿದ್ದ ನಿನ್ನನ್ನು ಮೀನೊಂದು ನುಂಗಿಬಿಟ್ಟಿತು. ಆ ಮೀನು ಬೆಸ್ತರ ಮೂಲಕವಾಗಿ ಈ ಮನೆಯನ್ನು ಸೇರಿತು. ಅದರ ಹೊಟ್ಟೆಯಲ್ಲಿದ್ದ ನಿನ್ನನ್ನು ನಾನು ಪಡೆದುಕೊಂಡೆನು. ಈ ನಿನ್ನ ಶತ್ರುವಾದ ಶಂಬರಾಸುರನು ನೂರಾರು ವಿಧವಾದ ಮಾಯೆಗಳನ್ನು ತಿಳಿದವನಾಗಿದ್ದಾನೆ. ಸಾಮಾನ್ಯ ರಿಂದ ಎದುರಿಸಲು ಮತ್ತು ಜಯಿಸಲು ಅಸಾಧ್ಯನಾದವನು. ಅಂತಹ

ಅಜೇಯನೆನಿಸಿರುವ ನಿನ್ನ ಶತ್ರುವನ್ನು ನೀನು ಮೋಹನವೇ ಮೊದಲಾದ ಮಾಯೆಗಳ ಮೂಲಕವಾಗಿ ಸಂಹರಿಸಬೇಕಾಗಿದೆ.

ಪ್ರಿಯತಮನೇ! ಮಗುವನ್ನು ಕಳೆದುಕೊಂಡ ನಿನ್ನ ತಾಯಿಯು ಮರಿಹಕ್ಕಿಯನ್ನು ಕಳೆದುಕೊಂಡ ಕಡಲಹದ್ದಿನಂತೆ ಗೋಳಿಡುತ್ತಿದ್ದಾಳೆ. ಪುತ್ರಸ್ನೇಹದಿಂದ ವ್ಯಾಕುಲಳಾಗಿ ದಯನೀಯಳಾದ ಆಕೆಯು ಕರುವನ್ನು ಕಳೆದುಕೊಂಡ ಹಸುವಿನಂತೆ ಬಹುವಾಗಿ ಕೊರಗುತ್ತಿದ್ದಾಳೆ."

ರತೀದೇವಿಯು ಹೀಗೆ ಮಾತನಾಡಿದನಂತರ ಭಗವಂತನಾದ ಪ್ರದ್ಯುಮ್ನ ನಿಗೆ ತಾನು ಕಾಮದೇವನೆಂಬ ಮತ್ತು ಮಾಯಾವತಿಯು ರತಿಯೆಂಬ ಅರಿವುಂಟಾಯಿತು. ಪ್ರದ್ಯುಮ್ನನಿಗೆ ಹೀಗೆ ಹೇಳಿದನಂತರ ಮಾಯಾವತಿಯು ಸಮಸ್ತಮಾಯೆಗಳನ್ನೂ ನಾಶಗೊಳಿಸುವ ಸಾಮರ್ಥ್ಯವನ್ನು ಹೊಂದಿದ್ದ 'ಮಹಾಮಾಯಾ' ಎಂಬ ವಿದ್ಯೆಯನ್ನು ಪ್ರದ್ಯುಮ್ನನಿಗೆ ಉಪದೇಶಿಸಿದಳು. ಅನಂತರ ಪ್ರದ್ಯುಮ್ನನು ಶಂಬರಾಸುರನ ಬಳಿಗೆ ಹೋಗಿ ಸಹಿಸಲಾಗದ ಕಟು ಮಾತುಗಳಿಂದ ಅವನನ್ನು ಆಕ್ಷೇಪಿಸಿದನು. ಅವನೊಡನೆ ಜಗಳವಾಡು ವುದೇ ಪ್ರದ್ಯುಮ್ನನ ಆಶಯವಾಗಿತ್ತು. ಅನಂತರ ಶಂಬರಾಸುರನನ್ನು ಪ್ರದ್ಯುಮ್ನನು ಯುದ್ಧಕ್ಕೂ ಆಹ್ವಾನಿಸಿದನು. ಪ್ರದ್ಯುಮ್ನನ ಸಹಿಸಲಾಗದ ಕಟುಮಾತುಗಳನ್ನು ಕೇಳಿ–ಕಾಲಿನಿಂದ ಮೆಟ್ಟಿದ ಸರ್ಪದಂತೆ–ಶಂಬರನು ಕೋಪದಿಂದ ಕಿಡಿ-ಕಿಡಿಯಾದನು. ಆತನ ಕಣ್ಣುಗಳು ಕೆಂಡದಂತೆ ಕೆಂಪಾದುವು. ಆತನು ಗದೆಯನ್ನು ಹಿಡಿದು ಯುದ್ಧಕ್ಕಾಗಿ ಹೊರಟೇಬಿಟ್ಟನು.

ಶಂಬರಾಸುರನು ಪ್ರದ್ಯುಮ್ನನನ್ನು ಎದುರಿಸಿ ನಿಂತು ಕೈಯಲ್ಲಿದ್ದ ಗದೆ ಯನ್ನು ಗರ-ಗರನೆ ತಿರುಗಿಸಿ ಪ್ರದ್ಯುಮ್ನನ ಮೇಲೆ ರಭಸದಿಂದೆಸೆದು ಸಿಡಿಲಿಗೆ ಸಮಾನವಾಗಿ ಸಿಂಹನಾದಮಾಡಿದನು. ಆತನ ಗದೆಯು ರಭಸದಿಂದ ತನ್ನ ಕಡೆಗೆ ಬರುತ್ತಿರುವುದನ್ನು ಕಂಡು ಕ್ರುದ್ಧನಾದ ಪ್ರದ್ಯುಮ್ನನು ತನ್ನ ಗದೆಯಿಂದ ಶಂಬರಾಸುರನ ಆ ಗದಾಪ್ರಹಾರವನ್ನು ತಪ್ಪಿಸಿಕೊಂಡು ಪುನಃ ಅದನ್ನೇ ಶಂಬರಾಸುರನ ಮೇಲೆ ರಭಸದಿಂದ ಪ್ರಯೋಗಿಸಿದನು. ಒಡನೆಯೇ ಶಂಬರಾಸುರನು ಮಯಾಸುರನಿಂದ ಉಪದಿಷ್ಟವಾದ ಆಸುರೀಮಾಯೆಯನ್ನು ಆಶ್ರಯಿಸಿ ಆಕಾಶಕ್ಕೆ ಹೋಗಿ ಅಲ್ಲಿಂದಲೇ ಪ್ರದ್ಯುಮ್ನನ ಮೇಲೆ ಅಸ್ತ್ರ-ಶಸ್ತ್ರ

ಗಳನ್ನು ಸುರಿಸಲು ಪ್ರಾರಂಭಿಸಿದನು. ಮಹಾರಥನಾದ ಪ್ರದ್ಯುಮ್ನನು ಶಂಬರಾಸುರನ ಮಾಯಾಮಯವಾದ ಶಸ್ತ್ರಾಸ್ತ್ರಗಳಿಂದ ಪೀಡಿಸಲ್ಪಟ್ಟಾಗ, ಸಮಸ್ತಮಾಯೆಗಳನ್ನೂ ಶಾಂತಗೊಳಿಸುವ ಸಾಮರ್ಥ್ಯವನ್ನು ಹೊಂದಿದ್ದ ಸತ್ತ್ವವತೀಮಹಾವಿದ್ಯೆಯನ್ನು ಪ್ರಯೋಗಿಸಿದನು. ಅನಂತರ ಶಂಬರಾಸುರನು ಯಕ್ಷ-ಗಂಧರ್ವ-ಪಿಶಾಚ-ನಾಗ-ರಾಕ್ಷಸ–ಇವೇ ಮುಂತಾದ ನೂರಾರು ಮಾಯೆಗಳನ್ನು ಪ್ರದ್ಯುಮ್ನನ ಮೇಲೆ ಪ್ರಯೋಗಿಸಿದನು. ಆದರೆ ಪ್ರದ್ಯುಮ್ನನು ತನ್ನ ಸತ್ತ್ವಮಯೀಮಹಾವಿದ್ಯೆಯಿಂದಲೇ ಅವೆಲ್ಲವನ್ನೂ ಉಪಶಮನಗೊಳಿಸಿದನು. ಬಳಿಕ ಪ್ರದ್ಯುಮ್ನನು ಕಿರೀಟದಿಂದಲೂ ಕುಂಡಲ ಗಳಿಂದಲೂ ಸುಶೋಭಿತವಾಗಿದ್ದ ಕೆಂಪಾದ ದಾಡಿ ಮತ್ತು ಮೀಸೆಗಳಿಂದ ಭಯಂಕರವಾಗಿ ಕಾಣುತ್ತಿದ್ದ ಶಂಬರಾಸುರನ ಕುತ್ತಿಗೆಯನ್ನು ತೀಕ್ಷ್ಣವಾದ ಕತ್ತಿಯಿಂದ ಕತ್ತರಿಸಿಹಾಕಿದನು. ಮಹಾದುಷ್ಟನಾಗಿದ್ದ ಶಂಬರಾಸುರನು ಪ್ರದ್ಯುಮ್ನನಿಂದ ಹತನಾದುದನ್ನು ನೋಡಿದೊಡನೆಯೇ ಸಂತೋಷಭರಿತ ರಾದ ದೇವತೆಗಳು ಕೃಷ್ಣಕುಮಾರನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿ ನಾನಾಪ್ರಕಾರವಾಗಿ ಸ್ತೋತ್ರಮಾಡಿದರು. ಅನಂತರ ಆಕಾಶಸಂಚಾರವನ್ನು ತಿಳಿದಿದ್ದ ಪ್ರದ್ಯುಮ್ನನ ಭಾರ್ಯೆಯಾದ ರತೀದೇವಿಯು ಕೃಷ್ಣಕುಮಾರನನ್ನು ಆಕಾಶಮಾರ್ಗದ ಮೂಲಕವಾಗಿ ದ್ವಾರಕೆಗೆ ಒಯ್ದಳು. ಮೇಘದೊಡನಿರುವ ಮಿಂಚಿನಂತೆ ಪ್ರದ್ಯುಮ್ನನು ಪತ್ನೀಸಮೇತನಾಗಿ ಆಕಾಶದಿಂದ ಕೆಳಗಿಳಿದು ನೂರಾರು ಲಲನೆಯರಿಂದ ಸಮಾಕುಲವಾಗಿದ್ದ, ಶ್ರೇಷ್ಠವಾದ ಅಂತಃಪುರವನ್ನು ಪ್ರವೇಶಿಸಿದನು.

ನೀಲಮೇಘಶ್ಯಾಮನಾಗಿ, ರೇಷ್ಮೆಯ ಪೀತಾಂಬರವನ್ನುಟ್ಟಿದ್ದ, ಆಜಾನುಬಾಹುವಾದ, ಎಣೆಗೆಂಪಾದ ಕಣ್ಣುಗಳಿಂದ ಕೂಡಿದ್ದ, ಮಂದಹಾಸ ವನ್ನು ಬೀರುತ್ತಿದ್ದ ಸುಂದರಮುಖಾರವಿಂದನಾಗಿದ್ದ, ಕಪ್ಪಾದ ಗುಂಗುರು ಕೂದಲುಗಳಿಂದ ಸಮಲಂಕೃತವಾದ ಮುಖಕಮಲದಿಂದ ಬೆಳಗುತ್ತಿದ್ದ ಪ್ರದ್ಯುಮ್ನನನ್ನು ಕಂಡು ಅಂತಃಪುರದ ಸ್ತ್ರೀಯರು ಕೃಷ್ಣನೇ ಬಂದುಬಿಟ್ಟ ನೆಂಬ ಭ್ರಾಂತಿಯಿಂದ ನಾಚಿಕೆಗೊಂಡು ಅಲ್ಲಲ್ಲಿಯೇ ಅಡಗಿಕೊಂಡರು. ಸ್ವಲ್ಪಹೊತ್ತಾದ ಮೇಲೆ ಕೃಷ್ಣನಿಗಿಂತಲೂ ಪ್ರದ್ಯುಮ್ನನಲ್ಲಿ ಸ್ವಲ್ಪ ವೈಲಕ್ಷಣ್ಯವಿದ್ದುದನ್ನು ಕಂಡು ಅಂತಃಪುರಕ್ಕೆ ಬಂದಿರುವವನು ಕೃಷ್ಣನಲ್ಲ

ವೆಂದು ನಿಶ್ಚಯಿಸಿಕೊಂಡು ಆನಂದದಿಂದಲೂ ಮತ್ತು ವಿಸ್ಮಯದಿಂದಲೂ ಶ್ರೇಷ್ಠರಾದ ನೂತನದಂಪತಿಗಳ ಬಳಿಗೆ ಹೋದರು. ಆ ಸಮಯಕ್ಕೆ ಸರಿಯಾಗಿ ಕಪ್ಪಾದ ಕಡೆಗಣ್ಣಿನ ನೋಟವುಳ್ಳವಳಾಗಿದ್ದ, ಮಧುರಭಾಷಿಣಿಯಾದ ರುಕ್ಮಿಣೀದೇವಿಯು ಅಲ್ಲಿಗೆ ಬಂದಳು. ನೂತನದಂಪತಿಗಳನ್ನು ನೋಡಿದೊಡನೆಯೇ ಅವಳಿಗೆ ತನ್ನ ಕಳೆದುಹೋಗಿದ್ದ ಮಗನ ಸ್ಮರಣೆಯಾಯಿತು. ಪುತ್ರವಾತ್ಸಲ್ಯದ ಕಾರಣದಿಂದಾಗಿ ಅವಳ ಸ್ತನಗಳಲ್ಲಿ ಹಾಲು ಸ್ರವಿಸತೊಡಗಿತು. ರುಕ್ಮಿಣೀದೇವಿಯು ಹಾಗೆಯೇ ಯೋಚಿಸತೊಡಗಿದಳು :

"ರತ್ನಪ್ರಾಯನಾಗಿರುವ ಈ ಪುರುಷನು ಯಾರಾಗಿರಬಹುದು? ಕಮಲಾಕ್ಷನಾದ ಇವನು ಯಾರ ಪುತ್ರನಾಗಿರಬಹುದು? ಯಾವ ಮಹಾ ಸೌಭಾಗ್ಯವತಿಯು ಇವನನ್ನು ತನ್ನ ಗರ್ಭದಲ್ಲಿ ಧರಿಸಿದ್ದಿರಬಹುದು? ಯಾವ ಸೌಭಾಗ್ಯವತಿಯು ಇವನನ್ನು ಪತಿಯನ್ನಾಗಿ ವರಿಸಿರಬಹುದು? ನಾನೂ ಹೊಸದಾಗಿ ಹುಟ್ಟಿದ ಪುತ್ರನೊಬ್ಬನನ್ನು ಕಳೆದುಕೊಂಡಿದ್ದೇನೆ. ಆತನನ್ನು ಸೂತಿಕಾಗೃಹದಿಂದ ಯಾರು ಅಪಹರಿಸಿಕೊಂಡು ಹೋದರೆಂಬುದು ಇದುವರೆಗೂ ತಿಳಿಯಲೇ ಇಲ್ಲ. ಅವನು ಒಂದು ವೇಳೆ ಬದುಕಿದ್ದರೆ ಇವನಂತೆಯೇ ನವಯುವಕನೂ ರೂಪವಂತನೂ ಆಗಿರುತ್ತಿದ್ದನು. ಶಾರ್ಙ್ಗಧನ್ವನಾದ ಶ್ರೀಕೃಷ್ಣನ ಸಾರೂಪ್ಯವು ಇವನಿಗೆ ಹೇಗೆ ಪ್ರಾಪ್ತವಾಯಿತು? ಆಕೃತಿಯಲ್ಲಿ, ಅವಯವಗಳಲ್ಲಿ, ನಡಿಗೆಯಲ್ಲಿ, ಸ್ವರದಲ್ಲಿ, ಮಂದಹಾಸಯುಕ್ತವಾದ ನೋಟದಲ್ಲಿ ಇವನು ಕೃಷ್ಣನಂತೆಯೇ ಇದ್ದಾನೆ. ಇದು ಹೇಗೆ ಸಾಧ್ಯ? ನಾನು ಗರ್ಭದಲ್ಲಿ ಧರಿಸಿದ್ದ ಶಿಶುವು ನಿಶ್ಚಯವಾಗಿಯೂ ಇವನೇ ಆಗಿದ್ದಿರಬಹುದೇ? ಇವನನ್ನು ನೋಡುತ್ತಿದ್ದಂತೆ ನನಗೆ ಇವನ ಮೇಲಿನ ವಾತ್ಸಲ್ಯವು ವೃದ್ಧಿಹೊಂದುತ್ತಿದೆ. ಶುಭಸೂಚಕವಾಗಿ ನನ್ನ ಎಡಭುಜವೂ ಅದುರುತ್ತಿದೆ."

ಪರೀಕ್ಷಿತಮಹಾರಾಜ! ಹೀಗೆ ರುಕ್ಮಿಣೀದೇವಿಯು ತನ್ನ ಮನಸ್ಸಿನಲ್ಲಿಯೇ ತರ್ಕಿಸುತ್ತಿರಲಾಗಿ ದೇವಕಿಯ ಮಗನಾದ, ಪವಿತ್ರಕೀರ್ತಿಯಾದ ಶ್ರೀಕೃಷ್ಣನು ವಸುದೇವ-ದೇವಕಿಯರೊಡನೆ ಅಲ್ಲಿಗೆ ಆಗಮಿಸಿದನು. ಶ್ರೀಕೃಷ್ಣನಿಗೆ ಎಲ್ಲವೂ ತಿಳಿದಿತ್ತಾದರೂ ಏನೂ ತಿಳಿಯದವನಂತೆ ಮೌನಿಯಾಗಿದ್ದನು. ಆ ಸಮಯಕ್ಕೆ ಅಲ್ಲಿಗೆ ಆಗಮಿಸಿದ ಮಹರ್ಷಿಗಳಾದ

ನಾರದರು, ಶಂಬರಾಸುರನು ಶಿಶುವನ್ನು ಅಪಹರಿಸಿಕೊಂಡು ಹೋದುದರಿಂದ ಪ್ರಾರಂಭಿಸಿ ಶಂಬರಾಸುರನ ಸಂಹಾರದವರೆಗಿನ ಕಥೆಯನ್ನು ಸವಿಸ್ತರವಾಗಿ ವಸುದೇವನೇ ಮೊದಲಾದ ಎಲ್ಲ ಯಾದವರಿಗೂ ಹೇಳಿದರು. ನಾರದಮಹರ್ಷಿಗಳಿಂದ ಇಂತಹ ಆಶ್ಚರ್ಯಕರವಾದ ಘಟನೆಯನ್ನು ಕೇಳಿ ಶ್ರೀಕೃಷ್ಣನ ಅಂತಃಪುರದ ಸ್ತ್ರೀಯರೆಲ್ಲರೂ ಆಶ್ಚರ್ಯಚಕಿತರಾದರು. ಹಲವಾರು ವರ್ಷಗಳ ಕಾಲ ನಷ್ಟವಾಗಿ ಹೋಗಿದ್ದು, ಸತ್ತವನು ಪುನಃ ಬದುಕಿ ಬಂದಂತೆ ಆಗಮಿಸಿದ ಪ್ರದ್ಯುಮ್ನನನ್ನು ಎಲ್ಲರೂ ಅಭಿನಂದಿಸತೊಡಗಿದರು. ದೇವಕೀ-ವಸುದೇವರು, ಶ್ರೀಕೃಷ್ಣ-ಬಲರಾಮರು, ರುಕ್ಮಿಣೀ ಮತ್ತು ಅಂತಃ ಪುರದ ಸ್ತ್ರೀಯರು ಇವರೆಲ್ಲರೂ ಸಾಲು-ಸಾಲಾಗಿ ನಿಂತು ನೂತನದಂಪತಿಗಳನ್ನು ಆಲಿಂಗಿಸಿಕೊಂಡು ಆನಂದಭರಿತರಾದರು. ಕಳೆದುಹೋಗಿದ್ದ ಪ್ರದ್ಯುಮ್ನನು ಪುನಃ ದ್ವಾರಕೆಗೆ ಬಂದಿರುವನೆಂಬುದನ್ನು ಕೇಳಿ ದ್ವಾರಕಾಪುರವಾಸಿಗಳು ಆನಂದಭರಿತರಾಗಿ ಪರಸ್ಪರ ಮಾತನಾಡಿಕೊಂಡರು :

"ಅಬ್ಬಾ! ಎಂತಹ ಸೌಭಾಗ್ಯದ ಮಾತನ್ನು ನಾವಿಂದು ಕೇಳಿದೆವು! ಅದೃಷ್ಟವಶದಿಂದ ಸತ್ತುಹೋದವನು ಎದ್ದು ಬಂದಂತೆ, ಹಲವಾರು ವರ್ಷಗಳಿಂದ ಕಾಣದಿದ್ದ ನಮ್ಮ ರಾಜಕುಮಾರನು ಪುನಃ ಆಗಮಿಸಿದ್ದಾನೆ."

ಪ್ರದ್ಯುಮ್ನನ ರೂಪ-ಸೌಂದರ್ಯಗಳು ಕೃಷ್ಣನ ರೂಪ-ಸೌಂದರ್ಯಗಳಿಗೆ ಎಷ್ಟು ಅನುರೂಪವಾಗಿತ್ತೆಂದರೆ ಪ್ರದ್ಯುಮ್ನನನ್ನು ನೋಡಿದ ಶ್ರೀಕೃಷ್ಣನ ಪತ್ನಿಯರು ಕೆಲವೊಮ್ಮೆ ಶ್ರೀಕೃಷ್ಣನೇ ಬಂದಿರುವನೆಂದು ಭ್ರಮಿಸಿಬಿಡುತ್ತಿದ್ದರು. ಹೀಗಿರುವಾಗ ಲಕ್ಷ್ಮಿಗೆ ಆಶ್ರಯನಾದ ಶ್ರೀಕೃಷ್ಣನಿಗೆ ಪ್ರತಿಬಿಂಬಸ್ವರೂಪನಾದ, ಕಾಮಾವತಾರನಾದ ಪ್ರದ್ಯುಮ್ನನನ್ನು ನೋಡಿದ ನಂತರ ಅನ್ಯಸ್ತ್ರೀಯರು ಅವನಲ್ಲಿ ಅನುರಾಗವಿಟ್ಟು ಏಕಾಂತದಲ್ಲಿ ಸೇವಿಸುತ್ತಿದ್ದರೆಂಬುದರಲ್ಲಿ ಅಚ್ಚರಿಯೇನಿದೆ?

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೫೫ನೆಯ ಅಧ್ಯಾಯವು ಮುಗಿಯಿತು.

ಸ್ಯಮಂತಕಮಣಿಯ ಕಥೆ :
ಜಾಂಬವತೀ-ಸತ್ಯಭಾಮೆಯರೊಡನೆ ಶ್ರೀಕೃಷ್ಣನ ವಿವಾಹ

ಶ್ರೀಶುಕಮುನಿಗಳು ಹೇಳುತ್ತಾರೆ :

ಸತ್ರಾಜಿತಃ ಸ್ವತನಯಾಂ ಕೃಷ್ಣಾಯ ಕೃತಕಿಲ್ಬಿಷಃ ।
ಸ್ಯಮನ್ತಕೇನ ಮಣಿನಾ ಸ್ವಯಮುದ್ಯಮ್ಯ ದತ್ತವಾನ್ ॥೧॥

ಪರೀಕ್ಷಿತಮಹಾರಾಜ! ಸತ್ರಾಜಿತನು ಶ್ರೀಕೃಷ್ಣನ ಮೇಲೆ ಮಿಥ್ಯಾಪವಾದವನ್ನು ಹೊರಿಸಿದನು. ಅವನು ತನ್ನ ಅಂತಹ ಅಪರಾಧ ದಿಂದ ಮುಕ್ತನಾಗಬೇಕೆಂಬ ಆಶಯದಿಂದ ತಾನಾಗಿಯೇ ಪ್ರಯತ್ನಿಸಿ ಸ್ಯಮಂತಕಮಣಿಯೊಡನೆ ತನ್ನ ಮಗಳಾದ ಸತ್ಯಭಾಮೆಯನ್ನು ಶ್ರೀಕೃಷ್ಣನಿಗೆ ಮದುವೆಮಾಡಿಕೊಟ್ಟನು."

ರಾಜನು ಪ್ರಶ್ನಿಸುತ್ತಾನೆ :

"ಪೂಜ್ಯರೇ! ಸತ್ರಾಜಿತನು ಶ್ರೀಕೃಷ್ಣನಿಗೆ ಯಾವ ಅಪರಾಧವನ್ನು ಮಾಡಿದನು? ಅವನಿಗೆ ಸ್ಯಮಂತಕಮಣಿಯು ಎಲ್ಲಿ ಸಿಕ್ಕಿತು? ಅವನು ತನ್ನ ಕನ್ಯೆಯನ್ನೇಕೆ ಶ್ರೀಕೃಷ್ಣನಿಗೆ ಮದುವೆಮಾಡಿಕೊಟ್ಟನು? ಈ ಎಲ್ಲ ವಿಷಯಗಳನ್ನೂ ಸವಿಸ್ತರವಾಗಿ ಹೇಳುವ ಕೃಪೆಮಾಡಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಸತ್ರಾಜಿತನು ಸೂರ್ಯನಿಗೆ ಪರಮಭಕ್ತ ನಾಗಿದ್ದನು. ಸೂರ್ಯದೇವನು ಅವನ ಭಕ್ತಿಗೆ ಮೆಚ್ಚಿ ಅವನ ಪರಮ ಮಿತ್ರನೂ ಆದನು. ಸೂರ್ಯಭಗವಂತನೇ ಪ್ರಸನ್ನನಾಗಿ ಸತ್ರಾಜಿತನಿಗೆ ಪ್ರೀತಿಯಿಂದ ಸ್ಯಮಂತಕವೆಂಬ ಮಣಿಯನ್ನು ಅನುಗ್ರಹಿಸಿಕೊಟ್ಟನು. ಆ ದಿವ್ಯಮಣಿಯನ್ನು ಕತ್ತಿನಲ್ಲಿ ಧರಿಸಿದ್ದ ಸತ್ರಾಜಿತನು ಸೂರ್ಯದೇವ ನಂತೆಯೇ ಪ್ರಕಾಶಮಾನನಾಗಿ ಕಾಣುತ್ತಿದ್ದನು. ಅವನು ದ್ವಾರಕಾ ಪಟ್ಟಣಕ್ಕೆ ಬಂದಾಗ ತೇಜೋವಿಶಿಷ್ಟನಾಗಿದ್ದ ಅವನನ್ನು ಯಾರಿಂದಲೂ ಗುರುತಿಸಲು ಸಾಧ್ಯವಾಗಲೇ ಇಲ್ಲ. ದೂರದಿಂದ ಅವನನ್ನು ನೋಡಿದ

ದ್ವಾರಕಾಪುರವಾಸಿಗಳ ಕಣ್ಣುಗಳು ಅವನ ಅದ್ಭುತವಾದ ತೇಜಸ್ಸಿನಿಂದ ಕೋರೈಸಿಹೋದುವು. ಅವರು ತಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಬೇಕಾಯಿತು. ಸಾಕ್ಷಾತ್ ಸೂರ್ಯಭಗವಂತನೇ ತಮ್ಮ ನಗರಿಗೆ ಬರುತ್ತಿರಬಹುದೆಂದು ಭಾವಿಸಿದ ಪುರಜನರು ಈ ವಿಷಯವನ್ನು ಪಗಡೆಯಾಡುತ್ತಿದ್ದ ಶ್ರೀಕೃಷ್ಣನಲ್ಲಿಗೆ ಹೋಗಿ ಹೇಳಿದರು :

ನಾರಾಯಣ ನಮಸ್ತೇಽಸ್ತು ಶಙ್ಖಚಕ್ರಗದಾಧರ ।
ದಾಮೋದರಾರವಿನ್ದಾಕ್ಷ ಗೋವಿನ್ದ ಯದುನನ್ದನ ॥೬॥

ಏಷ ಆಯಾತಿ ಸವಿತಾ ತ್ವಾಂ ದಿದೃಕ್ಷುರ್ಜಗತ್ಪತೇ ।
ಮುಷ್ಣನ್ಗಭಸ್ತಿಚಕ್ರೇಣ ನೃಣಾಂ ಚಕ್ಷೂಂಷಿ ತಿಗ್ಮಗುಃ ॥೭॥

"ಶಂಖ-ಚಕ್ರ-ಗದಾಧರನಾದ ನಾರಾಯಣನೇ! ಕಮಲಾಕ್ಷನೇ! ದಾಮೋದರನೇ! ಯದುವಂಶಶಿರೋಮಣಿಯಾದ ಗೋವಿಂದನೇ! ನಿನಗೆ ನಮಸ್ಕಾರಮಾಡುತ್ತೇವೆ. ಜಗದೀಶ್ವರನೇ! ಇದೋ ನೋಡು! ತನ್ನ ಕೋರೈಸುವ ಕಿರಣಗಳಿಂದ ಮನುಷ್ಯರ ದೃಷ್ಟಿಗಳನ್ನೇ ಅಪಹರಿಸುತ್ತಾ ಪ್ರಚಂಡರಶ್ಮಿಯಾದ ಸೂರ್ಯಭಗವಂತನು ನಿನ್ನನ್ನು ಸಂದರ್ಶಿಸುವ ಸಲುವಾಗಿ ಆಗಮಿಸುತ್ತಿದ್ದಾನೆ. ಪ್ರಭುವೇ! ಸಮಸ್ತಶ್ರೇಷ್ಠರಾದ ದೇವತೆ ಗಳೂ ಮೂರು ಲೋಕಗಳಲ್ಲಿಯೂ ನಿನ್ನನ್ನು ಹೊಂದುವ ಮಾರ್ಗವನ್ನು ಹುಡುಕುತ್ತಲೇ ಇರುತ್ತಾರೆ. ಆದರೆ ನೀನು ಅವರಿಗೆ ಸಿಕ್ಕುವುದಿಲ್ಲ. ನೀನು ಯಾದವರಲ್ಲಿ ನಿಗೂಢನಾಗಿರುವೆಯೆಂಬುದನ್ನು ತಿಳಿದು ಸೂರ್ಯ ನಾರಾಯಣನೇ ನಿನ್ನನ್ನು ಸಂದರ್ಶಿಸಲು ಇಲ್ಲಿಗೆ ಬರುತ್ತಿದ್ದಾನೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಕಮಲಾಕ್ಷನಾದ ಶ್ರೀಕೃಷ್ಣನು ತಿಳಿವಳಿಕೆಯಿಲ್ಲದ ಜನರ ಈ ಮಾತನ್ನು ಕೇಳಿ ನಸುನಗುತ್ತಾ ಹೇಳಿದನು :

"ಬಂಧುಗಳೇ! ಅವನು ಸೂರ್ಯದೇವನಲ್ಲ ; ಸೂರ್ಯಮಣಿಯನ್ನು ಧರಿಸಿರುವುದರಿಂದ ಹೀಗೆ ಪ್ರಕಾಶಮಾನನಾಗಿ ಕಾಣುತ್ತಿದ್ದಾನೆ."

ಹತ್ತಿರಕ್ಕೆ ಬರುತ್ತಲೇ ಅವನು ಸತ್ರಾಜಿತನೆಂಬುದು ಎಲ್ಲರಿಗೂ ತಿಳಿಯಿತು. ಸತ್ರಾಜಿತನು ಸಂಪದ್ಯುಕ್ತವಾಗಿದ್ದ ಮತ್ತು ಮಂಗಳೋತ್ಸವ ದಿಂದ ವಿಜೃಂಭಿಸುತ್ತಿದ್ದ ತನ್ನ ಮನೆಯನ್ನು ಪ್ರವೇಶಿಸಿ, ಆ ದಿವ್ಯವಾದ

ಸ್ಯಮಂತಕಮಣಿಯನ್ನು ಬ್ರಾಹ್ಮಣರ ಮೂಲಕವಾಗಿ ದೇವರಮನೆಯಲ್ಲಿ ಪ್ರತಿಷ್ಠಾಪಿಸಿದನು. ಆ ಮಣಿಯು ಅನುದಿನವೂ ಎಂಟು ಭಾರಗಳಷ್ಟು* ಚಿನ್ನವನ್ನು ಕೊಡುತ್ತಿದ್ದಿತು. ಇದಕ್ಕೂ ಮಿಗಿಲಾಗಿ ಆ ಮಣಿಯು ಪೂಜಿಸಲ್ಪಡುತ್ತಿದ್ದ ಪ್ರದೇಶದಲ್ಲಿ ದುರ್ಭಿಕ್ಷ, ಮಹಾಮಾರಿ, ಗ್ರಹಪೀಡೆ, ಮಾನಸಿಕವಾದ ಅಥವಾ ಶಾರೀರಕವಾದ ರೋಗಗಳು, ಮಾಟ-ಮದ್ದುಗಳ ಉಪದ್ರವ–ಇಂತಹ ಅಶುಭಪ್ರಸಂಗಗಳು ಯಾವುವೂ ಇರುತ್ತಿರಲಿಲ್ಲ.

ಒಮ್ಮೆ ಶ್ರೀಕೃಷ್ಣನು ರಾಜನಾದ ಉಗ್ರಸೇನನ ಸಲುವಾಗಿ ಸ್ಯಮಂತಕಮಣಿಯನ್ನು ಸತ್ರಾಜಿತನಿಂದ ಯಾಚಿಸಿದನು. ಯಾಚಕನು ಯಾರೆಂಬುದನ್ನೂ, ಯಾಚಕನು ಕೇಳಿದ್ದನ್ನು ಕೊಡದಿದ್ದರೆ ಪ್ರಾಪ್ತವಾಗುವ ದೋಷವನ್ನೂ ತರ್ಕಿಸಹೋಗದೆ ಅರ್ಥಲುಬ್ಧನಾಗಿದ್ದ ಸತ್ರಾಜಿತನು ಮಣಿಯನ್ನು ಮಹಾರಾಜನಿಗೆ ಕೊಡಲಿಲ್ಲ.

ಒಮ್ಮೆ ಸತ್ರಾಜಿತನ ತಮ್ಮನಾದ ಪ್ರಸೇನನು ಮಹಾಪ್ರಭೆಯಿಂದ ಕೂಡಿದ್ದ ಆ ಸ್ಯಮಂತಕಮಣಿಯನ್ನು ಕುತ್ತಿಗೆಯಲ್ಲಿ ಧರಿಸಿ ಕುದುರೆಯ ಮೇಲೆ ಕುಳಿತು ಬೇಟೆಯಾಡುತ್ತಾ ಅರಣ್ಯದಲ್ಲಿ ಸಂಚರಿಸುತ್ತಿದ್ದನು. ಇದ್ದಕ್ಕಿದ್ದಂತೆಯೇ ಸಿಂಹವೊಂದು ಅಲ್ಲಿಗೆ ಬಂದು ಪ್ರಸೇನನ ಮೇಲೆ ಬಿದ್ದು ಅವನನ್ನೂ ಆತನ ಕುದುರೆಯನ್ನೂ ಸಂಹರಿಸಿ ಮಣಿಯನ್ನೆತ್ತಿಕೊಂಡು ಹೊರಟುಹೋಯಿತು. ಸಿಂಹವು ಮಣಿಯೊಡನೆ ಗುಹೆಯನ್ನು ಪ್ರವೇಶಿಸ ಲಿದ್ದಾಗ ಆ ದಿವ್ಯಮಣಿಯನ್ನು ಪಡೆದುಕೊಳ್ಳುವ ಸಲುವಾಗಿ ಋಕ್ಷರಾಜನಾದ ಜಾಂಬವಂತನು ಸಿಂಹವನ್ನು ಸಂಹರಿಸಿದನು. ಜಾಂಬವಂತನು ಆ ಮಣಿಯನ್ನು ತನ್ನ ಗುಹೆಗೆ ಕೊಂಡೊಯ್ದು ಮಗುವಿನ ಆಟಕ್ಕಾಗಿ (ಮಗು

---

* ಭಾರಪ್ರಮಾಣ :

ಚತುರ್ಭಿರ್ವ್ರೀಹಿಭಿರ್ಗುಞ್ಜಂ ಗುಞ್ಜಾನ್ಪಞ್ಚ ಪಣಂ ಪಣಾನ್ ।
ಅಷ್ಟೌ ಧರಣಮಷ್ಟೌ ಚ ಕರ್ಷಂ ತಾಂ ಶ್ಚತುರಃ ಪಲಮ್ ॥
ತುಲಾಂ ಪಲಶತಂ ಪ್ರಾಹುರ್ಭಾರಂ ಸ್ಯಾದ್ವಿಂಶತಿಸ್ತುಲಾಃ ॥

ನಾಲ್ಕು ಭತ್ತದ ಕಾಳಿನ ತೂಕ = ಒಂದು ಗುಲಗಂಜಿ. ೫ ಗುಲಗಂಜಿ = ೧ ಪಣ, ೮ ಪಣ = ೧ ಧರಣ. ೮ ಧರಣ = ೧ ಕರ್ಷ. ೪ ಕರ್ಷ = ೧ ಪಲ. ೧೦೦ ಪಲ=೧ ತೊಲ. ೨೦ ತೊಲ = ೧ ಭಾರ. ೧ ಭಾರವು ಸುಮಾರು ೧೨ ಮಣಗಳ ತೂಕವಾಗುತ್ತದೆ.

ವನ್ನು ಆಟವಾಡಿಸಲು) ಆ ಮಣಿಯನ್ನು ಕೊಟ್ಟನು. ಕಾಡಿಗೆ ಬೇಟೆಯಾಡಲು ಮಣಿಯೊಡನೆ ಹೋಗಿದ್ದ ತನ್ನ ತಮ್ಮನಾದ ಪ್ರಸೇನನು ನಗರಕ್ಕೆ ಬಾರದಿರಲು ಸತ್ರಾಜಿತನು ಬಹುದುಃಖಿತನಾಗಿ ಹೇಳಿದನು :

ಪ್ರಾಯಃ ಕೃಷ್ಣೇನ ನಿಹತೋ ಮಣಿಗ್ರೀವೋ ವನಂ ಗತಃ ||೧೬||

"ಮಣಿಯನ್ನು ಕುತ್ತಿಗೆಯಲ್ಲಿ ಧರಿಸಿ ಅರಣ್ಯಕ್ಕೆ ಹೋಗಿದ್ದ ನನ್ನ ತಮ್ಮನನ್ನು (ಮಣಿಯ ಮೇಲಿನ ಆಸೆಯಿಂದ) ಪ್ರಾಯಶಃ ಶ್ರೀಕೃಷ್ಣನೇ ಕೊಂದಿರಬೇಕು."

ಸತ್ರಾಜಿತನ ಈ ಮಾತನ್ನು ಕೇಳಿ ಪುರಜನರು ಪರಸ್ಪರವಾಗಿ ಪಿಸುಗುಟ್ಟುತ್ತಿದ್ದರು. ಆ ಪಿಸುಗುಟ್ಟು (ಕರ್ಣಾಕರ್ಣಿಕೆಯಾಗಿ) ಶ್ರೀಕೃಷ್ಣನ ಕಿವಿಗಳಿಗೂ ತಲುಪಿತು. ಸುಳ್ಳು ಅಪವಾದವು ತನ್ನ ಮೇಲೆ ಬಂದಿರುವುದೆಂದು ಭಾವಿಸಿಕೊಂಡು ಶ್ರೀಕೃಷ್ಣನು ಅಪವಾದದಿಂದ ಪಾರಾಗಲು ಹಲವಾರು ನಾಗರಿಕರೊಡನೆ ಪ್ರಸೇನನು ಹೋಗಿದ್ದ ಮಾರ್ಗವನ್ನೇ ಹಿಡಿದು ಹೊರಟನು. ಸತ್ತುಬಿದ್ದಿದ್ದ ಪ್ರಸೇನನ ಮತ್ತು ಕುದುರೆಯ ಸುತ್ತಲೂ ಸಿಂಹದ ಹೆಜ್ಜೆಗಳ ಗುರುತುಗಳಿದ್ದುವು. ಸಿಂಹವೊಂದು ಪ್ರಸೇನನನ್ನೂ, ಕುದುರೆಯನ್ನೂ ಕೊಂದಿರುವುದನ್ನು ಊಹಿಸಿ ಪ್ರಮುಖರಾದ ನಾಗರಿಕರು ಆ ಹೆಜ್ಜೆಗಳನ್ನೇ ಹಿಡಿದು ಮುಂದಕ್ಕೆ ಶ್ರೀಕೃಷ್ಣನೊಡನೆ ಪ್ರಯಾಣಮಾಡಿದರು. ಪರ್ವತದ ತಪ್ಪಲಿನಲ್ಲಿ ಆ ಸಿಂಹವು ಸತ್ತು ಬಿದ್ದಿದ್ದು ಅದರ ಸುತ್ತಲೂ ಕರಡಿಯ ಹೆಜ್ಜೆಗಳಿದ್ದುವು. ಸಿಂಹವನ್ನು ಕರಡಿಯು ಕೊಂದಿರಬಹುದೆಂದು ಊಹಿಸಿ ಆ ಕರಡಿಯ ಹೆಜ್ಜೆಗಳನ್ನೇ ಅನುಸರಿಸಿ ಹೋದರು. ಅದು ಅವರನ್ನು ಒಂದು ಗುಹೆಯ ಬಳಿಗೆ ಒಯ್ದಿತು. ಶ್ರೀಕೃಷ್ಣನು ಪುರಪ್ರಮುಖರನ್ನು ಗುಹೆಯ ಬಾಗಿಲಿನಲ್ಲಿಯೇ ನಿಲ್ಲಿಸಿ ತಾನೊಬ್ಬನೇ ಕಗ್ಗತ್ತಲಿನಿಂದ ಕೂಡಿ ಅತಿಭಯಂಕರವಾಗಿ ಕಾಣುತ್ತಿದ್ದ ಗುಹೆಯೊಳಗೆ ಪ್ರವೇಶಿಸಿದನು. ಅಲ್ಲಿ ಅಂತಹ ಶ್ರೇಷ್ಠವಾದ ಸ್ಯಮಂತಕಮಣಿಯನ್ನು ಮಗುವಿನ ಆಟಕ್ಕಾಗಿ ತೊಟ್ಟಿಲಿಗೆ ಕಟ್ಟಿರುವುದನ್ನು ನೋಡಿ ಶ್ರೀಕೃಷ್ಣನು ಅದನ್ನು ತೆಗೆದುಕೊಂಡು ಹೋಗುವ ಇಚ್ಛೆಯಿಂದ ಆ ಮಗುವಿನ ಬಳಿಗೆ ಹೋಗಿ ನಿಂತನು. ಆ ಗುಹೆಯಲ್ಲಿ ಅಪರಿಚಿತನಾದೊಬ್ಬ ಮನುಷ್ಯನನ್ನು ಕಂಡು ಆ ಮಗುವಿನ ಸಾಕುತಾಯಿಯು ಭಯಗೊಂಡವಳಂತೆ ಗಟ್ಟಿಯಾಗಿ ಕಿರುಚಿಕೊಂಡಳು. ಅವಳ ಕೂಗನ್ನು ಕೇಳಿ ಮಹಾಬಲಿಷ್ಠ

ನಾದ ಜಾಂಬವಂತನು ಕ್ರುದ್ಧನಾಗಿ ಅಲ್ಲಿಗೆ ಧಾವಿಸಿ ಬಂದನು. ಅತ್ಯಂತಕ್ರುದ್ಧನಾಗಿದ್ದ ಜಾಂಬವಂತನು ಭಗವಂತನ ಮಹಿಮೆಯನ್ನಾಗಲೀ, ಪ್ರಭಾವವನ್ನಾಗಲೀ ತಿಳಿದವನಾಗಿರಲಿಲ್ಲ. ಶ್ರೀಕೃಷ್ಣನನ್ನು ಭಗವಂತನೆಂದೇ ಅವನು ಗುರುತಿಸಲಿಲ್ಲ. ಸಾಧಾರಣನಾದ ಒಬ್ಬ ಮನುಷ್ಯನೆಂದು ಭಾವಿಸಿಬಿಟ್ಟನು. ಹೀಗಾಗಿ ಜಾಂಬವಂತನು ತನ್ನ ಸ್ವಾಮಿಯಾದ ಶ್ರೀಕೃಷ್ಣನೊಡನೆಯೇ ಯುದ್ಧಮಾಡಲು ಉಪಕ್ರಮಿಸಿದನು. ಒಂದು ತುಂಡು ಮಾಂಸಕ್ಕಾಗಿ ಎರಡು ಗಿಡಗಪಕ್ಷಿಗಳು ಕಾದಾಡುವಂತೆ ವಿಜಯಗಳಿಸುವ ಸಲುವಾಗಿ ಶ್ರೀಕೃಷ್ಣ-ಜಾಂಬವಂತರು ಕಾದಾಡತೊಡಗಿದರು. ಮೊದಲು ಅವರಿಬ್ಬರೂ ಅಸ್ತ್ರ-ಶಸ್ತ್ರಗಳ ಮೂಲಕವಾಗಿ ಯುದ್ಧಮಾಡಿದರು. ಬಳಿಕ ಶಿಲಾಯುದ್ಧವಾಯಿತು.



ಅಲ್ಲಿದ್ದ ಬಂಡೆಗಳನ್ನೇ ಕಿತ್ತು ಒಬ್ಬರು ಮತ್ತೊಬ್ಬರನ್ನು ಪ್ರಹರಿಸತೊಡ ಗಿದರು. ಅನಂತರ ವೃಕ್ಷಗಳನ್ನೇ ಕಿತ್ತು ಬಡಿದಾಡತೊಡಗಿದರು. ಕಟ್ಟಕಡೆಗೆ ಸ್ವಾಮೀ-ಸೇವಕರು ಬಾಹುಯುದ್ಧವನ್ನು ಪ್ರಾರಂಭಿಸಿದರು. ವಜ್ರಾಯುಧ ಪ್ರಹಾರಕ್ಕೆ ಸಮಾನವಾದ, ಕಠಿನವಾದ ಮುಷ್ಟಿಪ್ರಹಾರಗಳಿಂದ ಇಬ್ಬರೂ ಪರಸ್ಪರವಾಗಿ ಹಗಲು-ರಾತ್ರಿಗಳೆನ್ನದೆ ಅವಿರತವಾಗಿ ಇಪ್ಪತ್ತೆಂಟು ದಿವಸಗಳವರೆಗೆ ಕಾಳಗವಾಡಿದರು. ಶ್ರೀಕೃಷ್ಣನ ವಜ್ರಮುಷ್ಟಿಯ ಗುದ್ದುಗಳಿಂದ ಜಾಂಬವಂತನ ಶರೀರದ ಮೂಳೆಗಳೆಲ್ಲವೂ ಸಡಿಲಗೊಂಡುವು. ಅಂಗಾಂಗಗಳ ಸಂಧಿಬಂಧಗಳೆಲ್ಲವೂ ಶಿಥಿಲವಾದುವು. ತೊಡೆಗಳು ಮುರಿದುಹೋದುವು.

ಜಾಂಬವಂತನು ಬಲಗುಂದಿ ಮೈ ಬೆವರಿದನು. ಅತಿಯಾಗಿ ಅಚ್ಚರಿಗೊಂಡು ಶ್ರೀಕೃಷ್ಣನಿಗೆ ಹೇಳಿದನು :

ಜಾನೇ ತ್ವಾಂ ಸರ್ವಭೂತಾನಾಂ ಪ್ರಾಣ ಓಜಃ ಸಹೋ ಬಲಮ್ ।
ವಿಷ್ಣುಂ ಪುರಾಣಪುರುಷಂ ಪ್ರಭವಿಷ್ಣುಮಧೀಶ್ವರಮ್ ॥೨೬॥

"ಪ್ರಭುವೇ! ನನಗೆ ತಿಳಿದುಹೋಯಿತು. ನೀನು ಸಾಮಾನ್ಯ ಮಾನವನಲ್ಲ. ಸಮಸ್ತಪ್ರಾಣಿಗಳಿಗೂ ನೀನು ಸ್ವಾಮಿಯಾಗಿರುವೆ ; ರಕ್ಷಕನಾಗಿರುವೆ ; ಪುರಾಣಪುರುಷನಾದ ಮಹಾವಿಷ್ಣುವೇ ಆಗಿರುವೆ. ಸಮಸ್ತ ಪ್ರಾಣಿಗಳ ಪ್ರಾಣ-ಇಂದ್ರಿಯ-ಬಲ-ಮನೋಬಲ-ಶರೀರಬಲಗಳೂ ನೀನೇ ಆಗಿರುವೆ.

ತ್ವಂ ಹಿ ವಿಶ್ವಸೃಜಾಂ ಸ್ರಷ್ಟಾ ಸೃಜ್ಯಾನಾಮಪಿ ಯಚ್ಚ ಸತ್ ।
ಕಾಲಃ ಕಲಯತಾಮೀಶಃ ಪರ ಆತ್ಮಾ ತಥಾತ್ಮನಾಮ್ ॥೨೭॥

ವಿಶ್ವದ ಸೃಷ್ಟಿಕರ್ತೃಗಳಾದ ಬ್ರಹ್ಮನೇ ಮೊದಲಾದವರಿಗೂ ನೀನು ಸೃಷ್ಟಿಕರ್ತನಾಗಿರುವೆ. ಮುಂದೆ ಸೃಷ್ಟಿಸಲ್ಪಡುವ ಪದಾರ್ಥಗಳಲ್ಲಿಯೂ ಸತ್ತಾರೂಪದಿಂದ ನೀನೇ ವಿರಾಜಮಾನನಾಗಿರುವೆ. ಕಾಲಕ್ಕೆ ಎಷ್ಟು ಅವಯವಗಳಿವೆಯೋ (ಕ್ಷಣ-ಲವ ಇತ್ಯಾದಿ) ಆ ಎಲ್ಲದರ ನಿಯಾಮಕನೂ ಆಗಿರುವ ಪರಮಕಾಲನು ನೀನೇ ಆಗಿರುವೆ. ಶರೀರಭೇದದಿಂದ ಭಿನ್ನ-ಭಿನ್ನವಾಗಿ ಕಾಣುವ ಅಂತರಾತ್ಮಗಳಿಗೆ ಪರಮಾತ್ಮನೂ ನೀನೇ ಆಗಿರುವೆ.

ಯಸ್ಯೇಷದುತ್ಕಲಿಕರೋಷಕಟಾಕ್ಷಮೋಕ್ಷೈ-
ರ್ವರ್ತ್ಮಾದಿಶತ್ ಕ್ಷುಭಿತನಕ್ರತಿಮಿಙ್ಗಲೋಽಬ್ಧಿಃ ।
ಸೇತುಃ ಕೃತಃ ಸ್ವಯಶ ಉಜ್ಜ್ವಲಿತಾ ಚ ಲಙ್ಕಾ
ರಕ್ಷಃಶಿರಾಂಸಿ ಭುವಿ ಪೇತುರಿಷುಕ್ಷತಾನಿ ॥೨೮॥

ಸ್ವಾಮಿಯೇ! ಈಗಲೂ ನನ್ನ ಸ್ಮರಣೆಯಲ್ಲಿದೆ. ನೀನು ಸ್ವಲ್ಪವೇ ರೋಷವನ್ನು ತಳೆದು ಕೆಂಪೇರಿದ ಕಡೆಗಣ್ಣಿನಿಂದ ಸಮುದ್ರದ ಕಡೆಗೆ ವೀಕ್ಷಿಸಿದೆ. ಇಷ್ಟರಿಂದಲೇ ಸಮುದ್ರದಲ್ಲಿದ್ದ ತಿಮಿಂಗಿಲಗಳೂ, ಮೊಸಳೆಗಳೂ, ದೊಡ್ಡ ದೊಡ್ಡ ಮೀನುಗಳೂ ತಲ್ಲಣಿಸಿಹೋದುವು. ಒಡನೆಯೇ ಸಮುದ್ರರಾಜನು ಮಾರ್ಗಮಾಡಿಕೊಟ್ಟನು. ಅದರ ಮೇಲೆ ಕೀರ್ತಿರೂಪವಾದ ಸೇತುವೆಯನ್ನು

ನಿರ್ಮಿಸಿದೆ. ಲಂಕೆಯನ್ನು ಸುಟ್ಟುಹಾಕಿದೆ. ತೀಕ್ಷ್ಣವಾದ ಬಾಣಗಳಿಂದ ಕತ್ತರಿಸಲ್ಪಟ್ಟ ರಾವಣನ ತಲೆಗಳು ಕೆಳಗುರುಳಿದುವು. ಆ ನನ್ನ ಸ್ವಾಮಿಯಾದ ಶ್ರೀರಾಮನೇ ಈಗ ಶ್ರೀಕೃಷ್ಣನಾಗಿ ಪ್ರಕಟಗೊಂಡಿರುವೆ."

ಪರೀಕ್ಷಿತಮಹಾರಾಜ! ಋಕ್ಷರಾಜನಾದ ಜಾಂಬವಂತನು ತನ್ನ ಸ್ವಾಮಿಯಾದ ಶ್ರೀರಾಮನೇ ಶ್ರೀಕೃಷ್ಣನಾಗಿ ಅವತರಿಸಿರುವನೆಂಬುದನ್ನು ಗುರುತಿಸಲಾಗಿ ಕಮಲಾಕ್ಷನಾದ ಶ್ರೀಕೃಷ್ಣನು ತನ್ನ ಕಲ್ಯಾಣಕರವಾದ, ಶೀತಲವಾದ ಕರಕಮಲಗಳಿಂದ ಅವನ ಶರೀರವನ್ನು ನೇವರಿಸಿದನು. ಬಳಿಕ ಶ್ರೀಕೃಷ್ಣನು ಭಕ್ತನ ವಿಷಯದಲ್ಲಿ ಪರಮಕೃಪೆಯನ್ನು ತೋರುತ್ತಾ ಪ್ರೇಮ ಪೂರ್ಣವಾದ ಗಾಂಭೀರ್ಯದ ಮಾತುಗಳಿಂದ ಹೇಳಿದನು :

"ಋಕ್ಷರಾಜನೇ! ಜಾಂಬವಂತ! ಮಣಿಯ ಸಲುವಾಗಿ ನಾವು ಈ ನಿನ್ನ ಗುಹೆಗೆ ಬಂದಿದ್ದೇವೆ. ಈ ಸ್ಯಮಂತಕಮಣಿಯ ಮೂಲಕವಾಗಿ ನನ್ನ ಮೇಲೆ ಬಂದಿರುವ ಅಪವಾದವನ್ನು ಕಳೆದುಕೊಳ್ಳುವ ಆಶಯವು ನಮ ಗಿದೆ."

ಭಗವಂತನು ಹೀಗೆ ಹೇಳಲು ಜಾಂಬವಂತನು ಅತ್ಯಾನಂದದಿಂದ ಶ್ರೀಕೃಷ್ಣನನ್ನು ಯಥೋಚಿತವಾಗಿ ಸತ್ಕರಿಸುವ ಸಲುವಾಗಿ ತನ್ನ ಮಗಳಾದ ಕುಮಾರಿ ಜಾಂಬವತಿಯನ್ನು ಸ್ಯಮಂತಕಮಣಿಯೊಡನೆ ಅವನ ಪಾದಾರ ವಿಂದಗಳಲ್ಲಿ ಅರ್ಪಿಸಿಬಿಟ್ಟನು.

ಗುಹೆಯ ಬಾಗಿಲಿನಲ್ಲಿ ಶ್ರೀಕೃಷ್ಣನು ಬರುವುದನ್ನೇ ನಿರೀಕ್ಷಿಸುತ್ತಾ ನಿಂತಿದ್ದ ಪುರಜನರು ಹನ್ನೆರಡು ದಿವಸಗಳವರೆಗೂ ಕಾದರು. ಒಳಹೋದ ಶೌರಿಯು ಗುಹೆಯಿಂದ ಹೊರಕ್ಕೆ ಬಾರದಿರಲು ಅತಿದುಃಖಿತರಾಗಿ ದ್ವಾರಕಾ ಪಟ್ಟಣಕ್ಕೆ ಹಿಂದಿರುಗಿದರು. ಹನ್ನೆರಡು ದಿವಸಗಳು ಕಳೆದರೂ ಶ್ರೀಕೃಷ್ಣನು ಗುಹೆಯಿಂದ ಹೊರಕ್ಕೆ ಬಾರದಿರುವುದನ್ನು ಕೇಳಿ ತಾಯಿಯಾದ ದೇವಕೀ ದೇವಿ, ತಂದೆಯಾದ ವಸುದೇವ, ಪತ್ನಿಯಾದ ರುಕ್ಮಿಣೀ, ಸುಹೃದರು, ಜ್ಞಾತಿ-ಬಾಂಧವರು–ಎಲ್ಲರೂ ಬಹಳವಾಗಿ ದುಃಖಿಸಿದರು. ಶ್ರೀಕೃಷ್ಣನ ಜೊತೆಯಲ್ಲಿ ಹೋಗಿದ್ದ ಪೌರರು ಹಿಂದಿರುಗಿ ಬಂದುದರಿಂದ ಸ್ಯಮಂತಕ ಮಣಿಯನ್ನು ಅಪಹರಿಸಿದವನು ಶ್ರೀಕೃಷ್ಣನಲ್ಲವೆಂದು ಎಲ್ಲರಿಗೂ ತಿಳಿದು ಹೋಯಿತು. ಶ್ರೀಕೃಷ್ಣನ ಮೇಲೆ ಸುಳ್ಳು ಆಪಾದನೆಯನ್ನು ಹೊರಿಸಿದ್ದಕ್ಕಾಗಿ

ದುಃಖಿತರಾದ ಪೌರರು ಸತ್ರಾಜಿತನನ್ನು ಶಪಿಸಲು ಪ್ರಾರಂಭಿಸಿದರು. ಶ್ರೀಕೃಷ್ಣನು ಕ್ಷೇಮದಿಂದ ಬೇಗ ಬಂದುಬಿಡಲೆಂದು ಮಹಾಮಾಯೆಯಾದ ದುರ್ಗಾದೇವಿಯನ್ನು ಎಲ್ಲರೂ ಪ್ರಾರ್ಥಿಸಿಕೊಂಡರು. ಅವರೆಲ್ಲರ ಪ್ರಾರ್ಥನೆಯಿಂದ ಪ್ರಸನ್ನಳಾದ ದುರ್ಗಾದೇವಿಯ ಆಶೀರ್ವಾದದ ಫಲವಾಗಿ ಶ್ರೀಕೃಷ್ಣನು ಸಫಲಮನೋರಥನಾಗಿ ಭಾರ್ಯೆಯಾದ ಜಾಂಬವತಿಯೊಡನೆ ಸಮಸ್ತರನ್ನೂ ಸಂತೋಷಸಾಗರದಲ್ಲಿ ಮುಳುಗಿಸುತ್ತಾ ಪ್ರಾದುರ್ಭವಿಸಿದನು. ಸತ್ತವನೊಬ್ಬನು ಎದ್ದುಬಂದಂತೆ ಕಳೆದುಹೋಗಿದ್ದ ಶ್ರೀಕೃಷ್ಣನು ಪತ್ನೀ ಸಮೇತನಾಗಿ ಕಂಠದಲ್ಲಿ ಸ್ಯಮಂತಕಮಣಿಯನ್ನು ಧರಿಸಿ ಬಂದುದನ್ನು ನೋಡಿ ದ್ವಾರಕಾಪುರವಾಸಿಗಳು ಪರಮಾನಂದಭರಿತರಾದರು. ಬಳಿಕ ಶ್ರೀಕೃಷ್ಣನು ರಾಜಸಭೆಗೆ ಸತ್ರಾಜಿತನನ್ನು ಕರೆಯಿಸಿ, ಮಹಾರಾಜನಾದ ಉಗ್ರಸೇನನ ಸನ್ನಿಧಾನದಲ್ಲಿ–ಮಣಿಯು ಯಾರಿಂದ ಅಪಹರಿಸಲ್ಪಟ್ಟಿತು ಮತ್ತು ಹೇಗೆ ಸಿಕ್ಕಿತು?–ಎಂಬುದೆಲ್ಲವನ್ನೂ ವಿಶದವಾಗಿ ಹೇಳಿ ಆ ಸ್ಯಮಂತಕಮಣಿಯನ್ನು ಸತ್ರಾಜಿತನಿಗೆ ಕೊಟ್ಟುಬಿಟ್ಟನು. ಸತ್ರಾಜಿತನು ಬಹಳ ನಾಚಿಕೆಯಿಂದ ತಲೆಯನ್ನು ತಗ್ಗಿಸಿಕೊಂಡೇ ರತ್ನವನ್ನು ತೆಗೆದುಕೊಂಡು ತಾನು ಮಾಡಿದ ಅಪರಾಧಕ್ಕಾಗಿ ಪಶ್ಚಾತ್ತಾಪಪಡುತ್ತಾ ತನ್ನ ಮನೆಗೆ ಹೋದನು. ತಾನು ಮಾಡಿದ ಭಗವದ್ದ್ರೋಹವನ್ನೇ ಬಾರಿ-ಬಾರಿಗೂ ಆತನು ಚಿಂತಿಸುತ್ತಿದ್ದನು. ಬಲಿಷ್ಠರೊಡನೆ ದ್ವೇಷವನ್ನು ಕಟ್ಟಿಕೊಂಡೆನೆಂಬ ಭಾವನೆಯಿಂದ ಅವನಿಗೆ ಬಹಳ ಭಯವೂ ಆಗಿದ್ದಿತು. 'ನಾನು ಈ ನನ್ನ ಪಾಪವನ್ನು ಹೇಗೆ ಕಳೆದುಕೊಳ್ಳಲಿ? ಯಾವ ಕಾರ್ಯವನ್ನು ಮಾಡುವುದ ರಿಂದ ಭಗವಂತನಾದ ಶ್ರೀಕೃಷ್ಣನು ನನ್ನ ವಿಷಯದಲ್ಲಿ ಪ್ರಸನ್ನನಾಗು ತ್ತಾನೆ?'–ಹೀಗವನು ಸರ್ವದಾ ಯೋಚಿಸುತ್ತಲೇ ಇದ್ದನು. 'ಯಾವ ಕಾರ್ಯವನ್ನು ಮಾಡಿದರೆ ನನಗೆ ಒಳ್ಳೆಯದಾಗುತ್ತದೆ? ಮುಂದಾಲೋಚನೆಯಿಲ್ಲದ, ಕ್ಷುದ್ರನಾದ, ಧನಲೋಭಿಯಾದ ನನ್ನನ್ನು ಜನರು ಶಪಿಸದಂತೆ ನಾನು ಯಾವ ಕಾರ್ಯವನ್ನು ಮಾಡಲಿ?'–ಹೀಗೆಯೇ ಸತತವಾಗಿ ಯೋಚಿಸುತ್ತಿದ್ದಾಗ ಅವನಿಗೊಂದು ಉಪಾಯವು ಹೊಳೆಯಿತು :

ದಾಸ್ಯೇ ದುಹಿತರಂ ತಸ್ಮೈ ಸ್ತ್ರೀರತ್ನಂ ರತ್ನಮೇವ ಚ ।
ಉಪಾಯೋಽಯಂ ಸಮೀಚೀನಸ್ತಸ್ಯ ಶಾನ್ತಿರ್ನ ಚಾನ್ಯಥಾ ॥೪೨॥

"ಸ್ತ್ರೀಯರಲ್ಲಿ ರತ್ನಪ್ರಾಯಳಾಗಿರುವ ನನ್ನ ಮಗಳಾದ ಸತ್ಯಭಾಮೆಯನ್ನೂ ಸ್ಯಮಂತಕಮಣಿಯನ್ನೂ ಶ್ರೀಕೃಷ್ಣನಿಗೇ ಅರ್ಪಿಸಿಬಿಡುತ್ತೇನೆ. ಈ ಉಪಾಯವು ಸಮೀಚೀನವಾಗಿದೆ. ಇದರಿಂದ ನನ್ನ ಪಾಪವೂ ಪರಿಹಾರವಾಗುತ್ತದೆ. ಇದನ್ನು ಬಿಟ್ಟು ನನ್ನ ಪಾಪವನ್ನು ಕಳೆದುಕೊಳ್ಳಲು ಬೇರೆ ಯಾವ ಉಪಾಯವೂ ಇಲ್ಲ."

ಪರೀಕ್ಷಿತಮಹಾರಾಜ! ಸತ್ರಾಜಿತನು ತನ್ನ ವಿವೇಕಯುಕ್ತವಾದ ಬುದ್ಧಿಯಿಂದ ಹೀಗೆ ನಿಶ್ಚಯಿಸಿ, ಇದು ಕಾರ್ಯಗತವಾಗಲು ತಾನೇ ಸುಹೃದರ ಮೂಲಕವಾಗಿ ಪ್ರಯತ್ನಿಸಿ, ಶ್ರೀಕೃಷ್ಣನನ್ನು ಒಪ್ಪಿಸಿ, ಶುಭಾಂಗಿಯಾದ, ತನ್ನ ಮಗಳಾದ ಸತ್ಯಭಾಮೆಯನ್ನೂ ಸ್ಯಮಂತಕಮಣಿಯನ್ನೂ ಶ್ರೀಕೃಷ್ಣನಿಗೆ ಸಮರ್ಪಿಸಿದನು. ಸತ್ಯಭಾಮೆಯು ಶೀಲ-ಸ್ವಭಾವ- ಸೌಂದರ್ಯ, ಔದಾರ್ಯ–ಇವೇ ಮುಂತಾದ ಸದ್ಗುಣಗಳಿಂದ ಸಂಪನ್ನಳಾಗಿದ್ದಳು. ಹಲವಾರು ರಾಜಕುಮಾರರು ಅವಳ ಪಾಣಿಗ್ರಹಣಕ್ಕಾಗಿ ಹಾತೊರೆಯುತ್ತಿದ್ದರು. ಅಂತಹ ಕಡುಚೆಲುವೆಯಾದ ಸತ್ಯಭಾಮೆಯನ್ನು ಶ್ರೀಕೃಷ್ಣನು ವಿಧಿಪೂರ್ವಕವಾಗಿ ವರಿಸಿದನು. ಬಳಿಕ ಶ್ರೀಕೃಷ್ಣನು ಸ್ಯಮಂತಕ ಮಣಿಯ ವಿಷಯವಾಗಿ ಸತ್ರಾಜಿತನಿಗೆ ಹೇಳಿದನು :

"ಸತ್ರಾಜಿತಮಹಾರಾಜ! ನಾವು ಮಣಿಯನ್ನು ಪ್ರತಿಗ್ರಹಿಸುವುದಿಲ್ಲ. ಅದು ಸೂರ್ಯನ ಪರಮಭಕ್ತನಾದ ನಿನ್ನಲ್ಲಿಯೇ ಇರಲಿ. ನಾವು ಅದರ ಫಲವನ್ನು ಮಾತ್ರ ಉಪಭೋಗಿಸುವ ಅಧಿಕಾರವುಳ್ಳವರಾಗಿದ್ದೇವೆ"–ಎಂದು ಹೇಳಿ ಮಣಿಯನ್ನು ಅವನಿಗೇ ಕೊಟ್ಟುಬಿಟ್ಟನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ೫೬ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೫೭ನೆಯ ಅಧ್ಯಾಯ

ಸ್ಯಮಂತಕಮಣಿಯ ಹರಣ : ಶತಧನ್ವನ ಸಂಹಾರ : ಅಕ್ರೂರನನ್ನು ದ್ವಾರಕೆಗೆ ಕರೆಸಿಕೊಂಡುದು

ಶ್ರೀಶುಕಮುನಿಗಳು ಹೇಳುತ್ತಾರೆ :

ವಿಜ್ಞಾತಾರ್ಥೋಽಪಿ ಗೋವಿನ್ದೋ ದಗ್ಧಾನಾಕರ್ಣ್ಯ ಪಾಣ್ಡವಾನ್ ।
ಕುನ್ತೀಂ ಚ ಕುಲ್ಯಕರಣೇ ಸಹರಾಮೋ ಯಯೌ ಕುರೂನ್ ॥೧॥

ಪರೀಕ್ಷಿತಮಹಾರಾಜ! ಯದ್ಯಪಿ ಶ್ರೀಕೃಷ್ಣನಿಗೆ ಕೌರವರು ಕಲ್ಪಿಸಿದ್ದ ಅರಗಿನಮನೆಯಲ್ಲಿ ಪಾಂಡವರು ಭಸ್ಮವಾಗಿ ಹೋಗಿಲ್ಲವೆಂಬುದು ತಿಳಿದಿತ್ತಾದರೂ ಹಸ್ತಿನಾಪುರದ ದೂತರ ಮೂಲಕವಾಗಿ, ಕುಂತಿಯೊಡನೆ ಐವರು ಪಾಂಡವರೂ ಭಸ್ಮವಾಗಿ ಹೋದರೆಂಬ ವಾರ್ತೆಯನ್ನು ಕೇಳಿ, ತತ್ಕಾಲದಲ್ಲಿ ಕುಲಪರಂಪರೆಯಿಂದ ನಡೆದು ಬಂದಿರುವ ಕಾರ್ಯಗಳನ್ನು ನಡೆಸಲು ಶ್ರೀಕೃಷ್ಣನು ಬಲರಾಮನೊಡನೆ ಹಸ್ತಿನಾಪಟ್ಟಣಕ್ಕೆ ಪ್ರಯಾಣ ಮಾಡಿದನು. ಹಸ್ತಿನಾಪುರಕ್ಕೆ ಹೋಗಿ ಭೀಷ್ಮ, ಕೃಪರು, ವಿದುರ, ಗಾಂಧಾರಿ, ದ್ರೋಣಾಚಾರ್ಯರು–ಇವರುಗಳನ್ನು ಕಂಡು ಸಮಾನದುಃಖಿಗಳಾದ ರಾಮ-ಕೃಷ್ಣರು, ಕುಂತಿಯೊಡನೆ ಪಾಂಡವರ ನಿಧನವಾದುದಕ್ಕಾಗಿ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. 'ಇದು ಅತ್ಯಂತ ದುಃಖದ ಪ್ರಸಂಗವಾಗಿದೆ'–ಎಂದು ಹೇಳುತ್ತಾ ಎಲ್ಲರೂ ಕಣ್ಣೀರು ಸುರಿಸಿದರು. ದ್ವಾರಕಾಪಟ್ಟಣದಲ್ಲಿ ಶ್ರೀಕೃಷ್ಣ-ಬಲರಾಮರು ಇಲ್ಲದ ಇಂತಹ ಸಮಯವನ್ನೇ ಕಾಯುತ್ತಿದ್ದ ಅಕ್ರೂರ-ಕೃತವರ್ಮರು ಶತಧನ್ವನ ಬಳಿಗೆ ಹೋಗಿ ಹೇಳಿದರು

"ಶತಧನ್ವನೇ! ಸತ್ರಾಜಿತನಲ್ಲಿರುವ ಸ್ಯಮಂತಕಮಣಿಯನ್ನು ನೀನೇಕೆ ಅಪಹರಿಸಬಾರದು? ಸತ್ರಾಜಿತನು ನಮಗಂತೂ ಬಹಳ ಅನ್ಯಾಯಮಾಡಿದ್ದಾನೆ. ತನ್ನ ಹಿರಿಯ ಮಗಳಾದ ಸತ್ಯಭಾಮೆಯನ್ನು ನಮಗೆ ಮದುವೆ ಮಾಡಿಕೊಡುವುದಾಗಿ ಹೇಳಿದ್ದನು. ಈಗವನು ನಮ್ಮೆಲ್ಲರನ್ನೂ ತಿರಸ್ಕರಿಸಿ ಸತ್ಯಭಾಮೆಯನ್ನು ಕೃಷ್ಣನಿಗೆ ಮದುವೆಮಾಡಿಕೊಟ್ಟನು. ಸತ್ರಾಜಿತನೂ ತನ್ನ ತಮ್ಮನಾದ ಪ್ರಸೇನನನ್ನೇ ಅನುಸರಿಸಿ ಏಕೆ ಹೋಗಬಾರದು? ಮಣಿ

ಗಾಗಿ ಸಿಂಹವು ಪ್ರಸೇನನನ್ನು ಕೊಂದಂತೆ ನೀನೇಕೆ ಸತ್ರಾಜಿತನನ್ನು ಕೊಂದು ಮಣಿಯನ್ನು ಅಪಹರಿಸಬಾರದು?"

ಶತಧನ್ವನು ಮಹಾಪಾಪಿಷ್ಠನಾಗಿದ್ದನು. ಅವನ ಆಯುಷ್ಯವೂ ಕ್ಷೀಣಿಸಿದ್ದಿತು. ಅಕ್ರೂರ-ಕೃತವರ್ಮರ ಇಂತಹ ಪ್ರಚೋದನೆಯಿಂದ ಶತಧನ್ವನ ಬುದ್ಧಿಯು ಹಾಳಾಯಿತು. ಮಹಾದುಷ್ಟನಾಗಿದ್ದ ಅವನು ವಿವೇಕವನ್ನು ಕಳೆದುಕೊಂಡು ಮಣಿಯ ಲೋಭದಿಂದಾಗಿ ರಾತ್ರಿಯಲ್ಲಿ ಮಲಗಿದ್ದ ಸತ್ರಾಜಿತನನ್ನು ಸಂಹರಿಸಿದನು. ಆ ಸಮಯದಲ್ಲಿ ಸತ್ರಾಜಿತನ ಮನೆಯಲ್ಲಿದ್ದ ಸ್ತ್ರೀಯರು ಅನಾಥರಂತೆ ಗಟ್ಟಿಯಾಗಿ ಕಿರುಚಿಕೊಂಡು ಗೋಳಾಡುತ್ತಿದ್ದರು. ಆದರೆ ಕ್ರೂರಿಯಾದ ಶತಧನ್ವನು ಅವರ ಕಡೆಗೆ ಲಕ್ಷ್ಯವನ್ನೇ ಕೊಡದೆ ಕಟುಕರು ಪಶುವನ್ನು ಕೊಲ್ಲುವ ರೀತಿಯಲ್ಲಿ ಸತ್ರಾಜಿತನನ್ನು ಕೊಂದು ಅವನಲ್ಲಿದ್ದ ಮಣಿಯನ್ನು ಅಪಹರಿಸಿಕೊಂಡು ಹೊರಟುಹೋದನು. ತಂದೆಯು ಹತನಾಗಿ ಬಿದ್ದಿರುವುದನ್ನು ನೋಡಿ ಸತ್ಯಭಾಮೆಯು ಅತ್ಯಂತ ದುಃಖಿತಳಾಗಿ–"ಅಯ್ಯೋ! ತಂದೆಯೇ! ನಿನಗೆ ಎಂತಹ ಪರಿಸ್ಥಿತಿಯು ಒದಗಿಬಂದಿತು? ಅನಾಥನಂತೆ ಹೇಳುವವರು–ಕೇಳುವವರೂ ಇಲ್ಲದವನಾಗಿ ಸತ್ತುಹೋದೆಯಲ್ಲವೇ? ನೀನು ಸತ್ತನಂತರ ನಾನೂ ಸತ್ತಂತೆಯೇ ಸರಿ. ನಾನಾದರೂ ಏಕಿನ್ನು ಬದುಕಿರಬೇಕು?"–ಎಂದು ಮುಂತಾಗಿ ಹೇಳಿಕೊಂಡು ಗೋಳಾಡುತ್ತಾ ಮೂರ್ಛೆಹೋದಳು. ಎಚ್ಚರಗೊಂಡನಂತರ ತನ್ನ ತಂದೆಯನ್ನು ಕೊಂದವನಿಗೆ ತಕ್ಕ ಶಿಕ್ಷೆಯಾಗ ಬೇಕೆಂದೆಣಿಸಿದ ಸತ್ಯಭಾಮೆಯು ತಂದೆಯ ಕಳೇಬರವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿರಿಸಿ ಶ್ರೀಕೃಷ್ಣನಿದ್ದ ಹಸ್ತಿನಾಪಟ್ಟಣಕ್ಕೆ ಹೋದಳು. ಅಲ್ಲಿ ಶ್ರೀಕೃಷ್ಣನನ್ನು ಸಂಧಿಸಿ ಗೋಳಾಡುತ್ತಾ ತಂದೆಯ ನಿಧನದ ವಾರ್ತೆಯನ್ನು ಹೇಳಿದಳು. ಶ್ರೀಕೃಷ್ಣನಿಗೆ ಈ ಎಲ್ಲ ವಿಷಯಗಳೂ ಮೊದಲೇ ತಿಳಿದಿದ್ದುವು. ಆದರೂ ತಿಳಿದಿತ್ತೆಂಬುದನ್ನು ತೋರಿಸಿಕೊಳ್ಳದೆ ಮನುಷ್ಯಸಹಜವಾದ ರೀತಿ ಯಲ್ಲಿ ರಾಮ-ಕೃಷ್ಣರಿಬ್ಬರೂ ಕಣ್ಣೀರುಸುರಿಸುತ್ತಾ–"ಅಯ್ಯೋ! ನಿಶ್ಚಯ ವಾಗಿಯೂ ಎಂತಹ ದಾರುಣವಾದ ವಿಪತ್ತು ನಮಗೆ ಒದಗಿಬಂದಿತು? ನಿನ್ನ ತಂದೆಯು ಕೊಲ್ಲಲ್ಪಟ್ಟನೇ? ಎಂತಹ ಅನ್ಯಾಯ?"–ಮುಂತಾಗಿ ಸತ್ಯಭಾಮೆಗೆ ಸಮಾಧಾನಹೇಳಿದರು. ಭಾರ್ಯೆ ಮತ್ತು ಅಗ್ರಜರ

ಸಮೇತನಾಗಿ ಶ್ರೀಕೃಷ್ಣನು ದ್ವಾರಕೆಗೆ ಹಿಂದಿರುಗಿ ಸತ್ರಾಜಿತನನ್ನು ಸಂಹರಿಸಿದ ಶತಧನ್ವನನ್ನು ಸಂಹರಿಸಲು ಮತ್ತು ಸ್ಯಮಂತಕಮಣಿಯನ್ನು ಅವನಿಂದ ಕಿತ್ತುಕೊಳ್ಳಲು ಪ್ರಯತ್ನಿಸತೊಡಗಿದನು. ಶ್ರೀಕೃಷ್ಣನು ತನ್ನನ್ನು ಸಂಹರಿಸುವುದಕ್ಕಾಗಿ ಪ್ರಯತ್ನಿಸುತ್ತಿರುವನೆಂಬ ವಿಷಯವು ಶತಧನ್ವನಿಗೆ ತಿಳಿದು ಅವನು ಬಹಳವಾಗಿ ಭಯಗೊಂಡನು. ಪ್ರಾಣವನ್ನುಳಿಸಿಕೊಳ್ಳಲು ಅವನು ಕೃತವರ್ಮನ ಸಹಾಯವನ್ನು ಬೇಡಿದನು. ಕೃತವರ್ಮನು ಸಹಾಯವನ್ನು ನಿರಾಕರಿಸುತ್ತಾ ಶತಧನ್ವನಿಗೆ ಹೇಳಿದನು :

ನಾಹಮೀಶ್ವರಯೋಃ ಕುರ್ಯಾಂ ಹೇಲನಂ ರಾಮಕೃಷ್ಣಯೋಃ ।
ಕೋ ನು ಕ್ಷೇಮಾಯ ಕಲ್ಪೇತ ತಯೋರ್ವೃಜಿನಮಾಚರನ್ ॥೧೨॥

"ಶತಧನ್ವನೇ! ರಾಮ-ಕೃಷ್ಣರಿಬ್ಬರೂ ಮಹಾಶಕ್ತಿವಂತರು. ಸರ್ವೇಶ್ವರರು. ಅಂತಹವರನ್ನು ನಾನು ಎದುರುಹಾಕಿಕೊಳ್ಳಲು ಸಿದ್ಧನಾಗಿಲ್ಲ. ವೀರಾಧಿವೀರರನ್ನು ತಿರಸ್ಕಾರವಾಗಿ ಕಾಣಲು ನನ್ನಿಂದ ಸಾಧ್ಯವಿಲ್ಲ. ಅಂತಹವರ ವಿಷಯದಲ್ಲಿ ಅಪರಾಧವೆಸಗಿ ಕ್ಷೇಮದಿಂದಿರಲು ಯಾವನಿಗೆ ತಾನೇ ಸಾಧ್ಯವಾದೀತು?

ಕಂಸಃ ಸಹಾನುಗೋಽಪೀತೋ ಯದ್ದ್ವೇಷಾತ್ತ್ಯಾಜಿತಃ ಶ್ರಿಯಾ ।
ಜರಾಸನ್ಧಃ ಸಪ್ತದಶ ಸಂಯುಗಾನ್ ವಿರಥೋ ಗತಃ ॥೧೩॥

ನಿನಗೆ ತಿಳಿದಿರುವಂತೆಯೇ ಕಂಸನು ಅವರೊಡನೆ ದ್ವೇಷವನ್ನು ಕಟ್ಟಿಕೊಂಡುದರ ಕಾರಣದಿಂದಾಗಿ ರಾಜ್ಯಲಕ್ಷ್ಮಿಯನ್ನೂ ಕಳೆದುಕೊಂಡನು ಮತ್ತು ತನ್ನ ಅನುಯಾಯಿಗಳೊಡನೆ ಅವಸಾನವನ್ನೂ ಹೊಂದಿದನು. ಜರಾಸಂಧನು ಶ್ರೀಕೃಷ್ಣನ ಮೇಲೆ ಹದಿನೇಳು ಸಾರಿ ಯುದ್ಧಮಾಡಲು ಬಂದು ಎಲ್ಲ ಯುದ್ಧಗಳಲ್ಲಿಯೂ ಪರಾಜಿತನಾಗಿ ರಥವೂ ಇಲ್ಲದಂತೆ ಹಿಂದಿರುಗ ಬೇಕಾಯಿತು."

ಕೊಲೆಗೆ ಪ್ರಚೋದಿಸಿದ ಕೃತವರ್ಮನು ಹೀಗೆ ಹೇಳಿ ಜಾರಿಕೊಳ್ಳಲು ಶತಧನ್ವನು ಸಹಾಯಕ್ಕಾಗಿ ಅಕ್ರೂರನನ್ನು ಪ್ರಾರ್ಥಿಸಿದನು. ಅವನ ಉತ್ತರವೂ ಕೃತವರ್ಮನ ಉತ್ತರಕ್ಕಿಂತ ಭಿನ್ನವಾಗಿರಲಿಲ್ಲ.

"ಶತಧನ್ವನೇ! ಮಹಾಶಕ್ತಿವಂತರಾದ ಅವರೀರ್ವರ ಬಲ-ಪೌರುಷ

ಗಳನ್ನು ತಿಳಿದ ಯಾವನು ತಾನೇ ಅವರೊಡನೆ ವಿರೋಧವನ್ನು ಕಟ್ಟಿ ಕೊಳ್ಳುವನು?

ಯ ಇದಂ ಲೀಲಯಾ ವಿಶ್ವಂ ಸೃಜತ್ಯವತಿ ಹನ್ತಿ ಚ ।
ಚೇಷ್ಟಾಂ ವಿಶ್ವಸೃಜೋ ಯಸ್ಯ ನ ವಿದುರ್ಮೋಹಿತಾಜಯಾ ॥೧೫॥

ಯಾವನು ಕೇವಲ ಲೀಲಾವಿನೋದಕ್ಕಾಗಿಯೇ ಈ ವಿಶ್ವವನ್ನು ಸೃಷ್ಟಿಸಿ-ರಕ್ಷಿಸಿ-ಸಂಹರಿಸುವನೋ, ಮಾಯೆಯಿಂದ ವಿಮೋಹಿತರಾದ ಬ್ರಹ್ಮಾದಿಗಳು ಕೂಡ ಯಾವನ ವ್ಯಾಪಾರವನ್ನು ತಿಳಿಯರೋ ಅಂತಹ ಮಹಾನುಭಾವನೊಡನೆ, ಕ್ಷೇಮವನ್ನು ಬಯಸುವ ಯಾವನು ತಾನೇ ದ್ವೇಷವನ್ನು ಕಟ್ಟಿಕೊಳ್ಳುತ್ತಾನೆ?

ಯಃ ಸಪ್ತಹಾಯನಃ ಶೈಲಮುತ್ಪಾಟ್ಯೈಕೇನ ಪಾಣಿನಾ ।
ದಧಾರ ಲೀಲಯಾ ಬಾಲ ಉಚ್ಛಿಲೀನ್ಧ್ರಮಿವಾರ್ಭಕಃ ॥೧೬॥

ಯಾವನು ಕೇವಲ ಏಳು ವರ್ಷದ ಬಾಲಕನಾಗಿದ್ದಾಗ ಗೋವರ್ಧನ ಪರ್ವತವನ್ನು ಲೀಲೆಯಿಂದ ಕಿತ್ತು ಮೇಲೆತ್ತಿ–ಮಗುವೊಂದು ನಾಯಿಕೊಡೆ ಯನ್ನು ಮೇಲೆತ್ತಿ ಹಿಡಿಯುವಂತೆ–ಏಳು ದಿವಸಗಳವರೆಗೆ ಒಂದೇ ಕೈಯಿಂದ ಎತ್ತಿ ಹಿಡಿದಿದ್ದನೋ ಅಂತಹ ಮಹಾನುಭಾವನನ್ನು ಯಾರು ತಾನೇ ದ್ವೇಷಿಸಲು ಹೋಗುತ್ತಾರೆ?

ನಮಸ್ತಸ್ಮೈ ಭಗವತೇ ಕೃಷ್ಣಾಯಾದ್ಭುತಕರ್ಮಣೇ ।
ಅನನ್ತಾಯಾದಿಭೂತಾಯ ಕೂಟಸ್ಥಾಯಾತ್ಮನೇ ನಮಃ ॥೧೭॥

ಅದ್ಭುತಕರ್ಮನಾದ, ಅನಂತನಾದ, ಷಡ್ಗುಣೈಶ್ವರ್ಯಸಂಪನ್ನನಾದ, ಆದಿಪುರುಷನಾದ, ಅಡಿಗಲ್ಲಿನಂತೆ ಎಲ್ಲಕ್ಕೂ ಆಧಾರವಾಗಿರುವ, ಆತ್ಮಸ್ವರೂಪನಾದ ಶ್ರೀಕೃಷ್ಣಪರಮಾತ್ಮನಿಗೆ ನಮಸ್ಕರಿಸುತ್ತೇನೆ."

ಪರೀಕ್ಷಿತಮಹಾರಾಜ! ಹೀಗೆ ಶತಧನ್ವನು ಅಕ್ರೂರನಿಂದಲೂ ತಿರಸ್ಕರಿಸಲ್ಪಟ್ಟವನಾಗಿ ತನ್ನಲ್ಲಿದ್ದ ಮಹಾಮಣಿಯನ್ನು ಅಕ್ರೂರನಲ್ಲಿಯೇ ನ್ಯಾಸವಾಗಿಟ್ಟು ದಿನಕ್ಕೆ ನೂರು ಯೋಜನಗಳಷ್ಟು ಪ್ರಯಾಣಮಾಡುವ ಕುದುರೆಯನ್ನೇರಿ ಅಲ್ಲಿಂದ ಹೊರಬಿದ್ದನು. ರಾಮ-ಕೃಷ್ಣರು, ಶತಧನ್ವನು

ದ್ವಾರಕೆಯಿಂದ ಹೊರಟುಹೋದ ವಾರ್ತೆಯನ್ನು ಕೇಳಿ ಗರುಡಧ್ವಜವಿರುವ ಮತ್ತು ಮಹಾವೇಗಶಾಲಿಗಳಾದ ಕುದುರೆಗಳಿಂದ ಹೂಡಲ್ಪಟ್ಟ ರಥದಲ್ಲಿ ಕುಳಿತು ದ್ರೋಹಿಯಾದ ಶತಧನ್ವನನ್ನು ಅಟ್ಟಿಸಿಕೊಂಡುಹೋದರು. ಶತಧನ್ವನ ಕುದುರೆಯು ಮಿಥಿಲಾಪಟ್ಟಣದ ಉಪವನವೊಂದರಲ್ಲಿ ಬಿದ್ದು ಹೋಯಿತು. ಆ ಕುದುರೆಯನ್ನು ಅಲ್ಲಿಯೇ ಬಿಟ್ಟು ಬಹಳವಾಗಿ ಭಯ ಗೊಂಡಿದ್ದ ಶತಧನ್ವನು ಓಡಲಾರಂಭಿಸಿದನು. ಕ್ರುದ್ಧನಾಗಿದ್ದ ಶ್ರೀಕೃಷ್ಣನು ಅವನನ್ನು ಹಿಂಬಾಲಿಸಿದನು. ಶತಧನ್ವನು ಪದಾತಿಯಾಗಿಯೇ ಓಡುತ್ತಿದ್ದು ದರಿಂದ ಶ್ರೀಕೃಷ್ಣನೂ ಪದಾತಿಯಾಗಿಯೇ ಅವನನ್ನು ಹಿಂಬಾಲಿಸುತ್ತಾ ತೀಕ್ಷ್ಣವಾದ ಅಲುಗಿನಿಂದ ಕೂಡಿದ್ದ ಸುದರ್ಶನಚಕ್ರದಿಂದ ಶತಧನ್ವನ ತಲೆಯನ್ನು ಕತ್ತರಿಸಿ ಅವನು ತೊಟ್ಟಿದ್ದ ವಸ್ತ್ರದಲ್ಲಿ ಸ್ಯಮಂತಕಮಣಿಯನ್ನು ಹುಡುಕಿದನು. ಮಣಿಯು ಸಿಕ್ಕಲಿಲ್ಲ. ಶ್ರೀಕೃಷ್ಣನು ಅಗ್ರಜನಾದ ಬಲರಾಮನ ಬಳಿಗೆ ಬಂದು ಹೇಳಿದನು :

ವೃಥಾ ಹತಃ ಶತಧನುರ್ಮಣಿಸ್ತತ್ರ ನ ವಿದ್ಯತೇ ॥೨೨॥

"ಶತಧನ್ವನನ್ನು ಕೊಂದಿದ್ದು ವ್ಯರ್ಥವಾಯಿತು. ಮಣಿಯು ಅವನಲ್ಲಿರಲಿಲ್ಲ."

ಬಲರಾಮನು ಹೇಳಿದನು :

"ಕೃಷ್ಣ! ಶತಧನ್ವನು ಸ್ಯಮಂತಕಮಣಿಯನ್ನು ಬೇರೆ ಯಾರಲ್ಲಾದರೂ ಇಟ್ಟಿರಲೇಬೇಕು. ಆದುದರಿಂದ ನೀನೀಗಲೇ ದ್ವಾರಕೆಗೆ ಹೋಗಿ ಆ ಮಣಿಯು ಯಾರಲ್ಲಿರುವುದೆಂಬುದನ್ನು ತಿಳಿದುಕೊ. ನಾವೀಗ ಮಿಥಿಲಾ ಪಟ್ಟಣದ ಸಮೀಪಕ್ಕೆ ಬಂದುಬಿಟ್ಟಿದ್ದೇವೆ. ಆದುದರಿಂದ ನಾನು ನನ್ನ ಪ್ರಿಯತಮನಾದ ಮಿಥಿಲೆಯ ರಾಜನನ್ನು ನೋಡಿಕೊಂಡು ಬರುತ್ತೇನೆ." ಹೀಗೆ ಹೇಳಿ ಯದುನಂದನನಾದ ಬಲರಾಮನು ಮಿಥಿಲಾಪಟ್ಟಣವನ್ನು ಪ್ರವೇಶಿಸಿದನು. ಮಿಥಿಲೆಯ ರಾಜನು ಪೂಜನೀಯನಾದ ಬಲರಾಮನನ್ನು ಕಂಡೊಡನೆಯೇ ಸಿಂಹಾಸನದಿಂದ ಮೇಲೆದ್ದು ಆನಂದಭರಿತನಾಗಿ ಅರ್ಘ್ಯ-ಪಾದ್ಯಗಳೇ ಮೊದಲಾದ ಅನೇಕ ಸಾಮಗ್ರಿಗಳಿಂದ ಯಥಾವಿಧಿಯಾಗಿ ಸತ್ಕರಿಸಿದನು. ಪ್ರೀತಿಯುಕ್ತನಾದ, ಮಹಾತ್ಮನಾದ ಜನಕಮಹಾರಾಜನಿಂದ

ವಿಭುವಾದ ಬಲರಾಮನು ಸಮ್ಮಾನಿತನಾಗಿ ಹಲವಾರು ವರ್ಷಗಳವರೆಗೆ ಮಿಥಿಲೆಯಲ್ಲಿಯೇ ಇದ್ದುಬಿಟ್ಟನು. ಅದೇ ಸಮಯದಲ್ಲಿಯೇ ಧೃತರಾಷ್ಟ್ರನ ಮಗನಾದ ದುರ್ಯೋಧನನು ಮಿಥಿಲೆಗೆ ಬಂದು ಬಲರಾಮನಿಂದ ಗದಾ ಯುದ್ಧವನ್ನು ಕಲಿತನು.

ಇತ್ತಲಾಗಿ ಪ್ರಿಯೆಯಾದ ಸತ್ಯಭಾಮೆಗೆ ಪ್ರಿಯವಾದ ಕಾರ್ಯವನ್ನು ಮಾಡಲುದ್ದೇಶಿಸಿದ್ದ ಶ್ರೀಕೃಷ್ಣನು ದ್ವಾರಕೆಗೆ ಹೋಗಿ ಶತಧನ್ವನು ಹತ ನಾದುದನ್ನೂ ಸ್ಯಮಂತಕಮಣಿಯು ಸಿಕ್ಕದುದನ್ನೂ ಪ್ರಿಯತಮೆಗೆ ಹೇಳಿದನು. ಬಳಿಕ ಶ್ರೀಕೃಷ್ಣನು ಶತಧನ್ವನಿಂದ ಕೊಲ್ಲಲ್ಪಟ್ಟ ಮಾವನಾದ ಸತ್ರಾಜಿತನಿಗೆ ಪರಲೋಕಸಾಧಕವಾದ ಔರ್ಧ್ವದೈಹಿಕಕ್ರಿಯೆಗಳನ್ನು ಸುಹೃದರೊಡನೆ ಸೇರಿ ಮಾಡಿದನು.

ಸತ್ರಾಜಿತನನ್ನು ವಧಿಸಲು ಶತಧನ್ವನನ್ನು ಪ್ರೇರಿಸಿದವರು ಅಕ್ರೂರ-ಕೃತವರ್ಮರೇ ಅಲ್ಲವೇ? ಶ್ರೀಕೃಷ್ಣನು ಶತಧನ್ವನನ್ನು ಸಂಹರಿಸಿದನೆಂಬ ವಾರ್ತೆಯನ್ನು ಕೇಳಿದೊಡನೆಯೇ ತಮಗೂ ಏನಾಗಿಬಿಡುವುದೋ ಎಂಬ ಭಯದಿಂದ ನಡುಗಿಹೋದ ಅಕ್ರೂರ-ಕೃತವರ್ಮರು ದ್ವಾರಕೆಯನ್ನು ಬಿಟ್ಟು ಓಡಿಹೋದರು.

ಅಕ್ರೂರನು ದ್ವಾರಕೆಯನ್ನು ಬಿಟ್ಟು ಹೊರಟುಹೋದನಂತರ ದ್ವಾರಕಾವಾಸಿಗಳಿಗೆ ಬಹುಪ್ರಕಾರವಾದ ಅನಿಷ್ಟಗಳು ಉಂಟಾಗತೊಡಗಿ ದುವು. ದೈವಿಕವಾದ ಮತ್ತು ಭೌತಿಕವಾದ ನಿಮಿತ್ತಗಳಿಂದಾಗಿ ಪ್ರಜೆಗಳಿಗೆ ಶಾರೀರಕವಾದ ಮತ್ತು ಮಾನಸಿಕವಾದ ಆಧಿಗಳೂ ವ್ಯಾಧಿಗಳೂ ತಲೆದೋರಿ ದುವು. ಸತ್ಪುರುಷನಾದ ಅಕ್ರೂರನು ಊರು ಬಿಟ್ಟುಹೋದುದರಿಂದ ಹೀಗಾಯಿತೆಂದು ಕೆಲವರು ಭಾವಿಸಿದರು.

"ಇವರೆಲ್ಲರೂ ಹಿಂದೆ ನಡೆದ ಶ್ರೀಕೃಷ್ಣನ ಲೀಲಾಪ್ರಸಂಗಗಳನ್ನೂ ಅವನ ಮಾಹಾತ್ಮ್ಯೆಯನ್ನೂ ಸಂಪೂರ್ಣವಾಗಿ ಮರೆತೇ ಮಾತನಾಡು ತ್ತಿದ್ದಾರೆ. ಮಹರ್ಷಿಗಳ ಮನೋವೃತ್ತಿಗೆ ನೆಲೆಯೆನಿಸಿರುವ ಭಗವಂತನಿಗೆ ನಿವಾಸಸ್ಥಾನವಾದ ದ್ವಾರಕೆಯಲ್ಲಿ ಅನಿಷ್ಟಗಳುಂಟಾಗಲು ಹೇಗೆತಾನೇ ಸಾಧ್ಯ? (ಒಂದು ವೇಳೆ ಅಲ್ಲಲ್ಲಿ ಅನಿಷ್ಟಗಳು ಕಾಣಿಸಿಕೊಂಡರೂ ಶ್ರೀಕೃಷ್ಣನ

ಪ್ರಭಾವದಿಂದ ಅವು ತೊಲಗಿಹೋಗುತ್ತವೆ.)"–ಎಂದು ಮತ್ತೆ ಕೆಲವರು ಹೇಳತೊಡಗಿದರು.

"ಒಮ್ಮೆ ಕಾಶೀರಾಜ್ಯದಲ್ಲಿ ಮಳೆಯೇ ಆಗಲಿಲ್ಲವಂತೆ. ಆ ಸಮಯ ದಲ್ಲಿ ಕಾಶೀರಾಜನು ತನ್ನ ರಾಜ್ಯಕ್ಕೆ ಆಗಮಿಸಿದ ಅಕ್ರೂರನ ತಂದೆಯಾದ ಶ್ವಫಲ್ಕನಿಗೆ ತನ್ನ ಮಗಳಾದ ಗಾಂದಿನಿಯನ್ನು ಕೊಟ್ಟು ಮದುವೆಮಾಡಿದ ನಂತೆ. ಒಡನೆಯೇ ಮಳೆಯಾಯಿತಂತೆ. ಶ್ವಫಲ್ಕನ ಮಗನಾದ ಅಕ್ರೂರನಿಗೂ ಇಂತಹುದೇ ಮಹಿಮೆಯಿರುವುದಂತೆ. ಅವನೆಲ್ಲಿಗೇ ಹೋದರೂ ಅಲ್ಲಿ ಮಳೆಯಾಗುವುದಂತೆ. ಯಾವುದೇ ವಿಧವಾದ ಕಷ್ಟವಾಗಲೀ ಮಹಾ ಮಾರಿಯೇ ಮುಂತಾದ ಉಪದ್ರವಗಳಾಗಲೀ ಇರುವುದಿಲ್ಲವಂತೆ."–ಹೀಗೆ ಕೆಲವರು ಮಾತನಾಡಿಕೊಳ್ಳುತ್ತಿದ್ದರು.

ಭಗವಾನ್ ಶ್ರೀಕೃಷ್ಣನು ಹಿರಿಯರು ಹೇಳುತ್ತಿದ್ದ ಬಗೆ-ಬಗೆಯ ಇಂತಹ ಮಾತುಗಳನ್ನು ಕೇಳಿ ಉಪದ್ರವಕ್ಕೆ ಇದು ಕಾರಣವಲ್ಲವೆಂದು ನಿಶ್ಚಯಿಸಿದನಾದರೂ ಅಕ್ರೂರನನ್ನು ಹಿಂದಕ್ಕೆ ಕರೆಯಿಸಿ ಅವನೊಡನೆ ಮಾತನಾಡಿದನು. ಶ್ರೀಕೃಷ್ಣನು ಅಕ್ರೂರನನ್ನು ಚೆನ್ನಾಗಿ ಸತ್ಕರಿಸಿ ಆತನೊಡನೆ ಸವಿಮಾತುಗಳನ್ನಾಡಿದನು. ಯಾರ ಮನಸ್ಸಿನಲ್ಲಿ ಏನಿರುವುದೆಂಬುದನ್ನು ತಿಳಿದಿದ್ದ, ಸಮಸ್ತಪ್ರಾಣಿಗಳ ಆತ್ಮಸ್ವರೂಪನಾದ ಶ್ರೀಕೃಷ್ಣನು ನಗು-ನಗುತ್ತಲೇ ಅಕ್ರೂರನಿಗೆ ಹೇಳಿದನು :

"ದಾನಪತಿಯೇ! ಶತಧನ್ವನು ಪ್ರಕಾಶಮಾನವಾದ ಮತ್ತು ಸಂಪತ್ತನ್ನು ಕೊಡುವ ಸ್ಯಮಂತಕಮಹಾಮಣಿಯನ್ನು ನಿನ್ನಲ್ಲಿ ನ್ಯಾಸಭೂತ ವಾಗಿ ಇಟ್ಟಿರುವನೆಂಬ ವಿಷಯವು ನನಗೆ ಬಹಳ ಹಿಂದೆಯೇ ತಿಳಿಯಿತು. ಸತ್ರಾಜಿತನಿಗೆ ಗಂಡುಮಕ್ಕಳಿಲ್ಲದ ಕಾರಣ ಅವನ ಮಗಳ ಮಕ್ಕಳು ಅವನಿಗೆ ಮಾಡಬೇಕಾದ ಕರ್ಮಾಂತರಗಳನ್ನೂ, ಪಿಂಡಪ್ರದಾನವನ್ನೂ, ತಿಲತರ್ಪ ಣಾದಿಗಳನ್ನೂ ಕೊಟ್ಟು ಅವನಲ್ಲಿರಬಹುದಾದ ಯತ್ಕಿಂಚಿತ್ ಆಸ್ತಿಗೆ ಹಕ್ಕುದಾರರಾಗುತ್ತಾರೆ. ಹೀಗೆ ಶಾಸ್ತ್ರಸಂಪ್ರದಾಯದಂತೆ ಆ ಸ್ಯಮಂತಕ ಮಣಿಯು ನನ್ನ ಮಗನಿಗೆ ಲಭಿಸಬೇಕಾಗಿದೆ. ಆದರೆ ಆ ದಿವ್ಯಮಣಿಯು ನಿನ್ನಲ್ಲಿಯೇ ಇರಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ :

ನೀನು ವ್ರತನಿಷ್ಠನಾಗಿರುವೆ. ಪವಿತ್ರಾತ್ಮನಾಗಿರುವೆ. ಬೇರೆಯವರು ಆ ಮಣಿಯನ್ನಿಟ್ಟುಕೊಂಡು ಕಾಪಾಡುವುದು ಬಹಳ ಕಷ್ಟವೇ ಆಗುತ್ತದೆ. ಆದರೆ ಮಣಿಯ ಸಂಬಂಧವಾಗಿ ನಾನು ಏನು ಹೇಳಿದರೂ ನಮ್ಮಣ್ಣನಾದ ಬಲರಾಮನು ನಂಬುತ್ತಿಲ್ಲ. ಆದುದರಿಂದ, ಮಹಾಭಾಗನೇ! ನಿನ್ನಲ್ಲಿರುವ ಮಣಿಯನ್ನು ತೋರಿಸಿ–ಇಷ್ಟಮಿತ್ರರ, ಬಲರಾಮನ, ಸತ್ಯಭಾಮೆಯ ಮತ್ತು ಜಾಂಬವತಿಯ ಸಂದೇಹವನ್ನು ನಿವಾರಿಸು. ಅವರ ಮನಸ್ಸಿಗೆ ಶಾಂತಿಯುಂಟಾಗುವಂತೆ ಮಾಡು. ಆ ಮಣಿಯ ಪ್ರಭಾವದಿಂದಾಗಿ ಚಿನ್ನದ ವೇದಿಗಳುಳ್ಳ ಹಲವಾರು ಯಜ್ಞಗಳು ಅವಿಚ್ಛಿನ್ನವಾಗಿ ನಿನ್ನ ಯಾಜಮಾನ್ಯದಲ್ಲಿ ನಡೆಯುತ್ತಿರುವುವೆಂಬುದನ್ನೂ ನಾನು ತಿಳಿದಿದ್ದೇನೆ."

ಪರೀಕ್ಷಿತಮಹಾರಾಜ! ಹೀಗೆ ಸಾಂತ್ವನದ ಮಾತುಗಳಿಂದ ಪ್ರೇರಿತ ನಾದ ಅಕ್ರೂರನು ತನ್ನ ವಸ್ತ್ರದ ಸೆರಗಿನಲ್ಲಿ ಕಟ್ಟಿದ್ದ ಸೂರ್ಯನ ಪ್ರಕಾಶಕ್ಕೆ ಅನುರೂಪವಾದ ಪ್ರಕಾಶವನ್ನು ಹೊರಚೆಲ್ಲುತ್ತಿದ್ದ ಸ್ಯಮಂತಕಮಣಿಯನ್ನು ಶ್ರೀಕೃಷ್ಣನಿಗಿತ್ತನು. ಶ್ರೀಕೃಷ್ಣನು ಆ ಮಣಿಯನ್ನು ತನ್ನ ಜ್ಞಾತಿ-ಬಾಂಧವರೆಲ್ಲರಿಗೂ ತೋರಿಸಿ ತನಗೆ ಒದಗಿಬಂದಿದ್ದ ಸ್ಯಮಂತಕಾಪಹಾರಿ ಯೆಂಬ ಕಳಂಕವನ್ನು ಕಳೆದುಕೊಂಡು, ಅಕ್ರೂರನಿಗೆ ಹೇಳಿದ್ದಂತೆ ಪುನಃ ಆ ಸ್ಯಮಂತಕಮಣಿಯನ್ನು ಅವನಿಗೇ ಕೊಟ್ಟುಬಿಟ್ಟನು.

ಯಸ್ತ್ವೇತದ್ಭಗವತ ಈಶ್ವರಸ್ಯ ವಿಷ್ಣೋ-
ರ್ವೀರ್ಯಾಢ್ಯಂ ವೃಜಿನಹರಂ ಸುಮಙ್ಗಲಂ ಚ ।
ಆಖ್ಯಾನಂ ಪಠತಿ ಶೃಣೋತ್ಯನುಸ್ಮರೇದ್ವಾ
ದುಷ್ಕೀರ್ತಿಂ ದುರಿತಮಪೋಹ್ಯ ಯಾತಿ ಶಾನ್ತಿಮ್ ॥

ಸರ್ವಶಕ್ತಿವಂತನಾದ ಸರ್ವವ್ಯಾಪಕನಾದ ಭಗವಾನ್ ಶ್ರೀಕೃಷ್ಣನ ವೀರ್ಯ-ಪರಾಕ್ರಮಗಳಿಂದ ಸಂಪನ್ನವಾಗಿರುವ ಈ ಆಖ್ಯಾನವು ಸಮಸ್ತ ಪಾಪಗಳನ್ನೂ, ಅಪವಾದಗಳನ್ನೂ, ಅಪರಾಧಗಳನ್ನೂ, ಕಳಂಕಗಳನ್ನೂ ತೊಡೆದುಹಾಕುತ್ತದೆ. ಈ ಸ್ಯಮಂತಕೋಪಾಖ್ಯಾನವನ್ನು ಯಾವನು ಪಠಿಸು ವನೋ, ಕೇಳುವನೋ ಅಥವಾ ಸ್ಮರಿಸುವನೋ ಅಂತಹವನು ಸಮಸ್ತ

ವಾದ ದುಷ್ಕೀರ್ತಿಗಳನ್ನೂ ಪಾಪಗಳನ್ನೂ ಕಳೆದುಕೊಂಡು ಮನಶ್ಶಾಂತಿಯನ್ನು ಹೊಂದುತ್ತಾನೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೫೭ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೫೮ನೆಯ ಅಧ್ಯಾಯ

ಶ್ರೀಕೃಷ್ಣನ ಇತರ ವಿವಾಹಮಹೋತ್ಸವಗಳು

ಶ್ರೀಶುಕಮುನಿಗಳು ಹೇಳುತ್ತಾರೆ :

ಏಕದಾ ಪಾಣ್ಡವಾನ್ ದ್ರಷ್ಟುಂ ಪ್ರತೀತಾನ್ ಪುರುಷೋತ್ತಮಃ ।
ಇನ್ದ್ರಪ್ರಸ್ಥಂ ಗತಃ ಶ್ರೀಮಾನ್ ಯುಯುಧಾನಾದಿಭಿರ್ವೃತಃ ॥೧॥

ಒಮ್ಮೆ ಪುರುಷೋತ್ತಮನಾದ ಶ್ರೀಕೃಷ್ಣನು ತಮ್ಮ ಧೈರ್ಯ-ಶೌರ್ಯಾದಿಗಳಿಂದಲೂ, ಸದ್ಗುಣಗಳಿಂದಲೂ ಲೋಕಪ್ರಸಿದ್ಧರಾಗಿದ್ದ ಪಾಂಡವರನ್ನು ಕಾಣಲು ಸಾತ್ಯಕಿಯೇ ಮುಂತಾದ ಸುಹೃದರೊಡನೆ ಇಂದ್ರಪ್ರಸ್ಥನಗರಿಗೆ ಪ್ರಯಾಣಮಾಡಿದನು. ಸರ್ವೇಶ್ವರನಾದ ಮುಕುಂದನು ಬರುತ್ತಿರುವುದನ್ನು ನೋಡಿದೊಡನೆಯೇ–ಪ್ರಾಣಸಂಚಾರವಾದೊಡನೆಯೇ ಇಂದ್ರಿಯಗಳೆಲ್ಲವೂ ಪುಟಿಸುವಂತೆ–ವೀರರಾದ ಪಾಂಡವರೆಲ್ಲರೂ ಒಂದೇ ಬಾರಿಗೆ ಎದ್ದು ನಿಂತರು.

ಅನಂತರ ಶ್ರೀಕೃಷ್ಣನನ್ನು ಪಾಂಡವರೆಲ್ಲರೂ ಗಾಢವಾಗಿ ಆಲಿಂಗಿಸಿಕೊಂಡರು. ಪರಮಾತ್ಮನ ಅಂಗಸ್ಪರ್ಶಮಾತ್ರದಿಂದಲೇ ಅವರ ಪಾಪಗಳೆಲ್ಲವೂ ಪರಿಹಾರವಾದುವು. ಪರಮಾತ್ಮನ ಪ್ರೀತಿಯ ಮಂದಹಾಸದಿಂದ ಕೂಡಿದ ಮುಖಾರವಿಂದವನ್ನು ನೋಡಿ ಪಾಂಡವರೆಲ್ಲರೂ ಆನಂದ ತುಂದಿಲರಾದರು. ಶ್ರೀಕೃಷ್ಣನು ಯುಧಿಷ್ಠಿರನಿಗೂ ಭೀಮಸೇನನಿಗೂ ಪಾದಾಭಿವಂದನೆಗಳನ್ನು ಮಾಡಿದನು. ಅರ್ಜುನನನ್ನು ಗಾಢವಾಗಿ ಆಲಿಂಗಿಸಿಕೊಂಡನು. ನಕುಲ-ಸಹದೇವರು ಶ್ರೀಕೃಷ್ಣನ ಚರಣಾರವಿಂದಗಳಿಗೆ ನಮಸ್ಕರಿಸಿದರು. ಆಗತಾನೇ ಪಾಂಡವರನ್ನು ಮದುವೆಯಾಗಿದ್ದ, ದೋಷರಹಿತಳಾಗಿದ್ದ ಕೃಷ್ಣೆಯು ನಾಚಿಕೆಯಿಂದಾಗಿ ಸ್ವಲ್ಪ ನಿಧಾನವಾಗಿ ಅಂತಃಪುರ

ದಿಂದ ಹೊರಬಂದು ಶ್ರೇಷ್ಠವಾದ ಸಿಂಹಾಸನದಲ್ಲಿ ಕುಳಿತಿದ್ದ ಗೋವಿಂದನಿಗೆ ನಮಸ್ಕರಿಸಿದಳು. ಶ್ರೀಕೃಷ್ಣನನ್ನು ಸ್ವಾಗತಿಸಿ ಸತ್ಕರಿಸಿ ಅಭಿವಂದಿಸಿದಂತೆಯೇ ಪಾರ್ಥರು ಸಾತ್ಯಕಿಯನ್ನೂ ಆದರದಿಂದ ಸ್ವಾಗತಿಸಿ ಸತ್ಕರಿಸಿ ಅಭಿವಂದಿಸಿದರು. ಶ್ರೀಕೃಷ್ಣನ ಅನುಯಾಯಿಗಳಾಗಿ ಬಂದಿದ್ದ ಇತರ ಯದುವೀರರೂ ಪಾಂಡವರಿಂದ ಸತ್ಕೃತರಾಗಿ ಶ್ರೇಷ್ಠವಾದ ಆಸನಗಳಲ್ಲಿ ಶ್ರೀಕೃಷ್ಣನನ್ನು ಸುತ್ತುವರಿದು ಕುಳಿತುಕೊಂಡರು. ಬಳಿಕ ಶ್ರೀಕೃಷ್ಣನು ತನ್ನ ಸೋದರತ್ತೆಯಾದ ಕುಂತೀದೇವಿಯ ಬಳಿಗೆ ಹೋಗಿ ಅವಳ ಚರಣಾರವಿಂದಗಳಲ್ಲಿ ನಮಸ್ಕರಿಸಿದನು. ಕುಂತಿಯೂ ಸ್ನೇಹಪರವಶಳಾಗಿ ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡಳು. ಅವಳ ಕಣ್ಣುಗಳಿಂದ ಪ್ರೇಮಬಿಂದುಗಳು ಉದುರುತ್ತಿದ್ದುವು. ಕುಂತೀದೇವಿಯೂ ಶ್ರೀಕೃಷ್ಣನನ್ನು ದ್ವಾರಕೆಯಲ್ಲಿದ್ದ ತನ್ನ ಜ್ಞಾತಿ-ಬಾಂಧವರ ಕುಶಲಪ್ರಶ್ನೆಯನ್ನು ಕೇಳಿದಳು. ಅಂತೆಯೇ ಶ್ರೀಕೃಷ್ಣನೂ ದ್ರೌಪದಿಯ ಮತ್ತು ಕುಂತಿಯ ಕುಶಲಪ್ರಶ್ನೆಮಾಡಿದನು. ಆ ಸಮಯದಲ್ಲಿ ಪ್ರೇಮದಿಂದಲೂ, ದುಃಖದಿಂದಲೂ ಕುಂತೀದೇವಿಯ ಗಂಟಲು ಕಟ್ಟಿ ಗದ್ಗದವಾಯಿತು. ಕಣ್ಣಿನಲ್ಲಿ ಧಾರಾಕಾರವಾಗಿ ನೀರು ಸುರಿಯುತ್ತಿದ್ದಿತು. ಹಿಂದೆ ತಾನೂ ತನ್ನ ಮಕ್ಕಳೂ ಅನುಭವಿಸಿದ ಹಲವಾರು ಕಷ್ಟ-ಕಾರ್ಪಣ್ಯಗಳನ್ನು ಸ್ಮರಿಸಿಕೊಳ್ಳುತ್ತಾ, ದರ್ಶನಮಾತ್ರದಿಂದಲೇ ಸಮಸ್ತಕಷ್ಟಗಳನ್ನೂ ನಿವಾರಿಸುವ, ಮಹಾನುಭಾವನಾದ ಶ್ರೀಕೃಷ್ಣಸ್ವಾಮಿಗೆ ಹೇಳಿದಳು :

"ಕೃಷ್ಣ! ಯಾವಾಗ ನೀನು ನಮ್ಮನ್ನು ನಿನ್ನ ಕುಟುಂಬವರ್ಗಕ್ಕೆ ಸೇರಿದವರೆಂದು ಭಾವಿಸಿ ನಮ್ಮ ಯೋಗಕ್ಷೇಮವನ್ನು ವಿಚಾರಿಸಲು ನನ್ನ ಸೋದರನಾದ ಅಕ್ರೂರನನ್ನು ನಮ್ಮ ಬಳಿಗೆ ಕಳುಹಿಸಿದೆಯೋ ಆಗಲೇ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ ನಮಗೆ ಕುಶಲವುಂಟಾಯಿತು. ಅನಾಥರಾಗಿದ್ದ ನಾವು ಅಂದಿನಿಂದ ಸನಾಥರಾದೆವು.

ನ ತೇಽಸ್ತಿ ಸ್ವಪರಭ್ರಾನ್ತಿರ್ವಿಶ್ವಸ್ಯ ಸುಹೃದಾತ್ಮನಃ ।
ತಥಾಪಿ ಸ್ಮರತಾಂ ಶಶ್ವತ್ ಕ್ಲೇಶಾನ್ ಹಂಸಿ ಹೃದಿ ಸ್ಥಿತಃ ॥೧೦॥

ಪ್ರಭುವೇ! ನೀನು ಸಂಪೂರ್ಣಜಗತ್ತಿನ ಹಿತೈಷಿಯೂ ಸುಹೃದನೂ ಆತ್ಮವೂ ಆಗಿರುವೆ. 'ಇವರು ನನ್ನವರು', 'ಇವರು ನಮ್ಮವರಲ್ಲ–ಬೇರೆ

ಯವರು'–ಎಂಬ ಯಾವ ಭ್ರಾಂತಿಯೂ ನಿನಗಿರುವುದಿಲ್ಲ. ಆದರೂ ಸದಾ ನಿನ್ನನ್ನು ಯಾರು ಸ್ಮರಿಸುತ್ತಿರುವರೋ ಅಂತಹವರ ಹೃದಯದಲ್ಲಿಯೇ ನೀನಿರುತ್ತಾ ಅವರ ಎಲ್ಲ ಕ್ಲೇಶಗಳನ್ನೂ ಪರಿಹರಿಸುವೆ."

ಬಳಿಕ ಯುಧಿಷ್ಠಿರನು ಹೇಳುತ್ತಾನೆ :

ಕಿಂ ನ ಆಚರಿತಂ ಶ್ರೇಯೋ ನ ವೇದಾಹಮಧೀಶ್ವರ ।
ಯೋಗೇಶ್ವರಾಣಾಂ ದುರ್ದರ್ಶೋ ಯನ್ನೋ ದೃಷ್ಟಃ ಕುಮೇಧ
ಸಾಮ್ ॥೧೧॥

"ಸರ್ವೇಶ್ವರನೇ! ಶ್ರೀಕೃಷ್ಣ! ನಾವು ಪೂರ್ವಜನ್ಮದಲ್ಲಾಗಲೀ, ಜನ್ಮಾಂತರಗಳಲ್ಲಾಗಲೀ, ಇದೇ ಜನ್ಮದಲ್ಲಾಗಲೀ ಯಾವ ಕಲ್ಯಾಣಕರವಾದ ಪುಣ್ಯಕರ್ಮಗಳನ್ನು ಮಾಡಿದ್ದೇವೆಂಬುದು ನನಗೆ ತಿಳಿಯದು. ಅದರ ಸ್ಮರಣೆಯೂ ನನಗಿಲ್ಲ. ಆದರೆ ಮಹಾಪುಣ್ಯಕಾರ್ಯಗಳನ್ನು ನಾವು ಮಾಡಿರಲೇಬೇಕು. ಏಕೆಂದರೆ : ನಿನ್ನ ದಿವ್ಯದರ್ಶನವು ಮಹಾಮಹಾ ಯೋಗೇಶ್ವರರಿಗೂ ದುರ್ಲಭವೆನಿಸಿರುವಾಗ ದುರ್ಬುದ್ಧಿಯವರಾದ ನಮಗೆ ನಮ್ಮ ಮನೆಯಲ್ಲಿಯೇ ಅದು ಆಗುತ್ತಿದೆಯಲ್ಲವೇ!"

ಯುಧಿಷ್ಠಿರನು ಶ್ರೀಕೃಷ್ಣನನ್ನು ಹೀಗೆ ಸ್ತುತಿಸುತ್ತಾ ಹಲವಾರು ದಿವಸಗಳಾದರೂ ಇಂದ್ರಪ್ರಸ್ಥದಲ್ಲಿಯೇ ಇರುವಂತೆ ಶ್ರೀಕೃಷ್ಣನನ್ನು ಪ್ರಾರ್ಥಿಸಿಕೊಂಡನು. ಶ್ರೀಕೃಷ್ಣನು ಯುಧಿಷ್ಠಿರನ ಮಾತಿಗೆ ಸಮ್ಮತಿಸಿ ಇಂದ್ರಪ್ರಸ್ಥದಲ್ಲಿನ ನರ-ನಾರಿಯರ ಕಣ್ಣುಗಳಿಗೆ ಆನಂದೋತ್ಸವವನ್ನು ಕಲ್ಪಿಸುತ್ತಾ ಮಳೆಗಾಲದ ನಾಲ್ಕು ಮಾಸಗಳನ್ನು ಅಲ್ಲಿಯೇ ಸುಖವಾಗಿ ಕಳೆದನು.

ಒಮ್ಮೆ ಅರ್ಜುನನು ಗಾಂಡೀವಧನುಸ್ಸನ್ನೂ ಅಕ್ಷಯ ಬತ್ತಳಿಕೆಗಳನ್ನೂ ತೆಗೆದುಕೊಂಡು ಕವಚವನ್ನು ತೊಟ್ಟು ಶ್ರೀಕೃಷ್ಣನೊಡನೆ ವಾನರಧ್ವಜವಿದ್ದ ರಥದಲ್ಲಿ ಕುಳಿತು, ಬೇಟೆಯಾಡುವ ಸಲುವಾಗಿ ಸರ್ಪಗಳಿಂದಲೂ, ಸಿಂಹ ಗಳಿಂದಲೂ, ವ್ಯಾಘ್ರಗಳಿಂದಲೂ ಸಮಾಕುಲವಾಗಿದ್ದ ಅತ್ಯಂತಭಯಂಕರ ವಾಗಿದ್ದ ಅರಣ್ಯವನ್ನು ಪ್ರವೇಶಿಸಿದನು. ಆ ಮಹಾರಣ್ಯದಲ್ಲವನು ತನ್ನ ತೀಕ್ಷ್ಣವಾದ ಬಾಣಗಳಿಂದ ವ್ಯಾಘ್ರಗಳನ್ನೂ, ಹಂದಿಗಳನ್ನೂ, ಕಾಡೆಮ್ಮೆ

ಗಳನ್ನೂ, ಕಪ್ಪಾದ ಜಿಂಕೆಗಳನ್ನೂ, ಶರಭಗಳನ್ನೂ, ಗವಯಗಳನ್ನೂ, ಖಡ್ಗ ಮೃಗಗಳನ್ನೂ, ಜಿಂಕೆಗಳನ್ನೂ, ಮೊಲಗಳನ್ನೂ, ಮುಳ್ಳುಹಂದಿಗಳನ್ನೂ ಅಪಾರಸಂಖ್ಯೆಯಲ್ಲಿ ಸಂಹರಿಸಿದನು. ಪರ್ವಕಾಲವು ಸನ್ನಿಹಿತವಾಗಿರಲಾಗಿ ಯಜ್ಞಕ್ಕೆ ಯೋಗ್ಯವಾದ ಹಲವಾರು ಮೃಗಗಳನ್ನು ಸೇವಕರು ಮಹಾರಾಜ ಯುಧಿಷ್ಠಿರನಿಗಾಗಿ ಒಯ್ದರು. ಇತ್ತಲಾಗಿ ಅರ್ಜುನನು ಸತತವಾಗಿ ಬೇಟೆ ಯಾಡಿದ ಕಾರಣ ಬಳಲಿ-ಬೆಂಡಾಗಿ ಬಾಯಾರಿ ಯಮುನಾನದಿಯ ತೀರಕ್ಕೆ ಹೋದನು. ಮಹಾರಥರಾದ ಕೃಷ್ಣಾರ್ಜುನರು ಯಮುನಾನದಿಗೆ ಹೋಗಿ ಕೈ-ಕಾಲುಗಳನ್ನು ತೊಳೆದುಕೊಂಡು ನಿರ್ಮಲವಾದ ನೀರನ್ನು ಕುಡಿದು ಅಲ್ಲಿಯೇ ತಪಸ್ಸುಮಾಡುತ್ತಿದ್ದ ಪರಮಸುಂದರಿಯಾದ ಕನ್ಯೆಯನ್ನು ನೋಡಿದರು. ಅವಳಾರೆಂಬುದನ್ನು ತಿಳಿದು ಬರಲು ಶ್ರೀಕೃಷ್ಣನಿಂದ ಕಳುಹಿಸ ಲ್ಪಟ್ಟ ಅರ್ಜುನನು ಶ್ರೇಷ್ಠವಾದ ನಿತಂಬಗಳಿಂದಲೂ, ಸುಂದರವಾದ ಹಲ್ಲು ಗಳ ಸಾಲುಗಳಿಂದಲೂ, ಮನೋಹರವಾದ ಮುಖಾರವಿಂದದಿಂದಲೂ ಶೋಭಾಯಮಾನಳಾಗಿ ಕಾಣುತ್ತಿದ್ದ ಪ್ರಮದೆಯರಲ್ಲಿ ಶ್ರೇಷ್ಠಳಾಗಿದ್ದ ಆ ತರುಣೀಮಣಿಯನ್ನು ಪ್ರಶ್ನಿಸಿದನು :

ಕಾ ತ್ವಂ ಕಸ್ಯಾಸಿ ಸುಶ್ರೋಣಿ ಕುತೋಽಸಿ ಕಿಂ ಚಿಕೀರ್ಷಸಿ ।
ಮನ್ಯೇ ತ್ವಾಂ ಪತಿಮಿಚ್ಛನ್ತೀಂ ಸರ್ವಂ ಕಥಯ ಶೋಭನೇ ॥೧೯॥

"ಸುಂದರಾಂಗಿಯೇ! ನೀನು ಯಾರು? ಯಾರ ಮಗಳು? ಎಲ್ಲಿಂದ ಬಂದಿರುವೆ? ಏನು ಮಾಡಲು ಅಪೇಕ್ಷಿಸಿರುವೆ? ನೀನು ಯೋಗ್ಯನಾದೊಬ್ಬ ಪತಿಯನ್ನು ಪಡೆಯಲು ಪ್ರಯತ್ನಿಸುತ್ತಿರುವೆಯೆಂದು ನಾನು ಭಾವಿಸಿದ್ದೇನೆ. ನೀನು ಎಲ್ಲ ವಿಷಯಗಳನ್ನೂ ವಿಶದವಾಗಿ ಹೇಳು."

ಕನ್ಯೆಯು ಹೇಳುತ್ತಾಳೆ :

"ವೀರ ಅರ್ಜುನನೇ! ನಾನು ಭಗವಂತನಾದ ಸೂರ್ಯದೇವನ ಪುತ್ರಿಯಾಗಿದ್ದೇನೆ. ಸರ್ವಶ್ರೇಷ್ಠನಾದ, ವರದನಾದ ವಿಷ್ಣುವನ್ನೇ ಪತಿಯ ನ್ನಾಗಿ ವರಿಸಬೇಕೆಂದಿಚ್ಛಿಸಿ ಕಠೋರವಾದ ತಪಸ್ಸನ್ನು ಮಾಡುತ್ತಿದ್ದೇನೆ. ಲಕ್ಷ್ಮಿಗೆ ಪರಮಾಶ್ರಯನಾಗಿರುವ ಭಗವಂತನನ್ನು ಬಿಟ್ಟು ಬೇರೆ ಯಾರನ್ನೂ ನಾನು ಮದುವೆಯಾಗುವುದಿಲ್ಲ. ಅನಾಥರಿಗೆ ಏಕಮಾತ್ರ ಆಶ್ರಯನಾದ

ಭಗವಾನ್ ಶ್ರೀಕೃಷ್ಣನು ನನಗೆ ಪ್ರಸನ್ನನಾಗಲಿ. ನನ್ನ ಹೆಸರು ಕಾಳಿಂದೀ– ಎಂದು. ನನ್ನ ತಂದೆಯು ಯಮುನಾಜಲದಲ್ಲಿ ನಿರ್ಮಿಸಿಕೊಟ್ಟಿರುವ ಭವನದಲ್ಲಿ ವಾಸಮಾಡುತ್ತಿದ್ದೇನೆ. ಅಚ್ಯುತನ ದರ್ಶನವಾಗುವವರೆಗೂ ನಾನು ಇಲ್ಲಿಯೇ ಇರುತ್ತೇನೆ."

ಅರ್ಜುನನು ಶ್ರೀಕೃಷ್ಣನ ಬಳಿಗೆ ಹೋಗಿ ಎಲ್ಲ ವಿಷಯಗಳನ್ನೂ ಹೇಳಿದನು. ಶ್ರೀಕೃಷ್ಣನಿಗೆ ಈ ವಿಷಯಗಳೆಲ್ಲವೂ ಮೊದಲೇ ತಿಳಿದಿದ್ದಿತು. ಕೃಷ್ಣಾರ್ಜುನರಿಬ್ಬರೂ ಕಾಳಿಂದಿಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಧರ್ಮರಾಜನ ಬಳಿಗೆ ಹೋದರು.

ಅನಂತರ ಪಾಂಡವರ ಪ್ರಾರ್ಥನೆಯಂತೆ ಶ್ರೀಕೃಷ್ಣನು ಪಾಂಡವರ ವಾಸಕ್ಕಾಗಿ ಪರಮಾದ್ಭುತವಾದ ಮತ್ತು ವಿಚಿತ್ರವಾದ ನಗರವೊಂದನ್ನು ವಿಶ್ವಕರ್ಮನಿಂದ ನಿರ್ಮಾಣಮಾಡಿಸಿಕೊಟ್ಟನು. ಪಾಂಡವರಿಗೆ ಸಕಲವಿಧ ವಾದ ಅನುಕೂಲಗಳನ್ನೂ ಕಲ್ಪಿಸಿಕೊಡಬೇಕೆಂಬ ಆಶಯದಿಂದಲೇ ಶ್ರೀಕೃಷ್ಣನು ನಾಲ್ಕು ಮಾಸಗಳವರೆಗೆ ಇಂದ್ರಪ್ರಸ್ಥದಲ್ಲಿ ವಾಸವಾಗಿದ್ದನು. ಈ ಮಧ್ಯದಲ್ಲೇ ಖಾಂಡವವನವನ್ನು ಅಗ್ನಿಗೆ ಅರ್ಪಿಸುವ ಸಲುವಾಗಿ ಶ್ರೀಕೃಷ್ಣನು ಅರ್ಜುನನಿಗೆ ಸಾರಥಿಯೂ ಆದನು.

ಖಾಂಡವವನದ ಭೋಜನದಿಂದ ಸಂತೃಪ್ತನಾದ ಅಗ್ನಿದೇವನು ಅರ್ಜುನನಿಗೆ ಗಾಂಡೀವವೆಂಬ ಧನುಸ್ಸನ್ನೂ, ನಾಲ್ಕು ಬಿಳಿಯ ಕುದುರೆ ಗಳನ್ನೂ, ಒಂದು ರಥವನ್ನೂ, ಎರಡು ಅಕ್ಷಯವಾದ ಬತ್ತಳಿಕೆಗಳನ್ನೂ, ಶತ್ರುಗಳಿಂದ ಅಭೇದ್ಯವಾದ ಕವಚವನ್ನೂ ಅನುಗ್ರಹಿಸಿಕೊಟ್ಟನು. ಖಾಂಡವದಾಹದ ಸಮಯದಲ್ಲಿ ಅರ್ಜುನನು ಮಯನೆಂಬ ದಾನವನನ್ನು ಅಗ್ನಿಯಿಂದ ಪಾರುಮಾಡಿದ್ದನು. ಈ ಕಾರಣದಿಂದ ಮಯಾಸುರನು ಅರ್ಜುನನೊಡನೆ ಮೈತ್ರಿಯನ್ನು ಬೆಳೆಸಿ ಪಾಂಡವರ ಸಲುವಾಗಿ ಅದ್ಭುತ ವಾದ ಸಭಾಭವನವನ್ನು ನಿರ್ಮಾಣಮಾಡಿಕೊಟ್ಟನು. ಪರಮಾದ್ಭುತ ವಾಗಿದ್ದ ಆ ಸಭಾಭವನದಲ್ಲಿಯೇ ದುರ್ಯೋಧನನು ಕೃತಕವಾದ ನೀರಿನ ಕೊಳವನ್ನು ಸಮನೆಲವೆಂದೂ ಸಮನೆಲವನ್ನು ನೀರಿನ ಕೊಳವೆಂದೂ ಭ್ರಮಿಸಿ ತಬ್ಬಿಬ್ಬಾದನು. ಕೆಲವು ದಿವಸಗಳನಂತರ ಶ್ರೀಕೃಷ್ಣನು ಅರ್ಜುನನ ಮತ್ತು ಇತರ ಸುಹೃದರ ಅನುಮತಿಯನ್ನು ಪಡೆದು ಸಾತ್ಯಕಿಪ್ರಮುಖ

ರಾದ ಯದುವೀರರಿಂದ ಪರಿವೃತನಾಗಿ ದ್ವಾರಕೆಗೆ ಹಿಂದಿರುಗಿದನು. ಬಳಿಕ ಶ್ರೀಕೃಷ್ಣನು ಪ್ರಶಸ್ತವಾದ ಋತು-ನಕ್ಷತ್ರ-ಮುಹೂರ್ತಗಳಲ್ಲಿ ಸ್ವಜನರಿಗೆ ಆನಂದವನ್ನೂ ಶುಭವನ್ನೂ ಉಂಟುಮಾಡುತ್ತಾ ಕಾಳಿಂದಿಯನ್ನು ವಿಧಿ ಪೂರ್ವಕವಾಗಿ ಮದುವೆಯಾದನು.

ಅವಂತೀದೇಶಕ್ಕೆ ರಾಜರಾಗಿದ್ದ ವಿಂದಾನುವಿಂದರು ದುರ್ಯೋಧನ ನಿಗೆ ಸಾಮಂತರಾಜರಾಗಿದ್ದರು. ಅವರಿಗೆ ಮಿತ್ರವಿಂದಾ–ಎಂಬ ತಂಗಿ ಯಿದ್ದಳು. ಆಕೆಯು ಮೊದಲಿನಿಂದಲೂ ಶ್ರೀಕೃಷ್ಣನಲ್ಲಿಯೇ ಅನುರಕ್ತಳಾಗಿ ದ್ದಳು. ಸ್ವಯಂವರಕಾಲದಲ್ಲಿ ಮಿತ್ರವಿಂದೆಯು ಶ್ರೀಕೃಷ್ಣನ ಕೊರಳಿಗೆ ಸ್ವಯಂವರಮಾಲಿಕೆಯನ್ನು ಹಾಕದಂತೆ ವಿಂದಾನುವಿಂದರು ತಡೆದರು. ಆ ಸಮಯದಲ್ಲಿ ಸಮಸ್ತರಾಜರೂ ನೋಡುತ್ತಿದ್ದಂತೆಯೇ ಅವರನ್ನು ಕಡೆಗಣಿಸಿ ಶ್ರೀಕೃಷ್ಣನು ತನ್ನ ಸೋದರತ್ತೆ ರಾಜಾಧಿದೇವಿಯ ಮಗಳಾದ ಮಿತ್ರವಿಂದೆ ಯನ್ನು ಬಲಾತ್ಕಾರದಿಂದ ಅಪಹರಿಸಿಕೊಂಡು ಹೊರಟುಹೋದನು.

ಪರೀಕ್ಷಿತಮಹಾರಾಜ! ಕೋಸಲದೇಶದಲ್ಲಿ ನಗ್ನಜಿತನೆಂಬ ಧಾರ್ಮಿಕ ನಾದ ರಾಜನಿದ್ದನು. ಅವನಿಗೆ ಕಡುಚೆಲುವೆಯಾದ ಸತ್ಯಾ ಎಂಬ ಹೆಸರಿನ ಕನ್ಯೆಯಿದ್ದಳು. ನಗ್ನಜಿತನ ಮಗಳಾದುದರಿಂದ ಅವಳನ್ನು ನಗ್ನಜಿತೀ– ಎಂದೂ ಕರೆಯುತ್ತಿದ್ದರು. ರಾಜನ ವೀರ್ಯಶುಲ್ಕದ ಪ್ರತಿಜ್ಞೆಗೆ ಅನುಸಾರ ವಾಗಿ ಅವನಲ್ಲಿದ್ದ ಬಲಿಷ್ಠವಾದ ಏಳು ಗೂಳಿಗಳನ್ನು ಯಾವ ರಾಜಕುಮಾ ರನೂ ಜಯಿಸಲಿಲ್ಲವಾದ ಕಾರಣ ನಗ್ನಜಿತನು ತನ್ನ ಮಗಳಿಗೆ ಮದುವೆ ಮಾಡಲು ಸಾಧ್ಯವಾಗಿರಲಿಲ್ಲ. ಆ ಗೂಳಿಗಳ ಕೊಂಬುಗಳು ಅತ್ಯಂತ ತೀಕ್ಷ್ಣ ವಾಗಿದ್ದುವು. ಯಾರಿಂದಲೂ ಎದುರಿಸಲು ಅವು ಅಸಾಧ್ಯವಾಗಿದ್ದುವು. ವೀರ ಪುರುಷರ ವಾಸನೆಯನ್ನು ಕೂಡ ಅವು ಸಹಿಸಿಕೊಳ್ಳುತ್ತಿರಲಿಲ್ಲ. ಅವು ಅಷ್ಟು ದುಷ್ಟವಾಗಿದ್ದುವು. ಏಳು ಗೂಳಿಗಳನ್ನೂ ಜಯಿಸಿದರೆ ರಾಜಕನ್ಯೆಯು ಲಭಿ ಸುವಳೆಂಬ ವಾರ್ತೆಯನ್ನು ಕೇಳಿ ಯದುಕುಲಶಿರೋಮಣಿಯಾದ, ಭಗವಂತ ನಾದ ಶ್ರೀಕೃಷ್ಣನು ಅಪಾರವಾದ ಸೈನ್ಯದೊಡನೆ ಕೋಸಲಪುರಕ್ಕೆ ಪ್ರಯಾಣ ಮಾಡಿದನು. ಅಯೋಧ್ಯೆಗೆ ಹೋದನಂತರ ಕೋಸಲದೇಶದರಸನಾದ ನಗ್ನಜಿತಮಹಾರಾಜನು ಶ್ರೀಕೃಷ್ಣನನ್ನು ನೋಡಿ ಸುಪ್ರೀತನಾಗಿ ಅವನನ್ನು

ಆದರದಿಂದ ಸ್ವಾಗತಿಸಿ ಸತ್ಕರಿಸಿದನು. ಶ್ರೀಕೃಷ್ಣನು ಕೂಡ ರಾಜನನ್ನು ಯಥಾಯೋಗ್ಯವಾಗಿ ಅಭಿನಂದಿಸಿದನು.

ಬಹಳ ದಿವಸಗಳಿಂದಲೂ ತಾನು ಬಯಸುತ್ತಿದ್ದ ರಮಾರಮಣನಾದ ಶ್ರೀಕೃಷ್ಣನೇ ಆಗಮಿಸಿರುವುದನ್ನು ನೋಡಿ ಆನಂದತುಂದಿಲಳಾದ ಸತ್ಯೆಯು ಅವನೇ ತನ್ನ ಪತಿಯಾಗಬೇಕೆಂದು ಅಪೇಕ್ಷಿಸಿದಳು :

ಭೂಯಾದಯಂ ಮೇ ಪತಿರಾಶಿಷೋಽಮಲಾಃ
ಕರೋತು ಸತ್ಯಾ ಯದಿ ಮೇ ಧೃತೋ ವ್ರತೈಃ ॥೩೬॥

"ನಾನು ವ್ರತ-ನಿಯಮಾದಿಗಳನ್ನು ಆಚರಿಸುತ್ತಾ ಇವನನ್ನೇ ಯಾವಾಗಲೂ ಚಿಂತಿಸುತ್ತಿದ್ದುದು ಸತ್ಯವಾದರೆ ಇವನೇ ನನಗೆ ಪತಿಯಾಗಲಿ ಮತ್ತು ನನ್ನ ಶುದ್ಧವಾದ ಲಾಲಸೆಗಳು ಪೂರ್ಣಗೊಳ್ಳಲಿ"–ಎಂದು ಹರಸಿಕೊಂಡಳು. ಸತ್ಯೆಯು ಪುನಃ ಮನಸ್ಸಿನಲ್ಲಿಯೇ ಯೋಚಿಸತೊಡಗಿದಳು :

ಯತ್ಪಾದಪಙ್ಕಜರಜಃ ಶಿರಸಾ ಬಿಭರ್ತಿ
ಶ್ರೀರಬ್ಜಜಃ ಸಗಿರಿಶಃ ಸಹಲೋಕಪಾಲೈಃ ।
ಲೀಲಾತನೂಃ ಸ್ವಕೃತಸೇತುಪರೀಪ್ಸಯೇಶಃ
ಕಾಲೇ ದಧತ್ ಸ ಭಗವಾನ್ ಮಮ ಕೇನ ತುಷ್ಯೇತ್ ॥

"ಯಾವನ ಪಾದಧೂಳಿಯನ್ನು ಲಕ್ಷ್ಮೀದೇವಿ, ಬ್ರಹ್ಮದೇವರು, ಈಶ್ವರ, ಲೋಕಪಾಲರು–ಇವರೇ ಮುಂತಾದ ದೇವಾಧಿದೇವತೆಗಳು ತಮ್ಮ ತಲೆಗಳಲ್ಲಿ ಭಕ್ತಿಭಾವದಿಂದ ಧರಿಸುವರೋ–ಯಾವನು, ತಾನೇ ಕಲ್ಪಿಸಿದ ಲೋಕಮರ್ಯಾದೆಯನ್ನು ಸಂಪನ್ನಗೊಳಿಸುವ ಸಲುವಾಗಿ ಸಮಯಗಳಲ್ಲಿ ಹಲವಾರು ಲೀಲಾವತಾರಗಳನ್ನು ಗ್ರಹಣಮಾಡುವನೋ–ಅಂತಹ ಪ್ರಭುವು ನಾನು ಮಾಡಿದ ಯಾವ ವ್ರತ-ನಿಯಮಗಳಿಂದ ತಾನೇ ಪ್ರಸನ್ನನಾದಾನು? ಕೇವಲ ಅವನ ಕೃಪೆಯಿಂದ ನನ್ನನ್ನವನು ವರಿಸಬೇಕಾಗಿದೆ."*

---

* ಈ ಶ್ಲೋಕವನ್ನು ಕೆಲವರು ಸತ್ಯೆಯು ಹೇಳಿದ್ದೆಂದೂ, ಕೆಲವರು ನಗ್ನಜಿತನು ಹೇಳಿದ್ದೆಂದೂ, ಕೆಲವರು 'ಅರ್ಚಿತಂ ಪುನರಿತ್ಯಾಹ ।' ಶ್ಲೋಕವು ಬಂದನಂತರ ಈ ಶ್ಲೋಕವನ್ನು ನಗ್ನಜಿತನು ಹೇಳುವನೆಂದೂ ವ್ಯಾಖ್ಯಾನಿಸಿದ್ದಾರೆ. 'ಅರ್ಚಿತಂ ಪುನರಿತ್ಯಾಹ'–

ಯಥೋಚಿತವಾಗಿ ಸತ್ಕೃತನಾದ ಶ್ರೀಕೃಷ್ಣನನ್ನು ಕುರಿತು ನಗ್ನಜಿತನು ಪುನಃ ಹೀಗೆ ಹೇಳಿದನು :

"ನಾರಾಯಣ! ಜಗತ್ಪತಿಯೇ! ನೀನು ಆತ್ಮಾನಂದದಿಂದ ಪೂರ್ಣನಾಗಿರುವೆ. ನಾನಾದರೋ ಅಲ್ಪಮನುಷ್ಯನು. ನಾನು ನಿನಗೆ ಯಾವ ಸೇವೆಯನ್ನು ಮಾಡಲಿ?"

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ನಗ್ನಜಿತನು ಕೊಟ್ಟ ಸಿಂಹಾಸನವನ್ನು ಸ್ವೀಕರಿಸಿ, ಪೂಜಾಸಾಮಗ್ರಿಗಳಿಂದ ಸತ್ಕೃತನಾದನಂತರ ಶ್ರೀಕೃಷ್ಣನು ಅತ್ಯಂತಸಂತುಷ್ಟನಾಗಿ ಮಂದಹಾಸವನ್ನು ಬೀರುತ್ತಾ ಗುಡುಗಿನ ಶಬ್ದಕ್ಕೆ ಸಮಾನವಾದ ಗಂಭೀರವಾದ ವಾಣಿಯಿಂದ ಹೇಳಿದನು :

ನರೇನ್ದ್ರ ಯಾಚ್ಞಾ ಕವಿಭಿರ್ವಿಗರ್ಹಿತಾ
ರಾಜನ್ಯಬನ್ಧೋರ್ನಿಜಧರ್ಮವರ್ತಿನಃ ।
ತಥಾಪಿ ಯಾಚೇ ತವ ಸೌಹೃದೇಚ್ಛಯಾ
ಕನ್ಯಾಂ ತ್ವದೀಯಾಂ ನ ಹಿ ಶುಲ್ಕದಾ ವಯಮ್ ॥೪೦॥

"ಮಹಾರಾಜ! ಯಾವ ಕ್ಷತ್ರಿಯನು ತನ್ನ ವರ್ಣಾಶ್ರಮೋಕ್ತವಾದ ಧರ್ಮದ ಅನುಸಾರವಾಗಿ ನಡೆದುಕೊಳ್ಳುತ್ತಿರುವನೋ ಅಂತಹ ಕ್ಷತ್ರಿಯನು ಯಾವಾಗಲೂ ಯಾರನ್ನೂ ಯಾವುದನ್ನೂ ಯಾಚಿಸಹೋಗುವುದಿಲ್ಲ. ಲೋಕದಲ್ಲಿ ಸ್ವಧರ್ಮನಿಷ್ಠರಾದ ಕ್ಷತ್ರಿಯರಿಗೆ ಯಾಚನೆಮಾಡುವುದು ನಿಂದ್ಯವಾದುದೆಂದು ವಿದ್ವಾಂಸರು ಹೇಳುತ್ತಾರೆ. ಆದರೂ ನಿನ್ನೊಡನೆ ಪ್ರೇಮದ ಸಂಬಂಧವನ್ನು ಬೆಳೆಸುವ ಇಚ್ಛೆಯುಳ್ಳವನಾಗಿರುವುದರಿಂದ ನಿನ್ನ ಕನ್ಯೆಯನ್ನು ನಾನು ಯಾಚಿಸುತ್ತಿದ್ದೇನೆ. ಆದರೆ ನಾವು ಮಾತ್ರ ಕನ್ಯಾಶುಲ್ಕವನ್ನು ಕೊಡತಕ್ಕವರಲ್ಲ."

ರಾಜನು ಹೇಳುತ್ತಾನೆ :

"ಪ್ರಭುವೇ! ನೀನು ಸಮಸ್ತಕಲ್ಯಾಣಗುಣಗಳಿಗೂ ಪರಮಾಶ್ರಯ

ಎಂದು ಮುಂದಿನ ಶ್ಲೋಕವಿರುವುದರಿಂದ ಅದರ ಹಿಂದಿನ ಎರಡು ಶ್ಲೋಕಗಳೂ ಸತ್ಯೆಯು ಹೇಳಿದ್ದೆಂದು ನಾವು ಅರ್ಥಮಾಡಿದ್ದೇವೆ.

ನಾಗಿರುವೆ. ಸಾಕ್ಷಾತ್ ಮಹಾಲಕ್ಷ್ಮಿಯೇ ನಿನ್ನ ವಕ್ಷಃಸ್ಥಳದಲ್ಲಿ ನಿತ್ಯ ನಿರಂತರವಾಗಿ ವಾಸಮಾಡುತ್ತಾಳೆ. ನನ್ನ ಮಗಳಿಗೆ ನಿನಗಿಂತಲೂ ಶ್ರೇಷ್ಠನಾದ ವರನು ಬೇರೆ ಯಾವನಿದ್ದಾನೆ?

ಆದರೆ ಯದುವಂಶಶಿರೋಮಣಿಯೇ! ಕನ್ಯೆಗೆ ಅನುರೂಪನಾದ ವರನು ಯಾರೆಂಬುದನ್ನು ತಿಳಿಯಲು ಮತ್ತು ವರನ ಶೌರ್ಯ-ಸಾಮರ್ಥ್ಯ ಗಳನ್ನು ಪರೀಕ್ಷಿಸಲು ಹಿಂದಿನಿಂದಲೂ ಒಂದು ನಿಯಮವನ್ನು ಪರಿಪಾಲಿ ಸುತ್ತಾ ಬಂದಿದ್ದೇವೆ. ನಮ್ಮಲ್ಲಿ ಎದುರಿಸಲು ಅಸಾಧ್ಯವಾದ ಮತ್ತು ಹಿಡಿಯಲು ಅಸಾಧ್ಯವಾದ ಏಳು ಕೊಬ್ಬಿದ ಗೂಳಿಗಳಿವೆ. ಇವುಗಳನ್ನು ಬಗ್ಗಿಸಲು ಹೋಗಿ ಹಲವಾರು ರಾಜಕುಮಾರರು ಕೈ-ಕಾಲುಗಳನ್ನು ಮುರಿದುಕೊಂಡಿರುತ್ತಾರೆ. ಯದುನಂದನನೇ! ಶ್ರಿಯಃಪತಿಯೇ! ನಿನ್ನಿಂದೇನಾದರೂ ಈ ಏಳು ಗೂಳಿಗಳೂ ನಿಗ್ರಹಿಸಲ್ಪಟ್ಟರೆ ಆಗ ನೀನು ನನ್ನ ಮಗಳಿಗೆ ಅನುರೂಪನಾದ, ಅಭೀಷ್ಟನಾದ ವರನಾಗುವೆ."

ಸರ್ವಶಕ್ತನಾದ ಶ್ರೀಕೃಷ್ಣನು ನಗ್ನಜಿತನ ವಂಶಪಾರಂಪರ್ಯವಾದ ಈ ನಿಯಮವನ್ನು ಕೇಳಿ ತನ್ನನ್ನು ಏಳು ಮಂದಿ ಕೃಷ್ಣರಾಗಿ ಪರಿವರ್ತಿಸಿ ಕೊಂಡು ನಡುಕಟ್ಟನ್ನು ಬಿಗಿದು ಲೀಲಾಜಾಲವಾಗಿ ಆ ಏಳು ಗೂಳಿಗಳನ್ನೂ



ನಿಗ್ರಹಿಸಿದನು. ಅವುಗಳಿಗೆ ಮೂಗುದಾರವನ್ನು ಹಾಕಿ, ಅವುಗಳನ್ನು ಹಗ್ಗದಿಂದ ಬಿಗಿದು ದರ್ಪವನ್ನು ಕಳೆದುಕೊಂಡಿದ್ದ ಮತ್ತು ಶಕ್ತಿಗುಂದಿದ್ದ ಆ

ಗೂಳಿಗಳನ್ನು–ಬಾಲಕರು ಮರದ ಬಸವನನ್ನು ಅತ್ತಲಿತ್ತ ಎಳೆದಾಡುವಂತೆ ಎಳೆದಾಡಿದನು. ವಿಸ್ಮಿತನಾದ ನಗ್ನಜಿತಮಹಾರಾಜನು ಶ್ರೀಕೃಷ್ಣನ ವೀರ್ಯ-ಸಾಹಸಗಳನ್ನು ನೋಡಿ ಸುಪ್ರೀತನಾಗಿ ತನ್ನ ಮಗಳನ್ನು ಶ್ರೀಕೃಷ್ಣನಿಗೆ ಒಪ್ಪಿಸಿಬಿಟ್ಟನು. ಗೋವಿಂದನು ತನಗೆ ಅನುರೂಪಳಾಗಿದ್ದ ಸತ್ಯೆಯನ್ನು ವಿಧಿಪೂರ್ವಕವಾಗಿ ಪಾಣಿಗ್ರಹಣಮಾಡಿಕೊಂಡನು. ತಮ್ಮ ಮಗಳಿಗೆ ಅತ್ಯಂತಪ್ರಿಯನಾಗಿದ್ದ ಶ್ರೀಕೃಷ್ಣನು ಪತಿಯಾದುದಕ್ಕಾಗಿ ರಾಜನ ಪತ್ನಿಯರೂ ಪರಮಾನಂದವನ್ನು ಹೊಂದಿದರು. ಕಲ್ಯಾಣಮಹೋತ್ಸವವು ಸಕಲ ಸಂಭ್ರಮಗಳಿಂದ ಜರುಗಿತು. ಶಂಖ-ಭೇರೀ-ನಗಾರಿಗಳು ಮೊಳಗಿದುವು. ಎಲ್ಲ ಕಡೆಗಳಲ್ಲಿಯೂ ಗಾಯನಗಳೂ ವಾದ್ಯಘೋಷಗಳೂ ನಡೆಯುತ್ತಿದ್ದುವು. ಬ್ರಾಹ್ಮಣರು ವಧೂ-ವರರನ್ನು ಆಶೀರ್ವದಿಸುತ್ತಿದ್ದರು. ಕೋಸಲದ ನರ-ನಾರಿಯರು ಸುಂದರವಾದ ವಸ್ತ್ರಗಳಿಂದಲೂ, ಮಾಲೆಗಳಿಂದಲೂ ಸಮಲಂಕೃತರಾಗಿ ಶ್ರೀಕೃಷ್ಣ-ಸತ್ಯೆಯರ ಕಲ್ಯಾಣೋತ್ಸವವನ್ನು ನೋಡಿ ಆನಂದಸಾಗರದಲ್ಲಿ ಮುಳುಗಿಹೋದರು.

ವಿಭುವಾದ ನಗ್ನಜಿದ್ರಾಜನು ಅಳಿಯನಾದ ಶ್ರೀಕೃಷ್ಣನಿಗೆ ಹತ್ತು ಸಾವಿರ ಗೋವುಗಳನ್ನೂ, ದಿವ್ಯವಾದ ವಸ್ತ್ರಗಳಿಂದಲೂ, ಸುವರ್ಣಾಭರಣಗಳಿಂದಲೂ ಸಮಲಂಕೃತೆಯರಾದ ಮೂರು ಸಾವಿರ ದಾಸಿಯರನ್ನೂ ಬಳುವಳಿಯಾಗಿ ಕೊಟ್ಟನು. ಒಂಬತ್ತು ಸಾವಿರ ಆನೆಗಳನ್ನೂ, ಇದಕ್ಕೆ ನೂರುಪಟ್ಟು ಹೆಚ್ಚಿನ (ಒಂಬತ್ತು ಲಕ್ಷ) ರಥಗಳನ್ನೂ, ರಥಗಳ ಸಂಖ್ಯೆಗೆ ನೂರುಪಟ್ಟು ಹೆಚ್ಚಿನ (ಒಂಬತ್ತು ಕೋಟಿ) ಕುದುರೆಗಳನ್ನೂ, ಅಶ್ವಗಳ ಸಂಖ್ಯೆಗೆ ನೂರು ಪಟ್ಟು ಹೆಚ್ಚಿನ (ಅಸಂಖ್ಯಾತ) ಕಾಲಾಳುಗಳನ್ನೂ ನಗ್ನಜಿತನು ಶ್ರೀಕೃಷ್ಣನಿಗೆ ಬಳುವಳಿಯಾಗಿ ಕೊಟ್ಟನು. ವಾತ್ಸಲ್ಯದಿಂದಲೂ ಸ್ನೇಹದಿಂದಲೂ ಆರ್ದ್ರಹೃದಯನಾಗಿದ್ದ ನಗ್ನಜಿತನು ದಂಪತಿಗಳನ್ನು ರಥದಲ್ಲಿ ಕುಳ್ಳಿರಿಸಿ ದೊಡ್ಡದಾದ ಚತುರಂಗಬಲದೊಡನೆ ದ್ವಾರಕಾಪಟ್ಟಣಕ್ಕೆ ಕಳುಹಿಸಿಕೊಟ್ಟನು. ಯದುವಂಶೀಯರಿಂದಲೂ ನಗ್ನಜಿತನ ಏಳು ಗೂಳಿಗಳಿಂದಲೂ ಭಗ್ನವೀರ್ಯರಾಗಿದ್ದ ರಾಜಕುಮಾರರು–ಶ್ರೀಕೃಷ್ಣನು ಸತ್ಯೆಯನ್ನು ಕರೆದುಕೊಂಡು ಹೋಗುತ್ತಿರುವನೆಂಬ ವಾರ್ತೆಯನ್ನು ಕೇಳಿ ಅಸಹನಶೀಲರಾಗಿ ಶ್ರೀಕೃಷ್ಣನ ರಥವನ್ನು ಆಕ್ರಮಿಸಿ ಶ್ರೀಕೃಷ್ಣನ ಮೇಲೆ

ಅತ್ಯಂತವೇಗದಿಂದ ತೀಕ್ಷ್ಣವಾದ ಬಾಣಗಳನ್ನು ಸುರಿಸತೊಡಗಿದರು. ಆ ಸಮಯದಲ್ಲಿ ಪಾಂಡುಕುಮಾರನಾದ ಅರ್ಜುನನು ಗೆಳೆಯನಾದ ಶ್ರೀಕೃಷ್ಣನಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಗಾಂಡೀವಧನುಸ್ಸನ್ನು ಹಿಡಿದು, ಸಿಂಹವು ಕ್ಷುದ್ರಮೃಗಗಳನ್ನು ಧ್ವಂಸಮಾಡುವಂತೆ-ಶ್ರೀಕೃಷ್ಣನ ರಥವನ್ನು ಆಕ್ರಮಿಸಿಕೊಂಡಿದ್ದ ರಾಜರೆಲ್ಲರನ್ನೂ ಕ್ಷಣಮಾತ್ರದಲ್ಲಿ ಧ್ವಂಸಮಾಡಿದನು. ಅಳಿದುಳಿದ ರಾಜರು ಪಲಾಯನಮಾಡಿದರು. ಅನಂತರ ಯದುಕುಲ ಶಿರೋಮಣಿಯಾದ, ದೇವಕೀನಂದನನಾದ ಶ್ರೀಕೃಷ್ಣನು, ನಗ್ನಜಿತನು ಕೊಟ್ಟಿದ್ದ ಅಪಾರವಾದ ಬಳುವಳಿಗಳೊಡನೆಯೂ ಸತ್ಯೆಯೊಡನೆಯೂ ದ್ವಾರಕೆಗೆ ಬಂದು ಆಕೆಯೊಡನೆ ಆನಂದದಿಂದ ವಿಹರಿಸತೊಡಗಿದನು.

ವಸುದೇವನ ತಂಗಿಯಾದ ಶ್ರುತಕೀರ್ತಿಯೆಂಬುವಳನ್ನು ಕೇಕಯ ರಾಜನು ವಿವಾಹವಾಗಿದ್ದನು. ಅವಳಿಗೆ ಭದ್ರಾ ಎಂಬ ಮಗಳಿದ್ದಳು. ಅವಳ ಸಹೋದರರಾದ ಸಂತರ್ದನನೇ ಮೊದಲಾದವರಿಂದ ಕೊಡಲ್ಪಟ್ಟ ಭದ್ರೆ ಯನ್ನು ಶ್ರೀಕೃಷ್ಣನು ವಿಧಿಪೂರ್ವಕವಾಗಿ ಪಾಣಿಗ್ರಹಣಮಾಡಿಕೊಂಡನು.

ಮದ್ರದೇಶದ ರಾಜನಿಗೆ ಸರ್ವಶುಭಲಕ್ಷಣಸಂಪನ್ನೆಯಾದ ಲಕ್ಷ್ಮಣಾ ಎಂಬ ಕನ್ಯೆಯಿದ್ದಳು. ಗರುಡನು ಸ್ವರ್ಗದಲ್ಲಿದ್ದ ಅಮೃತವನ್ನು ಅಪಹರಿಸಿದಂತೆ ಶ್ರೀಕೃಷ್ಣನು ಏಕಾಕಿಯಾಗಿ ಸ್ವಯಂವರಮಂಟಪದಲ್ಲಿದ್ದ ಲಕ್ಷ್ಮಣೆಯನ್ನು ಅಪಹರಿಸಿಕೊಂಡು ಬಂದು ದ್ವಾರಕೆಯಲ್ಲಿ ಅವಳನ್ನು ವಿಧಿಪೂರ್ವಕವಾಗಿ ವಿವಾಹವಾದನು.

ಪರೀಕ್ಷಿತಮಹಾರಾಜ! ಭೌಮಾಸುರನನ್ನು ಸಂಹರಿಸಿ ಅವನ ಕಾರಾ ಗೃಹದಲ್ಲಿದ್ದ ಸಾವಿರಾರು ಸುಂದರಸ್ತ್ರೀಯರನ್ನು ಕಾರಾಗೃಹದಿಂದ ಬಿಡಿಸಿ ಕೊಂಡು ಬಂದು ಶ್ರೀಕೃಷ್ಣನು ಅವರೆಲ್ಲರನ್ನೂ ಮದುವೆಯಾದನು. ಹೀಗೆ ಶ್ರೀಕೃಷ್ಣನಿಗೆ ಎಂಟು ಮಂದಿ ಪಟ್ಟಮಹಿಷಿಯರಲ್ಲದೆ ಸಾವಿರಾರು ಮಂದಿ ಇತರ ಪತ್ನಿಯರೂ ಇದ್ದರು.*

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೫೮ನೆಯ ಅಧ್ಯಾಯವು ಮುಗಿಯಿತು.

---

* ಶ್ರೀಕೃಷ್ಣನ ಎಂಟುಮಂದಿ ಪಟ್ಟಮಹಿಷಿಯರು : ರುಕ್ಮಿಣಿ, ಜಾಂಬವತಿ, ಸತ್ಯಭಾಮಾ, ಕಾಲಿಂದೀ, ಮಿತ್ರವಿಂದಾ, ಸತ್ಯೆ, ಭದ್ರೆ ಮತ್ತು ಲಕ್ಷ್ಮಣೆ.

ನರಕಾಸುರನ ಸಂಹಾರ: ಹದಿನಾರುಸಾವಿರದ ನೂರುಮಂದಿ ರಾಜಕನ್ಯೆಯರೊಡನೆ ಶ್ರೀಕೃಷ್ಣನ ವಿವಾಹ

ಪರೀಕ್ಷಿದ್ರಾಜನು ಪ್ರಶ್ನಿಸುತ್ತಾನೆ :

ಯಥಾ ಹತೋ ಭಗವತಾ ಭೌಮೋ ಯೇನ ಚ ತಾಃ ಸ್ತ್ರಿಯಃ ।
ನಿರುದ್ಧಾ ಏತದಾಚಕ್ಷ್ವ ವಿಕ್ರಮಂ ಶಾರ್ಙ್ಗಧನ್ವನಃ ॥೧॥

ಪೂಜ್ಯರೇ! ಸಾವಿರಾರು ಸ್ತ್ರೀಯರನ್ನು ಬಂಧನದಲ್ಲಿರಿಸಿದ್ದ ನರಕಾಸುರನನ್ನು ಶ್ರೀಕೃಷ್ಣನು ಹೇಗೆ ಸಂಹರಿಸಿದನು? ಶಾರ್ಙ್ಗಧನುಸ್ಸನ್ನು ಧರಿಸಿರುವ ಶ್ರೀಕೃಷ್ಣನ ಈ ಸಾಹಸಕಾರ್ಯವನ್ನು ವಿಸ್ತಾರವಾಗಿ ಹೇಳಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಭೌಮಾಸುರನು ಇಂದ್ರನ (ವರುಣನ) ಛತ್ರವನ್ನೂ, ಅದಿತಿಯ ಕುಂಡಲಗಳನ್ನೂ, ಮೇರುಪರ್ವತದಲ್ಲಿ ದೇವತೆಗಳ ಸ್ಥಾನವಾಗಿದ್ದ ಮಣಿಪರ್ವತವನ್ನೂ ಅಪಹರಿಸಿಕೊಂಡು ಹೋಗಿದ್ದನು. ಸಮಸ್ತರಿಗೂ ರಾಜನಾದ ಇಂದ್ರನು ಭೌಮನ ಉಪಟಳವನ್ನು ತಾಳಲಾರದೆ ದ್ವಾರಕೆಗೆ ಬಂದು ಶ್ರೀಕೃಷ್ಣನೊಡನೆ ಭೌಮನು ಮಾಡಿರುವ ಮತ್ತು ಮಾಡುತ್ತಿರುವ ಕೃತ್ಯಗಳೆಲ್ಲವನ್ನೂ ವಿವರಿಸಿ ಹೇಳಿದನು. ಆಗ ಶ್ರೀಕೃಷ್ಣನು ಸತ್ಯಭಾಮೆಯೊಡನೆ ಗರುಡವಾಹನವನ್ನೇರಿ ಭೌಮಾಸುರನ ರಾಜಧಾನಿಯಾದ ಪ್ರಾಗ್ಜ್ಯೋತಿಷನಗರಕ್ಕೆ ಹೋದನು. ಆ ಪಟ್ಟಣವನ್ನು ಪ್ರವೇಶಿಸುವುದೇ ಅತ್ಯಂತಕಠಿನವಾಗಿತ್ತು. ಮೊದಲನೆಯದಾಗಿ ಆ ಪಟ್ಟಣದ ನಾಲ್ಕು ಕಡೆಗಳಲ್ಲಿಯೂ ಪರ್ವತಗಳಿದ್ದು ಅವುಗಳೇ ಆ ಪಟ್ಟಣದ ಕೋಟೆಗಳಾಗಿದ್ದುವು. ಹೀಗೆಯೇ ಆ ಪಟ್ಟಣವು ಶಸ್ತ್ರದುರ್ಗದಿಂದಲೂ, ಜಲದುರ್ಗದಿಂದಲೂ, ಅಗ್ನಿದುರ್ಗದಿಂದಲೂ ಅನಂತರ ವಾಯುದುರ್ಗದಿಂದಲೂ ಸಮಾವೃತವಾಗಿದ್ದಿತು. ವಾಯುದುರ್ಗವು ಕಳೆದನಂತರ ದೃಢವಾದ ಮತ್ತು ಭಯಂಕರವಾದ ಮುರನೆಂಬ ರಾಕ್ಷಸನ ಹತ್ತುಸಾವಿರ ಕಬ್ಬಿಣದ ಸರಪಣಿಗಳಿಂದ ಆ ಮಹಾನಗರವು ಸುತ್ತುವರಿಯಲ್ಪಟ್ಟಿದ್ದು ಅತ್ಯಂತಸುಭದ್ರವಾಗಿ

ದ್ದಿತು. ಶ್ರೀಕೃಷ್ಣನು ಕೌಮೋದಕೀಗದೆಯಿಂದ ಪರ್ವತಪ್ರಾಕಾರಗಳನ್ನು ಭೇದಿಸಿದನು. ಬಾಣಗಳಿಂದ ಶಸ್ತ್ರದುರ್ಗವನ್ನು ಧ್ವಂಸಮಾಡಿದನು. ಸುದರ್ಶನಚಕ್ರದಿಂದ ಅಗ್ನಿ-ಜಲ-ವಾಯುದುರ್ಗಗಳನ್ನೂ ಧ್ವಂಸಮಾಡಿದನು. ನಂದಕವೆಂಬ ಖಡ್ಗದಿಂದ ಮುರನ ಪಾಶಗಳನ್ನು ಭೇದಿಸಿದನು. ಪಾಂಚಜನ್ಯಶಂಖದ ಧ್ವನಿಯಿಂದ ಯಂತ್ರ-ಮಂತ್ರ-ತಂತ್ರಗಳನ್ನೂ ಧೈರ್ಯ ಶಾಲಿಗಳಾದ ರಾಕ್ಷಸರ ಮನಸ್ಸುಗಳನ್ನೂ ಭೇದಿಸಿದನು. ಹಿಂದೆಯೇ ಹೇಳಿ ದಂತೆ ಗದಾಧರನು ತನ್ನ ದೊಡ್ಡದಾಗಿದ್ದ ಗದೆಯಿಂದ ಗಿರಿಪ್ರಾಕಾರವನ್ನು ಧ್ವಂಸಮಾಡಿದನು. ಪ್ರಳಯಕಾಲದ ಸಿಡಿಲಿನಂತೆ ಅತ್ಯಂತಭಯಂಕರವಾಗಿದ್ದ ಪಾಂಚಜನ್ಯಶಂಖದ ಧ್ವನಿಯನ್ನು ಕೇಳಿ ನೀರಿನಲ್ಲಿ ಮಲಗಿ ನಿದ್ರಿಸುತ್ತಿದ್ದ ಐದು ತಲೆಗಳಿಂದ ಕೂಡಿದ್ದ ಮುರನೆಂಬ ದೈತ್ಯನು ನೀರಿನಿಂದ ಮೇಲೆದ್ದು ಬಂದನು. ಆ ಮಹಾದೈತ್ಯನು ಪ್ರಳಯಕಾಲದ ಸೂರ್ಯಾಗ್ನಿಗಳಂತೆ ಮಹಾತೇಜಸ್ವಿಯಾಗಿದ್ದನು. ಅವನನ್ನು ಕಣ್ಣೆತ್ತಿ ದಿಟ್ಟಿಸಿನೋಡಲೂ ಕೂಡ ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಪ್ರಾಣಬಿಡಲು ಇಚ್ಛಿಸಿರುವ ಸರ್ಪವು ಗರುಡನ ಬಳಿಗೆ ಧಾವಿಸುವಂತೆ ಮುರರಾಕ್ಷಸನು ತ್ರಿಶೂಲವನ್ನೆತ್ತಿಕೊಂಡು ಶ್ರೀಕೃಷ್ಣನ ಬಳಿಗೆ ಧಾವಿಸಿದನು. ಆ ಸಮಯದಲ್ಲವನು ತನ್ನ ಐದು ಮುಖಗಳಿಂದ ಮೂರು ಲೋಕಗಳನ್ನೂ ನುಂಗಿಬಿಡುವನೋ ಎಂಬಂತೆ ಕಾಣುತ್ತಿದ್ದನು.

ಬಳಿಕ ಆ ಮಹಾಸುರನು ತನ್ನ ಕೈಯಲ್ಲಿದ್ದ ತ್ರಿಶೂಲವನ್ನು ರಭಸ ದಿಂದ ತಿರುಗಿಸಿ ಶ್ರೀಕೃಷ್ಣನ ವಾಹನವಾಗಿದ್ದ ಗರುಡನ ಮೇಲೆ ಪ್ರಯೋಗಿಸಿ ತನ್ನ ಐದು ಮುಖಗಳಿಂದಲೂ ಸಿಂಹನಾದಮಾಡಿದನು. ಸಿಂಹನಾದದ ಆ ಶಬ್ದವು ಭೂಮ್ಯಾಕಾಶ-ಪಾತಾಳಗಳಲ್ಲಿಯೂ ಮತ್ತು ಹತ್ತು ದಿಕ್ಕುಗಳ ಲ್ಲಿಯೂ ತುಂಬಿ ಬ್ರಹ್ಮಾಂಡವನ್ನೂ ವ್ಯಾಪಿಸಿತು. ಮುರಾಸುರನು ಪ್ರಯೋಗಿಸಿದ ಶೂಲವು ಗರುಡನ ಕಡೆಗೆ ವೇಗವಾಗಿ ಬರುತ್ತಿರುವುದನ್ನು ಕಂಡು ಶ್ರೀಕೃಷ್ಣನು ತನ್ನ ಹಸ್ತಕೌಶಲವನ್ನು ತೋರಿಸುತ್ತಾ ಎರಡು ಬಾಣ ಗಳಿಂದ ತ್ರಿಶೂಲವನ್ನು ಮೂರು ಭಾಗಗಳಾಗಿ ಕತ್ತರಿಸಿದನು. ಮರುಕ್ಷಣ ದಲ್ಲಿಯೇ ಶ್ರೀಕೃಷ್ಣನು ಮುರರಾಕ್ಷಸನ ಐದು ಮುಖಗಳನ್ನೂ ಹಲವಾರು ಬಾಣಗಳಿಂದ ಪ್ರಹರಿಸಿದನು. ಇದರಿಂದ ಅತಿಕ್ರುದ್ಧನಾದ ಮುರಾಸುರನು

ಶ್ರೀಕೃಷ್ಣನ ಮೇಲೆ ಭಯಂಕರವಾದ ಗದೆಯನ್ನು ಪ್ರಯೋಗಿಸಿದನು. ಶ್ರೀಕೃಷ್ಣನು ಕೂಡ ಗದೆಯಿಂದಲೇ ತನಗೆ ಎದುರಾಗಿ ಬರುತ್ತಿದ್ದ ಮುರರಾಕ್ಷಸನ ಗದೆಯನ್ನು ಪ್ರಹರಿಸಿ ಅದನ್ನು ಸಾವಿರ ಚೂರುಗಳನ್ನಾಗಿ ಮಾಡಿಬಿಟ್ಟನು. ಹೀಗೆ ಆಯುಧಗಳೆಲ್ಲವನ್ನೂ ಕಳೆದುಕೊಂಡನಂತರ ಮುರರಾಕ್ಷಸನು ತೋಳುಗಳನ್ನು ಮೇಲೆತ್ತಿಕೊಂಡು ಶ್ರೀಕೃಷ್ಣನ ಕಡೆಗೆ ನುಗ್ಗಿದನು. ಮರುಕ್ಷಣದಲ್ಲಿಯೇ ಅಜಿತನಾದ ಶ್ರೀಕೃಷ್ಣನು ಚಕ್ರಾಯುಧದಿಂದ ರಾಕ್ಷಸನ ಐದು ತಲೆಗಳನ್ನೂ ಲೀಲಾಜಾಲವಾಗಿ ತರಿದುಹಾಕಿದನು. ಇಂದ್ರನ ವಜ್ರಾಯುಧದಿಂದ ಕತ್ತರಿಸಲ್ಪಟ್ಟ ಪರ್ವತಶಿಖರದಂತೆ ಶ್ರೀಕೃಷ್ಣನ ಚಕ್ರಾಯುಧದಿಂದ ಕತ್ತರಿಸಲ್ಪಟ್ಟು ಶಿರಸ್ಸುಗಳಿಂದ ರಹಿತವಾಗಿದ್ದ ಮುರರಾಕ್ಷಸನ ಶರೀರವು ಪ್ರಾಣರಹಿತವಾಗಿ ನೀರಿನಲ್ಲಿ ಬಿದ್ದು ಹೋಯಿತು. ಪಿತೃವಧೆಯಿಂದ ಅತಿದುಃಖಿತರಾಗಿದ್ದ ಮುರರಾಕ್ಷಸನ ಏಳು ಮಂದಿ ಮಕ್ಕಳು ಅತ್ಯಂತಕ್ರುದ್ಧರಾಗಿ ಪ್ರತಿಕ್ರಿಯೆತೋರಲು ಪ್ರಯತ್ನಶೀಲ ರಾದರು. ತಾಮ್ರ, ಅಂತರಿಕ್ಷ, ಶ್ರವಣ, ವಿಭಾವಸು, ವಸು, ನಭಸ್ವಂತ ಮತ್ತು ಅರುಣ-ಎಂಬ ಈ ಏಳು ಮಂದಿ ಮುರರಾಕ್ಷಸನ ಮಕ್ಕಳೂ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ಪೀಠ ಎಂಬ ರಾಕ್ಷಸನನ್ನು ತಮ್ಮ ಸೇನಾಪತಿಯನ್ನಾಗಿ ಮಾಡಿಕೊಂಡು ಭೌಮಾಸುರನ ಆದೇಶದಂತೆ ಶ್ರೀಕೃಷ್ಣನ ಮೇಲೆ ಯುದ್ಧಕ್ಕೆ ಹೋದರು. ಶ್ರೀಕೃಷ್ಣನನ್ನು ಕಾಣುತ್ತಿದ್ದಂತೆಯೇ ಪರಮಕ್ರುದ್ಧರಾಗಿದ್ದ ಆ ರಾಕ್ಷಸಪುತ್ರರು ಬಾಣಗಳು-ಖಡ್ಗ-ಗದೆ-ಶಕ್ತಿ-ಯಷ್ಟಿ-ತ್ರಿಶೂಲ–ಇವೇ ಮೊದಲಾದ ಪ್ರಚಂಡವಾದ ಆಯುಧಗಳನ್ನು ಶ್ರೀಕೃಷ್ಣನ ಮೇಲೆ ಅವಿಚ್ಛಿನ್ನವಾಗಿ ಸುರಿಸಿದರು.

ಪರೀಕ್ಷಿತಮಹಾರಾಜ! ಶ್ರೀಕೃಷ್ಣನ ಶಕ್ತಿಯು ಅನಂತವಾದುದು ಮತ್ತು ಅಮೋಘವಾದುದು. ಶ್ರೀಕೃಷ್ಣನು ತನ್ನ ಹಲವಾರು ಬಾಣಗಳಿಂದ ರಾಕ್ಷಸರಿಂದ ಪ್ರಯೋಗಿಸಲ್ಪಟ್ಟಿದ್ದ ಕೋಟಿ-ಕೋಟಿ ಶಸ್ತ್ರಾಸ್ತ್ರಗಳನ್ನು ನುಚ್ಚುನೂರಾಗಿಮಾಡಿಬಿಟ್ಟನು. ರಾಕ್ಷಸಯೋಧರು ಪ್ರಯೋಗಿಸಿದ್ದ ಶಸ್ತ್ರಾಸ್ತ್ರಗಳೆಲ್ಲವನ್ನೂ ನಿರಸನಗೊಳಿಸಿದ ಶ್ರೀಕೃಷ್ಣನು ರಾಕ್ಷಸನ ಮೇಲೆ ಶಸ್ತ್ರಾಸ್ತ್ರಗಳನ್ನು ಅವ್ಯಾಹತವಾಗಿ ಸುರಿಸುತ್ತಾ ಸೇನಾಪತಿಯಾದ ಪೀಠ ರಾಕ್ಷಸನ ಮತ್ತು ಅವನ ಅನುಯಾಯಿಗಳಾಗಿದ್ದ ದೈತ್ಯಸೈನಿಕರ ತಲೆ, ತೊಡೆ,

ಭುಜ, ಕಾಲು, ಕವಚಗಳೆಲ್ಲವನ್ನೂ ಕತ್ತರಿಸಿ ಅವರೆಲ್ಲರನ್ನೂ ಒಂದೇ ಬಾರಿಗೆ ಯಮರಾಜನ ಮನೆಗೆ ಕಳುಹಿಸಿಬಿಟ್ಟನು. ತಮ್ಮ ಕಡೆಯ ಅಸಂಖ್ಯಾತಸೈನಿಕರೂ ಮತ್ತು ಮುಖ್ಯ-ಮುಖ್ಯರಾದ ಸೇನಾಪತಿಗಳೂ ಶ್ರೀಕೃಷ್ಣನ ಚಕ್ರಾಯುಧದಿಂದಲೂ ಮತ್ತು ಶಸ್ತ್ರಾಸ್ತ್ರಗಳಿಂದಲೂ ವಧಿಸಲ್ಪಟ್ಟರೆಂಬ ಸಮಾಚಾರವನ್ನು ತಿಳಿದೊಡನೆಯೇ ಭೂದೇವಿಯ ಮಗನಾದ ನರಕಾಸುರನು ಕ್ರುದ್ಧನಾದನು. ಸಮುದ್ರದಲ್ಲಿ ಹುಟ್ಟಿದ್ದ, ಮದೋದಕವನ್ನು ಸತತವಾಗಿ ಸುರಿಸುತ್ತಿದ್ದ, ದೊಡ್ಡದಾದ ಮತ್ತು ಭಯಂಕರವಾದ ಗಜಸೈನ್ಯದೊಡನೆ ಅಸಹನಶೀಲನಾದ ಭೌಮಾಸುರನು ಶ್ರೀಕೃಷ್ಣನೊಡನೆ ಯುದ್ಧಮಾಡುವ ಸಲುವಾಗಿ ಪಟ್ಟಣದಿಂದ ಹೊರಬಂದನು.

ಸೂರ್ಯನ ಮೇಲ್ಭಾಗದಲ್ಲಿ ಮಿಂಚಿನಿಂದ ಕೂಡಿದ ವರ್ಷಾಕಾಲದ ಶ್ಯಾಮಲವರ್ಣದ ಮೇಘದಂತೆ ಪತ್ನಿಯೊಡನೆ ಗರುಡಾರೂಢನಾಗಿದ್ದ ಶ್ರೀಕೃಷ್ಣನನ್ನು ನರಕನು ನೋಡಿದನು. ಶ್ರೀಕೃಷ್ಣನನ್ನು ಕಾಣುತ್ತಲೇ ಕ್ರುದ್ಧನಾಗಿದ್ದ ನರಕಾಸುರನು ಶ್ರೀಕೃಷ್ಣನ ಮೇಲೆ 'ಶತಘ್ನೀ'–ಎಂಬ ಹೆಸರಿನ ಶಕ್ತ್ಯಾಯುಧವನ್ನು ಪ್ರಯೋಗಿಸಿದನು. ನರಕಾಸುರನ ಸಾವಿರಾರು ಸೈನಿಕರು ಕೂಡ ಶ್ರೀಕೃಷ್ಣನ ಮೇಲೆ ಬಾಣಗಳ ಮಳೆಗರೆದರು. ಇದಕ್ಕೆ ಪ್ರತಿಯಾಗಿ ಶ್ರೀಕೃಷ್ಣನು ಕೂಡ ಚಿತ್ರ-ವಿಚಿತ್ರವಾದ ರೆಕ್ಕೆಗಳಿಂದ ಕೂಡಿದ್ದ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಶತ್ರುಗಳ ಬಾಣಸಮೂಹವನ್ನು ನಿರಸನ ಗೊಳಿಸಿದನು. ನರಕನು ಬಿಟ್ಟಿದ್ದ ಶತಘ್ನಿಯೂ ವ್ಯರ್ಥವಾಗಿ ಹೋಯಿತು. ಶ್ರೀಕೃಷ್ಣನು ಪುಂಖಾನುಪುಂಖವಾಗಿ ಬಿಡುತ್ತಿದ್ದ ಬಾಣಗಳಿಂದ ನರಕಾಸುರನ ಸೈನಿಕರ ಭುಜಗಳೂ, ತೊಡೆಗಳೂ, ತಲೆಗಳೂ ಕತ್ತರಿಸಲ್ಪಟ್ಟು ತೊಪ-ತೊಪನೆ ಕೆಳಕ್ಕೆ ಬೀಳುತ್ತಿದ್ದುವು. ಹಾಗೆಯೇ ಶ್ರೀಕೃಷ್ಣನ ಸತತವಾದ ಬಾಣಗಳ ಪ್ರಹಾರಗಳಿಂದ ಅಪಾರಸಂಖ್ಯೆಯಲ್ಲಿ ಗಜಾಶ್ವ-ಸೈನ್ಯಗಳೂ ಅಸುನೀಗಿದುವು. ನರಕಾಸುರನ ಯೋಧರಿಂದ ಬಿಡಲ್ಪಡುತ್ತಿದ್ದ ಸಮಸ್ತವಾದ ಶಸ್ತ್ರಾಸ್ತ್ರಗಳನ್ನೂ ಶ್ರೀಕೃಷ್ಣನು ಮೂರು ಮೂರು ಬಾಣಗಳಿಂದ ಕತ್ತರಿಸಿಹಾಕುತ್ತಿದ್ದನು.

ಆ ಸಮಯದಲ್ಲಿ ಶ್ರೀಕೃಷ್ಣನ ವಾಹನವಾಗಿದ್ದ ಗರುಡನೂ ರಾಕ್ಷಸನ ಗಜಸೈನ್ಯವನ್ನು ತನ್ನ ಬಲಿಷ್ಠವಾದ ರೆಕ್ಕೆಗಳಿಂದಲೇ ಬಡಿದು ಧ್ವಂಸ

ಮಾಡುತ್ತಿದ್ದನು. ಕೊಕ್ಕಿನಿಂದ ಕುಕ್ಕಿ ಪಂಜಗಳಿಂದಲೂ ರೆಕ್ಕೆಗಳಿಂದಲೂ ಪ್ರಹರಿಸಲ್ಪಡುತ್ತಿದ್ದ ಆನೆಗಳು ಪೆಟ್ಟನ್ನು ತಡೆದುಕೊಳ್ಳಲು ಸಾಧ್ಯವಾಗದೆ ಸಂಕಟಪಡುತ್ತಾ ಕಿರುಚಿಕೊಳ್ಳುತ್ತಾ ಓಡಿಹೋಗಿ ನಗರದಲ್ಲಿ ಸೇರಿ ಕೊಂಡುವು. ನರಕಾಸುರನೊಬ್ಬನೇ ರಣರಂಗದಲ್ಲಿ ಉಳಿದುಕೊಂಡನು. ಗರುಡನ ರೆಕ್ಕೆಗಳ ಪ್ರಹಾರವನ್ನು ತಡೆದುಕೊಳ್ಳಲಾರದೆ ತನ್ನ ಕಡೆಯ ಆನೆ ಗಳು ಓಡಿಹೋದುವೆಂಬುದನ್ನು ತಿಳಿದು ನರಕಾಸುರನು ಗರುಡನ ಮೇಲೆ, ಒಮ್ಮೆ ವಜ್ರಾಯುಧವನ್ನೂ ಹಿಮ್ಮೆಟ್ಟಿಸಿದ್ದ, ಅಮೋಘವಾದ ಶಕ್ತ್ಯಾಯುಧ ವನ್ನು ರಭಸದಿಂದ ಪ್ರಯೋಗಿಸಿದನು. ಪುಷ್ಪಮಾಲೆಯಿಂದ ಪ್ರಹರಿಸಲ್ಪಟ್ಟ ಆನೆಯಂತೆ ಗರುಡನು ಶಕ್ತ್ಯಾಯುಧದ ಪ್ರಹಾರವನ್ನು ಗಣನೆಗೇ ತೆಗೆದು ಕೊಳ್ಳಲಿಲ್ಲ. ಶಕ್ತ್ಯಾಯುಧಪ್ರಹಾರದಿಂದ ಸ್ವಲ್ಪವಾದರೂ ವಿಚಲಿತನಾಗಲಿಲ್ಲ. ತಾನು ಪ್ರಯೋಗಿಸಿದ ಆಯುಧಗಳೆಲ್ಲವೂ ವ್ಯರ್ಥವಾಗಿ ಹೋಗುತ್ತಿರಲು ಅತಿಕ್ರುದ್ಧನಾದ ನರಕಾಸುರನು ಶ್ರೀಕೃಷ್ಣನನ್ನು ಸಂಹರಿಸಬೇಕೆನ್ನುವ ಛಲದಿಂದ ಶೂಲಾಯುಧವನ್ನು ಕೈಗೆತ್ತಿಕೊಂಡನು. ನರಕನು ಶೂಲಾಯುಧವನ್ನು ಪ್ರಯೋಗಿಸುವ ಮೊದಲೇ ಶ್ರೀಹರಿಯು ಕತ್ತಿಯ ಅಲುಗಿನಂತೆ ಚೂಪಾದ ಅಂಚುಳ್ಳ ಚಕ್ರಾಯುಧದಿಂದ ರಥದಲ್ಲಿ ಕುಳಿತಿದ್ದ



ಭೌಮಾಸುರನ ತಲೆಯನ್ನು ಕೆಡುಹಿದನು. ಮಣಿಕುಂಡಲಗಳಿಂದಲೂ ಕಿರೀಟದಿಂದಲೂ ಪ್ರಕಾಶಮಾನವಾಗಿ ಕಾಣುತ್ತಿದ್ದ ನರಕನ ತಲೆಯು ನೆಲದ

ಮೇಲೆ ಬಿದ್ದು ಜಾಜ್ವಲ್ಯಮಾನವಾಗಿ ಪ್ರಕಾಶಿಸಿತು. ಭೌಮಾಸುರನ ತಲೆಯು ನೆಲದ ಮೇಲೆ ಬಿದ್ದುದನ್ನು ಕಂಡು ಅವನ ಬಂಧುಗಳು–'ಅಯ್ಯೋ! ನಮ್ಮ ಗತಿಯೇನು?'–ಎಂದು ಕಿರುಚಿಕೊಂಡರು. ಋಷಿ-ಮುನಿಗಳು 'ಸಾಧು ಕೃಷ್ಣ! ಸಾಧು! ಒಳ್ಳೆಯ ಕಾರ್ಯವನ್ನು ಸಾಧಿಸಿದೆ'–ಎಂದು ಪ್ರಶಂಸಿಸಿದರು. ದೇವತೆಗಳು ಪುಷ್ಪವೃಷ್ಟಿಯನ್ನು ಸುರಿಸುತ್ತಾ ಭಗವಂತನನ್ನು ಸ್ತುತಿಸಿದರು.

ಬಳಿಕ ನರಕಾಸುರನ ತಾಯಿಯಾದ ಭೂದೇವಿಯು ಶ್ರೀಕೃಷ್ಣನ ಬಳಿಗೆ ಬಂದು ಪುಟಕ್ಕೆ ಹಾಕಿದ ಚಿನ್ನದಿಂದಲೂ ಶ್ರೇಷ್ಠವಾದ ಮಣಿಗಳಿಂದಲೂ ಬೆಳಗುತ್ತಿದ್ದ ನರಕನಲ್ಲಿದ್ದ ಅದಿತಿಯ ಕುಂಡಲಗಳನ್ನೂ, ವರುಣನಿಗೆ ಸಂಬಂಧಿಸಿದ ಬೆಳ್ಗೊಡೆಯನ್ನೂ, ಮಹಾಮಣಿಯನ್ನೂ (ಮಣಿಪರ್ವತವನ್ನೂ) ವೈಜಯಂತೀಮಾಲೆಯೊಡನೆ ಶ್ರೀಕೃಷ್ಣನಿಗೆ ಅರ್ಪಿಸಿದಳು. ಬಳಿಕ ಭೂದೇವಿಯು ದೇವಶ್ರೇಷ್ಠರಿಂದಲೂ ಅರ್ಚಿಸಲ್ಪಡುತ್ತಿದ್ದ, ವಿಶ್ವೇಶನಾದ ಶ್ರೀಕೃಷ್ಣನಿಗೆ ಪ್ರಣಮಿಸಿ ಕೈಗಳನ್ನು ಜೋಡಿಸಿಕೊಂಡು ಭಕ್ತಿಭಾವದಿಂದ ತುಂಬಿದ ಹೃದಯಳಾಗಿ ಜಗದಾನಂದಕಂದನನ್ನು ಸ್ತುತಿಸಿದಳು :

ನಮಸ್ತೇ ದೇವದೇವೇಶ ಶಙ್ಖಚಕ್ರಗದಾಧರ ।
ಭಕ್ತೇಚ್ಛೋಪಾತ್ತರೂಪಾಯ ಪರಮಾತ್ಮನ್ ನಮೋಽಸ್ತು ತೇ ॥೨೫॥

"ಶಂಖಚಕ್ರಗದಾಧರನೇ! ದೇವದೇವೇಶ್ವರನೇ! ನಾನು ನಿನಗೆ ನಮಸ್ಕರಿಸುತ್ತೇನೆ. ಪರಮಾತ್ಮನೇ! ನೀನು ನಿನ್ನ ಭಕ್ತರ ಇಚ್ಛೆಯನ್ನು ಪೂರ್ಣಗೊಳಿಸುವುದಕ್ಕಾಗಿ ಅದಕ್ಕೆ ಅನುರೂಪವಾದ ರೂಪಗಳನ್ನು ಹೊಂದುವೆ. ಅಂತಹ ಪರಮಪುರುಷನಾದ ನಿನಗೆ ಪುನಃ ನಮಸ್ಕರಿಸುತ್ತೇನೆ.

ನಮಃ ಪಙ್ಕಜನಾಭಾಯ ನಮಃ ಪಙ್ಕಜಮಾಲಿನೇ ।
ನಮಃ ಪಙ್ಕಜನೇತ್ರಾಯ ನಮಸ್ತೇ ಪಙ್ಕಜಾಙ್ಘ್ರಯೇ ॥೨೬॥

ನಾಭಿಯಲ್ಲಿ ಪ್ರಕಟಗೊಂಡ ಕಮಲವುಳ್ಳವನೇ! ಪದ್ಮನಾಭನೇ! ನಿನಗೆ ನಮಸ್ಕಾರಮಾಡುತ್ತೇನೆ. ಕಮಲಮಾಲಾಧರನೇ! ನಿನಗೆ ನಮಿಸುತ್ತೇನೆ. ಕಮಲಾಕ್ಷನೇ! ನಿನಗೆ ನಮೋ ನಮಃ. ಕಮಲದಂತೆ ಸುಕೋಮಲವಾದ ಪಾದಗಳನ್ನು ಹೊಂದಿರುವವನೇ! ಭಕ್ತಜನರಿಗೆ ಪರಮಾಶ್ರಯ

ವಾದ ಪಾದಾರವಿಂದಗಳನ್ನು ಹೊಂದಿರುವವನೇ! ನಿನಗೆ ಅನಂತಾನಂತ ನಮಸ್ಕಾರಗಳಿರಲಿ.

ನಮೋ ಭಗವತೇ ತುಭ್ಯಂ ವಾಸುದೇವಾಯ ವಿಷ್ಣವೇ ।
ಪುರುಷಾಯಾದಿಬೀಜಾಯ ಪೂರ್ಣಬೋಧಾಯ ತೇ ನಮಃ ॥೨೭॥

ನೀನು ಸಮಸ್ತವಾದ ಐಶ್ವರ್ಯ, ಧರ್ಮ, ಯಶಸ್ಸು, ಸಂಪತ್ತು, ಜ್ಞಾನ ಮತ್ತು ವೈರಾಗ್ಯಗಳಿಗೆ ಪರಮಾಶ್ರಯನಾಗಿರುವೆ. ನೀನು ಸರ್ವ ವ್ಯಾಪಕನಾಗಿದ್ದರೂ ವಸುದೇವನ ಮಗನಾಗಿ ಪ್ರಕಟವಾಗಿರುವೆ. ಅಂತಹ ನಿನಗೆ ನಮಸ್ಕರಿಸುತ್ತೇನೆ. ಪುರುಷೋತ್ತಮನಾಗಿರುವ, ಸಮಸ್ತಕಾರಣಗಳಿಗೂ ಪರಮಕಾರಣನಾಗಿರುವ, ಪೂರ್ಣಜ್ಞಾನಸ್ವರೂಪನಾದ, ಅಖಂಡ ಚಿನ್ಮಾತ್ರನಾದ ನಿನಗೆ ನಮಸ್ಕರಿಸುತ್ತೇನೆ.

ಅಜಾಯ ಜನಯಿತ್ರೇಽಸ್ಯ ಬ್ರಹ್ಮಣೇಽನನ್ತಶಕ್ತಯೇ ।
ಪರಾವರಾತ್ಮನ್ ಭೂತಾತ್ಮನ್ ಪರಮಾತ್ಮನ್ ನಮೋಽಸ್ತು ತೇ ॥೨೮॥

ನೀನು ಜನ್ಮರಹಿತನಾದರೂ ಈ ಜಗತ್ತಿಗೆ ಜನ್ಮದಾತನು ನೀನೇ ಆಗಿರುವೆ. ನಿನ್ನಿಂದಲೇ ಈ ಜಗತ್ತು ಹುಟ್ಟಿದೆ. ಅನಂತಶಕ್ತಿಗಳಿಗೂ ಪರಮಾಶ್ರಯವಾದ ಬ್ರಹ್ಮವೇ ನೀನಾಗಿರುವೆ. ಚೇತನಾಚೇತನಗಳ ಸ್ವರೂಪ ನಾಗಿರತಕ್ಕವನೇ! ಸಮಸ್ತಪ್ರಾಣಿಗಳಲ್ಲಿಯೂ ಆತ್ಮಸ್ವರೂಪನಾಗಿರತಕ್ಕವನೇ! ಪರಮಾತ್ಮನೇ! ನಿನಗೆ ನಮಸ್ಕಾರಮಾಡುತ್ತೇನೆ.

ತ್ವಂ ವೈ ಸಿಸೃಕ್ಷೂ ರಜ ಉತ್ಕಟಂ ಪ್ರಭೋ
ತಮೋ ನಿರೋಧಾಯ ಬಿಭರ್ಷ್ಯಸಂವೃತಃ ।
ಸ್ಥಾನಾಯ ಸತ್ತ್ವಂ ಜಗತೋ ಜಗತ್ಪತೇ
ಕಾಲಃ ಪ್ರಧಾನಂ ಪುರುಷೋ ಭವಾನ್ಪರಃ ॥೨೯॥

ಪ್ರಭುವೇ! ನೀನು ಜಗತ್ತನ್ನು ಸೃಷ್ಟಿಮಾಡಲು ಇಚ್ಛಿಸಿದಾಗ ಉತ್ಕಟವಾದ ರಜೋಗುಣವನ್ನು ಧರಿಸುವೆ. ಈ ಜಗತ್ತಿನ ಪ್ರಳಯವನ್ನು ಆಶಿಸಿದಾಗ ಉತ್ಕಟವಾದ ತಮೋಗುಣವನ್ನು ಧರಿಸುವೆ. ಜಗತ್ತನ್ನು ಪಾಲಿಸಲು ಇಚ್ಛಿಸಿದಾಗ ಉತ್ಕಟವಾದ ಸತ್ತ್ವಗುಣವನ್ನು ಧರಿಸುವೆ. ಬ್ರಹ್ಮ-ವಿಷ್ಣು-ರುದ್ರಸ್ವರೂಪನಾಗಿ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುವೆ.

ರಜಸ್ಸತ್ತ್ವತಮೋಗುಣಗಳ ಕಾರ್ಯರೂಪವಾದ ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡಿದರೂ ನೀನು ಈ ಗುಣಗಳಿಗೆ ಅಂಟಿಕೊಂಡಿರುವುದಿಲ್ಲ ; ಗುಣಾತೀತ ನಾಗಿರುವೆ. ನೀನು ಪ್ರಕೃತಿಯೂ ಪುರುಷನೂ ಆಗಿದ್ದು ಇವುಗಳ ಸಂಯೋಗ-ವಿಯೋಗಗಳಿಗೆ ಕಾರಣಭೂತನಾದ ಕಾಲಸ್ವರೂಪನೂ ಆಗಿರುವೆ. ಇವುಗಳಿಂದ ಬೇರೆಯವನೂ ಆಗಿರುವೆ.

ಅಹಂ ಪಯೋ ಜ್ಯೋತಿರಥಾನಿಲೋ ನಭೋ
ಮಾತ್ರಾಣಿ ದೇವಾ ಮನ ಇನ್ದ್ರಿಯಾಣಿ ।
ಕರ್ತಾ ಮಹಾನಿತ್ಯಖಿಲಂ ಚರಾಚರಂ
ತ್ವಯ್ಯದ್ವಿತೀಯೇ ಭಗವನ್ನಯಂ ಭ್ರಮಃ ॥೩೦॥

ಭಗವಂತ! ಭೂಮಿಯಾದ ನಾನು, ಜಲ, ಅಗ್ನಿ, ವಾಯು, ಆಕಾಶ, ಶಬ್ದಾದಿ ತನ್ಮಾತ್ರೆಗಳು, ಇಂದ್ರಿಯಾಭಿಮಾನೀದೇವತೆಗಳು, ಮನಸ್ಸು, ಅಂತಃಕರಣ, ದೇಹಾಭಿಮಾನಿಯಾದ ಜೀವ, ಮಹತ್ತತ್ತ್ವ, ಸಮಸ್ತವಾದ ಚರಾಚರಪ್ರಾಣಿಗಳು–ಇವೆಲ್ಲವೂ ಅದ್ವಿತೀಯರೂಪವಾದ ನಿನ್ನಲ್ಲಿ ಭ್ರಾಂತಿಯ ಕಾರಣದಿಂದ ಪ್ರತ್ಯೇಕವಾಗಿ ಕಾಣುತ್ತಿವೆ. ಆದರೆ ವಸ್ತುತಃ ಇವೆಲ್ಲವೂ ನಿನ್ನ ಸ್ವರೂಪಗಳೇ ಆಗಿವೆ.

ತಸ್ಯಾತ್ಮಜೋಽಯಂ ತವ ಪಾದಪಙ್ಕಜಂ
ಭೀತಃ ಪ್ರಪನ್ನಾರ್ತಿಹರೋಪಸಾದಿತಃ ।
ತತ್ಪಾಲಯೈನಂ ಕುರು ಹಸ್ತಪಙ್ಕಜಂ
ಶಿರಸ್ಯಮುಷ್ಯಾಖಿಲಕಲ್ಮಷಾಪಹಮ್ ॥೩೧॥

ಪ್ರಭುವೇ! ನಿನ್ನ ಪುತ್ರನಾದ ಭೌಮಾಸುರನ ಮಗ ಭಗದತ್ತನು ಅತ್ಯಂತ ಭಯಭೀತನಾಗಿದ್ದಾನೆ. ನಾನು ಇವನನ್ನು ಶರಣಾಗತಭಯ ಭಂಜಕವಾದ ನಿನ್ನ ಚರಣಾರವಿಂದಗಳ ಆಶ್ರಯವನ್ನು ಬೇಡಲು ಕರೆ ತಂದಿದ್ದೇನೆ. ದೇವದೇವ! ಸಮಸ್ತವಾದ ಪಾಪಗಳನ್ನೂ ನಿರಸನಗೊಳಿಸುವ ದಿವ್ಯವಾದ ನಿನ್ನ ಕರಕಮಲಗಳನ್ನು ಇವನ ತಲೆಯ ಮೇಲಿರಿಸಿ ಇವನನ್ನು ಕಾಪಾಡು.”

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಭೂದೇವಿಯು ಭಕ್ತಿಭಾವದಿಂದ ಅತ್ಯಂತ ವಿನಮ್ರಳಾಗಿ ಹೀಗೆ ಭಗವಾನ್ ಶ್ರೀಕೃಷ್ಣನನ್ನು ಪ್ರಾರ್ಥಿಸಲು ದಯಾಮಯನಾದ ಶ್ರೀಕೃಷ್ಣನು ಭಗದತ್ತನಿಗೆ ಅಭಯದಾನಮಾಡಿದನು. ಬಳಿಕ ಭೌಮಾಸುರನ ಸಂಪತ್ಸಮೃದ್ಧವಾಗಿದ್ದ, ಸುಂದರವಾದ ಮತ್ತು ವಿಶಾಲವಾದ ಅರಮನೆಯನ್ನು ಪ್ರವೇಶಿಸಿದನು. ಪ್ರಪಂಚದ ರಾಜರನ್ನು ಗೆದ್ದು ಭೌಮನು ಅಪಹರಿಸಿಕೊಂಡು ಬಂದು ತನ್ನ ಅಂತಃಪುರದಲ್ಲಿಟ್ಟುಕೊಂಡಿದ್ದ ಹದಿನಾರು ಸಾವಿರ ರಾಜಕನ್ಯೆಯರನ್ನೂ ಶ್ರೀಕೃಷ್ಣನು ಭೌಮನ ಅರಮನೆಯಲ್ಲಿ ನೋಡಿದನು. ನರವೀರನಾದ ಶ್ರೀಕೃಷ್ಣನನ್ನು ಅಂತಃಪುರದಲ್ಲಿದ್ದ ಆ ರಾಜಕನ್ಯೆಯರು ನೋಡಿದೊಡನೆಯೇ ವಿಮೋಹಿತರಾಗಿ, ಅದೃಷ್ಟವಶದಿಂದಲೇ ತಮಗೆ ದೊರಕಿದ ಅತ್ಯಂತ ಇಷ್ಟನಾದ ಶ್ರೀಕೃಷ್ಣನನ್ನು ಪತಿಯನ್ನಾಗಿ ಅವರೆಲ್ಲರೂ ಮನಸ್ಸಿನಿಂದಲೇ ವರಿಸಿಬಿಟ್ಟರು. ಆ ರಾಜಕುಮಾರಿಯರೆಲ್ಲರೂ ಪ್ರತ್ಯೇಕ-ಪ್ರತ್ಯೇಕವಾಗಿಯೇ ಭಗವಂತನನ್ನು ಹೀಗೆ ಪ್ರಾರ್ಥಿಸಿಕೊಂಡರು :

ಭೂಯಾತ್ ಪತಿರಯಂ ಮಹ್ಯಂ ಧಾತಾ ತದನುಮೋದತಾಮ್ ॥

"ನನಗೆ ಶ್ರೀಕೃಷ್ಣನೇ ಪತಿಯಾಗಲಿ. ನನ್ನ ಈ ಅಭಿಲಾಷೆಯನ್ನು ವಿಧಾತನು ಅನುಮೋದಿಸಲಿ. ಪೂರ್ಣಗೊಳಿಸಿಕೊಡಲಿ."–ಹೀಗೆ ಆ ಕನ್ಯೆಯರು ಪ್ರೇಮಭಾವದಿಂದ ತಮ್ಮ ಮನಸ್ಸನ್ನು ಶ್ರೀಕೃಷ್ಣನಲ್ಲಿಯೇ ಇರಿಸಿದರು. ಶ್ರೀಕೃಷ್ಣನು ಅವರೆಲ್ಲರಿಗೂ ಅಭಯದಾನಮಾಡಿ ಸುಂದರವಾಗಿದ್ದ ಮತ್ತು ನಿರ್ಮಲವಾಗಿದ್ದ ವಸ್ತ್ರಾಭರಣಗಳಿಂದ ಸಮಲಂಕೃತೆಯರಾಗಿದ್ದ ಅವರೆಲ್ಲರನ್ನೂ ಪಲ್ಲಕ್ಕಿಗಳಲ್ಲಿ ದ್ವಾರಕೆಗೆ ಕಳುಹಿಸಿದನು. ಅವರ ಜೊತೆಯಲ್ಲಿ ನರಕಾಸುರನಲ್ಲಿದ್ದ ಅತುಲವಾದ ಭಂಡಾರವನ್ನೂ, ರಥಾಶ್ವಗಳನ್ನೂ, ಐಶ್ವರ್ಯವನ್ನೂ ನರ-ಯಾನಗಳ ಮೂಲಕವಾಗಿ ಕಳುಹಿಸಿಕೊಟ್ಟನು. ಇಂದ್ರನ ಆನೆಯಾದ ಐರಾವತದ ವಂಶದಲ್ಲಿ ಹುಟ್ಟಿದ್ದ, ವೇಗಶಾಲಿಗಳಾಗಿದ್ದ, ನಾಲ್ಕು ದಂತಗಳನ್ನು ಹೊಂದಿದ್ದ ಅರುವತ್ತು ನಾಲ್ಕು ಬಿಳಿಯ ಆನೆಗಳನ್ನು ಪ್ರಾಗ್ಜ್ಯೋತಿಷಪುರದಿಂದ ಶ್ರೀಕೃಷ್ಣನು ದ್ವಾರಕೆಗೆ ಕಳುಹಿಸಿಕೊಟ್ಟನು.

ಬಳಿಕ ಶ್ರೀಕೃಷ್ಣನು ತನ್ನ ಪತ್ನಿಯಾದ ಸತ್ಯಭಾಮೆಯೊಡನೆ ಅಮರಾವತಿಯಲ್ಲಿದ್ದ ದೇವರಾಜನಾದ ಇಂದ್ರನ ಅರಮನೆಗೆ ಹೋದನು. ಅಲ್ಲಿ ಇಂದ್ರನು ತನ್ನ ಪತ್ನಿಯಾದ ಶಚೀದೇವಿಯೊಡನೆ ಸತ್ಯಭಾಮೆಯನ್ನೂ ಮತ್ತು ಶ್ರೀಕೃಷ್ಣನನ್ನೂ ಯಥೋಚಿತವಾಗಿ ಸತ್ಕರಿಸಿದನು. ಬಳಿಕ ಶ್ರೀಕೃಷ್ಣನು ಇಂದ್ರನ ತಾಯಿಯಾದ ಅದಿತಿದೇವಿಗೆ ಭೌಮನು ಅಪಹರಿಸಿಕೊಂಡು ಹೋಗಿದ್ದ ಅವಳ ಕುಂಡಲಗಳನ್ನು ಅರ್ಪಿಸಿದನು. ದೇವಲೋಕದಿಂದ ಹಿಂದಿರುಗುವ ಸಮಯದಲ್ಲಿ ಪತ್ನಿಯಾದ ಸತ್ಯಭಾಮೆಯ ಪ್ರೇರಣೆಯಂತೆ ನಂದನವನದಲ್ಲಿದ್ದ ಪಾರಿಜಾತವೃಕ್ಷವನ್ನು ಬುಡಸಹಿತವಾಗಿ ಕಿತ್ತು ಗರುಡನ ಮೇಲಿಟ್ಟುಕೊಂಡು ಹೊರಡಲನುವಾದಾಗ ತಡೆಯಲು ಬಂದ ಇಂದ್ರನೇ



ಮೊದಲಾದ ದೇವತೆಗಳನ್ನು ಯುದ್ಧದಲ್ಲಿ ಜಯಿಸಿ ದ್ವಾರಕಾಪಟ್ಟಣಕ್ಕೆ ಪಾರಿಜಾತವೃಕ್ಷದೊಡನೆ ಆಗಮಿಸಿದನು. ಭಗವಂತನು ಸ್ವರ್ಗದಿಂದ ತಂದ ಆ ಪಾರಿಜಾತವೃಕ್ಷವನ್ನು ಸತ್ಯಭಾಮೆಯ ಅರಮನೆಯ ಕೈದೋಟದಲ್ಲಿ ನೆಡಿಸಿದನು. ಪಾರಿಜಾತವೃಕ್ಷದಿಂದಾಗಿ ಕೈದೋಟದ ಶೋಭೆಯು ನೂರುಪಟ್ಟು ಹೆಚ್ಚಿತು. ಪಾರಿಜಾತಪುಷ್ಪದ ವಾಸನೆಯನ್ನೂ ಮತ್ತು ಮಕರಂದವನ್ನೂ ಅನುಸರಿಸಿಕೊಂಡು ಗಂಧಾಸವಲಂಪಟಗಳಾದ ಸಾವಿರಾರು ದುಂಬಿಗಳು ದೇವಲೋಕದಿಂದ ದ್ವಾರಕೆಗೆ ಬಂದುವು.

ಪರೀಕ್ಷಿತಮಹಾರಾಜ! ಧನಾಢ್ಯರ ಅನೈತಿಕವಾದ ವ್ಯವಹಾರವನ್ನಾದರೂ ನೋಡು :

ಯಯಾಚ ಆನಮ್ಯ ಕಿರೀಟಕೋಟಿಭಿಃ
ಪಾದೌ ಸ್ಪೃಶನ್ನಚ್ಯುತಮರ್ಥಸಾಧನಮ್ ।
ಸಿದ್ಧಾರ್ಥ ಏತೇನ ವಿಗೃಹ್ಯತೇ ಮಹಾ-
ನಹೋ ಸುರಾಣಾಂ ಚ ತಮೋ ಧಿಗಾಢ್ಯತಾಮ್ ॥೪೧॥

ಇಂದ್ರನಿಗೆ ಶ್ರೀಕೃಷ್ಣನಿಂದ ಯಾವುದಾದರೂ ಕೆಲಸವಾಗಬೇಕಾಗಿ ಬಂದಾಗ, ದುಷ್ಟರ ಸಂಹಾರವಾಗಬೇಕಾದಾಗ ಇಂದ್ರನು ನತಶಿರನಾಗಿ ತನ್ನ ಕಿರೀಟಗಳ ತುದಿಗಳಿಂದ ಅವನ ಚರಣಾರವಿಂದಗಳನ್ನು ಮುಟ್ಟಿ ಕೈಮುಗಿದು ಪ್ರಾರ್ಥಿಸಿಕೊಳ್ಳುತ್ತಾನೆ. ತನ್ನ ಕೆಲಸವಾದನಂತರ ಮಹಾಸ್ವಾರ್ಥಿಯಾದ ಇಂದ್ರನು ಪಾರಿಜಾತವೃಕ್ಷಕ್ಕಾಗಿ ಶ್ರೀಕೃಷ್ಣನೊಡನೆ ಕದನವಾಡಲು ಕೂಡ ಹಿಂದು-ಮುಂದು ನೋಡಲಿಲ್ಲ. ದೇವತೆಗಳಲ್ಲೂ ತಮೋಗುಣವಿರುವುದೇ ಈ ವೈಪರೀತ್ಯಕ್ಕೆ ಕಾರಣವಾಗಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಅವರ ಧನಾಢ್ಯತೆಯು ಅವರಿಂದ ಹೀಗೆ ಮಾಡಿಸುತ್ತದೆ. ವಿವೇಕವನ್ನು ಕಳೆಯುವ ಅಂತಹ ಧನಾಢ್ಯತೆಗೆ ಧಿಕ್ಕಾರವಿರಲಿ. ದ್ವಾರಕೆಗೆ ಬಂದ ಬಳಿಕ ಶ್ರೀಕೃಷ್ಣನು ಒಂದೇ ಮುಹೂರ್ತದಲ್ಲಿ ಪ್ರತ್ಯೇಕ-ಪ್ರತ್ಯೇಕವಾದ ಭವನಗಳಲ್ಲಿ ಬೇರೆ ಬೇರೆಯ ರಾಜಕನ್ಯೆಯರಿಗೆ ಅಭೀಷ್ಟವಾದ ರೂಪಗಳನ್ನು ಧರಿಸಿಕೊಂಡು ಒಂದೇ ಬಾರಿಗೆ (ಶಾಸ್ತ್ರೋಕ್ತವಾದ ವಿಧಿಗೆ ಅನುಸಾರವಾಗಿ) ಎಲ್ಲ ಕನ್ಯೆಯರ ಪಾಣಿಗ್ರಹಣವನ್ನೂ ಮಾಡಿದನು. ಸರ್ವಶಕ್ತಿವಂತನಾದ, ಅವಿನಾಶಿಯಾದ ಅದ್ಭುತಚರಿತ್ರನಾದ ಶ್ರೀಕೃಷ್ಣನು ಹೀಗೆ ಮಾಡಿದುದರಲ್ಲಿ ಅಚ್ಚರಿಯೇನಿದೆ? ಸಾಮಾನ್ಯರಿಂದ ಊಹಿಸಲು ಕೂಡ ಸಾಧ್ಯವಾಗದ ಅದ್ಭುತಕರ್ಮಗಳನ್ನು ಮಾಡುವ ಭಗವಾನ್ ಶ್ರೀಕೃಷ್ಣನು, ಏರುಪೇರುಗಳಿಲ್ಲದೆ ಸಮಾನವಾದ ಸಂಪತ್ತುಗಳಿಂದಲೂ, ಸಾಮಗ್ರಿಗಳಿಂದಲೂ ಸಮೃದ್ಧವಾಗಿದ್ದ ಅರಮನೆಗಳಲ್ಲಿ ವಾಸಿಸುತ್ತಿದ್ದ, ಲಕ್ಷ್ಮೀದೇವಿಯ ಅಂಶಭೂತರಾದ ಹದಿನಾರು ಸಾವಿರ ರಾಜಕನ್ಯೆಯರೊಡನೆ ಹದಿನಾರು ಸಾವಿರ ಶ್ರೀಕೃಷ್ಣರೂಪಗಳನ್ನೇ ಧರಿಸಿ, ತಾನು ಆತ್ಮಾನಂದದಲ್ಲಿ ಮಗ್ನನಾಗಿದ್ದರೂ, ಒಬ್ಬ ಸಾಮಾನ್ಯ

ಮನುಷ್ಯನಂತೆ ಗೃಹಸ್ಥಧರ್ಮವನ್ನು ಆಚರಿಸುತ್ತಾ ರಾಜಕುಮಾರಿಯರೆಲ್ಲ ರೊಡನೆಯೂ ವಿಹರಿಸುತ್ತಿದ್ದನು.

ಪರೀಕ್ಷಿತಮಹಾರಾಜ! ಬ್ರಹ್ಮನೇ ಮೊದಲಾದ ಮಹಾಮಹಾದೇವತೆ ಗಳು ಕೂಡ ಭಗವಂತನನ್ನು ಅರಿಯರು ಮತ್ತು ಅವನನ್ನು ಹೊಂದುವ ಮಾರ್ಗವನ್ನೂ ತಿಳಿಯರು. ಆದರೆ ರಮಾರಮಣನಾದ ಭಗವಾನ್ ಶ್ರೀಕೃಷ್ಣನನ್ನು ಆ ರಾಜಕನ್ಯೆಯರು ಪತಿಯನ್ನಾಗಿ ವರಿಸಿ ಬ್ರಹ್ಮಾದಿಗಳಿಗೂ ದುರ್ಲಭನಾದ ಶ್ರೀಕೃಷ್ಣನನ್ನು ಸೇರಿಬಿಟ್ಟರು. ನಿತ್ಯನಿರಂತರವಾಗಿ ಭಗವಂತ ನಲ್ಲಿ ಅವರ ಪ್ರೇಮವೂ ಅವನ ಸೇರುವಿಕೆಯಿಂದ ಆನಂದವೂ ವೃದ್ಧಿ ಹೊಂದುತ್ತಿದ್ದುವು. ಪ್ರೇಮದಿಂದ ಕೂಡಿದ ಮಂದಹಾಸದಿಂದಲೂ, ಮಧುರವಾದ ಕಡೆಗಣ್ಣಿನ ನೋಟದಿಂದಲೂ, ನೂತನಸಮಾಗಮ ದಿಂದಲೂ, ಪ್ರೇಮಭಾವವನ್ನು ಹೆಚ್ಚಿಸುವ ಲಜ್ಜೆಯಿಂದಲೂ, ಸರ್ವಪ್ರಕಾರ ಗಳಿಂದಲೂ ಆ ರಾಜಕನ್ಯೆಯರು ಸದಾಕಾಲದಲ್ಲಿಯೂ ಭಗವಂತನಾದ ಶ್ರೀಕೃಷ್ಣನ ಸೇವೆಯನ್ನು ಮಾಡುತ್ತಿದ್ದರು. ಎಲ್ಲ ರಾಜಕುಮಾರಿಯರ ಜೊತೆ ಯಲ್ಲೂ ಅವರ ಮತ್ತು ಶ್ರೀಕೃಷ್ಣನ ಸೇವೆಗಾಗಿ ನೂರಾರು ದಾಸಿಯರು ಇರುತ್ತಿದ್ದರೂ ಶ್ರೀಕೃಷ್ಣನು ಅವರ ಮನೆಗೆ ಬಂದಾಗ ಶ್ರೀಕೃಷ್ಣನ ಸೇವೆಯನ್ನು ರಾಜಕನ್ಯೆಯರು ದಾಸಿಯರಿಗೆ ಬಿಟ್ಟುಕೊಡುತ್ತಿರಲಿಲ್ಲ. ಶ್ರೀಕೃಷ್ಣನು ತಮ್ಮ ಮನೆಗೆ ಬರುತ್ತಿರುವನೆಂಬುದು ತಿಳಿದೊಡನೆಯೇ ಬಾಗಿಲಲ್ಲಿ ನಿಂತು ನಗುಮುಖದಿಂದ ಅವನನ್ನು ಸ್ವಾಗತಿಸುವರು. ಕುಳಿತುಕೊಳ್ಳಲು ಶ್ರೇಷ್ಠ ವಾದ ಆಸನವನ್ನು ಕೊಡುವರು. ಉತ್ತಮಸಾಮಗ್ರಿಗಳಿಂದ ಪೂಜಿಸುವರು. ಕಾಲುಗಳನ್ನು ತೊಳೆಯುವರು. ತಾಂಬೂಲವನ್ನು ಕೊಡುವರು. ಮೃದು ವಾದ ಕೈಗಳಿಂದ ಶ್ರೀಕೃಷ್ಣನ ಕರಕಮಲಗಳನ್ನೂ ಪಾದಾರವಿಂದಗಳನ್ನೂ ಒತ್ತುತ್ತಾ ಅವನ ಆಯಾಸವನ್ನು ಪರಿಹರಿಸುವರು. ಬೀಸಣಿಗೆಯಿಂದ ಗಾಳಿಬೀಸುವರು. ಗಂಧವನ್ನು ಪೂಸುವರು. ಸುಗಂಧಯುಕ್ತವಾದ ಪುಷ್ಪ ಮಾಲೆಗಳನ್ನು ಕೊರಳಿಗೆ ಹಾಕುವರು. ಕೇಶಾಲಂಕಾರಮಾಡುವರು. ಹಾಸಿಗೆಯನ್ನು ಹಾಸುವರು. ಸ್ನಾನಮಾಡಿಸುವರು. ರುಚಿಕರವಾದ ಭಕ್ಷ್ಯ-ಭೋಜ್ಯಗಳಿಂದ ಯುಕ್ತವಾದ ಭೋಜನವನ್ನು ತಾವೇ ಸಿದ್ಧಪಡಿಸಿ ತಮ್ಮ

ಕೈಯಿಂದಲೇ ಭಗವಂತನಾದ ಶ್ರೀಕೃಷ್ಣನಿಗೆ ಊಟಮಾಡಿಸುವರು. ಇವೇ ಮುಂತಾಗಿ ರಾಜಕನ್ಯೆಯರು ಭಕ್ತಿಯಿಂದಲೂ, ಶ್ರದ್ಧೆಯಿಂದಲೂ ಶ್ರೀಕೃಷ್ಣನ ದಾಸ್ಯವನ್ನು ಮಾಡುತ್ತಾ ಕೃತಾರ್ಥರಾದೆವೆಂಬ ಭಾವನೆಯಿಂದ ಆನಂದ ತುಂದಿಲರಾಗಿರುತ್ತಿದ್ದರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೫೯ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೬೦ನೆಯ ಅಧ್ಯಾಯ

ಶ್ರೀಕೃಷ್ಣ-ರುಕ್ಮಿಣಿಯರ ಸಂವಾದ

ಶ್ರೀಶುಕಮುನಿಗಳು ಹೇಳುತ್ತಾರೆ :

ಕರ್ಹಿಚಿತ್ ಸುಖಮಾಸೀನಂ ಸ್ವತಲ್ಪಸ್ಥಂ ಜಗದ್ಗುರುಮ್ ।
ಪತಿಂ ಪರ್ಯಚರದ್ಭೈಷ್ಮೀ ವ್ಯಜನೇನ ಸಖೀಜನೈಃ ॥೧॥

ಪರೀಕ್ಷಿತಮಹಾರಾಜ! ಹೀಗೆಯೇ ಇರುತ್ತಿರಲಾಗಿ ಒಂದಾನೊಂದು ದಿನ ಸಮಸ್ತಜಗತ್ತಿಗೂ ಗುರುವಾದ ಭಗವಾನ್ ಶ್ರೀಕೃಷ್ಣನು ರುಕ್ಮಿಣಿಯ ಹಾಸಿಗೆಯ ಮೇಲೆ ಸುಖವಾಗಿ ಕುಳಿತಿದ್ದನು. ರುಕ್ಮಿಣೀದೇವಿಯು ತನ್ನ ಸಖೀಜನರೊಡನೆ ಸ್ವಾಮಿಗೆ ಗಾಳಿಯನ್ನು ಬೀಸುತ್ತಾ ಉಪಚರಿಸುತ್ತಿದ್ದಳು. ಸರ್ವಶಕ್ತಿವಂತನಾದ ಭಗವಂತನು ಆಡಾಡುತ್ತಲೇ ಈ ವಿಶ್ವವನ್ನು ಸೃಷ್ಟಿಸಿ ರಕ್ಷಿಸಿ ಕಡೆಯಲ್ಲಿ ಇದರ ಪ್ರಳಯವನ್ನೂ ಮಾಡಿಬಿಡುವನು. ಹುಟ್ಟು-ಸಾವುಗಳಿಲ್ಲದ ಆ ಪ್ರಭುವು ತಾನೇ ಕಲ್ಪಿಸಿದ ಧರ್ಮಮರ್ಯಾದೆಗಳ ರಕ್ಷಣೆಗಾಗಿ ಯದುವಂಶದಲ್ಲಿ ಅವತರಿಸಿದ್ದನು.

ಪರೀಕ್ಷಿತಮಹಾರಾಜ! ರುಕ್ಮಿಣಿಯ ಆ ಅಂತಃಪುರವು ಬಹು ಸುಂದರವಾಗಿದ್ದಿತು. ವಸ್ತ್ರದಿಂದ ಕಲ್ಪಿಸಿದ್ದ ಮೇಲುಛಾವಣಿಯಲ್ಲಿ ಥಳ-ಥಳಿಸುವ ಮುತ್ತಿನ ಸರಗಳನ್ನು ತೂಗುಹಾಕಿದ್ದರು. ಮಣಿಮಯವಾದ ದೀಪಗಳು ಜಗ-ಜಗಿಸುತ್ತಿದ್ದುವು. ದುಂಬಿಗಳ ನಿನಾದದಿಂದ ಕೂಡಿದ ಮಲ್ಲಿಗೇಹೂವಿನ ಹಾರಗಳಿಂದಲೂ ಮತ್ತು ಪುಷ್ಪಗಳಿಂದಲೂ ಅಂತಃಪುರವು ಸಮಲಂಕೃತವಾಗಿದ್ದಿತು. ಪೂರ್ಣಚಂದ್ರನ ಶುಭ್ರವಾದ ಕಿರಣಗಳು ಕಿಟಕಿಗಳ ಮೂಲಕವಾಗಿ

ಅಂತಃಪುರದಲ್ಲಿ ಹರಡಿದ್ದುವು. ಕೈದೋಟದಲ್ಲಿದ್ದ ಪಾರಿಜಾತಪುಷ್ಪಗಳ ಮೇಲೆ ಗಾಳಿಯು ಬೀಸಿ ಅದರ ಸುಗಂಧವನ್ನು ಮೆಲ್ಲ-ಮೆಲ್ಲನೆ ಅಂತಃಪುರಕ್ಕೆ ಒಯ್ಯುತ್ತಿದ್ದಿತು. ಅಂತಃಪುರದಲ್ಲಿ ಅಲ್ಲಲ್ಲಿ ಹತ್ತಿಸಿಟ್ಟಿದ್ದ ಅಗುರು-ಧೂಪಗಳ ವಾಸನೆಯು ಕಿಟಕಿಗಳ ರಂಧ್ರದ ಮೂಲಕವಾಗಿ ಹೊರಗೆ ಹೋಗಿ ಹರಡು ತ್ತಿದ್ದಿತು. ಹೀಗಾಗಿ ಅಂತಃಪುರದ ಒಳಭಾಗವೂ ಮತ್ತು ಹೊರಭಾಗವೂ ಎಲ್ಲೆಲ್ಲಿಯೂ ಸುಗಂಧಮಯವಾಗಿದ್ದಿತು. ಅಂತಹ ಘಮ-ಘಮಿಸುತ್ತಿದ್ದ ಭವ್ಯವಾದ ಅಂತಃಪುರದಲ್ಲಿ ಹಾಲಿನ ನೊರೆಯಂತೆ ಶುಭ್ರವಾಗಿದ್ದ ಹಂಸ ತೂಲಿಕಾತಲ್ಪದಲ್ಲಿ ಆನಂದತುಂದಿಲನಾಗಿ ಶ್ರೀಕೃಷ್ಣನು ವಿರಾಜಿಸುತ್ತಿದ್ದನು. ರುಕ್ಮಿಣೀದೇವಿಯು ತ್ರಿಲೋಕಾಧೀಶನನ್ನು ತನ್ನ ಪತಿಯನ್ನಾಗಿ ಮಾಡಿಕೊಂಡು ಅವನ ಸೇವೆಯನ್ನು ಮಾಡುತ್ತಿದ್ದಳು. ಲಕ್ಷ್ಮೀಸ್ವರೂಪಿಣಿಯಾದ ರುಕ್ಮಿಣೀದೇವಿಯು ರತ್ನಖಚಿತವಾದ ಹಿಡಿಯಿಂದ ಕೂಡಿ ಮನೋಹರ ವಾಗಿದ್ದ ಚಾಮರವನ್ನು ಸಖಿಯ ಕೈಯಿಂದ ತೆಗೆದುಕೊಂಡು ತಾನೇ ಶ್ರೀಕೃಷ್ಣನಿಗೆ ಬೀಸುತ್ತಾ ಅವನ ಸೇವೆಯನ್ನು ಮಾಡುತ್ತಿದ್ದಳು.

ಹಾಗೆ ಗಾಳಿಯನ್ನು ಬೀಸುತ್ತಿದ್ದಾಗ ಆಕೆಯ ರತ್ನಖಚಿತವಾದ ಕೈಕಡಗಗಳು ಮತ್ತು ಮಣಿಗಳು ಝುಣ-ಝುಣ–ಎಂದು ಶಬ್ದಮಾಡುತ್ತಿದ್ದುವು. ವಸ್ತ್ರದೊಳಗೆ ನಿಗೂಢವಾಗಿದ್ದ ಕುಚಗಳ ಕುಂಕುಮದಿಂದ ಅವಳ ರತ್ನಹಾರಗಳು ಕೆಂಪೇರಿ ಗಾಳಿಬೀಸುವಾಗ ಸ್ಪಂದಿಸುತ್ತಿದ್ದ ಅವುಗಳ ಕಾಂತಿಯು ಹೊರಸೂಸುತ್ತಿದ್ದಿತು. ಸೊಂಟದ ಮೇಲಿದ್ದ ರತ್ನಖಚಿತವಾದ ಡಾಬಿನಿಂದ ಅತ್ಯಂತ ಶೋಭಾಯಮಾನಳಾಗಿ ಕಾಣುತ್ತಿದ್ದ ರುಕ್ಮಿಣಿಯು ವಜ್ರದ ಉಂಗುರಗಳಿಂದಲೂ ಕೈಬಳೆಗಳಿಂದಲೂ ಹೊಳೆಯುತ್ತಿದ್ದ ಕೈಯಲ್ಲಿ ರತ್ನಖಚಿತವಾದ ಹಿಡಿಯಿಂದ ಕೂಡಿದ್ದ ಬೀಸಣಿಗೆಯನ್ನು ಹಿಡಿದು ಶ್ರೀಕೃಷ್ಣ ನಿಗೆ ಗಾಳಿಬೀಸುತ್ತಿದ್ದಳು.

ಕ್ರೀಡಾರ್ಥವಾಗಿ ಮನುಷ್ಯರೂಪವನ್ನು ಧರಿಸಿ ಬಂದಿರುವ ತನಗೆ ಅನು ರೂಪಳಾಗಿರುವ, ಅನನ್ಯಶರಣಳಾಗಿರುವ, ಕಡುಚೆಲುವೆಯಾದ, ಲಕ್ಷ್ಮಿಯ ಸ್ವರೂಪಳೇ ಆಗಿರುವ, ಮುಂಗುರುಳುಗಳಿಂದಲೂ, ಕುಂಡಲಗಳಿಂದಲೂ, ಕನಕಹಾರಗಳಿಂದಲೂ ವಿರಾಜಿಸುತ್ತಿದ್ದ ಮುಖದಲ್ಲಿ ಮಂದಹಾಸವೆಂಬ

ಅಮೃತವನ್ನು ಸುರಿಸುತ್ತಿರುವ ರುಕ್ಮಿಣೀದೇವಿಯನ್ನು ನೋಡಿ ಸುಪ್ರೀತನಾದ ಶ್ರೀಹರಿಯು ಅವಳಿಗೆ ಹೇಳಿದನು :

"ರಾಜಕುಮಾರಿ! ಐಶ್ವರ್ಯದಲ್ಲಿ ಲೋಕಪಾಲೋಪಮರಾಗಿದ್ದ, ಹೆಚ್ಚು ಪ್ರಭಾವಶಾಲಿಗಳಾಗಿದ್ದ, ಶ್ರೀಮಂತರಾಗಿದ್ದ, ರೂಪ, ಔದಾರ್ಯ ಮತ್ತು ಬಲದಲ್ಲಿ ಅಧಿಕರಾಗಿದ್ದ ಹಲವಾರು ರಾಜರು ನಿನ್ನನ್ನು ವಿವಾಹವಾಗಲು ಅಪೇಕ್ಷಿಸಿದ್ದರು. ನಿನ್ನ ತಂದೆ ಮತ್ತು ಅಣ್ಣಂದಿರು ನಿನ್ನನ್ನು ಶಿಶುಪಾಲನಿಗೆ ಕೊಟ್ಟು ಮದುವೆಮಾಡುವುದಾಗಿ ವಾಗ್ದಾನವನ್ನೂ ಮಾಡಿ ಬಿಟ್ಟಿದ್ದರು. ಕಾಮೋನ್ಮತ್ತರಾಗಿದ್ದ ಶಿಶುಪಾಲನೇ ಮೊದಲಾದವರು ನಿನ್ನನ್ನು ಯಾಚಿಸಲೂ ಬಂದಿದ್ದರು. ಅಂತಹವರೆಲ್ಲರನ್ನೂ ಪರಿತ್ಯಜಿಸಿ ಅಸಮಾನನಾದ, ಐಶ್ವರ್ಯದಲ್ಲಾಗಲೀ ಪ್ರತಿಷ್ಠೆಯಲ್ಲಾಗಲೀ ನಿಮಗೆ ಸರಿದೂಗದಿರುವ ನನ್ನನ್ನೇಕೆ ನೀನು ಮದುವೆಯಾದೆ?

ಸುಂದರಿ! ನಮ್ಮ ಅವಸ್ಥೆಯನ್ನಾದರೂ ನೋಡು. ಜರಾಸಂಧನೇ ಮೊದಲಾದ ಶತ್ರುರಾಜರಿಗೆ ಹೆದರಿ ನಾವು ಸಮುದ್ರದಲ್ಲಿ ಮನೆ ಮಾಡಿ ಕೊಂಡಿದ್ದೇವೆ. ಬಲಿಷ್ಠರಾದವರೊಡನೆ ನಾವು ವೈರವನ್ನು ಕಟ್ಟಿಕೊಂಡಿದ್ದೇವೆ. ಮೇಲಾಗಿ ನಾವು ರಾಜಸಿಂಹಾಸನದ ಮೇಲಿನ ಅಧಿಕಾರದಿಂದಲೂ ವಂಚಿತರಾಗಿದ್ದೇವೆ. ಸುಂದರವಾದ ಹುಬ್ಬುಗಳುಳ್ಳವಳೇ! ಅಸ್ಪಷ್ಟವಾದ ಮಾರ್ಗವುಳ್ಳ, ಲೋಕದ ಜನರ ಮಾರ್ಗವನ್ನೂ ಅನುಸರಿಸದೆ ವಿಲಕ್ಷಣವಾದ ಮಾರ್ಗವನ್ನು ಹಿಡಿದಿರುವ ನಮ್ಮಂತಹ ಪುರುಷರ ಮಾರ್ಗವನ್ನು ಹಿಡಿದ ಸ್ತ್ರೀಯರು ಪ್ರಾಯಶಃ ಕಷ್ಟಕ್ಕೆ ಒಳಗಾಗುತ್ತಾರೆ.

ನಿಷ್ಕಿಞ್ಚನಾ ವಯಂ ಶಶ್ವನ್ನಿಷ್ಕಿಞ್ಚನಜನಪ್ರಿಯಾಃ ।
ತಸ್ಮಾತ್ ಪ್ರಾಯೇಣ ನ ಹ್ಯಾಢ್ಯಾ ಮಾಂ ಭಜನ್ತಿ ಸುಮಧ್ಯಮೇ ॥

ಸುಂದರವಾದ ನಡುವುಳ್ಳವಳೇ! ನಾವು ಯಾವಾಗಲೂ ಬಡವರೇ. ಆದುದರಿಂದಲೇ ನಮಗೆ ಬಡಜನರನ್ನು ಕಂಡರೆ ಬಹಳ ಪ್ರೀತಿ. ಈ ಕಾರಣ ದಿಂದಲೇ ಪ್ರಾಯಶಃ ಧನಿಕರಾದವರು ನನ್ನನ್ನು ಆಶ್ರಯಿಸುವುದಿಲ್ಲ.

ಯಯೋರಾತ್ಮಸಮಂ ವಿತ್ತಂ ಜನ್ಮೈಶ್ವರ್ಯಾಕೃತಿರ್ಭವಃ ।
ತಯೋರ್ವಿವಾಹೋ ಮೈತ್ರೀ ಚ ನೋತ್ತಮಾಧಮಯೋಃ ಕ್ವಚಿತ್ ॥

ಧನ, ಕುಲ, ಐಶ್ವರ್ಯ, ಸೌಂದರ್ಯ, ಮುಂದಿನ ಭವಿಷ್ಯತ್ತು ಇವು ಅನ್ಯೋನ್ಯವಾಗಿ ಯಾವ ಇಬ್ಬರಲ್ಲಿ ಸಮವಾಗಿರುವುದೋ ಅವರಲ್ಲಿ ವಿವಾಹದ ಸಂಬಂಧವಾಗಬಹುದು ; ಮೈತ್ರಿಯೂ ಬೆಳೆಯಬಹುದು. ಅದು ಹೊರತಾಗಿ ಉತ್ತಮರಿಗೂ, ಅಧಮರಿಗೂ ನಡುವೆ ಯಾವವಿಧವಾದ ವಿವಾಹಸಂಬಂಧವಾಗಲಿ, ಮೈತ್ರಿಯಾಗಲೀ ಎಲ್ಲಿಯೂ ಊರ್ಜಿತವಾಗ ಲಾರದು.

ವೈದರ್ಭ್ಯೇತದವಿಜ್ಞಾಯ ತ್ವಯಾದೀರ್ಘಸಮೀಕ್ಷಯಾ ।
ವೃತಾ ವಯಂ ಗುಣೈರ್ಹೀನಾ ಭಿಕ್ಷುಭಿಃ ಶ್ಲಾಘಿತಾ ಮುಧಾ ॥೧೬॥

ವಿದರ್ಭರಾಜಕುಮಾರಿಯೇ! ನೀನು ದೂರದೃಷ್ಟಿಯಿಲ್ಲದವಳಾದ ಕಾರಣ ಈ ಎಲ್ಲ ವಿಷಯಗಳನ್ನೂ ಸುದೀರ್ಘವಾಗಿ ವಿವೇಚಿಸಹೋಗದೆ ನನ್ನನ್ನು ವರಿಸಿಬಿಟ್ಟೆ. ನಿಶ್ಚಯವಾಗಿ ಹೇಳುವುದಾದರೆ ನಾವು ನಿರ್ಗುಣರು. ಯಾವ ಗುಣಗಳೂ ಇಲ್ಲದವರು. ಭಿಕ್ಷುಗಳಿಂದ ವ್ಯರ್ಥವಾಗಿ ಶ್ಲಾಘಿಸಲ್ಪಡ ತಕ್ಕವರು. (ಆ ಬಡವರ ವ್ಯರ್ಥವಾದ ಕೀರ್ತನಾಲಾಪನಗಳನ್ನೇ ಕೇಳಿ ನೀನು ಗುಣಹೀನನನ್ನು ಮೆಚ್ಚಿ ಮದುವೆಯಾಗಿಬಿಟ್ಟೆ.)

ಅಥಾತ್ಮನೋಽನುರೂಪಂ ವೈ ಭಜಸ್ವ ಕ್ಷತ್ರಿಯರ್ಷಭಮ್ ।
ಯೇನ ತ್ವಮಾಶಿಷಃ ಸತ್ಯಾ ಇಹಾಮುತ್ರ ಚ ಲಪ್ಸ್ಯಸೇ ॥೧೭॥

ದೇವೀ! ಈಗಲೂ ಕಾಲವು ಮಿಂಚಿಹೋಗಿಲ್ಲ. ನೀನು ನಿನಗೆ ಅನು ರೂಪನಾದ, ಶ್ರೇಷ್ಠನಾದ ಕ್ಷತ್ರಿಯರಾಜಕುಮಾರನನ್ನು ಈಗಲೂ ಮದುವೆ ಯಾಗಬಹುದು. ಇದರಿಂದ ನಿನ್ನ ಇಹಲೋಕ-ಪರಲೋಕಗಳ ಸಮಸ್ತವಾದ ಆಸೆ-ಆಕಾಂಕ್ಷೆಗಳೂ ಈಡೇರುತ್ತವೆ. ಸುಂದರಿಯೇ! ಶಿಶುಪಾಲ, ಶಾಲ್ವ, ಜರಾಸಂಧ, ದಂತವಕ್ತ್ರ–ಇವರೇ ಮೊದಲಾದ ನರಪತಿಗಳೂ ನಿನ್ನ ಅಣ್ಣ ನಾದ ರುಕ್ಮಿಯೂ ನನ್ನನ್ನು ದ್ವೇಷಿಸುತ್ತಾರೆಂಬ ವಿಷಯವು ನಿನಗೂ ತಿಳಿದೇ ಇದೆ. ನಾನು ಹೇಳಿದಂತೆ ಮಾಡಿದರೆ ಅವರಿಗೂ ತೃಪ್ತಿಯಾಗಬಹುದು. ಹಾಗಾದರೆ ನನ್ನನ್ನು ಅಪಹರಿಸಿಕೊಂಡು ಬಂದಿದ್ದೇಕೆಂದು ನೀನು ಕೇಳ ಬಹುದು. ಅಸತ್ಪುರುಷರ ಬಲವನ್ನು ಅಪಹರಿಸುವುದೇ ನನ್ನ ಮುಖ್ಯ ಧ್ಯೇಯವಾಗಿದೆ. ಜರಾಸಂಧನೇ ಮೊದಲಾದವರು ವೀರ್ಯಮದದಿಂದ

ಕುರುಡರಾಗಿಬಿಟ್ಟಿದ್ದರು. ಮಹಾಗರ್ವಿಷ್ಠರಾಗಿದ್ದರು. ಅಂತಹ ದುಷ್ಟರಾಜರ ಗರ್ವವನ್ನು ಮುರಿಯುವುದಕ್ಕೋಸ್ಕರವೇ ಅವರ ಸಮಕ್ಷದಲ್ಲಿಯೇ ನಾನು ನಿನ್ನನ್ನು ಅಪಹರಿಸಿಕೊಂಡು ಬಂದೆನು. ನಿನ್ನನ್ನು ಮದುವೆಯಾಗಬೇಕೆಂಬುದು ನಿನ್ನನ್ನು ಕರೆತಂದ ನಮ್ಮ ಉದ್ದೇಶವಲ್ಲ.

ಉದಾಸೀನಾ ವಯಂ ನೂನಂ ನ ಸ್ತ್ರ್ಯಪತ್ಯಾರ್ಥಕಾಮುಕಾಃ ।
ಆತ್ಮಲಬ್ಧ್ಯಾಸ್ಮಹೇ ಪೂರ್ಣಾ ಗೇಹಯೋರ್ಜ್ಯೋತಿರಕ್ರಿಯಾಃ ॥೨೦॥

ನಾವು ನಿಶ್ಚಯವಾಗಿಯೂ ಉದಾಸೀನರು. ನಮಗೆ ಸಂಸಾರದ ಲಾಲಸೆಯಿಲ್ಲ. ಪತ್ನೀ-ಪುತ್ರರನ್ನು ಪಡೆದುಕೊಳ್ಳಬೇಕೆಂಬ ಕಾಮನೆಯೂ ನಮಗಿಲ್ಲ. ಧನದ ಲಾಲಸೆಯಿಲ್ಲ. ಈ ಮನೆಯಲ್ಲಿಯೂ ದೇಹವೆಂಬ ಮನೆಯಲ್ಲಿಯೂ ದೀಪದಂತೆ ಸಾಕ್ಷೀಭೂತರಾಗಿ ನಿಷ್ಕ್ರಿಯರಾಗಿ ಕುಳಿತಿದ್ದೇವೆ. ಆತ್ಮಸಾಕ್ಷಾತ್ಕಾರವನ್ನು ಪಡೆದು ಪೂರ್ಣಕಾಮರಾಗಿ ಕೃತಕೃತ್ಯರಾಗಿದ್ದೇವೆ."

ಪರೀಕ್ಷಿತಮಹಾರಾಜ! ಶ್ರೀಕೃಷ್ಣನು ರುಕ್ಮಿಣಿಯನ್ನು ಕ್ಷಣಮಾತ್ರವಾದರೂ ಬಿಟ್ಟಿರುತ್ತಿರಲಿಲ್ಲ. ಇದರಿಂದಾಗಿ ರುಕ್ಮಿಣೀದೇವಿಗೆ ತಾನೇ ಎಲ್ಲ ಪತ್ನಿಯರಿಗಿಂತಲೂ ಅತ್ಯಂತಪ್ರಿಯಳಾದವಳೆಂಬ ದುರಭಿಮಾನವು ಮೂಡಿ ಬಂದಿದ್ದಿತು. ಅದನ್ನು ಕಳೆಯುವ ಸಲುವಾಗಿ ಶ್ರೀಕೃಷ್ಣನು ಇಷ್ಟುಮಾತ್ರ ಹೇಳಿ ಸುಮ್ಮನಾದನು.

ರುಕ್ಮಿಣೀದೇವಿಗೆ ಇಂತಹ ಮಾತು ಅನಿರೀಕ್ಷಿತವಾಗಿತ್ತು. ಹಿಂದೆಂದೂ ಇಂತಹ ಮಾತುಗಳನ್ನು ತನ್ನ ಪತಿದೇವನಿಂದ ಅವಳು ಕೇಳಿರಲಿಲ್ಲ. ಆಕೆಯು ತನಗೆ ಪರಮಪ್ರಿಯನಾದ ತ್ರಿಲೋಕೇಶ್ವರನಾದ ಶ್ರೀಕೃಷ್ಣನಿಂದ ಇಂತಹ ಮಾತುಗಳನ್ನು ಕೇಳಿದಳು. ಈ ಮಾತುಗಳನ್ನು ಕೇಳಿ ಅವಳಿಗೆ ಬಹಳ ಭಯವಾಯಿತು. ಹೃದಯವು ನಡುಗತೊಡಗಿತು. ಅವಳು ಬಿಕ್ಕಿ-ಬಿಕ್ಕಿ ಅಳುತ್ತಾ ಚಿಂತೆಯೆಂಬ ಅಗಾಧವಾದ ಸಾಗರದಲ್ಲಿ ಮುಳುಗಿಹೋದಳು. ಆ ಸಮಯದಲ್ಲಿ ರುಕ್ಮಿಣಿಯು ಕಮಲಪುಷ್ಪದಂತೆ ಸುಕೋಮಲವಾದ ಮತ್ತು ಉಗುರುಗಳ ಕೆಂಪಿನಿಂದ ಸ್ವಲ್ಪ ಕೆಂಪಾಗಿ ಕಾಣುತ್ತಿದ್ದ ಕಾಲಿನಿಂದ ಭೂಮಿಯನ್ನು ಕೆರೆಯುತ್ತಾ, ಕಾಡಿಗೆಯಿಂದ ಕಪ್ಪಾದ ಕಣ್ಣೀರಿನಿಂದ ಕುಂಕುಮಾಂಕಿತವಾದ ಸ್ತನಗಳನ್ನು ನೆನೆಸುತ್ತಾ ತಲೆಯನ್ನು ತಗ್ಗಿಸಿಕೊಂಡು

ನಿಂತಿದ್ದಳು. ದುಃಖದ ಕಾರಣದಿಂದಾಗಿ ಅವಳ ಕಂಠವು ಬಿಗಿದು ಮಾತನಾಡಲಾಗುತ್ತಿರಲಿಲ್ಲ. ಅತ್ಯಂತವ್ಯಥೆ, ಭಯ ಮತ್ತು ಶೋಕದ ಕಾರಣಗಳಿಂದಾಗಿ ರುಕ್ಮಿಣಿಗೆ ವಿಚಾರಶಕ್ತಿಯೂ ಲುಪ್ತವಾಗಿಬಿಟ್ಟಿತು. ಪತಿಯ ವಿಯೋಗವು ಸಂಭವಿಸಬಹುದೆಂಬ ಕಾರಣದಿಂದ ಕ್ಷಣಮಾತ್ರದಲ್ಲಿ ಅವಳು ಕೃಶಳಾಗಿ ಹೋದಳು. ಕಂಕಣದಲ್ಲಿದ್ದ ಬಳೆಗಳು ಕಳಚಿಬಿದ್ದುವು. ಹಿಡಿದಿದ್ದ ಬೀಸಣಿಗೆಯೂ ಕೈಯಿಂದ ಜಾರಿತು. ತಲೆಯು ಕೆದರಿತು. ಕಳವಳಗೊಂಡ ಬುದ್ಧಿಯಿಂದ ಕೂಡಿದ್ದ ಆಕೆಯ ದೇಹವು–ಬಿರುಗಾಳಿಗೆ ಸಿಕ್ಕಿದ ಬಾಳೆಯ ಗಿಡವು ಬುಡಮೇಲಾಗಿ ಕೆಳಗೆಬೀಳುವಂತೆ–ಪ್ರಜ್ಞಾಹೀನವಾಗಿ ಕೆಳಕ್ಕೆ ಬಿದ್ದುಬಿಟ್ಟಿತು.

ಹಾಸ್ಯದ ಹಿರಿಮೆಯನ್ನರಿಯದ ಪ್ರೇಯಸಿಯ ಪ್ರೇಮಪಾಶದ ದಾರ್ಢ್ಯವನ್ನು ಕಂಡು, ಪರಮಕಾರುಣಿಕನಾದ ಶ್ರೀಕೃಷ್ಣನು ರುಕ್ಮಿಣಿಯ ವಿಷಯದಲ್ಲಿ ಬಹಳವಾಗಿ ಮರುಕಗೊಂಡು, ಮರುಕ್ಷಣದಲ್ಲಿಯೇ ಹಂಸತೂಲಿಕಾತಲ್ಪದಿಂದ ಕೆಳಕ್ಕಿಳಿದು ತನ್ನ ನಾಲ್ಕು ಕೈಗಳಿಂದಲೂ ಪ್ರೇಯಸಿಯನ್ನು ಹಿಡಿದು ಮೇಲೆತ್ತಿ, ಆಕೆಯ ಕೆದರಿಹೋಗಿದ್ದ ಕೂದಲುಗಳನ್ನು ಸರಿಪಡಿಸಿ ಮುಡಿಗಟ್ಟಿ, ಕಮಲದಂತೆ ಸುಕೋಮಲವಾಗಿದ್ದ ತನ್ನ ಕೈಗಳಿಂದ ಅವಳ ಮುಖಕಮಲವನ್ನು ಒರೆಸಿದನು. ಅನನ್ಯಪ್ರೇಮಭಾವದಿಂದಿದ್ದ, ಸಾಧ್ವಿಯಾದ ರುಕ್ಮಿಣೀದೇವಿಯ ಕಂಬನಿದುಂಬಿದ್ದ ಕಣ್ಣುಗಳನ್ನೂ, ಅಶ್ರುಧಾರೆಗಳಿಂದ ತೋಯ್ದುಹೋಗಿದ್ದ ಸ್ತನಗಳನ್ನೂ ಶ್ರೀಕೃಷ್ಣನು ತನ್ನ ಕರಕಮಲಗಳಿಂದ ಒರೆಸಿ ತನ್ನ ನೀಳವಾದ ತೋಳುಗಳಿಂದ ಆ ಪ್ರೇಯಸಿಯನ್ನು ಗಾಢವಾಗಿ ಆಲಿಂಗಿಸಿಕೊಂಡನು. ದುಃಖಿಗಳನ್ನು ಸಾಂತ್ವನಗೊಳಿಸುವುದರಲ್ಲಿ ಅತ್ಯಂತಕುಶಲನಾದ, ಸತ್ಪುರುಷರಿಗೆ ಪರಮಾಶ್ರಯನಾದ ಶ್ರೀಕೃಷ್ಣನು ಕೃಪಾವಿಷ್ಟನಾಗಿ ಹಾಸ್ಯದ ಹಿರಿಮೆಯನ್ನು ತಿಳಿಯದೆ ಬುದ್ಧಿಭ್ರಮೆಯನ್ನು ಹೊಂದಿದ್ದ ಮತ್ತು ಅಂತಹ ಮಾನಸಿಕವಾದ ದುಃಖವನ್ನು ಅನುಭವಿಸಲು ಅನರ್ಹಳಾಗಿದ್ದ ದೀನೆಯಾಗಿದ್ದ, ಪ್ರೇಯಸಿಯನ್ನು ನಯಾನುನಯದ ಮಾತುಗಳಿಂದ ಸಮಾಧಾನಗೊಳಿಸಿದನು.

ಭಗವಂತನು ಹೇಳುತ್ತಾನೆ :

“ವಿದರ್ಭನಂದಿನಿಯೇ! ನನ್ನಲ್ಲಿ ನೀನು ದೋಷವೆಣಿಸಬೇಡ. ನೀನು

ನನ್ನನ್ನೇ ಪರಮಾಶ್ರಯನನ್ನಾಗಿ ಭಾವಿಸಿರುವೆಯೆಂಬುದನ್ನು ನಾನು ಬಲ್ಲೆನು. ನಿನ್ನ ಬಾಯಿಂದಲೇ ನಿನ್ನ ಸ್ವಭಾವಗುಣಗಳನ್ನು ತಿಳಿಯುವ ಸಲುವಾಗಿ ಕೇವಲ ಆಟಕ್ಕಾಗಿ ನಾನು ಈ ಮಾತುಗಳನ್ನಾಡಿದೆನು. ಸುಂದರಿಯೇ! ಪ್ರಣಯಕೋಪದಿಂದ ನಿನ್ನ ಸುಂದರವಾದ ತುಟಿಗಳು ಅದುರುವುದನ್ನೂ, ಕೆಂಪುಗಟ್ಟಿದ ಕಡೆಗಣ್ಣಿನ ನೋಟವನ್ನೂ, ಗಂಟಿಕ್ಕಿದ ಸುಂದರವಾದ ಹುಬ್ಬುಗಳನ್ನೂ ಮತ್ತು ಇವುಗಳಿಂದ ಕೂಡಿದ ನಿನ್ನ ಮುನಿಸಿನ ಮುದ್ದಾದ ಮುಖವನ್ನೂ ನೋಡಲೆಂದೆಣಿಸಿ ನಾನು ಹೀಗೆ ಮಾತನಾಡಿದೆನು.

ಹಾಸ್ಯದ ಮಾತಿನಿಂದಲೇ ಭಯಗೊಂಡಿರುವವಳೇ! ಸುಂದರಾಂಗಿ! ಸಂಸಾರದ ತಾಪತ್ರಯಗಳಲ್ಲಿಯೇ ಬಳಲಿ-ಬೆಂಡಾಗುವ ಗೃಹಸ್ಥರಿಗೆ ಮನೆಗಳಲ್ಲಿ ಪ್ರೇಯಸಿಯೊಡನೆ ಒಂದು ಜಾವವಾದರೂ ಪ್ರಿಯಾಲಾಪಗಳನ್ನಾಡಿಕೊಂಡಿರುವುದೇ ಮಹತ್ತರವಾದ ಒಂದು ಲಾಭವಲ್ಲವೇ?"

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಭಗವಾನ್ ಶ್ರೀಕೃಷ್ಣನು ತನ್ನ ಪ್ರೇಯಸಿಯನ್ನು ಇಂತಹ ನಯಾನುನಯದ ಮಾತುಗಳಿಂದ ಸಮಾಧಾನಗೊಳಿಸಲು, ಪ್ರಿಯಕರನು ಹೇಳಿದ್ದು ಹಾಸ್ಯಕ್ಕಾಗಿ ಎಂದು ಭಾವಿಸಿದ ರುಕ್ಮಿಣಿಯು ಪತಿಯೆಲ್ಲಿ ತನ್ನನ್ನು ಪರಿತ್ಯಾಗಮಾಡಿಬಿಡುವನೋ ಎಂಬ ಭಯವನ್ನು ದೂರೀಕರಿಸಿದಳು. ಅನಂತರ ವೈದರ್ಭಿಯು ನಾಚಿಕೆಯಿಂದ ಕೂಡಿದ ಮಂದಹಾಸದಿಂದಲೂ, ಸುಂದರವಾದ ಮತ್ತು ಪ್ರೇಮಪೂರ್ಣವಾದ ಕಡೆಗಣ್ಣಿನ ನೋಟದಿಂದಲೂ ಪುರುಷಶ್ರೇಷ್ಠನಾದ ಶ್ರೀಕೃಷ್ಣನನ್ನು ವೀಕ್ಷಿಸುತ್ತಾ ಮೃದು-ಮಧುರವಾದ ಮಾತಿನಿಂದ ಹೇಳಿದಳು :

> ನನ್ವೇವಮೇತದರವಿನ್ದವಿಲೋಚನಾಹ
> ಯದ್ವೈ ಭವಾನ್ ಭಗವತೋಽಸದೃಶೀ ವಿಭೂಮ್ನಃ ।
> ಕ್ವ ಸ್ವೇ ಮಹಿಮ್ನ್ಯಭಿರತೋ ಭಗವಾಂಸ್ತ್ರ್ಯಧೀಶಃ
> ಕ್ವಾಹಂ ಗುಣಪ್ರಕೃತಿರಜ್ಞಗೃಹೀತಪಾದಾ ॥೩೪॥

"ಕಮಲಾಕ್ಷನೇ! ನೀನು ಹೇಳಿದಂತೆಯೇ ಸರಿ. ಬಹಳ ದೊಡ್ಡವನಾದ ನಿನಗೆ ನಾನು ಖಂಡಿತವಾಗಿಯೂ ಸಮಾನಳಲ್ಲ. ಅಪಾರವಾದ

ಮಹಿಮೆಯುಳ್ಳ, ಸ್ವಸ್ವರೂಪದಲ್ಲಿಯೇ ಆನಂದವನ್ನು ಹೊಂದುವ ಸತ್ತ್ವ-ರಜಸ್ತಮಗಳೆಂಬ ಮೂರು ಗುಣಗಳಿಗೂ ಮತ್ತು ಬ್ರಹ್ಮನೇ ಮೊದಲಾದ ವರಿಗೂ ಈಶ್ವರನಾದ, ಷಡ್ಗುಣೈಶ್ವರ್ಯಸಂಪನ್ನನಾದ ನೀನೆಲ್ಲಿ? ತ್ರಿಗುಣಾತ್ಮ ಳಾದ ಪ್ರಕೃತಿಯಾಗಿ, ಫಲಾಪೇಕ್ಷಿಗಳಾದ ಮೂಢರಿಂದ ವಂದಿಸಲ್ಪಡುವ ಪಾದಗಳುಳ್ಳ ನಾನೆಲ್ಲಿ?

ಸತ್ಯಂ ಭಯಾದಿವ ಗುಣೇಭ್ಯ ಉರುಕ್ರಮಾನ್ತಃ
ಶೇತೇ ಸಮುದ್ರ ಉಪಲಮ್ಭನಮಾತ್ರ ಆತ್ಮಾ ।
ನಿತ್ಯಂ ಕದಿನ್ದ್ರಿಯಗಣೈಃ ಕೃತವಿಗ್ರಹಸ್ತ್ವಂ
ತ್ವತ್ಸೇವಕೈರ್ನೃಪಪದಂ ವಿಧುತಂ ತಮೋಽನ್ಧಮ್ ॥೩೫॥

ತ್ರಿವಿಕ್ರಮಸ್ವರೂಪನೇ! '**ರಾಜಭ್ಯೋ ಬಿಭ್ಯತಃ ಸುಭ್ರೂಃ ಸಮುದ್ರಂ ಶರಣಂ ಗತಾನ್ ।** ರಾಜರಿಗೆ ಹೆದರಿ ಸಮುದ್ರವನ್ನು ಸೇರಿಕೊಂಡಿರುವೆವು'–ಎಂದು ಹೇಳಿಕೊಂಡೆ. ಇದೂ ನಿಜವೇ. ಆದರೆ ರಾಜರೆಂದರೆ ಭೂಮಂಡಲದ ರಾಜರಲ್ಲ. ಸತ್ತ್ವ-ರಜಸ್ತಮಗಳೆಂಬ ಮೂವರು ರಾಜರು. ಅವರಿಗೆ ಹೆದರಿ ನೀನು ಅಂತಃಕರಣರೂಪವಾದ ಸಮುದ್ರದಲ್ಲಿ, ಸಚ್ಚಿದಾ ನಂದಮಯವಾದ ಆತ್ಮಸ್ವರೂಪದಲ್ಲಿ ರಾರಾಜಿಸುತ್ತಿರುವೆ. '**ಬಲವದ್ಭಿಃ ಕೃತದ್ವೇಷಾನ್**' 'ಬಲಿಷ್ಠರೊಡನೆ ದ್ವೇಷವನ್ನು ಕಟ್ಟಿಕೊಂಡಿರುವವರು'–ಎಂದೂ ಹೇಳಿಕೊಂಡೆ. ಇದೂ ನಿಜವೇ. ಮಹಾಬಲಿಷ್ಠರಾದ ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯಗಳೆಂಬ ಆರು ಮಂದಿಯೂ ನಿನಗೆ ಯಾವಾಗಲೂ ಶತ್ರುಗಳೇ. ಇದರಲ್ಲಿಯೂ ಸಂದೇಹವಿಲ್ಲ. ಇಂದ್ರಿಯ ರೂಪರಾದ ದುಷ್ಟಶತ್ರುಗಳೂ ನಿನಗಿದ್ದಾರೆ. '**ಪ್ರಾಯಸ್ತ್ಯಕ್ತನೃಪಾಸನಾನ್**'–'ರಾಜಸಿಂಹಾಸನದಿಂದಲೂ ವಂಚಿತರಾದವರು'–ಎಂದೂ ಹೇಳಿಕೊಂಡೆ. ಅದೂ ನಿಜವೇ. ನಿನ್ನ ಪಾದಸೇವಕರು ಕೂಡ ರಾಜಪದವಿಯು ಅಜ್ಞಾನಾಂಧಕಾರಮಯವಾದುದೆಂದು ಧಿಕ್ಕರಿಸುವಾಗ ನಿತ್ಯತೃಪ್ತನೂ, ಆಪ್ತಕಾಮನೂ ಆದ ನಿನ್ನ ವಿಷಯವಾಗಿ ಹೇಳುವುದೇನಿದೆ?

ತ್ವತ್ಪಾದಪದ್ಮಮಕರನ್ದಜುಷಾಂ ಮುನೀನಾಂ
ವರ್ತ್ಮಾಸ್ಫುಟಂ ನೃಪಶುಭಿರ್ನನು ದುರ್ವಿಭಾವ್ಯಮ್ ।

ಯಸ್ಮಾದಲೌಕಿಕಮಿವೇಹಿತಮೀಶ್ವರಸ್ಯ
ಭೂಮಂಸ್ತವೇಹಿತಮಥೋ ಅನು ಯೇ ಭವನ್ತಮ್ ॥

ನಾವು ಅಸ್ಪಷ್ಟವರ್ತ್ಮರೆಂದೂ (ಸ್ಪಷ್ಟವಾದ ಮಾರ್ಗವಿಲ್ಲದವರೆಂದೂ) ಲೌಕಿಕವ್ಯವಹಾರವನ್ನು ಪಾಲಿಸತಕ್ಕವರಲ್ಲವೆಂದೂ ಹೇಳಿಕೊಂಡೆ. ಪ್ರಾಣಪ್ರಿಯನೇ! ಇದೂ ಯಥಾರ್ಥವಾದ ಮಾತೇ ಆಗಿದೆ. ನಿನ್ನ ಪಾದ ಪದ್ಮಗಳ ಮಕರಂದವನ್ನು ಸೇವಿಸುವ ಋಷಿ-ಮುನಿಗಳಿಗೂ ನಿನ್ನ ಮಾರ್ಗವು ಅಸ್ಪಷ್ಟವಾಗಿರುವಾಗ ನರರೂಪರಾದ ಪಶುಗಳಿಗೆ ನಿನ್ನ ಮಾರ್ಗವನ್ನು ಊಹಿಸಲು ಕೂಡ ಸಾಧ್ಯವಿಲ್ಲವೆಂಬುದರಲ್ಲಿ ಸಂದೇಹವೇ ಇಲ್ಲ. ನಿನ್ನನ್ನು ಅನುಸರಿಸುವ ಭಕ್ತರ ಅಪೇಕ್ಷೆಯು ಕೂಡ ಅಲೌಕಿಕವಾಗಿರುವಾಗ ಲೋಭದ ಸಂಬಂಧವಿಲ್ಲದೇ ನಿನ್ನ ಪ್ರಾಪ್ತಿಯೇ ಅವರ ಪರಮಗುರಿಯಾಗಿರುವಾಗ– ಅಪಾರಮಹಿಮನೂ, ಲೋಕೇಶ್ವರನೂ, ಸಮಸ್ತಶಕ್ತಿಗಳಿಗೂ ಆಶ್ರಯನೂ ಆದ ನಿನ್ನ ವ್ಯವಹಾರಗಳು ಇನ್ನೂ ಅಲೌಕಿಕವಾದದ್ದೆಂಬುದರಲ್ಲಿ ಸಂದೇಹವೇನಿದೆ?

ನಿಷ್ಕಿಞ್ಚನೋ ನನು ಭವಾನ್ ನ ಯತೋಽಸ್ತಿ ಕಿಞ್ಚಿ-
ದ್ಯಸ್ಮೈ ಬಲಿಂ ಬಲಿಭುಜೋಽಪಿ ಹರನ್ತ್ಯಜಾದ್ಯಾಃ ।
ನ ತ್ವಾ ವಿದನ್ತ್ಯಸುತೃಪೋಽನ್ತಕಮಾಢ್ಯತಾನ್ಧಾಃ
ಪ್ರೇಷ್ಠೋ ಭವಾನ್ ಬಲಿಭುಜಾಮಪಿ ತೇಽಪಿ ತುಭ್ಯಮ್ ॥

'ನಿಷ್ಕಿಞ್ಚನಾ ವಯಂ' 'ನಾವು ದರಿದ್ರರು'–ಎಂದು ಹೇಳಿಕೊಂಡೆ. ನೀನು ನಿಷ್ಕಿಂಚನನು ನಿಜ. ಆದರೆ ದರಿದ್ರನೆಂಬ ಅರ್ಥದಲ್ಲಲ್ಲ. 'ನಿನ್ನನ್ನು ಬಿಟ್ಟು ಯಾವುದೂ ಇಲ್ಲ'–ಎಂಬ ಅರ್ಥದಲ್ಲಿ ನೀನು ನಿಷ್ಕಿಂಚನನೇ ನಿಜ. ಎಲ್ಲದರಲ್ಲೂ ಎಲ್ಲ ವಸ್ತುಗಳಲ್ಲೂ ನೀನು ವ್ಯಾಪಿಸಿರುವೆ. ನೀನಿರದ ಯಾವ ವಸ್ತುವೂ ಈ ಪ್ರಪಂಚದಲ್ಲಿಲ್ಲ. ಆದುದರಿಂದಲೇ ಲೋಕ ಪೂಜ್ಯರಾದ ಬ್ರಹ್ಮಾದಿಗಳು ಕೂಡ ನಿನ್ನನ್ನು ಪೂಜಿಸುವರು. 'ನಿಷ್ಕಿಞ್ಚನ ಜನಪ್ರಿಯಾಃ' ಎಂದುಕೊಂಡಿರುವೆ. ನಿಷ್ಕಿಂಚನಪದಕ್ಕೆ ನಾನು ಹೇಳಿದ ಅರ್ಥವನ್ನಿಟ್ಟುಕೊಂಡರೆ ನೀನು ನಿಷ್ಕಿಂಚನಜನಪ್ರಿಯನೇ ಹೌದು. ನಿನ್ನನ್ನು ಬಿಟ್ಟು ಬೇರೆ ಯಾವುದೂ ಇಲ್ಲವೆಂದು ಅನನ್ಯಶರಣರಾಗಿ ಯಾರು ನಿನ್ನನ್ನು

ಅನವರತವಾಗಿ ಧ್ಯಾನಿಸುತ್ತಿರುವರೋ ಅವರನ್ನು ಕಂಡರೆ ನಿನಗೆ ತುಂಬಾ ಪ್ರೀತಿಯಿರುವುದು ಸಹಜವಾಗಿಯೇ ಇದೆ. ಅವರು ನಿನ್ನನ್ನು ಸಕಲ ಸರ್ವಸ್ವವೆಂದೂ ಭಾವಿಸಿ ಪೂಜಿಸುತ್ತಾರೆ. ನೀನೂ ಅವರನ್ನು ಬಹಳವಾಗಿ ಪ್ರೀತಿಸುವೆ. 'ಪ್ರಾಯೇಣ ನ ಹ್ಯಾಢ್ಯಾ ಮಾಂ ಭಜನ್ತಿ' 'ಪ್ರಾಯಶಃಧನಾಢ್ಯರು ನನ್ನನ್ನು ಭಜಿಸುವುದಿಲ್ಲ'–ಎಂದು ಹೇಳಿರುವೆ. ಇದೂ ಸತ್ಯವೇ. ತಮ್ಮ ಪ್ರಾಣಪೋಷಣೆಯಲ್ಲೇ ನಿರತರಾಗಿ ಧನಮದದಿಂದ ಅಂಧರಾಗಿರುವ ಧನಿಕರು ನಿನ್ನನ್ನು ಯಾವಾಗಲೂ ಭಜಿಸುವುದಿಲ್ಲ ; ಸ್ಮರಿಸುವುದೂ ಇಲ್ಲ. ಅಂತಹವರಿಗೆ ನೀನು ಮೃತ್ಯುಪ್ರಾಯನಾಗಿ ಅವರ ತಲೆಯ ಮೇಲೆ ಕುಳಿತಿರುವೆ. ಆ ವಿಷಯವು ಅವರಿಗೆ ತಿಳಿಯದು. ಲೋಕಪೂಜ್ಯರಾದ ಬ್ರಹ್ಮಾದಿಗಳಿಗಿಂತಲೂ ನೀನು ಶ್ರೇಷ್ಠನಾಗಿರುವೆ.

ತ್ವಂ ವೈ ಸಮಸ್ತಪುರುಷಾರ್ಥಮಯಃ ಫಲಾತ್ಮಾ
ಯದ್ವಾಞ್ಛಯಾ ಸುಮತಯೋ ವಿಸೃಜನ್ತಿ ಕೃತ್ಸ್ನಮ್ ।
ತೇಷಾಂ ವಿಭೋ ಸಮುಚಿತೋ ಭವತಃ ಸಮಾಜಃ
ಪುಂಸಃ ಸ್ತ್ರಿಯಾಶ್ಚ ರತಯೋಃ ಸುಖದುಃಖಿನೋರ್ನ ॥

ಭಗವಂತನೇ! ನೀನು ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಸ್ವರೂಪನಾಗಿರುವೆ. ಅವುಗಳಿಗೆ ಫಲರೂಪನಾದ ಪರಮಾನಂದಸ್ವರೂಪನೂ ಆಗಿರುವೆ. ವಿಚಾರಶೀಲರಾದ ಪುರುಷರು ನಿನ್ನನ್ನು ಹೊಂದುವ ಸಲುವಾಗಿ ತಮ್ಮದೆನ್ನುವ ಸಕಲಸರ್ವಸ್ವವನ್ನೂ ಪರಿತ್ಯಜಿಸುತ್ತಾರೆ. ಹಾಗೆ ಬಂಧುಗಳನ್ನೂ, ಐಶ್ವರ್ಯವನ್ನೂ, ಸ್ಥಾನಮಾನಗಳನ್ನೂ ಪರಿತ್ಯಜಿಸಿ ಬಂದಿರುವವರಲ್ಲಿ ನಾನೂ ಒಬ್ಬಳು. ಅನನ್ಯಶರಣಳಾಗಿ ನಾನು ನಿನ್ನಲ್ಲಿಗೆ ಬಂದಿದ್ದೇನೆ. ಅಂತಹವರೊಡನೆ ನೀನು ಸಂಬಂಧವನ್ನು ಬೆಳೆಸುವುದು ಸಮುಚಿತವಾಗಿಯೇ ಇದೆ. ಸ್ತ್ರೀ-ಪುರುಷರ ಸಂಬಂಧದಿಂದ ಪ್ರಾಪ್ತವಾಗುವ ಸುಖ-ದುಃಖಗಳಿಗೆ ವಶೀಭೂತರಾಗಿರುವವರು ನಿನ್ನ ಸಂಬಂಧವನ್ನು ಹೊಂದಲು ಎಂದಿಗೂ ಯೋಗ್ಯರಾಗುವುದಿಲ್ಲ.

ತ್ವಂ ನ್ಯಸ್ತದಣ್ಡಮುನಿಭಿರ್ಗದಿತಾನುಭಾವ
ಆತ್ಮಾತ್ಮದಶ್ಚ ಜಗತಾಮಿತಿ ಮೇ ವೃತೋಽಸಿ ।

ಹಿತ್ವಾ ಭವದ್ಭ್ರುವ ಉದೀರಿತಕಾಲವೇಗ-
ಧ್ವಸ್ತಾಶಿಷೋಽಬ್ಜಭವನಾಕಪತೀನ್ ಕುತೋಽನ್ಯೇ ॥೩೯॥

'ಭಿಕ್ಷುಭಿಃ ಶ್ಲಾಘಿತಾ ಮುಧಾ' 'ಭಿಕ್ಷುಕರಿಂದ ವ್ಯರ್ಥವಾಗಿ ಶ್ಲಾಘಿಸಲ್ಪಡುವವರು ನಾವು'-ಎಂದು ಹೇಳಿಕೊಂಡಿರುವೆ. ಎಂತಹ ಭಿಕ್ಷುಕರು? ಪರಮಶಾಂತರಾದ, ಮಹಾತ್ಮರಾದ ಭಿಕ್ಷುಗಳು ನಿನ್ನ ಅಪಾರವಾದ ಮಹಿಮೆಯನ್ನೂ ಪ್ರಭಾವವನ್ನೂ ಹೊಗಳುತ್ತಿರುತ್ತಾರೆ. ಅವರು ಮಹಾಪರಾಧಿಗಳನ್ನೂ ಶಿಕ್ಷಿಸಕೂಡದೆಂಬ ನಿಶ್ಚಯವುಳ್ಳವರಾಗಿರುತ್ತಾರೆ. ಅಂತಹ ಪರಮಸಾತ್ತ್ವಿಕರಾದ ಮುನಿಗಳು ನಿನ್ನ ಸ್ತೋತ್ರವನ್ನು ಅನವರತವಾಗಿ ಮಾಡುತ್ತಿರುತ್ತಾರೆ. ನಾನು, ನೀನು ಹೇಳಿದಂತೆ ಅದೂರದರ್ಶಿತ್ವದಿಂದ-ದೂರಾಲೋಚನೆಯಿಲ್ಲದೆ ನಿನ್ನನ್ನು ವರಿಸಲಿಲ್ಲ. ಅಂತಹ ಮಹಾನುಭಾವರಾದ ಋಷಿ-ಮುನಿಗಳ ಮಾತಿನಂತೆ ನಾನು ನಿನ್ನನ್ನು ವರಿಸಲು ನಿಶ್ಚಯಿಸಿದೆನು. ಋಷಿ-ಮುನಿಗಳು ನಿನ್ನನ್ನು ಜಗತ್ತಿಗೇ ಆತ್ಮಸ್ವರೂಪನೆಂದೂ ಮತ್ತು ಪ್ರೇಮೀಭಕ್ತರಿಗೆ ಆತ್ಮದಾನವನ್ನೇ ಮಾಡುವೆಯೆಂದೂ ಹೇಳಿದ್ದಾರೆ. **'ಆತ್ಮನೋಽನುರೂಪಂ ಭಜಸ್ವ ಕ್ಷತ್ರಿಯರ್ಷಭಮ್'** 'ನಿನಗೆ ಅನುರೂಪನಾದ ಕ್ಷತ್ರಿಯಶ್ರೇಷ್ಠನನ್ನು ವರಿಸು'-ಎಂದೂ ಹೇಳಿದೆಯಲ್ಲವೇ? ನೀನು ಕೇವಲ ಹುಬ್ಬನ್ನು ಹಾರಿಸಿದ ಮಾತ್ರದಿಂದ ಪ್ರೇರಿತವಾದ ಕಾಲಚಕ್ರದ ವೇಗವು ಬ್ರಹ್ಮೇಂದ್ರಾದಿಗಳ ಐಶ್ವರ್ಯವನ್ನೂ ಆಕಾಂಕ್ಷೆಗಳನ್ನೂ ಕ್ಷಣ ಮಾತ್ರದಲ್ಲಿ ಧ್ವಂಸಮಾಡಿಬಿಡುತ್ತದೆ. ಈ ಕಾರಣದಿಂದ ನಾನು ಬ್ರಹ್ಮೇಂದ್ರರನ್ನೇ ತ್ಯಜಿಸಿಬಂದಿದ್ದೇನೆ. ಇನ್ನು ಸಾಮಾನ್ಯರಾದ ರಾಜರ ವಿಷಯದಲ್ಲಿ ಹೇಳುವುದೇನಿದೆ? ಕಾಲಚಕ್ರಕ್ಕೆ ಸಿಕ್ಕದಿರುವ ಕಾಲಾತೀತನಾದ ನಿನ್ನನ್ನು ನಾಥನನ್ನಾಗಿ ಭಾವಿಸಿ ಯೋಚಿಸಿಯೇ ನಾನು ಮದುವೆಯಾಗಿದ್ದೇನೆ.

ಜಾಡ್ಯಂ ವಚಸ್ತವ ಗದಾಗ್ರಜ ಯಸ್ತು ಭೂಪಾನ್
ವಿದ್ರಾವ್ಯ ಶಾರ್ಙ್ಗನಿನದೇನ ಜಹರ್ಥ ಮಾಂ ತ್ವಮ್ ।
ಸಿಂಹೋ ಯಥಾ ಸ್ವಬಲಿಮೀಶ ಪಶೂನ್ ಸ್ವಭಾಗಂ
ತೇಭ್ಯೋ ಭಯಾದ್ಯದುದಧಿಂ ಶರಣಂ ಪ್ರಪನ್ನಃ ॥೪೦॥

ಗದಾಗ್ರಜನೇ! ಸಿಂಹವು ತನ್ನ ಗರ್ಜನೆಯಿಂದಲೇ ಅರಣ್ಯದ ಮೃಗ

ಗಳನ್ನು ಓಡಿಸಿ ಅದರ ಭಾಗವನ್ನು (ಮಾಂಸವನ್ನು) ಕಚ್ಚಿಕೊಂಡು ಹೋಗುವಂತೆ ಕೇವಲ ಶಾರ್ಙ್ಗಧನುಸ್ಸಿನ ಟಂಕಾರದಿಂದಲೇ ಸಮಸ್ತರಾಜರನ್ನೂ ಓಡಿಸಿ ನನ್ನನ್ನು ಅಪಹರಿಸಿಕೊಂಡು ಬಂದಿರುವೆ. ಇದಕ್ಕೆ ನಾನೇ ಸಾಕ್ಷೀಭೂತಳಾಗಿದ್ದೇನೆ. ಹೀಗಿರುವಾಗ ರಾಜರಿಗೆ ಹೆದರಿ ಸಮುದ್ರವನ್ನು ಆಶ್ರಯಿಸಿದೆನೆಂಬ ನಿನ್ನ ಮಾತು ಯುಕ್ತಿಯುಕ್ತವಾಗಿ ಕಾಣುವುದಿಲ್ಲ.

ಯದ್ವಾಞ್ಛಯಾ ನೃಪಶಿಖಾಮಣಯೋಽಙ್ಗವೈನ್ಯ-
ಜಾಯನ್ತನಾಹುಷಗಯಾದಯ ಐಕಪತ್ಯಮ್ ।
ರಾಜ್ಯಂ ವಿಸೃಜ್ಯ ವಿವಿಶುರ್ವನಮಮ್ಬುಜಾಕ್ಷ
ಸೀದನ್ತಿ ತೇಽನುಪದವೀಂ ತ ಇಹಾಸ್ಥಿತಾಃ ಕಿಮ್ ॥೪೧॥

'ಆಸ್ಥಿತಾಃ ಪದವೀಂ ಸುಭ್ರೂಃ ಪ್ರಾಯಃ ಸೀದನ್ತಿ ಯೋಷಿತಃ' 'ನನ್ನಂತಹ ಪುರುಷನನ್ನು ಅನುಸರಣೆಮಾಡಿದ ಸ್ತ್ರೀಯರು ಪ್ರಾಯಶಃ ಕ್ಲೇಶಪಡುತ್ತಾರೆ'–ಎಂದು ನೀನು ಹೇಳಿದೆ. ಹಿಂದೆ ಅಂಗ, ಪೃಥು, ಭರತ, ಯಯಾತಿ, ಗಯ–ಇವರೇ ಮೊದಲಾದ ರಾಜಾಧಿರಾಜರು ತಮ್ಮ ಏಕಚ್ಛತ್ರ ಸಾಮ್ರಾಜ್ಯವನ್ನೂ ಪರಿತ್ಯಜಿಸಿ ಕೇವಲ ನಿನ್ನನ್ನು ಸೇರಬೇಕೆಂಬ ಮಹತ್ವಾಕಾಂಕ್ಷೆಯಿಂದ ತಪಸ್ಸುಮಾಡಲು ಅರಣ್ಯಕ್ಕೆ ಹೋದರು. ನಿನ್ನನ್ನು ಅನುಸರಣೆಮಾಡಿದ ಕಾರಣ ಅವರು ಕಷ್ಟ-ನಷ್ಟಗಳನ್ನು ಅನುಭವಿಸುತ್ತಿರುವರೇ? ಆ ಮಹಾತ್ಮರು ನಿನ್ನನ್ನು ಸೇರಿ ಆನಂದಸಾಮ್ರಾಜ್ಯದಲ್ಲಿ ಮುಳುಗಿಲ್ಲವೇ?

ಕಾನ್ಯಂ ಶ್ರಯೇತ ತವ ಪಾದಸರೋಜಗನ್ಧ-
ಮಾಘ್ರಾಯ ಸನ್ಮುಖರಿತಂ ಜನತಾಪವರ್ಗಮ್ ।
ಲಕ್ಷ್ಮ್ಯಾಲಯಂ ತ್ವವಿಗಣಯ್ಯ ಗುಣಾಲಯಸ್ಯ
ಮರ್ತ್ಯಾ ಸದೋರುಭಯಮರ್ಥವಿವಿಕ್ತದೃಷ್ಟಿಃ ॥೪೨॥

ಬೇರೆ ಯಾರಾದರೂ ರಾಜಕುಮಾರನನ್ನು ವರಿಸೆಂದು ನೀನು ನನಗೆ ಸಲಹೆಮಾಡಿರುವೆ. ಇದು ಎಷ್ಟು ಅಸಂಗತವೆಂಬುದನ್ನು ನೀನೇ ಯೋಚಿಸಿ ಹೇಳು. ನೀನು ಸಮಸ್ತಪ್ರಾಣಿಗಳಿಗೂ ಏಕಮಾತ್ರ ಆಶ್ರಯನಾಗಿರುವೆ. ಸತ್ಪುರುಷರು ನಿನ್ನ ಚರಣಕಮಲಗಳ ಗಂಧವನ್ನು ಆಘ್ರಾಣಿಸಿ ನಿನ್ನ ಲೀಲಾಪ್ರಸಂಗಗಳನ್ನು ಗಾನಮಾಡುತ್ತಲೇ ಇರುತ್ತಾರೆ. ದಿವ್ಯವಾದ ಆ

ನಿನ್ನ ಚರಣಕಮಲಗಳ ಆಶ್ರಯವನ್ನು ಹೊಂದಿದೊಡನೆಯೇ ಸಂಸಾರದ ಪಾಪ-ತಾಪಗಳಿಂದ ಮುಕ್ತಿಯು ಸಿಕ್ಕುತ್ತದೆ. ಅಂತಹ ಚರಣಕಮಲಗಳಲ್ಲಿ ಲಕ್ಷ್ಮಿಯು ಸರ್ವದಾ ನಿವಾಸಮಾಡಿಕೊಂಡಿದ್ದಾಳೆ. ತನ್ನ ಸ್ವಾರ್ಥ-ಪರಮಾರ್ಥಗಳನ್ನು ಚೆನ್ನಾಗಿ ತಿಳಿದುಕೊಂಡಿರುವ ಯಾವ ಸ್ತ್ರೀಯು ತಾನೇ ಒಮ್ಮೆ ಅಂತಹ ಚರಣಕಮಲಗಳ ಗಂಧವನ್ನು ಆಘ್ರಾಣಿಸಿದನಂತರ ಅದನ್ನು ತಿರಸ್ಕರಿಸಿ ಹುಟ್ಟು-ಸಾವುಗಳ, ರೋಗ-ರುಜಿನಾದಿಗಳ ಭಯದಿಂದ ಪೀಡಿತರಾದ ಮನುಷ್ಯರನ್ನು ವರಿಸಿಯಾಳು? ಬುದ್ಧಿವಂತೆಯಾದ ಯಾವ ಸ್ತ್ರೀಯೂ ಹಾಗೆ ಮಾಡಲಾರಳು. ಅಲ್ಲವೇ?

ತಂ ತ್ವಾನುರೂಪಮಭಜಂ ಜಗತಾಮಧೀಶ-
ಮಾತ್ಮಾನಮತ್ರ ಚ ಪರತ್ರ ಚ ಕಾಮಪೂರಮ್ ।
ಸ್ಯಾನ್ಮೇ ತವಾಙ್ಘ್ರಿರರಣಂ ಸೃತಿಭಿರ್ಭ್ರಮನ್ತ್ಯಾ
ಯೋ ವೈ ಭಜನ್ತಮುಪಯಾತ್ಯನೃತಾಪವರ್ಗಃ ॥೪೩॥

ಪ್ರಭುವೇ! ಸಮಸ್ತ ಜಗತ್ತಿಗೂ ನೀನೇ ಸ್ವಾಮಿಯಾಗಿರುವೆ. ಇಹಲೋಕ-ಪರಲೋಕಗಳಲ್ಲಿರುವ ಸಮಸ್ತ ಪ್ರಾಣಿಗಳ ಆಸೆ-ಆಕಾಂಕ್ಷೆಗಳನ್ನು ಪೂರ್ಣಗೊಳಿಸುವವನೂ ನೀನೇ ಆಗಿರುವೆ ಮತ್ತು ಅವರೆಲ್ಲರ ಆತ್ಮ ಸ್ವರೂಪನೂ ಆಗಿರುವೆ. ಅಂತಹ ನಿನ್ನನ್ನು ನನಗೆ ಅನುರೂಪನಾದವನೆಂದೇ ತಿಳಿದು ನಾನು ವರಿಸಿದೆನು. ಮುಂದೆ ನಾನು ನನ್ನ ಕರ್ಮಕ್ಕೆ ಅನುಸಾರವಾಗಿ ಹಲವಾರು ಯೋನಿಗಳಲ್ಲಿ ಹುಟ್ಟಬಹುದು. ಆ ಬಗ್ಗೆಯೂ ನಾನು ಯೋಚಿಸುವುದಿಲ್ಲ. ಆದರೆ ನನಗೆ ಈ ಒಂದು ಅಭಿಲಾಷೆಯಿದೆ. ನಿನ್ನನ್ನು ಸದಾ ಭಜಿಸುವವರ ಮಿಥ್ಯಾಸಂಸಾರವನ್ನು ನಾಶಗೊಳಿಸುವ ನಿನ್ನ ಚರಣಕಮಲಗಳೇ ನನಗೆ ಎಲ್ಲ ಜನ್ಮಗಳಲ್ಲಿಯೂ ಆಶ್ರಯವಾಗಿರಲಿ.

ತಸ್ಯಾಃ ಸ್ಯುರಚ್ಯುತ ನೃಪಾ ಭವತೋಪದಿಷ್ಟಾಃ
ಸ್ತ್ರೀಣಾಂ ಗೃಹೇಷು ಖರಗೋಶ್ವಬಿಡಾಲಭೃತ್ಯಾಃ ।
ಯತ್ಕರ್ಣಮೂಲಮರಿಕರ್ಷಣ ನೋಪಯಾಯಾ-
ದ್ಯುಷ್ಮತ್ಕಥಾ ಮೃಡವಿರಿಞ್ಚಸಭಾಸು ಗೀತಾ ॥೪೪॥

ಅದ್ಭುತನೇ! ಶತ್ರುಧ್ವಂಸಕನೇ! ಶಂಕರನ ಸಭೆಯಲ್ಲಿಯೂ, ಬ್ರಹ್ಮನ

ಸಭೆಯಲ್ಲಿಯೂ ಹಾಡಲ್ಪಡುವ ಪರಮಪಾವನವಾದ ನಿನ್ನ ಕಥೆಗೆ ಸಂಬಂಧಿಸಿದ ಗೀತವು ಯಾರ ಕಿವಿಗಳಲ್ಲಿ ಬಿದ್ದಿಲ್ಲವೋ ಅಂತಹ ಸ್ತ್ರೀಯರಿಗೆ ಕತ್ತೆಗಳಂತೆ, ಎತ್ತುಗಳಂತೆ, ಕುದುರೆಗಳಂತೆ, ಬೆಕ್ಕುಗಳಂತೆ ಮತ್ತು ಭೃತ್ಯರಂತೆ ಅರಮನೆಗಳಲ್ಲಿ ಹೆಂಗಸರ ಸೇವೆಮಾಡಿಕೊಂಡಿರುವ, ನೀನು ಹೇಳಿದ ಶಿಶುಪಾಲನೇ ಮೊದಲಾದ ರಾಜರು ಗಂಡಂದಿರಾಗಲಿ.

ತ್ವಕ್ಶ್ಮಶ್ರುರೋಮನಖಕೇಶಪಿನದ್ಧಮನ್ತ-
ರ್ಮಾಂಸಾಸ್ಥಿರಕ್ತಕೃಮಿವಿಟ್ಕಫಪಿತ್ತವಾತಮ್ ।
ಜೀವಚ್ಛವಂ ಭಜತಿ ಕಾನ್ತಮತಿರ್ವಿಮೂಢಾ
ಯಾ ತೇ ಪದಾಬ್ಜಮಕರನ್ದಮಜಿಘ್ರತೀ ಸ್ತ್ರೀ ॥೪೫॥

ನಿನ್ನ ಪಾದಕಮಲಗಳ ಮಧುರವಾದ ಮಧುವನ್ನು ಆಘ್ರಾಣಿಸದಿರುವ ಮೂಢೆಯಾದ ಹೆಂಗಸು ಯಾರನ್ನು ಕಾಂತನನ್ನಾಗಿ ಭಾವಿಸಿ ವರಿಸುವ ಳೆಂದರೆ, ಬದುಕಿದ್ದರೂ ಸತ್ತವನಂತಿರುವ ಜೀವಚ್ಛವವನ್ನು. ಗಡ್ಡ-ಮೀಸೆ, ಉಗುರು, ಕೂದಲು, ತಲೆಗೂದಲುಗಳನ್ನೊಳಗೊಂಡ ಚರ್ಮದ ಚೀಲದಲ್ಲಿ ಮಾಂಸ, ಮೂಳೆ, ರಕ್ತ, ಕ್ರಿಮಿ, ಮಲ, ಪಿತ್ತ, ವಾಯುಗಳು ತುಂಬಿರುತ್ತವೆ. ಉಸಿರಾಡುವ ಅಂತಹ ಶರೀರವನ್ನೇ ಕಾಂತನೆಂದು ಭ್ರಮಿಸಿ ಮೂಢೆಯು ಮದುವೆಯಾಗುತ್ತಾಳೆ.

ಅಸ್ತ್ವಮ್ಬುಜಾಕ್ಷ ಮಮ ತೇ ಚರಣಾನುರಾಗ
ಆತ್ಮನ್ರತಸ್ಯ ಮಯಿ ಚಾನತಿರಿಕ್ತದೃಷ್ಟೇಃ ।
ಯರ್ಹ್ಯಸ್ಯ ವೃದ್ಧಯ ಉಪಾತ್ತರಜೋಽತಿಮಾತ್ರೋ
ಮಾಮೀಕ್ಷಸೇ ತದು ಹ ನಃ ಪರಮಾನುಕಮ್ಪಾ ॥೪೬॥

'ಉದಾಸೀನಾ ವಯಂ' 'ನಾವು ಉದಾಸೀನರು' ಎಂದು ಹೇಳಿರುವೆ. ಅದೂ ನಿಜವೆ. ಕಮಲಾಕ್ಷನೇ! ನೀನು ಆತ್ಮಕ್ರಾಮನಾಗಿರುವೆ. ನಾನೂ ನಿನಗೆ ಅನುರೂಪಳಾಗಿರುವೆನು. ಗುಣವತಿಯಾಗಿರುವೆನು. ಆದರೂ ನನ್ನ ಮೇಲೆ ನಿನಗೆ ಅತಿಶಯವಾದ ದೃಷ್ಟಿಯಿಲ್ಲ. ಆದುದರಿಂದ ಉದಾಸೀನ ನಾಗಿರುವುದು ನಿನ್ನ ಸ್ವಭಾವವೇ ಆಗಿದೆ. ಆದರೂ ನಿನ್ನ ಚರಣಕಮಲ ಗಳಲ್ಲಿ ನನ್ನ ಅನುರಾಗವು ಸುದೃಢವಾಗಿರಲಿ. ಇದು ನನ್ನ ಆಶಯವಾಗಿದೆ.

ಯಾವಾಗ ನೀನು ಸಂಸಾರದ ವೃದ್ಧಿಗಾಗಿ ರಜೋಗುಣವನ್ನು ಸ್ವೀಕರಿಸಿ ನನ್ನ ಕಡೆಗೆ ನೋಡುವೆಯೋ ಆಗಲೇ ನನಗೆ ಪರಮಾನುಗ್ರಹವಾಯಿತೆಂದು ನಾನು ಭಾವಿಸುತ್ತೇನೆ.

ನೈವಾಲೀಕಮಹಂ ಮನ್ಯೇ ವಚಸ್ತೇ ಮಧುಸೂದನ ।
ಅಮ್ಬಾಯಾ ಇವ ಹಿ ಪ್ರಾಯಃ ಕನ್ಯಾಯಾಃ ಸ್ಯಾದ್ರತಿಃ ಕ್ವಚಿತ್ ॥೪೭॥

'ಆತ್ಮನೋಽನುರೂಪಂ ವೈ ಭಜಸ್ವ ಕ್ಷತ್ರಿಯರ್ಷಭಮ್ ।' 'ನಿನಗೆ ಅನುರೂಪನಾದ ಕ್ಷತ್ರಿಯಶ್ರೇಷ್ಠನನ್ನು ನೀನು ಸೇವಿಸು'–ಎಂದೂ ನೀನು ಹೇಳಿದೆ. ನಿನ್ನ ಈ ಮಾತೂ ಸುಳ್ಳೆಂದು ನಾನು ಭಾವಿಸುವುದಿಲ್ಲ. ಕೆಲವರ ವಿಷಯದಲ್ಲಿ ಇದು ನಿಜ. ಕಾಶೀರಾಜನ ಮಗಳಾದ ಅಂಬೆಯು ಮೊದಲು ಒಬ್ಬನನ್ನು ಪ್ರೀತಿಸಿ ಅನಂತರ ಮತ್ತೊಬ್ಬನನ್ನು ಪ್ರೀತಿಸಿದಳು. ಹಾಗೆಯೇ ಕೆಲವು ಕನ್ಯೆಯರು ಮೊದಲು ಒಬ್ಬನನ್ನು ಪ್ರೀತಿಸಿದ್ದು ಅನಂತರ ಬೇರೆಯವರನ್ನು ಪ್ರೀತಿಸಬಹುದು.

ವ್ಯೂಢಾಯಾಶ್ಚಾಪಿ ಪುಂಶ್ಚಲ್ಯಾ ಮನೋಽಭ್ಯೇತಿ ನವಂ ನವಮ್ ।
ಬುಧೋಽಸತೀಂ ನ ಬಿಭೃಯಾತ್ತಾಂ ಬಿಭ್ರದುಭಯಚ್ಯುತಃ ॥೪೮॥

ಆದರೆ ಒಬ್ಬನನ್ನು ಮದುವೆಯಾದನಂತರವೂ ಯಾವಳ ಮನಸ್ಸು ಹೊಸ-ಹೊಸ ತರುಣನನ್ನು ಅರಸಿಕೊಂಡು ಹೋಗುವುದೋ ಅಂತಹವಳು ನಿಶ್ಚಯವಾಗಿಯೂ ವ್ಯಭಿಚಾರಿಣಿಯೇ ಸರಿ. ವಿದ್ವಾಂಸನಾದವನು ಅಂತಹವಳನ್ನು ತನ್ನ ಜೊತೆಯಲ್ಲಿ ಇಟ್ಟುಕೊಳ್ಳಬಾರದು. ಅಂತಹವಳ ಭರಣ-ಪೋಷಣಗಳನ್ನು ಮಾಡುವವನು ಇಹಲೋಕ-ಪರಲೋಕಗಳೆರಡರಿಂದಲೂ ಭ್ರಷ್ಟನಾಗುತ್ತಾನೆ."

ಭಗವಂತನು ಹೇಳುತ್ತಾನೆ :

"ಸಾಧ್ವಿಯೇ! ರಾಜಕುಮಾರಿ! ನಿನ್ನ ಇಂತಹ ಮಾತುಗಳನ್ನು ಕೇಳಬೇಕೆಂಬ ಆಶಯದಿಂದಲೇ ನಾನು ನಿನ್ನನ್ನು ಹಾಸ್ಯದ ಮಾತುಗಳಿಂದ ಬೆಚ್ಚುಬೀಳಿಸಿದೆನು. ನಾನು ಹೇಳಿದುದಕ್ಕೆ ನಿನ್ನ ವ್ಯಾಖ್ಯಾನವು ಸಮಂಜಸವಾಗಿದೆ. ಸತ್ಯ-ಸುಂದರವಾಗಿಯೂ ಇದೆ. ಸುಂದರಿಯೇ! ನೀನು ನನಗೆ ಅನನ್ಯ ಪ್ರೇಯಸಿಯಾಗಿರುವೆ. ನಿನಗೆ ನನ್ನಲ್ಲಿಯೂ ಅನನ್ಯಪ್ರೀತಿಯಿದೆ. ನೀನು ನನ್ನಿಂದ

ಯಾವುದನ್ನು ಬಯಸುವೆಯೋ ಅದು ನಿನಗೆ ಸರ್ವದಾ ಸಿದ್ಧವಾಗಿಯೇ ಇದೆ. ಆದರೆ ನನ್ನಿಂದ ಪಡೆದುಕೊಳ್ಳಬಹುದಾದ ಕಾಮನೆಗಳು ಸಂಸಾರಬಂಧನದಲ್ಲಿ ಸಿಕ್ಕಿಸುವುಗಳಾಗಿರುವುದಿಲ್ಲ. ಐಹಿಕವಾದ ಸಮಸ್ತಕಾಮನೆಗಳಿಂದಲೂ ಮುಕ್ತಗೊಳಿಸುತ್ತವೆ. ಏಕಾಂತಭಕ್ತೆಯಾದ ನಿನಗೆ ಇತರ ಎಲ್ಲ ಕಾಮನೆಗಳನ್ನೂ ನಿವೃತ್ತಿಗೊಳಿಸಿ ನನ್ನನ್ನೇ ಸೇರಲು ಅನುವುಮಾಡಿಕೊಡುತ್ತವೆ.

ಉಪಲಬ್ಧಂ ಪತಿಪ್ರೇಮ ಪಾತಿವ್ರತ್ಯಂ ಚ ತೇಽನಘೇ ।
ಯದ್ವಾಕ್ಯೈಶ್ಚಾಲ್ಯಮಾನಾಯಾ ನ ಧೀರ್ಮಯ್ಯಪಕರ್ಷಿತಾ ॥೫೧॥

ಪ್ರೇಯಸಿಯೇ! ನಾನು ನಿನ್ನ ಪತಿಪ್ರೇಮವನ್ನೂ, ಪಾತಿವ್ರತ್ಯವನ್ನೂ ಚೆನ್ನಾಗಿ ಕಂಡುಕೊಂಡೆನು. ಬುದ್ಧಿಯನ್ನು ಕದಲಿಸಬಹುದಾಗಿದ್ದ ಅಂತಹ ನನ್ನ ಮಾತುಗಳಿಂದಲೂ ನಿನ್ನ ಬುದ್ಧಿಯು ನನ್ನಿಂದ ಸ್ವಲ್ಪವಾದರೂ ವಿಚಲಿತವಾಗಲಿಲ್ಲ.

ಯೇ ಮಾಂ ಭಜನ್ತಿ ದಾಮ್ಪತ್ಯೇ ತಪಸಾ ವ್ರತಚರ್ಯಯಾ ।
ಕಾಮಾತ್ಮಾನೋಽಪವರ್ಗೇಶಂ ಮೋಹಿತಾ ಮಮ ಮಾಯಯಾ ॥

ಪ್ರಿಯಳೇ! ನಾನು ಮೋಕ್ಷಕ್ಕೆ ಸ್ವಾಮಿಯಾಗಿದ್ದೇನೆ. ಪ್ರಾಣಿಗಳಿಗೆ ಮೋಕ್ಷವನ್ನು ದಯಪಾಲಿಸುವ ಅಧಿಕಾರವು ನನಗಿದೆ. ನಾನು ಭಕ್ತಜನರನ್ನು ಸಂಸಾರಸಾಗರದಿಂದ ಪಾರುಮಾಡುತ್ತೇನೆ. ಸಕಾಮರಾದ ಯಾವ ಪುರುಷರು ಅನೇಕಪ್ರಕಾರವಾದ ವ್ರತಗಳಿಂದಲೂ ತಪಸ್ಸುಗಳಿಂದಲೂ ನನ್ನನ್ನು ಆರಾಧಿಸಿ ದಾಂಪತ್ಯಜೀವನದ ವಿಷಯಸುಖಗಳನ್ನು ಆಶಿಸುವರೋ ಅಂತಹವರು ನನ್ನ ಮಾಯೆಯಿಂದ ಮೋಹಿತರಾಗಿರುವರೆಂದು ತಿಳಿ.

ಮಾಂ ಪ್ರಾಪ್ಯ ಮಾನಿನ್ಯಪವರ್ಗಸಮ್ಪದಂ
ವಾಞ್ಛನ್ತಿ ಯೇ ಸಮ್ಪದ ಏವ ತತ್ಪತಿಮ್ ।
ತೇ ಮನ್ದಭಾಗ್ಯಾ ನಿರಯೇಽಪಿ ಯೇ ನೃಣಾಂ
ಮಾತ್ರಾತ್ಮಕತ್ವಾನ್ನಿರಯಃ ಸುಸಙ್ಗಮಃ ॥೫೩॥

ಮಾನಿನಿಯೇ! ನಾನು ಮೋಕ್ಷಕ್ಕೂ ಮತ್ತು ಸಮಸ್ತ ಸಂಪತ್ತುಗಳಿಗೂ ಅಧೀಶ್ವರನಾಗಿದ್ದೇನೆ. ವ್ರತಾಚರಣೆ ಮತ್ತು ಕಠಿನವಾದ ತಪಸ್ಸು

ಗಳಿಂದ ನನ್ನನ್ನು ಹೊಂದಿಯೂ ಯಾರು ಕೇವಲ ವಿಷಯಸುಖಗಳ ಸಾಧನ ಸಂಪತ್ತಿಯನ್ನು ಅಪೇಕ್ಷಿಸುವರೋ, ನನ್ನ ಪರಾಭಕ್ತಿಯನ್ನು ಅಪೇಕ್ಷಿಸುವುದಿಲ್ಲವೋ, ಸಮಸ್ತವನ್ನೂ ಪರಿತ್ಯಜಿಸಿ ನನ್ನನ್ನೇ ಅನನ್ಯಶರಣನನ್ನಾಗಿ ಆಶ್ರಯಿಸುವುದಿಲ್ಲವೋ–ಅಂತಹವರು ಅತ್ಯಂತ ಮಂದಭಾಗ್ಯರೇ ಸರಿ. ಏಕೆಂದರೆ : ವಿಷಯಸುಖವೆಂಬುದು ನರಕಕ್ಕೆ ಸಮಾನವಾದುದು ಅಥವಾ ನರಕಪ್ರಾಯಗಳಾದ ಕ್ಷುದ್ರಯೋನಿಗಳಲ್ಲಿ ಹುಟ್ಟಲು ಸಾಧಕವಾದುದು. ಆದರೆ ವಿಷಯಾಭಿಲಾಷಿಗಳಾದ ಜನರ ಮನಸ್ಸು ವಿಷಯಸುಖದಲ್ಲಿಯೇ ಲೀನವಾಗಿಬಿಟ್ಟಿದ್ದು ವಿಷಯೋಪಭೋಗಗಳಿಗೆ ಅವಕಾಶವಿರುವ ನರಕ ಸದೃಶವಾದ ಕ್ಷುದ್ರಜಂತುಗಳ ಜನ್ಮವನ್ನೂ ಒಳ್ಳೆಯದೆಂದೇ ಅವರು ಭಾವಿಸುತ್ತಾರೆ.

ದಿಷ್ಟ್ಯಾ ಗೃಹೇಶ್ವರ್ಯಸಕೃನ್ಮಯಿ ತ್ವಯಾ
ಕೃತಾನುವೃತ್ತಿರ್ಭವಮೋಚನೀ ಖಲೈಃ ।
ಸುದುಷ್ಕರಾಸೌ ಸುತರಾಂ ದುರಾಶಿಷೋ
ಹ್ಯಸುಂಭರಾಯಾ ನಿಕೃತಿಜುಷಃ ಸ್ತ್ರಿಯಃ ॥೫೪॥

ಗೃಹೇಶ್ವರಿಯೇ! ಪ್ರಾಣಪ್ರಿಯಳೇ! ನೀನು ಅದೃಷ್ಟವಶದಿಂದ ಸಂಸಾರಬಂಧನದಿಂದ ವಿಮುಕ್ತಗೊಳಿಸುವ ನನ್ನ ಸೇವೆಯನ್ನು ನಿರಂತರವಾಗಿ ಮಾಡುತ್ತಿರುವೆ. ದುಷ್ಟರಾದವರು ಹೀಗೆಂದಿಗೂ ಮಾಡಲಾರರು. ಅದರಲ್ಲಿಯೂ ದುಷ್ಟವಾದ ಕಾಮನೆಗಳಿಂದ ತುಂಬಿಹೋಗಿರುವ ಮನಸ್ಸುಳ್ಳ, ಹೊಟ್ಟೆಬುರುಕಳಾದ, ಇಂದ್ರಿಯಗಳ ತೃಪ್ತಿಗಾಗಿ ಅನೇಕ ಪ್ರಕಾರವಾದ ವಂಚನೆಗಳನ್ನು ಮಾಡುವ ಹೆಂಗಸಿಗೆ ಇಂತಹ ನಿಷ್ಕಾಮಸೇವೆಯನ್ನಂತೂ ಮಾಡಲು ಸಾಧ್ಯವೇ ಆಗುವುದಿಲ್ಲ.

ನ ತ್ವಾದೃಶೀಂ ಪ್ರಣಯಿನೀಂ ಗೃಹಿಣೀಂ ಗೃಹೇಷು
ಪಶ್ಯಾಮಿ ಮಾನಿನಿ ಯಯಾ ಸ್ವವಿವಾಹಕಾಲೇ ।
ಪ್ರಾಪ್ತಾನ್ನೃಪಾನವಗಣಯ್ಯ ರಹೋಹರೋ ಮೇ
ಪ್ರಸ್ಥಾಪಿತೋ ದ್ವಿಜ ಉಪಶ್ರುತಸತ್ಕಥಸ್ಯ ॥೫೫॥

ಮಾನಿನಿಯೇ! ಗೃಹಸ್ಥರ ಮನೆಗಳಲ್ಲಿ ನಿನ್ನಂತೆ ಪತಿಯಲ್ಲಿ ಅನನ್ಯಸಾಧಾರಣವಾದ ಪ್ರೇಮವುಳ್ಳವಳನ್ನು ನಾನು ಇದುವರೆಗೂ ನೋಡಿ

ರುವುದಿಲ್ಲ. ಏಕೆಂದರೆ : ನೀನು ಆ ಸಮಯದಲ್ಲಿ (ವಿವಾಹಸಮಯದಲ್ಲಿ) ನನ್ನನ್ನು ಕಂಡಿರಲಿಲ್ಲ. ಸಂತರ ಬಾಯಿಂದ ನನ್ನ ಪ್ರಶಂಸೆಯನ್ನು ಮಾತ್ರವೇ ನೀನು ಕೇಳಿದ್ದೆ. ಇಷ್ಟರಿಂದಲೇ ನೀನು ನನ್ನಲ್ಲಿ ಸಂಪೂರ್ಣವಾಗಿ ನಿನ್ನ ಮನಸ್ಸನ್ನು ಲೀನಗೊಳಿಸಿ ವಿವಾಹಕ್ಕೆ ಬಂದಿದ್ದ ರಾಜರೆಲ್ಲರನ್ನೂ ತಿರಸ್ಕರಿಸಿ ಬ್ರಾಹ್ಮಣನ ಮೂಲಕವಾಗಿ ನನಗೆ ಸಂದೇಶವನ್ನು ಕಳುಹಿಸಿದೆ.

ಭ್ರಾತುರ್ವಿರೂಪಕರಣಂ ಯುಧಿ ನಿರ್ಜಿತಸ್ಯ
ಪ್ರೋದ್ವಾಹಪರ್ವಣಿ ಚ ತದ್ವಧಮಕ್ಷಗೋಷ್ಠ್ಯಾಮ್ ।
ದುಃಖಂ ಸಮುತ್ಥಮಸಹೋಽಸ್ಮದಯೋಗಭೀತ್ಯಾ
ನೈವಾಬ್ರವೀಃ ಕಿಮಪಿ ತೇನ ವಯಂ ಜಿತಾಸ್ತೇ ॥೫೬॥

ಪ್ರೇಯಸಿಯೇ! ನಿನ್ನನ್ನು ಅಪಹರಿಸಿಕೊಂಡು ಬಂದಾಗ ನಿನ್ನ ಅಣ್ಣನು ನನ್ನನ್ನು ಬೆನ್ನಟ್ಟಿಬಂದನು. ಆ ಸಮಯದಲ್ಲಿ ನಾನು ಅವನನ್ನು ಪರಾಜಯಗೊಳಿಸಿ ಗಡ್ಡ-ಮೀಸೆಗಳನ್ನು ಯದ್ವಾ-ತದ್ವಾ ಬೋಳಿಸಿ ಆತನನ್ನು ವಿರೂಪಗೊಳಿಸಿದೆನು. ಆ ಸಮಯದಲ್ಲಿ ನೀನು ಆಕ್ಷೇಪದ ಒಂದು ಮಾತನ್ನೂ ಆಡಲಿಲ್ಲ. ಮತ್ತೊಮ್ಮೆ ಅನಿರುದ್ಧನ ವಿವಾಹಸಮಯದಲ್ಲಿ ನಿಮ್ಮ ಅಣ್ಣನೊಡನೆ ಪಗಡೆಯಾಡುತ್ತಿದ್ದ ಬಲರಾಮನು ಮಾತಿಗೆ-ಮಾತು ಬೆಳೆಸಿ ಆತನನ್ನೇ ಕೊಂದುಹಾಕಿದನು. ಆ ಸಮಯದಲ್ಲಿ ಕೂಡ ನೀನು ನಮ್ಮೊಡನೆ ವಿಯೋಗವಾಗಿಬಿಡಬಹುದೆಂಬ ಸಂದೇಹದಿಂದ ಒಂದೇ ಒಂದು ಕಟುವಾದ ಮಾತನ್ನೂ ಆಡಲಿಲ್ಲ. ದುಃಖವನ್ನು ಹಾಗೆಯೇ ನುಂಗಿಕೊಂಡುಬಿಟ್ಟೆ. ನಿನ್ನ ಈ ಮಹಾಗುಣದಿಂದಾಗಿ ನಾನು ನಿನ್ನಿಂದ ಜಯಿಸಲ್ಪಟ್ಟಿದ್ದೇನೆ.

ದೂತಸ್ತ್ವಯಾತ್ಮಲಭನೇ ಸುವಿವಿಕ್ತಮನ್ತ್ರಃ
ಪ್ರಸ್ಥಾಪಿತೋ ಮಯಿ ಚಿರಾಯತಿ ಶೂನ್ಯಮೇತತ್ ।
ಮತ್ವಾಜಿಹಾಸ ಇದಮಙ್ಗಮನನ್ಯಯೋಗ್ಯಂ
ತಿಷ್ಠೇತ ತತ್ತ್ವಯಿ ವಯಂ ಪ್ರತಿನನ್ದಯಾಮಃ ॥೫೭॥

ಪ್ರೇಯಸಿಯೇ! ನೀನು ನನ್ನನ್ನು ಹೊಂದುವ ಸಲುವಾಗಿ ದೂತನ ಮೂಲಕ ಸಂದೇಶವನ್ನು ಕಳುಹಿಸಿದೆ. ಆದರೆ ನನ್ನನ್ನು ನೋಡಲು ಸ್ವಲ್ಪ ವಿಳಂಬವಾಗಲಾಗಿ ಪ್ರಪಂಚವೇ ಶೂನ್ಯವಾಗಿಬಿಟ್ಟಿದೆಯೆಂದು ಭಾವಿಸಿದೆ.

ಸರ್ವಾಂಗಸುಂದರವಾದ ನಿನ್ನ ಶರೀರವು ಬೇರೆಯವರಿಗೆ ಲಭಿಸುವುದು ಯೋಗ್ಯವಲ್ಲವೆಂದು ಭಾವಿಸಿ ಆ ಶರೀರವನ್ನು ತೊರೆಯಲೂ ಸಿದ್ಧಳಾದೆ. ನಿನ್ನ ಈ ಪ್ರೇಮಭಾವವು ನಿನ್ನ ಅಂತರಂಗದಲ್ಲಿಯೇ ಸ್ಥಿರವಾಗಿ ಉಳಿಯಲಿ. ಇದಕ್ಕೆ ಬದಲಾಗಿ ನಾನೇನನ್ನೂ ಕೊಡಲಾರೆನು. ಸರ್ವೋಚ್ಚವಾದ ಈ ನಿನ್ನ ಪ್ರೇಮಭಾವವನ್ನು ನಾನು ಅಭಿನಂದಿಸುತ್ತೇನೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಜಗದೀಶ್ವರನಾದ ಶ್ರೀಕೃಷ್ಣನು ಆತ್ಮಾರಾಮನು. ನರಲೋಕದಲ್ಲಿ ಮನುಷ್ಯನಾಗಿ ಲೀಲೆಯಾಡುವಾಗ ದಾಂಪತ್ಯ ಪ್ರೇಮವನ್ನು ಹೆಚ್ಚಿಸುವ ವಿನೋದವಾದ ವಾರ್ತಾಲಾಪಗಳನ್ನು ಮಾಡುತ್ತಿದ್ದನು. ಇದೇ ಪ್ರಕಾರವಾಗಿ ಲಕ್ಷ್ಮಿಯ ಸ್ವರೂಪಳಾದ ರುಕ್ಮಿಣಿಯೊಡನೆಯೂ ಪ್ರೇಮಾಲಾಪಗಳನ್ನು ಮಾಡುತ್ತಿದ್ದನು. ಶ್ರೀಕೃಷ್ಣನು ಸಮಸ್ತ ಜಗತ್ತಿಗೂ ಶಿಕ್ಷಣವನ್ನು ಕೊಡುವ ಲೋಕಗುರುವು. ಸರ್ವವ್ಯಾಪಕನು. ಪ್ರೇಯಸಿಯಾದ ರುಕ್ಮಿಣಿಯ ಭವನದಲ್ಲಿದ್ದಂತೆಯೇ ಶ್ರೀಕೃಷ್ಣನು ಇತರ ಪತ್ನಿಯರ ಭವನಗಳಲ್ಲಿಯೂ ಇರುತ್ತಾ ಗೃಹಸ್ಥಾಶ್ರಮೋಚಿತವಾದ ಧರ್ಮಗಳನ್ನು ಪರಿಪಾಲಿಸುತ್ತಿದ್ದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೬೦ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೬೧ನೆಯ ಅಧ್ಯಾಯ

ಶ್ರೀಕೃಷ್ಣನ ಸಂತತಿಯ ವರ್ಣನೆ : ಅನಿರುದ್ಧನ ವಿವಾಹ : ರುಕ್ಮಿಯ ವಧೆ

ಶ್ರೀಶುಕಮುನಿಗಳು ಹೇಳುತ್ತಾರೆ :

ಏಕೈಕಶಸ್ತಾಃ ಕೃಷ್ಣಸ್ಯ ಪುತ್ರಾನ್ದಶ ದಶಾಬಲಾಃ ।
ಅಜೀಜನನ್ನನವಮಾನ್ಪಿತುಃ ಸರ್ವಾತ್ಮಸಮ್ಪದಾ ॥೧॥

ಪರೀಕ್ಷಿತಮಹಾರಾಜ! ಭಗವಾನ್ ಶ್ರೀಕೃಷ್ಣನಿಗೆ ಪ್ರತಿಯೊಬ್ಬ ಪತ್ನಿಯಲ್ಲಿಯೂ ಹತ್ತು-ಹತ್ತು ಮಕ್ಕಳು ಹುಟ್ಟಿದರು. ಅವರು ಆತ್ಮಗುಣ

ಸಂಪತ್ತಿನಿಂದ ಶ್ರೀಕೃಷ್ಣನಿಗೆ ಸದೃಶರಾಗಿದ್ದರು. ಯಾವುದರಲ್ಲಿಯೂ ಅವನಿಗೆ ಕಡಿಮೆಯಾಗಿರಲಿಲ್ಲ. ತಮ್ಮ ಭವನದಿಂದ ಯಾವಾಗಲೂ ಹೊರಕ್ಕೆ ಹೋಗದೇ ತಮ್ಮೊಡನೆಯೇ ಇರುತ್ತಿದ್ದ ಶ್ರೀಕೃಷ್ಣನನ್ನು ನೋಡಿ ಅವನ ಎಲ್ಲ ಪತ್ನಿಯರೂ, ಶ್ರೀಕೃಷ್ಣನು ತನ್ನೊಬ್ಬಳನ್ನೇ ಬಹುವಾಗಿ ಪ್ರೀತಿಸುತ್ತಿದ್ದಾನೆಂದು ಭಾವಿಸಿಕೊಂಡು ಆನಂದಪಡುತ್ತಿದ್ದರು. ನಿಜವಾಗಿ ಹೇಳುವುದಾದರೆ ಅವರು ತಮ್ಮ ಪತಿಯಾದ ಶ್ರೀಕೃಷ್ಣನ ತತ್ತ್ವವನ್ನಾಗಲೀ, ಮಹಿಮೆಯನ್ನಾಗಲೀ ತಿಳಿದವರಾಗಿರಲಿಲ್ಲ. ಆತ್ಮಾರಾಮನಾದ ಶ್ರೀಕೃಷ್ಣನ ಅಂದವಾದ, ಕಮಲದ ಮೊಗ್ಗಿಗೆ ಸಮಾನವಾದ ಮುಖದಿಂದಲೂ, ನೀಳವಾದ ಬಾಹುಗಳಿಂದಲೂ, ಕಿವಿಗಳನ್ನು ಮುಟ್ಟುತ್ತಿದ್ದ ಕಣ್ಣುಗಳಿಂದಲೂ, ಪ್ರೇಮಪೂರ್ಣವಾದ ಮಂದಹಾಸದಿಂದಲೂ, ರಸವತ್ತಾದ ಕಡೆಗಣ್ಣಿನ ನೋಟದಿಂದಲೂ, ಸುಮಧುರವಾದ ವಾಣಿಯಿಂದಲೂ ವಿಮೋಹಿತೆಯರಾದ ಅವನ ಪತ್ನಿಯರ ತಮ್ಮ ಬೆಡಗು-ಬಿನ್ನಾಣಗಳಿಂದಾಗಲೀ, ಹಾವ-ಭಾವಗಳಿಂದಾಗಲೀ ಶ್ರೀಕೃಷ್ಣನನ್ನು ವಶಪಡಿಸಿಕೊಳ್ಳಲು ಸಮರ್ಥರಾಗಲಿಲ್ಲ.

ಪರೀಕ್ಷಿತಮಹಾರಾಜ! ಶ್ರೀಕೃಷ್ಣನ ಪತ್ನಿಯರು ಹದಿನಾರು ಸಾವಿರಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿದ್ದರೂ ಪ್ರತಿಯೊಬ್ಬಳ ಆಶಯವೂ ತನ್ನ ಹಾವ-ಭಾವಗಳಿಂದ ಶ್ರೀಕೃಷ್ಣನನ್ನು ಒಲಿಸಿಕೊಳ್ಳಬೇಕೆಂಬುದೇ ಆಗಿದ್ದಿತು. ಚಿತ್ತಾಕರ್ಷಕವಾದ ಮಂದಹಾಸವನ್ನು ಬೀರುವುದರಿಂದಲೂ, ಚೇತೋಹಾರಿಯಾದ ಕಡೆಗಣ್ಣಿನ ನೋಟದಿಂದಲೂ, ಮನೋಹರವಾದ ಹುಬ್ಬುಗಳನ್ನು ಹಾರಿಸುವುದರಿಂದಲೂ, ಕಾಮಕಲೆಯ ಭಾವಗಳಿಂದ ಪರಿಪೂರ್ಣವಾದ, ಪ್ರೇಮಪೂರ್ಣವಾದ ಕಾಮಬಾಣಗಳನ್ನು ಶ್ರೀಕೃಷ್ಣನ ಮೇಲೆ ಸತತವಾಗಿ ಬಿಡುತ್ತಿದ್ದರು. ಆದರೆ ಯಾವುದೇ ಪ್ರಕಾರದಿಂದಲೂ ಯಾವುದೇ ಸಾಧನಗಳಿಂದಲೂ ಭಗವಾನ್ ಶ್ರೀಕೃಷ್ಣನ ಇಂದ್ರಿಯಗಳಲ್ಲಿ ಚಂಚಲತೆಯನ್ನುಂಟು ಮಾಡಲು ಅವರು ಸಮರ್ಥರಾಗಲಿಲ್ಲ.

ಪರೀಕ್ಷಿತಮಹಾರಾಜ! ಬ್ರಹ್ಮನೇ ಮೊದಲಾದ ದೊಡ್ಡ-ದೊಡ್ಡ ದೇವತೆಗಳು ಕೂಡ ಭಗವಂತನ ನಿಜಸ್ವರೂಪವನ್ನಾಗಲೀ ಅವನನ್ನು ಹೊಂದುವ ಮಾರ್ಗವನ್ನಾಗಲೀ ತಿಳಿದವರಾಗಿಲ್ಲ. ಅಂತಹ ರಮಾರಮಣನಾದ, ಭಗವಂತನಾದ ಶ್ರೀಕೃಷ್ಣನನ್ನು ಭಾಗ್ಯವತಿಯರಾದ ಆ ಸ್ತ್ರೀಯರು

ಪತಿಯರೂಪದಲ್ಲಿ ಪಡೆದುಕೊಂಡಿದ್ದರು. ನಿತ್ಯನಿರಂತರವಾಗಿ ಅವರ ಪ್ರೇಮವೂ ಆನಂದವೂ ವೃದ್ಧಿಹೊಂದುತ್ತಿದ್ದಿತು. ಅವರು ಪ್ರೇಮಪೂರ್ಣವಾದ ಮಂದಹಾಸದಿಂದಲೂ, ಮಧುರವಾದ ಕಡೆಗಣ್ಣಿನ ನೋಟದಿಂದಲೂ ನೂತನಸಮಾಗಮದ ಲಾಲಸೆಯಿಂದಲೂ ಭಗವಂತನನ್ನು ಸೇವಿಸುತ್ತಿದ್ದರು.

ಪರೀಕ್ಷಿತ! ಪ್ರತಿಯೊಬ್ಬ ಪತ್ನಿಯ ಜೊತೆಯಲ್ಲಿಯೂ ನೂರಾರು ದಾಸಿಯರು ಅವರ ಸೇವೆಗಾಗಿ ಇರುತ್ತಿದ್ದರು. ಆದರೂ ಶ್ರೀಕೃಷ್ಣನು ತಮ್ಮ ಅರಮನೆಗೆ ಬಂದೊಡನೆಯೇ ಅವನ ಪತ್ನಿಯರೇ ಮುಂದೆ ಹೋಗಿ ನಗು-ನಗುತ್ತಾ ಅವನನ್ನು ಸ್ವಾಗತಿಸುವರು. ಶ್ರೇಷ್ಠವಾದ ಆಸನವನ್ನು ನೀಡಿ ಕುಳ್ಳಿರಿಸುವರು. ಶ್ರೇಷ್ಠವಾದ ಸಾಮಗ್ರಿಗಳಿಂದ ಅವನನ್ನು ಪೂಜಿಸುವರು. ಆತನ ಚರಣಕಮಲಗಳನ್ನು ತೊಳೆಯುವರು. ಆತನಿಗೆ ತಾಂಬೂಲವನ್ನು ಕೊಡುವರು. ತಮ್ಮ ಮೃದುವಾದ ಕೈಗಳಿಂದ ತಮ್ಮ ಪತಿಯ ಕೈ-ಕಾಲುಗಳನ್ನು ಅಮುಕುತ್ತಾ ಅವನ ದಣಿವನ್ನು ನಿವಾರಿಸುವರು. ಬೀಸಣಿಗೆಯಿಂದ ಗಾಳಿಬೀಸುವರು. ಗಂಧವನ್ನು ಪೂಸುವರು. ಹಾರವನ್ನು ಹಾಕುವರು. ಕೇಶಾಲಂಕಾರಮಾಡುವರು. ಹಾಸಿಗೆಯನ್ನು ಹಾಸುವರು. ಸ್ನಾನಮಾಡಿಸು ವರು. ಭಕ್ಷ್ಯ-ಭೋಜ್ಯಗಳಿಂದ ಕೂಡಿದ ಭೋಜನವನ್ನು ಮಾಡಿಸುವರು. ಹೀಗೆ ತಮ್ಮ ಕೈಗಳಿಂದಲೇ ಭಗವಂತನ ಸೇವೆಯನ್ನು ಅವನ ಪತ್ನಿಯರು ಶ್ರದ್ಧೆಯಿಂದಲೂ ಭಕ್ತಿಯಿಂದಲೂ ಮಾಡುತ್ತಿದ್ದರು.

ಪರೀಕ್ಷಿತಮಹಾರಾಜ! ಶ್ರೀಕೃಷ್ಣನ ಪ್ರತಿಯೊಬ್ಬ ಪತ್ನಿಗೂ ಹತ್ತು ಹತ್ತು ಮಕ್ಕಳಿದ್ದರೆಂದು ಈ ಹಿಂದೆಯೇ ನಾನು ಹೇಳಿದ್ದೆನಲ್ಲವೇ! ಅವರಲ್ಲಿ ಎಂಟು ಮಂದಿ ಶ್ರೀಕೃಷ್ಣನ ಪಟ್ಟದ ರಾಣಿಯರು. ಅವರ ವಿವಾಹಪ್ರಸಂಗ ಗಳನ್ನು ಈ ಹಿಂದೆಯೇ ನಾನು ವಿವರಿಸಿದ್ದೇನೆ. ಈಗ ನಾನು ಪ್ರದ್ಯುಮ್ನನೇ ಮೊದಲಾದ ರುಕ್ಮಿಣಿಯ ಗರ್ಭದಲ್ಲಿ ಜನಿಸಿದ ಮಕ್ಕಳ ವರ್ಣನೆಯನ್ನು ಮಾಡುತ್ತೇನೆ. ರುಕ್ಮಿಣಿಯ ಗರ್ಭದಲ್ಲಿ ಶ್ರೀಕೃಷ್ಣನಿಗೆ ಪ್ರದ್ಯುಮ್ನ, ಚಾರು ದೇಷ್ಣ, ಸುದೇಷ್ಣ, ಪರಾಕ್ರಮಿಯಾದ ಚಾರುದೇಹ, ಸುಚಾರು, ಚಾರುಗುಪ್ತ, ಭದ್ರಚಾರು, ಚಾರುಚಂದ್ರ, ವಿಚಾರು ಮತ್ತು ಚಾರು ಎಂಬ ಹತ್ತು ಮಕ್ಕಳು ಹುಟ್ಟಿದರು. ಈ ಹತ್ತು ಮಕ್ಕಳೂ ತಂದೆಯಾದ ಶ್ರೀಕೃಷ್ಣನಿಗೆ ಯಾವುದರಲ್ಲಿಯೂ ಕಡಿಮೆ ಇರಲಿಲ್ಲ. ಸತ್ಯಭಾಮೆಯ ಗರ್ಭದಲ್ಲಿ ಶ್ರೀಕೃಷ್ಣ

ನಿಗೆ ಭಾನು, ಸುಭಾನು, ಸ್ವರ್ಭಾನು, ಪ್ರಭಾನು, ಭಾನುಮಂತ, ಚಂದ್ರ ಭಾನು, ಬೃಹದ್ಭಾನು, ಅತಿಭಾನು, ಶ್ರೀಭಾನು ಮತ್ತು ಪ್ರತಿಭಾನು ಎಂಬ ಹತ್ತು ಮಕ್ಕಳು ಹುಟ್ಟಿದರು. ಜಾಂಬವತಿಯ ಗರ್ಭದಲ್ಲಿ ಶ್ರೀಕೃಷ್ಣನಿಗೆ ಸಾಂಬ, ಸುಮಿತ್ರ, ಪುರುಜಿತ್, ಶತಜಿತ್, ಸಹಸ್ರಜಿತ್, ವಿಜಯ, ಚಿತ್ರ ಕೇತು, ವಸುಮಂತ, ದ್ರವಿಡ ಮತ್ತು ಕ್ರತು–ಎಂಬ ಹತ್ತು ಮಕ್ಕಳು ಹುಟ್ಟಿದರು. ನಗ್ನಜಿತನ ಮಗಳಾದ ಸತ್ಯೆಯ ಗರ್ಭದಲ್ಲಿ ಶ್ರೀಕೃಷ್ಣನಿಗೆ ವೀರ, ಚಂದ್ರ, ಅಶ್ವಸೇನ, ಚಿತ್ರಗು, ವೇಗವಂತ, ವೃಷ, ಆಮ, ಶಂಕು, ವಸು ಮತ್ತು ಮಹಾತೇಜಸ್ವಿಯಾದ ಕುಂತಿ–ಎಂಬ ಹತ್ತು ಮಕ್ಕಳು ಹುಟ್ಟಿದರು. ಸೂರ್ಯನ ಮಗಳಾದ ಕಾಲಿಂದಿಯ ಗರ್ಭದಲ್ಲಿ ಶ್ರೀಕೃಷ್ಣನಿಗೆ ಶ್ರುತ, ಕವಿ, ವೃಷ, ವೀರ, ಸುಬಾಹು, ಭದ್ರ, ಶಾಂತಿ, ದರ್ಶ, ಪೂರ್ಣಮಾಸ ಮತ್ತು ಸೋಮಕ–ಎಂಬ ಹತ್ತು ಮಕ್ಕಳು ಹುಟ್ಟಿದರು. ಮದ್ರದೇಶದ ರಾಜ ಕುಮಾರಿಯಾದ ಲಕ್ಷ್ಮಣೆಯ ಗರ್ಭದಲ್ಲಿ ಆತನಿಗೆ ಪ್ರಘೋಷ, ಗಾತ್ರವಂತ, ಸಿಂಹ, ಬಲ, ಪ್ರಬಲ, ಊರ್ಧ್ವಗ, ಮಹಾಶಕ್ತಿ, ಸಹ, ಓಜ ಮತ್ತು ಅಪರಾಜಿತ–ಎಂಬ ಹತ್ತು ಮಕ್ಕಳು ಹುಟ್ಟಿದರು. ಮಿತ್ರವಿಂದೆಯ ಗರ್ಭದಲ್ಲಿ ಆತನಿಗೆ ವೃಕ, ಹರ್ಷ, ಅನಿಲ, ಗೃಧ್ರ, ವರ್ಧನ, ಅನ್ನಾದ, ಮಹಾಶ, ಪಾವನ, ವಹ್ನಿ ಮತ್ತು ಕ್ಷುಧಿ–ಎಂಬ ಹತ್ತು ಮಕ್ಕಳು ಹುಟ್ಟಿದರು. ಭದ್ರಾ ಎಂಬುವಳ ಗರ್ಭದಲ್ಲಿ ಆತನಿಗೆ ಸಂಗ್ರಾಮಜಿತ, ಬೃಹತ್ಸೇನ, ಶೂರ, ಪ್ರಹರಣ, ಅರಿಜಿತ್, ಜಯಾ, ಸುಭದ್ರ, ವಾಮ, ಆಯು ಮತ್ತು ಸತ್ಯಕ–ಎಂಬ ಹತ್ತು ಮಕ್ಕಳು ಹುಟ್ಟಿದರು.

ಈ ಎಂಟು ಮಂದಿ ಪಟ್ಟದರಸಿಯರಲ್ಲದೆ ಶ್ರೀಕೃಷ್ಣನಿಗೆ ರೋಹಿಣಿಯೇ ಮೊದಲಾದ ಹದಿನಾರುಸಾವಿರದ ನೂರುಮಂದಿ ಪತ್ನಿಯರಿದ್ದರು. ರೋಹಿಣಿಯ ಗರ್ಭದಲ್ಲಿ ಶ್ರೀಕೃಷ್ಣನಿಗೆ ದೀಪ್ತಿಮಂತ ಮತ್ತು ತಾಮ್ರತಪ್ತನೇ ಮೊದಲಾದ ಹತ್ತು ಮಂದಿ ಮಕ್ಕಳು ಹುಟ್ಟಿದರು.

ಪರೀಕ್ಷಿತ! ರುಕ್ಮಿಣಿಯ ಮಗನಾದ ಪ್ರದ್ಯುಮ್ನನಿಗೆ ಮಾಯಾವತಿ ಯಲ್ಲದೆ ಭೋಜಕಟನಗರವಾಸಿಯಾದ ರುಕ್ಮಿಯ ಮಗಳಾದ ರುಕ್ಮವತಿ ಯೊಡನೆಯೂ ವಿವಾಹವಾಯಿತು. ಆಕೆಯ ಗರ್ಭದಲ್ಲಿ ಪ್ರದ್ಯುಮ್ನನಿಗೆ ಮಹಾಬಲಿಷ್ಠನಾದ ಅನಿರುದ್ಧನು ಹುಟ್ಟಿದನು. ಪರೀಕ್ಷಿತಮಹಾರಾಜ!

ಶ್ರೀಕೃಷ್ಣನ ಮಕ್ಕಳ ತಾಯಿಯರೇ ಹದಿನಾರು ಸಾವಿರಕ್ಕಿಂತಲೂ ಅಧಿಕ ರಾಗಿದ್ದರು. ಆದುದರಿಂದ ಶ್ರೀಕೃಷ್ಣನ ಮಕ್ಕಳ ಮತ್ತು ಮೊಮ್ಮಕ್ಕಳ ಸಂಖ್ಯೆಯು ಕೋಟಿಯನ್ನೂ ಮೀರಿದ್ದಿತು."

ಪರೀಕ್ಷಿತಮಹಾರಾಜನು ಪ್ರಶ್ನಿಸುತ್ತಾನೆ :

"ಮಹಾಮುನಿಗಳೇ! ನೀವೀಗ ರುಕ್ಮಿಯ ಮಗಳೊಡನೆ ಪ್ರದ್ಯುಮ್ನನ ವಿವಾಹವಾಯಿತೆಂದು ಹೇಳಿದಿರಿ. ಪರಮಶತ್ರುವಾದ ಶ್ರೀಕೃಷ್ಣನ ಮಗನಿಗೇಕೆ ರುಕ್ಮಿಯು ತನ್ನ ಮಗಳನ್ನು ಕೊಟ್ಟನು? ಶ್ರೀಕೃಷ್ಣನಿಂದ ಪರಾಜಿತನಾಗಿ ಅವಮಾನಿತನಾಗಿದ್ದ ಅವನು ಶ್ರೀಕೃಷ್ಣನನ್ನೇ ಸಂಹರಿಸಲು ಸಮಯವನ್ನು ಕಾಯುತ್ತಿದ್ದನು. ವಿದ್ವಾಂಸರೇ! ಇಬ್ಬರು ವೈರಿಗಳ ನಡುವೆ ವಿವಾಹ ಸಂಬಂಧವು ಹೇಗೆ ಏರ್ಪಟ್ಟಿತೆಂಬುದನ್ನು ದಯಮಾಡಿ ಹೇಳಿರಿ.

ಅನಾಗತಮತೀತಂ ಚ ವರ್ತಮಾನಮತೀನ್ದ್ರಿಯಮ್ ।
ವಿಪ್ರಕೃಷ್ಟಂ ವ್ಯವಹಿತಂ ಸಮ್ಯಕ್ ಪಶ್ಯನ್ತಿ ಯೋಗಿನಃ ॥೨೧॥

ಬ್ರಾಹ್ಮಣಶ್ರೇಷ್ಠರೇ! ಯೋಗಿಗಳಾದವರು ಭೂತ-ಭವಿಷ್ಯದ್ವರ್ತ ಮಾನಗಳನ್ನು ತಿಳಿದವರಾಗಿರುತ್ತಾರೆ. ಇಂದ್ರಿಯಗಳಿಗೆ ಗೋಚರಿಸದೇ ಇರುವುದನ್ನೂ, ದೂರದಲ್ಲಿರುವುದನ್ನೂ, ಮರೆಯಾಗಿರುವುದನ್ನೂ ತಿಳಿ ಯಲು ಅವರು ಸಮರ್ಥರು. ತಮ್ಮಂತಹ ಯೋಗಿಗಳಿಗೆ ತಿಳಿಯದೇ ಇರುವ ವಿಷಯವೇ ಯಾವುದೂ ಇಲ್ಲ. ಆದುದರಿಂದ ವೈರಿಗಳಿಬ್ಬರ ನಡುವೆ ವಿವಾಹ ಸಂಬಂಧವು ಹೇಗಾಯಿತೆಂಬ ಅತ್ಯಂತನಿಗೂಢವಾಗಿರುವ ವಿಷಯವನ್ನು ನನಗೆ ಹೇಳಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

"ಪರೀಕ್ಷಿತಮಹಾರಾಜ! ಪ್ರದ್ಯುಮ್ನನು ಮೂರ್ತಿಮತ್ತಾಗಿ ಬಂದ ಕಾಮದೇವನೇ ಆಗಿದ್ದನು. ಅವನ ಸೌಂದರ್ಯ ಮತ್ತು ಗುಣಗಳಿಗೆ ಮನಸೋತು ರುಕ್ಮಿಯ ಮಗಳಾದ ರುಕ್ಮವತಿಯು ಸ್ವಯಂವರದಲ್ಲಿ ಪ್ರದ್ಯುಮ್ನನಿಗೆ ಸ್ವಯಂವರಮಾಲಿಕೆಯನ್ನು ಹಾಕಿದಳು. ರಥೈಕಸಹಾಯ ನಾಗಿದ್ದ ಪ್ರದ್ಯುಮ್ನನು ಆ ಸಮಯದಲ್ಲಿ ಅವನನ್ನು ಎದುರಿಸಿದ ರಾಜರೆಲ್ಲರನ್ನೂ ಪರಾಜಯಗೊಳಿಸಿ ರುಕ್ಮವತಿಯನ್ನು ಅಪಹರಿಸಿಕೊಂಡು

ಬಂದನು. ಶ್ರೀಕೃಷ್ಣನಿಂದ ಅವಮಾನಿತನಾಗಿದ್ದ ರುಕ್ಮಿಯ ಹೃದಯದಲ್ಲಿ ಕ್ರೋಧಾಗ್ನಿಯು ಆರಿರಲಿಲ್ಲ. ಅಚ್ಚಳಿಯದಂತೆ ಆ ಪ್ರಸಂಗವು ಅವನ ಸ್ಮೃತಿಪಥದಲ್ಲಿ ಉಳಿದೇ ಇತ್ತು. ಆದರೂ ತನ್ನ ತಂಗಿಯಾದ ರುಕ್ಮಿಣಿಗೆ ಪ್ರಿಯವನ್ನುಂಟುಮಾಡಬೇಕೆನ್ನುವ ಇಚ್ಛೆಯಿಂದಾಗಿ ರುಕ್ಮಿಯು ತನ್ನ ಮಗಳನ್ನು ತನ್ನ ಸೋದರಳಿಯನಿಗೇ ಕೊಟ್ಟು ಮದುವೆಮಾಡಿದನು.

ಪರೀಕ್ಷಿತ! ರುಕ್ಮಿಣಿಗೆ ಹತ್ತು ಜನ ಗಂಡು ಮಕ್ಕಳಲ್ಲದೆ ಹನ್ನೊಂದನೆಯವಳಾಗಿ ವಿಶಾಲಾಕ್ಷಿಯೂ, ಕಡುಚೆಲುವೆಯೂ ಆಗಿದ್ದ ಚಾರುಮತೀ–ಎಂಬ ಮಗಳೂ ಇದ್ದಳು. ಇವಳನ್ನು ಕೃತವರ್ಮನ ಮಗನಾದ ಬಲ–ಎಂಬುವನು ಮದುವೆಯಾದನು. ರುಕ್ಮಿಗೆ ಶ್ರೀಕೃಷ್ಣನು ಬದ್ಧವೈರಿಯಾಗಿದ್ದರೂ ತಂಗಿಯಾದ ರುಕ್ಮಿಣಿಗೆ ಸಂತೋಷವನ್ನುಂಟುಮಾಡುವ ಇಚ್ಛೆಯಿಂದ ಮತ್ತೊಂದು ಸಂಬಂಧವನ್ನೂ ಬೆಳೆಸಿದನು. ತನ್ನ ಮಗಳಾದ ರುಕ್ಮವತಿಯ ಮಗ ಅನಿರುದ್ಧನಿಗೆ ತನ್ನ ಮಗನ ಮಗಳಾದ ರೋಚನಾ ಎಂಬುವಳನ್ನು ಮದುವೆಮಾಡಿಕೊಟ್ಟನು. ಯದ್ಯಪಿ ಈ ಸಂಬಂಧವು ಧರ್ಮಬಾಹಿರವಾದುದೆಂದು ರುಕ್ಮಿಗೆ ತಿಳಿದಿತ್ತಾದರೂ ಸ್ನೇಹಪಾಶದಿಂದ ಬಂಧಿಸಲ್ಪಟ್ಟಿದ್ದ ಅವನು ಹಾಗೆ ದ್ವೇಷಿಗಳಲ್ಲಿ ಮತ್ತೊಂದು ಸಂಬಂಧವನ್ನೂ ಬೆಳೆಸಿದನು.

ಪರೀಕ್ಷಿತಮಹಾರಾಜ! ಅನಿರುದ್ಧನ ವಿವಾಹಮಹೋತ್ಸವದಲ್ಲಿ ಪಾಲ್ಗೊಳ್ಳಲು ಭಗವಾನ್ ಶ್ರೀಕೃಷ್ಣ, ಬಲರಾಮ, ರುಕ್ಮಿಣೀ, ಪ್ರದ್ಯುಮ್ನ, ಸಾಂಬ ಇವರೇ ಮೊದಲಾದ ದ್ವಾರಕಾವಾಸಿಗಳು ಭೋಜಕಟನಗರಕ್ಕೆ ಆಗಮಿಸಿದರು. ವಿವಾಹಮಹೋತ್ಸವವು ನಿರ್ವಿಘ್ನವಾಗಿ ನೆರವೇರಿದನಂತರ ಗರ್ವಿಷ್ಠರಾಗಿದ್ದ ಕಲಿಂಗನೇ ಮುಂತಾದ ರಾಜರು ಪಗಡೆಯಾಟದಲ್ಲಿ ಬಲರಾಮನನ್ನು ಸೋಲಿಸುವಂತೆ ರುಕ್ಮಿಯನ್ನು ಪ್ರಚೋದಿಸಿದರು. ಬಲರಾಮನು ಪಗಡೆಯಾಟದಲ್ಲಿ ಚತುರನಾಗಿರಲಿಲ್ಲ. ಆದರೆ ಅವನಿಗೆ ಆಟವಾಡುವುದರಲ್ಲಿ ಹೆಚ್ಚಿನ ಆಸಕ್ತಿಯಿದ್ದಿತು. ಕಲಿಂಗಪ್ರಮುಖರಾದ ರಾಜರ ಪ್ರೇರಣೆಯಂತೆ ರುಕ್ಮಿಯು ಬಲರಾಮನನ್ನು ಆಟಕ್ಕೆ ಆಹ್ವಾನಿಸಿದನು ಮತ್ತು ಬಲರಾಮನೊಡನೆ ಪಣಕಟ್ಟಿ ಪಗಡೆಯಾಡಲು ಪ್ರಾರಂಭಿಸಿದನು. ಬಲರಾಮನು ಪಂದ್ಯಕ್ಕಾಗಿ ಮೊದಲು ನೂರು ವರಹಗಳನ್ನು

ತಂದನು. ಅದನ್ನು ರುಕ್ಮಿಯು ಗೆದ್ದುಕೊಂಡನು. ಆಟದ ಛಲದಿಂದಾಗಿ ಬಲರಾಮನು ಪುನಃ ಸಾವಿರ ವರಹಗಳನ್ನು ತಂದನು. ಅದೂ ರುಕ್ಮಿಗೇ ಸೇರಿಹೋಯಿತು. ಪುನಃ ಬಲರಾಮನು ಹತ್ತು ಸಾವಿರ ವರಹಗಳನ್ನು ಪಣವಾಗಿಟ್ಟನು. ಅದೂ ರುಕ್ಮಿಗೇ ಸೇರಿತು. ಕಲಿಂಗಪ್ರಮುಖರಾದ ರಾಜರೆಲ್ಲರೂ ಎಲ್ಲ ಹಲ್ಲುಗಳನ್ನು ತೋರಿಸಿಕೊಂಡು ಕೇಕೇಹಾಕಿಕೊಂಡು ನಗುತ್ತಾ ಚಪ್ಪಾಳೆಗಳನ್ನು ತಟ್ಟುತ್ತಾ ಬಲರಾಮನನ್ನು ಹಾಸ್ಯಮಾಡ ತೊಡಗಿದರು. ಇಂತಹ ಅವಹೇಳನವನ್ನು ಸಹಿಸಿಕೊಳ್ಳಲು ಬಲರಾಮನಿಂದ ಸಾಧ್ಯವಾಗಲಿಲ್ಲ. ಆತನು ಸ್ವಲ್ಪ ಸಿಟ್ಟಾದನು. ಅನಂತರ ರುಕ್ಮಿಯು ಒಂದು ಲಕ್ಷ ವರಹಗಳನ್ನು ಪಣವನ್ನಾಗಿಟ್ಟನು. ಆ ಆಟದಲ್ಲಿ ವಾಸ್ತವ ವಾಗಿಯೂ ಬಲರಾಮನೇ ಗೆದ್ದನು. ಆದರೆ ರುಕ್ಮಿಯು ವಂಚನೆಯ ನ್ನಾಶ್ರಯಿಸಿ 'ನಾನೇ ಗೆದ್ದೆ' **'ಅಹಂ ಜಿತವಾನ್'**-ಎಂದು ಕೂಗಾಡಿ ಬಿಟ್ಟನು. ಇದರಿಂದ ಪರ್ವಕಾಲದಲ್ಲಿ ಸಮುದ್ರವು ಉಕ್ಕಿಬರುವಂತೆ ಬಲರಾಮನ ಕೋಪವು ಉಕ್ಕಿಬರುತ್ತಿದ್ದಿತು. ಅವನ ಮನಸ್ಸು ಕ್ಷೋಭೆ ಗೊಂಡಿತು. ಸ್ವಭಾವದಿಂದಲೇ ಕೆಂಪಾಗಿದ್ದ ಅವನ ಕಣ್ಣುಗಳು ಕೋಪಾ ವೇಶದಿಂದಾಗಿ ಮತ್ತೂ ಕೆಂಪಾದುವು. ಕೋಪಾವಿಷ್ಟನಾಗಿದ್ದ ಬಲರಾಮನು ಹತ್ತು ಕೋಟಿ ವರಹಗಳನ್ನು ಪಣವನ್ನಾಗಿಟ್ಟನು. ಆ ಆಟದಲ್ಲಿಯೂ ದ್ಯೂತಧರ್ಮಕ್ಕೆ ಅನುಸಾರವಾಗಿ ಬಲರಾಮನೇ ಗೆದ್ದನು. ಆದರೆ ರುಕ್ಮಿಯು ಪುನಃ-'ನಾನು ಗೆದ್ದಿರುವುದರಲ್ಲಿ ಸಂದೇಹವಿದ್ದರೆ ಪ್ರೇಕ್ಷಕರಾಗಿರುವ ಕಲಿಂಗಪ್ರಮುಖರಾದ ರಾಜರೇ ಯಾರು ಗೆದ್ದರೆಂಬುದನ್ನು ನಿರ್ಣಯಿಸಲಿ'- ಎಂದೂ ಉದ್ಘೋಷಿಸಿದನು. ಆ ಸಮಯದಲ್ಲಿ ಆಕಾಶವಾಣಿಯು **'ಬಲೇ ನೈವ ಜಿತೋ ಗ್ಲಹಃ । ಧರ್ಮತೋ ವಚನೇನೈವ ರುಕ್ಮೀ ವದತಿ ವೈ ಮೃಷಾ ॥**

"ಬಲರಾಮನಿಂದಲೇ ಆಟವು ಗೆಲ್ಲಲ್ಪಟ್ಟಿತು. ಆಟದ ಧರ್ಮಾನು ಸಾರವಾಗಿ ಅವನೇ ಗೆದ್ದಿದ್ದಾನೆ. ರುಕ್ಮಿಯು ಮಾತಿನಿಂದ ಮಾತ್ರವೇ ತಾನು ಗೆದ್ದೆನೆಂದು ಹೇಳಿಕೊಳ್ಳುತ್ತಿದ್ದಾನೆ. ಆದರೆ ಅದು ದಿಟವಲ್ಲ. ಅವನು ಸುಳ್ಳನ್ನೇ ಹೇಳುತ್ತಿದ್ದಾನೆ"-ಎಂದು ಘೋಷಿಸಿತು. ಕಾಲಚೋದಿತ ನಾಗಿದ್ದ ರುಕ್ಮಿಯು ಆಕಾಶವಾಣಿಯನ್ನೂ ಗಮನಕ್ಕೆ ತೆಗೆದುಕೊಳ್ಳದೆ

ದುಷ್ಟರಾಜರಿಂದ ಪ್ರಚೋದಿತನಾಗಿ ಸಂಕರ್ಷಣನನ್ನು ಪರಿಹಾಸ್ಯಮಾಡುತ್ತಾ ಕರ್ಕಶವಾದ ಮಾತುಗಳನ್ನು ಹೇಳಿದನು :

ನೈವಾಕ್ಷಕೋವಿದಾ ಯೂಯಂ ಗೋಪಾಲಾ ವನಗೋಚರಾಃ ।
ಅಕ್ಷೈರ್ದೀವ್ಯನ್ತಿ ರಾಜಾನೋ ಬಾಣೈಶ್ಚ ನ ಭವಾದೃಶಾಃ ॥೩೫॥

“ಬಲರಾಮ! ಕಾಡಿನಲ್ಲಿ ಹಸುಗಳನ್ನು ಮೇಯಿಸಿಕೊಂಡು ಸಂಚರಿಸುವ ನೀವು ಅಕ್ಷವಿದ್ಯೆಯನ್ನು ಬಲ್ಲವರಲ್ಲ. ರಾಜರಾದ ನಾವು ಪಗಡೇಕಾಯಿಗಳಿಂದ ಆಟವನ್ನೂ ಆಡುತ್ತೇವೆ ; ಬಾಣಗಳಿಂದ ಯುದ್ಧವನ್ನೂ ಮಾಡುತ್ತೇವೆ. ನಿಮ್ಮಂತಹ ಗೋಪಾಲರು ಆಟವನ್ನೂ ತಿಳಿದವರಲ್ಲ ; ಯುದ್ಧವನ್ನೂ ತಿಳಿದವರಲ್ಲ.”

ಪರೀಕ್ಷಿತಮಹಾರಾಜ! ರುಕ್ಮಿಯಿಂದ ಹೀಗೆ ನಿಂದಿಸಲ್ಪಟ್ಟ ಮತ್ತು ಗರ್ವಿಷ್ಠರಾಗಿದ್ದ ಕಲಿಂಗಪ್ರಮುಖರಾದ ರಾಜರಿಂದ ಹಾಸ್ಯಮಾಡಲ್ಪಟ್ಟ ಬಲರಾಮನು ಅತ್ಯಂತಕ್ರುದ್ಧನಾಗಿ ಆ ರಾಜರ ಮಹಾಸಭೆಯಲ್ಲಿ ಪರಿಘಾಯುಧವನ್ನೆತ್ತಿ ರುಕ್ಮಿಯನ್ನು ಕೊಂದೇಬಿಟ್ಟನು. ಅನಂತರ ಹತ್ತು ಹೆಜ್ಜೆಗಳನ್ನು ಮುಂದಿಟ್ಟು ಹತ್ತನೆಯ ಹೆಜ್ಜೆಯಲ್ಲಿ ಹಲ್ಲುಕಿಸಿದುಕೊಂಡು ಅಪಹಾಸ್ಯ ಮಾಡುತ್ತಿದ್ದ ಕಲಿಂಗದರಸನನ್ನು ಹಿಡಿದು ಅವನ ಎಲ್ಲ ಹಲ್ಲುಗಳನ್ನೂ ಮುರಿದುಹಾಕಿದನು. ಕಲಿಂಗರಾಜನ ಜೊತೆಗಾರರನ್ನೂ ಬಲರಾಮನು ಬಿಡಲಿಲ್ಲ. ಅವರೆಲ್ಲರನ್ನೂ ಪರಿಘಾಯುಧದಿಂದ ಮುಖ-ಮೂತಿಗಳನ್ನು ನೋಡದೆ ಬಡಿದುಹಾಕಿದನು. ಕೆಲವರಿಗೆ ತೋಳುಗಳೇ ಮುರಿದುಹೋದುವು. ಕೆಲವರು ತೊಡೆಗಳನ್ನು ಕಳೆದುಕೊಂಡರು. ಮತ್ತೆ ಕೆಲವರು ತಲೆಗಳನ್ನು ಕಳೆದುಕೊಂಡು ಅಸುನೀಗಿದರು. ರಕ್ತದಿಂದ ತೋಯ್ದುಹೋಗಿದ್ದ ಅಳಿದುಳಿದ ರಾಜರು ಬಲರಾಮನ ಭಯದಿಂದ ಪಲಾಯನಮಾಡಿದರು.

ಪರೀಕ್ಷಿತಮಹಾರಾಜ! ಭಾವಮೈದುನನು ಬಲರಾಮನಿಂದ ಹತನಾಗಲಾಗಿ ಅಲ್ಲಿಯೇ ಇದ್ದ ಶ್ರೀಕೃಷ್ಣನು, ರುಕ್ಮಿಯನ್ನು ಬಲರಾಮನು ಕೊಂದಿದ್ದು ಸಾಧುವೇ-ಅಸಾಧುವೇ?–ಎಂಬ ವಿಷಯದಲ್ಲಿ ಯಾವ ಮಾತನ್ನೂ ಆಡಲಿಲ್ಲ. ‘ಕೊಂದಿದ್ದು ಸರಿ’–ಎಂದು ಹೇಳಿದರೆ ರುಕ್ಮಿಣಿಗೆ ಅಸಮಾಧಾನವಾಗಬಹುದು. ‘ಕೊಂದಿದ್ದು ತಪ್ಪು’–ಎಂದು ಹೇಳಿದರೆ

ಅಣ್ಣನಿಗೆ ಅಸಮಾಧಾನವಾಗಬಹುದು. ಈ ಉಭಯಸಂಕಟಗಳಿಂದ ತಪ್ಪಿಸಿಕೊಳ್ಳಲು ಶ್ರೀಕೃಷ್ಣನು ಯಾವ ಮಾತನ್ನೂ ಆಡದೆ ಸುಮ್ಮನಿದ್ದುಬಿಟ್ಟನು.

ಹೀಗೆ ಅನಿರುದ್ಧನ ವಿವಾಹವೂ, ಶತ್ರುವಿನ ವಧೆಯೂ ಆದನಂತರ ಶ್ರೀಕೃಷ್ಣನನ್ನೇ ಆಶ್ರಯಿಸಿದ್ದ ಬಲರಾಮನೇ ಮೊದಲಾದ ಯದುವಂಶೀಯ ರಾಜರು ನೂತನವಧುವಾದ ರೋಚನೆಯನ್ನೂ ಮದುವಣಿಗನಾದ ಅನಿರುದ್ಧನನ್ನೂ ಶ್ರೇಷ್ಠವಾದ ರಥದಲ್ಲಿ ಕುಳ್ಳಿರಿಸಿಕೊಂಡು, ಭೋಜಕಟನಗರದಿಂದ ಕುಶಸ್ಥಲಿಗೆ (ದ್ವಾರಕೆಗೆ) ಪ್ರಯಾಣಮಾಡಿದರು.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ೬೧ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೬೨ನೆಯ ಅಧ್ಯಾಯ

ಉಷಾ-ಅನಿರುದ್ಧರ ಮಿಲನ

ಪರೀಕ್ಷಿತಮಹಾರಾಜನು ಹೇಳುತ್ತಾನೆ :

ಬಾಣಸ್ಯ ತನಯಾಮೂಷಾಮುಪಯೇಮೇ ಯದೂತ್ತಮಃ ।
ತತ್ರ ಯುದ್ಧಮಭೂದ್ಘೋರಂ ಹರಿಶಙ್ಕರಯೋರ್ಮಹತ್ ।
ಏತತ್ಸರ್ವಂ ಮಹಾಯೋಗಿನ್ ಸಮಾಖ್ಯಾತುಂ ತ್ವಮರ್ಹಸಿ ॥೧॥

“ಮಹಾಯೋಗಿಗಳೇ! ಶುಕಮಹರ್ಷಿಗಳೇ! ಯದುವಂಶಶಿರೋಮಣಿಯಾದ ಅನಿರುದ್ಧನು ಬಾಣಾಸುರನ ಮಗಳಾದ ಉಷೆಯನ್ನು ಮದುವೆಯಾದನೆಂದೂ ಈ ಪ್ರಸಂಗದಲ್ಲಿ ಶಂಕರನಿಗೂ, ಶ್ರೀಕೃಷ್ಣನಿಗೂ ಅದ್ಭುತವಾದ ಯುದ್ಧವಾಯಿತೆಂದೂ ನಾನು ಕೇಳಿದ್ದೇನೆ. ತಾವು ಈ ವೃತ್ತಾಂತವನ್ನು ವಿವರಿಸಿ ಹೇಳುವ ಕೃಪೆಮಾಡಿರಿ.”

ಶ್ರೀಶುಕಮುನಿಗಳು ಹೇಳುತ್ತಾರೆ :

“ಪರೀಕ್ಷಿತಮಹಾರಾಜ! ಮಹಾತ್ಮನಾದ ಬಲಿಯ ಕಥೆಯನ್ನು ನೀನು ಈಗಾಗಲೇ ಕೇಳಿರುವೆ. ಅವನು ವಾಮನಾವತಾರಿಯಾಗಿದ್ದ ಪರಮಾತ್ಮನಿಗೆ ಮೂರು ಲೋಕಗಳನ್ನೂ ದಾನವಾಗಿ ಕೊಟ್ಟುಬಿಟ್ಟನು. ಅಂತಹ ಮಹಾನುಭಾವನಿಗೆ ನೂರು ಮಂದಿ ಮಕ್ಕಳಿದ್ದರು. ಅವರಲ್ಲಿ ಹಿರಿಯನೇ

ಸುಪ್ರಸಿದ್ಧನಾದ ಬಾಣಾಸುರನು. ದೈತ್ಯರಾಜನಾದ ಬಲಿಯ ಔರಸಪುತ್ರನಾದ ಬಾಣಾಸುರನು ಶಿವನಲ್ಲಿಯೇ ವಿಶೇಷವಾದ ಭಕ್ತಿಯುಳ್ಳವನಾಗಿದ್ದನು. ಆತನು ಸಮಸ್ತರಿಗೂ ಮಾನ್ಯನಾಗಿದ್ದನು ; ಉದಾರನಾಗಿದ್ದನು ; ಮಹಾಬುದ್ಧಿಶಾಲಿಯಾಗಿದ್ದನು. ಸತ್ಯಸಂಧನೂ ದೃಢವಾದ ವ್ರತಾನುಷ್ಠಾನವುಳ್ಳವನೂ ಆಗಿದ್ದನು. ಆ ದಿನಗಳಲ್ಲಿ ಬಾಣಾಸುರನು ಪರಮ ರಮಣೀಯವಾಗಿದ್ದ ಶೋಣಿತಪುರದಲ್ಲಿ ರಾಜ್ಯಭಾರಮಾಡುತ್ತಿದ್ದನು. ಭಗವಂತನಾದ ಶಂಕರನ ವರಪ್ರಸಾದದಿಂದಾಗಿ ಇಂದ್ರನೇ ಮೊದಲಾದ ದೇವತೆಗಳು ಅಡಿಯಾಳುಗಳಂತೆ ಅವನ ಸೇವೆಯನ್ನು ಮಾಡುತ್ತಿದ್ದರು. ಬಾಣಾಸುರನಿಗೆ ಸಾವಿರ ತೋಳುಗಳಿದ್ದುವು. ಒಂದಾನೊಂದು ದಿನ ಶಂಕರನು ತಾಂಡವನೃತ್ಯವನ್ನಾಡುತ್ತಿದ್ದಾಗ ಬಾಣಾಸುರನು ಸಾವಿರ ತೋಳುಗಳಿಂದಲೂ ತಾಳ-ಲಯಬದ್ಧವಾಗಿ ಮೃದಂಗವೇ ಮೊದಲಾದ ವಾದ್ಯಗಳನ್ನು ಬಾರಿಸುತ್ತಾ ಮೃಡನನ್ನು ಪ್ರಸನ್ನಗೊಳಿಸಿದನು. ಸಮಸ್ತಪ್ರಾಣಿಗಳಿಗೂ ಈಶನಾದ ಭಗವಾನ್ ಶಂಕರನು ಭಕ್ತವತ್ಸಲನು, ಶರಣಾಗತರಕ್ಷಕನು. ದಯಾಮಯನಾದ ಶಂಕರನು ಬಾಣಾಸುರನಿಗೆ ಯಾವುದಾದರೂ ವರವನ್ನು ಬೇಡಿಕೊಳ್ಳುವಂತೆ ಹೇಳಿದನು. ತನ್ನ ರಾಜಧಾನಿಯನ್ನು ಯಾವಾಗಲೂ ರಕ್ಷಿಸಿಕೊಂಡಿರುವಂತೆ ಬಾಣನು ಶಂಕರನನ್ನು ಪ್ರಾರ್ಥಿಸಿಕೊಂಡನು. ಹೀಗೆಯೇ ಇರುತ್ತಿರಲಾಗಿ ಒಂದಾನೊಂದು ದಿನ ವೀರ್ಯ-ಶೌರ್ಯಗಳಿಂದ ಕೊಬ್ಬಿಹೋಗಿದ್ದ ಬಾಣಾಸುರನು ಪಕ್ಕದಲ್ಲಿಯೇ ಇದ್ದ ಪರಮೇಶ್ವರನ ಪಾದ ಕಮಲಗಳನ್ನು ಸೂರ್ಯನಿಗೆ ಸಮಾನವಾದ ಕಿರಣಗಳಿಂದ ಜಗ-ಜಗಿಸುತ್ತಿದ್ದ ಕಿರೀಟದಿಂದ ಸ್ಪರ್ಶಿಸುತ್ತಾ ಕೈಜೋಡಿಸಿಕೊಂಡು ಪರಶಿವನಿಗೆ ಹೇಳಿದನು :

ನಮಸ್ಯೇ ತ್ವಾಂ ಮಹಾದೇವ ಲೋಕಾನಾಂ ಗುರುಮೀಶ್ವರಮ್ ।
ಪುಂಸಾಮಪೂರ್ಣಕಾಮಾನಾಂ ಕಾಮಪೂರಾಮರಾಙ್ಘ್ರಿಪಮ್ ॥೭॥

"ದೇವಾಧಿದೇವನೇ! ಮಹಾದೇವ! ನೀನು ಸಮಸ್ತಚರಾಚರ ಜಗತ್ತಿಗೂ ಗುರುವೂ ಈಶ್ವರನೂ ಆಗಿರುವೆ. ನಾನು ನಿನಗೆ ಸಾಷ್ಟಾಂಗ ಪ್ರಣಾಮಮಾಡುತ್ತೇನೆ. ಯಾವ ಪುರುಷರ ಮನೋರಥಗಳು ಇದುವರೆಗೂ ಪೂರ್ಣಗೊಂಡಿಲ್ಲವೋ ಅಂತಹ ಪುರುಷರ ಮನೋರಥಗಳನ್ನು ಈಡೇರಿಸಿ ಕೊಡುವುದರಲ್ಲಿ ನೀನು ಕಲ್ಪವೃಕ್ಷಪ್ರಾಯನಾಗಿರುವೆ.

ದೋಸ್ಸಹಸ್ರಂ ತ್ವಯಾ ದತ್ತಂ ಪರಂ ಭಾರಾಯ ಮೇಽಭವತ್ ।
ತ್ರಿಲೋಕ್ಯಾಂ ಪ್ರತಿಯೋದ್ಧಾರಂ ನ ಲಭೇ ತ್ವದೃತೇ ಸಮಮ್ ॥೮॥

ಭಗವಂತನೇ! ನೀನು ನನಗೆ ಒಂದು ಸಾವಿರ ತೋಳುಗಳನ್ನು ಅನುಗ್ರಹಿಸಿ ಕೊಟ್ಟಿರುವೆ. ಆದರೆ ಆ ತೋಳುಗಳು ನನಗೆ ಬಹಳ ಭಾರವಾಗಿ ಪರಿಣಮಿಸಿವೆ. ಏಕೆಂದರೆ ಲೋಕದಲ್ಲಿ ನಿನ್ನೊಬ್ಬನನ್ನುಳಿದು ನನ್ನನ್ನೆದುರಿಸಿ ನಿಂತು ಯುದ್ಧಮಾಡುವವರನ್ನೇ ನಾನು ಕಾಣೆನಾಗಿದ್ದೇನೆ. ಆದಿದೇವನೇ! ಒಮ್ಮೆ ನನ್ನ ತೋಳುಗಳಿಗೆ ಯುದ್ಧಮಾಡುವ ತೀಟೆಯುಂಟಾಗಿ ಅದನ್ನು ನಾನು ತಡೆದುಕೊಳ್ಳಲಾರದೆ ದಿಗ್ಗಜಗಳೊಡನೆ ಯುದ್ಧಮಾಡಲು ಹೋದೆನು. ಆದರೆ ಅವುಗಳು ಕೂಡ ಹೆದರಿ ಓಡಿಹೋದುವು. ಆಗ ನಾನು ನನ್ನ ತೋಳುಗಳ ತೀಟೆಯನ್ನು ತೀರಿಸಿಕೊಳ್ಳುವುದಕ್ಕಾಗಿ ಹಾದಿಯಲ್ಲಿ ಸಿಕ್ಕಿದ ಎಷ್ಟೋ ಪರ್ವತಗಳನ್ನು ನೆಲಸಮಮಾಡಿದೆನು."

ಪರೀಕ್ಷಿತಮಹಾರಾಜ! ಬಾಣಾಸುರನ ಈ ಮಾತುಗಳನ್ನು ಕೇಳಿದ ಭಗವಾನ್ ಪರಮೇಶ್ವರನು ಕ್ರುದ್ಧನಾಗಿ ಹೇಳಿದನು :

"ಮೂಢನೇ! ಯಾವಾಗ ನಿನ್ನ ರಥದ ಧ್ವಜದಂಡವು ಮುರಿದು ಬೀಳುವುದೋ ಆಗ ನನಗೆ ಸಮಾನನಾದವನೊಬ್ಬನು ನಿನ್ನೊಡನೆ ಯುದ್ಧ ಮಾಡುತ್ತಾನೆ ಮತ್ತು ನಿನ್ನ ದರ್ಪವನ್ನು ಮುರಿದುಹಾಕುತ್ತಾನೆ."

ಪರೀಕ್ಷಿತಮಹಾರಾಜ! ಯುದ್ಧದ ತೀಟೆಯಿಂದಾಗಿ ಬಾಣಾಸುರನ ಬುದ್ಧಿಯು ಎಷ್ಟು ಕೆಟ್ಟಿತ್ತೆಂದರೆ ಪರಶಿವನ ಮಾತುಗಳನ್ನು ಕೇಳಿ ಅವನಿಗೆ ಆನಂದವೇ ಆಯಿತು. ತನ್ನ ಭುಜಗಳ ತೀಟೆಯು ತೀರುವುದೆಂಬ ಸಂತೋಷದಿಂದ ಅವನು ಮನೆಗೆ ತೆರಳಿದನು. ಆ ಮೂರ್ಖನು ಶಂಕರನ ಆದೇಶದಂತೆ ಯುದ್ಧವನ್ನೇ ನಿರೀಕ್ಷಿಸುತ್ತಿದ್ದನು. ಶಂಕರನು ಹೇಳಿದಂತೆ ನಿಶ್ಚಯವಾಗಿಯೂ ಆ ಯುದ್ಧವು ಬಾಣಾಸುರನ ವೀರ್ಯ-ಶೌರ್ಯಗಳನ್ನು ವಿನಾಶಗೊಳಿಸುವುದೇ ಆಗಿದ್ದಿತು.

ಪರೀಕ್ಷಿತಮಹಾರಾಜ! ಬಾಣಾಸುರನಿಗೆ ಉಷಾ ಎಂಬ ಹೆಸರಿನ ಕನ್ಯೆಯಿದ್ದಳು. ಒಂದು ದಿನ ಇದ್ದಕ್ಕಿದ್ದಂತೆಯೇ ಸ್ವಪ್ನದಲ್ಲಿ ಅನಿರುದ್ಧ ನೊಡನೆ ಅವಳ ಸಮಾಗಮವಾಗಿಬಿಟ್ಟಿತು. ಆಚ್ಚರಿಯ ವಿಷಯವೆಂದರೆ ಅವಳು ಅದುವರೆಗೆ ಅನಿರುದ್ಧನನ್ನು ನೋಡಿಯೂ ಇರಲಿಲ್ಲ. ಅವನ ಹೆಸ

ರನ್ನು ಕೇಳಿಯೂ ಇರಲಿಲ್ಲ. ಸ್ವಪ್ನದಲ್ಲಿ ಸಮಾಗಮವಾದನಂತರ ಅನಿ ರುದ್ಧನು ಕಾಣದಿರಲಾಗಿ ಉಷಾದೇವಿಯು "ಪ್ರಾಣಪ್ರಿಯನೇ! ನೀನು ಎಲ್ಲಿರುವೆ?" ಎಂದೆನ್ನುತ್ತಾ ಥಟ್ಟನೆ ಸಖಿಯರ ಮಧ್ಯದಲ್ಲಿ ಎದ್ದು ಕುಳಿತಳು. ಕಾಂತನನ್ನು ಕಾಣದಿರಲು ಉಷೆಯು ದುಃಖಿತಳಾದಳು ಮತ್ತು ತಾನು ಸಖಿಯರ ಮಧ್ಯದಲ್ಲಿರುವುದನ್ನರಿತು ಬಹಳವಾಗಿ ನಾಚಿಕೆಗೊಂಡಳು.

ಪರೀಕ್ಷಿತಮಹಾರಾಜ! ಬಾಣಾಸುರನಿಗೆ ಕುಂಭಾಂಡನೆಂಬ ಮಂತ್ರಿಯಿದ್ದನು. ಅವನಿಗೆ ಚಿತ್ರಲೇಖಾ ಎಂಬ ಹೆಸರಿನ ಮಗಳೊಬ್ಬಳಿದ್ದಳು. ಬಾಣಾಸುರನ ಮಗಳಾದ ಉಷಾದೇವಿಯೂ ಮತ್ತು ಕುಂಭಾಂಡನ ಮಗಳಾದ ಚಿತ್ರಲೇಖೆಯೂ ಪರಸ್ಪರ ಸಖಿಯರಾಗಿದ್ದರು. ಚಿತ್ರಲೇಖೆಯು ಉಷಾದೇವಿಯನ್ನು ಕುತೂಹಲಾವಿಷ್ಟಳಾಗಿ ಕೇಳಿದಳು :

"ಸುಂದರಿಯೇ! ರಾಜಕುಮಾರಿ! ನಿನ್ನ ಪಾಣಿಗ್ರಹಣವು ಯಾರೊಡನೆಯೂ ಇದುವರೆಗೂ ಆಗಿರುವುದಿಲ್ಲ. ಆದರೂ ನೀನು ಯಾರನ್ನೋ ಹುಡುಕುತ್ತಿರುವಂತೆ ಕಾಣುತ್ತಿದೆ. ನೀನು ಯಾರನ್ನು ಹುಡುಕುತ್ತಿರುವೆ? ನಿನ್ನ ಮನೋರಥವೇನು? ಎಲ್ಲವನ್ನೂ ಮರೆಮಾಚದೆ ನನಗೆ ಹೇಳು. ಸಾಧ್ಯವಾದರೆ ನಾನು ನಿನಗೆ ಸಹಾಯಮಾಡುವೆನು."

ಉಷೆಯು ಹೇಳುತ್ತಾಳೆ :

ದೃಷ್ಟಃ ಕಶ್ಚಿನ್ನರಃ ಸ್ವಪ್ನೇ ಶ್ಯಾಮಃ ಕಮಲಲೋಚನಃ ।
ಪೀತವಾಸಾ ಬೃಹದ್ಬಾಹುರ್ಯೋಷಿತಾಂ ಹೃದಯಙ್ಗಮಃ ॥೧೬॥

"ಚಿತ್ರಲೇಖೇ! ನೀನು ಹೇಳಿದ್ದು ನಿಜ. ನಾನೊಬ್ಬನನ್ನು ಹುಡುಕುತ್ತಿದ್ದೇನೆ. ನಾನು ನನ್ನ ಕನಸಿನಲ್ಲಿ ಒಬ್ಬ ಸುಂದರಪುರುಷನನ್ನು ಕಂಡೆನು. ಅವನು ಶ್ಯಾಮಲವರ್ಣನು. ಕಮಲಾಕ್ಷನು. ಪೀತಾಂಬರವನ್ನುಟ್ಟಿದ್ದನು. ಆಜಾನುಬಾಹುವಾಗಿದ್ದನು. ಸ್ತ್ರೀಯರ ಮನಸ್ಸುಗಳನ್ನು ಅಪಹರಿಸುವಷ್ಟು ಕಡುಚೆಲುವನಾಗಿದ್ದನು.

ತಮಹಂ ಮೃಗಯೇ ಕಾನ್ತಂ ಪಾಯಯಿತ್ವಾಧರಂ ಮಧು ।
ಕ್ವಾಪಿ ಯಾತಃ ಸ್ಪೃಹಯತೀಂ ಕ್ಷಿಪ್ತ್ವಾ ಮಾಂ ವೃಜಿನಾರ್ಣವೇ ॥೧೭॥

ಸಖಿಯೇ! ಅವನು ಮೊದಲು ತನ್ನ ಅಧರಗಳ ಮಧುವನ್ನು ನನಗೆ

ಕುಡಿಸಿದನು. ನಾನೂ ನನ್ನ ಅಧರಗಳ ಮಧುವನ್ನು ಅವನಿಗೆ ಕುಡಿಸ ಬೇಕೆನ್ನುವಷ್ಟರಲ್ಲಿಯೇ ನನ್ನನ್ನು ದುಃಖಸಾಗರದಲ್ಲಿ ಮುಳುಗಿಸಿ ಮಾಯ ವಾಗಿಬಿಟ್ಟನು. ಆ ನನ್ನ ಪ್ರಾಣವಲ್ಲಭನನ್ನು ಆಗಿನಿಂದಲೂ ನಾನು ಹುಡುಕುತ್ತಲೇ ಇದ್ದೇನೆ."

ಚಿತ್ರಲೇಖೆಯು ಹೇಳುತ್ತಾಳೆ :

"ಸಖಿಯೇ! ನಿನ್ನ ಮನಸ್ಸನ್ನು ಅಪಹರಿಸಿರುವ ಆ ಕಳ್ಳನು ಮೂರು ಲೋಕಗಳಲ್ಲಿ ಎಲ್ಲಿಯೇ ಇದ್ದರೂ ನಾನು ಹುಡುಕಿತರುತ್ತೇನೆ. ಆದರೆ ನೀನು ಅವನನ್ನು ಗುರುತಿಸಬೇಕು. ಅವನನ್ನು ನೀನು ಗುರುತಿಸಿದೆಯಾದರೆ ಖಂಡಿತವಾಗಿಯೂ ನಾನು ನಿನ್ನ ವಿರಹವೇದನೆಯನ್ನು ಶಾಂತಗೊಳಿಸುತ್ತೇನೆ. ನಾನು ಮೂರು ಲೋಕಗಳಲ್ಲಿಯೂ ಇರುವ ಸುಂದರಪುರುಷರ ಚಿತ್ರಗಳೆಲ್ಲವನ್ನೂ ಬರೆದು ನಿನಗೆ ತೋರಿಸುತ್ತೇನೆ. ಅದರಲ್ಲಿ ನಿನ್ನ ಇನಿಯನನ್ನು ನೀನು ಗುರುತಿಸಬೇಕು. ನೀನು ಗುರುತಿಸಿದನಂತರ ಆ ನಿನ್ನ ಚಿತ್ತಚೋರನು ಎಲ್ಲಿಯೇ ಇದ್ದರೂ ಆತನನ್ನು ನಿನ್ನ ಬಳಿಗೆ ಕರೆತರುತ್ತೇನೆ."

ಹೀಗೆ ಹೇಳಿದ ಚತುರೆಯಾದ ಚಿತ್ರಲೇಖೆಯು ಉಷಾದೇವಿಯೊಡನೆ ಮಾತನಾಡುತ್ತಿದ್ದಂತೆಯೇ ದೇವ-ಗಂಧರ್ವ-ಸಿದ್ಧ-ಚಾರಣರ ಚಿತ್ರಗಳನ್ನೂ, ಪನ್ನಗ-ದೈತ್ಯ-ವಿದ್ಯಾಧರರ ಚಿತ್ರಗಳನ್ನೂ, ಯಕ್ಷ-ಮನುಷ್ಯರ ಚಿತ್ರಗಳನ್ನೂ ಚಿತ್ರಿಸಿದಳು. ಮನುಷ್ಯರಲ್ಲಿ ಚಿತ್ರಲೇಖೆಯು ವೃಷ್ಣಿವಂಶದ ವಸುದೇವನ ಚಿತ್ರವನ್ನೂ, ಅವನ ತಂದೆಯಾದ ಶೂರಸೇನನ ಚಿತ್ರವನ್ನೂ, ಬಲರಾಮನ ಚಿತ್ರವನ್ನೂ ಮತ್ತು ಶ್ರೀಕೃಷ್ಣನ ಚಿತ್ರವನ್ನೂ ಚಿತ್ರಿಸಿದಳು. ಉಷಾದೇವಿಗೆ ತನ್ನ ಪ್ರಿಯತಮನು ಚಿತ್ರಲೇಖೆಯು ಬರೆದ ಯಾವ ಚಿತ್ರಗಳಲ್ಲಿಯೂ ಕಾಣಬರಲಿಲ್ಲ. ಮುಂದೆ ಚಿತ್ರಲೇಖೆಯು ಚಿತ್ರಿಸಿದ ಪ್ರದ್ಯುಮ್ನನ ಚಿತ್ರವನ್ನು ಕಂಡೊಡನೆಯೇ ಉಷೆಯು ಸ್ವಲ್ಪ ನಾಚಿದಳು. ಆ ಚಿತ್ರವು ತನ್ನ ಪ್ರಿಯತಮನನ್ನು ಹೋಲುತ್ತಿದ್ದಿತೇ ಹೊರತು ಅದು ತನ್ನ ಪ್ರಿಯತಮನ ಚಿತ್ರವೇ ಆಗಿರಲಿಲ್ಲ. ಮುಂದೆ ಚಿತ್ರಲೇಖೆಯು ಅನಿರುದ್ಧನ ಚಿತ್ರವನ್ನೂ ಚಿತ್ರಿಸಿದಳು. ಆ ಚಿತ್ರವನ್ನು ನೋಡುತ್ತಲೇ ನಾಚಿಕೆಯಿಂದ ತಲೆತಗ್ಗಿಸಿದ ಉಷೆಯು ಸ್ವಲ್ಪ ಹೊತ್ತಿನವರೆಗೆ ತಲೆಯನ್ನು ಎತ್ತಲೇ ಇಲ್ಲ. ಮಂದಹಾಸ

ಬೀರುತ್ತಾ ಮೆಲ್ಲ-ಮೆಲ್ಲನೆ ಹೇಳಿದಳು. **'ಸೋಽಸೌ'** 'ಆ ನನ್ನ ಪ್ರಿಯ ತಮನು ಇವನೇ ಆಗಿದ್ದಾನೆ.'

ಪರೀಕ್ಷಿತಮಹಾರಾಜ! ಯೋಗವಿದ್ಯೆಯಲ್ಲಿ ಪರಿಣತಳಾಗಿದ್ದ ಚಿತ್ರ ಲೇಖೆಗೆ ಆ ಚಿತ್ರವು ಶ್ರೀಕೃಷ್ಣನ ಮೊಮ್ಮಗನದ್ದೆಂದು ತಿಳಿದುಹೋಯಿತು. ಆ ರಾತ್ರಿಯಲ್ಲಿಯೇ ಅವಳು ಆಕಾಶಮಾರ್ಗದ ಮೂಲಕವಾಗಿ ಶ್ರೀಕೃಷ್ಣನಿಂದ ಪಾಲಿಸಲ್ಪಡುತ್ತಿದ್ದ ದ್ವಾರಕಾಪಟ್ಟಣಕ್ಕೆ ಹೋದಳು. ಅಲ್ಲಿಂದ ಅನಿರುದ್ಧನಿದ್ದ ಅರಮನೆಗೂ ಹೋದಳು. ಹಂಸತೂಲಿಕಾತಲ್ಪದ ಮೇಲೆ ಪ್ರದ್ಯುಮ್ನಪುತ್ರನು ಮಲಗಿದ್ದನು. ಚಿತ್ರಲೇಖೆಯು ಯೋಗಸಿದ್ಧಿಯನ್ನಾಶ್ರಯಿಸಿ ಅನಿರುದ್ಧನನ್ನು ಎತ್ತಿಕೊಂಡು ಶೋಣಿತಪುರಕ್ಕೆ ಹೋಗಿ ಅಂತಃಪುರದಲ್ಲಿ ವಿರಹವೇದನೆಯಿಂದ ಪರಿತಪಿಸುತ್ತಿದ್ದ ತನ್ನ ಸಖಿಯಾದ ಉಷಾದೇವಿಗೆ ಆತನ ದರ್ಶನವನ್ನು ಮಾಡಿಸಿದಳು. ಕಡುಚೆಲುವನಾದ ತನ್ನ ಪ್ರಾಣವಲ್ಲಭನನ್ನು ಹೊಂದಿದ ಆನಂದದಿಂದಾಗಿ ಉಷೆಯ ಮುಖವರಳಿತು. ಅನಿರುದ್ಧನೊಡನೆ ತನ್ನ ಅಂತಃಪುರದಲ್ಲಿ ಆಕೆಯು ವಿಹರಿಸತೊಡಗಿದಳು. ಅವಳ ಅಂತಃಪುರವು ಪರಪುರುಷರಿಂದ ನೋಡಲು ಕೂಡ ಅಸಾಧ್ಯವಾಗಿದ್ದಿತು.

ಉಷಾ-ಅನಿರುದ್ಧರ ಪರಸ್ಪರ ಪ್ರೀತಿಯು ದಿನ-ದಿನಕ್ಕೂ ವೃದ್ಧಿ ಹೊಂದುತ್ತಿದ್ದಿತು. ಬಹುಮೂಲ್ಯವಾದ ವಸ್ತ್ರಗಳಿಂದಲೂ, ಪುಷ್ಪಹಾರ ಗಳಿಂದಲೂ, ಗಂಧ-ಧೂಪ-ದೀಪಾಸನಾದಿಗಳಿಂದಲೂ, ಸುಮಧುರವಾದ ಪಾನೀಯಗಳಿಂದಲೂ, ಭಕ್ಷ್ಯ-ಭೋಜ್ಯಗಳಿಂದಲೂ, ಮೃದು-ಮಧುರವಾದ ಮಾತಿನಿಂದಲೂ, ಸೇವಾ-ಶುಶ್ರೂಷೆಗಳಿಂದಲೂ ಉಷಾದೇವಿಯು ಅನಿರುದ್ಧನನ್ನು ಅಮೋಘವಾದ ರೀತಿಯಲ್ಲಿ ಸತ್ಕರಿಸುತ್ತಿದ್ದಳು. ಆಕೆಯು ಪ್ರೇಮದಿಂದಲೇ ಅನಿರುದ್ಧನ ಮನಸ್ಸನ್ನು ಸಂಪೂರ್ಣವಾಗಿ ಸೂರೆಗೊಂಡಿ ದ್ದಳು. ಆಕೆಯ ಅಂತಃಪುರದಲ್ಲಿ ನಿಗೂಢನಾಗಿದ್ದ ಅನಿರುದ್ಧನು ತನ್ನನ್ನೇ ತಾನು ಮರೆತುಕೊಂಡುಬಿಟ್ಟನು. 'ತಾನು ಎಲ್ಲಿಗೆ ಬಂದಿದ್ದೇನೆ? ತಾನು ಬಂದು ಎಷ್ಟು ದಿನಗಳಾದುವು?'–ಎಂಬುದೂ ಅವನಿಗೆ ತಿಳಿದಿರಲಿಲ್ಲ.

ಯದುಕುಮಾರನಾದ ಅನಿರುದ್ಧನ ಸಹವಾಸದಿಂದಾಗಿ ಉಷಾ ದೇವಿಯ ಕನ್ಯಾವ್ರತವು ಭ್ರಷ್ಟವಾಗಿದ್ದಿತು. ಅವಳ ಶರೀರದಲ್ಲಿ ಕಾಣುತ್ತಿದ್ದ

ಚಿಹ್ನೆಗಳು ಇದನ್ನು ಸ್ಪಷ್ಟವಾಗಿ ಸೂಚಿಸುತ್ತಿದ್ದುವು. ಆ ಚಿಹ್ನೆಗಳನ್ನು ಯಾವ ರೀತಿಯಲ್ಲಿಯೂ ಮುಚ್ಚಿಡಲಾಗುತ್ತಿರಲಿಲ್ಲ. ಮೇಲಾಗಿ ಪ್ರಾಪ್ತವಯಸ್ಕಳಾಗಿದ್ದ ಉಷಾದೇವಿಯು ಅತ್ಯಂತಪ್ರಸನ್ನಳಾಗಿರುತ್ತಿದ್ದಳು. ಅವಳ ಆಗಿನ ಲಕ್ಷಣಗಳಿಂದ ಪಹರೆಯವರು ಉಷೆಗೆ ಪುರುಷನೊಡನೆ ಸಂಬಂಧವಾಗಿರಬಹುದೆಂದು ಸಂದೇಹಿಸಿದರು. ಒಡನೆಯೇ ಅವರೆಲ್ಲರೂ ರಾಜನಾದ ಬಾಣಾಸುರನ ಬಳಿಗೆ ಹೋಗಿ ತಮ್ಮ ಸಂದೇಹವನ್ನು ರಾಜನಿಗೆ ನಿವೇದಿಸಿದರು :

"ರಾಕ್ಷಸರಾಜನೇ! ನಾವು ನಿನ್ನ ಮಗಳಾದ ಉಷೆಯಲ್ಲಿ ಕುಲಕಳಂಕಿತ ವಾದ ಚೇಷ್ಟೆಗಳನ್ನು ಕಾಣುತ್ತಿದ್ದೇವೆ. ಪ್ರಭುವೇ! ನಾವು ಎಡೆಬಿಡದೆ ಅಂತಃಪುರದ ಬಾಗಿಲನ್ನು ಕಾಯುತ್ತಲೇ ಇದ್ದೇವೆ. ಹೊರಗಿನಿಂದ ಯಾವ ಒಬ್ಬ ವ್ಯಕ್ತಿಯೂ ಒಳಗೆ ಹೋಗಲು ಸಾಧ್ಯವೇ ಇಲ್ಲ. ಪುರುಷರಿಂದ ಪರಮ ಪ್ರಯಾಸದಿಂದಲೂ ನೋಡಲು ಅಶಕ್ಯಳಾಗಿರುವ ಉಷಾದೇವಿಯ ಕನ್ಯಾ ವ್ರತವು ಹೇಗೆ ಭ್ರಷ್ಟವಾಯಿತೆಂಬುದನ್ನು ನಾವು ತಿಳಿಯದವರಾಗಿದ್ದೇವೆ."

ಪರೀಕ್ಷಿತಮಹಾರಾಜ! ತನ್ನ ಮಗಳ ಚಾರಿತ್ರ್ಯವು ದೂಷಿತವಾಗಿರುವು ದೆಂಬುದನ್ನು ಪಹರೆಯವರಿಂದ ಕೇಳಿ ಬಾಣಾಸುರನು ಅತಿದುಃಖಿತನಾದನು. ಒಡನೆಯೇ ಮಗಳ ಅಂತಃಪುರಕ್ಕೆ ಹೋಗಿ ಅಲ್ಲಿ ಅನಿರುದ್ಧನು ಕುಳಿತಿರುವು ದನ್ನು ನೋಡಿದನು.

ಪರೀಕ್ಷಿತಮಹಾರಾಜ! ಅನಿರುದ್ಧನು ಕಾಮದೇವನ ಅವತಾರನಾದ ಪ್ರದ್ಯುಮ್ನನ ಮಗನಾಗಿದ್ದನು. ಈ ಕಾರಣದಿಂದಲೇ ಅವನು ಮೂರು ಲೋಕಗಳಲ್ಲಿ ಏಕಮಾತ್ರ ಸುಂದರಪುರುಷನಾಗಿದ್ದನು. ಶ್ಯಾಮಲವರ್ಣ ನಾಗಿದ್ದನು. ಕಮಲಾಕ್ಷನಾಗಿದ್ದನು. ಪೀತಾಂಬರವನ್ನು ಉಟ್ಟಿದ್ದನು. ಆಜಾನು ಬಾಹುವಾಗಿದ್ದನು. ಆತನ ಭುಜಗಳು ಮಾಂಸಲವಾಗಿದ್ದುವು. ಕುಂಡಲಗಳ ಕಾಂತಿಯಿಂದಲೂ, ಗುಂಗುರುಕೂದಲುಗಳಿಂದಲೂ, ಮಂದಹಾಸ ದಿಂದಲೂ, ಕಡೆಗಣ್ಣಿನ ನೋಟದಿಂದಲೂ ಸಮಲಂಕೃತವಾದ ಮುಖಪಂಕಜ ದಿಂದ ಆತನು ಬೆಳಗುತ್ತಿದ್ದನು. ಆ ಸಮಯದಲ್ಲಿ ಅನಿರುದ್ಧನು ಶುಭಲಕ್ಷಣ ಗಳಿಂದ ಸಂಪನ್ನಳಾಗಿದ್ದ ಉಷಾದೇವಿಯೊಡನೆ ಪಗಡೆಯಾಡುತ್ತಿದ್ದನು. ಆಕೆಯ ಅಂಗಸಂಗದಿಂದಾಗಿ ಆಕೆಯ ಸ್ತನಮಂಡಲದ ಕುಂಕುಮದಿಂದ

ಕೆಂಪಾಗಿದ್ದ ಮಲ್ಲಿಗೇಹೂವಿನ ಹಾರವನ್ನು ಭುಜಗಳಲ್ಲಿ ಧರಿಸಿದ್ದನು. ಹೀಗೆ ತನ್ನ ಮಗಳಾದ ಉಷಾದೇವಿಯ ಎದುರಿನಲ್ಲೇ ಕುಳಿತು ಆಟವಾಡುತ್ತಿದ್ದ ಅನಿರುದ್ಧನನ್ನು ಕಂಡು ಬಾಣಾಸುರನು ಅಚ್ಚರಿಗೊಂಡನು. ತನ್ನನ್ನು ಕೊಲ್ಲುವುದಕ್ಕಾಗಿ ಆಯುಧಪಾಣಿಗಳಾದ ಸಾವಿರಾರು ರಾಜಭಟರೊಡನೆ ಬಾಣಾಸುರನು ಬಂದುದನ್ನು ಅನಿರುದ್ಧನು ನೋಡಿದನು. ಒಡನೆಯೇ ಅನಿರುದ್ಧನು ಅವರೆಲ್ಲರನ್ನೂ ಸಂಹರಿಸುವ ಇಚ್ಛೆಯಿಂದ ಲೋಹಮಯ ವಾದ, ಅತಿಭಯಂಕರವಾಗಿದ್ದ ಪರಿಘಾಯುಧವನ್ನು ಹಿಡಿದು–ಕಾಲದಂಡ ವನ್ನು ಹಿಡಿದು ನಿಂತಿರುವ ಮೃತ್ಯುವಿನೋಪಾದಿಯಲ್ಲಿ ಯುದ್ಧಸನ್ನದ್ಧನಾಗಿ ನಿಂತನು. ಬಳಿಕ ನಾಯಿಗಳ ಗುಂಪನ್ನು ಧ್ವಂಸಮಾಡುವ ಕಾಡುಹಂದಿ ಯಂತೆ ಅನಿರುದ್ಧನು ತನ್ನನ್ನು ಕೊಲ್ಲಬೇಕೆಂಬ ಆಕಾಂಕ್ಷೆಯಿಂದ ಮುನ್ನುಗ್ಗಿ ಬರುತ್ತಿದ್ದ ಸೈನಿಕರೆಲ್ಲರನ್ನೂ ಪರಿಘಾಯುಧದಿಂದ ಧ್ವಂಸಮಾಡಿಬಿಟ್ಟನು. ಅನಿರುದ್ಧನ ಪರಿಘಾಯುಧದ ಪ್ರಹಾರದಿಂದಾಗಿ ಹಲವಾರು ಸೈನಿಕರ ತಲೆ ಗಳು ಚೂರ್ಣವಾದುವು. ಕೈ-ಕಾಲುಗಳೂ, ತೊಡೆಗಳೂ ಮುರಿದು ಹೋದುವು. ಪರಿಘಾಯುಧದ ಪ್ರಹಾರವನ್ನು ತಡೆದುಕೊಳ್ಳಲಾರದೆ ಅಳಿದುಳಿದಿದ್ದ ಬಾಣಾಸುರನ ಸೈನಿಕರು ಅಂತಃಪುರದಿಂದ ಪಲಾಯನ ಮಾಡಿದರು. ಅನಿರುದ್ಧನು ತನ್ನ ಸೈನಿಕರನ್ನು ಧ್ವಂಸಮಾಡುತ್ತಿರುವುದನ್ನು ನೋಡಿ ಕುಪಿತನಾದ, ಬಲಿಯ ಮಗನಾದ, ಬಲಿಷ್ಠನಾದ ಬಾಣಾಸುರನು ನಾಗಪಾಶದಿಂದ ಆತನನ್ನು ಬಂಧಿಸಿಬಿಟ್ಟನು. ತನ್ನ ಪ್ರಿಯತಮನು ಬಾಣನ ನಾಗಪಾಶಗಳಿಂದ ಬಂಧಿಸಲ್ಪಟ್ಟನೆಂಬ ವಾರ್ತೆಯನ್ನು ಕೇಳಿ ಶೋಕ ದಿಂದಲೂ, ವಿಷಾದದಿಂದಲೂ ಕಳವಳಗೊಂಡ ಉಷಾದೇವಿಯು ಕಣ್ಣೀರು ಸುರಿಸುತ್ತಾ ಗೋಳಾಡಿದಳು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೬೨ನೆಯ ಅಧ್ಯಾಯವು ಮುಗಿಯಿತು.

ಶ್ರೀಕೃಷ್ಣನೊಡನೆ ಬಾಣಾಸುರನ ಯುದ್ಧ

ಶ್ರೀಶುಕಮುನಿಗಳು ಹೇಳುತ್ತಾರೆ :

ಅಪಶ್ಯತಾಂ ಚಾನಿರುದ್ಧಂ ತದ್ಬನ್ಧೂನಾಂ ಚ ಭಾರತ ।
ಚತ್ವಾರೋ ವಾರ್ಷಿಕಾ ಮಾಸಾ ವ್ಯತೀಯುರನುಶೋಚತಾಮ್ ॥೧॥

ಪರೀಕ್ಷಿತಮಹಾರಾಜ! ವರ್ಷಾಕಾಲದ ನಾಲ್ಕು ಮಾಸಗಳೂ ಕಳೆದು ಹೋದುವು. ಅನಿರುದ್ಧನು ಎಲ್ಲಿಗೆ ಹೋದನು? ಎಲ್ಲಿರುವನು?–ಎಂಬುದೇ ಯಾರಿಗೂ ತಿಳಿಯಲಿಲ್ಲ. ಅವನ ಬಂಧುಗಳು ಈ ಘಟನೆಯಿಂದಾಗಿ ಶೋಕಾ ಕುಲರಾದರು. ಆ ವೇಳೆಗೆ ನಾರದರು ಆಗಮಿಸಿ, ಯೋಗಿನಿಯು ಅನಿರುದ್ಧ ನನ್ನು ಶೋಣಿತಪುರಕ್ಕೆ ಕರೆದುಕೊಂಡು ಹೋದುದು ; ಅನಿರುದ್ಧನು ಬಾಣಾಸುರನ ಸೈನಿಕರನ್ನು ಧ್ವಂಸಮಾಡಿದುದು ; ಇದಕ್ಕೆ ಪ್ರತಿಯಾಗಿ ಬಾಣಾ ಸುರನು ನಾಗಪಾಶದಿಂದ ಅನಿರುದ್ಧನನ್ನು ಬಂಧಿಸಿರುವುದು–ಈ ಎಲ್ಲ ಸಮಾಚಾರಗಳನ್ನೂ ಶ್ರೀಕೃಷ್ಣನಿಗೆ ಹೇಳಿದರು. ಶ್ರೀಕೃಷ್ಣನೇ ತಮ್ಮ ಆರಾಧ್ಯದೇವನೆಂದು ಭಾವಿಸಿದ್ದ ವೃಷ್ಣಿಪ್ರಮುಖರು ಒಡನೆಯೇ ಶೋಣಿತ ಪುರಕ್ಕೆ ಪ್ರಯಾಣಮಾಡಿದರು. ಬಲರಾಮ-ಶ್ರೀಕೃಷ್ಣರ ಅನುಯಾಯಿ ಗಳಾದ ಪ್ರದ್ಯುಮ್ನ, ಸಾತ್ಯಕಿ, ಗದ, ಸಾಂಬ, ಸಾರಣ, ನಂದ, ಉಪನಂದ ಮತ್ತು ಭದ್ರ–ಇವರೇ ಮೊದಲಾದ ವೃಷ್ಣಿಯೋಧರು ಹನ್ನೆರಡು ಅಕ್ಷೌಹಿಣೀಸೈನ್ಯಸಮೇತರಾಗಿ ಶೋಣಿತಪುರಕ್ಕೆ ಹೋಗಿ ಆ ಪಟ್ಟಣವನ್ನು ನಾಲ್ಕು ಕಡೆಗಳಿಂದಲೂ ಮುತ್ತಿಗೆ ಹಾಕಿದರು. ಪಟ್ಟಣದ ಉದ್ಯಾನವನ ಗಳನ್ನೂ, ಕೋಟೆಗಳನ್ನೂ, ಕೊತ್ತಲುಗಳನ್ನೂ, ಮಹಾದ್ವಾರಗಳನ್ನೂ ಯದುಸೈನಿಕರು ಧ್ವಂಸಮಾಡುತ್ತಿರುವುದನ್ನು ನೋಡಿ ಕುಪಿತನಾದ ಬಾಣಾ ಸುರನು ಅದೇ ಸಂಖ್ಯೆಯ ಹನ್ನೆರಡು ಅಕ್ಷೌಹಿಣೀಸೈನ್ಯದೊಡನೆ ಪಟ್ಟಣ ದಿಂದ ಹೊರಬಂದನು. ಬಾಣಾಸುರನ ಸಹಾಯಾರ್ಥವಾಗಿ ಸಾಕ್ಷಾತ್ ರುದ್ರದೇವನೇ ವೃಷಭಾರೂಢನಾಗಿ ತನ್ನ ಮಗನಾದ ಕಾರ್ತಿಕೇಯನಿಂದಲೂ ಪ್ರಮಥಗಣಗಳಿಂದಲೂ ಸಮಾವೃತನಾಗಿ ರಣಭೂಮಿಗೆ ಬಂದು ಬಲರಾಮ-ಕೇಶವರೊಡನೆ ಯುದ್ಧದಲ್ಲಿ ತೊಡಗಿದನು.

ಮಹಾರಾಜ! ಶಂಕರನಿಗೂ ಮತ್ತು ಶ್ರೀಕೃಷ್ಣನಿಗೂ, ಕಾರ್ತಿಕೇಯನಿಗೂ ಮತ್ತು ಪ್ರದ್ಯುಮ್ನನಿಗೂ ಅತ್ಯಂತ ಭಯಂಕರವೂ, ಅತ್ಯದ್ಭುತವೂ, ರೋಮಾಂಚಕಾರಿಯೂ ಆದ ಮಹಾಯುದ್ಧವು ನಡೆಯಿತು. ಬಲರಾಮನೊಡನೆ ಕುಂಭಾಂಡ-ಕೂಪಕರ್ಣರು ಯುದ್ಧಮಾಡುತ್ತಿದ್ದರು. ಬಾಣಾಸುರನ ಮಗನೊಡನೆ ಸಾಂಬನು ಯುದ್ಧಮಾಡುತ್ತಿದ್ದನು. ಬಾಣಾಸುರನೊಡನೆ ಸಾತ್ಯಕಿಯು ಯುದ್ಧದಲ್ಲಿ ತೊಡಗಿದ್ದನು. ಬ್ರಹ್ಮನೇ ಮೊದಲಾದ ಸುರಾಧೀಶರೂ, ಋಷಿ-ಮುನಿಗಳೂ, ಸಿದ್ಧ-ಚಾರಣರೂ, ಗಂಧರ್ವಾಪ್ಸರೆಯರೂ, ಯಕ್ಷರೂ ಆ ಯುದ್ಧವನ್ನು ನೋಡುವ ಸಲುವಾಗಿ ವಿಮಾನಗಳಲ್ಲಿ ಕುಳಿತು ಆಗಮಿಸಿದ್ದರು. ಶ್ರೀಕೃಷ್ಣನು ಶಂಕರನ ಅನು ಯಾಯಿಗಳಾದ ಭೂತ-ಪ್ರೇತಗಳನ್ನೂ, ಪ್ರಮಥಗಣಗಳನ್ನೂ, ಗುಹ್ಯಕ ರನ್ನೂ, ಡಾಕಿನೀ-ಯಾತುಧಾನರನ್ನೂ, ವೇತಾಲ-ವಿನಾಯಕರನ್ನೂ, ಪ್ರೇತ ಗಣಗಳನ್ನೂ, ಮಾತೃಗಳನ್ನೂ, ಪಿಶಾಚರನ್ನೂ, ಕೂಶ್ಮಾಂಡರನ್ನೂ– ಶಾರ್ಙ್ಗಧನುಸ್ಸಿನಿಂದ ಬಿಡಲ್ಪಟ್ಟ ತೀಕ್ಷ್ಣವಾದ ಅಗ್ರಭಾಗಗಳುಳ್ಳ ಬಾಣ ಗಳಿಂದ ಪ್ರಹರಿಸಿ ಓಡಿಸಿಬಿಟ್ಟನು. ಪಿನಾಕಪಾಣಿಯಾದ ಶಂಕರನು ಇದನ್ನು ನೋಡಿ ಶ್ರೀಕೃಷ್ಣನ ಮೇಲೆ ನಾನಾಪ್ರಕಾರವಾದ, ಅಸಂಖ್ಯಾತವಾದ ಅಸ್ತ್ರ-ಶಸ್ತ್ರಗಳನ್ನು ಪ್ರಯೋಗಿಸಿದನು. ಆದರೆ ಶ್ರೀಕೃಷ್ಣನು ಮಹಾ-ಮಹಾ ಶಸ್ತ್ರಗಳ ಪ್ರಯೋಗದಿಂದ ಸ್ವಲ್ಪವಾದರೂ ಅಚ್ಚರಿಗೊಳ್ಳದೆ ಪ್ರತ್ಯಸ್ತ್ರಗಳಿಂದ ಶಂಕರನು ಬಿಟ್ಟ ಬಾಣಗಳೆಲ್ಲವನ್ನೂ ಉಪಶಮನಗೊಳಿಸಿದನು. ಭಗವಾನ್ ಶ್ರೀಕೃಷ್ಣನು ಬ್ರಹ್ಮಾಸ್ತ್ರವನ್ನು ಉಪಶಮನಗೊಳಿಸಲು ಬ್ರಹ್ಮಾಸ್ತ್ರವನ್ನೇ ಪ್ರಯೋಗಿಸಿದನು. ವಾಯವ್ಯಾಸ್ತ್ರಕ್ಕೆ ಪ್ರತಿಯಾಗಿ ಪರ್ವತಾಸ್ತ್ರವನ್ನೂ, ಆಗ್ನೇಯಾಸ್ತ್ರಕ್ಕೆ ಪ್ರತಿಯಾಗಿ ಪರ್ಜನ್ಯಾಸ್ತ್ರವನ್ನೂ, ಪಾಶುಪತಾಸ್ತ್ರಕ್ಕೆ ಪ್ರತಿ ಯಾಗಿ ನಾರಾಯಣಾಸ್ತ್ರವನ್ನೂ ಪ್ರಯೋಗಿಸಿದನು. ಅನಂತರ ಭಗವಾನ್ ಶ್ರೀಕೃಷ್ಣನು ಜೃಂಭಣಾಸ್ತ್ರವನ್ನು ಪ್ರಯೋಗಿಸಿ ಮಹಾದೇವನನ್ನು ವಿಮೋಹಗೊಳಿಸಿದನು. ಜೃಂಭಣಾಸ್ತ್ರದ ಪ್ರಭಾವದಿಂದಾಗಿ ಶಂಕರನು ಯುದ್ಧವನ್ನು ನಿಲ್ಲಿಸಿ ಆಕಳಿಸುತ್ತಲೇ ಇರಬೇಕಾಯಿತು. ಆ ಸಮಯದಲ್ಲಿ ಶ್ರೀಕೃಷ್ಣನು ಕತ್ತಿ-ಗದೆ-ಬಾಣ–ಇವೇ ಮುಂತಾದ ಆಯುಧಗಳಿಂದ ಬಾಣಾಸುರನ ಸೈನಿಕರನ್ನು ಧ್ವಂಸಮಾಡಿಬಿಟ್ಟನು.

ಮತ್ತೊಂದು ವಿಭಾಗದಲ್ಲಿ ಸ್ಕಂದನು ಪ್ರದ್ಯುಮ್ನನ ಬಾಣಗಳ ಸಮೂಹಗಳಿಂದ ಸತತವಾಗಿ ಪ್ರಹರಿಸಲ್ಪಡುತ್ತಿದ್ದನು. ಅವನ ಅಂಗಾಂಗ ಗಳಿಂದಲೂ ಬಾಣಪ್ರಹಾರದಿಂದಾದ ಗಾಯಗಳಿಂದ ರಕ್ತವು ಸೋರುತ್ತಿದ್ದಿತು. ಆ ಪ್ರಹಾರವನ್ನು ತಡೆದುಕೊಳ್ಳಲಾರದೆ ಸ್ಕಂದನು ನವಿಲಿನ ಮೇಲೆ ಕುಳಿತು ರಣರಂಗದಿಂದ ಪಲಾಯನಮಾಡಿದನು.

ಬಲರಾಮನ ಮುಸಲಾಯುಧಪ್ರಹಾರದಿಂದ ಕುಂಭಾಂಡ-ಕೂಪ ಕರ್ಣರಿಬ್ಬರೂ ಬಹಳವಾಗಿ ಗಾಯಗೊಂಡು ರಣರಂಗದಲ್ಲೇ ಬಿದ್ದು ಹೋದರು. ಸೇನಾಪತಿಗಳು ಹತರಾದನಂತರ ಅವರ ಅಧೀನದಲ್ಲಿದ್ದ ಸೈನಿಕ ರೆಲ್ಲರೂ ದಿಕ್ಕಾಪಾಲಾಗಿ ಓಡಿಹೋದರು. ತನ್ನ ಸೈನ್ಯವು ಛಿನ್ನ-ಭಿನ್ನವಾಗು ತ್ತಿರುವುದನ್ನು ನೋಡಿ ಅಸಹನಶೀಲನಾದ ಬಾಣಾಸುರನು ಸಾತ್ಯಕಿಯನ್ನು ಬಿಟ್ಟು ಶ್ರೀಕೃಷ್ಣನನ್ನು ಆಕ್ರಮಿಸಲು ಅತ್ತಕಡೆಗೆ ಧಾವಿಸಿದನು. ರಣ ದುರ್ಮದನಾದ ಬಾಣಾಸುರನು ತನ್ನ ಸಾವಿರ ಕೈಗಳಿಂದಲೂ ಐದು ನೂರು ಧನುಸ್ಸುಗಳನ್ನು ಹಿಡಿದು ಹೆದೆಯೇರಿಸಿ ಪ್ರತಿಯೊಬ್ಬ ಸೈನಿಕನ ಮೇಲೂ ಎರಡೆರಡು ಬಾಣಗಳನ್ನು ಪ್ರಯೋಗಿಸಿದನು. ಆದರೆ ಭಗವಾನ್ ಶ್ರೀಕೃಷ್ಣನು ಒಂದೇ ಬಾರಿಗೆ ಬಾಣಾಸುರನ ಐದು ನೂರು ಧನುಸ್ಸುಗಳನ್ನೂ ಕತ್ತರಿಸಿದ ನಲ್ಲದೇ ಅವನ ಸಾರಥಿ-ರಥ-ಕುದುರೆಗಳನ್ನೂ ಧ್ವಂಸಮಾಡಿ ಪಾಂಚಜನ್ಯ ಶಂಖವನ್ನೂದಿದನು.

ಪರೀಕ್ಷಿತಮಹಾರಾಜ! ಕೋಟರಾ ಎಂಬ ಹೆಸರಿನ ದೇವತೆಯು ಬಾಣಾಸುರನಿಗೆ ಧರ್ಮಮಾತೆಯಾಗಿದ್ದಳು. ಅವಳು ತನ್ನ ಉಪಾಸಕ ಪುತ್ರನ ಪ್ರಾಣಗಳ ರಕ್ಷಣಾರ್ಥವಾಗಿ ತಲೆಗೆದರಿಕೊಂಡು ಬೆತ್ತಲೆಯಾಗಿ ಶ್ರೀಕೃಷ್ಣನ ಮುಂದೆ ನಿಂತಳು. ಆಗ ಗದಾಗ್ರಜನಾದ ಶ್ರೀಕೃಷ್ಣನು ತನ್ನ ಮುಖವನ್ನು ಹಿಂದಕ್ಕೆ ತಿರುಗಿಸಿ ಬೆತ್ತಲೆಯಾಗಿ ನಿಂತಿದ್ದ ಆ ದೇವತೆಯನ್ನು ನೋಡ ಲಿಲ್ಲ. ಅಷ್ಟರಲ್ಲಿಯೇ ಧನುಸ್ಸುಗಳನ್ನೂ, ರಥವನ್ನೂ ಕಳೆದುಕೊಂಡ ಬಾಣಾಸುರನು ಪಟ್ಟಣಕ್ಕೆ ಹಿಂದಿರುಗಿದನು.

ಇತ್ತಲಾಗಿ ಶಂಕರನ ಭೂತಗಣಗಳೆಲ್ಲವೂ ಪಲಾಯನಮಾಡಿದನಂತರ ಮೂರು ಶಿರಸ್ಸುಗಳನ್ನೂ ಮೂರು ಕಾಲುಗಳನ್ನೂ ಹೊಂದಿದ್ದ ಮಾಹೇಶ್ವರ

ಜ್ವರವು ಹತ್ತು ದಿಕ್ಕುಗಳನ್ನೂ ದಹಿಸಿಬಿಡುವುದೋ ಎಂಬಂತೆ ಆರ್ಭಟ ಮಾಡುತ್ತಾ ಶ್ರೀಕೃಷ್ಣನ ಬಳಿಗೆ ಬಂದಿತು. ನಾರಾಯಣಸ್ವರೂಪಿಯಾದ ಭಗವಾನ್ ಶ್ರೀಕೃಷ್ಣನು ತನ್ನ ಕಡೆಗೆ ಮಾಹೇಶ್ವರಜ್ವರವು ರಭಸದಿಂದ ಬರುತ್ತಿರುವುದನ್ನು ನೋಡಿ ಅದನ್ನು ಎದುರಿಸಲು ತನ್ನದೇ ಆದ ವೈಷ್ಣವಜ್ವರವನ್ನು ಬಿಟ್ಟುಬಿಟ್ಟನು. ವೈಷ್ಣವ ಮತ್ತು ಮಾಹೇಶ್ವರಜ್ವರಗಳೆರಡೂ ಪರಸ್ಪರವಾಗಿ ಕಾದಾಡತೊಡಗಿದುವು. ಕಡೆಯಲ್ಲಿ ವೈಷ್ಣವಜ್ವರದ ತೇಜಸ್ಸಿನಿಂದ ಮಾಹೇಶ್ವರಜ್ವರವು ಪೀಡಿಸಲ್ಪಟ್ಟು ಕೂಗಿಕೊಳ್ಳಲು ಪ್ರಾರಂಭಿಸಿತು. ಭಯಗೊಂಡಿದ್ದ ಅದಕ್ಕೆ ಅಭಯವನ್ನು ನೀಡುವವರೇ ಯಾರೂ ಇರಲಿಲ್ಲ. ಆಗ ಅದು ಕೈಜೋಡಿಸಿಕೊಂಡು ಶ್ರೀಕೃಷ್ಣನನ್ನೇ ಶರಣುಹೊಂದಿ ಪ್ರಾರ್ಥಿಸಿತು:

ನಮಾಮಿ ತ್ವಾನನ್ತಶಕ್ತಿಂ ಪರೇಶಂ
ಸರ್ವಾತ್ಮಾನಂ ಕೇವಲಂ ಜ್ಞಪ್ತಿಮಾತ್ರಮ್ ।
ವಿಶ್ವೋತ್ಪತ್ತಿಸ್ಥಾನಸಂರೋಧಹೇತುಂ
ಯತ್ತದ್ಬ್ರಹ್ಮ ಬ್ರಹ್ಮಲಿಙ್ಗಂ ಪ್ರಶಾನ್ತಮ್ ॥೨೫॥

"ಪ್ರಭುವೇ! ನಿನ್ನ ಶಕ್ತಿಯು ಅನಂತವಾಗಿದೆ. ನೀನು ಬ್ರಹ್ಮೇಶ್ವರರಿಗಿಂತಲೂ ಶ್ರೇಷ್ಠನಾದ ಈಶ್ವರನಾಗಿರುವೆ. ಸಮಸ್ತರ ಆತ್ಮನೂ ನೀನೇ ಆಗಿರುವೆ. ನೀನು ಅದ್ವಿತೀಯನೂ ಕೇವಲಜ್ಞಾನಸ್ವರೂಪನೂ ಆಗಿರುವೆ. ಪ್ರಪಂಚದ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣವು ನೀನೇ ಆಗಿರುವೆ. ಸಮಸ್ತ ವಿಕಾರಗಳಿಂದಲೂ ರಹಿತವಾದ ಶುದ್ಧಬ್ರಹ್ಮವಸ್ತುವು ನೀನೇ ಆಗಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ.

ಕಾಲೋ ದೈವಂ ಕರ್ಮ ಜೀವಃ ಸ್ವಭಾವೋ
ದ್ರವ್ಯಂ ಕ್ಷೇತ್ರಂ ಪ್ರಾಣ ಆತ್ಮಾ ವಿಕಾರಃ ।
ತತ್ಸಙ್ಘಾತೋ ಬೀಜರೋಹಪ್ರವಾಹ-
ಸ್ತ್ವನ್ಮಾಯೈಷಾ ತನ್ನಿಷೇಧಂ ಪ್ರಪದ್ಯೇ ॥೨೬॥

ಕಾಲ, ಅದೃಷ್ಟ, ಕರ್ಮ, ಬೀಜ, ಸ್ವಭಾವ, ಸೂಕ್ಷ್ಮಭೂತಶರೀರ, ಸೂತ್ರಾತ್ಮಾ, ಪ್ರಾಣ, ಅಹಂಕಾರ, ಹನ್ನೊಂದು ಇಂದ್ರಿಯಗಳು, ಪಂಚ

ಭೂತಗಳು–ಇವುಗಳ ಸಂಘಾತದಿಂದ ಉಂಟಾದ ಲಿಂಗಶರೀರ–ಬೀಜಾಂಕುರ ನ್ಯಾಯದಂತೆ ಲಿಂಗಶರೀರದಿಂದ ಕರ್ಮಮಾಡುವಿಕೆ ; ಕರ್ಮದ ಫಲವಾಗಿ ಪುನಃ ಲಿಂಗಶರೀರ–ಇವೆಲ್ಲವೂ ನಿನ್ನ ಮಾಯೆಯೇ ಆಗಿದೆ. ಈ ಮಾಯೆಗೆ ದೂರನಾಗಿ ಅಂತಹ ಮಾಯೆಯನ್ನು ತಡೆಯುವ ನಿನಗೆ ಶರಣಾಗಿದ್ದೇನೆ.

ನಾನಾಭಾವೈರ್ಲೀಲಯೈವೋಪಪನ್ನೈ-
ರ್ದೇವಾನ್ಸಾಧೂನ್ ಲೋಕಸೇತೂನ್ಬಿಭರ್ಷಿ ।
ಹಂಸ್ಯುನ್ಮಾರ್ಗಾನ್ ಹಿಂಸಯಾ ವರ್ತಮಾನಾನ್
ಜನ್ಮೈತತ್ತೇ ಭಾರಹಾರಾಯ ಭೂಮೇಃ ॥೨೭॥

ಭಗವಂತ! ನೀನು ಲೀಲೆಯಿಂದಲೇ ಅನೇಕರೂಪಗಳನ್ನು ಧರಿಸುವೆ ಮತ್ತು ದೇವತೆಗಳ, ಸತ್ಪುರುಷರ ಮತ್ತು ಲೋಕಮರ್ಯಾದೆಗಳ (ವರ್ಣಾಶ್ರಮಧರ್ಮಗಳ) ಪಾಲನ-ಪೋಷಣಗಳನ್ನೂ ಮಾಡುವೆ. ಲೋಕ ಕಂಟಕರಾದ ದುರ್ಮಾರ್ಗಿಗಳನ್ನು ಸಂಹರಿಸುವೆ. ಆದುದರಿಂದ ನಿನ್ನ ಅವತಾರಗಳೆಲ್ಲವೂ ಭೂಭಾರಹರಣಕ್ಕಾಗಿಯೇ ಆಗಿವೆ.

ತಪ್ತೋಽಹಂ ತೇ ತೇಜಸಾ ದುಸ್ಸಹೇನ
ಶಾನ್ತೋಗ್ರೇಣಾತ್ಯುಲ್ಬಣೇನ ಜ್ವರೇಣ ।
ತಾವತ್ತಾಪೋ ದೇಹಿನಾಂ ತೇಽಙ್ಘ್ರಿಮೂಲಂ
ನೋ ಸೇವೇರನ್ಯಾವದಾಶಾನುಬದ್ಧಾಃ ॥೨೮॥

ಪ್ರಭುವೇ! ಶಾಂತವಾದಂತೆ ಕಂಡರೂ ಉಗ್ರವಾಗಿರುವ ನಿನ್ನ ಅತ್ಯಂತ ಭಯಾನಕವಾದ ಮತ್ತು ದುಃಸಹವಾದ ಜ್ವರದಿಂದ ಪರಿತಪಿಸುತ್ತಿದ್ದೇನೆ. ದೇಹಧಾರಿಗಳಾದ ಜೀವರು ಯಾವತ್ತಿನವರೆಗೆ ಆಶೆಯಿಂದ ಕಟ್ಟಿಹಾಕಲ್ಪಟ್ಟವರಾಗಿ ನಿನ್ನ ಪಾದಕಮಲಗಳನ್ನು ಸೇವಿಸುವುದಿಲ್ಲವೋ ಅಲ್ಲಿಯವರೆಗೂ ಅವರಿಗೆ ತಾಪ-ಸಂತಾಪಗಳು ಇದ್ದೇಇರುತ್ತವೆ.”

ಭಗವಂತನು ಹೇಳುತ್ತಾನೆ :

ತ್ರಿಶಿರಸ್ತೇ ಪ್ರಸನ್ನೋಽಸ್ಮಿ ವ್ಯೇತು ತೇ ಮಜ್ಜ್ವರಾದ್ಭಯಮ್ ।
ಯೋ ನೌ ಸ್ಮರತಿ ಸಂವಾದಂ ತಸ್ಯ ತ್ವನ್ನ ಭವೇದ್ಭಯಮ್ ॥೨೯॥

"ತ್ರಿಶಿರಸನೇ! ನಿನ್ನ ಸ್ತೋತ್ರದಿಂದ ನಾನು ಪ್ರಸನ್ನನಾಗಿದ್ದೇನೆ. ನನ್ನ ಜ್ವರದಿಂದುಂಟಾಗಿರುವ ಭಯವು ಹೋಗಲಿ. ನಮ್ಮಿಬ್ಬರ ಈ ಸಂವಾದವನ್ನು ಯಾವನು ಕೇಳುವನೋ ಅವನಿಗೂ ನಿನ್ನಿಂದ ಭಯವುಂಟಾಗದಿರಲಿ."

ಪರೀಕ್ಷಿತಮಹಾರಾಜ! ಶ್ರೀಕೃಷ್ಣನು ಹೀಗೆ ಹೇಳಿದನಂತರ ಮಾಹೇಶ್ವರಜ್ವರವು ಆತನಿಗೆ ಪ್ರಣಾಮಮಾಡಿ ಹೊರಟುಹೋಯಿತು. ಆ ವೇಳೆಗೆ ಬಾಣಾಸುರನೂ ಮತ್ತೊಂದು ರಥದಲ್ಲಿ ಕುಳಿತು ಶ್ರೀಕೃಷ್ಣನೊಡನೆ ಯುದ್ಧಮಾಡುವ ಸಲುವಾಗಿ ರಣರಂಗಕ್ಕೆ ಪುನಃ ಆಗಮಿಸಿದನು. ಬಾಣಾಸುರನು ತನ್ನ ಸಾವಿರ ಕೈಗಳಲ್ಲೂ ನಾನಾಪ್ರಕಾರವಾದ ಆಯುಧಗಳನ್ನು ಧರಿಸಿದ್ದನು. ಅತ್ಯಂತಕ್ರುದ್ಧನಾಗಿದ್ದ ಅವನು ಚಕ್ರಪಾಣಿಯಾದ ಶ್ರೀಕೃಷ್ಣನ ಮೇಲೆ ಬಾಣಗಳ ಮಳೆಗರೆಯಲು ಪ್ರಾರಂಭಿಸಿದನು. ಹಾಗೆ ತನ್ನ ಮೇಲೆ ಸಾವಿರ ತೋಳುಗಳಿಂದಲೂ ಅವ್ಯಾಹತವಾಗಿ ಬಾಣಗಳ ಮಳೆಗರೆಯುತ್ತಿದ್ದ ಬಾಣಾಸುರನ ತೋಳುಗಳನ್ನು ವೃಕ್ಷದಲ್ಲಿರುವ ರೆಂಬೆಗಳನ್ನು ಕತ್ತರಿಸುವಂತೆ



ಅತ್ಯಂತತೀಕ್ಷ್ಣವಾದ ಅಲುಗಿನಿಂದ ಕೂಡಿದ್ದ ಚಕ್ರಾಯುಧದಿಂದ ಶ್ರೀಕೃಷ್ಣನು ಕತ್ತರಿಸತೊಡಗಿದನು. ಹೀಗೆ ಚಕ್ರಪಾಣಿಯಾದ ಶ್ರೀಕೃಷ್ಣನಿಂದ ಬಾಣಾಸುರನ ತೋಳುಗಳು ಕತ್ತರಿಸಲ್ಪಡುತ್ತಿರಲಾಗಿ ಭಕ್ತಾನುಕಂಪಿಯಾದ ಭಗವಾನ್ ಭವನು ಶ್ರೀಕೃಷ್ಣನ ಬಳಿಗೆ ಸಾರಿ ಪ್ರಾರ್ಥಿಸಿದನು.

ತ್ವಂ ಹಿ ಬ್ರಹ್ಮ ಪರಂ ಜ್ಯೋತಿರ್ಗೂಢಂ ಬ್ರಹ್ಮಣಿ ವಾಙ್ಮಯೇ ।
ಯಂ ಪಶ್ಯನ್ತ್ಯಮಲಾತ್ಮಾನ ಆಕಾಶಮಿವ ಕೇವಲಮ್ ॥೩೪॥

"ಉಪನಿಷದ್ವಾಗ್ರೂಪವಾದ ಓಂಕಾರದಲ್ಲಿ ಅಡಗಿರುವ ಜ್ಯೋತಿಃ ಸ್ವರೂಪನಾದ ಪರಬ್ರಹ್ಮವಸ್ತುವು ನೀನೇ ಆಗಿರುವೆ. ಶುದ್ಧಾತ್ಮರಾದ ಯೋಗಿಗಳು ಯಾವನನ್ನು ಆಕಾಶದಂತೆ ನಿಸ್ಸಂಗವಸ್ತುವನ್ನಾಗಿ ತಿಳಿಯುವರೋ ಆ ಕೇವಲ (ಅದ್ವಿತೀಯ) ವಸ್ತುವೂ ನೀನೇ ಆಗಿರುವೆ.

ನಾಭಿರ್ನಭೋಽಗ್ನಿರ್ಮುಖಮಮ್ಬು ರೇತೋ
ದ್ಯೌಃ ಶೀರ್ಷಮಾಶಾಃ ಶ್ರುತಿರಙ್ಘ್ರಿರುರ್ವೀ ।
ಚನ್ದ್ರೋ ಮನೋ ಯಸ್ಯ ದೃಗರ್ಕ ಆತ್ಮಾ
ಅಹಂ ಸಮುದ್ರೋ ಜಠರಂ ಭುಜೇನ್ದ್ರಃ ॥೩೫॥

ಮಹಾನುಭಾವನೇ! ಆಕಾಶವು ನಿನ್ನ ನಾಭಿಯಾಗಿದೆ. ಅಗ್ನಿಯು ನಿನ್ನ ಮುಖವಾಗಿದೆ. ನೀರು ವೀರ್ಯವಾಗಿದೆ. ಸ್ವರ್ಗವು ಶಿರಸ್ಸಾಗಿದೆ. ದಿಕ್ಕುಗಳು ನಿನ್ನ ಕಿವಿಗಳಾಗಿವೆ. ಭೂಮಿಯು ನಿನ್ನ ಪಾದವಾಗಿದೆ. ಚಂದ್ರನು ನಿನ್ನ ಮನಸ್ಸಾಗಿದ್ದಾನೆ. ಸೂರ್ಯನು ನೇತ್ರವಾಗಿದ್ದಾನೆ. ನಾನು ನಿನ್ನ ಅಹಂಕಾರ ರೂಪನಾಗಿದ್ದೇನೆ. ಸಮುದ್ರವೇ ನಿನ್ನ ಹೊಟ್ಟೆಯಾಗಿದೆ. ಇಂದ್ರನೇ ನಿನ್ನ ಭುಜವಾಗಿದ್ದಾನೆ.

ರೋಮಾಣಿ ಯಸ್ಯೌಷಧಯೋಽಮ್ಬುವಾಹಾಃ
ಕೇಶಾ ವಿರಿಞ್ಚೋ ಧಿಷಣಾ ವಿಸರ್ಗಃ ।
ಪ್ರಜಾಪತಿರ್ಹೃದಯಂ ಯಸ್ಯ ಧರ್ಮಃ
ಸ ವೈ ಭವಾನ್ಪುರುಷೋ ಲೋಕಕಲ್ಪಃ ॥೩೬॥

ಧಾನ್ಯವೇ ಮೊದಲಾದ ಔಷಧಿಲತೆಗಳು ನಿನ್ನ ರೋಮಗಳು. ಮೇಘಗಳೇ ನಿನ್ನ ತಲೆಕೂದಲುಗಳು. ಬ್ರಹ್ಮನು ನಿನ್ನ ಬುದ್ಧಿಯಾಗಿದ್ದಾನೆ. ಪ್ರಜಾಪತಿಯು ನಿನ್ನ ಲಿಂಗವಾಗಿದ್ದಾನೆ. ಧರ್ಮವೇ ನಿನ್ನ ಹೃದಯವಾಗಿದೆ. ಜಗತ್ಸ್ವರೂಪನಾದ ವಿರಾಟ್‌ಪುರುಷನೂ ನೀನೇ ಆಗಿರುವೆ.

ತವಾವತಾರೋಽಯಮಕುಣ್ಠಧಾಮನ್
ಧರ್ಮಸ್ಯ ಗುಪ್ತ್ಯೈ ಜಗತೋ ಭವಾಯ ।

ವಯಂ ಚ ಸರ್ವೇ ಭವತಾನುಭಾವಿತಾ
ವಿಭಾವಯಾಮೋ ಭುವನಾನಿ ಸಪ್ತ ॥೩೭॥

ಅಖಂಡಜ್ಯೋತಿಃಸ್ವರೂಪನಾದ ಪರಮಾತ್ಮನೇ! ಈ ನಿನ್ನ ಅವತಾರವು ಧರ್ಮದ ರಕ್ಷಣೆಗಾಗಿಯೂ ಪ್ರಪಂಚದ ಅಭ್ಯುದಯಕ್ಕಾಗಿಯೂ ಆಗಿರುತ್ತದೆ. ನಾವೆಲ್ಲರೂ ನಿನ್ನ ಪ್ರಭಾವದಿಂದಲೇ ಪ್ರಭಾವಿತರಾಗಿ ಏಳು ಲೋಕಗಳನ್ನೂ ಪಾಲಿಸುತ್ತಿದ್ದೇವೆ.

ತ್ವಮೇಕ ಆದ್ಯಃ ಪುರುಷೋಽದ್ವಿತೀಯ-
ಸ್ತುರ್ಯಃ ಸ್ವದೃಗ್ಘೇತುರಹೇತುರೀಶಃ ।
ಪ್ರತೀಯಸೇಽಥಾಪಿ ಯಥಾವಿಕಾರಂ
ಸ್ವಮಾಯಯಾ ಸರ್ವಗುಣಪ್ರಸಿದ್ಧ್ಯೈ ॥೩೮॥

ಪ್ರಭುವೇ! ನೀನು ಎಲ್ಲಕ್ಕಿಂತಲೂ ಬೇರೆಯಾದ ಆದಿಪುರುಷನು, ಅದ್ವಿತೀಯನು. (ಸಮಾನವಾದ ಅಥವಾ ಅಧಿಕವಾದ ಅನ್ಯವಸ್ತುವಿಲ್ಲದವನು.) ಮಾಯಾಕೃತವಾದ ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ ಎಂಬ ಅವಸ್ಥೆಗಳಿಂದ ಅನುಗತವಾದ ಮತ್ತು ಈ ಮೂರು ಅವಸ್ಥೆಗಳಿಂದಲೂ ಅತೀತವಾದ ತುರೀಯತತ್ತ್ವನೂ ನೀನೇ ಆಗಿರುವೆ. ನೀನು ಸ್ವರೂಪಾನುಭವವುಳ್ಳವನು. ಜಗತ್ತಿಗೆ ಕಾರಣನಾದವನು. ಆದರೂ ಹೇತುತ್ವದ ಉಪಾಧಿಯಿಲ್ಲದವನು. ಸರ್ವೇಶ್ವರನು. ಸರ್ವಾಂತರ್ಯಾಮಿಯು. ಆದರೂ ನಿನ್ನ ಮಾಯಾಶಕ್ತಿಯಿಂದ ಸತ್ತ್ವಾದಿಸಮಸ್ತಪ್ರಾಕೃತ ಗುಣಗಳನ್ನೂ ಪ್ರಸಿದ್ಧಿಪಡಿಸುವುದಕ್ಕೋಸ್ಕರ ಆ ವಿಕಾರಗಳನ್ನು ಅತಿಕ್ರಮಿ ಸದೆ ಪಶು-ಪಕ್ಷಿ-ಮನುಷ್ಯ–ಇವೇ ಮುಂತಾದ ನಾನಾವಿಧವಾದ ರೂಪಗಳಲ್ಲಿ ಕಾಣುತ್ತಿರುವೆ.

ಯಥೈವ ಸೂರ್ಯಃ ಪಿಹಿತಶ್ಛಾಯಯಾ ಸ್ವಯಾ
ಛಾಯಾಂ ಚ ರೂಪಾಣಿ ಚ ಸಞ್ಚಕಾಸ್ತಿ ।
ಏವಂ ಗುಣೇನಾಪಿಹಿತೋ ಗುಣಾಂಸ್ತ್ವ-
ಮಾತ್ಮಪ್ರದೀಪೋ ಗುಣಿನಶ್ಚ ಭೂಮನ್ ॥೩೯॥

ಪ್ರಭುವೇ! ಸೂರ್ಯನು ತನ್ನಿಂದಲೇ ಹುಟ್ಟಿದ ಮೇಘರೂಪವಾದ

ನೆಳಲಿನಿಂದ ಮುಚ್ಚಲ್ಪಟ್ಟವನಾಗಿ ಮೇಘಗಳನ್ನೂ ಮತ್ತು ವಿಭಿನ್ನರೂಪಗಳನ್ನೂ ಹೇಗೆ ಪ್ರಕಾಶಗೊಳಿಸುವನೋ–ಅದೇ ರೀತಿಯಲ್ಲಿ ನೀನೂ ಕೂಡ ಗುಣಗಳಿಂದ ಮುಚ್ಚಲ್ಪಟ್ಟವನಾಗಿ ಸತ್ತ್ವಾದಿಗುಣಗಳನ್ನೂ ಸತ್ತ್ವಾದಿಗುಣಗಳಿಗೆ ಒಳಪಟ್ಟಿರುವ ಜೀವರುಗಳನ್ನೂ ಪ್ರಕಾಶಪಡಿಸುವೆ.

ಯನ್ಮಾಯಾಮೋಹಿತಧಿಯಃ ಪುತ್ರದಾರಗೃಹಾದಿಷು ।
ಉನ್ಮಜ್ಜನ್ತಿ ನಿಮಜ್ಜನ್ತಿ ಪ್ರಸಕ್ತಾ ವೃಜಿನಾರ್ಣವೇ ॥೪೦॥

ಭಗವಂತ! ನಿನ್ನ ಮಾಯೆಯಿಂದ ವಿಮೋಹಿತರಾದ ಜನರು ಹೆಂಡತಿ-ಮಕ್ಕಳು-ಮನೆ-ಮಠ–ಇತ್ಯಾದಿಗಳಲ್ಲಿಯೇ ಆಸಕ್ತರಾಗಿ ದುಃಖ ಸಾಗರದಲ್ಲಿ ಮುಳುಗಿ ತೇಲುತ್ತಲೇ ಇರುತ್ತಾರೆ.

ದೇವದತ್ತಮಿಮಂ ಲಬ್ಧ್ವಾ ನೃಲೋಕಮಜಿತೇನ್ದ್ರಿಯಃ ।
ಯೋ ನಾದ್ರಿಯೇತ ತ್ವತ್ಪಾದೌ ಸ ಶೋಚ್ಯೋ ಹ್ಯಾತ್ಮವಞ್ಚಕಃ ॥೪೧॥

ಭಗವಂತನ ಅಪಾರಕರುಣೆಯಿಂದ ಪ್ರಾಪ್ತವಾದ ಮನುಷ್ಯಲೋಕ ವನ್ನು ಹೊಂದಿ, ಮನುಷ್ಯನಾಗಿ ಹುಟ್ಟಿ, ಇಂದ್ರಿಯಗಳನ್ನು ವಶದಲ್ಲಿಟ್ಟು ಕೊಳ್ಳದೆ ಯಾವ ಮೂರ್ಖನು ನಿನ್ನ ದಿವ್ಯವಾದ ಚರಣಕಮಲಗಳಲ್ಲಿ ಆಶ್ರಯವನ್ನು ಹೊಂದುವುದಿಲ್ಲವೋ ಅವನು ಅತ್ಯಂತಶೋಚನೀಯನೂ ಆತ್ಮವಂಚಕನೂ ಆಗುತ್ತಾನೆ.

ಯಸ್ತ್ವಾಂ ವಿಸೃಜತೇ ಮರ್ತ್ಯ ಆತ್ಮಾನಂ ಪ್ರಿಯಮೀಶ್ವರಮ್ ।
ವಿಪರ್ಯಯೇನ್ದ್ರಿಯಾರ್ಥಾರ್ಥಂ ವಿಷಮತ್ತ್ಯಮೃತಂ ತ್ಯಜನ್ ॥೪೨॥

ಪ್ರಭುವೇ! ನೀನು ಸಮಸ್ತಪ್ರಾಣಿಗಳ ಆತ್ಮವೂ, ಪ್ರಿಯತಮನೂ ಮತ್ತು ಈಶ್ವರನೂ ಆಗಿರುವೆ. ಮೃತ್ಯುಧರ್ಮವಿರುವ ಯಾವ ಮನುಷ್ಯನು ನಿನ್ನನ್ನು ಬಿಟ್ಟು ಅನಾತ್ಮವೂ, ದುಃಖರೂಪವೂ ಮತ್ತು ತುಚ್ಛವೂ ಆದ ವಿಷಯಸುಖಗಳಲ್ಲಿ ಬುದ್ಧಿಯುಳ್ಳವನಾಗುವನೋ ಅಂತಹ ಮೂರ್ಖನು ಅಮೃತವನ್ನು ಬಿಟ್ಟು ವಿಷವನ್ನು ಕುಡಿದವನಂತೆಯೇ ಆಗುವನು.

ಅಹಂ ಬ್ರಹ್ಮಾಥ ವಿಬುಧಾ ಮುನಯಶ್ಚಾಮಲಾಶಯಾಃ ।
ಸರ್ವಾತ್ಮನಾ ಪ್ರಪನ್ನಾಸ್ತ್ವಾಮಾತ್ಮಾನಂ ಪ್ರೇಷ್ಠಮೀಶ್ವರಮ್ ॥೪೩॥

ಸರ್ವೇಶ್ವರನೇ! ನಾನು, ಬ್ರಹ್ಮಾ, ಸಮಸ್ತದೇವತೆಗಳು ಮತ್ತು ಶುದ್ಧಾತ್ಮರಾದ ಋಷಿ-ಮುನಿಗಳು ಸರ್ವಾತ್ಮಭಾವದಿಂದ ನಿನಗೆ ಶರಣಾಗತರಾಗಿದ್ದೇವೆ. ಏಕೆಂದರೆ : ನೀನೇ ನಮ್ಮೆಲ್ಲರ ಆತ್ಮನೂ, ಪ್ರಿಯತಮನೂ ಮತ್ತು ಈಶ್ವರನೂ ಆಗಿರುವೆ.

ತಂ ತ್ವಾ ಜಗತ್ಸ್ಥಿತ್ಯುದಯಾನ್ತಹೇತುಂ
ಸಮಂ ಪ್ರಶಾನ್ತಂ ಸುಹೃದಾತ್ಮದೈವಮ್ ।
ಅನನ್ಯಮೇಕಂ ಜಗದಾತ್ಮಕೇತಂ
ಭವಾಪವರ್ಗಾಯ ಭಜಾಮ ದೇವಮ್ ॥೪೪॥

ಪ್ರಭುವೇ! ನೀನು ಜಗತ್ತಿನ ಉತ್ಪತ್ತಿ-ಸ್ಥಿತಿ ಮತ್ತು ಲಯಗಳಿಗೆ ಕಾರಣನಾಗಿರುವೆ. ನೀನು ಸರ್ವಸಮನೂ, ಪರಮಶಾಂತಸ್ವರೂಪನೂ, ಸಮಸ್ತರಿಗೂ ಸುಹೃದನೂ ಮತ್ತು ಇಷ್ಟದೇವತೆಯೂ ಆಗಿರುವೆ. ಅನನ್ಯನೂ, ಅದ್ವಿತೀಯನೂ, ಜಗತ್ತಿಗೂ ಜೀವಾತ್ಮರಿಗೂ ಅಧಿಷ್ಠಾನವೂ ಆಗಿರುವೆ. ಅಂತಹ ನಿನ್ನನ್ನು ಸಂಸಾರದಿಂದ ಮುಕ್ತಿಹೊಂದಲು ಪ್ರಾರ್ಥಿಸು ತ್ತೇವೆ.

ಅಯಂ ಮಮೇಷ್ಟೋ ದಯಿತೋಽನುವರ್ತೀ
ಮಯಾಭಯಂ ದತ್ತಮಮುಷ್ಯ ದೇವ ।
ಸಮ್ಪಾದ್ಯತಾಂ ತದ್ಭವತಃ ಪ್ರಸಾದೋ
ಯಥಾ ಹಿ ತೇ ದೈತ್ಯಪತೌ ಪ್ರಸಾದಃ ॥೪೫॥

ದೇವದೇವನೇ! ಈ ಬಾಣಾಸುರನು ನನಗೆ ಪರಮಪ್ರಿಯನೂ, ಇಷ್ಟನಾದವನೂ ಮತ್ತು ನನ್ನ ಸೇವಕನೂ ಆಗಿದ್ದಾನೆ. ನಾನು ಇವನಿಗೆ ಅಭಯದಾನಮಾಡಿದ್ದೇನೆ. ಇವನ ಮುತ್ತಾತನಾದ ಪ್ರಹ್ಲಾದಮಹಾರಾಜನಲ್ಲಿ ನೀನು ಹೇಗೆ ಕೃಪೆಯನ್ನು ತೋರಿದೆಯೋ ಹಾಗೆಯೇ ಇವನ ವಿಷಯದಲ್ಲಿಯೂ ಕೃಪೆಯನ್ನು ತೋರಬೇಕು."

ಶ್ರೀಭಗವಂತನು ಹೇಳುತ್ತಾನೆ :

ಯದಾತ್ಥ ಭಗವಂಸ್ತ್ವನ್ನಃ ಕರವಾಮ ಪ್ರಿಯಂ ತವ ।
ಭವತೋ ಯದ್ವ್ಯವಸಿತಂ ತನ್ಮೇ ಸಾಧ್ವನುಮೋದಿತಮ್ ॥೪೬॥

“ಭಗವಂತನಾದ ರುದ್ರದೇವನೇ! ನೀನು ನನಗೆ ಏನು ಹೇಳಿದೆಯೋ ಆ ಪ್ರಿಯವಾದ ಕಾರ್ಯವನ್ನು ನಾನು ಮಾಡಿಕೊಡುತ್ತೇನೆ. ನೀನು ಹಿಂದೆ ಈ ವಿಷಯವಾಗಿ ಏನನ್ನು ನಿಶ್ಚಯಿಸಿದ್ದೆಯೋ ಅದನ್ನೇ ನಾನು ಅನುಮೋದಿಸಿದ್ದೇನೆ.

ಅವಧ್ಯೋಽಯಂ ಮಮಾಪ್ಯೇಷ ವೈರೋಚನಿಸುತೋಽಸುರಃ ।
ಪ್ರಹ್ಲಾದಾಯ ವರೋ ದತ್ತೋ ನ ವಧ್ಯೋ ಮೇ ತವಾನ್ವಯಃ ॥

ವೈರೋಚನಿಯ (ಬಲಿಚಕ್ರವರ್ತಿಯ) ಮಗನಾದ ಈ ಬಾಣಾಸುರನು ನನಗೂ ಅವಧ್ಯನೇ ಆಗಿದ್ದಾನೆ. ನಾನು ಇವನನ್ನು ವಧಿಸುವಂತಿಲ್ಲ. ಏಕೆಂದರೆ: ನಿನ್ನ ವಂಶೀಯರನ್ನು ಸಂಹಾರಮಾಡುವುದಿಲ್ಲವೆಂದು ನಾನು ಪ್ರಹ್ಲಾದನಿಗೆ ವಚನವನ್ನು ಕೊಟ್ಟಿದ್ದೇನೆ.

ದರ್ಪೋಪಶಮನಾಯಾಸ್ಯ ಪ್ರವೃಕ್ಣಾ ಬಾಹವೋ ಮಯಾ ।
ಸೂದಿತಂ ಚ ಬಲಂ ಭೂರಿ ಯಚ್ಚ ಭಾರಾಯಿತಂ ಭುವಃ ॥೪೮॥

ಇವನ ದರ್ಪವನ್ನು ಮುರಿಯುವ ಸಲುವಾಗಿ ನಾನು ಇವನ ತೋಳುಗಳನ್ನು ಕತ್ತರಿಸಿಹಾಕಿದೆನು. ಭೂಮಿಗೆ ಅತ್ಯಂತ ಭಾರವಾಗಿದ್ದ ಇವನ ಅಪಾರಸೈನಿಕರನ್ನು ಭೂಭಾರಹರಣಕ್ಕಾಗಿ ಸಂಹರಿಸಿದೆನು.

ಚತ್ವಾರೋಽಸ್ಯ ಭುಜಾಃ ಶಿಷ್ಟಾ ಭವಿಷ್ಯನ್ತ್ಯಜರಾಮರಾಃ ।
ಪಾರ್ಷದಮುಖ್ಯೋ ಭವತೋ ನಕುತಶ್ಚಿದ್ಭಯೋಽಸುರಃ ॥೪೯॥

ಈಗ ಇವನಿಗೆ ನಾಲ್ಕು ಭುಜಗಳು ಮಾತ್ರವೇ ಉಳಿದಿವೆ. ಅವು* ಅಜರವೂ, ಅಮರವೂ ಆಗಿರುತ್ತವೆ. (ಶಾಶ್ವತವಾಗಿರುತ್ತವೆ.) ಇನ್ನು ಮುಂದೆ ಈ ಬಾಣಾಸುರನು ನಿನ್ನ ಪಾರ್ಷದರಲ್ಲಿ ಮುಖ್ಯನಾಗಿರುತ್ತಾನೆ. ಇವನಿಗೆ ಯಾರಿಂದಲೂ ಯಾವ ವಿಧವಾದ ಭಯವೂ ಇರುವುದಿಲ್ಲ.”

---

* ಭವಿಷ್ಯನ್ತ್ಯ ಜರಾಮರಾಃ –ಎಂಬ ಪಾಠಕ್ಕೆ ಬದಲಾಗಿ ಭವಿಷ್ಯತ್ಯಜರಾಮರಃ – ಎಂಬ ಪಾಠವೂ ಇದೆ. ಅದರಂತೆ ‘ಬಾಣಾಸುರನು ದೇವತೆಯಲ್ಲದಿದ್ದರೂ ಅಜರನೂ ಅಮರನೂ ಆಗುತ್ತಾನೆ’–ಎಂದು ಅರ್ಥವಾಗುತ್ತದೆ. ತೋಳುಗಳು ಅಜರಾಮರವಾಗುತ್ತವೆ–ಎಂದರೂ ಬಾಣಾಸುರನು ಅಮರನಾಗುತ್ತಾನೆ–ಎಂದೇ ಪರ್ಯಾಯದಿಂದ ಅರ್ಥವಾಗುತ್ತದೆ.

ಪರೀಕ್ಷಿತಮಹಾರಾಜ! ಹೀಗೆ ಶ್ರೀಕೃಷ್ಣನಿಂದ ವರವನ್ನು ಪಡೆದ ಬಾಣಾಸುರನು ಶ್ರೀಕೃಷ್ಣನಿಗೆ ತಲೆಬಾಗಿ ನಮಸ್ಕರಿಸಿ, ಅನಿರುದ್ಧನನ್ನು ತನ್ನ ಮಗಳಾದ ಉಷಾದೇವಿಯೊಡನೆ ರಥದಲ್ಲಿ ಕುಳ್ಳಿರಿಸಿಕೊಂಡು ಶ್ರೀಕೃಷ್ಣನ ಬಳಿಗೆ ಕರೆತಂದನು. ಬಳಿಕ ಶ್ರೀಕೃಷ್ಣನು ಶಿವನ ಅನುಮತಿಯನ್ನು ಪಡೆದು ವಸ್ತ್ರಾಲಂಕಾರಭೂಷಿತನಾಗಿದ್ದ, ಅಕ್ಷೌಹಿಣೀಸೈನ್ಯದಿಂದ ಪರಿವೃತನಾಗಿದ್ದ, ಸಪತ್ನೀಕನಾಗಿದ್ದ ಅನಿರುದ್ಧನನ್ನು ಮುಂದೆಮಾಡಿಕೊಂಡು ದ್ವಾರಕಾಪಟ್ಟಣಕ್ಕೆ ಪ್ರಯಾಣಮಾಡಿದನು. ಶ್ರೀಕೃಷ್ಣನು ವಧೂ-ವರರ ಸಮೇತನಾಗಿ ದ್ವಾರಕೆಗೆ ಬರುತ್ತಿರುವನೆಂಬ ವಾರ್ತೆಯನ್ನು ಕೇಳಿ ಪೌರರು ತಮ್ಮ ಪಟ್ಟಣವನ್ನು ತಳಿರುತೋರಣಗಳಿಂದಲೂ, ಧ್ವಜಪತಾಕೆಗಳಿಂದಲೂ ಅಲಂಕರಿಸಿದರು. ಬೀದಿಗಳನ್ನೂ, ಚೌಕಗಳನ್ನೂ ಚಂದನಮಿಶ್ರವಾದ ನೀರಿನಿಂದ ಶುದ್ಧ ಗೊಳಿಸಿದರು. ಪಟ್ಟಣದ ನಾಗರಿಕರೂ, ಶ್ರೀಕೃಷ್ಣನ ಬಂಧುವರ್ಗದವರೂ ಮತ್ತು ಬ್ರಾಹ್ಮಣರೂ ಮಹಾದ್ವಾರದ ಬಳಿಗೆ ಹೋಗಿ ಶ್ರೀಕೃಷ್ಣನನ್ನು ಎದುರ್ಗೊಂಡು ಸ್ವಾಗತಿಸಿದರು. ಶಂಖ-ನಗಾರಿ-ಭೇರೀ-ಮೃದಂಗವೇ ಮೊದಲಾದ ಮಂಗಳವಾದ್ಯಗಳು ಮೊಳಗುತ್ತಿರಲು ಶ್ರೀಕೃಷ್ಣನು ನಗರವನ್ನು ಪ್ರವೇಶಿಸಿದನು.

ಯ ಏವಂ ಕೃಷ್ಣವಿಜಯಂ ಶಙ್ಕರೇಣ ಚ ಸಂಯುಗಮ್ ।
ಸಂಸ್ಮರೇತ್ಪ್ರಾತರುತ್ಥಾಯ ನ ತಸ್ಯ ಸ್ಯಾತ್ ಪರಾಜಯಃ ॥೫೩॥

ಪರೀಕ್ಷಿತಮಹಾರಾಜ! ಯಾವ ಪುರುಷನು ಶ್ರೀಕೃಷ್ಣ-ಶಂಕರರ ಯುದ್ಧಪ್ರಸಂಗವನ್ನೂ ಮತ್ತು ಶ್ರೀಕೃಷ್ಣನ ವಿಜಯದ ಕಥೆಯನ್ನೂ ಬೆಳಗಾಗಿ ಎದ್ದೊಡನೆಯೇ ಸ್ಮರಿಸುವನೋ ಅಂತಹವನಿಗೆ ಯಾವ ಕಾರ್ಯದಲ್ಲೇ ಆಗಲೀ ಪರಾಜಯವೆಂಬುದೇ ಇರುವುದಿಲ್ಲ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೬೩ನೆಯ ಅಧ್ಯಾಯವು ಮುಗಿಯಿತು.

ನೃಗರಾಜನ ಕಥೆ

ಶ್ರೀಶುಕಮುನಿಗಳು ಹೇಳುತ್ತಾರೆ :

ಏಕದೋಪವನಂ ರಾಜನ್ ಜಗ್ಮುರ್ಯದುಕುಮಾರಕಾಃ ।
ವಿಹರ್ತುಂ ಸಾಮ್ಬಪ್ರದ್ಯುಮ್ನಚಾರುಭಾನುಗದಾದಯಃ ॥೧॥

ಪರೀಕ್ಷಿತಮಹಾರಾಜ! ಒಂದಾನೊಂದು ದಿನ ಸಾಂಬ, ಪ್ರದ್ಯುಮ್ನ, ಚಾರುಭಾನು, ಗದ–ಇವರೇ ಮೊದಲಾದ ಯದುವಂಶೀಯ ರಾಜಕುಮಾರರು ವಿಹಾರಾರ್ಥವಾಗಿ ದ್ವಾರಕಾಪಟ್ಟಣದ ಉಪವನಕ್ಕೆ ಹೋದರು.

ಅವರು ಆ ಉಪವನದಲ್ಲಿ ಬಹಳ ಹೊತ್ತಿನವರೆಗೆ ಆಟವಾಡುತ್ತಿದ್ದು ಬಳಲಿ-ಬೆಂಡಾಗಿ-ಬಾಯಾರಿ ನೀರನ್ನು ಹುಡುಕಿಕೊಂಡು ಹೊರಟರು. ಹಾಗೆಯೇ ಹುಡುಕುತ್ತಿದ್ದಾಗ ಅವರಿಗೊಂದು ಬಾವಿಯು ಸಿಕ್ಕಿತು. ಆದರೆ ಅದರಲ್ಲಿ ನೀರಿರಲಿಲ್ಲ. ಯಾವುದೋ ಅದ್ಭುತವಾದ ಪ್ರಾಣಿಯೊಂದು ಕೆಳಭಾಗದಲ್ಲಿರುವಂತೆ ಕಂಡುಬಂದಿತು. ಬೆಟ್ಟದಂತಿದ್ದ ಹೆಂಟೇಗೊದ್ದವು ಅಲ್ಲಿದ್ದುದನ್ನು ಕಂಡು ಯದುವೀರರು ಆಶ್ಚರ್ಯಚಕಿತರಾಗಿ ಮರುಕಗೊಂಡು ಆ ಮಹಾಪ್ರಾಣಿಯನ್ನು ಅಲ್ಲಿಂದ ಮೇಲಕ್ಕೆತ್ತಲು ಪ್ರಯತ್ನಿಸಿದರು. ಆ ರಾಜಕುಮಾರರು ತೊಗಲುಮಿಣಿಗಳನ್ನೂ, ನೂಲು ಹಗ್ಗಗಳನ್ನೂ ಆ ಪ್ರಾಣಿಯ ಸುತ್ತಲೂ ಬಿಗಿದು ಮೇಲಕ್ಕೆಳೆಯಲು ಪ್ರಯತ್ನಿಸಿದರು. ಎಲ್ಲರೂ ಸೇರಿ ಪ್ರಯತ್ನಿಸಿದರೂ ಅದನ್ನು ಕದಲಿಸಲು ಕೂಡ ಅವರಿಗೆ ಸಾಧ್ಯವಾಗಲಿಲ್ಲ. ಅತ್ಯಂತ ಕುತೂಹಲಿಗಳಾಗಿ ರಾಜಕುಮಾರರು ಈ ಸಮಾಚಾರವನ್ನು ಶ್ರೀಕೃಷ್ಣನಿಗೆ ತಿಳಿಸಿದರು.

ವಿಶ್ವಭಾವನನಾದ, ಕಮಲಾಕ್ಷನಾದ ಶ್ರೀಕೃಷ್ಣನು ಬಾವಿಯ ಬಳಿಗೆ ಬಂದು ಆ ಮಹಾಪ್ರಾಣಿಯನ್ನು ಎಡಗೈಯಿಂದ ಲೀಲಾಜಾಲವಾಗಿ ಮೇಲಕ್ಕೆತ್ತಿದನು. ಭಗವಂತನಾದ ಶ್ರೀಕೃಷ್ಣನ ಕರಕಮಲಗಳ ಸ್ಪರ್ಶವಾದೊಡನೆಯೇ ಆ ಪ್ರಾಣಿಗೆ ಹೆಂಟೇಗೊದ್ದದ ರೂಪವು ಹೋಗಿ ಸ್ವರ್ಗೀಯ ದೇವತೆಯ ರೂಪವು ಬಂದಿತು. ಅವನ ಶರೀರದ ಬಣ್ಣವು ಪುಟಕ್ಕೆಹಾಕಿದ

ಚಿನ್ನದಂತೆ ಥಳ-ಥಳಿಸುತ್ತಿದ್ದು ಅದು ಅದ್ಭುತವಾದ ವಸ್ತುಗಳಿಂದಲೂ, ಆಭರಣಗಳಿಂದಲೂ ಮತ್ತು ಪುಷ್ಪಮಾಲೆಗಳಿಂದಲೂ ಸಮಲಂಕೃತವಾಗಿದ್ದಿತು. ಅಂತಹ ದಿವ್ಯಪುರುಷನಿಗೆ ಹೆಂಟೇಗೊದ್ದದ ಜನ್ಮವು ಏಕೆ ಬಂದಿತ್ತೆಂಬುದು ಭಗವಂತನಾದ ಶ್ರೀಕೃಷ್ಣನಿಗೆ ತಿಳಿದಿತ್ತಾದರೂ ಸಮಸ್ತರಿಗೂ ಈ ವಿಷಯವು ತಿಳಿಯಲೆಂಬ ಆಶಯದಿಂದಾಗಿ ಶ್ರೀಕೃಷ್ಣನು ಆ ದಿವ್ಯ ಪುರುಷನನ್ನು ಪ್ರಶ್ನಿಸಿದನು :



"ಮಹಾಭಾಗನೇ! ನೀನು ಯಾರು? ನಿನ್ನ ರೂಪವು ಬಹಳ ಸುಂದರವಾಗಿದೆ. ಶ್ರೇಷ್ಠರಾದ ದೇವತೆಗಳಲ್ಲಿ ನೀನು ಒಬ್ಬನಾಗಿರುವೆಯೆಂದು ನಾನು ಭಾವಿಸುತ್ತೇನೆ. ಕಲ್ಯಾಣಮೂರ್ತಿಯೇ! ನೀನು ಯಾವ ಕರ್ಮ ವಿಪಾಕದಿಂದ ಇಂತಹ ಜನ್ಮವನ್ನು ಹೊಂದಿದೆ. ವಾಸ್ತವವಾಗಿ ನೀನು ಇಂತಹ ಯೋನಿಯಲ್ಲಿ ಜನ್ಮವನ್ನು ಹೊಂದಬಾರದಾಗಿತ್ತು. ನಿನ್ನ ಜನ್ಮವೃತ್ತಾಂತವನ್ನು ತಿಳಿಯಲು ನಾವೂ ಅರ್ಹರೆಂದು ನೀನು ಭಾವಿಸುವೆಯಾದರೆ ಉತ್ಸುಕತೆಯಿಂದ ಕೂಡಿರುವ ನಮಗೆ ನಿನ್ನ ಪರಿಚಯವನ್ನು ಮಾಡಿಕೊಡು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಅನಂತಮೂರ್ತಿಯಾದ ಭಗವಾನ್ ಶ್ರೀಕೃಷ್ಣನು ಹೀಗೆ ಪ್ರಶ್ನಿಸಲು ಸೂರ್ಯನ ತೇಜಸ್ಸಿಗೆ ಸಮಾನವಾದ

ತೇಜಸ್ಸಿನಿಂದ ಜಗ-ಜಗಿಸುತ್ತಿದ್ದ ಕಿರೀಟದೊಡನೆ ಶ್ರೀಕೃಷ್ಣನಿಗೆ ನಮಸ್ಕರಿಸಿ ದೇವಸದೃಶನಾಗಿದ್ದ ಆತನು ಹೇಳಿದನು :

"ಪ್ರಭುವೇ! ಇಕ್ಷ್ವಾಕುವಂಶೀಯನಾದ ನೃಗನೆಂಬ ಹೆಸರಿನ ರಾಜನು ನಾನು. ವಿಶ್ವವಿಖ್ಯಾತರಾದ ದಾನಿಗಳ ಶುಭನಾಮಧೇಯಗಳನ್ನು ಹೇಳುವಾಗ ಆ ಹೆಸರುಗಳ ಮಧ್ಯದಲ್ಲಿ ನನ್ನ ಹೆಸರನ್ನೂ ನೀನು ಕೇಳಿರಬಹುದು. ಸಮಸ್ತಪ್ರಾಣಿಗಳಿಗೂ ಆತ್ಮಸಾಕ್ಷಿಯಾಗಿರುವ ನಿನಗೆ ತಿಳಿಯದಿರುವ ವಿಷಯವು ಯಾವುದು ತಾನೇ ಇರುವುದು? ನಿನ್ನ ಜ್ಞಾನಕ್ಕೆ ಕಾಲದ ತಡೆಯಿಲ್ಲ. ಆದರೂ ನಿನ್ನ ಆಜ್ಞಾನುಸಾರವಾಗಿ ನನ್ನ ವೃತ್ತಾಂತವನ್ನು ಹೇಳುತ್ತೇನೆ.

ಯಾವತ್ಯಃ ಸಿಕತಾ ಭೂಮೇರ್ಯಾವತ್ಯೋ ದಿವಿ ತಾರಕಾಃ ।
ಯಾವತ್ಯೋ ವರ್ಷಧಾರಾಶ್ಚ ತಾವತೀರದದಾಂ ಸ್ಮ ಗಾಃ ॥೧೨॥

ದೇವದೇವನೇ! ಭೂಮಿಯಲ್ಲಿ ಮರಳಿನ ಕಣಗಳೆಷ್ಟಿವೆಯೋ, ಆಕಾಶ ದಲ್ಲಿ ನಕ್ಷತ್ರಗಳೆಷ್ಟಿವೆಯೋ, ಮಳೆಯಲ್ಲಿ ಧಾರೆಗಳೆಷ್ಟಿವೆಯೋ ಅಷ್ಟು ಸಂಖ್ಯೆಯ ಗೋವುಗಳನ್ನು ನಾನು ದಾನಮಾಡಿದ್ದೇನೆ. ಹಾಲುಕೊಡುತ್ತಿದ್ದ, ಎಳೆಪ್ರಾಯದ, ಶೀಲ, ರೂಪ ಮತ್ತು ಗುಣಗಳಿಂದ ಸಂಪನ್ನವಾದ ಕಪಿಲಾಗೋವುಗಳನ್ನು ನಾನು ದಾನವಾಗಿ ಕೊಡುತ್ತಿದ್ದೆನು. ಅವುಗಳ ಕೊಂಬುಗಳಿಗೆ ಚಿನ್ನದ ಕಲಶಗಳಿರುತ್ತಿದ್ದುವು. ಗೊರಸುಗಳಿಗೆ ಬೆಳ್ಳಿಯ ಕವಚಗಳಿರುತ್ತಿದ್ದುವು. ಅವೆಲ್ಲವನ್ನೂ ನಾನು ನ್ಯಾಯವಾದ ರೀತಿಯಲ್ಲೇ ಸಂಪಾದಿಸಿದ್ದೆನು. ವಸ್ತ್ರಾಭರಣ-ಮಾಲೆಗಳಿಂದ ಸಮಲಂಕೃತವಾದ ಅಂತಹ ಗೋವುಗಳನ್ನು ಕರುಗಳೊಡನೆ–ಯುವಕರಾದ, ಸದ್ಗುಣಿಗಳಾದ, ಶೀಲ ಸಂಪನ್ನರಾದ, ಸಂಸಾರವನ್ನು ನಿರ್ವಹಿಸಲಾಗದೇ ಕಷ್ಟಪಡುತ್ತಿದ್ದ, ಅದಾಂಭಿಕರಾದ, ತಪಸ್ವಿಗಳಾದ, ವೇದಾಧ್ಯಯನಶೀಲರಾದ, ಶಿಷ್ಯರಿಗೆ ವೇದ ಪಾಠವನ್ನು ಹೇಳುತ್ತಿದ್ದ ಸತ್ಪುರುಷರಿಗೆ–ಅವರನ್ನು ವಸ್ತ್ರಾಭರಣಮಾಲೆ ಗಳಿಂದ ಅಲಂಕರಿಸಿ ದಾನಮಾಡುತ್ತಿದ್ದೆನು. ಗೋದಾನವು ಮಾತ್ರವಲ್ಲದೆ ಭೂಮಿ, ಚಿನ್ನ, ಮನೆ, ಕುದುರೆ, ಆನೆ, ಕನ್ಯೆ, ಎಳ್ಳು, ಬೆಳ್ಳಿ, ಹಾಸಿಗೆ, ವಸ್ತ್ರ, ರತ್ನಗಳಿಂದ ಸಮಲಂಕೃತವಾದ ರಥ–ಇವೇ ಮೊದಲಾದುವನ್ನೂ

ಆಯಾಕಾಲಗಳಲ್ಲಿ ದಾನಮಾಡುತ್ತಿದ್ದೆನು. ಯಜ್ಞ-ಯಾಗಾದಿಗಳನ್ನೂ ಇಷ್ಟಾ-ಪೂರ್ತಕರ್ಮಗಳನ್ನೂ ಮಾಡುತ್ತಿದ್ದೆನು.

ಹೀಗೆಯೇ ಇರುತ್ತಿರಲಾಗಿ ಒಮ್ಮೆ ಬ್ರಾಹ್ಮಣಶ್ರೇಷ್ಠನೊಬ್ಬನ ಹಸುವು ತಪ್ಪಿಸಿಕೊಂಡು ನನ್ನ ಹಸುಗಳ ಮಧ್ಯದಲ್ಲಿ ಸೇರಿಕೊಂಡುಬಿಟ್ಟಿದ್ದಿತು. ಅದನ್ನು ಅರಿಯದ ನಾನು ಬ್ರಾಹ್ಮಣರಿಗೆ ಗೋದಾನಮಾಡುವಾಗ ಆ ಬ್ರಾಹ್ಮಣನ ಹಸುವನ್ನೂ ಮತ್ತೊಬ್ಬ ಬ್ರಾಹ್ಮಣನಿಗೆ ದಾನಮಾಡಿಬಿಟ್ಟೆನು. ನನ್ನಿಂದ ದಾನವಾಗಿ ಪಡೆದ ಆ ಬ್ರಾಹ್ಮಣನು ಹಸುವನ್ನು ಹೊಡೆದುಕೊಂಡು ಹೋಗುತ್ತಿದ್ದಾಗ ಆ ಹಸುವಿನ ಒಡೆಯನು–'ಇದು ನನ್ನ ಹಸು, ನೀನೇಕೆ ಹೊಡೆದುಕೊಂಡು ಹೋಗುತ್ತಿರುವೆ?'–ಎಂದು ಪ್ರಶ್ನಿಸಿದನು. 'ಈ ಹಸುವು ನಿನ್ನದಲ್ಲ ; ನನ್ನದು. ನನಗೆ ಈ ಹಸುವನ್ನು ನೃಗರಾಜನು ಈಗತಾನೇ ದಾನಮಾಡಿದ್ದಾನೆ'–ಎಂದು ನನ್ನಿಂದ ದಾನಪಡೆದ ಬ್ರಾಹ್ಮಣನು ಉತ್ತರಿಸಿದನು. ಹೀಗೆ ಪರಸ್ಪರವಾಗಿ ವಾದ-ವಿವಾದಮಾಡುತ್ತಿದ್ದ ಆ ಬ್ರಾಹ್ಮಣರಿಬ್ಬರೂ ತಮ್ಮ ವಾದವನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ನನ್ನ ಬಳಿಗೆ ಬಂದರು. ನನ್ನಿಂದ ಹಸುವನ್ನು ದಾನವಾಗಿ ಪಡೆದ ಬ್ರಾಹ್ಮಣನು ತನ್ನ ವಾದವನ್ನು ಮುಂದಿಟ್ಟನು :

"ಮಹಾರಾಜ! ಈಗತಾನೇ ನೀನು ಈ ಹಸುವನ್ನು ನನಗೆ ದಾನಮಾಡಿರುವೆ. ಆದುದರಿಂದ ಇದು ನನಗೆ ಸೇರಿದ್ದಾಗಿದೆ. ಆದರೆ ಇವನು ತನ್ನದೆಂದು ಹೇಳಿಕೊಳ್ಳುತ್ತಿದ್ದಾನೆ. ಇದು ಯಾರದ್ದೆಂಬುದನ್ನು ನೀನೇ ತೀರ್ಮಾನಿಸು"–ಎಂದನು. "ಈ ಬ್ರಾಹ್ಮಣನು ಹೇಳುತ್ತಿರುವುದು ನಿಶ್ಚಯವಾದರೆ ನೀನು ನನ್ನ ಹಸುವನ್ನು ಕದ್ದು ಇವನಿಗೆ ದಾನಮಾಡಿರುವೆ. ಈ ಹಸುವು ನನ್ನದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ"–ಎಂದು ಆ ಹಸುವಿನ ಒಡೆಯನು ತನ್ನ ವಾದವನ್ನು ಮಂಡಿಸಿದನು. ಅವರಿಬ್ಬರ ವಾದ-ವಿವಾದಗಳನ್ನು ಕೇಳಿ ನನ್ನ ಬುದ್ಧಿಯು ಭ್ರಮಿಸಿತು. ಆಗ ನಾನು ಅಜ್ಞಾನದಿಂದ ಆಗಿಹೋದ ಅಪರಾಧವನ್ನು ಅರ್ಥಮಾಡಿಕೊಂಡೆನು. ಧರ್ಮಸಂಕಟದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಇಬ್ಬರಿಗೂ ಸಮಾಧಾನದ ಮಾತುಗಳನ್ನು ಹೇಳುತ್ತಾ ಗೋವಿನ ಒಡೆಯನಿಗೆ ಹೇಳಿದೆನು :

ಗವಾಂ ಲಕ್ಷಂ ಪ್ರಕೃಷ್ಟಾನಾಂ ದಾಸ್ಯಾಮ್ಯೇಷಾ ಪ್ರದೀಯತಾಮ್ ॥

ಭವನ್ತಾವನುಗೃಹ್ಣೀತಾಂ ಕಿಙ್ಕರಸ್ಯಾವಿಜಾನತಃ ।
ಸಮುದ್ಧರತ ಮಾಂ ಕೃಚ್ಛ್ರಾತ್ಪತನ್ತಂ ನಿರಯೇಽಶುಚೌ ॥೨೦॥

"ನಿಮ್ಮಿಬ್ಬರಲ್ಲಿ ಯಾರಿಗಾದರೂ ಸರಿಯೇ. ಈ ಹಸುವಿನ ವಿನಿಮಯ ರೂಪವಾಗಿ ಶ್ರೇಷ್ಠವಾದ ಒಂದು ಲಕ್ಷ ಹಸುಗಳನ್ನು ಕೊಡುತ್ತೇನೆ. ಈ ಹಸುವನ್ನು ನನಗೆ ಕೊಡಿರಿ. ನಾನು ನಿಮ್ಮ ಸೇವಕನಾಗಿದ್ದೇನೆ. ಈ ತಪ್ಪನ್ನು ನಾನು ಅಜ್ಞಾನದಿಂದ ಮಾಡಿದ್ದೇನೆ. ನೀವು ನನ್ನ ಮೇಲೆ ಕೃಪೆದೋರಿರಿ. ನನ್ನನ್ನು ಈ ಧರ್ಮಸಂಕಟದಿಂದ ಪಾರುಮಾಡಿರಿ. ಘೋರವಾದ ನರಕದಲ್ಲಿ ನಾನು ಬೀಳುವುದನ್ನು ತಪ್ಪಿಸಿರಿ."

ನನ್ನ ಪ್ರಾರ್ಥನೆಯನ್ನು ತಿರಸ್ಕರಿಸುತ್ತಾ ಆ ಹಸುವಿನ ಸ್ವಾಮಿಯು 'ನನ್ನ ಹಸುವನ್ನು ನನಗೆ ಕೊಡದಿದ್ದರೆ ಬೇರೆ ಯಾವುದನ್ನೂ ನಾನು ತೆಗೆದುಕೊಳ್ಳುವುದಿಲ್ಲ'–ಎಂದು ಹೇಳಿ ಹೊರಟುಹೋದನು. ನನ್ನಿಂದ ದಾನಪಡೆದ ಬ್ರಾಹ್ಮಣನು–'ಒಂದು ಲಕ್ಷವಲ್ಲ ಅದರ ಮೇಲೆ ಹತ್ತು ಸಾವಿರ ಗೋವುಗಳನ್ನು ಕೊಟ್ಟರೂ ಅದು ನನಗೆ ಬೇಡ'–ಎಂದು ಹೇಳುತ್ತಾ ಹೊರಟುಹೋದನು.

ದೇವಾಧಿದೇವನೇ! ಜಗದೀಶ್ವರ! ಹಲವಾರು ವರ್ಷಗಳನಂತರ ಪ್ರಾಣಿಸಾಧಾರಣವಾದ ಮರಣವು ನನಗೂ ಸಂಭವಿಸಿತು. ಯಮದೂತರು ಬಂದು ನನ್ನನ್ನು ಯಮಪುರಿಗೆ ಕರೆದುಕೊಂಡು ಹೋಗಿ ಯಮರಾಜನ ಮುಂದೆ ನಿಲ್ಲಿಸಿದರು. ಯಮರಾಜನು ನನ್ನನ್ನು ಪ್ರಶ್ನಿಸಿದನು :

ಪೂರ್ವಂ ತ್ವಮಶುಭಂ ಭುಂಕ್ಷೇ ಉತಾಹೋ ನೃಪತೇ ಶುಭಮ್ ।
ನಾನ್ತಂ ದಾನಸ್ಯ ಧರ್ಮಸ್ಯ ಪಶ್ಯೇ ಲೋಕಸ್ಯ ಭಾಸ್ವತಃ ॥೨೧॥

"ಮಹಾರಾಜ! ನೀನು ಮೊದಲು ಪಾಪದ ಫಲವನ್ನು ಅನುಭವಿಸಲು ಇಷ್ಟಪಡುವೆಯೋ ಅಥವಾ ಪುಣ್ಯದ ಫಲವನ್ನು ಅನುಭವಿಸಲು ಇಷ್ಟ ಪಡುವೆಯೋ? ನೀನು ಮಾಡಿರುವ ದಾನಕ್ಕೆ, ಧರ್ಮಕ್ಕೆ–ನಿನಗೆ ಅಸಂಖ್ಯಾತ ವಾದ, ಅನಂತವಾದ ತೇಜೋಮಯವಾದ ಲೋಕಗಳು ಪ್ರಾಪ್ತವಾಗಲಿವೆ.'

ಅದಕ್ಕೆ ನಾನು ಮೊದಲು ಪಾಪದ ಫಲವನ್ನು ಅನುಭವಿಸುವೆನೆಂದು

ಯಮರಾಜನಿಗೆ ಹೇಳಿದೆನು. ಯಮರಾಜನು : 'ಪತ' 'ಪಾಪದ ಫಲವಾಗಿ ನೀಚಯೋನಿಯಲ್ಲಿ ಬೀಳು'–ಎಂದು ಹೇಳಿದೊಡನೆಯೇ ನಾನು ಹೆಂಟೇಗೊದ್ದದ ಶರೀರವನ್ನು ಹೊಂದಿ ಬಾವಿಯಲ್ಲಿ ಬಿದ್ದೆನು.

ಪ್ರಭುವೇ! ನಾನು ಬ್ರಾಹ್ಮಣರ ಸೇವಕನಾಗಿದ್ದೆನು. ಉದಾರನಾದ ದಾನಿಯಾಗಿದ್ದೆನು. ಮೇಲಾಗಿ ನಿನ್ನ ಪರಮಭಕ್ತನಾಗಿದ್ದೆನು. ಈ ಕಾರಣಗಳಿಂದ ನನ್ನ ಜನ್ಮಾಂತರದ ಸ್ಮರಣೆಯು ಕುಂಠಿತವಾಗಿರಲಿಲ್ಲ. ನಿನ್ನ ದಿವ್ಯ ದರ್ಶನವನ್ನೇ ನಾನು ತವಕದಿಂದ ಸದಾಕಾಲದಲ್ಲಿಯೂ ಪ್ರತೀಕ್ಷಿಸುತ್ತಿದ್ದೆನು.

ಸ ತ್ವಂ ಕಥಂ ಮಮ ವಿಭೋಽಕ್ಷಿಪಥಃ ಪರಾತ್ಮಾ
ಯೋಗೇಶ್ವರೈಃ ಶ್ರುತಿದೃಶಾಮಲಹೃದ್ವಿಭಾವ್ಯಃ ।
ಸಾಕ್ಷಾದಧೋಕ್ಷಜ ಉರುವ್ಯಸನಾನ್ಧಬುದ್ಧೇಃ
ಸ್ಯಾನ್ಮೇಽನುದೃಶ್ಯ ಇಹ ಯಸ್ಯ ಭವಾಪವರ್ಗಃ ॥೨೬॥

ಪ್ರಭುವೇ! ನೀನು ಪರಮಾತ್ಮನೇ ಆಗಿರುವೆ. ಶುದ್ಧಹೃದಯರಾದ ಮಹಾಮಹಾಯೋಗಿಗಳು ವೇದಾಂತಜ್ಞಾನವೆಂಬ ಕಣ್ಣಿನಿಂದ ತಮ್ಮ ಹೃನ್ಮಂದಿರಗಳಲ್ಲಿ ನಿನ್ನನ್ನು ಧ್ಯಾನಮಾಡುತ್ತಿರುತ್ತಾರೆ. ಇಂದ್ರಿಯಾತೀತನಾದ ಪರಮಾತ್ಮನೇ! ನೀನು ಸಾಕ್ಷಾತ್ತಾಗಿ ನನಗೆ ಹೇಗೆ ಕಾಣಿಸಿಕೊಂಡೆ? ನಾನಾದರೋ ಅನೇಕ ಪ್ರಕಾರವಾದ ವ್ಯಸನಗಳಿಂದ ಕುರುಡನಾಗಿ ಬಿಟ್ಟಿ ದ್ದೆನು. ಸಂಸಾರಸಾಗರದಿಂದ ಮುಕ್ತನಾಗುವ ಸಮಯವು ಸನ್ನಿಹಿತವಾದಾಗ ನಿನ್ನ ದಿವ್ಯದರ್ಶನವಾಗುವುದೆಂದು ನಾನು ಭಾವಿಸಿದ್ದೇನೆ.

ದೇವದೇವ ಜಗನ್ನಾಥ ಗೋವಿನ್ದ ಪುರುಷೋತ್ತಮ ।
ನಾರಾಯಣ ಹೃಷೀಕೇಶ ಪುಣ್ಯಶ್ಲೋಕಾಚ್ಯುತಾವ್ಯಯ ॥೨೭॥

ಅನುಜಾನೀಹಿ ಮಾಂ ಕೃಷ್ಣ ಯಾನ್ತಂ ದೇವಗತಿಂ ಪ್ರಭೋ ।
ಯತ್ರ ಕ್ವಾಪಿ ಸತಶ್ಚೇತೋ ಭೂಯಾನ್ಮೇ ತ್ವತ್ಪದಾಸ್ಪದಮ್ ॥೨೮॥

ದೇವಾಧಿದೇವನೇ! ಜಗನ್ನಾಥನೇ! ಗೋವಿಂದನೇ! ಪುರುಷೋ ತ್ತಮನೇ! ನಾರಾಯಣನೇ! ಹೃಷೀಕೇಶನೇ! ಪುಣ್ಯಶ್ಲೋಕನೇ! ಅಚ್ಯುತನೇ! ಅವ್ಯಯನೇ! ಪ್ರಭುವೇ! ಶ್ರೀಕೃಷ್ಣನೇ! ನಾನೀಗ ದೇವತೆಗಳ

ಲೋಕಕ್ಕೆ ಹೋಗುತ್ತಿದ್ದೇನೆ. ಅನುಜ್ಞೆಯನ್ನು ನೀಡು. ನಾನು ಎಲ್ಲಿಯೇ ಇದ್ದರೂ, ಯಾವ ಯೋನಿಯಲ್ಲಿಯೇ ಹುಟ್ಟಿದ್ದರೂ, ನನ್ನ ಮನಸ್ಸು ಸದಾ ಕಾಲದಲ್ಲಿಯೂ ನಿನ್ನ ಚರಣಕಮಲಗಳಲ್ಲಿಯೇ ಲೀನವಾಗಿರುವಂತೆ ಅನುಗ್ರಹಿಸು.

ನಮಸ್ತೇ ಸರ್ವಭಾವಾಯ ಬ್ರಹ್ಮಣೇऽನನ್ತಶಕ್ತಯೇ ।
ಕೃಷ್ಣಾಯ ವಾಸುದೇವಾಯ ಯೋಗಾನಾಂ ಪತಯೇ ನಮಃ ॥೨೯॥

ಸರ್ವಸ್ವರೂಪನೇ! ಬ್ರಹ್ಮಸ್ವರೂಪನೇ! ಅನಂತವಾದ ಶಕ್ತಿಯುಳ್ಳವನೇ! ನಿನಗೆ ನಮಸ್ಕರಿಸುತ್ತೇನೆ. ಸಚ್ಚಿದಾನಂದಸ್ವರೂಪನಾದ ವಾಸುದೇವನೇ! ಸರ್ವಾಂತರ್ಯಾಮಿಯಾದ ಶ್ರೀಕೃಷ್ಣನೇ! ಸಮಸ್ತಯೋಗಿಗಳಿಗೂ ಸ್ವಾಮಿಯಾದ ಯೋಗೇಶ್ವರನೇ! ನಾನು ನಿನಗೆ ಪುನಃ ಪುನಃ ನಮಸ್ಕರಿಸುತ್ತೇನೆ."

ಪರೀಕ್ಷಿತಮಹಾರಾಜ! ನೃಗಮಹಾರಾಜನು ಹೀಗೆ ಹೇಳಿ ಶ್ರೀಕೃಷ್ಣನಿಗೆ ಪ್ರದಕ್ಷಿಣೆಮಾಡಿ ತನ್ನ ಕಿರೀಟದಿಂದ ಭಗವಂತನ ಚರಣಕಮಲಗಳನ್ನು ಸ್ಪರ್ಶಿಸಿ ನಮಸ್ಕರಿಸಿ, ಕರುಣಾಮಯನಾದ ಶ್ರೀಕೃಷ್ಣನ ಅನುಮತಿಯನ್ನು ಪಡೆದು ಎಲ್ಲರೂ ನೋಡುತ್ತಿದ್ದಂತೆಯೇ ಶ್ರೇಷ್ಠವಾದ ವಿಮಾನದಲ್ಲಿ ಕುಳಿತು ದೇವಲೋಕಕ್ಕೆ ಪ್ರಯಾಣಮಾಡಿದನು.

ಪರೀಕ್ಷಿತಮಹಾರಾಜ! ನೃಗರಾಜನು ದೇವಲೋಕಕ್ಕೆ ಹೊರಟು ಹೋದನಂತರ ಬ್ರಾಹ್ಮಣರಿಗೆ ಪರಮಪ್ರಿಯನಾದ, ಧರ್ಮಾತ್ಮನಾದ, ದೇವಕಿಯ ಮಗನಾದ ಭಗವಾನ್ ಶ್ರೀಕೃಷ್ಣನು ಕ್ಷತ್ರಿಯರಿಗೆ ಶಿಕ್ಷಣವನ್ನು ಕೊಡುವ ಸಲುವಾಗಿ ಅಲ್ಲಿ ನೆರೆದಿದ್ದ ತನ್ನ ಕುಟುಂಬವರ್ಗದ ಜನರಿಗೆ ಹೇಳಿದನು :

ದುರ್ಜರಂ ಬತ ಬ್ರಹ್ಮಸ್ವಂ ಭುಕ್ತಮಗ್ನೇರ್ಮನಾಗಪಿ ।
ತೇಜೀಯಸೋऽಪಿ ಕಿಮುತ ರಾಜ್ಞಾಮೀಶ್ವರಮಾನಿನಾಮ್ ॥೩೨॥

"ಬಂಧುಗಳೇ! ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸುಳ್ಳವರು ಕೂಡ ಬ್ರಾಹ್ಮಣರ ಅತ್ಯಲ್ಪವಾದ ಸ್ವತ್ತನ್ನೇ ಅರಗಿಸಿಕೊಳ್ಳಲಾರರು.

ಹೀಗಿರುವಾಗ ತಾವೇ ಈಶ್ವರರೆಂದು ಭಾವಿಸಿಕೊಂಡಿರುವ ದುರಭಿಮಾನಿಗಳಾದ ರಾಜರ ವಿಷಯವಾಗಿ ಹೇಳುವುದೇನಿದೆ?

ನಾಹಂ ಹಾಲಾಹಲಂ ಮನ್ಯೇ ವಿಷಂ ಯಸ್ಯ ಪ್ರತಿಕ್ರಿಯಾ ।
ಬ್ರಹ್ಮಸ್ವಂ ಹಿ ವಿಷಂ ಪ್ರೋಕ್ತಂ ನಾಸ್ಯ ಪ್ರತಿವಿಧಿರ್ಭುವಿ ॥೩೩॥

ನಾನು ಹಾಲಾಹಲವನ್ನು ವಿಷವೆಂದು ಭಾವಿಸುವುದೇ ಇಲ್ಲ. ಹಾಲಾಹಲವಿಷವನ್ನು ಕೂಡ ಚಿಕಿತ್ಸೆಯಿಂದ ಪರಿಹರಿಸಿಕೊಳ್ಳಬಹುದು. ನಿಶ್ಚಯವಾಗಿ ಹೇಳುವುದಾದರೆ ಬ್ರಾಹ್ಮಣರ ಸ್ವತ್ತೆಂಬುದೇ ಭುವಿಯಲ್ಲಿ ಯಾವುದೇ ಚಿಕಿತ್ಸೆಯೂ ಇಲ್ಲದ ಪರಮಘೋರವಿಷವಾಗಿದೆ.

ಹಿನಸ್ತಿ ವಿಷಮತ್ತಾರಂ ವಹ್ನಿರದ್ಭಿಃ ಪ್ರಶಾಮ್ಯತಿ ।
ಕುಲಂ ಸಮೂಲಂ ದಹತಿ ಬ್ರಹ್ಮಸ್ವಾರಣಿಪಾವಕಃ ॥೩೪॥

ಹಾಲಾಹಲವಿಷವು, ಅದನ್ನು ಕುಡಿದವರ ಅಸುವನ್ನು ಮಾತ್ರವೇ ನೀಗಿಸಬಲ್ಲದು. ಉರಿಯುತ್ತಿರುವ ಬೆಂಕಿಯನ್ನೂ ನೀರಿನಿಂದ ಆರಿಸಿಬಿಡಬಹುದು. ಆದರೆ ಬ್ರಾಹ್ಮಣನ ಧನರೂಪವಾದ ಅರಣಿಯಿಂದ ಹುಟ್ಟುವ ಅಗ್ನಿಯು ಕುಲವನ್ನೇ ಮೂಲಸಹಿತವಾಗಿ ಸುಟ್ಟುಹಾಕುತ್ತದೆ. ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿದವನ ವಂಶವೇ ನಿರ್ವಂಶವಾಗುತ್ತದೆ.

ಬ್ರಹ್ಮಸ್ವಂ ದುರನುಜ್ಞಾತಂ ಭುಕ್ತಂ ಹನ್ತಿ ತ್ರಿಪೂರುಷಮ್ ।
ಪ್ರಸಹ್ಯ ತು ಬಲಾದ್ಭುಕ್ತಂ ದಶ ಪೂರ್ವಾನ್ ದಶಾಪರಾನ್ ॥೩೫॥

ಅವನ ಅನುಮತಿಯನ್ನು ಪಡೆಯದೆ ಉಪಭೋಗಿಸಲ್ಪಡುವ ಬ್ರಾಹ್ಮಣನ ಸ್ವತ್ತು ಉಪಭೋಗಿಸಿದವನ ಮಕ್ಕಳನ್ನೂ, ಮೊಮ್ಮಕ್ಕಳನ್ನೂ ವಿನಾಶಗೊಳಿಸುವುದು. ಬಲಾತ್ಕಾರವಾಗಿ ಕಿತ್ತುಕೊಂಡು ಉಪಭೋಗಿಸಿದ ಬ್ರಾಹ್ಮಣನ ಸ್ವತ್ತು ಉಪಭೋಗಿಸಿದವನ ಹಿಂದಿನ ಹತ್ತು ತಲೆಮಾರಿನವರನ್ನೂ ಮುಂದಿನ ಹತ್ತು ತಲೆಮಾರಿನವರನ್ನೂ ನರಕದಲ್ಲಿ ತಳ್ಳುತ್ತದೆ.

ರಾಜಾನೋ ರಾಜಲಕ್ಷ್ಮ್ಯಾನ್ಧಾ ನಾತ್ಮಪಾತಂ ವಿಚಕ್ಷತೇ ।
ನಿರಯಂ ಯೇಽಭಿಮನ್ಯನ್ತೇ ಬ್ರಹ್ಮಸ್ವಂ ಸಾಧು ಬಾಲಿಶಾಃ ॥೩೬॥

ರಾಜ್ಯಲಕ್ಷ್ಮಿಯ ಪ್ರಾಪ್ತಿಯಿಂದ ಮದಾಂಧರಾಗಿರುವ ರಾಜರು

ಬ್ರಾಹ್ಮಣಸ್ವತ್ತನ್ನು ಅಪಹರಿಸುವುದರಿಂದ ತಮ್ಮ ಅಧಃಪತನವಾಗುವುದೆಂಬು ದನ್ನು ಯೋಚಿಸುವುದಿಲ್ಲ. ಬ್ರಾಹ್ಮಣನ ಸ್ವತ್ತು ಉಪಭೋಗಿಸಲು ಯೋಗ್ಯ ವಾದುದೆಂದು ಯಾರು ಭಾವಿಸುವರೋ ಅಂತಹ ಮೂರ್ಖರು ನರಕವನ್ನು ಅಪೇಕ್ಷಿಸಿದಂತೆಯೇ ಸರಿ.

ಗೃಹ್ಣನ್ತಿ ಯಾವತಃ ಪಾಂಸೂನ ನ್ದತಾಮಶ್ರುಬಿನ್ದವಃ ।
ವಿಪ್ರಾಣಾಂ ಹೃತವೃತ್ತೀನಾಂ ವದಾನ್ಯಾನಾಂ ಕುಟುಮ್ಬಿನಾಮ್ ॥೩೭॥

ರಾಜಾನೋ ರಾಜಕುಲ್ಯಾಶ್ಚ ತಾವತೋಽಬ್ದಾನ್ನಿರಜ್ಕುಶಾಃ ।
ಕುಮ್ಭೀಪಾಕೇಷು ಪಚ್ಯನ್ತೇ ಬ್ರಹ್ಮದಾಯಾಪಹಾರಿಣಃ ॥೩೮॥

ರಾಜನಿಂದ ಅಪಹೃತವಾದ ವೃತ್ತಿಯುಳ್ಳ (ಧನವುಳ್ಳ) ಉದಾರಿಗಳಾದ ಮತ್ತು ಕುಟುಂಬಿಗಳಾದ ಬ್ರಾಹ್ಮಣರು, ಕುಟುಂಬಭರಣದ ಶಕ್ತಿಯಿಲ್ಲದೆ ಕಣ್ಣೀರಿಡುವಾಗ ಅವರ ಕಣ್ಣೀರಿನಿಂದ ಧೂಳಿಯ ಎಷ್ಟು ಕಣಗಳು ನೆನೆದುಹೋಗುತ್ತವೆಯೋ ಅಷ್ಟೇ ಸಂಖ್ಯಾತವಾದ ವರ್ಷಗಳನ್ನು, ಬ್ರಹ್ಮಸ್ವತ್ತನ್ನು ಅಪಹರಿಸಿದ ರಾಜರು ಮತ್ತು ಅವನ ವಂಶೀಯರು ಯಾವ ವಿಧವಾದ ಅಡೆ-ತಡೆಗಳೂ ಇಲ್ಲದೆ ಕುಂಭೀಪಾಕವೆಂಬ ನರಕದಲ್ಲಿ ಬೇಯಿಸಲ್ಪಡುತ್ತಾ ಕಳೆಯುತ್ತಾರೆ.

ಸ್ವದತ್ತಾಂ ಪರದತ್ತಾಂ ವಾ ಬ್ರಹ್ಮವೃತ್ತಿಂ ಹರೇಚ್ಚ ಯಃ ।
ಷಷ್ಟಿವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕೃಮಿಃ ॥೩೯॥

ಯಾವ ರಾಜನು ತಾನು ಕೊಟ್ಟಿದ್ದನ್ನೇ ಆಗಲೀ, ಇತರರು ಕೊಟ್ಟಿದ್ದನ್ನೇ ಆಗಲೀ–ಬ್ರಾಹ್ಮಣನ ವೃತ್ತಿಗೆ ಅನುಕೂಲವಾಗಿದ್ದ ಸ್ವತ್ತನ್ನು ಅಪಹರಿಸುವನೋ ಆತನು ಅರುವತ್ತು ಸಾವಿರ ವರ್ಷಗಳವರೆಗೆ ಮಲದಲ್ಲಿ ಕ್ರಿಮಿಯಾಗಿರುತ್ತಾನೆ.

ನ ಮೇ ಬ್ರಹ್ಮಧನಂ ಭೂಯಾದ್ಯದ್ಗೃದ್ಧ್ವಾಲ್ಪಾಯುಷೋ ನರಾಃ ।
ಪರಾಜಿತಾಶ್ಚ್ಯುತಾ ರಾಜ್ಯಾದ್ಭವನ್ತ್ಯುದ್ವೇಜಿನೋಽಹಯಃ ॥೪೦॥

ಬ್ರಾಹ್ಮಣನ ಸ್ವತ್ತಿಗೆ ಆಸೆಪಡುವುದರಿಂದಲೇ ರಾಜನು ಅಲ್ಪಾಯು ವಾಗುತ್ತಾನೆ. ಶತ್ರುಗಳಿಂದ ಪರಾಜಿತನಾಗುತ್ತಾನೆ. ರಾಜ್ಯಭ್ರಷ್ಟನಾಗುತ್ತಾನೆ.

ಅವಸಾನಾನಂತರದಲ್ಲಿಯೂ ಪ್ರಾಣಿಗಳಿಗೆ ಉದ್ವೇಗವನ್ನುಂಟುಮಾಡುವ ಸರ್ಪವಾಗಿ ಹುಟ್ಟುತ್ತಾನೆ. ಆದುದರಿಂದ ಯಾವುದೇ ಕಾರಣದಿಂದಲೂ ನನಗೆ ಬ್ರಾಹ್ಮಣನ ಸ್ವತ್ತು ಬೇಡ.

ವಿಪ್ರಂ ಕೃತಾಗಸಮಪಿ ನೈವ ದ್ರುಹ್ಯತ ಮಾಮಕಾಃ ।
ಘ್ನನ್ತಂ ಬಹು ಶಪನ್ತಂ ವಾ ನಮಸ್ಕುರುತ ನಿತ್ಯಶಃ ॥೪೧॥

ಆದುದರಿಂದ : ನನ್ನ ಆತ್ಮೀಯರೇ! ಒಂದು ವೇಳೆ ಬ್ರಾಹ್ಮಣನಾದವನು ಅಪರಾಧವನ್ನೇ ಮಾಡಿದ್ದರೂ ಅವನಿಗೆ ದ್ರೋಹವನ್ನೆಸಗಬೇಡಿರಿ. ಅವನು ನಿಮ್ಮನ್ನು ಹೊಡೆಯುತ್ತಿದ್ದರೂ ಬೈಯುತ್ತಿದ್ದರೂ ಅವನಿಗೆ ನಮಸ್ಕಾರವನ್ನೇ ಸದಾ ಮಾಡುತ್ತಿರಿ.

ಯಥಾಹಂ ಪ್ರಣಮೇ ವಿಪ್ರಾನನುಕಾಲಂ ಸಮಾಹಿತಃ ।
ತಥಾ ನಮತ ಯೂಯಂ ಚ ಯೋಽನ್ಯಥಾ ಮೇ ಸ ದಣ್ಡಭಾಕ್ ॥

ನಾನು ಹೇಗೆ ಸಾವಧಾನಚಿತ್ತನಾಗಿ ಮೂರು ಕಾಲಗಳಲ್ಲಿಯೂ ಬ್ರಾಹ್ಮಣರಿಗೆ ನಮಸ್ಕರಿಸುವೆನೋ ಹಾಗೆಯೇ ನೀವೂ ನಮಸ್ಕರಿಸಬೇಕು. ಯಾರು ನನ್ನ ಈ ಆಜ್ಞೆಯನ್ನು ಉಲ್ಲಂಘಿಸುವರೋ ಅಂತಹವರು ಶಿಕ್ಷಾರ್ಹರಾಗುತ್ತಾರೆ.

ಬ್ರಾಹ್ಮಣಾರ್ಥೋ ಹ್ಯಪಹೃತೋ ಹರ್ತಾರಂ ಪಾತಯತ್ಯಧಃ ।
ಅಜಾನನ್ತಮಪಿ ಹ್ಯೇನಂ ನೃಗಂ ಬ್ರಾಹ್ಮಣಗೌರಿವ ॥೪೩॥

ಅಪಹರಿಸಲ್ಪಟ್ಟ ಬ್ರಾಹ್ಮಣನ ಐಶ್ವರ್ಯವು ಅಪಹಾರಿಯನ್ನು-ಬ್ರಾಹ್ಮಣನ ಸ್ವತ್ತೆಂಬುದನ್ನು ತಿಳಿಯದೇ ಅವನು ಆ ಅಪರಾಧವನ್ನು ಮಾಡಿದ್ದರೂ-ಬ್ರಾಹ್ಮಣನ ಹಸುವು ನೃಗಮಹಾರಾಜನನ್ನು ನರಕಕ್ಕೆ ತಳ್ಳಿದಂತೆ ಅಧಃಪತನಗೊಳಿಸುತ್ತದೆ."

ಪರೀಕ್ಷಿತಮಹಾರಾಜ! ಲೋಕಪಾವನನಾದ ಭಗವಾನ್ ಶ್ರೀಕೃಷ್ಣನು ದ್ವಾರಕಾವಾಸಿಗಳಿಗೆ ಹೀಗೆ ಉಪದೇಶವನ್ನಿತ್ತು ತನ್ನ ಅರಮನೆಯನ್ನು ಪ್ರವೇಶಿಸಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೬೪ನೆಯ ಅಧ್ಯಾಯವು ಮುಗಿಯಿತು.

ಬಲರಾಮನು ವ್ರಜಕ್ಕೆ (ಗೋಕುಲಕ್ಕೆ) ಆಗಮಿಸಿದುದು

ಶ್ರೀಶುಕಮುನಿಗಳು ಹೇಳುತ್ತಾರೆ :

ಬಲಭದ್ರಃ ಕುರುಶ್ರೇಷ್ಠ ಭಗವಾನ್ ರಥಮಾಸ್ಥಿತಃ ।
ಸುಹೃದ್ದಿದೃಕ್ಷುರುತ್ಕಣ್ಠಃ ಪ್ರಯಯೌ ನನ್ದಗೋಕುಲಮ್ ॥೧॥

ಪರೀಕ್ಷಿತಮಹಾರಾಜ! ಕುರುಶ್ರೇಷ್ಠನೇ! ಭಗವಾನ್ ಬಲಭದ್ರನು ನಂದಗೋಪನೇ ಮೊದಲಾದ ಸುಹೃದರನ್ನು ನೋಡುವ ತವಕದಿಂದ ರಥದಲ್ಲಿ ಕುಳಿತು ದ್ವಾರಕೆಯಿಂದ ನಂದಗೋಕುಲಕ್ಕೆ ಪ್ರಯಾಣಮಾಡಿದನು.

ಬಲರಾಮ-ಶ್ರೀಕೃಷ್ಣರನ್ನು ನೋಡಬೇಕೆಂದು ನಂದಗೋಕುಲದ ಗೋಪಿಯರು ಮತ್ತು ಗೋಪಾಲಕರು ಬಹಳ ದಿವಸಗಳಿಂದಲೂ ತವಕಿಸುತ್ತಲೇ ಇದ್ದರು. ಅವರೆಲ್ಲರೂ ಬಲರಾಮನನ್ನು ನೋಡಿದೊಡನೆಯೇ ಆನಂದತುಂದಿಲರಾಗಿ ಅವನನ್ನು ಗಾಢವಾಗಿ ಆಲಿಂಗಿಸಿಕೊಂಡರು. ಬಲಭದ್ರನು ತಾಯಿಯಾದ ಯಶೋದೆಗೂ, ತಂದೆಯಾದ ನಂದನಿಗೂ ನಮಸ್ಕಾರಮಾಡಿದನು. ಯಶೋದಾ-ನಂದರೂ ಮಗನನ್ನು ಬಾಚಿ ತಬ್ಬಿಕೊಂಡು ನೆತ್ತಿಯನ್ನು ಆಘ್ರಾಣಿಸಿ ಆಶೀರ್ವದಿಸಿದರು.

ಚಿರಂ ನಃ ಪಾಹಿ ದಾಶಾರ್ಹ ಸಾನುಜೋ ಜಗದೀಶ್ವರಃ ।

"ದಾಶಾರ್ಹನೇ! ನೀನು ಜಗದೀಶ್ವರನಾಗಿರುವೆ. ನಿನ್ನ ತಮ್ಮನಾದ ಶ್ರೀಕೃಷ್ಣನೊಡನೆ ಸದಾ ನೀನು ನಮ್ಮನ್ನು ರಕ್ಷಿಸುತ್ತಿರು."

ಹೀಗೆ ಹೇಳುತ್ತಾ ಬಲರಾಮನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಆನಂದಬಾಷ್ಪದಿಂದ ಅವನಿಗೆ ಅಭಿಷೇಕಮಾಡಿಬಿಟ್ಟರು. ಬಳಿಕ ಬಲರಾಮನು ವೃದ್ಧರಾಗಿದ್ದ ಗೋಪರಿಗೆ ನಮಸ್ಕರಿಸಿದನು. ಅವನಿಗಿಂತಲೂ ಕಿರಿವಯಸ್ಸಿನ ಗೋಪಬಾಲಕರು ಬಲರಾಮನಿಗೆ ನಮಸ್ಕರಿಸಿದರು. ಹೀಗೆ ಬಲರಾಮನು ಗೋಪಾಲಕರ ವಯಸ್ಸಿಗೆ ಅನುಸಾರವಾಗಿ ಅವರೊಡನೆ ತನಗಿದ್ದ ಮೈತ್ರಿಗೆ ಅನುಸಾರವಾಗಿ ಮತ್ತು ನೆಂಟಸ್ತಿಕೆಗೆ ತಕ್ಕಂತೆ ಎಲ್ಲರನ್ನೂ ಸಮಾದರಿಸಿದನು. ಬಲರಾಮನು ಕೆಲವು ಗೋಪಾಲರೊಡನೆ ವಿನೋದದ

ಮಾತುಗಳನ್ನಾಡುವನು ; ಮತ್ತೆ ಕೆಲವರ ಕೈಕುಲುಕುವನು. ಕೆಲವರ ಹೆಗಲಮೇಲೆ ಕೈಹಾಕುವನು. ಹೀಗೆ ಎಲ್ಲರನ್ನೂ ಯಥೋಚಿತವಾಗಿ ಮಾತನಾಡಿಸಿ ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಂಡನಂತರ ಸುಖಾಸನದಲ್ಲಿ ಕುಳಿತಿದ್ದ ಬಲರಾಮನನ್ನು ನೋಡಲು ಬಂದಿದ್ದ ಗೋಪರು ಕುಶಲಪ್ರಶ್ನೆಗಳನ್ನು ಕೇಳಿದರು. ಬಲರಾಮನೂ ಅವರೆಲ್ಲರ ಕುಶಲವನ್ನೂ ವಿಚಾರಿಸಿದನು. ಮೊದಲಿನಿಂದಲೂ ಕಮಲಾಕ್ಷನಾದ ಶ್ರೀಕೃಷ್ಣನಿಗೆ ತಮ್ಮ ಸರ್ವಸ್ವವನ್ನೂ ಅರ್ಪಿಸಿಕೊಂಡಿದ್ದ ಆ ಗೋಪರು-ಬಲರಾಮನು ತಮ್ಮ ಕುಶಲಪ್ರಶ್ನೆಗಳನ್ನು ಕೇಳಿದನಂತರ ಪ್ರೇಮದಿಂದ ಉಕ್ಕಿಬರುತ್ತಿದ್ದ ಕಣ್ಣೀರಿ ನಿಂದಾಗಿ ಗದ್ಗದವಾಗಿದ್ದ ಸ್ವರದಿಂದ ಬಲರಾಮನನ್ನು ಪ್ರಶ್ನಿಸಿದರು :

"ಬಲಭದ್ರ! ವಸುದೇವನೇ ಮೊದಲಾದ ನಮ್ಮ ಬಂಧುಗಳು ಸಕುಶಲರಾಗಿರುವರೇ? ಈಗ ನೀವು ನಿಮ್ಮ ಪತ್ನೀ-ಪುತ್ರ-ಪುತ್ರಿಯರೊಡನೆ ಆನಂದದಿಂದ ಸಂಸಾರವನ್ನು ನಿರ್ವಹಿಸುತ್ತಿರುವಿರಿ. ಈಗಲೂ ನಿಮಗೆ ನಮ್ಮ ಸ್ಮರಣೆಯುಂಟಾಗುವುದೇ? ಅದೃಷ್ಟವಶದಿಂದ ಪಾಪಿಷ್ಠನಾದ ಕಂಸನು ಹತನಾದನು. ಅದೃಷ್ಟದ ಕಾರಣದಿಂದಲೇ ನಮ್ಮಸುಹೃದರೂ, ಬಂಧು ಗಳೂ ಕಷ್ಟ-ಕಾರ್ಪಣ್ಯಗಳಿಂದ ಮುಕ್ತರಾದರು. ಬಳಿಕ ನೀವು ಹಲವಾರು ಶತ್ರುರಾಜರನ್ನು ಸಂಹರಿಸಿದಿರಿ. ಹಲವಾರು ರಾಜರನ್ನು ಪರಾಜಯ ಗೊಳಿಸಿದಿರಿ. ಇದೂ ಆನಂದದ ವಿಷಯವೇ ಆಗಿದೆ. ಈಗ ನೀವು ಅದೃಷ್ಟ ವಶದಿಂದ ದುರ್ಭೇದ್ಯವಾದ ಸಮುದ್ರದ ಮಧ್ಯದಲ್ಲಿರುವ ದ್ವಾರಕೆಯೆಂಬ ದುರ್ಗವನ್ನಾಶ್ರಯಿಸಿ ಅಲ್ಲಿಯೇ ವಾಸವಾಗಿರುವಿರಿ."

ಕೃಷ್ಣಪ್ರೇಮಿಗಳಾದ ಗೋಪರು ಹೀಗೆ ಹೇಳಿದನಂತರ ಬಲರಾಮನ ದರ್ಶನದಲ್ಲಿ ಆಸಕ್ತರಾಗಿದ್ದ ಗೋಪಿಯರು ಬಲರಾಮನ ಬಳಿಗೆ ಬಂದು ಮಂದಹಾಸದಿಂದ ಬಲರಾಮನನ್ನು ಪ್ರಶ್ನಿಸಿದರು :

ಕಚ್ಚಿದಾಸ್ತೇ ಸುಖಂ ಕೃಷ್ಣಃ ಪುರಸ್ತ್ರೀಜನವಲ್ಲಭಃ ॥೯॥

"ಬಲಭದ್ರ! ನಗರದ ನಾರಿಯರಿಗೆ ಪ್ರಾಣಪ್ರಿಯನಾಗಿರುವ ಶ್ರೀಕೃಷ್ಣನು ಕುಶಲಿಯಾಗಿರುವನೇ?

ಕಚ್ಚಿತ್ಸ್ಮರತಿ ವಾ ಬನ್ಧೂನ್ಪಿತರಂ ಮಾತರಂ ಚ ಸಃ ।

ಅಪ್ಯಸೌ ಮಾತರಂ ದ್ರಷ್ಟುಂ ಸಕೃದಪ್ಯಾಗಮಿಷ್ಯತಿ ।
ಅಪಿ ವಾ ಸ್ಮರತೇಽಸ್ಮಾಕಮನುಸೇವಾಂ ಮಹಾಭುಜಃ ॥೧೦॥

ಅವನು ಯಾವಾಗಲಾದರೂ ಇಲ್ಲಿರುವ ಬಂಧುಗಳನ್ನಾಗಲೀ ತಾಯಿ-ತಂದೆಗಳನ್ನಾಗಲೀ ಸ್ಮರಿಸುವನೇ? ತಾಯಿಯನ್ನು ನೋಡಲು ಯಾವಾಗಲಾದರೊಮ್ಮೆ ಇತ್ತ ಕಡೆ ಬರುವನೇ? ಮಹಾಬಾಹುವಾದ ಶ್ರೀಕೃಷ್ಣನು ನಾವು ಮಾಡುತ್ತಿದ್ದ ಸೇವೆಯನ್ನು ಒಮ್ಮೆಯಾದರೂ ಸ್ಮರಿಸುವನೇ?

ಮಾತರಂ ಪಿತರಂ ಭ್ರಾತೄನ್ಪತೀನ್ ಪುತ್ರಾನ್ ಸ್ವಸೄರಪಿ ।
ಯದರ್ಥೇ ಜಹಿಮ ದಾಶಾರ್ಹ ದುಸ್ತ್ಯಜಾನ್ಸ್ವಜನಾನ್ ಪ್ರಭೋ ॥೧೧॥

ಬಲಭದ್ರ! ನಿನಗೆ ತಿಳಿದಿರುವಂತೆ ಸ್ವಜನರನ್ನು ಪರಿತ್ಯಜಿಸುವುದು ದುಸ್ತರವಾದುದು. ಆದರೂ ನಾವು ನಮ್ಮ ಪ್ರಿಯತಮನಾದ ಶ್ರೀಕೃಷ್ಣನ ಸಲುವಾಗಿ ತಂದೆ-ತಾಯಿಗಳನ್ನೂ, ಅಣ್ಣ-ತಮ್ಮಂದಿರನ್ನೂ, ಪತಿ-ಪುತ್ರ-ಪುತ್ರಿಯರನ್ನೂ ಪರಿತ್ಯಜಿಸಿದೆವು.

ತಾ ನಃ ಸದ್ಯಃ ಪರಿತ್ಯಜ್ಯ ಗತಃ ಸಞ್ಛಿನ್ನಸೌಹೃದಃ ।
ಕಥಂ ನು ತಾದೃಶಂ ಸ್ತ್ರೀಭಿರ್ನ ಶ್ರದ್ಧೀಯೇತ ಭಾಷಿತಮ್ ॥೧೨॥

ಆದರೆ ಆದದ್ದೇನು? ಅವನು ನಮ್ಮೆಲ್ಲರನ್ನೂ ಕ್ಷಣಮಾತ್ರದಲ್ಲಿ ಪರಿತ್ಯಜಿಸಿ ನಮ್ಮ ಸೌಹಾರ್ದವನ್ನೂ ಪ್ರೇಮಬಂಧವನ್ನೂ ಕತ್ತರಿಸಿಹಾಕಿ ಹೊರಟೇಹೋದನು. ಆ ಸಮಯದಲ್ಲಿ ನಾವೆಲ್ಲರೂ ಸೇರಿ ಅವನ ರಥವನ್ನು ತಡೆಹಾಕಲು ನಿಶ್ಚಯಿಸಿದ್ದೆವು. ಆದರೆ ಆ ಸಮಯದಲ್ಲವನು : 'ನಾನು ನಿಮ್ಮ ಪ್ರೀತಿಗೆ ಚಿರಋಣಿಯಾಗಿದ್ದೇನೆ. ನಿಮ್ಮ ಉಪಕಾರಕ್ಕೆ ನಾನು ಪ್ರತ್ಯುಪಕಾರವನ್ನು ಖಂಡಿತವಾಗಿಯೂ ಮಾಡಲಾರೆನು. ಬೇಗನೆ ನಿಮ್ಮ ಬಳಿಗೆ ಬಂದುಬಿಡುತ್ತೇನೆ.'

ಇಂತಹ ಬಿನ್ನಾಣದ ಮಾತುಗಳನ್ನಾಡಿದಾಗ ಯಾವ ಸ್ತ್ರೀಯು ತಾನೇ ಅಂತಹ ನಯಾನುನಯದ ಮಾತುಗಳಲ್ಲಿ ವಿಶ್ವಾಸವನ್ನಿಡದೇ ಇದ್ದಾಳು?"

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

ಕಥಂ ನು ಗೃಹ್ಣನ್ತ್ಯನವಸ್ಥಿತಾತ್ಮನೋ
ವಚಃ ಕೃತಘ್ನಸ್ಯ ಬುಧಾಃ ಪುರಸ್ತ್ರಿಯಃ ।

ಬಲರಾಮ! ನಾವೇನೋ ಹಳ್ಳಿಗರು. ಏನೂ ತಿಳಿಯದವರು. ಶ್ರೀಕೃಷ್ಣನೇ ಸರ್ವಸ್ವವೆಂದು ನಂಬಿರುವವರು. ನಾವು ಅವನ ಮೃದು-ಮಧುರವಾದ ಮಾತನ್ನು ನಂಬಿಬಿಡಬಹುದು. ಆದರೆ ವಿದ್ಯಾವತಿಯರಾದ ಪಟ್ಟಣದ ಸ್ತ್ರೀಯರು ಚಂಚಲಚಿತ್ತನಾದ, ಕೃತಘ್ನನಾದ ಆ ಪೋರನ ಮಾತನ್ನು ಹೇಗೆ ನಂಬಿ ಕುಳಿತಿದ್ದಾರೆ?"

ಮತ್ತೊಬ್ಬ ಗೋಪಿಯು ಉತ್ತರಿಸುತ್ತಾಳೆ :

ಗೃಹ್ಣನ್ತಿ ವೈ ಚಿತ್ರಕಥಸ್ಯ ಸುನ್ದರ-
ಸ್ಥಿತಾವಲೋಕೋಚ್ಛ್ವಸಿತಸ್ಮರಾತುರಾಃ ॥೧೩॥

"ಸಖಿಯರೇ! ಯಾರಾದರೇನು? ನಮ್ಮ ಪ್ರಿಯತಮನು ಕಿರುನಗೆಯನ್ನು ಬೀರುತ್ತಾ ಕಡೆಗಣ್ಣಿನ ನೋಟದಿಂದ ನೋಡಿದ ಕೂಡಲೇ ನಗರದ ಸ್ತ್ರೀಯರು ಕೂಡ ಮದನಪೀಡಿತೆಯರಾಗಿ ಅವನಾಡುವ ಚಿತ್ರ-ವಿಚಿತ್ರವಾದ ಮಾತುಗಳಿಗೆ ಮರುಳಾಗಿ ಅವನು ಹೇಳುವುದೆಲ್ಲವನ್ನೂ ನಮ್ಮಂತೆಯೇ ನಂಬಿಬಿಡುತ್ತಾರೆ."

ಮತ್ತೊಬ್ಬ ಗೋಪಿಯು ಹೇಳುತ್ತಾಳೆ :

ಕಿಂ ನಸ್ತತ್ಕಥಯಾ ಗೋಪ್ಯಃ ಕಥಾಃ ಕಥಯತಾಪರಾಃ ।
ಯಾತ್ಯಸ್ಮಾಭಿರ್ವಿನಾ ಕಾಲೋ ಯದಿ ತಸ್ಯ ತಥೈವ ನಃ ॥೧೪॥

"ಗೋಪಿಯರೇ! ಅವನ ಕಥೆಯಿಂದ ನಮಗೇನಾಗಬೇಕಾಗಿದೆ? ಬೇರೆ ಯಾವುದಾದರೂ ಪ್ರಸಂಗಗಳಿದ್ದರೆ ಹೇಳಿರಿ. ನಾವಿಲ್ಲದೆ ಅವನು ಕಾಲವನ್ನು ಕಳೆಯಬಹುದಾದರೆ ಅವನಿಲ್ಲದೆ ನಾವೂ ಕಾಲವನ್ನು ಕಳೆಯೋಣ."

ಹೀಗೆ ಹೇಳುತ್ತಿದ್ದ ಗೋಪಿಯರು ಪ್ರಿಯತಮನಾದ ಶ್ರೀಕೃಷ್ಣನ ಹಾಸ್ಯ, ಸವಿನುಡಿ, ಚೇತೋಹಾರಿಯಾದ ಸುಂದರನೋಟ, ಅಂದವಾದ ನಡಿಗೆ, ಪ್ರೇಮಾಲಿಂಗನ–ಇವುಗಳನ್ನು ಸ್ಮರಿಸಿಕೊಂಡು ಬಿಕ್ಕಿ-ಬಿಕ್ಕಿ ಅತ್ತುಬಿಟ್ಟರು.

ಪರೀಕ್ಷಿತಮಹಾರಾಜ! ಬಗೆ-ಬಗೆಯ ಸಾಂತ್ವನದ ಮಾತುಗಳನ್ನು ಹೇಳಿ ಸಮಾಧಾನಗೊಳಿಸುವುದರಲ್ಲಿ ಚತುರನಾದ ಬಲರಾಮನು, ಶ್ರೀಕೃಷ್ಣನು ಕಳುಹಿಸಿದ್ದ ಹೃದಯಂಗಮವಾದ ಸಂದೇಶಗಳಿಂದ ಆ

ಗೋಪಿಕಾಸ್ತ್ರೀಯರನ್ನು ಸಮಾಧಾನಗೊಳಿಸಿದನು. ಹೀಗೆ ವಸಂತರ್ತುವಿನ ಚೈತ್ರ-ವೈಶಾಖ ಈ ಎರಡು ಮಾಸಗಳು ಪೂರ್ತಿಯಾಗಿ ಬಲರಾಮನು ರಾತ್ರಿಯಲ್ಲಿ ಗೋಪಿಯರಿಗೆ ಸಂತೋಷವನ್ನುಂಟುಮಾಡುತ್ತಾ ಗೋಕುಲದಲ್ಲಿ ಇದ್ದನು.*

ಕುಮುದಪುಷ್ಪಗಳ ಸುಗಂಧವನ್ನು ಹೊತ್ತ ಗಾಳಿಯು ಮೆಲ್ಲ-ಮೆಲ್ಲಗೆ ಬೀಸುತ್ತಿರಲಾಗಿ, ಪೂರ್ಣಚಂದ್ರನ ಹದಿನಾರು ಕಲೆಗಳಿಂದಲೂ ಕೂಡಿದ ಬೆಳದಿಂಗಳಿನಿಂದ ಜಾಜ್ವಲ್ಯಮಾನವಾಗಿ ಕಾಣಿಸುತ್ತಿದ್ದ ಯಮುನಾನದಿಯ ಉಪವನದಲ್ಲಿ ಬಲರಾಮನು ಗೋಪಿಕಾಸ್ತ್ರೀಯರಿಂದ ಸೇವಿಸಲ್ಪಡುತ್ತಾ ವಿಹರಿಸುತ್ತಿದ್ದನು. ಆ ಸಮಯದಲ್ಲಿ ವರುಣನಿಂದ ಕಳುಹಿಸಲ್ಪಟ್ಟ ಅವನ ಪುತ್ರಿಯಾದ ವಾರುಣಿಯು ಮರದ ಪೊಟರೆಯಿಂದ ಹರಿದುಕೊಂಡು ಹೊರ ಬರುತ್ತಾ ಆ ಉಪವನವೆಲ್ಲವನ್ನೂ ತನ್ನ ಸುಗಂಧವಾದ ವಾಸನೆಯಿಂದ ಸುವಾಸಿತವನ್ನಾಗಿ ಮಾಡಿದಳು. ವಾಯುವಿನಿಂದ ತರಲ್ಪಟ್ಟ ಆ ಮಧು ಧಾರೆಯ ವಾಸನೆಯನ್ನು ಬಲರಾಮನು ಆಘ್ರಾಣಿಸಿ ವಾರುಣೀಮಧುವು ಸುರಿಯುತ್ತಿದ್ದ ಸ್ಥಳಕ್ಕೆ ಹೋಗಿ ಗೋಪಿಕಾಸ್ತ್ರೀಯರೊಡನೆ ಯಥೇಚ್ಛವಾಗಿ ಅದನ್ನು ಪಾನಮಾಡಿದನು.

ಆ ಸಮಯದಲ್ಲಿ ಗೋಪಿಕಾಸ್ತ್ರೀಯರು ಬಲರಾಮನ ಚರಿತ್ರೆಯನ್ನು

---

* ಬಲರಾಮನೊಡನೆ ರಮಿಸಿದ ಗೋಪಿಕಾಸ್ತ್ರೀಯರು ಶ್ರೀಕೃಷ್ಣನ ರಾಸಕ್ರೀಡೆಯಲ್ಲಿ ಭಾಗವಹಿಸಿದ ಗೋಪಿಕಾಸ್ತ್ರೀಯರಲ್ಲವೆಂದು ಶ್ರೀಧರಸ್ವಾಮಿಗಳು ವ್ಯಾಖ್ಯಾನಿಸಿದ್ದಾರೆ. **ಶ್ರೀಕೃಷ್ಣಕ್ರೀಡಾಸಮಯೇSನುತ್ಪನ್ನಾನಾಮತಿಬಾಲಾನಾಮನ್ಯಾಸಾಮಿತ್ಯಭಿಯುಕ್ತಃ ಪ್ರಸಿದ್ಧಿಃ ।** ಶಂಖಚೂಡನ ಬಂಧನವಾದಾಗ ಬಲರಾಮನ ಜೊತೆಯಲ್ಲಿ ಕ್ರೀಡಿಸಿದ ಗೋಪಿಯರೇ ಈ ಸಮಯದಲ್ಲೂ ಬಲರಾಮನ ಜೊತೆಯಲ್ಲಿ ಕ್ರೀಡಿಸಿದರು–ಎಂಬ ಅಭಿಪ್ರಾಯ ಶ್ರೀ ವಿಶ್ವನಾಥಚಕ್ರವರ್ತಿ–ಇವರದ್ದು. **ಶಙ್ಖಚೂಡಬನ್ಧನಸಮಯೇ ನಿರ್ದಿಷ್ಟಾಭೀ ರಾಮಪ್ರೇಯಸೀಭಿಃ –ಇತಿ ಚಕ್ರವರ್ತೀ**

ಬಲಭದ್ರನ ಮೂಲಕವಾಗಿ ಭಗವಾನ್ ಶ್ರೀಕೃಷ್ಣನೇ ಆ ಗೋಪಿಯರ ಮನೋರಥವನ್ನು ಪೂರೈಸಿಕೊಟ್ಟನು. ಇದರಲ್ಲಿ ದೋಷವೇನೂ ಇಲ್ಲ–ಎಂದು ಬಾಲಬೋಧಿನೀಕಾರರಾದ ಶ್ರೀಮದಾಚಾರ್ಯರು ಹೇಳಿದ್ದಾರೆ.

ಬಲಭದ್ರದ್ವಾರಾ ಭಗವಾನೇವ ತಾಸಾಂ ಮನೋರಥಂ ಪೂರಿತವಾನ್
ಇತಿ ನ ಕಶ್ಚಿದ್ದೋಷ ಇತ್ಯಾಹುಃ ಶ್ರೀಮದಾಚಾರ್ಯಾಃ

ಕರ್ಣಾನಂದಕರವಾಗಿ ಗಾನಮಾಡುತ್ತಿದ್ದರು. ಮಧುಪಾನದಿಂದ ಮತ್ತನಾಗಿದ್ದ ಬಲರಾಮನು ಮದದಿಂದ ತಿರುಗಿಸಲ್ಪಟ್ಟ ಕಣ್ಣುಗಳುಳ್ಳವನಾಗಿ ಗೋಪಿಕಾಸ್ತ್ರೀಯರೊಡನೆ ಯಮುನಾನದಿಯ ಉಪವನದಲ್ಲಿ ಸಂಚರಿಸುತ್ತಿದ್ದನು. ಮತ್ತನಾಗಿದ್ದ ಆ ಬಲರಾಮನು ಪುಷ್ಪಮಾಲೆಯನ್ನು ಧರಿಸಿದ್ದನು. ಅವನ ಒಂದು ಕಿವಿಯಲ್ಲಿ ಮಾತ್ರವೇ ಕುಂಡಲವಿದ್ದಿತು. ವೈಜಯಂತೀ ಮಾಲೆಯಿಂದಲೂ ಆತನು ಭೂಷಿತನಾಗಿದ್ದನು. ಹಿಮದ ಹನಿಗಳಂತೆ ಕಾಣುತ್ತಿದ್ದ ಬೆವರಿನಿಂದ ವಿಭೂಷಿತನಾಗಿದ್ದ ಬಲರಾಮನು ಮಂದಹಾಸದಿಂದ ಕೂಡಿದ ಮುಖಕಮಲದಿಂದ ಅತ್ಯಂತಶೋಭಾಯಮಾನನಾಗಿ ಕಾಣುತ್ತಿದ್ದನು.

ಆ ಸಮಯದಲ್ಲಿ ಸರ್ವೇಶ್ವರನಾದ ಬಲರಾಮನು ಯಮುನೆಯನ್ನು ಜಲಕ್ರೀಡೆಗಾಗಿ ಆಹ್ವಾನಿಸಿದನು. ಬಲರಾಮನು ಮಧುಪಾನದಿಂದ ಮತ್ತನಾಗಿರುವನೆಂದು ಭಾವಿಸಿ ಯಮುನಾದೇವಿಯು ಅವನ ಆಹ್ವಾನಕ್ಕೆ ಲಕ್ಷ್ಯವನ್ನೇ ಕೊಡಲಿಲ್ಲ. ತಾನು ಕರೆದರೂ ಬಾರದಿದ್ದ ಯಮುನೆಯ ಮೇಲೆ ಕೋಪಗೊಂಡು ಬಲರಾಮನು ಹಲಾಯುಧದ ತುದಿಯಿಂದ ಅವಳನ್ನು ಸೆಳೆದುಕೊಂಡನು.

ಪಾಪೇ ತ್ವಂ ಮಾಮವಜ್ಞಾಯ ಯನ್ನಾಯಾಸಿ ಮಯಾಹುತಾ ।
ನೇಷ್ಯೇ ತ್ವಾಂ ಲಾಙ್ಗಲಾಗ್ರೇಣ ಶತಧಾ ಕಾಮಚಾರಿಣೀಮ್ ॥೨೮॥

"ಪಾಪಿಷ್ಠಳೇ! ನನ್ನಿಂದ ಜಲಕ್ರೀಡೆಗಾಗಿ ಆಹ್ವಾನಿಸಲ್ಪಟ್ಟರೂ ನನ್ನ ಆಹ್ವಾನಕ್ಕೆ ಲಕ್ಷ್ಯವನ್ನೇ ಕೊಡದೆ ನನ್ನ ಜೊತೆಯಲ್ಲಿ ಜಲಕ್ರೀಡೆಯಾಡಲು ಬರಲಿಲ್ಲ. ಸ್ವೇಚ್ಛಾಚಾರಿಣಿಯಾದ ನಿನ್ನನ್ನೀಗಲೇ ಈ ನನ್ನ ಹಲಾಯುಧದ ಅಗ್ರಭಾಗದಿಂದ ನುಚ್ಚುನೂರಾಗಿ ಕತ್ತರಿಸಿಬಿಡುತ್ತೇನೆ."

ಪರೀಕ್ಷಿತಮಹಾರಾಜ! ಹೀಗೆ ಬಲರಾಮನಿಂದ ಭಯಗೊಳಿಸಲ್ಪಟ್ಟ ಯಮುನಾದೇವಿಯು ಭಯದಿಂದ ನಡುಗಿಹೋದಳು. ಬಲರಾಮನ ಕಾಲುಗಳಲ್ಲಿ ಬಿದ್ದು ದೈನ್ಯದಿಂದ ಹೇಳಿದಳು :

ರಾಮ ರಾಮ ಮಹಾಬಾಹೋ ನ ಜಾನೇ ತವ ವಿಕ್ರಮಮ್ ।
ಯಸ್ಯೈಕಾಂಶೇನ ವಿಧೃತಾ ಜಗತೀ ಜಗತಃ ಪತೇ ॥೨೬॥

ರಾಮ! ಬಲರಾಮ! ಮಹಾಬಾಹುವೇ! ಜಗತ್ಪತಿಯೇ! ನಿಶ್ಚಯವಾಗಿಯೂ ಇದುವರೆಗೂ ನಿನ್ನ ಪರಾಕ್ರಮವೆಷ್ಟೆಂಬುದು ನನಗೆ ತಿಳಿದಿರಲಿಲ್ಲ. ಈಗ ನನಗೆ ಅದರ ಅರಿವಾಗಿದೆ. ನಿನ್ನ ಒಂದು ಅಂಶನಾಗಿರುವ ಶೇಷನು ಇಡೀ ಜಗತ್ತನ್ನೇ ಧರಿಸಿದ್ದಾನೆಂದಮೇಲೆ ಪೂರ್ಣಾಂಶನಾದ ನಿನ್ನ ಸಾಮರ್ಥ್ಯಕ್ಕೆ ಮಿತಿಯುಂಟೇ? ಅಪರಿಮಿತಪರಾಕ್ರಮನು ನೀನು.

ಪರಂ ಭಾವಂ ಭಗವತೋ ಭಗವನ್ ಮಾಮಜಾನತೀಮ್ ।
ಮೋಕ್ತುಮರ್ಹಸಿ ವಿಶ್ವಾತ್ಮನ್ ಪ್ರಪನ್ನಾಂ ಭಕ್ತವತ್ಸಲ ॥೨೭॥

ಭಗವಂತ! ನೀನು ಶ್ರೇಷ್ಠವಾದ ಬಲೈಶ್ವರ್ಯಗಳಿಂದ ಸಂಪನ್ನನಾಗಿರುವೆ. ವಾಸ್ತವಿಕವಾದ ನಿನ್ನ ದಿವ್ಯಸ್ವರೂಪವನ್ನು ತಿಳಿಯದ ಕಾರಣ ನಾನು ಅಪರಾಧವೆಸಗಿದೆನು. ಭಕ್ತವತ್ಸಲನೇ! ನಾನು ನಿನಗೆ ಶರಣಾಗತಳಾಗಿದ್ದೇನೆ. ವಿಶ್ವಾತ್ಮನೇ! ನನ್ನ ಅಪರಾಧವನ್ನು ಕ್ಷಮಿಸಿ ನನ್ನನ್ನು ಬಿಟ್ಟುಬಿಡು."

ಪರೀಕ್ಷಿತಮಹಾರಾಜ! ಹೀಗೆ ಯಾಚಿಸಿದ ಯಮುನಾದೇವಿಯನ್ನು ಭಗವಾನ್ ಬಲರಾಮನು ಬಿಟ್ಟುಬಿಟ್ಟನು. ಸಲಗವು ಹೆಣ್ಣಾನೆಯೊಡನೆ ಸರೋವರದಲ್ಲಿ ಆಟವಾಡುವಂತೆ ಬಲರಾಮನು ಗೋಪಿಕಾಸ್ತ್ರೀಯರೊಡನೆ ಯಮುನಾನದಿಯ ನೀರಿನಲ್ಲಿ ಕ್ರೀಡಿಸಿದನು. ಹೀಗೆ ಯಥೇಚ್ಛವಾಗಿ ಬಹಳ ಹೊತ್ತಿನವರೆಗೂ ಜಲಕ್ರೀಡೆಯಾಡಿ ಬಲರಾಮನು ನೀರಿನಿಂದ ಹೊರಬಂದನಂತರ ವರುಣನಿಂದ ಕಳುಹಿಸಲ್ಪಟ್ಟ ಕಾಂತೀದೇವಿಯು ಅವನಿಗೆ ಉಡಲು ಮತ್ತು ಹೊದೆಯಲು ಎರಡು ನೀಲಾಂಬರಗಳನ್ನೂ, ತೊಟ್ಟುಕೊಳ್ಳಲು ಬಹುಮೂಲ್ಯವಾದ ಆಭರಣಗಳನ್ನೂ, ಧರಿಸಲು ಸುಂದರವಾದ ಚಿನ್ನದ ಹಾರವನ್ನೂ ಸಮರ್ಪಿಸಿದಳು. ಬಲರಾಮನು ಕಾಂತೀದೇವಿಯು ಸಮರ್ಪಿಸಿದ ಎರಡು ನೀಲಾಂಬರಗಳನ್ನುಟ್ಟು, ಸುವರ್ಣಮಯವಾದ ಹಾರವನ್ನು ಕುತ್ತಿಗೆಯಲ್ಲಿ ಧರಿಸಿ, ಅಂಗರಾಗವನ್ನು ಪೂಸಿಕೊಂಡು ಸಮಲಂಕೃತನಾಗಿ ಇಂದ್ರನ ಐರಾವತದಂತೆಯೇ ಪ್ರಕಾಶಿಸಿದನು.

ಪರೀಕ್ಷಿತಮಹಾರಾಜ! ಅನಂತವೀರ್ಯನಾದ ಬಲರಾಮನ ವೀರ್ಯಪರಾಕ್ರಮವನ್ನು ಸೂಚಿಸುತ್ತಿದೆಯೋ ಎಂಬಂತೆ ಈಗಲೂ ಯಮುನಾನದಿಯು ನೇಗಿಲಿನಿಂದ ಸೆಳೆಯಲ್ಪಟ್ಟ ಮಾರ್ಗದಿಂದ ಕೂಡಿ ಹರಿಯು

ತ್ತಿದೆ. ಗೋಕುಲದ ಸ್ತ್ರೀಯರು ತಮ್ಮ ಹಾವ-ಭಾವಗಳಿಂದಲೂ, ಬೆಡಗು-ಬಿನ್ನಾಣಗಳಿಂದಲೂ ಬಲರಾಮನ ಮನಸ್ಸನ್ನು ಸಂಪೂರ್ಣವಾಗಿ ಅಪಹರಿಸಿ ಬಿಟ್ಟಿದ್ದರು. ಅವನಿಗೆ ಹಲವಾರು ರಾತ್ರಿಗಳು ಕಳೆದುಹೋದುದೇ ತಿಳಿಯಲಿಲ್ಲ. ಹಲವಾರು ರಾತ್ರಿಗಳನ್ನು ಒಂದೇ ರಾತ್ರಿಯು ಕಳೆಯಿತೆಂಬ ಭಾವನೆಯಿಂದ ಗೋಪಿಕಾಸ್ತ್ರೀಯರೊಡನೆ ವಿಹರಿಸುತ್ತಿದ್ದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ೬೫ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೬೬ನೆಯ ಅಧ್ಯಾಯ

ಶ್ರೀಕೃಷ್ಣನು ಪೌಂಡ್ರಕನೇ ಮೊದಲಾದವರನ್ನು ಸಂಹರಿಸಿದುದು

ಶ್ರೀಶುಕಮುನಿಗಳು ಹೇಳುತ್ತಾರೆ :

ನನ್ದವ್ರಜಂ ಗತೇ ರಾಮೇ ಕರೂಷಾಧಿಪತಿರ್ನೃಪ ।
ವಾಸುದೇವೋಽಹಮಿತ್ಯಜ್ಞೋ ದೂತಂ ಕೃಷ್ಣಾಯ ಪ್ರಾಹಿಣೋತ್ ॥

ಪರೀಕ್ಷಿತಮಹಾರಾಜ! ಬಲರಾಮನು ನಂದಗೋಕುಲಕ್ಕೆ ಹೋಗಿದ್ದ ಸಮಯದಲ್ಲಿ ಇತ್ತಲಾಗಿ ಕರೂಷದೇಶಕ್ಕೆ ಅಧಿಪತಿಯಾಗಿದ್ದ ಮೂರ್ಖನಾದ ಪೌಂಡ್ರಕನೆಂಬ ರಾಜನು ತಾನೇ ವಾಸುದೇವನೆಂದು ಹೇಳಿಕೊಂಡು ಶ್ರೀಕೃಷ್ಣನ ಬಳಿಗೆ ದೂತನೊಬ್ಬನನ್ನು ಕಳುಹಿಸಿಕೊಟ್ಟನು.

ಅವನ ಮನಸ್ಸಿನ ಇಂಗಿತವನ್ನು ತಿಳಿದಿದ್ದ ಆ ದೇಶದ ಮೂರ್ಖ ಜನರು ಅವನನ್ನು ಸಂತೋಷಗೊಳಿಸುವ ಸಲುವಾಗಿ ಅವನನ್ನು ಕಂಡೊಡನೆಯೇ ಹೀಗೆ ಹೇಳುತ್ತಿದ್ದರು :

ತ್ವಂ ವಾಸುದೇವೋ ಭಗವಾನವತೀರ್ಣೋ ಜಗತ್ಪತಿಃ ।

'ಭಗವಂತನಾದ ವಾಸುದೇವನು ನೀನೇ ಆಗಿರುವೆ. ಜಗತ್ತಿನ ರಕ್ಷಣೆಗಾಗಿ ನೀನಿಲ್ಲಿ ಅವತರಿಸಿರುವೆ.'

ಮೂರ್ಖರ ಇಂತಹ ಹೊಗಳಿಕೆಯ ಮಾತುಗಳನ್ನು ಕೇಳಿ ಸಂತೋಷ

ದಿಂದ ಉಬ್ಬಿಹೋದ ಪೌಂಡ್ರಕನು ತಾನೇ ಅಚ್ಯುತನೆಂದು ಭಾವಿಸಿ ಕೊಂಡುಬಿಟ್ಟನು. ಹತ್ತಾರು ಮಕ್ಕಳು ಸೇರಿ ಆಟವಾಡುವಾಗ ಅವರಲ್ಲಿ ಒಬ್ಬನನ್ನು ರಾಜನನ್ನಾಗಿ ಮಾಡಿ ತಾತ್ಕಾಲಿಕವಾಗಿ ಅವನನ್ನು ರಾಜನೆಂದೇ ಭಾವಿಸಿ ವ್ಯವಹರಿಸುವಂತೆ-ಪೌಂಡ್ರಕನ ಪ್ರಜೆಗಳೂ ಆಟಕ್ಕಾಗಿ ತಮ್ಮ ರಾಜನನ್ನು ವಾಸುದೇವನೆಂದು ಕರೆಯುತ್ತಿದ್ದರು. ಇದನ್ನು ಅರ್ಥಮಾಡಿ ಕೊಳ್ಳಲಾಗದ ಆ ಮೂರ್ಖರಾಜನು ಅಚಿಂತ್ಯಗತಿಯಾದ ಭಗವಾನ್ ಶ್ರೀಕೃಷ್ಣನ ಲೀಲೆಯನ್ನಾಗಲೀ, ರಹಸ್ಯವನ್ನಾಗಲೀ, ಮಹಿಮೆಯನ್ನಾಗಲೀ ತಿಳಿಯದೆ ಶ್ರೀಕೃಷ್ಣನ ಬಳಿಗೆ ದೂತನೊಬ್ಬನನ್ನು ಕಳುಹಿಸಿಕೊಟ್ಟನು. ದೂತನಾದರೋ ರಾಜಾಜ್ಞೆಯಂತೆ ದ್ವಾರಕೆಗೆ ಪ್ರಯಾಣಮಾಡಿ, ಅನುಮತಿಯನ್ನು ಪಡೆದು ರಾಜಸಭೆಯನ್ನು ಪ್ರವೇಶಿಸಿ ಅಲ್ಲಿ ಸುವರ್ಣ ಮಯವಾದ ಪೀಠದಲ್ಲಿ ಕುಳಿತಿದ್ದ ಶ್ರೀಕೃಷ್ಣನಿಗೆ ಪೌಂಡ್ರಕನ ಸಂದೇಶವನ್ನು ಒಪ್ಪಿಸಿದನು. ಮೂರ್ಖರಾಜನ ಆ ಸಂದೇಶವು ಹೀಗಿದ್ದಿತು :

ವಾಸುದೇವೋಽವತೀರ್ಣೋಽಹಮೇಕ ಏವ ನ ಚಾಪರಃ ।
ಭೂತಾನಾಮನುಕಮ್ಪಾರ್ಥಂ ತ್ವಂ ತು ಮಿಥ್ಯಾಭಿಧಾಂ ತ್ಯಜ ॥೫॥

ಯಾನಿ ತ್ವಮಸ್ಮಚ್ಚಿಹ್ನಾನಿ ಮೌಢ್ಯಾದ್ಬಿಭರ್ಷಿ ಸಾತ್ವತ ।
ತ್ಯಕ್ತ್ವೈಹಿ ಮಾಂ ತ್ವಂ ಶರಣಂ ನೋ ಚೇದ್ದೇಹಿ ಮಮಾಹವಮ್ ॥೬॥

"ವಾಸುದೇವನೆಂಬುವನು ನಾನೊಬ್ಬನೇ ಆಗಿದ್ದೇನೆ. ಬೇರೆ ಯಾವನೂ ವಾಸುದೇವನಲ್ಲ. ಪ್ರಾಣಿಗಳ ಮೇಲಿನ ಅನುಕಂಪದಿಂದ ನಾನು ಅವತರಿಸಿದ್ದೇನೆ. ನೀನು ಕೂಡ ಸುಳ್ಳು-ಸುಳ್ಳಾಗಿ ವಾಸುದೇವನೆಂಬ ಹೆಸರನ್ನು ಇಟ್ಟುಕೊಂಡಿರುವೆ. ಆ ಹೆಸರನ್ನು ಈ ಕೂಡಲೇ ತೊರೆದುಬಿಡು. ಇನ್ನು ಮೇಲೆ ನೀನು ವಾಸುದೇವನೆಂಬ ಹೆಸರಿನಿಂದ ಕರೆಯಲ್ಪಡಬಾರದು. ಇಷ್ಟು ಮಾತ್ರವಲ್ಲ. ನೀನು ನನ್ನದೇ ಆದ ಶಂಖ-ಚಕ್ರವೇ ಮೊದಲಾದ ಚಿಹ್ನೆಗಳನ್ನೂ ಈ ಕೂಡಲೇ ತ್ಯಜಿಸಬೇಕು. ಇದುವರೆಗೂ ನೀನು ಮಾಡಿರುವ ಅಪರಾಧಕ್ಕಾಗಿ ನನಗೆ ಶರಣಾಗತನಾಗಬೇಕು. ನೀನು ನನ್ನ ಈ ಆಜ್ಞೆಯಂತೆ ನಡೆದುಕೊಳ್ಳದಿದ್ದರೆ ಈ ಕೂಡಲೇ ನನ್ನೊಡನೆ ಯುದ್ಧಕ್ಕೆ ಸಿದ್ಧನಾಗಬೇಕು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಅಲ್ಪಮತಿಯಾದ ಪೌಂಡ್ರಕನ ಆತ್ಮಪ್ರಶಂಸೆಯ ಈ ಸಂದೇಶವನ್ನು ಕೇಳಿ ಸಭೆಯಲ್ಲಿದ್ದ ಉಗ್ರಸೇನನೇ ಮುಂತಾ ದವರು ಕೇಕೆಹಾಕಿಕೊಂಡು ಗಟ್ಟಿಯಾಗಿ ನಗತೊಡಗಿದರು. ಸಭ್ಯರೆಲ್ಲರೂ ನಕ್ಕು-ನಕ್ಕು ಆಯಾಸಗೊಂಡನಂತರ ಭಗವಾನ್ ಶ್ರೀಕೃಷ್ಣನು ಪೌಂಡ್ರಕನ ದೂತನೊಡನೆ ಮೂರ್ಖರಾಜನಿಗೆ ಮರುಸಂದೇಶವನ್ನು ಕಳುಹಿಸಿದನು :

ಉತ್ಸ್ರಕ್ಷ್ಯೇ ಮೂಢ ಚಿಹ್ನಾನಿ ಯೈಸ್ತ್ವಮೇವಂ ವಿಕತ್ಥಸೇ ॥೮॥

ಮುಖಂ ತದಪಿಧಾಯಾಜ್ಞ ಕಙ್ಕಗೃಧ್ರವಟೈರ್ವೃತಃ ।
ಶಯಿಷ್ಯಸೇ ಹತಸ್ತತ್ರ ಭವಿತಾ ಶರಣಂ ಶುನಾಮ್ ॥೯॥

“ಮೂರ್ಖನೇ! ನಾನು ನನ್ನ ಚಿಹ್ನೆಗಳನ್ನು ಬಿಡುತ್ತೇನೆ. ನಿನ್ನ ಮೇಲೆ ಬಿಡುತ್ತೇನೆ ಮತ್ತು ನೀನು ಯಾರ ಪ್ರೇರಣೆಯಿಂದ ಹೀಗೆ ಆತ್ಮಪ್ರಶಂಸೆ ಮಾಡಿಕೊಳ್ಳುತ್ತಿರುವೆಯೋ ಅವರ ಮೇಲೆ ನನ್ನ ಚಿಹ್ನೆಯಾದ ಚಕ್ರಾಯುಧ ವನ್ನು ಪ್ರಯೋಗಿಸುತ್ತೇನೆ.

ಅಜ್ಞಾನಿಯೇ! ಆ ಸಮಯದಲ್ಲಿ ನೀನು ನನ್ನಿಂದ ಹತನಾಗಿ ಮುಖವನ್ನು ಮುಚ್ಚಿಕೊಂಡು ನಿನ್ನನ್ನು ಕಿತ್ತುತಿನ್ನುವ ರಣಹದ್ದು-ಹದ್ದು ಮತ್ತು ವಟಪಕ್ಷಿಗಳಿಂದ ಸಮಾವೃತನಾಗಿ ರಣಾಂಗಣದಲ್ಲಿ ಮಲಗುವೆ. ನೀನು ನನಗೆ ರಕ್ಷಕನಾಗುವುದಂತಿರಲಿ ; ನಾಯಿಗಳಿಗಂತೂ ನೀನು ರಕ್ಷಕನಾಗುವುದು ನಿಜ. ನಿನ್ನ ಮಾಂಸವನ್ನು ತಿಂದು ನಾಯಿಗಳು ತಮ್ಮ ಹಸಿ ವನ್ನು ನೀಗಿಸಿಕೊಳ್ಳುತ್ತವೆ.”

ಪರೀಕ್ಷಿತ! ಭಗವಾನ್ ಶ್ರೀಕೃಷ್ಣನ ತಿರಸ್ಕಾರಪೂರ್ವಕವಾದ ಸಂದೇಶ ವನ್ನು ಹೊತ್ತು ಪೌಂಡ್ರಕನ ದೂತನು ತನ್ನ ದೇಶಕ್ಕೆ ತೆರಳಿದನು. ಅರಮನೆ ಯಲ್ಲಿ ರಾಜನನ್ನು ಸಂಧಿಸಿ ಶ್ರೀಕೃಷ್ಣನ ಸಂದೇಶವನ್ನು ಆತನಿಗೊಪ್ಪಿಸಿದನು. ಇತ್ತಲಾಗಿ ಶ್ರೀಕೃಷ್ಣನೂ ಕೂಡ ರಥದಲ್ಲಿ ಕುಳಿತು ಕಾಶಿಗೆ ಪ್ರಯಾಣ ಮಾಡಿದನು. ಆ ಸಮಯದಲ್ಲಿ ಕರೂಷಾಧಿಪತಿಯಾದ ಪೌಂಡ್ರಕನು ತನ್ನ ಮಿತ್ರನಾದ ಕಾಶೀರಾಜನ ಜೊತೆಯಲ್ಲಿದ್ದನು. ಮಹಾರಥನಾದ ಪೌಂಡ್ರ ಕನು ದೂತನ ಕಡೆಯಿಂದ ಶ್ರೀಕೃಷ್ಣನ ಅಭಿಪ್ರಾಯವನ್ನು ತಿಳಿದವನಾಗಿ


ಕಾಶಿಯತ್ತ ಕೃಷ್ಣನು ರಥದಲ್ಲಿ ಬರುತ್ತಿರುವನೆಂಬ ಸಮಾಚಾರವನ್ನೂ ತಿಳಿದು ಎರಡು ಅಕ್ಷೌಹಿಣೀಸೈನ್ಯಗಳನ್ನು ಜೊತೆಗೂಡಿಸಿ ಕಾಶೀನಗರದಿಂದ ಹೊರಹೊರಟನು. ಪೌಂಡ್ರಕನ ಮಿತ್ರನಾದ ಕಾಶೀರಾಜನು ಕೂಡ ತನ್ನ ಮಿತ್ರನಾದ ಪೌಂಡ್ರಕನಿಗೆ ಸಹಾಯಮಾಡಲು ಮೂರು ಅಕ್ಷೌಹಿಣೀಸೈನ್ಯ ದೊಡನೆ ಪೌಂಡ್ರಕನ ಸೈನ್ಯವನ್ನು ಹಿಂಬಾಲಿಸಿದನು. ರಥದಲ್ಲಿ ಕುಳಿತು ಕಾಶೀಪಟ್ಟಣಕ್ಕೆ ಬಂದ ಶ್ರೀಕೃಷ್ಣನು ಸೈನ್ಯಸಮೇತನಾಗಿ ತನ್ನನ್ನು ಎದುರಿ ಸಲು ಬರುತ್ತಿದ್ದ ಪೌಂಡ್ರಕನನ್ನು ನೋಡಿದನು. ಪೌಂಡ್ರಕನು ಕೂಡ ತನ್ನಂತೆಯೇ ಶಂಖ-ಚಕ್ರ-ಗದೆಗಳನ್ನೂ ಶಾರ್ಙ್ಗಧನುಸ್ಸನ್ನೂ ಧರಿಸಿದ್ದನು. ಅವನ ವಕ್ಷಃಸ್ಥಳದಲ್ಲಿಯೂ ಶ್ರೀವತ್ಸದ ಚಿಹ್ನೆಯಿದ್ದಿತು. ಆತನೂ ಕೌಸ್ತುಭ ಮಣಿಯನ್ನು ಧರಿಸಿದ್ದನು. ಶ್ರೀಕೃಷ್ಣನಂತೆ ವನಮಾಲೆಯಿಂದಲೂ ವಿಭೂ ಷಿತನಾಗಿದ್ದನು. ರೇಷ್ಮೆಯ ಪೀತಾಂಬರವನ್ನೇ ಉಟ್ಟಿದ್ದನು. ಅವನ ರಥದ ಧ್ವಜದಲ್ಲಿಯೂ ಗರುಡನ ಚಿಹ್ನೆಯೇ ಇದ್ದಿತು. ಅವನ ತಲೆಯ ಮೇಲೆ ಅಮೂಲ್ಯವಾದ ಕಿರೀಟವು ರಾರಾಜಿಸುತ್ತಿದ್ದಿತು. ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳು ಜಗ-ಜಗಿಸುತ್ತಿದ್ದುವು. ರಂಗಮಂಟಪಕ್ಕೆ ವೇಷವನ್ನು ಧರಿಸಿ ಬಂದ ನಟನಂತೆ–ತನ್ನಂತೆಯೇ ಕೃತ್ರಿಮವೇಷವನ್ನು ಧರಿಸಿ ಯುದ್ಧ ಮಾಡಲು ಬಂದಿದ್ದ ಪೌಂಡ್ರಕನನ್ನು ನೋಡಿ ಶ್ರೀಹರಿಯು ಗಹ-ಗಹಿಸಿ ನಕ್ಕನು. ಅಷ್ಟರಲ್ಲಿಯೇ ಶತ್ರುಪಕ್ಷದ ಯೋಧರು ಶ್ರೀಕೃಷ್ಣನನ್ನು ತ್ರಿಶೂಲ, ಗದೆ, ಮುದ್ಗರ, ಶಕ್ತಿ, ಋಷ್ಟಿ, ಪ್ರಾಸ, ತೋಮರ, ಕತ್ತಿ, ಪಟ್ಟಿಶ, ಬಾಣ–ಇವೇ ಮುಂತಾದ ಶಸ್ತ್ರಾಸ್ತ್ರಗಳಿಂದ ಪ್ರಹರಿಸಿದರು. ಯುಗಾಂತ್ಯದಲ್ಲಿ ಪ್ರಳಯಾಗ್ನಿಯು ಪ್ರಜೆಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿಯೇ ಸುಟ್ಟು ಹಾಕುವಂತೆ ಶ್ರೀಕೃಷ್ಣನು ಕೂಡ ಗದೆ, ಕತ್ತಿ, ಚಕ್ರ, ಬಾಣ–ಇವೇ ಮುಂತಾದ ಆಯುಧಗಳಿಂದ ಪೌಂಡ್ರಕನ ಮತ್ತು ಕಾಶೀರಾಜನ ರಥಾಶ್ವ-ಗಜ-ಪದಾತಿಗಳಿಂದ ಕೂಡಿದ ಚತುರಂಗಸೈನ್ಯವನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡಿಬಿಟ್ಟನು. ಆ ರಣಾಂಗಣವು ಭಗವಂತನ ಚಕ್ರಾಯುಧದಿಂದ ಕತ್ತರಿಸಲ್ಪಟ್ಟ ರಥಾಶ್ವ-ಗಜ-ಪದಾತಿಗಳಿಂದಲೂ, ಹೇಸರಕತ್ತೆಗಳಿಂದಲೂ, ಒಂಟೆಗಳಿಂದಲೂ ತುಂಬಿಹೋಗಿದ್ದು ಭೂತನಾಥನಾದ ಶಂಕರನ ಭಯಂಕರವಾದ ಆಟದ ಮೈದಾನದಂತೆಯೇ ಕಾಣುತ್ತಿದ್ದಿತು. ಅದನ್ನು

ನೋಡುತ್ತಿದ್ದಂತೆ ಶೂರರಾದ ಸೈನಿಕರ ಉತ್ಸಾಹವೂ ಆನಂದವೂ ಹೆಚ್ಚು ತ್ತಿದ್ದಿತು.

ಬಳಿಕ ಭಗವಾನ್ ಶ್ರೀಕೃಷ್ಣನು ಪೌಂಡ್ರಕನಿಗೆ ಹೇಳಿದನು :

"ಎಲವೋ ಪೌಂಡ್ರಕ! ನೀನು ನಿನ್ನ ದೂತನ ಮೂಲಕವಾಗಿ ನನ್ನಲ್ಲಿರುವ ಚಿಹ್ನೆಗಳೆಲ್ಲವನ್ನೂ ಬಿಟ್ಟುಬಿಡಬೇಕೆಂದು ಹೇಳಿದ್ದೆಯಲ್ಲವೇ? ನೀನು ಹೇಳಿದ್ದಂತೆಯೇ ಈಗ ನಾನು ನನ್ನ ಚಿಹ್ನೆಗಳಾದ ಗದಾ-ಚಕ್ರಗಳನ್ನು ನಿನ್ನ ಮೇಲೆ ಬಿಡುತ್ತೇನೆ. ನೀನು ನಿಶ್ಚಯವಾಗಿಯೂ ವಸುದೇವನ ಮಗನಲ್ಲ. ಆದರೂ ಸುಳ್ಳು-ಸುಳ್ಳಾಗಿಯೇ ನನ್ನ ಹೆಸರನ್ನು ಇಟ್ಟುಕೊಂಡಿರುವೆ. ಮೂರ್ಖನೇ! ಆ ನನ್ನ ಹೆಸರನ್ನು ನೀನು ಬಿಡುವಂತೆ ಮಾಡುತ್ತೇನೆ. ಇನ್ನು ಶರಣಾಗತನಾಗುವ ವಿಷಯ. ನನಗೇನಾದರೂ ನಿನ್ನೊಡನೆ ಯುದ್ಧಮಾಡ ಲಾಗದಿದ್ದರೆ ಆಗ ನೀನು ಹೇಳಿರುವಂತೆ ನಿನಗೆ ಶರಣಾಗುತ್ತೇನೆ."

ಪರೀಕ್ಷಿತನೇ! ಶ್ರೀಕೃಷ್ಣನು ಹೀಗೆ ಪೌಂಡ್ರಕನನ್ನು ನಿಂದಿಸುತ್ತಾ ನಿಶಿತವಾದ ಬಾಣಗಳಿಂದ ಪೌಂಡ್ರಕನನ್ನು ಕ್ಷಣಮಾತ್ರದಲ್ಲಿ ರಥಹೀನನನ್ನಾಗಿ ಮಾಡಿಬಿಟ್ಟನು. ಮತ್ತೊಂದು ಕ್ಷಣದಲ್ಲಿ–ಇಂದ್ರನು ತನ್ನ ವಜ್ರಾಯುಧ



ದಿಂದ ಪರ್ವತದ ರೆಕ್ಕೆಗಳನ್ನು ಕತ್ತರಿಸಿದಂತೆ ಭಗವಾನ್ ಶ್ರೀಕೃಷ್ಣನು ತನ್ನ ಅಮೋಘವಾದ ಸುದರ್ಶನಚಕ್ರದಿಂದ ಪೌಂಡ್ರಕನ ತಲೆಯನ್ನು ಕತ್ತರಿಸಿ ದನು. ಅದೇ ರೀತಿಯಲ್ಲಿ ಶ್ರೀಕೃಷ್ಣನು–ಬಿರುಗಾಳಿಯು ಕಮಲದ ಕಾಂಡ

ವನ್ನು ಹೂವಿನ ಸಮೇತವಾಗಿ ಕೆಳಕ್ಕೆ ಬೀಳಿಸುವಂತೆ ನಿಶಿತವಾದ ಬಾಣಗಳಿಂದ ಪೌಂಡ್ರಕನ ಮಿತ್ರನಾದ ಕಾಶೀರಾಜನ ತಲೆಯನ್ನೂ ಕೆಳಕ್ಕೆ ಬೀಳಿಸಿದನು. ಹೀಗೆ ಭಗವಂತನಾದ ಶ್ರೀಕೃಷ್ಣನು, ತನ್ನನ್ನು ಕಂಡು ಹೊಟ್ಟೆಕಿಚ್ಚುಪಡುತ್ತಿದ್ದ ಪೌಂಡ್ರಕನನ್ನೂ ಮತ್ತು ಅವನ ಮಿತ್ರನಾದ ಕಾಶೀರಾಜನನ್ನೂ ಸಂಹರಿಸಿ ದ್ವಾರಕೆಯನ್ನು ಪ್ರವೇಶಿಸಿದನು. ಆಕಾಶದಲ್ಲಿ ಸಿದ್ಧರು ಶ್ರೀಕೃಷ್ಣನ ಕಥಾಮೃತವನ್ನು ಕರ್ಣಾನಂದಕರವಾಗಿ ಹಾಡು ತ್ತಿದ್ದರು.

ಪರೀಕ್ಷಿತ! ಪೌಂಡ್ರಕನು ಶ್ರೀಕೃಷ್ಣನ ವಿಷಯದಲ್ಲಿ ಮಾತ್ಸರ್ಯವುಳ್ಳವನಾಗಿದ್ದರೂ ಅವನಿಗೆ ಭಗವಂತನ ಸಾರೂಪ್ಯವೇ ಪ್ರಾಪ್ತವಾಯಿತು. ಅಸೂಯೆಯಿಂದಲಾದರೂ ಪೌಂಡ್ರಕನು ಶ್ರೀಹರಿಯನ್ನು ಸದಾಕಾಲದಲ್ಲಿಯೂ ಧ್ಯಾನಮಾಡುತ್ತಿದ್ದುದರಿಂದ ಅವನು ಸಮಸ್ತಬಂಧನಗಳಿಂದಲೂ ಮುಕ್ತನಾಗಿದ್ದನು. ಭಗವಂತನ ವೇಷವನ್ನೇ ಯಾವಾಗಲೂ ಹಾಕಿಕೊಂಡು ಶ್ರೀಕೃಷ್ಣನನ್ನು ಅವನು ಸ್ಮರಿಸುತ್ತಿದ್ದುದರಿಂದ ಆತನಿಗೆ ಸಾರೂಪ್ಯರೂಪವಾದ ಕೈವಲ್ಯವು ಲಭಿಸಿತು.

ಕಾಶಿಯಲ್ಲಿದ್ದ ಅರಮನೆಯ ಜನರು ಪ್ರಧಾನದ್ವಾರದಲ್ಲಿ ಕುಂಡಲಗಳಿಂದ ಸಮಲಂಕೃತವಾಗಿದ್ದ ರುಂಡವು ಬಿದ್ದಿರುವುದನ್ನು ನೋಡಿ **'ಕಿಮಿದಂ'**–'ಇದೇನಿದು' **'ಕಸ್ಯ ವಾ ವಕ್ತ್ರಂ'**–'ಇದು ಯಾರ ಮುಖವಾಗಿದೆ?'–ಎಂದು ಸಂದೇಹದಿಂದ ತರ್ಕಿಸತೊಡಗಿದರು. ಅದು ಕಾಶೀರಾಜನ ಶಿರಸ್ಸೆಂದು ತಿಳಿದನಂತರ ಅವನ ಪಟ್ಟಮಹಿಷಿಯರು, ಪುತ್ರರು, ಬಂಧುಗಳು ಮತ್ತು ಪೌರರು : "ಅಯ್ಯೋ! ನಾಥನೇ! ಎಂತಹ ಆಪತ್ತು ನಿನಗೆ ಸಂಭವಿಸಿತು? ನಿನ್ನನ್ನು ಕಳೆದುಕೊಂಡನಂತರ ನಾವೆಲ್ಲರೂ ಹತರಾದಂತೆಯೇ ಸರಿ. ನಮಗಿನ್ನು ಗತಿಯಾರು?"–ಮುಂತಾಗಿ ಹೇಳಿಕೊಂಡು ಗೋಳಾಡಿದರು. ಕಾಶೀರಾಜನಿಗೆ ಸುದಕ್ಷಿಣನೆಂಬ ಮಗನಿದ್ದನು. ಅವನು ತಂದೆಯ ಔರ್ಧ್ವದೈಹಿಕ ಕರ್ಮಗಳೆಲ್ಲವನ್ನೂ ಯಥಾವಿಧಿಯಾಗಿ ಮುಗಿಸಿ, ತನ್ನ ತಂದೆಯನ್ನು ಕೊಂದವನನ್ನು ಕೊಂದು ಪಿತೃಋಣದಿಂದ ಮುಕ್ತನಾಗುವೆನೆಂದು ಮನದಲ್ಲಿ ನಿಶ್ಚಯಿಸಿ, ತನ್ನ ಪುರೋಹಿತನೊಡನೆ ಸಮಾಲೋಚಿಸಿ, ಅವನ ನಿರ್ದೇಶನವನ್ನನುಸರಿಸಿ ಆಶುತೋಷನಾದ ಶ್ರೀಶಂಕರನನ್ನು ಏಕಾಗ್ರವಾದ ಮನಸ್ಸಿ

ನಿಂದ ಅರ್ಚಿಸಿದನು. ಕಾಶೀನಗರದಲ್ಲಿ ಸುದಕ್ಷಿಣನ ಏಕಾಗ್ರವಾದ ಆರಾಧನೆಯಿಂದ ತೃಪ್ತನಾದ ಈಶ್ವರನು ಯಾವುದಾದರೂ ವರವನ್ನು ಕೇಳುವಂತೆ ಸುದಕ್ಷಿಣನಿಗೆ ಹೇಳಿದನು. ತನ್ನ ತಂದೆಯನ್ನು ಕೊಂದವನನ್ನು ಕೊಲ್ಲುವ ಉಪಾಯವನ್ನು ತಿಳಿಸಬೇಕೆಂದು ಸುದಕ್ಷಿಣನು ಈಶ್ವರನನ್ನು ಪ್ರಾರ್ಥಿಸಿಕೊಂಡನು.

ಭಕ್ತವತ್ಸಲನಾದ ಪರಮೇಶ್ವರನು ಉಪಾಯವನ್ನು ಸೂಚಿಸಿದನು :

ದಕ್ಷಿಣಾಗ್ನಿಂ ಪರಿಚರ ಬ್ರಾಹ್ಮಣೈಃ ಸಮಮೃತ್ವಿಜಮ್ ।
ಅಭಿಚಾರವಿಧಾನೇನ ಸ ಚಾಗ್ನಿಃ ಪ್ರಮಥೈರ್ವೃತಃ ॥೩೦॥

ಸಾಧಯಿಷ್ಯತಿ ಸಙ್ಕಲ್ಪಮಬ್ರಹ್ಮಣ್ಯೇ ಪ್ರಯೋಜಿತಃ ।

"ನೀನು ಬ್ರಾಹ್ಮಣರೊಡನೆ ಸೇರಿಕೊಂಡು ಯಜ್ಞಕ್ಕೆ ದೇವತಾಋತ್ವಿಗ್ಭೂತನಾದ ದಕ್ಷಿಣಾಗ್ನಿಯನ್ನು ಅಭಿಚಾರವಿಧಿಯಿಂದ ಆರಾಧಿಸು. ಹೀಗೆ ಆರಾಧಿಸುವುದರಿಂದ ದಕ್ಷಿಣಾಗ್ನಿಯು ಪ್ರಮಥಗಣಗಳೊಡನೆ ಪ್ರಾದುರ್ಭವಿಸುತ್ತದೆ. ಅನಂತರ ನೀನು ಹಾಗೆ ಆವಿರ್ಭವಿಸಿದ ಅಗ್ನಿಯನ್ನು ಅಬ್ರಹ್ಮಣ್ಯರ (ಬ್ರಾಹ್ಮಣರಿಗೆ ಭಕ್ತರಲ್ಲದವರ) ಮೇಲೆ ಪ್ರಯೋಗಿಸಿದ್ದೇ ಆದರೆ ನಿನ್ನ ಸಂಕಲ್ಪವು ಸಿದ್ಧಿಸುತ್ತದೆ."

ಭಗವಂತನಾದ ಶ್ರೀಶಂಕರನಿಂದ ಹೀಗೆ ಆಜ್ಞಪ್ತನಾದ ಸುದಕ್ಷಿಣನು ಅನುಷ್ಠಾನಕ್ಕೆ ಬೇಕಾದ ನಿಯಮಗಳನ್ನು ಗ್ರಹಣಮಾಡಿ, ವ್ರತನಿಷ್ಠನಾಗಿ ಶ್ರೀಕೃಷ್ಣನ ಮರಣವನ್ನುದ್ದೇಶಿಸಿ ಅಭಿಚಾರಿಕಕರ್ಮಗಳನ್ನು ಯಥಾವಿಧಿಯಾಗಿ ಪ್ರಾರಂಭಿಸಿದನು. ಆಭಿಚಾರಕ್ಕೆ ಸಂಬಂಧಿಸಿದಂತೆ ಎಲ್ಲ ಕರ್ಮಗಳೂ ಪೂರ್ಣಗೊಂಡನಂತರ ಯಜ್ಞಕುಂಡದಿಂದ ಭಯಂಕರವಾದ ಅಗ್ನಿಯು ಮೂರ್ತರೂಪವನ್ನು ತಾಳಿ ಹೊರಬಂದನು. ಅತಿಘೋರವಾಗಿ ಕಾಣುತ್ತಿದ್ದ ಆ ಮೂರ್ತಿಯ ತಲೆಗೂದಲು ಮತ್ತು ಗಡ್ಡ-ಮೀಸೆಗಳು ಕಾಯಿಸಿದ ತಾಮ್ರದಂತೆ ಕೆಂಪಾಗಿದ್ದುವು. ಕಣ್ಣುಗಳು ಬೆಂಕಿಯನ್ನು ಸುರಿಸುತ್ತಿವೆಯೋ ಎಂಬಂತೆ ಕಾಣುತ್ತಿದ್ದುವು. ಭಯಂಕರವಾದ ಕೋರೆದಾಡೆಗಳಿಂದಲೂ ದಂಡಗಳಂತಿದ್ದ ಹುಬ್ಬುಗಳಿಂದಲೂ ಕೂಡಿದ ಅವನ ಮುಖವು ಅತ್ಯುಗ್ರವಾಗಿ ಕಾಣುತ್ತಿದ್ದಿತು. ತನ್ನ ನಾಲಿಗೆಯಿಂದ ಕಟವಾಯಿಗಳನ್ನು ನೆಕ್ಕಿಕೊಳ್ಳುತ್ತಿ

ದ್ದನು. ಬೆತ್ತಲಾಗಿದ್ದನು. ತನ್ನ ಶರೀರದ ಸುತ್ತಲೂ ಹರಡಿಕೊಂಡಿದ್ದ ಜ್ವಾಲೆಗಳಿಂದ ಪ್ರಜ್ವಲಿಸುತ್ತಾ, ತ್ರಿಶೂಲವನ್ನು ತಿರುಗಿಸುತ್ತಾ, ತಾಳೇ ಮರದಷ್ಟು ಎತ್ತರವಾಗಿದ್ದ ಕಾಲುಗಳಿಂದ ಭೂಮಂಡಲವನ್ನೇ ನಡುಗಿಸುತ್ತಿರುವನೋ ಎಂಬಂತೆ ಹೆಜ್ಜೆಗಳನ್ನಿಡುತ್ತಾ ತನ್ನ ಜ್ವಾಲೆಗಳಿಂದ ಎಲ್ಲ ದಿಕ್ಕುಗಳನ್ನೂ ಸುಟ್ಟುಹಾಕುತ್ತಾ, ಭೂತ-ಪ್ರೇತ-ಪಿಶಾಚಿಗಳಿಂದ ಪರಿವೃತನಾಗಿ ದ್ವಾರಕೆಗೆ ಧಾವಿಸಿದನು. ಅಭಿಚಾರಾಗ್ನಿಯು ತಮ್ಮ ಪಟ್ಟಣದ ಬಳಿಗೆ ಬರುತ್ತಿರುವುದನ್ನು ನೋಡಿ ದ್ವಾರಕಾಪುರವಾಸಿಗಳು–ಕಾಡಿಗೆ ಕಿಚ್ಚುಬಿದ್ದಾಗ ಕಾಡಿನಲ್ಲಿರುವ ಮೃಗಗಳು ತರ-ತರನೆ ನಡುಗುವಂತೆ–ಭಯದಿಂದ ನಡುಗಿ ಹೋದರು. ಆ ಸಮಯದಲ್ಲಿ ಭಕ್ತವತ್ಸಲನಾದ ಶ್ರೀಕೃಷ್ಣನು ಸಭಾಭವನದಲ್ಲಿ ಪಗಡೆಯಾಡುತ್ತಿದ್ದನು. ಭಯಪೀಡಿತರಾಗಿದ್ದ ಪೌರರು ಅಲ್ಲಿಗೆ ಹೋಗಿ ಕೈಜೋಡಿಸಿ ಪ್ರಾರ್ಥಿಸಿದರು :

ತ್ರಾಹಿ ತ್ರಾಹಿ ತ್ರಿಲೋಕೇಶ ವಹ್ನೇಃ ಪ್ರದಹತಃ ಪುರಮ್ ॥೩೬॥

"ತ್ರಿಲೋಕೇಶನೇ! ಭಯಂಕರವಾದ ಅಗ್ನಿಯಿಂದ ದಹಿಸಲ್ಪಡುತ್ತಿ ರುವ ಈ ಪಟ್ಟಣವನ್ನು ಕಾಪಾಡು! ಕಾಪಾಡು!"

ಪರೀಕ್ಷಿತಮಹಾರಾಜ! ದ್ವಾರಕಾವಾಸಿಗಳು ದುಃಖಪಡುತ್ತಿರುವುದನ್ನೂ ತನ್ನ ಜನರು ಭಯದಿಂದ ನಡುಗುತ್ತಿರುವುದನ್ನೂ ಕರುಣಾಮಯ ನಾದ ಶ್ರೀಕೃಷ್ಣನು ನೋಡಿದನು. ಸರ್ವಲೋಕಶರಣ್ಯನಾದ ಭಗವಂತನು ಗಹ-ಗಹಿಸಿ ನಗುತ್ತಾ ಹೇಳಿದನು :

"ಭಯಪಡಬೇಡಿರಿ! ನಾನು ನಿಮ್ಮೆಲ್ಲರನ್ನೂ ರಕ್ಷಿಸುತ್ತೇನೆ." ಪರೀಕ್ಷಿತ! ಭಗವಂತನು ಸಮಸ್ತರ ಹೊರಗಿನ ಮತ್ತು ಒಳಗಿನ ವ್ಯಾಪಾರ ಗಳಿಗೂ ಸಾಕ್ಷೀಭೂತನಾಗಿರತಕ್ಕವನು. ಅವನಿಗೆ ತಿಳಿಯದ ವಿಷಯವೇ ಯಾವುದೂ ಇರುವುದಿಲ್ಲ. ಧಗ-ಧಗನೆ ಉರಿಯುತ್ತಾ ಬರುತ್ತಿರುವುದು ಮಾಹೇಶ್ವರೀ ಆಭಿಚಾರವೆಂಬುದು ಶ್ರೀಕೃಷ್ಣನಿಗೆ ತಿಳಿದುಹೋಯಿತು. ಅದನ್ನು ಧ್ವಂಸಮಾಡಲು ಪಕ್ಕದಲ್ಲಿಯೇ ಇದ್ದ ಸುದರ್ಶನಚಕ್ರಕ್ಕೆ ಆಜ್ಞೆಮಾಡಿ ದನು. ಭಗವಂತನಿಗೆ ಅತಿಪ್ರಿಯವಾಗಿದ್ದ ಆ ಸುದರ್ಶನಚಕ್ರವು ಕೋಟಿ-ಕೋಟಿ ಸೂರ್ಯರ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿದ್ದು

ಪ್ರಳಯಕಾಲದ ಅಗ್ನಿಯಂತೆ ಜಾಜ್ವಲ್ಯಮಾನವಾಗಿದ್ದಿತು. ತನ್ನ ದಿವ್ಯವಾದ ತೇಜಸ್ಸಿನಿಂದ ಆ ಮಹಾಚಕ್ರವು ಆಕಾಶವನ್ನೂ ದಿಕ್ಕುಗಳನ್ನೂ ಬೆಳಗುತ್ತಿದ್ದಿತು. ಭಗವಂತನ ಆಜ್ಞೆಯಾದೊಡನೆ ಆ ಸುದರ್ಶನಚಕ್ರವು ಮಾಹೇಶ್ವರೀ ಕೃತ್ಯೆಯನ್ನು ಕ್ಷಣಮಾತ್ರದಲ್ಲಿ ಹಿಂದಿರುಗುವಂತೆ ಮಾಡಿಬಿಟ್ಟಿತು. ರಥಾಂಗ



ಪಾಣಿಯ ಚಕ್ರಾಯುಧದ ತೇಜಸ್ಸಿನಿಂದ ಬಲವಾಗಿ ಹೊಡೆಯಲ್ಪಟ್ಟ ಕೃತ್ಯಾಗ್ನಿಯು ಮುಖಭಂಗವನ್ನು ಮಾಡಿಕೊಂಡು ವಾರಾಣಸಿಗೆ ಹಿಂದಿರುಗಿ ತನ್ನ ಆವಿರ್ಭಾವಕ್ಕೆ ಕಾರಣರಾಗಿದ್ದ ಋತ್ವಿಜರನ್ನೂ ಮತ್ತು ಸುದಕ್ಷಿಣ ನನ್ನೂ ಸುಟ್ಟುಹಾಕಿತು. ಹೀಗೆ ಅವರು ಇತರರ ವಿನಾಶಕ್ಕಾಗಿ ಕಲ್ಪಿಸಿದ್ದ ಕೃತ್ಯೆಯು ಅವರ ವಿನಾಶಕ್ಕೇ ಕಾರಣವಾಯಿತು. ಕೃತ್ಯೆಯನ್ನು ಹಿಂಬಾಲಿಸಿ ಸುದರ್ಶನಚಕ್ರವೂ ಕಾಶಿಗೆ ಹೋಯಿತು. ಆ ಸಮಯದಲ್ಲಿ ಕಾಶೀಪಟ್ಟಣದಲ್ಲಿದ್ದ ಉಪ್ಪರಿಗೆ ಮನೆಗಳನ್ನೂ, ಸಭಾಮಂದಿರಗಳನ್ನೂ, ಅಂಗಡಿ-ಮುಂಗಟ್ಟುಗಳನ್ನೂ, ಗೋಪುರಗಳನ್ನೂ ಆನೆಲಾಯ-ಕುದುರೆ ಲಾಯಗಳನ್ನೂ, ರಥಶಾಲೆಗಳನ್ನೂ, ಅನ್ನಶಾಲೆಗಳನ್ನೂ ಭಸ್ಮಮಾಡಿ, ಅತಿಕಷ್ಟವಾದ ಕಾರ್ಯಗಳನ್ನೂ ಅತಿಸುಲಭವಾಗಿ ಮಾಡುವ ಸಾಮರ್ಥ್ಯ ವನ್ನು ಹೊಂದಿದ್ದ ಭಗವಂತನಾದ ಶ್ರೀಕೃಷ್ಣನ ಬಳಿಗೇ ಪುನಃ ಬಂದು ಸೇರಿತು.

ಯ ಏತಚ್ಛ್ರಾವಯೇನ್ಮರ್ತ್ಯ ಉತ್ತಮಶ್ಲೋಕವಿಕ್ರಮಮ್ ।
ಸಮಾಹಿತೋ ವಾ ಶೃಣುಯಾತ್ ಸರ್ವಪಾಪೈಃ ಪ್ರಮುಚ್ಯತೇ ॥

ಯಾವ ಮನುಷ್ಯನು ಪುಣ್ಯಕೀರ್ತಿಯಾದ ಭಗವಾನ್ ಶ್ರೀಕೃಷ್ಣನ ಈ ಪರಾಕ್ರಮಪ್ರತಿಪಾದಕವಾದ ಚರಿತ್ರೆಯನ್ನು ಏಕಾಗ್ರಚಿತ್ತನಾಗಿ ಕೇಳುವನೋ ಅಥವಾ ಶ್ರೀಕೃಷ್ಣನ ಭಕ್ತರಿಗೆ ಹೇಳುವನೋ ಅಂತಹವನು ಸಮಸ್ತಪಾಪ ಗಳಿಂದಲೂ ಮುಕ್ತನಾಗುತ್ತಾನೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ೬೬ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೬೭ನೆಯ ಅಧ್ಯಾಯ

ಬಲರಾಮನಿಂದ ದ್ವಿವಿದನ ಸಂಹಾರ

ಪರೀಕ್ಷಿತಮಹಾರಾಜನು ಹೇಳುತ್ತಾನೆ :

ಭೂಯೋಽಹಂ ಶ್ರೋತುಮಿಚ್ಛಾಮಿ ರಾಮಸ್ಯಾದ್ಭುತಕರ್ಮಣಃ ।
ಅನನ್ತಸ್ಯಾಪ್ರಮೇಯಸ್ಯ ಯದನ್ಯತ್ಕೃತವಾನ್ ಪ್ರಭುಃ ॥೧॥

"ಪೂಜ್ಯರೇ! ರಾಮನು ಅದ್ಭುತವಾದ ಕಾರ್ಯಗಳನ್ನು ಮಾಡ ತಕ್ಕವನು. ಅನಂತನು. ಅಪ್ರಮೇಯನು. ಅಂತಹ ಬಲರಾಮಪ್ರಭುವು ಮಾಡಿದ ಇತರ ಸಾಹಸಕಾರ್ಯಗಳನ್ನೂ ಕೇಳುವ ಆಶಯದಿಂದಿರುತ್ತೇನೆ. ದಯಮಾಡಿ ಹೇಳಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

"ಪರೀಕ್ಷಿತಮಹಾರಾಜ! ದ್ವಿವಿದನೆಂಬ ಹೆಸರಿನ ಮಹಾಶಕ್ತಿವಂತ ನಾದ ಒಬ್ಬ ವಾನರಶ್ರೇಷ್ಠನಿದ್ದನು. ಅವನು ಭೌಮಾಸುರನಿಗೆ ಮಿತ್ರನೂ, ಸುಗ್ರೀವನಿಗೆ ಮಂತ್ರಿಯೂ, ಮೈಂದನಿಗೆ ಸಹೋದರನೂ ಆಗಿದ್ದನು. ತನ್ನ ಮಿತ್ರನಾದ ನರಕಾಸುರನನ್ನು ಶ್ರೀಕೃಷ್ಣನು ಸಂಹರಿಸಿದನೆಂಬ ವಾರ್ತೆಯನ್ನು ಕೇಳುತ್ತಲೇ ದ್ವಿವಿದನು, ಮಿತ್ರಹಂತಕನಿಗೆ ತಕ್ಕ ಪ್ರತೀಕಾರವನ್ನು ಮಾಡಿ ಮಿತ್ರಋಣವನ್ನು ತೀರಿಸಬೇಕೆಂಬ ಆಶಯದಿಂದ ರಾಷ್ಟ್ರದಲ್ಲಿ ಗೊಂದಲವ ನ್ನೆಬ್ಬಿಸಲು ಪ್ರಾರಂಭಿಸಿದನು. ಅವನು ತನ್ನ ಅನುಯಾಯಿಗಳೊಡನೆ ನಗರಗಳನ್ನೂ, ಪಟ್ಟಣಗಳನ್ನೂ, ಗ್ರಾಮಗಳನ್ನೂ, ಹಳ್ಳಿಗಳನ್ನೂ, ಗೋಶಾಲೆ

ಗಳನ್ನೂ ಸುಡಲು ಪ್ರಾರಂಭಿಸಿದನು. ಕೆಲವು ಕಡೆಗಳಲ್ಲಿ ಆ ದುಷ್ಟನು ಪರ್ವತಗಳನ್ನೇ ಕಿತ್ತು ಊರುಗಳ ಮೇಲೂ, ಗ್ರಾಮಗಳ ಮೇಲೂ ಹಾಕಿ ಅಲ್ಲಿದ್ದ ಸಮಸ್ತಪ್ರಾಣಿಗಳನ್ನೂ ಏಕಕಾಲದಲ್ಲಿ ಧ್ವಂಸಮಾಡುತ್ತಿದ್ದನು. ಇಂತಹ ದಾಂಧಲೆಗಳನ್ನವನು ವಿಶೇಷವಾಗಿ ಅವನ ಮಿತ್ರನ ಹಂತಕನಾದ ಶ್ರೀಕೃಷ್ಣನು ವಾಸಮಾಡುತ್ತಿದ್ದ ಆನರ್ತದೇಶದಲ್ಲಿಯೇ ಮಾಡುತ್ತಿದ್ದನು. ಹತ್ತುಸಾವಿರ ಆನೆಗಳ ಬಲವನ್ನು ಹೊಂದಿದ್ದ ಆ ದ್ವಿವಿದನು ಕೆಲವು ಸಮಯಗಳಲ್ಲಿ ಸಮುದ್ರದ ಮಧ್ಯದಲ್ಲಿ ನಿಂತು ಎರಡು ಕೈಗಳಿಂದಲೂ ನೀರನ್ನು ಉಗ್ಗುತ್ತಾ ಸಮುದ್ರತೀರದಲ್ಲಿದ್ದ ದೇಶಗಳನ್ನು ನೀರಿನಲ್ಲಿ ಮುಳುಗಿಸಿಬಿಡು ತ್ತಿದ್ದನು. ಆ ನೀಚನು ಕೆಲವೊಮ್ಮೆ ಋಷಿಗಳ ಆಶ್ರಮಗಳಿಗೆ ಹೋಗಿ ಅಲ್ಲಿದ್ದ ಗಿಡ-ಮರ-ಬಳ್ಳಿಗಳನ್ನು ಕಿತ್ತುಹಾಕುತ್ತಿದ್ದನು. ಯಜ್ಞಕ್ಕೆ ಸಂಬಂಧಿಸಿದ ಅಗ್ನಿಕುಂಡಗಳಲ್ಲಿ ಮೂತ್ರ-ಪುರೀಷಗಳನ್ನು ಉತ್ಸರ್ಜಿಸಿ ಯಜ್ಞ ಕರ್ಮಗಳನ್ನೇ ಕೆಡಿಸುತ್ತಿದ್ದನು. ಬಲಮದದಿಂದ ಅತ್ಯಂತಗರ್ವಿಷ್ಠನಾಗಿದ್ದ ಆ ದ್ವಿವಿದನು ಸ್ತ್ರೀಯರನ್ನೂ, ಪುರುಷರನ್ನೂ ಹೊತ್ತುಕೊಂಡು ಹೋಗಿ ಪರ್ವತದ ಗುಹೆಗಳಲ್ಲಿಟ್ಟು, ಕಣಜದ ಹುಳುವು ಅವರೇ ಹುಳುವನ್ನು ತನ್ನ ಗೂಡಿನಲ್ಲಿಟ್ಟು ಗೂಡನ್ನು ಮುಚ್ಚಿಬಿಡುವಂತೆ–ಪರ್ವತದ ಶಿಖರಗಳಿಂದ ಸ್ತ್ರೀ-ಪುರುಷರಿದ್ದ ಆ ಗುಹೆಗಳನ್ನು ಮುಚ್ಚಿಬಿಡುತ್ತಿದ್ದನು. ಹೀಗೆ ದುಷ್ಟನಾದ ಆ ದ್ವಿವಿದನು ದೇಶಗಳನ್ನೇ ಹಾಳುಮಾಡುತ್ತಾ ಪತಿವ್ರತಾಸ್ತ್ರೀಯರನ್ನೂ ಕೆಡಿಸುತ್ತಾ ಸ್ವೇಚ್ಛೆಯಿಂದ ಸಂಚರಿಸುತ್ತಿದ್ದಾಗ, ಕರ್ಣಾನಂದಕರವಾದ ಸಂಗೀತವನ್ನು ಕೇಳಿ ಆ ಸಂಗೀತದ ಧ್ವನಿಯನ್ನೇ ಅನುಸರಿಸಿ ರೈವತಕ ಪರ್ವತಕ್ಕೆ ಹೋದನು. ಅಲ್ಲಿಯೇ ಅವನು ಯದುವಂಶಶಿರೋಮಣಿ ಯಾದ, ಕಮಲಪುಷ್ಪಗಳ ಮಾಲೆಯನ್ನು ಧರಿಸಿದ್ದ, ಸರ್ವಾಂಗಸುಂದರ ನಾಗಿದ್ದ, ಲಲನೆಯರ ಮಧ್ಯದಲ್ಲಿ ವಿರಾಜಮಾನನಾಗಿದ್ದ ಬಲರಾಮನನ್ನು ನೋಡಿದನು. ಆ ಸಮಯದಲ್ಲಿ ಬಲರಾಮನು ವಾರಿಣೀಮಧುವನ್ನು ಪಾನ ಮಾಡಿ ಮಧುರವಾದ ಸಂಗೀತವನ್ನು ಹಾಡುತ್ತಿದ್ದನು. ಅವನ ಕಣ್ಣುಗಳು ಆನಂದೋನ್ಮಾದದಿಂದ ಸುತ್ತುತ್ತಿದ್ದುವು. ಮದೋದಕವನ್ನು ಸುರಿಸುವ ಆನೆಯಂತೆ ಬಲರಾಮನು ಬಲಿಷ್ಠವಾದ ಶರೀರದಿಂದ ರಾರಾಜಿಸುತ್ತಿದ್ದನು.

ದುಷ್ಟನಾದ ದ್ವಿವಿದವಾನರನು ಬಲರಾಮನಿದ್ದಲ್ಲಿಗೆ ಬಂದು ಅಲ್ಲಿದ್ದ

ಮರದ ಮೇಲೆ ಹತ್ತಿ ಅದರ ಕೊಂಬೆಗಳನ್ನು ರಭಸದಿಂದ ಅಳ್ಳಾಡಿಸತೊಡಗಿದನು. ಕೆಲವು ಸಮಯಗಳಲ್ಲಿ ಸ್ತ್ರೀಯರ ಮುಂದೆ ನಿಂತು ಕಲ-ಕಲಶಬ್ದ ಮಾಡುತ್ತಾ ತಾನಿರುವುದನ್ನು ತೋರಿಸಿಕೊಳ್ಳುವನು. ಯುವತಿಯರು ಸ್ವಾಭಾವಿಕವಾಗಿ ಚಂಚಲೆಯರೂ ಹಾಸ್ಯಪ್ರಿಯರೂ ಆಗಿರುತ್ತಾರೆ. ದ್ವಿವಿದ ಕಪಿಯು ದಿಟ್ಟತನದಿಂದ ಮಾಡುತ್ತಿದ್ದ ನಾನಾವಿಧವಾದ ಚೇಷ್ಟೆಗಳನ್ನು ಕಂಡು ಬಲರಾಮನ ಪ್ರೇಯಸಿಯರು ಪಕ-ಪಕನೆ ನಗತೊಡಗಿದರು. ದ್ವಿವಿದನು ಅವರ ಕಡೆಗೆ ಮುಖಮಾಡಿಕೊಂಡು ಹಲ್ಲುಕಿರಿಯುತ್ತಾ, ಗರ್ಜಿಸುತ್ತಾ, ಹುಬ್ಬನ್ನು ಹಾರಿಸುತ್ತಾ ನಾನಾಪ್ರಕಾರವಾದ ಚೇಷ್ಟೆಗಳನ್ನು ಮಾಡುತ್ತಿದ್ದನು. ಬಲರಾಮನು ನೋಡುತ್ತಿದ್ದಂತೆಯೇ ದ್ವಿವಿದನು ತನ್ನ ಪೃಷ್ಠಭಾಗವನ್ನು ಬಲರಾಮನ ಸ್ತ್ರೀಯರಿಗೆ ತೋರಿಸುತ್ತಾ ಅಣಕಿಸಿದನು. ಇದನ್ನು ಸಹಿಸಿಕೊಳ್ಳಲಾರದೇ, ಪ್ರಹರಿಸುವವರಲ್ಲಿ ಶ್ರೇಷ್ಠನಾದ ಬಲರಾಮನು ಕಪಿಗೆ ಕಲ್ಲಿನಿಂದ ಗುರಿಯಿಟ್ಟು ಹೊಡೆದನು. ಬಲರಾಮನೆಸೆದ ಕಲ್ಲಿನ ಪೆಟ್ಟನ್ನು ಧೂರ್ತಕಪಿಯು ಹೇಗೋ ತಪ್ಪಿಸಿಕೊಂಡು ಬಲರಾಮನ ಸಮೀಪದಲ್ಲಿದ್ದ ಮದಿರೆಯ ಸ್ಥಾಲಿಯನ್ನೇ ಎತ್ತಿಕೊಂಡು ದೂರಕ್ಕೆ ಹೋಗಿ ಹಲ್ಲುಕಿರಿದು ನಗುತ್ತಾ ಬಲರಾಮನ ಕೋಪವನ್ನು ಕೆರಳಿಸುತ್ತಾ ಅವನೊಡನೆ ಆಟವಾಡುತ್ತಿದ್ದನು. ಧೂರ್ತನಾದ ದ್ವಿವಿದನು ತನ್ನ ಚೇಷ್ಟೆಗಳನ್ನು ಅಷ್ಟಕ್ಕೇ ನಿಲ್ಲಿಸಲಿಲ್ಲ. ಬಲಿಷ್ಠನಾಗಿದ್ದ ಮತ್ತು ಮದೋದ್ಧತನಾಗಿದ್ದ ಆತನು ಮದಿರೆಯ ಸ್ಥಾಲಿಯನ್ನೇ ಒಡೆದುಹಾಕಿದನು. ಬಲರಾಮನ ಉಪಸ್ಥಿತಿಯನ್ನು ಲೆಕ್ಕಿಸದೆಯೇ ಆತನ ಸ್ತ್ರೀಯರುಟ್ಟಿದ್ದ ಸೀರೆಗಳನ್ನು ಹರಿದುಹಾಕಿದನು. ಇಂತಹ ತಿರಸ್ಕಾರವನ್ನು ಬಲರಾಮನಿಗೆ ತಡೆಯಲಾಗಲಿಲ್ಲ. ಆನರ್ತದೇಶದಲ್ಲಿ ಅವನ ಉಪದ್ರವವು ಹೆಚ್ಚಾಗಿರುವುದೆಂಬ ವಿಷಯವೂ ಬಲರಾಮನಿಗೆ ತಿಳಿದಿತ್ತು. ದ್ವಿವಿದನ ಉದ್ಧತತನವನ್ನು ಪ್ರತ್ಯಕ್ಷವಾಗಿಯೇ ಕಂಡ ಬಲರಾಮನು ಅತ್ಯಂತ ಕ್ರುದ್ಧನಾಗಿ ಶತ್ರುವನ್ನು ಒಡನೆಯೇ ಸಂಹರಿಸಬೇಕೆಂಬ ಆಶಯದಿಂದ ಮುಸಲಾಯುಧವನ್ನೆತ್ತಿಕೊಂಡನು. ಮಹಾವೀರ್ಯನಾದ ದ್ವಿವಿದನು ಕೂಡ ಸಾಲವೃಕ್ಷವೊಂದನ್ನು ಕಿತ್ತುಕೊಂಡು ವೇಗವಾಗಿ ಬಲರಾಮನ ಬಳಿಗೆ ಬಂದು ಆತನ ತಲೆಯ ಮೇಲೆ ರಭಸದಿಂದ ಪ್ರಹರಿಸಿದನು. ಪರ್ವತದಂತೆ ಸುಸ್ಥಿರನಾಗಿ ನಿಂತಿದ್ದ ಬಲರಾಮನು ತನ್ನ ತಲೆಯ ಮೇಲೆ ಬೀಳಲಿದ್ದ ವೃಕ್ಷ

ವನ್ನು ಹಿಡಿದನು. ಬಳಿಕ ಸುನಂದವೆಂಬ ಮುಸಲಾಯುಧದಿಂದ ದ್ವಿವಿದನನ್ನು ಪ್ರಹರಿಸಿದನು. ಮುಸಲಾಯುಧಪ್ರಹಾರದಿಂದ ದ್ವಿವಿದನ ತಲೆಯು ಒಡೆದು ರಕ್ತವು ಧಾರಾಕಾರವಾಗಿ ಹರಿಯಲಾರಂಭಿಸಿತು. ಆ ಸಮಯದಲ್ಲಿ ಆತನು ಗೈರಿಕಾದಿ ಧಾತುಗಳಿಂದ ಕೂಡಿದ ಪರ್ವತದಂತೆಯೇ ಕಾಣುತ್ತಿದ್ದನು. ತಲೆಯೊಡೆದು ರಕ್ತವು ಸುರಿಯುತ್ತಿದ್ದರೂ ಮಹಾಬಲಿಷ್ಠನಾಗಿದ್ದ ದ್ವಿವಿದನು ಅದನ್ನು ಲೆಕ್ಕಿಸಲೇ ಇಲ್ಲ. ಒಡನೆಯೇ ಮತ್ತೊಂದು ಹೆಮ್ಮರವನ್ನು ಕಿತ್ತು ತನ್ನ ಭುಜಬಲದಿಂದ ಅದನ್ನು ಪತ್ರರಹಿತವನ್ನಾಗಿ ಮಾಡಿ ಅದರಿಂದ ಬಲರಾಮನನ್ನು ಪ್ರಹರಿಸಿದನು. ಬಲರಾಮನು ಕ್ಷಣಮಾತ್ರದಲ್ಲಿ ಆ ವೃಕ್ಷ ವನ್ನು ಮುಸಲಾಯುಧದಿಂದ ನೂರುಚೂರುಗಳನ್ನಾಗಿ ಮಾಡಿಬಿಟ್ಟನು. ಇದರಿಂದ ಕ್ರುದ್ಧನಾದ ದ್ವಿವಿದನು ಮತ್ತೊಂದು ವೃಕ್ಷವನ್ನು ಕಿತ್ತು ಬಲರಾಮನನ್ನು ಪ್ರಹರಿಸಿದನು. ಅದನ್ನು ಕೂಡ ಬಲರಾಮನು ನೂರು ಚೂರುಗಳಾಗಿ ಕತ್ತರಿಸಿದನು. ದ್ವಿವಿದನು ವೃಕ್ಷಗಳನ್ನು ಕೀಳುವುದು ; ನಿಷ್ಪತ್ರವನ್ನಾಗಿ ಮಾಡುವುದು ; ಬಲರಾಮನನ್ನು ಪ್ರಹರಿಸುವುದು ; ಬಲ ರಾಮನು ಅದನ್ನು ಕತ್ತರಿಸಿಹಾಕುವುದು—ಈ ಕಾರ್ಯವು ಸತತವಾಗಿ ನಡೆದು ರೈವತಕಪರ್ವತದಲ್ಲಿದ್ದ ವೃಕ್ಷಗಳೆಲ್ಲವೂ ಮುಗಿದುಹೋದುವು. ಇಬ್ಬರು ವೀರರೂ ಸೇರಿ ರೈವತಕಪರ್ವತದಲ್ಲಿದ್ದ ಆ ಅರಣ್ಯವನ್ನು ವೃಕ್ಷಗಳಿಂದ ರಹಿತವನ್ನಾಗಿ ಮಾಡಿಬಿಟ್ಟರು. ವೃಕ್ಷಗಳು ಸಿಕ್ಕದಿರಲು ಕ್ರುದ್ಧನಾಗಿದ್ದ ದ್ವಿವಿದನು ಪರ್ವತದಲ್ಲಿದ್ದ ಬಂಡೆಗಳನ್ನೇ ಕಿತ್ತು ಬಲರಾಮನ ಮೇಲೆ ಎಸೆಯ ತೊಡಗಿದನು. ಮಹಾಬಲಿಷ್ಠನಾದ ಮುಸಲಾಯುಧನು ಕಲ್ಲಿನ ಮಳೆಯನ್ನು ಕೂಡ ಮುಸಲಾಯುಧದಿಂದ ಲೀಲಾಜಾಲವಾಗಿ ಪುಡಿ-ಪುಡಿಮಾಡಿಬಿಟ್ಟನು. ಹತ್ತಿರದಲ್ಲಿದ್ದ ಬಂಡೆಗಳೂ ಮುಗಿದುಹೋದುವು. ಬಳಿಕ ಕಪೀಶ್ವರನು ತಾಳೆಯ ಮರದಂತೆ ಸುದೀರ್ಘವಾಗಿದ್ದ ತನ್ನ ಕೈಗಳಿಂದ ಮುಷ್ಟಿಯನ್ನು ಮಾಡಿ ರೋಹಿಣೀಪುತ್ರನಾದ ಬಲರಾಮನ ಬಳಿಗೆ ಬಂದು ತನ್ನ ಆ ಎರಡು ಮುಷ್ಟಿಗಳಿಂದಲೂ ಬಲರಾಮನ ವಕ್ಷಃಸ್ಥಳಕ್ಕೆ ಪ್ರಹರಿ ಸಿದನು. ಇದರಿಂದ ಪರಮಕ್ರುದ್ಧನಾದ, ಯಾದವೇಂದ್ರನಾದ ಬಲರಾಮನು ಮುಸಲಾಯುಧದಿಂದ ಮತ್ತು ಹಲಾಯುಧದಿಂದ ದ್ವಿವಿದನ ಜತ್ರು ಪ್ರದೇಶದಲ್ಲಿ (ಕುತ್ತಿಗೆಯಲ್ಲಿ) ಬಲವಾಗಿ ಪ್ರಹರಿಸಿದನು. ಒಡನೆಯೇ

ಕಪೀಶ್ವರನು ರಕ್ತವನ್ನು ಕಕ್ಕುತ್ತಾ ಕೆಳಗೆ ಬಿದ್ದನು. ಬಿರುಗಾಳಿಯಿಂದ ಸಮುದ್ರದಲ್ಲಿರುವ ನೌಕೆಯು ಅಳ್ಳಾಡುವಂತೆ–ಕಪೀಶ್ವರನು ಕೆಳಗೆ ಬೀಳುತ್ತಲೇ ಇಳಿಜಾರು ಪ್ರದೇಶಗಳಿಂದಲೂ, ವೃಕ್ಷಗಳಿಂದಲೂ ಕೂಡಿದ್ದ ರೈವತಕ ಪರ್ವತವು ನಡುಗಿಹೋಯಿತು.

ಆಕಾಶದಲ್ಲಿ ದೇವತೆಗಳು–'ಬಲರಾಮನಿಗೆ ಜಯವಾಗಲಿ'–ಎಂದು ಜಯಘೋಷ ಮಾಡಿದರು. ಸಿದ್ಧರು–'ಅನಂತನೂ ಅಪ್ರಮೇಯನೂ ಆದ ಬಲರಾಮನಿಗೆ ನಮೋ ನಮಃ'–ಎಂದು ನಮಸ್ಕಾರಮಾಡಿದರು. ಋಷಿ-ಮುನಿಗಳು–'ಸಾಧು ಬಲರಾಮ! ಸಾಧು!'–ಎಂದು ಪ್ರಶಂಸೆಮಾಡುತ್ತಾ ಬಲರಾಮನ ಮೇಲೆ ಹೂಮಳೆಗರೆದರು.

ಪರೀಕ್ಷಿತಮಹಾರಾಜ! ಹೀಗೆ ಬಲರಾಮನು ಜಗತ್ತಿಗೆ ಉಪದ್ರವವನ್ನುಂಟುಮಾಡುತ್ತಿದ್ದ ದ್ವಿವಿದನನ್ನು ಸಂಹರಿಸಿ ಪುರಜನರಿಂದ ಸ್ತುತಿಸಲ್ಪಡುತ್ತಾ ರೈವತಕಪರ್ವತದಿಂದ ದ್ವಾರಕಾಪಟ್ಟಣಕ್ಕೆ ಹಿಂದಿರುಗಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೬೭ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೬೮ನೆಯ ಅಧ್ಯಾಯ

ಕೌರವರ ಮೇಲೆ ಬಲರಾಮನ ಕೋಪ : ಸಾಂಬನ ವಿವಾಹ

ಶ್ರೀಶುಕಮುನಿಗಳು ಹೇಳುತ್ತಾರೆ :

ದುರ್ಯೋಧನಸುತಾಂ ರಾಜನ್ ಲಕ್ಷ್ಮಣಾಂ ಸಮಿತಿಂಜಯಃ ।
ಸ್ವಯಂವರಸ್ಥಾಮಹರತ್ಸಾಮ್ಬೋ ಜಾಮ್ಬವತೀಸುತಃ ॥೧॥

ಪರೀಕ್ಷಿತಮಹಾರಾಜ! ಹಲವಾರು ಯುದ್ಧಗಳಲ್ಲಿ ವಿಜಯವನ್ನು ಗಳಿಸಿದ್ದ ಮಹಾಶೂರನಾದ ಜಾಂಬವತಿಯ ಮಗನಾದ ಸಾಂಬನು ಸ್ವಯಂವರಮಂಟಪದಲ್ಲಿದ್ದ ದುರ್ಯೋಧನನ ಮಗಳಾದ ಲಕ್ಷ್ಮಣಾ ಎಂಬುವಳನ್ನು ಅಪಹರಿಸಿಕೊಂಡು ಹೋದನು. ಇದರಿಂದ ಕುಪಿತರಾದ ಕೌರವರು ಮನಬಂದಂತೆ ಮಾತನಾಡಿದರು. "ಈ ಬಾಲಕನು ಎಷ್ಟು ಉದ್ಧತನಾಗಿದ್ದಾನೆ ; ನೋಡಿದಿರಾ! ನಮ್ಮನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ನಮ್ಮ ಕನ್ಯೆ

ಯನ್ನು ಅಪಹರಿಸಿಕೊಂಡು ಹೋಗಿದ್ದಾನೆ. ಮೇಲಾಗಿ ಈ ನಮ್ಮ ಕನ್ಯೆಯೂ ಅವನನ್ನು ಪ್ರೀತಿಸಿರಲಿಲ್ಲ. ದುರ್ವಿನೀತನಾದ ಆ ಬಾಲಕನನ್ನು ಈಗಲೇ ಬಂಧಿಸಿರಿ. ವೃಷ್ಣಿಗಳಾದರೂ ಏನು ಮಾಡುವರೆಂಬುದನ್ನು ನೋಡೋಣ. ಅವರಾದರೋ ನಾವು ಕೊಟ್ಟಿರುವ ಧನ-ಧಾನ್ಯಗಳಿಂದ ಸಮೃದ್ಧವಾದ ರಾಜ್ಯವನ್ನು ನಮ್ಮ ಕೃಪೆಯಿಂದಲೇ ಆಳುತ್ತಿದ್ದಾರೆ. ತಮ್ಮ ಪುತ್ರನು ಬಂಧಿಸಲ್ಪಟ್ಟಿರುವುದನ್ನು ಕೇಳಿ ವೃಷ್ಣಿಗಳೇನಾದರೂ ಇಲ್ಲಿಗೆ ಬಂದುದಾದರೆ ನಮ್ಮಿಂದ ಭಗ್ನದರ್ಪರಾಗುವ ಅವರು–ಪ್ರಾಣಾಯಾಮದಿಂದ ಇಂದ್ರಿಯಗಳು ನಿಗ್ರಹಿಸಲ್ಪಟ್ಟು ಶಾಂತವಾಗುವಂತೆ–ಶಾಂತರಾಗಿಬಿಡುತ್ತಾರೆ."

ಕರ್ಣ, ಶಲ, ಭೂರಿಶ್ರವಸ, ಯಜ್ಞಕೇತು, ದುರ್ಯೋಧನ–ಇವರೇ ಮೊದಲಾದ ವೀರರು ಹೀಗೆ ತಮ್ಮ-ತಮ್ಮಲ್ಲಿಯೇ ಮಾತನಾಡಿಕೊಂಡು ಕುರುವೃದ್ಧರ ಅನುಮತಿಯನ್ನೂ ಪಡೆದು ಸಾಂಬನನ್ನು ಬಂಧಿಸಲು ಅನುವಾದರು. ಮಹಾರಥನಾದ ಸಾಂಬನು ಆಯುಧಪಾಣಿಗಳಾಗಿ ಕೌರವರು ತನ್ನನ್ನು ಹಿಂಬಾಲಿಸಿ ಬರುತ್ತಿರುವುದನ್ನು ಕಂಡು ರಥವನ್ನು ಹಿಂದಕ್ಕೆ ತಿರುಗಿಸಿ ಸುಂದರವಾದ ಧನುಸ್ಸನ್ನು ಹಿಡಿದು ಸಿಂಹದಂತೆ ಏಕಾಕಿಯಾಗಿ ಕೌರವರನ್ನು ಎದುರಿಸಿ ನಿಂತನು. ಕರ್ಣಪ್ರಮುಖರಾದ ಕೌರವರು ಧನುಷ್ಪಾಣಿಗಳಾಗಿ ಸಾಂಬನನ್ನು ಬಂಧಿಸಬೇಕೆನ್ನುವ ಆಶಯದಿಂದ ನಿಲ್ಲು-ನಿಲ್ಲೆಂದು ಕೂಗಿ ಹೇಳುತ್ತಾ ಪರಮಕ್ರುದ್ಧರಾಗಿ ಆತನನ್ನು ಸುತ್ತುವರಿದು ನಿಂತು ಬಾಣಗಳ ಮಳೆಗರೆದರು. ಹೀಗೆ ಕೌರವರಿಂದ ಪ್ರಹರಿಸಲ್ಪಟ್ಟ ಅಚಿಂತ್ಯಮಹಿಮನಾದ ಶ್ರೀಕೃಷ್ಣನ ಮಗನಾದ, ಯದುಕುಲತಿಲಕನಾದ ಸಾಂಬನು ಕ್ಷುದ್ರಮೃಗಗಳಿಂದ ಆಕ್ರಮಿಸಲ್ಪಟ್ಟ ಸಿಂಹದಂತೆ ಪರಮಕ್ರುದ್ಧನಾದನು. ತನ್ನ ಧನುಸ್ಸನ್ನು ಟೇಂಕರಿಸುತ್ತಾ ಸಾಂಬನು ಕರ್ಣನೇ ಮೊದಲಾದ ಆರು ಮಂದಿ ಕೌರವಪ್ರಮುಖರನ್ನು ಆರಾರು ಬಾಣಗಳಿಂದ ಪ್ರಹರಿಸಿ ಪುನಃ ನಾಲ್ಕು-ನಾಲ್ಕು ಬಾಣಗಳಿಂದ ಅವರ ರಥಗಳಲ್ಲಿದ್ದ ನಾಲ್ಕು-ನಾಲ್ಕು ಕುದುರೆಗಳನ್ನು ಪ್ರಹರಿಸಿದನು. ಪುನಃ ಒಂದೊಂದು ಬಾಣದಿಂದ ಪ್ರತಿಯೊಂದು ರಥದಲ್ಲಿಯೂ ಇದ್ದ ಸಾರಥಿಗಳನ್ನು ಪ್ರಹರಿಸಿ ಪುನಃ ಒಂದೊಂದು ಬಾಣದಿಂದ ಕರ್ಣನೇ ಮೊದಲಾದ ಆರು ಮಂದಿ ಮಹಾಧನುಷ್ಮಂತರಾದ ಮಹಾರಥರನ್ನೂ ಪ್ರಹರಿಸಿದನು. ಸಾಂಬನ

ಪರಾಕ್ರಮವನ್ನು ಕೌರವವೀರರೆಲ್ಲರೂ ಮುಕ್ತಕಂಠದಿಂದ ಪ್ರಶಂಸಿಸಿದರು. ಬಳಿಕ ಕುಪಿತರಾಗಿದ್ದ ಆರು ಮಂದಿ ಕೌರವವೀರರು ಒಟ್ಟಾಗಿ ಸೇರಿ ಸಾಂಬನ ರಥವನ್ನು ಧ್ವಂಸಮಾಡಿದರು. ನಾಲ್ಕು ಮಂದಿ ಕೌರವವೀರರು ಒಂದೊಂದು ಬಾಣಗಳಿಂದ ಸಾಂಬನ ನಾಲ್ಕು ಕುದುರೆಗಳನ್ನೂ ಸಂಹಾರಮಾಡಿದರು. ಒಬ್ಬನು ಸಾಂಬನ ಸಾರಥಿಯನ್ನು ಸಂಹರಿಸಿದನು. ಮತ್ತೊಬ್ಬ ಕೌರವವೀರನು ಕೃಷ್ಣಕುಮಾರನ ಧನುಸ್ಸನ್ನು ಕತ್ತರಿಸಿದನು. ಹೀಗೆ ಕೌರವರು ಒಟ್ಟಾಗಿ ಸೇರಿ ಬಹಳ ಕಷ್ಟದಿಂದ ಸಾಂಬನನ್ನು ರಥಹೀನನನ್ನಾಗಿ ಮಾಡಿ ಅವನನ್ನು ಬಂಧಿಸಿದರು. ಹೀಗೆ ವಿಜಯಿಗಳಾದ, ಕರ್ಣಪ್ರಮುಖರಾದ ಕೌರವವೀರರು ಕೃಷ್ಣಕುಮಾರನನ್ನೂ, ತಮ್ಮ ಕನ್ಯೆಯಾದ ಲಕ್ಷ್ಮಣೆಯನ್ನೂ ಕರೆದುಕೊಂಡು ಹಸ್ತಿನಾಪಟ್ಟಣಕ್ಕೆ ಹಿಂದಿರುಗಿದರು.

ದುರ್ಯೋಧನನ ಮಗಳಾದ ಲಕ್ಷ್ಮಣೆಯನ್ನು ಅಪಹರಿಸಿದ ಸಾಂಬನನ್ನು ಕೌರವರು ಬಂಧನದಲ್ಲಿಟ್ಟಿರುವರೆಂಬ ವಾರ್ತೆಯನ್ನು ನಾರದರಿಂದ ಕೇಳಿ ಪರಮಕ್ರುದ್ಧರಾದ ಯಾದವರು ಮಹಾರಾಜನಾದ ಉಗ್ರಸೇನನ ಪ್ರೇರಣೆಯಂತೆ ಕೌರವರೊಡನೆ ಯುದ್ಧಮಾಡಲು ಸಿದ್ಧರಾದರು. ಕಲಹ ಪ್ರಧಾನವಾದ ಕಲಿಯುಗದ ಸಮಸ್ತಪಾಪಗಳನ್ನೂ ಹೋಗಲಾಡಿಸುವುದರಲ್ಲಿ ಅತ್ಯಂತಸಮರ್ಥನಾದ ಬಲರಾಮನಿಗೆ ವೃಷ್ಣಿ-ಕೌರವರ ನಡುವೆ ಯುದ್ಧವಾಗುವುದು ಇಷ್ಟವಾಗಲಿಲ್ಲ. ರಾಜಾಜ್ಞೆಯಂತೆ ಯುದ್ಧಸನ್ನದ್ಧರಾಗಿದ್ದ ಯದುವೀರರನ್ನು ಸಮಾಧಾನಗೊಳಿಸಿ, ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿದ್ದ ರಥದಲ್ಲಿ ಕುಳಿತು–ಗ್ರಹಗಳಿಂದ ಪರಿವೃತನಾದ ಚಂದ್ರನಂತೆ ಬ್ರಾಹ್ಮಣರಿಂದಲೂ, ಕುಲವೃದ್ಧರಿಂದಲೂ ಕೂಡಿಕೊಂಡು ಹಸ್ತಿನಾಪುರಕ್ಕೆ ಪ್ರಯಾಣಮಾಡಿದನು. ಹಸ್ತಿನಾಪುರವನ್ನು ಸೇರಿದನಂತರ ಸಮೀಪದ ಉದ್ಯಾನವನವೊಂದರಲ್ಲಿ ರಥವನ್ನು ನಿಲ್ಲಿಸಿ ಕೌರವರ ಆಶಯವೇನೆಂಬುದನ್ನು ತಿಳಿದುಬರುವ ಸಲುವಾಗಿ ಉದ್ಧವನನ್ನು ಧೃತರಾಷ್ಟ್ರನ ಬಳಿಗೆ ಕಳುಹಿಸಿಕೊಟ್ಟನು. ಬಲರಾಮನ ಆಜ್ಞಾನುಸಾರವಾಗಿ ಉದ್ಧವನು ರಾಜಸಭೆಗೆ ಹೋಗಿ ಅಲ್ಲಿ ಉಪಸ್ಥಿತರಾಗಿದ್ದ ಧೃತರಾಷ್ಟ್ರ-ಭೀಷ್ಮ-ದ್ರೋಣ-ಬಾಹ್ಲಿಕ-ದುರ್ಯೋಧನರನ್ನು ಯಥಾಯೋಗ್ಯವಾಗಿ ಅಭಿನಂದಿಸಿ ಬಲರಾಮನು ಬಂದಿರುವ ವಾರ್ತೆಯನ್ನು ತಿಳಿಸಿದನು. ತಮಗೆ ಪರಮ

ಹಿತೈಷಿಯೂ ಮತ್ತು ಸುಹೃತ್ತಮನೂ ಆದ ಬಲರಾಮನು ಬಂದಿರುವನೆಂಬು ದನ್ನು ತಿಳಿದು ಆನಂದತುಂದಿಲರಾದ ಕೌರವರು ಅವನನ್ನು ಸ್ವಾಗತಿಸುವುದ ಕ್ಕಾಗಿ ಮಂಗಳದ್ರವ್ಯಗಳನ್ನು ತೆಗೆದುಕೊಂಡು ಬಲರಾಮನಿದ್ದಲ್ಲಿಗೆ ತೆರಳಿದರು. ಬಲರಾಮನನ್ನು ಸೇರಿದನಂತರ ಕೌರವಪ್ರಮುಖರು ಬಲರಾಮನಿಗೆ ಯಥಾವಿಧಿಯಾಗಿ ಗೋವನ್ನು ಸಮರ್ಪಿಸಿ ಅರ್ಘ್ಯ-ಪಾದ್ಯಾದಿಗಳಿಂದ ಆತನನ್ನು ಸತ್ಕರಿಸಿದರು. ಅವನ ಪ್ರಭಾವವನ್ನು ಚೆನ್ನಾಗಿ ತಿಳಿದುಕೊಂಡಿದ್ದ ಕೆಲವು ಕೌರವಪ್ರಮುಖರು ಬಲರಾಮನಿಗೆ ತಲೆಬಾಗಿ ನಮಸ್ಕರಿಸಿದರು.

ಬಳಿಕ ಅವರೆಲ್ಲರೂ ಪರಸ್ಪರವಾಗಿ ಕುಶಲಪ್ರಶ್ನೆಗಳನ್ನು ಮಾಡಿದರು. ಜ್ಞಾತಿ-ಬಂಧುಗಳಲ್ಲಿ ಪ್ರತಿಯೊಬ್ಬರ ಯೋಗ-ಕ್ಷೇಮಗಳನ್ನೂ ವಿಚಾರಿಸಿ ತಿಳಿದುಕೊಂಡನಂತರ ಬಲರಾಮನು ದಿಟ್ಟತನದಿಂದಲೂ ಗಾಂಭೀರ್ಯ ದಿಂದಲೂ ಈ ಮಾತನ್ನು ಹೇಳಿದನು :

ಉಗ್ರಸೇನಃ ಕ್ಷಿತೀಶೇಶೋ ಯದ್ವ ಆಜ್ಞಾಪಯತ್ಪ್ರಭುಃ ।
ತದವ್ಯಗ್ರಧಿಯಃ ಶ್ರುತ್ವಾ ಕುರುಧ್ವಂ ಮಾವಿಲಂಬಿತಮ್ ॥೨೧॥

"ಪ್ರಭುವಾದ ರಾಜಾಧಿರಾಜನಾದ ಉಗ್ರಸೇನಮಹಾರಾಜನು ಆಜ್ಞೆಯೊಂದನ್ನು ನಿಮಗೆ ನನ್ನ ಮೂಲಕ ಕಳುಹಿಸಿರುತ್ತಾನೆ. ಈ ಆಜ್ಞಾ ಪತ್ರದಲ್ಲಿರುವುದನ್ನು ನೀವೆಲ್ಲರೂ ಏಕಾಗ್ರತೆಯಿಂದಲೂ ಸಾವಧಾನತೆ ಯಿಂದಲೂ ಕೇಳಿರಿ ಮತ್ತು ಶೀಘ್ರಾತಿಶೀಘ್ರವಾಗಿ ಆ ಆಜ್ಞೆಯನ್ನು ನೀವೆಲ್ಲರೂ ಪರಿಪಾಲಿಸಿರಿ.

ಯದ್ಯೂಯಂ ಬಹವಸ್ತ್ವೇಕಂ ಜಿತ್ವಾಽಧರ್ಮೇಣ ಧಾರ್ಮಿಕಮ್ ।
ಅಬಧ್ನೀತಾಥ ತನ್ಮೃಷ್ಯೇ ಬನ್ಧೂನಾಮೈಕ್ಯಕಾಮ್ಯಯಾ ॥೨೨॥

"ಹಲವಾರು ಮಂದಿ ಮಹಾರಥರು ಒಟ್ಟಿಗೆ ಸೇರಿ ಏಕಾಕಿಯಾಗಿದ್ದ ಮತ್ತು ಧಾರ್ಮಿಕನಾದ ಸಾಂಬನನ್ನು ಅಧರ್ಮಮಾರ್ಗದಿಂದ ಪರಾಜಯ ಗೊಳಿಸಿ ಬಂಧನದಲ್ಲಿಟ್ಟಿರುವಿರಿ. ಬಂಧುಗಳಲ್ಲಿ ಪರಸ್ಪರವಾಗಿ ಐಕಮತ್ಯ ವಿರಬೇಕೆಂಬ ಆಶಯದಿಂದ ಈ ತಿರಸ್ಕಾರವನ್ನು ಇದುವರೆಗೂ ನಾವು ಸಹಿಸಿಕೊಂಡೆವು. ಸಾಂಬನನ್ನು ಈ ಕೂಡಲೇ ಬಿಡುಗಡೆಮಾಡಿ ಆತನನ್ನು

ನವವಧುವಿನೊಡನೆ ಕಳುಹಿಸಿಕೊಡದೇ ಇದ್ದಲ್ಲಿ ನಮ್ಮ ಸ್ವೈರಣೆಯು ಹಾಗೆಯೇ ಉಳಿದಿರಲಾರದು.”

ಪರೀಕ್ಷಿತಮಹಾರಾಜ! ಬಲರಾಮನ ವಾಣಿಯು ಆತನ ವೀರ್ಯ-ಶೌರ್ಯ-ಬಲ-ಪೌರುಷ-ಉತ್ಸಾಹ-ಉದ್ಧಟತನ ಮತ್ತು ಶಕ್ತಿಗಳಿಗೆ ಅನುರೂಪವಾಗಿದ್ದಿತು. ಬಲರಾಮನ ನಿಷ್ಠುರವಾದ ಈ ಮಾತನ್ನು ಕೇಳಿ ಕುಪಿತರಾದ ಕೌರವರು ಆತನಿಗೆ ಹೇಳಿದರು :

ಅಹೋ ಮಹಚ್ಚಿತ್ರಮಿದಂ ಕಾಲಗತ್ಯಾ ದುರತ್ಯಯಾ ।
ಆರುರುಕ್ಷತ್ಯುಪಾನದ್ವೈ ಶಿರೋ ಮುಕುಟಸೇವಿತಮ್ ॥೨೪॥

“ನಿಶ್ಚಯವಾಗಿಯೂ ಇದು ಎಂತಹ ಅಚ್ಚರಿಯ ಸಂಗತಿ! ಮೀರಿ ನಡೆಯಲು ಅಸಾಧ್ಯವಾದ ಕಾಲಗತಿಯಿಂದಾಗಿ ಕಾಲಿನಲ್ಲಿರಬೇಕಾದ ಪಾದರಕ್ಷೆಯು ಕಿರೀಟವಿರುವ ತಲೆಯನ್ನೇರಲು ಹವಣಿಸುತ್ತಿದೆಯಲ್ಲಾ!

ಏತೇ ಯೌನೇನ ಸಮ್ಬದ್ಧಾಃ ಸಹಶಯ್ಯಾಸನಾಶನಾಃ ।
ವೃಷ್ಣಯಸ್ತುಲ್ಯತಾಂ ನೀತಾ ಅಸ್ಮದ್ದತ್ತನೃಪಾಸನಾಃ ॥೨೫॥

ಯದುವಂಶೀಯರು ರಾಜಮನೆತನಕ್ಕೆ ಸೇರಿದವರಲ್ಲದಿದ್ದರೂ ನಾವು ಇವರೊಡನೆ ವಿವಾಹಸಂಬಂಧವನ್ನು ಬೆಳೆಸಿದೆವು. ಇದರಿಂದಾಗಿ ಇವರು ನಮ್ಮ ಜೊತೆಯಲ್ಲಿಯೇ ಮಲಗತೊಡಗಿದರು. ಕುಳಿತುಕೊಳ್ಳಲು ಹಿಂಜರಿಯಲಿಲ್ಲ. ಸಹಪಂಕ್ತಿಯಲ್ಲಿ ಭೋಜನವನ್ನೂ ಮಾಡತೊಡಗಿದರು. ಇವರಿಗೆ ನಾವು ರಾಜ್ಯವನ್ನು ಕೊಟ್ಟು ಇವರನ್ನು ರಾಜಸಿಂಹಾಸನದಲ್ಲಿ ಕುಳ್ಳಿರಿಸಿ ನಮಗೆ ಸಮಾನರನ್ನಾಗಿ ಮಾಡಿದೆವು.

ಚಾಮರವ್ಯಜನೇ ಶಙ್ಖಮಾತಪತ್ರಂ ಚ ಪಾಣ್ಡುರಮ್ ।
ಕಿರೀಟಮಾಸನಂ ಶಯ್ಯಾಂ ಭುಞ್ಜನ್ತ್ಯಸ್ಮದುಪೇಕ್ಷಯಾ ॥೨೬॥

ಈ ಯದುವಂಶೀಯವೀರರು ರಾಜಯೋಗ್ಯವಾದ ಚಾಮರಗಳನ್ನೂ, ಬೀಸಣಿಗೆಗಳನ್ನೂ, ಶಂಖವನ್ನೂ, ಶ್ವೇತಚ್ಛತ್ರವನ್ನೂ, ಕಿರೀಟವನ್ನೂ, ರಾಜಸಿಂಹಾಸನವನ್ನೂ, ರಾಜೋಚಿತವಾದ ಹಂಸತೂಲಿಕಾತಲ್ಪವನ್ನೂ ಉಪಭೋಗಿಸುತ್ತಿದ್ದಾರೆ. ಇವರಿಗೆ ರಾಜಯೋಗ್ಯವಾದ ಈ ಭೋಗವಸ್ತು

ಗಳನ್ನು ಉಪಭೋಗಿಸುವ ಅರ್ಹತೆಯಿಲ್ಲದಿದ್ದರೂ ನಾವು ಈ ವಿಷಯದಲ್ಲಿ ಉದಾಸೀನರಾಗಿರುವುದರಿಂದ ಇವರು ಈ ಗೌರವವನ್ನು ಅನುಭವಿಸುತ್ತಿದ್ದಾರೆ.

ಅಲಂ ಯದೂನಾಂ ನರದೇವಲಾಞ್ಛನೈ-
ರ್ದಾತುಃ ಪ್ರತೀಪೈಃ ಫಣಿನಾಮಿವಾಮೃತಮ್ ।
ಯೇಽಸ್ಮತ್ಪ್ರಸಾದೋಪಚಿತಾ ಹಿ ಯಾದವಾ
ಆಜ್ಞಾಪಯನ್ತ್ಯದ್ಯ ಗತತ್ರಪಾ ಬತ ॥೨೮॥

ಇನ್ನು ಮುಂದಾದರೂ ಯದುಗಳಿಗಿರುವ ರಾಜಲಾಂಛನಗಳನ್ನು ತಡೆಹಿಡಿಯೋಣ. ಇಂದು ಆ ರಾಜಲಾಂಛನದ ದುರುಪಯೋಗವೇ ಆಗಿದೆ. ಹಾವುಗಳಿಗೆ ಅಮೃತರೂಪವಾದ ಹಾಲುಕುಡಿಸಿದರೂ ಅವು ವಿಷವನ್ನೇ ಕಾರುವಂತೆ–ರಾಜಲಾಂಛನವನ್ನು ಉಪಯೋಗಿಸಿಕೊಳ್ಳಲು ಅವಕಾಶವನ್ನಿತ್ತ ನಮಗೇ ಯಾದವರಿಂದು ಪ್ರತೀಕಾರಮಾಡುತ್ತಿದ್ದಾರೆ. ನಮ್ಮ ಪರಮಾನುಗ್ರಹದಿಂದಲೇ ಅಭಿವೃದ್ಧಿಯನ್ನು ಸಾಧಿಸಿದ ಅವರು ಈಗ ಯಾವ ವಿಧವಾದ ನಾಚಿಕೆ-ಹೇಸಿಗೆಗಳೂ ಇಲ್ಲದೆ ನಮಗೇ ಆಜ್ಞೆಮಾಡುವ ಮಟ್ಟಕ್ಕೆ ಬಂದಿರುತ್ತಾರೆ. ಆದುದರಿಂದ ಇವರ ರಾಜಲಾಂಛನಗಳನ್ನು ಈಗಲೇ ತೆಗೆದು ಹಾಕೋಣ.

ಕಥಮಿನ್ದ್ರೋಽಪಿ ಕುರುಭಿರ್ಭೀಷ್ಮದ್ರೋಣಾರ್ಜುನಾದಿಭಿಃ ।
ಅದತ್ತಮವರುನ್ಧೀತ ಸಿಂಹಗ್ರಸ್ತಮಿವೋರಣಃ ॥೨೯॥

ಸಿಂಹವು ಹಿಡಿದ ಪ್ರಾಣಿಯನ್ನು ಕುರಿಮರಿಯು ಬಿಡಿಸಿಕೊಂಡು ಹೋಗಲು ಸಾಧ್ಯವಾಗದಲ್ಲವೇ? ಹಾಗೆಯೇ ಭೀಷ್ಮ-ದ್ರೋಣಾರ್ಜುನರೇ ಮೊದಲಾದ ಕೌರವರು ಬಿಟ್ಟುಕೊಡದೇ ಇರುವ ವಸ್ತುವನ್ನು ಇಂದ್ರನಾದರೂ ಹೇಗೆತಾನೇ ಕಿತ್ತುಕೊಂಡುಹೋದಾನು? ಇಂದ್ರನಿಗೇ ಸಾಧ್ಯವಿಲ್ಲವೆಂದ ಮೇಲೆ ಸಾಂಬನನ್ನು ಬಿಡಿಸಿಕೊಂಡು ಹೋಗಲು ಯಾದವರಿಗೆ ಸಾಧ್ಯ ವಾಗುವುದೇ?"

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಕೌರವರು ತಮ್ಮ ಕುಲೀನತೆಯಿಂದ, ತಮಗಿದ್ದ ಮಹಾಶೂರರಾದ ಬಂಧುವರ್ಗದವರಿಂದ, ಬಲದಿಂದ, ಸಂಪತ್ತಿನಿಂದ

ಮದೋದ್ಧತರಾಗಿಬಿಟ್ಟಿದ್ದರು. ಅವರು ಸಾಧಾರಣವಾದ ಶಿಷ್ಟಾಚಾರವನ್ನೂ ಲೆಕ್ಕಿಸದೆ ಅಸಭ್ಯವರ್ತನೆಯಿಂದ ಕೂಡಿದವರಾಗಿ ಬಲರಾಮನೊಡನೆ ಇಂತಹ ಕೆಟ್ಟ-ಕೆಟ್ಟ ಮಾತುಗಳನ್ನಾಡಿ ಹಸ್ತಿನಾಪಟ್ಟಣಕ್ಕೆ ಹೊರಟು ಹೋದರು. ಬಲರಾಮನು ಕೌರವರ ದುಷ್ಟತೆಯನ್ನೂ ಅಶಿಷ್ಟತೆಯನ್ನೂ ನೋಡಿದನು ಮತ್ತು ಅವರಾಡಿದ ಕೆಟ್ಟಮಾತುಗಳನ್ನು ಕೇಳಿದನು. ಅದರಿಂದ ಕೆರಳಿದ ಕೋಪದಿಂದ ಕಿಡಿ-ಕಿಡಿಯಾದ ಅವನನ್ನು ದಿಟ್ಟಿಸಿ ನೋಡಲು ಕೂಡ ಆಗುತ್ತಿರಲಿಲ್ಲ. ಪುನಃ ಪುನಃ ಗಟ್ಟಿಯಾಗಿ ನಗುತ್ತಾ ಆತನು ಹೇಳಿದನು :

ನೂನಂ ನಾನಾಮದೋನ್ನದ್ಧಾಃ ಶಾನ್ತಿಂ ನೇಚ್ಛನ್ತ್ಯಸಾಧವಃ ।
ತೇಷಾಂ ಹಿ ಪ್ರಶಮೋ ದಣ್ಡಃ ಪಶೂನಾಂ ಲಗುಡೋ ಯಥಾ ॥೩೧॥

"ನಿಜ! ಅಸತ್ಪುರುಷರು ಕುಲಮದ, ಧನಮದ, ವೀರ್ಯಮದ–ಇವೇ ಮೊದಲಾದ ಮದಗಳಿಂದ ಕೊಬ್ಬಿದವರಾಗಿ ಶಾಂತಿಯನ್ನು ಅಪೇಕ್ಷಿಸುವುದಿಲ್ಲ. ಪಶುಗಳನ್ನು ಹತೋಟಿಗೆ ತರಲು ದೊಣ್ಣೆಯು ಹೇಗೋ ಹಾಗೆ ಇಂತಹ ದುಷ್ಟರನ್ನು ಹತೋಟಿಗೆ ತರಲು ನಾಲ್ಕನೆಯದಾದ ದಂಡೋಪಾಯವು ಅನಿವಾರ್ಯವಾಗಿದೆ.

ಯದುವೀರರು ಮತ್ತು ಶ್ರೀಕೃಷ್ಣನು ಕೂಡ ಸಾಂಬನ ಬಂಧನಕ್ಕೆ ಖತಿಗೊಂಡು ಯುದ್ಧಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದರು. ನಾನು ಅವರೆಲ್ಲರಿಗೂ ಸಮಾಧಾನವನ್ನು ಹೇಳಿ ಶಾಂತಿಯನ್ನು ಬಯಸಿ ಇಲ್ಲಿಗೆ ಬಂದೆನು. ಆದರೆ ಈ ಕೌರವರು ಶಾಂತಿಪ್ರಿಯರಲ್ಲ. ಮಂದಬುದ್ಧಿಯವರು. ಕಲಹಪ್ರಿಯರು. ನೀಚರು. ದುರಭಿಮಾನಿಗಳು. ನನ್ನನ್ನು ತಿರಸ್ಕರಿಸುತ್ತಾ ಕೆಟ್ಟ-ಕೆಟ್ಟ ಮಾತುಗಳನ್ನೇ ಆಡಿದರು. ಇಂದ್ರನೇ ಮೊದಲಾದ ಲೋಕಪಾಲಕರು ಯಾವನ ಆದೇಶಕ್ಕೆ ತಲೆಬಾಗಿ ಪರಿಪಾಲಿಸುವರೋ ಅಂತಹ ಭೋಜ-ವೃಷ್ಣಿ ಮತ್ತು ಅಂಧಕವಂಶೀಯರಿಗೆ ಈಶ್ವರನಾದ ಉಗ್ರಸೇನನು ರಾಜನಲ್ಲವಂತೆ. ಯಾವನು ಸುಧರ್ಮಾ–ಎಂಬ ದೇವಸಭೆಯನ್ನಾಕ್ರಮಿಸಿ ದೇವತಾವೃಕ್ಷವಾದ ಪಾರಿಜಾತವನ್ನು ಕಿತ್ತು ತಂದು ಅದರ ಫಲವನ್ನಿಲ್ಲಿ ಅನುಭವಿಸುತ್ತಿರುವನೋ ಅಂತಹ ಭಗವಂತನಾದ ಶ್ರೀಕೃಷ್ಣನು ರಾಜಸಿಂಹಾಸನದಲ್ಲಿ ಕುಳಿತುಕೊಳ್ಳಲು ಯೋಗ್ಯನಲ್ಲವಂತೆ. ಸಮಸ್ತಜಗತ್ತಿಗೂ ಒಡೆಯಳಾದ ಭಗವತೀ ಲಕ್ಷ್ಮೀದೇವಿಯೇ ಯಾವನ ಚರಣಕಮಲಗಳ ಉಪಾಸನೆಮಾಡು

ವಳೋ ಅಂತಹ ಲಕ್ಷ್ಮೀಪತಿಯಾದ ಭಗವಾನ್ ಶ್ರೀಕೃಷ್ಣನಿಗೆ ರಾಜೋಚಿತವಾದ ಛತ್ರ-ಚಾಮರಾದಿಗಳು ಸಲ್ಲವಂತೆ. ಇರುವುದನ್ನೂ ತೆಗೆದುಹಾಕುತ್ತಾರಂತೆ. ಯಾವನ ಚರಣಕಮಲಗಳ ಧೂಳಿಯು ಸತ್ಪುರುಷರಿಂದ ಸೇವಿಸಲ್ಪಡುವ ಗಂಗೆಯೇ ಮೊದಲಾದ ತೀರ್ಥಗಳಿಗೂ ತೀರ್ಥರೂಪವಾಗಿರುವುದೋ ಅಂತಹ ಯಾವನ ಪಾದಧೂಳಿಯನ್ನು ಸಮಸ್ತಲೋಕಪಾಲರೂ ತಮ್ಮ-ತಮ್ಮ ಕಿರೀಟಗಳಲ್ಲಿ ಧರಿಸುವರೋ–ನಾನು, ಬ್ರಹ್ಮ, ಶಂಕರ, ಲಕ್ಷ್ಮೀದೇವಿ–ಇವರೇ ಮೊದಲಾದ ವಿಭೂತಿಗಳು ಯಾವನ ಅಂಶಾಂಶ ಸಂಭೂತರಾಗಿರುವೆವೋ ಮತ್ತು ಯಾವನ ಚರಣಕಮಲಗಳ ಧೂಳಿಯನ್ನು ಸದಾ ಶಿರಸ್ಸಿನಲ್ಲಿ ಧರಿಸುವೆವೋ ಅಂತಹ ಶ್ರೀಕೃಷ್ಣನಿಗೆ ಸಿಂಹಾಸನದಲ್ಲಿ ಕುಳಿತುಕೊಳ್ಳುವ ಅರ್ಹತೆಯಿಲ್ಲವಂತೆ. ಎಂತಹ ಸೊಗಸಾದ ಮಾತು!

ಭುಞ್ಜತೇ ಕುರುಭಿರ್ದತ್ತಂ ಭೂಖಣ್ಡಂ ವೃಷ್ಣಯಃ ಕಿಲ ।
ಉಪಾನಹಃ ಕಿಲ ವಯಂ ಸ್ವಯಂ ತು ಕುರವಃ ಶಿರಃ ॥೩೮॥

ಕುರುಗಳಿಂದ ಅನುಗ್ರಹಿಸಿಕೊಡಲ್ಪಟ್ಟ ಭೂಮಿಯ ತುಂಡನ್ನು ವೃಷ್ಣಿಗಳು ಉಪಭೋಗಿಸುತ್ತಿರುವರಂತೆ. ಇದರಿಂದಾಗಿ ನಾವು ಪಾದರಕ್ಷೆಗಳಂತೆ. ಕುರುಗಳು ತಲೆಯ ಮೇಲಿನ ಕಿರೀಟಗಳಂತೆ. ಎಂತಹ ಹೋಲಿಕೆ!

ಅಹೋ ಐಶ್ವರ್ಯಮತ್ತಾನಾಂ ಮತ್ತಾನಾಮಿವ ಮಾನಿನಾಮ್ ।
ಅಸಮ್ಬದ್ಧಾ ಗಿರೋ ರೂಕ್ಷಾಃ ಕಃ ಸಹೇತಾನುಶಾಸಿತಾ ॥೩೯॥

ಐಶ್ವರ್ಯದಿಂದ ಉನ್ಮತ್ತರಾಗಿ ದರ್ಪಿಷ್ಠರಾಗಿರುವ ಈ ಕೌರವರು ಹುಚ್ಚರಂತಾಗಿಬಿಟ್ಟಿದ್ದಾರೆ. ಇವರಿಗೆ ಯಾರೊಡನೆ ಹೇಗೆ ವ್ಯವಹರಿಸಬೇಕೆಂಬ ವಿವೇಚನೆಯೇ ಇಲ್ಲವಾಗಿದೆ. ಅಸಂಬದ್ಧವಾದ ಮತ್ತು ಅತ್ಯಂತ ಕಠೋರವಾದ ಇಂತಹ ಮಾತುಗಳನ್ನು–ದುಷ್ಟರನ್ನು ಶಿಕ್ಷಿಸುವ ಸಾಮರ್ಥ್ಯವುಳ್ಳ ಯಾವನು ತಾನೇ ಸಹಿಸಿಕೊಂಡಾನು? 'ಅದ್ಯ ನಿಷ್ಕೌರವೀಂ ಪೃಥ್ವೀಂ ಕರಿಷ್ಯಾಮಿ' 'ಈಗಲೇ ನಾನು ಭೂಮಂಡಲವನ್ನು ಕೌರವರಿಂದ ರಹಿತವನ್ನಾಗಿ ಮಾಡಿಬಿಡುತ್ತೇನೆ'–ಎಂದೆನ್ನುತ್ತಾ ಅತ್ಯಂತಕ್ರುದ್ಧನಾಗಿದ್ದ ಬಲರಾಮನು ಮೂರು ಲೋಕಗಳನ್ನೂ ಸುಟ್ಟುಬಿಡುವನೋ ಎಂಬಂತೆ ಹಲಾಯುಧವನ್ನು ಹಿಡಿದು ಮೇಲೆದ್ದು ನಿಂತನು. ಬಳಿಕ ಆತನು ನೇಗಿಲ

ತುದಿಯಿಂದ ಹಸ್ತಿನಾಪಟ್ಟಣದ ಮೇಲ್ಭಾಗವನ್ನೇ ಸೀಳಿ ಹಲಾಯುಧವನ್ನು ಆ ಸೀಳಿನಲ್ಲಿ ಸಿಕ್ಕಿಸಿ ಗಂಗಾನದಿಗೆ ಬೀಳಿಸಬೇಕೆಂಬ ಇಚ್ಛೆಯಿಂದ ಬಲವಾಗಿ ಸೆಳೆದನು. ಬಲರಾಮನಿಂದ ಸೆಳೆಯಲ್ಪಟ್ಟು–ಸಾಗರದ ಮಧ್ಯದಲ್ಲಿ ತೇಲಾಡುವ ಹಡಗಿನಂತೆ–ಹಸ್ತಿನಾಪಟ್ಟಣವು ಗಂಗಾನದಿಗೆ ಬೀಳುತ್ತಿರುವುದನ್ನು ಕಂಡು ಕೌರವರೆಲ್ಲರೂ ಗಾಬರಿಗೊಂಡರು. ಇನ್ನೂ ಕೆಲವು ವರ್ಷಗಳು ಜೀವಿಸಿರಲು ಬಯಸಿದ ಕೌರವರು ಕುಟುಂಬಸಮೇತರಾಗಿ ಲಕ್ಷ್ಮಣೆಯಿಂದ ಕೂಡಿದ ಸಾಂಬನನ್ನು ಮುಂದೆಮಾಡಿಕೊಂಡು ಕೈಗಳನ್ನು ಜೋಡಿಸಿಕೊಂಡು ತಾವು ಈ ಹಿಂದೆ ತಿರಸ್ಕಾರದಿಂದ ಕಂಡಿದ್ದ ಪ್ರಭುವಾದ ಬಲರಾಮನಿಗೆ ಶರಣಾದರು.

ರಾಮ ರಾಮಾಖಿಲಾಧಾರ ಪ್ರಭಾವಂ ನ ವಿದಾಮ ತೇ ।
ಮೂಢಾನಾಂ ನಃ ಕುಬುದ್ಧೀನಾಂ ಕ್ಷನ್ತುಮರ್ಹಸ್ಯತಿಕ್ರಮಮ್ ॥೪೪॥

"ಲೋಕಾಭಿರಾಮನಾದ ಬಲರಾಮನೇ! ನೀನು ಸಮಸ್ತಜಗತ್ತಿಗೂ ಆಧಾರಭೂತನಾದ ಶೇಷನೇ ಆಗಿರುವೆ. ನಾವು ನಿನ್ನ ಪ್ರಭಾವವನ್ನು ತಿಳಿದವರಾಗಿರಲಿಲ್ಲ. ನಾವು ನಿಶ್ಚಯವಾಗಿಯೂ ಮೂರ್ಖರು. ಕುತ್ಸಿತವಾದ ಬುದ್ಧಿಯುಳ್ಳವರು. ನಾವು ಮಾಡಿರುವ ಅತಿಕ್ರಮವನ್ನು ದಯಮಾಡಿ ಕ್ಷಮಿಸಿಬಿಡು.

ಸ್ಥಿತ್ಯುತ್ಪತ್ತ್ಯಪ್ಯಯಾನಾಂ ತ್ವಮೇಕೋ ಹೇತುರ್ನಿರಾಶ್ರಯಃ ।
ಲೋಕಾನ್ ಕ್ರೀಡನಕಾನೀಶ ಕ್ರೀಡತಸ್ತೇ ವದನ್ತಿ ಹಿ ॥೪೫॥

ಪ್ರಭುವೇ! ನೀನು ಜಗತ್ತಿನ ಉತ್ಪತ್ತಿ-ಸ್ಥಿತಿ-ಲಯಗಳಿಗೆ ಏಕಮಾತ್ರ ಕಾರಣನಾಗಿರುವೆ. ನೀನು ನಿರಾಧಾರನು. ಲೋಕಗಳನ್ನೇ ಆಟದ ಸಾಮಾನುಗಳನ್ನಾಗಿ ಮಾಡಿಕೊಂಡು ನೀನು ಆಟವಾಡುವೆಯೆಂದು ಜ್ಞಾನಿಗಳಾದ ಋಷಿ-ಮುನಿಗಳು ಹೇಳುತ್ತಾರೆ.

ತಮೇವ ಮೂರ್ಧ್ನೀದಮನನ್ತ ಲೀಲಯಾ
ಭೂಮಣ್ಡಲಂ ಬಿಭರ್ಷಿ ಸಹಸ್ರಮೂರ್ಧನ್ ।
ಅನ್ತೇ ಚ ಯಃ ಸ್ವಾತ್ಮನಿ ರುದ್ಧವಿಶ್ವಃ
ಶೇಷೇಽದ್ವಿತೀಯಃ ಪರಿಶಿಷ್ಯಮಾಣಃ ॥೪೬॥

ಅನಂತನೇ! ನಿನಗೆ ಸಾವಿರ ತಲೆಗಳಿವೆ. ನೀನು ಆಟವಾಡುತ್ತಲೇ ಈ ಅಖಂಡಭೂಮಂಡಲವನ್ನೂ ನಿನ್ನ ತಲೆಗಳ ಮೇಲೆ ಧರಿಸಿರುವೆ. ಪ್ರಳಯಕಾಲವು ಸನ್ನಿಹಿತವಾದಾಗ ಸಮಸ್ತಜಗತ್ತನ್ನೂ ನಿನ್ನಲ್ಲಿಯೇ ಲೀನಗೊಳಿಸಿಕೊಳ್ಳುವೆ. ಆ ಸಮಯದಲ್ಲಿ ಉಳಿದಿರುವ ನೀನೊಬ್ಬನೇ ಅದ್ವಿತೀಯರೂಪದಿಂದ ಪವಡಿಸಿರುವೆ.

ಕೋಪಸ್ತೇಽಖಿಲಶಿಕ್ಷಾರ್ಥಂ ನ ದ್ವೇಷಾನ್ನ ಚ ಮತ್ಸರಾತ್ ।
ಬಿಭ್ರತೋ ಭಗವನ್ಸತ್ತ್ವಂ ಸ್ಥಿತಿಪಾಲನತತ್ಪರಃ ॥೪೭॥

ಪೂಜ್ಯನೇ! ನೀನು ಜಗತ್ತಿನ ಸ್ಥಿತಿ ಮತ್ತು ಪಾಲನೆಗಾಗಿ ಶುದ್ಧ ಸತ್ತ್ವಮಯವಾದ ಶರೀರವನ್ನು ಗ್ರಹಣಮಾಡುವೆ. ದ್ವೇಷ ಅಥವಾ ಮಾತ್ಸರ್ಯದ ಕಾರಣದಿಂದ ನೀನು ಕೋಪಗೊಳ್ಳುವುದಿಲ್ಲ. ನಿನ್ನ ಕೋಪವು ಅಖಿಲಪ್ರಾಣಿಗಳ ಶಿಕ್ಷಣಾರ್ಥವಾಗಿ ವಿನಿಯೋಗಿಸಲ್ಪಡುತ್ತದೆ.

ನಮಸ್ತೇ ಸರ್ವಭೂತಾತ್ಮನ್ಸರ್ವಶಕ್ತಿಧರಾವ್ಯಯ ।
ವಿಶ್ವಕರ್ಮನ್ ನಮಸ್ತೇಽಸ್ತು ತ್ವಾಂ ವಯಂ ಶರಣಂ ಗತಾಃ ॥೪೮॥

ಸಮಸ್ತವಾದ ಶಕ್ತಿಗಳನ್ನೂ ಧರಿಸಿರತಕ್ಕವನೇ! ಸಮಸ್ತಪ್ರಾಣಿಗಳ ಆತ್ಮಸ್ವರೂಪನೇ! ಅವಿನಾಶಿಯೇ! ನಿನಗೆ ನಮಸ್ಕರಿಸುತ್ತೇವೆ. ಸಮಸ್ತವಿಶ್ವವನ್ನೂ ಸೃಷ್ಟಿಸಿರತಕ್ಕವನೇ! ನಿನಗೆ ಪುನಃ ಪುನಃ ನಮಸ್ಕರಿಸುತ್ತೇವೆ. ನಾವು ನಿನಗೆ ಶರಣಾಗತರಾಗಿದ್ದೇವೆ. ನಮ್ಮನ್ನು ರಕ್ಷಿಸು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತನೇ! ಕೌರವರ ಹಸ್ತಿನಾಪುರವು ಗಂಗಾನದಿಗೆ ಬೀಳುವುದರಲ್ಲಿದ್ದಿತು. ಇದರಿಂದ ಕರ್ಣಪ್ರಮುಖರಾದ ಕೌರವರು ನಡುಗಿಹೋಗಿದ್ದರು. ರಕ್ಷಣೆಗಾಗಿ ಬಲರಾಮನನ್ನೇ ನಾನಾಪ್ರಕಾರವಾಗಿ ಸ್ತೋತ್ರಮಾಡುತ್ತಾ ಶರಣುಹೊಂದಿದರು. ಅವರ ಸ್ತೋತ್ರದಿಂದ ಪ್ರಸನ್ನನಾದ ಬಲರಾಮನು 'ಭಯಪಡಬೇಡಿರಿ'–ಎಂದು ಹೇಳುತ್ತಾ ಅವರಿಗೆ ಅಭಯವನ್ನಿತ್ತನು. ಅನಂತರ ಮಗಳನ್ನು ಬಹಳವಾಗಿ ಪ್ರೀತಿಸುತ್ತಿದ್ದ ದುರ್ಯೋಧನನು ಆರು ವರ್ಷಗಳ ವಯಸ್ಸಿನ ಹನ್ನೆರಡು ನೂರು ಆನೆಗಳನ್ನೂ, ಹತ್ತು ಸಾವಿರ ಕುದುರೆಗಳನ್ನೂ, ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ

ಬೆಳಗುತ್ತಿದ್ದ ಆರು ಸಾವಿರ ಚಿನ್ನದ ರಥಗಳನ್ನೂ, ಸುವರ್ಣದ ಹಾರಗಳಿಂದ ಸಮಲಂಕೃತೆಯರಾಗಿದ್ದ ಒಂದು ಸಾವಿರ ದಾಸಿಯರನ್ನೂ ಮಗಳಿಗೆ ಬಳುವಳಿಯಾಗಿ ಕೊಟ್ಟನು. ಯದುವಂಶಶಿರೋಮಣಿಯಾದ ಬಲರಾಮನು ಸಮಸ್ತವಾದ ಆ ಬಳುವಳಿಗಳನ್ನೂ ಸ್ವೀಕರಿಸಿ, ಸುಹೃದರಿಂದ ಅಭಿನಂದಿಸಲ್ಪಟ್ಟವನಾಗಿ, ನವದಂಪತಿಗಳಾದ ಲಕ್ಷ್ಮಣಾ-ಸಾಂಬರೊಡನೆ ದ್ವಾರಕೆಗೆ ಹಿಂದಿರುಗಿದನು.

ಹಲಾಯುಧನು ತನ್ನ ಪಟ್ಟಣವನ್ನು ಸೇರಿದನಂತರ ತನ್ನಲ್ಲಿಯೇ ಅನುರಕ್ತರಾಗಿದ್ದ ಮತ್ತು ಸಮಾಚಾರವನ್ನು ತಿಳಿಯಲು ಉತ್ಸುಕರಾಗಿದ್ದ ಬಂಧುಗಳೊಡನೆ ಸೇರಿ ಯದುಪುಂಗವರ ಸಭಾಮಧ್ಯದಲ್ಲಿ ತಾನು ಕುರುಗಳ ವಿಷಯದಲ್ಲಿ ಹೇಗೆ ವ್ಯವಹರಿಸಿದೆನೆಂಬ ಎಲ್ಲ ಸಮಾಚಾರಗಳನ್ನೂ ಸವಿಸ್ತರವಾಗಿ ಹೇಳಿದನು.

ಅದ್ಯಾಪಿ ಚ ಪುರಂ ಹ್ಯೇತತ್ಸೂಚಯದ್ರಾಮವಿಕ್ರಮಮ್ ।
ಸಮುನ್ನತಂ ದಕ್ಷಿಣತೋ ಗಜಾಗ್ಗಾಯಾಮನುದೃಶ್ಯತೇ ॥೫೪॥

ಪರೀಕ್ಷಿತಮಹಾರಾಜ! ಹಸ್ತಿನಾಪುರವು ಈಗಲೂ ದಕ್ಷಿಣದಿಕ್ಕಿನಲ್ಲಿ ಸ್ವಲ್ಪ ಎತ್ತರವಾಗಿದ್ದು ಗಂಗಾನದಿಯ ಕಡೆಗೆ ಸ್ವಲ್ಪ ವಾಲಿನಿಂತು ಬಲರಾಮನ ಅತುಲಪರಾಕ್ರಮವನ್ನು ಸೂಚಿಸುತ್ತಿದೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದಶಮಸ್ಕಂಧದ ೬೮ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೬೯ನೆಯ ಅಧ್ಯಾಯ

ನಾರದಮಹರ್ಷಿಗಳು ಶ್ರೀಕೃಷ್ಣನ ಗೃಹಸ್ಥ ವ್ಯವಹಾರವನ್ನು ಅವಲೋಕಿಸಿದುದು

ಶ್ರೀಶುಕಮುನಿಗಳು ಹೇಳುತ್ತಾರೆ :

ನರಕಂ ನಿಹತಂ ಶ್ರುತ್ವಾ ತಥೋದ್ವಾಹಂ ಚ ಯೋಷಿತಾಮ್ ।
ಕೃಷ್ಣೇನೈಕೇನ ಬಹ್ವೀನಾಂ ತದ್ದಿದೃಕ್ಷುಃ ಸ್ಮ ನಾರದಃ ॥೧॥

ನರಕಾಸುರನನ್ನು ಸಂಹರಿಸಿದನಂತರ ಶ್ರೀಕೃಷ್ಣನೊಬ್ಬನೇ ನರಕನ

ಅಂತಃಪುರದಲ್ಲಿದ್ದ ಹದಿನಾರುಸಾವಿರ ಕನ್ಯೆಯರನ್ನೂ ವಿಧ್ಯುಕ್ತವಾಗಿ ವಿವಾಹವಾದನೆಂಬ ವಾರ್ತೆಯನ್ನು ಕೇಳಿ, ಅಷ್ಟೊಂದು ಸ್ತ್ರೀಯರೊಡನೆ ಅವನ ಸಂಸಾರವು ಹೇಗೆ ನಡೆಯುತ್ತಿರುವುದೆಂಬುದನ್ನು ನೋಡುವ ಬಯಕೆಯು ನಾರದರಿಗುಂಟಾಯಿತು. ಅವರು ಹೀಗೆ ಯೋಚಿಸಿದರು : 'ಒಬ್ಬನೇ ಒಬ್ಬ ಶ್ರೀಕೃಷ್ಣನು ಒಂದೇ ಮುಹೂರ್ತದಲ್ಲಿ ಹದಿನಾರು ಸಾವಿರ ಕನ್ಯೆಯರನ್ನು ಪ್ರತ್ಯೇಕ-ಪ್ರತ್ಯೇಕವಾಗಿದ್ದ ಅವರವರ ಅರಮನೆಗಳಲ್ಲಿ ಮದುವೆಯಾದನಂತೆ. ಎಂತಹ ಅಚ್ಚರಿಯ ವಿಷಯವಿದು!'

ಹೀಗೆ ಯೋಚಿಸಿದ ನಾರದರು ಶ್ರೀಕೃಷ್ಣನನ್ನೂ ಅವನ ತುಂಬಿದ ಸಂಸಾರವನ್ನೂ ನೋಡುವ ಉತ್ಸುಕತೆಯಿಂದ ದ್ವಾರಕಾಪಟ್ಟಣಕ್ಕೆ ಆಗಮಿಸಿದರು. ದ್ವಾರಕಾಪಟ್ಟಣದ ಉಪವನಗಳು ಮತ್ತು ಉದ್ಯಾನವನಗಳು ಬಣ್ಣ-ಬಣ್ಣದ ಪುಷ್ಪಗಳಿಂದ ಕೂಡಿದ ಮರ-ಗಿಡ-ಬಳ್ಳಿಗಳಿಂದ ಸಮಲಂಕೃತವಾಗಿದ್ದುವು. ಆ ವೃಕ್ಷಗಳಲ್ಲಿ ಹಲವಾರು ಜಾತಿಯ ಪಕ್ಷಿಗಳಿದ್ದು ಕಲ-ಕಲ ನಿನಾದ ಮಾಡುತ್ತಿದ್ದುವು. ವಿಕಸಿತವಾಗಿದ್ದ ಪುಷ್ಪಗಳ ಮೇಲೆ ದುಂಬಿಗಳು ಕುಳಿತು ಝೇಂಕರಿಸುತ್ತಿದ್ದುವು. ಆ ಉದ್ಯಾನವನಗಳಲ್ಲಿ ನಿರ್ಮಲವಾದ ನೀರಿನಿಂದ ಕೂಡಿದ ಸರೋವರಗಳಿದ್ದು ಅವುಗಳಲ್ಲಿ ಕೆಂಪು ಕಮಲ, ಬಿಳಿಯ ಕಮಲ, ನೈದಿಲೆ, ಕನ್ನೈದಿಲೆ ಇವೇ ಮುಂತಾದ ಸುಗಂಧಯುಕ್ತವಾದ ಪುಷ್ಪಗಳಿದ್ದುವು. ಆ ಪುಷ್ಪಗಳ ಮಧ್ಯದಲ್ಲಿ ಹಂಸ-ಕಾರಂಡವ ಇವೇ ಮೊದಲಾದ ಪಕ್ಷಿಗಳು ಕುಳಿತು ಕಲ-ಕಲಧ್ವನಿಮಾಡುತ್ತಿದ್ದುವು. ಆ ಮಹಾನಗರದಲ್ಲಿ ಒಂಬತ್ತು ಲಕ್ಷ ಸೌಧಗಳಿದ್ದು ಎಲ್ಲ ಸೌಧಗಳೂ ಸ್ಫಟಿಕ, ಬೆಳ್ಳಿ, ಮರಕತಮಣಿ, ಚಿನ್ನ, ರತ್ನಗಳಿಂದ ಮಾಡಿದ ಪರಿಕರಗಳಿಂದ ಸಂಪನ್ನವಾಗಿದ್ದುವು. ಸಮವಾಗಿ ವಿಭಾಗಿಸಲ್ಪಟ್ಟ ರಾಜಬೀದಿಗಳಿಂದಲೂ, ಚೌಕಗಳಿಂದಲೂ ಮತ್ತು ಅಂಗಡಿಸಾಲುಗಳಿಂದಲೂ ಆ ಪಟ್ಟಣವು ಶೋಭಾಯಮಾನವಾಗಿ ಕಾಣುತ್ತಿದ್ದಿತು. ಗೋಶಾಲೆ-ಅಶ್ವಶಾಲೆ ಇವೇ ಮುಂತಾದ ಶಾಲೆಗಳಿಂದಲೂ, ಸಭಾಮಂದಿರಗಳಿಂದಲೂ, ಸುಂದರವಾದ ದೇವಾಲಯಗಳಿಂದಲೂ ದ್ವಾರಕಾಪಟ್ಟಣವು ಮಂಡಿತವಾಗಿದ್ದಿತು. ರಾಜಮಾರ್ಗ, ಅಂಗಳ, ಬೀದಿ, ಹೊಸ್ತಿಲುಗಳನ್ನು ಗುಡಿಸಿ ಸಾರಿಸಲಾಗಿದ್ದಿತು. ಎಲ್ಲ ಕಡೆಗಳಲ್ಲಿಯೂ ಹಾರಾಡುತ್ತಿದ್ದ ಧ್ವಜ-ಪತಾಕೆಗಳು ಬಿಸಿಲಿನ ತಾಪವನ್ನು

ತಡೆಯುತ್ತಿದ್ದುವು. ಅಂತಹ ಸುಂದರವಾದ ದ್ವಾರಕಾಪಟ್ಟಣಕ್ಕೆ ನಾರದರು ಆಗಮಿಸಿದರು. ಆ ನಗರದ ಮಧ್ಯಭಾಗದಲ್ಲಿ ಲೋಕಪಾಲರಿಂದಲೂ ಪೂಜಿಸಲ್ಪಡುತ್ತಿದ್ದ, ಅತ್ಯಂತಸುಂದರವಾದ ಶ್ರೀಕೃಷ್ಣನ ಅಂತಃಪುರವಿದ್ದಿತು. ಅದನ್ನು ನಿರ್ಮಿಸಲು ವಿಶ್ವಕರ್ಮನು ತನ್ನ ಸಮಗ್ರವಾದ ಕೌಶಲವನ್ನೂ ವಿನಿಯೋಗಿಸಿದ್ದನು. ಅತ್ಯಂತ ದೊಡ್ಡದಾಗಿದ್ದ ಶ್ರೀಕೃಷ್ಣನ ಆ ಅಂತಃಪುರವು ಹದಿನಾರು ಸಾವಿರ ಉಪಾಂತಃಪುರಗಳಿಂದ ಸಮಲಂಕೃತವಾಗಿದ್ದಿತು. ಶೌರಿಯ ಅಷ್ಟು ಅಂತಃಪುರಗಳಲ್ಲಿ ತುಂಬಾ ದೊಡ್ಡದಾಗಿದ್ದ ಒಂದು ಭವನವನ್ನು ನಾರದರು ಪ್ರವೇಶಿಸಿದರು. ಆ ಅಂತಃಪುರದಲ್ಲಿ ಶ್ರೇಷ್ಠವಾದ ವೈಡೂರ್ಯಬೋದಿಗೆಗಳಿಂದ ಕೂಡಿದ ಹವಳದ ಕಂಬಗಳಿದ್ದುವು. ಗೋಡೆಗಳು ಮತ್ತು ನೆಲವು ಇಂದ್ರನೀಲಮಣಿಮಯವಾಗಿದ್ದು ಥಳ-ಥಳಿಸುತ್ತಿದ್ದುವು. ನೇತಾಡುತ್ತಿದ್ದ ಮುತ್ತಿನಸರಗಳಿಂದ ಸಮಲಂಕೃತ ವಾಗಿದ್ದ ವಿಶ್ವಕರ್ಮನಿರ್ಮಿತವಾದ ಚಪ್ಪರಗಳಿಂದ, ಆ ಭವ್ಯಭವನವು ಶೋಭಾಯಮಾನವಾಗಿ ಕಾಣುತ್ತಿದ್ದಿತು. ಶ್ರೇಷ್ಠವಾದ ಮಣಿಗಳಿಂದಲೂ, ರತ್ನಗಳಿಂದಲೂ ಶೃಂಗರಿಸಲ್ಪಟ್ಟ ದಂತದ ಸಿಂಹಾಸನಗಳಿಂದಲೂ, ಮಂಚ ಗಳಿಂದಲೂ ಆ ಅಂತಃಪುರವು ಸಂಪನ್ನವಾಗಿದ್ದಿತು. ಸುಂದರವಾದ ವಸ್ತ್ರ ಗಳನ್ನುಟ್ಟು ಚಿನ್ನದ ಸರಗಳನ್ನು ಧರಿಸಿದ್ದ ನೂರಾರು ದಾಸಿಯರಿಂದ ಆ ಭವನವು ಸಮಲಂಕೃತವಾಗಿದ್ದಿತು. ಅಂಗಿ-ಪೇಟ-ಸುಂದರವಾದ ಸಮವಸ್ತ್ರ ಮತ್ತು ಮಣಿಕುಂಡಲಗಳನ್ನು ಧರಿಸಿದ್ದ ಸೇವಕರಿಂದಲೂ ಆ ಅಂತಃಪುರವು ಶೋಭಾಯಮಾನವಾಗಿ ಕಾಣುತ್ತಿದ್ದಿತು. ದೀಪಗಳಂತೆಯೇ ಬೆಳಗುತ್ತಿದ್ದ ರತ್ನಗಳ ಪ್ರಭೆಯಿಂದಲೇ ಕತ್ತಲು ಉಡುಗಿಹೋಗಿದ್ದಿತು. ರತ್ನಖಚಿತವಾದ ಮೊಗಸಾಲೆಗಳಲ್ಲಿರುತ್ತಿದ್ದ ನವಿಲುಗಳು ಹೊತ್ತಿಸಿದ್ದ ಅಗುರು-ಧೂಪ ಗಳಿಂದ ಹೊರಬರುತ್ತಿದ್ದ ಹೊಗೆಯನ್ನೇ ಮೇಘವೆಂದು ಭ್ರಮಿಸಿ ಕೇಕೇ ಹಾಕಿಕೊಂಡು ಕುಣಿಯುತ್ತಿದ್ದುವು. ಅಂತಹ ದಿವ್ಯವಾದ ಅಂತಃಪುರದಲ್ಲಿ ರೂಪ-ಗುಣ-ವಯಸ್ಸು-ವೇಷ–ಇವುಗಳಲ್ಲಿ ತನಗೆ ಸಮಾನರಾಗಿದ್ದ ಸಾವಿರಾರು ದಾಸಿಯರೊಡನೆ ಪರಿವೃತಳಾಗಿದ್ದ ರುಕ್ಮಿಣೀದೇವಿಯು ಚಿನ್ನದ ಹಿಡಿಯುಳ್ಳ ಬೀಸಣಿಗೆಯನ್ನು ಹಿಡಿದು ಪರ್ಯಂಕದಲ್ಲಿ ಕುಳಿತಿದ್ದ ಶ್ರೀಕೃಷ್ಣನಿಗೆ ಗಾಳಿಬೀಸುತ್ತಿದ್ದುದನ್ನು ನಾರದರು ನೋಡಿದರು.

ನಾರದಮಹರ್ಷಿಗಳು ತನ್ನ ಅಂತಃಪುರಕ್ಕೆ ಬಂದುದನ್ನು ನೋಡು ತ್ತಲೇ ಸಮಸ್ತಧಾರ್ಮಿಕರಿಗೂ ಮುಕುಟಪ್ರಾಯನಾದ ಶ್ರೀಕೃಷ್ಣನು ಪರ್ಯಂಕದಿಂದ ಮೇಲೆದ್ದು ಮುಂದೆ ಹೋಗಿ ಅವರ ಚರಣಕಮಲಗಳಿಗೆ ಕಿರೀಟದಿಂದ ಯುಕ್ತವಾಗಿದ್ದ ತಲೆಯಿಂದ ನಮಸ್ಕರಿಸಿ ಅವರನ್ನು ತಾನು ಕುಳಿತಿದ್ದ ಪರ್ಯಂಕದಲ್ಲಿಯೇ ಕುಳ್ಳಿರಿಸಿದನು.

ಪರೀಕ್ಷಿತನೇ! ಯಾವನ ಚರಣಕಮಲಗಳಿಂದ ಹುಟ್ಟಿದ ಗಂಗೆಯೇ ಮೂರುಲೋಕಗಳನ್ನೂ ಪಾವನಗೊಳಿಸುವ ತೀರ್ಥವಾಗಿರುವುದೋ, ಯಾವನು ಜಗದ್ಗುರುಗಳೆಲ್ಲರಿಗೂ ಶ್ರೇಷ್ಠತಮನಾಗಿರುವನೋ ಮತ್ತು ಸತ್ಪುರುಷರಿಗೆ ಒಡೆಯನಾಗಿರುವನೋ ಅಂತಹ ಪರಮಧರ್ಮಿಷ್ಠನಾದ ಶ್ರೀಕೃಷ್ಣನು ನಾರದಮಹರ್ಷಿಗಳ ಚರಣಾರವಿಂದಗಳನ್ನು ತೊಳೆದು ಅವರ ಪಾದೋದಕವನ್ನು ತನ್ನ ತಲೆಯ ಮೇಲೆ ಪ್ರೋಕ್ಷಿಸಿಕೊಂಡನು. ಬ್ರಾಹ್ಮಣರಿಗೆ ಹಿತನಾಗಿ ಅವರನ್ನು ದೇವತೆಯಂತೆ ಭಾವಿಸುವ ದೇವನು–'ಬ್ರಹ್ಮಣ್ಯ ದೇವ'–ಎಂಬ ಅವನ ಉಪನಾಮವು ಅವನ ಈ ಗುಣಕ್ಕೆ ಅನುರೂಪ ವಾಗಿಯೇ ಇದೆ.

ಪರೀಕ್ಷಿತನೇ! ಹೀಗೆ ಪುರಾಣಋಷಿಯೂ, ಅರ್ಜುನನ ಮಿತ್ರನೂ, ಸಮದರ್ಶಿಯೂ ಆದ ಶ್ರೀಮನ್ನಾರಾಯಣನು ಯಥಾವಿಧಿಯಾಗಿ ನಾರದ ಮಹರ್ಷಿಗಳನ್ನು ಸತ್ಕರಿಸಿ ಅಮೃತಕ್ಕಿಂತಲೂ ಮಧುರವಾದ ಮತ್ತು ಮಿತವಾದ ಮಾತುಗಳಿಂದ ಅವರನ್ನು ಉಪಚರಿಸಿ ಹೇಳಿದನು : 'ಪ್ರಭೋ ಭಗವತೇ ಕರವಾಮಹೇ ಕಿಮ್' 'ಪ್ರಭುಗಳೇ! ಷಡ್ಗುಣೈಶ್ವರ್ಯ ಸಂಪನ್ನರಾದ ನಿಮಗೆ ನಾವು ಯಾವ ಕಾರ್ಯವನ್ನು ಮಾಡಿಕೊಡೋಣ? ಅಪ್ಪಣೆಯಾಗಲಿ.'

ನಾರದರು ಹೇಳುತ್ತಾರೆ :

ನೈವಾದ್ಭುತಂ ತ್ವಯಿ ವಿಭೋಽಖಿಲಲೋಕನಾಥೇ
ಮೈತ್ರೀ ಜನೇಷು ಸಕಲೇಷು ದಮಃ ಖಲಾನಾಮ್ ।
ನಿಃಶ್ರೇಯಸಾಯ ಹಿ ಜಗತ್ಸ್ಥಿತಿರಕ್ಷಣಾಭ್ಯಾಂ
ಸ್ವೈರಾವತಾರ ಉರುಗಾಯ ವಿದಾಮ ಸುಷ್ಠು ॥೧೭॥

"ಭಗವಂತ! ನೀನು ಸಮಸ್ತಲೋಕಗಳಿಗೂ ಏಕಮಾತ್ರಸ್ವಾಮಿಯಾಗಿರುವೆ. ಭಕ್ತಜನರಲ್ಲಿ ಪ್ರೇಮ, ದುಷ್ಟರಲ್ಲಿ ದಂಡವೆಂಬುದು ನಿನ್ನಲ್ಲಿ ಅದ್ಭುತವಾದ ವಿಷಯವೇನೂ ಅಲ್ಲ. ನಿನ್ನ ಸ್ವಭಾವವೇ ಹಾಗಿದೆ. ನೀನು ಜಗತ್ತಿನ ಸ್ಥಿತಿ ಮತ್ತು ರಕ್ಷಣೆಗಳ ಮೂಲಕವಾಗಿ ಸಮಸ್ತಪ್ರಾಣಿಗಳಿಗೂ ಕಲ್ಯಾಣವನ್ನುಂಟುಮಾಡುವ ಸಲುವಾಗಿಯೇ ಸ್ವೇಚ್ಛೆಯಿಂದ ಈ ಭೂಲೋಕದಲ್ಲಿ ಅವತರಿಸಿರುವೆ. ಉರುಗಾಯನೇ! ಉತ್ತಮಶ್ಲೋಕನೇ! ನಾವು ಈ ವಿಷಯವನ್ನು ಚೆನ್ನಾಗಿ ತಿಳಿದಿರುತ್ತೇವೆ.

ದೃಷ್ಟಂ ತವಾಙ್ಘ್ರಿಯುಗಲಂ ಜನತಾಪವರ್ಗಂ
ಬ್ರಹ್ಮಾದಿಭಿರ್ಹೃದಿ ವಿಚಿನ್ತ್ಯಮಗಾಧಬೋಧೈಃ ।
ಸಂಸಾರಕೂಪಪತಿತೋತ್ತರಣಾವಲಮ್ಬಂ
ಧ್ಯಾಯಂಶ್ಚರಾಮ್ಯನುಗೃಹಾಣ ಯಥಾ ಸ್ಮೃತಿಃ ಸ್ಯಾತ್ ॥

ಭಕ್ತಜನರಿಗೆ ಮುಕ್ತಿಯನ್ನು ಕೊಡಲು ಸಮರ್ಥನಾದ, ಅಧಿಕಾಧಿಕ ಜ್ಞಾನವುಳ್ಳ ಬ್ರಹ್ಮನೇ ಮೊದಲಾದ ದೇವಪ್ರಮುಖರಿಂದಲೂ ಹೃದಯ ಕಮಲಮಧ್ಯದಲ್ಲಿ ಸದಾ ಚಿಂತಿಸಲ್ಪಡುವ, ಸಂಸಾರವೆಂಬ ಕೂಪದಲ್ಲಿ ಬಿದ್ದಿರುವವರನ್ನು ಮೇಲಕ್ಕೆತ್ತಲು ಆಧಾರಭೂತವಾದ ನಿನ್ನ ದಿವ್ಯಚರಣ ಕಮಲಗಳ ಸ್ಮರಣೆಯು ಯಾವಾಗಲೂ ನನ್ನ ಸ್ಮೃತಿಪಥದಲ್ಲಿ ಉಳಿದಿರುವಂತೆಯೂ ಮತ್ತು ನಾನು ಎಲ್ಲಿಯೇ ಇರಲಿ ; ಏನೇ ಮಾಡುತ್ತಿರಲಿ–ಆ ದಿವ್ಯಚರಣಾರವಿಂದಗಳ ಧ್ಯಾನವೇ ಸದಾಕಾಲದಲ್ಲಿಯೂ ಆಗುತ್ತಿರುವಂತೆಯೂ ನನ್ನನ್ನು ಅನುಗ್ರಹಿಸು."

ಪರೀಕ್ಷಿತಮಹಾರಾಜ! ನಾರದರು ರುಕ್ಮಿಣೀಸಮೇತನಾಗಿದ್ದ ಶ್ರೀಕೃಷ್ಣನನ್ನು ಹೀಗೆ ಪ್ರಾರ್ಥಿಸಿ ಅವನಿಂದ ಬೀಳ್ಕೊಟ್ಟವರಾಗಿ ರುಕ್ಮಿಣಿಯ ಅಂತಃಪುರದಿಂದ ಹೊರಟು ಯೋಗೇಶ್ವರನ ಯೋಗಮಾಯೆಯನ್ನು ಮತ್ತೂ ತಿಳಿಯಬೇಕೆಂಬ ಕುತೂಹಲದಿಂದ ಶ್ರೀಕೃಷ್ಣನ ಮತ್ತೊಬ್ಬ ಪ್ರೇಯಸಿಯ ಅಂತಃಪುರಕ್ಕೆ ನುಸುಳಿದರು. ಅವರು ಅಂತಃಪುರವನ್ನು ಪ್ರವೇಶಿಸುವ ಸಮಯಕ್ಕೆ ಸರಿಯಾಗಿ ಶ್ರೀಕೃಷ್ಣನು ಉದ್ಧವನೊಡನೆ ಕುಳಿತು ತನ್ನ ಪ್ರೇಯಸಿಯೊಡನೆ ಪಗಡೆಯಾಡುತ್ತಿದ್ದನು. ಮಹಾಮುನಿಗಳನ್ನು ಕಂಡೊಡನೆಯೇ ಹಿಂದಿನಂತೆಯೇ ಮೇಲೆದ್ದು ನಾರದರ ಚರಣಕಮಲಗಳಿಗೆ

ನಮಸ್ಕರಿಸಿ ತಾನು ಕುಳಿತಿದ್ದ ಆಸನದಲ್ಲಿಯೇ ಕುಳ್ಳಿರಿಸಿ ಕಾಲು ತೊಳೆದು ಪಾದೋದಕವನ್ನು ತಲೆಯಲ್ಲಿ ಧರಿಸಿ, ಯಥಾವಿಧಿಯಾಗಿ ಸತ್ಕರಿಸಿ, ಕೈಜೋಡಿಸಿಕೊಂಡು ಏನೂ ತಿಳಿಯದವನಂತೆ ನಾರದರನ್ನು ಪ್ರಶ್ನಿಸಿದನು :

"ಮಹಾಮುನಿಗಳೇ! ಯಾವಾಗ ತಾವು ದಯಮಾಡಿಸಿದಿರಿ? ನಮ್ಮಿಂದ ಆಗಬೇಕಾದ ಕಾರ್ಯವೇನು?

ಕ್ರಿಯತೇ ಕಿಂ ನು ಪೂರ್ಣಾನಾಮಪೂರ್ಣೈರಸ್ಮದಾದಿಭಿಃ ।
ಅಥಾಪಿ ಬ್ರೂಹಿ ನೋ ಬ್ರಹ್ಮನ್ಜನ್ಮೈತಚ್ಛೋಭನಂ ಕುರು ॥೨೧॥

ಮಹರ್ಷಿಗಳೇ! ಪೂರ್ಣರಾದ ತಮ್ಮಂತಹವರಿಗೆ ಅಪೂರ್ಣರಾದ ನಾವು ಮಾಡತಕ್ಕುದಾದರೂ ಏನಿದೆ? ಆದರೂ ಯಾವ ಕಾರ್ಯವನ್ನು ಮಾಡಿಕೊಡಬೇಕೆಂದು ಅಪ್ಪಣೆಕೊಡಿಸಿರಿ. ತಮ್ಮ ಸೇವೆಗೆ ಅವಕಾಶಮಾಡಿ ಕೊಟ್ಟು ನಮ್ಮ ಜನ್ಮವನ್ನು ಸಾರ್ಥಕಗೊಳಿಸಿರಿ."

ಪರೀಕ್ಷಿತ! ಆಶ್ಚರ್ಯಚಕಿತರಾದ ನಾರದರು ಮೇಲೆದ್ದು ಯಾವ ಮಾತನ್ನೂ ಆಡದೆ ಶ್ರೀಕೃಷ್ಣನ ಮತ್ತೊಂದು ಅಂತಃಪುರಕ್ಕೆ ಹೋದರು. ಅಲ್ಲಿ ಶ್ರೀಕೃಷ್ಣನು ಎಳೆಯ ಮಕ್ಕಳನ್ನು ಆಡಿಸುತ್ತಾ ಕುಳಿತಿರುವುದನ್ನು ನೋಡಿದರು. ಅಲ್ಲಿ ಕ್ಷಣಮಾತ್ರವೂ ನಿಲ್ಲದೆ ಮತ್ತೊಂದು ಅಂತಃಪುರಕ್ಕೆ ಹೋದರು. ಅಲ್ಲಿ ಶ್ರೀಕೃಷ್ಣನು ಸ್ನಾನಕ್ಕೆ ಸಿದ್ಧನಾಗುತ್ತಿದ್ದನು. ಹೀಗೆ ಲೀಲಾಮಾನುಷವಿಗ್ರಹನಾದ ಶ್ರೀಕೃಷ್ಣನು ಒಂದೊಂದು ಅಂತಃಪುರದಲ್ಲಿಯೂ ಪ್ರತ್ಯೇಕ-ಪ್ರತ್ಯೇಕವಾದ ಕಾರ್ಯದಲ್ಲಿ ತೊಡಗಿರುತ್ತಿದ್ದುದನ್ನು ಮಹರ್ಷಿಗಳಾದ ನಾರದರು ನೋಡಿದರು. ಕೆಲವೊಂದು ಮನೆಗಳಲ್ಲಿ ಯಜ್ಞ ಕುಂಡದಲ್ಲಿ ಹೋಮಮಾಡುತ್ತಿರುವ, ಕೆಲವೊಂದು ಮನೆಗಳಲ್ಲಿ ಪಂಚ ಮಹಾಯಜ್ಞಗಳ ಮೂಲಕವಾಗಿ ದೇವತೆಗಳನ್ನು ಆರಾಧಿಸುತ್ತಿರುವ, ಕೆಲವು ಮನೆಗಳಲ್ಲಿ ಬ್ರಾಹ್ಮಣರಿಗೆ ಭೋಜನಮಾಡಿಸುತ್ತಿರುವ, ಮತ್ತೆ ಕೆಲವು ಮನೆ ಗಳಲ್ಲಿ ಯಜ್ಞದ ಅವಶೇಷವನ್ನು ತಾನೇ ಊಟಮಾಡುತ್ತಿರುವ, ಅಚಿಂತ್ಯ ಮಹಿಮನಾದ ಶ್ರೀಕೃಷ್ಣನನ್ನು ನಾರದರು ನೋಡಿದರು. ಕೆಲವು ಅಂತಃಪುರ ಗಳಲ್ಲಿ ಸಂಧ್ಯಾವಂದನೆಯನ್ನು ಮಾಡುತ್ತಿರುವ, ಮತ್ತೆ ಕೆಲವು ಭವನಗಳಲ್ಲಿ ಮೌನವಾಗಿ ಕುಳಿತು ಗಾಯತ್ರೀಜಪಮಾಡುತ್ತಿರುವ, ಕೆಲವು ಮನೆಗಳಲ್ಲಿ

ಕತ್ತಿ-ಗುರಾಣಿಗಳನ್ನು ಹಿಡಿದು ಶಸ್ತ್ರಾಭ್ಯಾಸಮಾಡುತ್ತಿರುವ, ಕೆಲವು ಮನೆಗಳಿಂದ ಆನೆಗಳ ಮೇಲೂ, ಕುದುರೆಗಳ ಮೇಲೂ ಕುಳಿತು ಹೊರಕ್ಕೆ ಹೊರಡುತ್ತಿರುವ, ಕೆಲವು ಮನೆಗಳಿಂದ ರಥದಲ್ಲಿ ಪತ್ನಿಯೊಡನೆ ಕುಳಿತು ಹೊರಡುತ್ತಿರುವ ಗದಾಗ್ರಜನಾದ ಶ್ರೀಕೃಷ್ಣನನ್ನು ಅಚ್ಚರಿಯೆಂಬ ಸಾಗರದಲ್ಲಿ ಮುಳುಗಿಹೋಗಿದ್ದ ನಾರದಮಹರ್ಷಿಗಳು ನೋಡಿದರು. ಕೆಲವು ಅಂತಃಪುರಗಳಲ್ಲಿ ಹಂಸತೂಲಿಕಾತಲ್ಪಗಳಲ್ಲಿ ಮಲಗಿರುತ್ತಿದ್ದ, ಕೆಲವು ಭವನಗಳಲ್ಲಿ ವಂದಿ-ಮಾಗಧರಿಂದ ಸ್ತುತಿಸಲ್ಪಡುತ್ತಿದ್ದ, ಮತ್ತೆ ಕೆಲವು ಅಂತಃಪುರಗಳಲ್ಲಿ ಉದ್ಧವನೇ ಮೊದಲಾದ ಮಂತ್ರಿಗಳೊಡನೆ ಮಂತ್ರಾಲೋಚನೆಮಾಡುತ್ತಿದ್ದ ಮಹಾನುಭಾವನಾದ ಶ್ರೀಕೃಷ್ಣನನ್ನು ನಾರದರು ನೋಡಿದರು. ಕೆಲವು ಅಂತಃಪುರಗಳಲ್ಲಿದ್ದ ಕೃತಕಸರೋವರಗಳಲ್ಲಿ ವಾರಾಂಗನೆಯರೊಡನೆ ಜಲಕ್ರೀಡೆಯನ್ನಾಡುತ್ತಿದ್ದ, ಕೆಲವು ಭವನಗಳಲ್ಲಿ ವಸ್ತ್ರಾಭರಣಗಳಿಂದ ಸಮಲಂಕೃತವಾದ ಗೋವುಗಳನ್ನು ಬ್ರಾಹ್ಮಣಶ್ರೇಷ್ಠರಿಗೆ ದಾನಮಾಡುತ್ತಿದ್ದ, ಮತ್ತೆ ಕೆಲವು ಪತ್ನಿಯರ ಅಂತಃಪುರಗಳಲ್ಲಿ ಮಂಗಳಮಯವಾದ ಇತಿಹಾಸ-ಪುರಾಣಗಳನ್ನು ಕೇಳುತ್ತಿದ್ದ, ಕೆಲವು ಪತ್ನಿಯರ ಅಂತಃಪುರಗಳಲ್ಲಿ ತನ್ನ ಪ್ರೇಯಸಿಯರೊಡನೆ ಹಾಸ್ಯ-ವಿನೋದಗಳ ಕಥೆಗಳನ್ನು ಹೇಳಿಕೊಂಡು ಮತ್ತು ಕೇಳಿಕೊಂಡು ಗಹ-ಗಹಿಸಿ ನಗುತ್ತಿದ್ದ, ಕೆಲವು ಅಂತಃಪುರಗಳಲ್ಲಿ ಧರ್ಮಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ನಿರತನಾಗಿರುತ್ತಿದ್ದ, ಮತ್ತೆ ಕೆಲವು ಅಂತಃಪುರಗಳಲ್ಲಿ ಅರ್ಥಸಂಗ್ರಹದ ವಿಷಯವಾಗಿ ಮಂತ್ರಿಗಳೊಡನೆ ಸಮಾಲೋಚಿಸುತ್ತಿದ್ದ, ಮತ್ತೆ ಕೆಲವು ಪತ್ನಿಯರ ಭವನಗಳಲ್ಲಿ ಕಾಮೋಪಭೋಗಗಳಲ್ಲಿ ಆಸಕ್ತನಾಗಿರುತ್ತಿದ್ದ ಬಹುರೂಪಿಯಾದ ಶ್ರೀಕೃಷ್ಣನನ್ನು ನಾರದಮಹರ್ಷಿಗಳು ನೋಡಿ ಬೆಕ್ಕಸ-ಬೆರಗಾದರು. ಮತ್ತೆ ಕೆಲವು ಅಂತಃಪುರಗಳಲ್ಲಿ ಶ್ರೀಕೃಷ್ಣನು ಏಕಾಂತದಲ್ಲಿ ಕುಳಿತು ಪ್ರಕೃತಿಗೆ ಅತೀತನಾದ ಪರಮಪುರುಷನನ್ನು ಕುರಿತು ಧ್ಯಾನಮಾಡುತ್ತಿದ್ದನು. ಕೆಲವು ಅಂತಃಪುರಗಳಲ್ಲಿ ಗುರುಜನರನ್ನು ಅವರಪೇಕ್ಷಿಸಿದ ಭೋಗಸಾಮಗ್ರಿಗಳಿಂದಲೂ, ಉಪಚಾರಗಳಿಂದಲೂ ಸೇವಿಸುತ್ತಿದ್ದನು. ಕೆಲವು ಅಂತಃಪುರಗಳಲ್ಲಿ ಸೇನಾಪತಿಗಳೊಡನೆ ಕುಳಿತು ಶತ್ರುರಾಜನೊಡನೆ ಯುದ್ಧವನ್ನು ಘೋಷಿಸುವನು. ಮತ್ತೆ ಕೆಲವು ಪತ್ನಿಯರ

ಅಂತಃಪುರಗಳಲ್ಲಿ ಮಂತ್ರಿಗಳೊಡನೆ ಕುಳಿತು ಶತ್ರುರಾಜರೊಡನೆ ಸಂಧಿಯ ಮಾತುಗಳನ್ನು ನಡೆಸುವನು. ಇಂತಹ ಸಾವಿರಾರು ಅವತಾರಗಳಿಂದ ರಾರಾಜಿಸುತ್ತಿದ್ದ ಶ್ರೀಕೃಷ್ಣನನ್ನು ನೋಡಿ ನಾರದರು ಕೃತಕೃತ್ಯನಾದೆನೆಂದು ಭಾವಿಸಿಕೊಂಡರು. ಶ್ರೀಕೃಷ್ಣನು ಕೆಲವು ಅಂತಃಪುರಗಳಲ್ಲಿ ಬಲರಾಮನೊಡನೆ ಕುಳಿತು ಸತ್ಪುರುಷರ ಕಲ್ಯಾಣದ ವಿಷಯವಾಗಿ ಮಂತ್ರಾಲೋಚನೆ ಮಾಡುತ್ತಿದ್ದನು. ಕೆಲವು ಅಂತಃಪುರಗಳಲ್ಲಿ ತನ್ನ ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ವಿವಾಹಯೋಗ್ಯವಾದ ಕಾಲದಲ್ಲಿ ಅವರಿಗೆ ಅನುರೂಪರಾದ ವರರನ್ನೂ, ಕನ್ಯೆಯರನ್ನೂ ಹುಡುಕಿತಂದು ಅವರ ವೈಭವೋಪೇತವಿವಾಹ ಮಹೋತ್ಸವಗಳನ್ನು ವಿಧಿವತ್ತಾಗಿ ನೆರವೇರಿಸುತ್ತಿದ್ದನು. ಮತ್ತೆ ಕೆಲವು ಅಂತಃಪುರಗಳಲ್ಲಿ ಹೆಣ್ಣುಮಕ್ಕಳನ್ನು ಬಳುವಳಿಗಳ ಸಮೇತವಾಗಿ ಅವರ ಗಂಡಂದಿರ ಮನೆಗಳಿಗೆ ಕಳುಹಿಸಿಕೊಡುವುದರಲ್ಲಿ ನಿರತನಾಗಿರುತ್ತಿದ್ದನು. ಮತ್ತೆ ಕೆಲವು ಅಂತಃಪುರಗಳಲ್ಲಿ ನೂತನವಧುಗಳನ್ನು ಮನೆತುಂಬಿಸಿಕೊಳ್ಳುವುದರಲ್ಲಿ ಉತ್ಸುಕನಾಗಿರುತ್ತಿದ್ದನು. ಯೋಗೇಶ್ವರನಾದ ಶ್ರೀಕೃಷ್ಣನ ಇಂತಹ ಹಲವಾರು ಮಹೋತ್ಸವಗಳನ್ನು ನೋಡಿ ಸಮಸ್ತಲೋಕಗಳೂ ವಿಸ್ಮಯಗೊಂಡುವು. ಕೆಲವು ಅಂತಃಪುರಗಳಲ್ಲಿ ಮಹಾ ಮಹಾ ಯಾಗಗಳ ಮೂಲಕವಾಗಿ ದೇವತೆಗಳನ್ನು ಆರಾಧಿಸುತ್ತಿದ್ದನು. ನೀರಿಗೆ ಅಭಾವವಿದ್ದ ಕಡೆಯಲ್ಲಿ ವಾಪೀ-ಕೂಟ-ತಟಾಕಾದಿಗಳನ್ನು ತೋಡಿಸಿ ಇಷ್ಟಾಪೂರ್ತಧರ್ಮಗಳನ್ನು ಸಂಪನ್ನಗೊಳಿಸುತ್ತಿದ್ದನು. ಕೆಲವುವೇಳೆ ಶ್ರೀಕೃಷ್ಣನು ಯದುಶ್ರೇಷ್ಠರೊಡನೆ ಸಿಂಧೂದೇಶದ ಕುದುರೆಗಳ ಮೇಲೆ ಕುಳಿತು ಬೇಟೆಯಾಡಲು ಅರಣ್ಯಕ್ಕೆ ಹೋಗಿ ಯೋಗ್ಯವಾದ ಪಶುಗಳನ್ನು ಸಂಗ್ರಹಿಸುತ್ತಾ ಸಂಚರಿಸುತ್ತಿದ್ದನು. ಕೆಲವು ವೇಳೆ ಅಭಿಪ್ರಾಯಸಂಗ್ರಹಕ್ಕಾಗಿ ವೇಷವನ್ನು ಮರೆಸಿಕೊಂಡು ಅಂತಃಪುರದಲ್ಲಿಯೂ ಮತ್ತು ಪ್ರಜೆಗಳ ಮಧ್ಯದಲ್ಲಿಯೂ ಸಂಚರಿಸುತ್ತಿದ್ದ ಮಹಾಯೋಗಿಯಾದ ಶ್ರೀಕೃಷ್ಣನನ್ನು ನೋಡಿ ನಾರದರು ಮೂಕರಾದರು.

ಪರೀಕ್ಷಿತಮಹಾರಾಜ! ಹೀಗೆ ಮನುಷ್ಯರಂತೆಯೇ ಆಟಗಳನ್ನಾಡು ತ್ತಿದ್ದ ಹೃಷೀಕೇಶನ ಯೋಗಮಾಯೆಯ ವೈಭವವನ್ನು ನೋಡಿದ ನಾರದಮಹರ್ಷಿಗಳು ನಗುತ್ತಾ ಹೇಳಿದರು :

ವಿದಾಮ ಯೋಗಮಾಯಾಸ್ತೇ ದುರ್ದರ್ಶಾ ಅಪಿ ಮಾಯಿನಾಮ್ ।
ಯೋಗೇಶ್ವರಾತ್ಮನ್ ನಿರ್ಭಾತಾ ಭವತ್ಪಾದನಿಷೇವಯಾ ॥೩೮॥

"ಯೋಗೇಶ್ವರರಿಗೂ ಆತ್ಮಸ್ವರೂಪನಾಗಿರತಕ್ಕವನೇ! ಯೋಗೇಶ್ವರನೇ! ಬ್ರಹ್ಮನೇ ಮೊದಲಾದ ಮಹಾ-ಮಹಾಮಾಯಾವಿಗಳಿಗೂ ತಿಳಿಯಲು ಅಸಾಧ್ಯವಾದ, ಮನಸ್ಸಿನಲ್ಲಿ ತೋರುವ ನಿನ್ನ ಯೋಗಮಾಯೆಯನ್ನು ನಿನ್ನ ಚರಣಕಮಲಗಳ ಸೇವೆಯಿಂದಾಗಿ ತಿಳಿದುಕೊಂಡೆವು. ಆದರೆ ನಿನ್ನ ಪರಮಾರ್ಥವನ್ನು ತಿಳಿಯಲಿಲ್ಲ.

ಅನುಜಾನೀಹಿ ಮಾಂ ದೇವ ಲೋಕಾಂಸ್ತೇ ಯಶಸಾಪ್ಲುತಾನ್ ।
ಪರ್ಯಟಾಮಿ ತವೋದ್ಗಾಯನ್ ಲೀಲಾಂ ಭುವನಪಾವನೀಮ್ ॥೩೯॥

ದೇವದೇವನೇ! ನನಗೆ ಹೋಗಲು ಅನುಮತಿಯನ್ನು ದಯಪಾಲಿಸು. ನಿನ್ನ ಯಶಸ್ಸಿನಿಂದ ತುಂಬಿಹೋಗಿರುವ ಮೂರು ಲೋಕಗಳಲ್ಲಿಯೂ ಲೋಕಗಳನ್ನು ಪವಿತ್ರಗೊಳಿಸುವ ನಿನ್ನ ಲೀಲೆಗಳನ್ನು ಹಾಡುತ್ತಾ ಸಂಚರಿಸುತ್ತೇನೆ."

ಶ್ರೀಕೃಷ್ಣನು ಹೇಳುತ್ತಾನೆ :

ಬ್ರಹ್ಮನ್ಧರ್ಮಸ್ಯ ವಕ್ತಾಹಂ ಕರ್ತಾ ತದನುಮೋದಿತಾ ।
ತಚ್ಛಿಕ್ಷಯನ್ಲೋಕಮಿಮಮಾಸ್ಥಿತಃ ಪುತ್ರ ಮಾ ಖಿದಃ ॥೪೦॥

"ಬ್ರಾಹ್ಮಣಶ್ರೇಷ್ಠನೇ! ನಾನು ಧರ್ಮದ ಉಪದೇಶಕನು. ಧರ್ಮದ ಪರಿಪಾಲನೆಮಾಡುವವನು ಮತ್ತು ಧರ್ಮಾನುಷ್ಠಾನವನ್ನು ಅನುಮೋದಿಸುವವನೂ ಆಗಿದ್ದೇನೆ. ಪ್ರಪಂಚಕ್ಕೆ ಧರ್ಮದ ಶಿಕ್ಷಣವನ್ನು ಕೊಡಬೇಕೆನ್ನುವ ಉದ್ದೇಶದಿಂದಲೇ ನಾನು ಶಾಸ್ತ್ರೋಕ್ತವಾದ ಈ ಧರ್ಮಗಳನ್ನು ಆಚರಿಸುತ್ತಿದ್ದೇನೆ. ಆದುದರಿಂದ ಬ್ರಹ್ಮಮಾನಸಪುತ್ರನೇ! ಯಾವ ಕಾರಣದಿಂದಲೂ ನೀನು ದುಃಖಿಸಬೇಡ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಹೀಗೆ ಭಗವಾನ್ ಶ್ರೀಕೃಷ್ಣನು ಗೃಹಸ್ಥಾಶ್ರಮಿಗಳನ್ನು ಪವಿತ್ರಗೊಳಿಸುವ ಶ್ರೇಷ್ಠವಾದ ಧರ್ಮಗಳನ್ನು ಆಚರಿಸುತ್ತಿದ್ದನು. ಆತನು ಒಬ್ಬನೇ ಆಗಿದ್ದರೂ ನಾರದಮಹರ್ಷಿಗಳು ಅವನ

ಪತ್ನಿಯರ ಎಲ್ಲ ಅಂತಃಪುರಗಳಲ್ಲಿಯೂ ಯೋಗೇಶ್ವರನಾದ ಅವನನ್ನು ನೋಡಿದರು. ಅನಂತವೀರ್ಯನಾದ ಶ್ರೀಕೃಷ್ಣನ ಯೋಗಮಾಯೆಯ ವೈಭವ ವನ್ನು ಬಾರಿ-ಬಾರಿಗೂ ನೋಡುತ್ತಾ ಕುತೂಹಲಾವಿಷ್ಟರಾದ ನಾರದರು ಅತ್ಯಂತ ವಿಸ್ಮಿತರಾದರು. ಶ್ರೀಕೃಷ್ಣನು ಸಾಧಾರಣಗೃಹಸ್ಥರಂತೆಯೇ ಧರ್ಮಾರ್ಥ-ಕಾಮಗಳೆಂಬ ಮೂರು ಪುರುಷಾರ್ಥಗಳನ್ನೂ ಅತ್ಯಂತಶ್ರದ್ಧೆ ಯಿಂದ ಅನುಭವಿಸುತ್ತಿದ್ದನು. ಶ್ರೀಕೃಷ್ಣನಿಂದ ಸಮ್ಮಾನಿತರಾದ ನಾರದರು ಸುಪ್ರೀತರಾಗಿ ಶ್ರೀಕೃಷ್ಣನನ್ನೇ ಸ್ಮರಿಸುತ್ತಾ ದ್ವಾರಕಾಪಟ್ಟಣದಿಂದ ಹೊರ ಬಂದರು.

ಪರೀಕ್ಷಿತಮಹಾರಾಜ! ಭಗವಾನ್ ನಾರಾಯಣನು ಅಖಿಲಜಗತ್ತಿಗೂ ಕಲ್ಯಾಣವನ್ನುಂಟುಮಾಡುವ ಸಲುವಾಗಿ ತನ್ನ ಅಚಿಂತ್ಯಮಹಾಶಕ್ತಿಯಾದ ಯೋಗಮಾಯೆಯನ್ನು ಸ್ವೀಕರಿಸಿ ಮನುಷ್ಯನಂತೆ ವರ್ತಿಸುತ್ತಿದ್ದನು. ಹದಿನಾರು ಸಾವಿರಕ್ಕಿಂತಲೂ ಅಧಿಕಸಂಖ್ಯಾತರಾಗಿದ್ದ ಅವನ ಪತ್ನಿಯರು ಲಜ್ಜೆ, ಸೌಹಾರ್ದ, ಕಟಾಕ್ಷವೀಕ್ಷಣೆ, ಮಂದಹಾಸ–ಇವುಗಳ ಮೂಲಕವಾಗಿ ಅವನ ಸೇವೆಯನ್ನು ಅನವರತವಾಗಿ ಮಾಡುತ್ತಿದ್ದರು. ಅಂತಹ ತನ್ನ ಪ್ರೇಯಸಿಯರೊಡನೆ ಶ್ರೀಕೃಷ್ಣನು ಆನಂದದಿಂದ ವಿಹರಿಸುತ್ತಿದ್ದನು.

ಮಹಾರಾಜ! ಭಗವಾನ್ ಶ್ರೀಕೃಷ್ಣನು ಮಾಡಿ ತೋರಿಸಿದ ಲೀಲಾ ವಿನೋದಗಳನ್ನೂ ಸಾಹಸಕಾರ್ಯಗಳನ್ನೂ ಬೇರೆ ಯಾವನೂ ಮಾಡ ಲಾರನು. ಈ ವಿಶ್ವದ ಉತ್ಪತ್ತಿ-ಸ್ಥಿತಿ ಮತ್ತು ಪ್ರಳಯಗಳಿಗೆ ಅವನೇ ಕಾರಣನು. ಯಾವನು ಅವನ ಲೀಲಾಪ್ರಸಂಗಗಳನ್ನು ಗಾನಮಾಡುವನೋ, ಕೇಳುವನೋ ಮತ್ತು ಗಾನಮಾಡಲು ಪ್ರೋತ್ಸಾಹಿಸುವನೋ ಅಂತಹವನು ಮೋಕ್ಷಕ್ಕೆ ಮಾರ್ಗಸ್ವರೂಪನಾದ ಶ್ರೀಕೃಷ್ಣನಲ್ಲಿ ಪರಮಭಕ್ತಿಯುಳ್ಳವನಾಗುವನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೬೯ನೆಯ ಅಧ್ಯಾಯವು ಮುಗಿಯಿತು.

ಶ್ರೀಕೃಷ್ಣನ ನಿತ್ಯಕರ್ಮಗಳು : ಜರಾಸಂಧನ ಬಂದಿಗಳಾಗಿದ್ದ ರಾಜರ ದೂತನ ಆಗಮನ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ :

ಅಥೋಷಸ್ಯುಪವೃತ್ತಾಯಾಂ ಕುಕ್ಕುಟಾನ್ ಕೂಜತೋಽಶಪನ್ ।
ಗೃಹೀತಕಣ್ಠ್ಯಃ ಪತಿಭಿರ್ಮಾಧವ್ಯೋ ವಿರಹಾತುರಾಃ ॥೧॥

ಪರೀಕ್ಷಿತಮಹಾರಾಜ! ಬೆಳಗಾಗಿ ಕೋಳಿಕೂಗುತ್ತಲೇ ಶ್ರೀಕೃಷ್ಣನ ಬಾಹುಗಳೆಂಬ ಲತೆಗಳಿಂದ ಬಳಸಲ್ಪಟ್ಟ ಕಂಠಗಳುಳ್ಳ ಶ್ರೀಕೃಷ್ಣನ ವಲ್ಲಭೆಯರು, ಶ್ರೀಕೃಷ್ಣನು ತಮ್ಮನ್ನು ಬಿಟ್ಟು ಎದ್ದು ಹೋಗಿಬಿಡುವನೆಂಬ ವಿರಹವೇದನೆಯಿಂದ ಎಚ್ಚರಗೊಳಿಸಿದ ಕೋಳಿಗಳನ್ನೇ ಶಪಿಸುತ್ತಿದ್ದರು. ಆ ಸಮಯದಲ್ಲಿ ಪಾರಿಜಾತಪುಷ್ಪದ ಸುಗಂಧದಿಂದ ಸುವಾಸಿತವಾದ ಗಾಳಿಯು ಮಂದ-ಮಂದವಾಗಿ ಬೀಸುತ್ತಿದ್ದಿತು. ದುಂಬಿಗಳು ಝೇಂಕರಿಸುತ್ತಾ ಸುಪ್ರಭಾತವನ್ನು ಹಾಡುತ್ತಿದ್ದುವು. ದುಂಬಿಗಳ ಹಾಡಿನಿಂದ ನಿದ್ರೆಯನ್ನು ಕಳೆದುಕೊಂಡ ಪಕ್ಷಿಗಳು ವಂದಿ-ಮಾಗಧರಂತೆ ಮಧುರಸ್ವರದಿಂದ ಶ್ರೀಕೃಷ್ಣನನ್ನು ಎಚ್ಚರಗೊಳಿಸುತ್ತಿವೆಯೋ ಎಂಬಂತೆ ಚಿಲಿ-ಪಿಲಿಗುಟ್ಟುತ್ತಾ ಧ್ವನಿಮಾಡುತ್ತಿದ್ದುವು. ಪ್ರಿಯತಮನ ಬಾಹುಪಾಶಗಳ ಅಂತರ್ಗತಳಾಗಿದ್ದ ರುಕ್ಮಿಣೀದೇವಿಯು ಆಲಿಂಗನಕ್ಕೆ ವಿಚ್ಛಿತ್ತಿಯುಂಟಾಗುವುದೆಂಬ ಭಯದಿಂದ ಮಂಗಳಕರವಾದ ಬ್ರಾಹ್ಮಮುಹೂರ್ತವು ಬಂದುದನ್ನೇ ಸಹಿಸದೇ ಹೋದಳು.

ಬ್ರಾಹ್ಮೇ ಮುಹೂರ್ತ ಉತ್ಥಾಯ ವಾರ್ಯುಪಸ್ಪೃಶ್ಯ ಮಾಧವಃ ।
ದಧ್ಯೌ ಪ್ರಸನ್ನಕರಣ ಆತ್ಮಾನಂ ತಮಸಃ ಪರಮ್ ॥೨॥

ಭಗವಾನ್ ಶ್ರೀಕೃಷ್ಣನು ತನ್ನ ಪ್ರಿಯತಮೆಯರೆಲ್ಲರಿಗೂ ವಿರಹ ವೇದನೆಯನ್ನುಂಟುಮಾಡುತ್ತಾ ಬ್ರಾಹ್ಮಮೂಹೂರ್ತದಲ್ಲಿಯೇ ಎದ್ದು ಕೈ ಕಾಲುಗಳನ್ನು ತೊಳೆದುಕೊಂಡು ಆಚಮನಮಾಡಿ, ಮಾಯಾತೀತವಾದ ಚಿದಾತ್ಮಸ್ವರೂಪವನ್ನು ಹೃದಯಗುಹೆಯಲ್ಲಿ ಪ್ರಸನ್ನಚಿತ್ತನಾಗಿ ಧ್ಯಾನಿಸು

ತ್ತಿದ್ದನು. ಆ ಸಮಯದಲ್ಲಿ ಅವನ ಕರಣ-ಕಳೇಬರಗಳೆಲ್ಲವೂ ಆನಂದದಿಂದ ಪ್ರಸನ್ನವಾಗಿರುತ್ತಿದ್ದುವು.

ಏಕಂ ಸ್ವಯಂಜ್ಯೋತಿರನನ್ಯಮವ್ಯಯಂ
ಸ್ವಸಂಸ್ಥಯಾ ನಿತ್ಯನಿರಸ್ತಕಲ್ಮಷಮ್ ।
ಬ್ರಹ್ಮಾಖ್ಯಮಸ್ಯೋದ್ಭವನಾಶಹೇತುಭಿಃ
ಸ್ವಶಕ್ತಿಭಿರ್ಲಕ್ಷಿತಭಾವನಿರ್ವೃತಿಮ್ ॥೫॥

ಪರೀಕ್ಷಿತಮಹಾರಾಜ! ಭಗವಂತನ ಆ ಆತ್ಮಸ್ವರೂಪವು ಅದ್ವಿತೀಯವೂ, ಅಖಂಡವೂ, ಅವಿನಾಶಿಯೂ ಆದ ಸತ್ಯಸ್ವರೂಪವಾಗಿದೆ. ಚಂದ್ರ-ಸೂರ್ಯರು ನೇತ್ರೇಂದ್ರಿಯದ ಮೂಲಕವಾಗಿಯೂ ನೇತ್ರೇಂದ್ರಿಯವು ಚಂದ್ರ-ಸೂರ್ಯರ ಮೂಲಕವಾಗಿಯೂ ಪ್ರಕಾಶಗೊಳ್ಳುವಂತೆ ಆತ್ಮಸ್ವರೂಪವು ಇತರರಿಂದ ಪ್ರಕಾಶಿಸಲ್ಪಡುವುದಿಲ್ಲ. ಸ್ವಯಂಪ್ರಕಾಶವುಳ್ಳದ್ದು. ಅದು ಸ್ವಸ್ವರೂಪದಲ್ಲಿ ಸದಾ-ಸರ್ವದಾ ಕಾಲದ ಎಲ್ಲೆಯನ್ನೂ ಮೀರಿ ಏಕರಸವಾಗಿರುವುದರಿಂದ ಅವಿದ್ಯೆಯು ಅದನ್ನು ಸ್ಪರ್ಶಿಸಲು ಕೂಡ ಸಮರ್ಥವಾಗುವುದಿಲ್ಲ. ಜಗತ್ತಿನ ಉತ್ಪತ್ತಿ-ಸ್ಥಿತಿ ಮತ್ತು ನಾಶಕ್ಕೆ ಕಾರಣಭೂತವಾದ ಬ್ರಹ್ಮಶಕ್ತಿ, ವಿಷ್ಣುಶಕ್ತಿ ಮತ್ತು ರುದ್ರಶಕ್ತಿಗಳ ಮೂಲಕವಾಗಿ ಆ ಆತ್ಮಸ್ವರೂಪವು ಏಕರಸಸತ್ತ್ವರೂಪವಾಗಿ ಆನಂದಸ್ವರೂಪವಾಗಿರುವುದೆಂದು ಊಹಿಸಬಹುದಾಗಿದೆ. ಅದನ್ನು ತಿಳಿಯುವ ಸಲುವಾಗಿಯೇ ಆತ್ಮಸ್ವರೂಪವು 'ಬ್ರಹ್ಮ'–ಎಂಬ ಶಬ್ದದಿಂದ ಕರೆಯಲ್ಪಡುತ್ತದೆ. ಭಗವಾನ್ ಶ್ರೀಕೃಷ್ಣನು ಇಂತಹ ತನ್ನ ಆತ್ಮಸ್ವರೂಪವನ್ನೇ ಅನುದಿನವೂ ಬ್ರಾಹ್ಮಮುಹೂರ್ತದಲ್ಲಿ ಧ್ಯಾನಿಸುತ್ತಿದ್ದನು. ಧ್ಯಾನಕಾರ್ಯವು ಮುಗಿದನಂತರ ಶ್ರೀಕೃಷ್ಣನು ನಿರ್ಮಲವಾದ ಮತ್ತು ಪವಿತ್ರವಾದ ನೀರಿನಲ್ಲಿ ಸ್ನಾನಮಾಡುತ್ತಿದ್ದನು. ಬಳಿಕ ಧೋತ್ರವನ್ನುಟ್ಟು ಉತ್ತರೀಯವನ್ನು ಹೊದೆದುಕೊಂಡು ಸಂಧ್ಯಾ ವಂದನೆಯೇ ಮೊದಲಾದ ನಿತ್ಯಕರ್ಮಗಳನ್ನು ಮಾಡುತ್ತಿದ್ದನು. ಬಳಿಕ ಅಗ್ನಿಹೋತ್ರಾದಿಗಳಿಂದ ಯಜ್ಞೇಶ್ವರನನ್ನು ತೃಪ್ತಿಗೊಳಿಸಿ ಮೌನದಿಂದ ಗಾಯತ್ರೀಜಪವನ್ನು ಮಾಡುತ್ತಿದ್ದನು. ಬಳಿಕ ಸೂರ್ಯನು ಉದಯಿಸುವ ವೇಳೆಗೆ ಸರಿಯಾಗಿ ಸೂರ್ಯೋಪಸ್ಥಾನವನ್ನು ಮಾಡಿ ತನ್ನ ಕಲಾಸ್ವರೂಪ

ರಾದ ದೇವರ್ಷಿ-ಪಿತೃಗಳನ್ನು ಕುರಿತು ಬ್ರಹ್ಮಯಜ್ಞತರ್ಪಣವನ್ನು ಕೊಡುತ್ತಿದ್ದನು. ಬಳಿಕ ಕುಲವೃದ್ಧರನ್ನೂ ಬ್ರಾಹ್ಮಣರನ್ನೂ ಯಥಾವಿಧಿಯಾಗಿ ಪೂಜಿಸಿ ಸತ್ಕರಿಸುತ್ತಿದ್ದನು. ಅನಂತರ ಮನನಶೀಲನಾದ ಶ್ರೀಕೃಷ್ಣನು ಬಹುಸಂಖ್ಯೆಯ ಗೋವುಗಳನ್ನು ಪ್ರತಿನಿತ್ಯವೂ ಶ್ರೇಷ್ಠರಾದ ಬ್ರಾಹ್ಮಣರಿಗೆ ದಾನಮಾಡುತ್ತಿದ್ದನು. ಆ ಗೋವುಗಳ ಕೋಡುಗಳು ಚಿನ್ನದ ತಗಡಿನಿಂದ ಅಲಂಕೃತವಾಗಿರುತ್ತಿದ್ದುವು. ಅವು ಸಾಧುಸ್ವಭಾವದವುಗಳಾಗಿರುತ್ತಿದ್ದುವು. ಮುತ್ತಿನ ಹಾರಗಳಿಂದ ಸಮಲಂಕೃತವಾಗಿರುತ್ತಿದ್ದುವು. ಚೊಚ್ಚಿಲಹಸುಗಳಾಗಿದ್ದು ಕರುಗಳಿಂದ ಕೂಡಿ ಹಾಲುಕರೆಯುತ್ತಿದ್ದುವು. ಅವುಗಳು ಸುಂದರವಾದ ವಸ್ತ್ರಗಳಿಂದ ಅಲಂಕೃತವಾಗಿರುತ್ತಿದ್ದುವು. ಅವುಗಳ ಗೊರಸುಗಳ ಅಗ್ರಭಾಗದಲ್ಲಿ ಬೆಳ್ಳಿಯ ಕವಚವಿರುತ್ತಿದ್ದಿತು. ಅಂತಹ ಶ್ರೇಷ್ಠವಾದ ಗೋವುಗಳನ್ನು ಗಂಧ-ಪುಷ್ಪಾದಿಗಳಿಂದ ಸಮಲಂಕೃತರಾದ ಬ್ರಾಹ್ಮಣರಿಗೆ ರೇಷ್ಮೆವಸ್ತ್ರ, ಕೃಷ್ಣಾಜಿನಗಳನ್ನು ಎಳ್ಳಿನ ಸಮೇತವಾಗಿ ಶ್ರೀಕೃಷ್ಣನು ಅನುದಿನವೂ ದಾನಮಾಡುತ್ತಿದ್ದನು. ಬಳಿಕ ಶ್ರೀಕೃಷ್ಣನು ತನ್ನ ವಿಭೂತಿರೂಪಗಳಾದ ಗೋವುಗಳನ್ನೂ, ಬ್ರಾಹ್ಮಣರನ್ನೂ, ದೇವತಾ ವಿಗ್ರಹಗಳನ್ನೂ, ಕುಲವೃದ್ಧರನ್ನೂ, ಗುರುಜನರನ್ನೂ, ಸಮಸ್ತಪ್ರಾಣಿಗಳನ್ನೂ ಅಭಿವಂದಿಸಿ ಪೂರ್ಣಕುಂಭವೇ ಮೊದಲಾದ ಮಂಗಳವಸ್ತುಗಳನ್ನು ಮುಟ್ಟುತ್ತಿದ್ದನು. ಅನಂತರ ಶ್ರೀಕೃಷ್ಣನು ಭೂಲೋಕಕ್ಕೆ ಅಲಂಕಾರಪ್ರಾಯವಾಗಿದ್ದ ತನ್ನ ಶರೀರವನ್ನು ಪೀತಾಂಬರವೇ ಮೊದಲಾದ ದಿವ್ಯವಸ್ತ್ರಗಳಿಂದಲೂ, ಕೌಸ್ತುಭವೇ ಮೊದಲಾದ ಆಭರಣಗಳಿಂದಲೂ, ದಿವ್ಯಪುಷ್ಪಗಳ ಹಾರಗಳಿಂದಲೂ, ಚಂದನವೇ ಮೊದಲಾದ ದಿವ್ಯವಾದ ಅಂಗರಾಗಗಳಿಂದಲೂ ಅಲಂಕರಿಸಿಕೊಳ್ಳುತ್ತಿದ್ದನು. ಬಳಿಕ ಆತನು ತುಪ್ಪದಲ್ಲಿಯೂ ಸ್ವಚ್ಛವಾದ ಕನ್ನಡಿಯಲ್ಲಿಯೂ ತನ್ನ ಮುಖಾರವಿಂದವನ್ನು ನೋಡಿಕೊಳ್ಳುತ್ತಿದ್ದನು. ಬಳಿಕ ಎತ್ತು-ಹಸುಗಳನ್ನೂ, ದೇವ-ಬ್ರಾಹ್ಮಣರನ್ನೂ ಸಂದರ್ಶಿಸುತ್ತಿದ್ದನು. ಪಟ್ಟಣದಲ್ಲಿ ವಾಸಮಾಡುತ್ತಿದ್ದ ಮತ್ತು ಅಂತಃಪುರದಲ್ಲಿರುತ್ತಿದ್ದ ನಾಲ್ಕು ವರ್ಣದವರಿಗೂ ಅವರವರಿಗೆ ಬೇಕಾದುದೆಲ್ಲವನ್ನೂ ಕೊಡುತ್ತಿದ್ದನು. ಗ್ರಾಮವಾಸಿಗಳ ಆಸೆ-ಆಕಾಂಕ್ಷೆಗಳನ್ನೂ ಪೂರ್ಣಗೊಳಿಸಿ ಅವರನ್ನು ತೃಪ್ತಿಪಡಿಸಿ ಅವರೆಲ್ಲರೂ ಆನಂದತುಂದಿಲ

ರಾಗಿರುವುದನ್ನು ಕಂಡು ತಾನೂ ಆನಂದಪಡುತ್ತಿದ್ದನು. ಪುಷ್ಪಮಾಲೆ-ತಾಂಬೂಲ-ಚಂದನ-ಅಂಗರಾಗ ಇವೇ ಮುಂತಾದ ವಸ್ತುಗಳನ್ನು ಮೊದಲು ಬ್ರಾಹ್ಮಣರಿಗೂ, ಸುಹೃದರಿಗೂ, ಮಂತ್ರಿಗಳಿಗೂ, ಪತ್ನಿಯರಿಗೂ ಹಂಚಿ ಕೊಟ್ಟು ಅನಂತರ ಉಳಿದುದನ್ನು ತಾನೂ ಉಪಭೋಗಿಸುತ್ತಿದ್ದನು.

ಭಗವಂತನಾದ ಶ್ರೀಕೃಷ್ಣನು ಇಷ್ಟು ಕಾರ್ಯಗಳನ್ನೂ ಮಾಡಿ ಮುಗಿಸುವ ವೇಳೆಗೆ ಸರಿಯಾಗಿ ಶ್ರೀಕೃಷ್ಣನ ಸಾರಥಿಯಾದ ದಾರುಕನು ಶೈಬ್ಯ-ಸುಗ್ರೀವಾದಿ ಕುದುರೆಗಳಿಂದ ಕೂಡಿದ ಪರಮಾದ್ಭುತವಾದ ರಥವನ್ನು ತಂದು ಶ್ರೀಕೃಷ್ಣನ ಅರಮನೆಯ ಮುಂದೆ ನಿಲ್ಲಿಸಿ, ಶ್ರೀಕೃಷ್ಣನಿಗೆ ಪ್ರಣಾಮ ಮಾಡಿ ರಥವು ಸಿದ್ಧವಾಗಿದೆಯೆಂದು ನಿವೇದಿಸಿಕೊಳ್ಳುವನು. ಪ್ರಾತಃಕಾಲವಾಗುತ್ತಲೇ ಸೂರ್ಯನು ಉದಯಾಚಲದ ಆರೋಹಣಮಾಡುವಂತೆ ಶ್ರೀಕೃಷ್ಣನು ಸಾರಥಿಯಾದ ದಾರುಕನ ಕೈಗಳನ್ನು ಹಿಡಿದು ರಥಾರೋಹಣ ಮಾಡುವನು. ಅವನನ್ನು ಅನುಸರಿಸಿ ಸಾತ್ಯಕಿ-ಉದ್ಧವರೂ ರಥಾರೋಹಣ ಮಾಡುವರು. ಆ ಸಮಯದಲ್ಲಿ ಅಂತಃಪುರದ ಸ್ತ್ರೀಯರು ನಾಚಿಕೆಯಿಂದಲೂ ಮತ್ತು ಪ್ರೇಮದಿಂದಲೂ ಕೂಡಿದ ಕಡೆಗಣ್ಣಿನ ನೋಟದಿಂದ ಪ್ರಿಯತಮನಾದ ಶ್ರೀಕೃಷ್ಣನನ್ನು ನೋಡುವರು ಮತ್ತು ಬಹಳ ಕಷ್ಟದಿಂದ ಅವನನ್ನು ಬೀಳ್ಕೊಡುವರು. ಭಗವಂತನು ಸಿರಿನಗುವಿನಿಂದ ಅವರ ಮನಸ್ಸುಗಳನ್ನು ಅಪಹರಿಸುತ್ತಾ ಅರಮನೆಯಿಂದ ನಿರ್ಗಮಿಸುವನು.

ಅನಂತರ ಶ್ರೀಕೃಷ್ಣನು ಸಮಸ್ತಯಾದವರಿಂದಲೂ ಪರಿವೃತನಾಗಿ ಸುಧರ್ಮಾ–ಎಂಬ ಸಭಾಮಂದಿರವನ್ನು ಪ್ರವೇಶಿಸುವನು. ಪರೀಕ್ಷಿತಮಹಾರಾಜ! ಆ ಸಭಾಮಂದಿರವು ಅತ್ಯಂತ ಮಹಿಮೆಯುಳ್ಳದ್ದು. ಅದರಲ್ಲಿ ಕುಳಿತಿರುವವರನ್ನು ಹಸಿವು-ಬಾಯಾರಿಕೆ, ಶೋಕ-ಮೋಹ, ಜರಾ-ಮರಣಗಳೆಂಬ ಆರು ಅಲೆಗಳು ಬಾಧೆಪಡಿಸುವುದಿಲ್ಲ. ತನ್ನ ಕಾಂತಿಯಿಂದ ಹತ್ತು ದಿಕ್ಕುಗಳನ್ನೂ ಬೆಳಗುತ್ತಾ ಶ್ರೇಷ್ಠವಾದ ಸಿಂಹಾಸನದಲ್ಲಿ ನರಶ್ರೇಷ್ಠರಾದ ಯದುವಂಶೀಯರ ಮಧ್ಯದಲ್ಲಿ ಕುಳಿತುಕೊಳ್ಳುವ ಯದುಶ್ರೇಷ್ಠನಾದ ಶ್ರೀಕೃಷ್ಣನು ಆಕಾಶದಲ್ಲಿ ನಕ್ಷತ್ರಗಳ ಸಮೂಹದಿಂದ ಪರಿವೃತನಾಗಿ ಬೆಳಗುವ ಚಂದ್ರನಂತೆಯೇ ಕಾಣುವನು. ಆ ಮಹಾಸಭೆಯಲ್ಲಿ ಉಪಸ್ಥಿತರಾಗಿರುವ

ವಿದೂಷಕರು ಹಾಸ್ಯಪ್ರಹಸನಗಳಿಂದಲೂ, ನಾಟ್ಯಾಚಾರ್ಯರು ಅಭಿನಯ ಗಳಿಂದಲೂ, ನರ್ತಕಿಯರು ಕಲಾಪೂರ್ಣವಾದ ನರ್ತನಗಳಿಂದಲೂ ಪ್ರತ್ಯೇಕ-ಪ್ರತ್ಯೇಕವಾಗಿ ಶ್ರೀಕೃಷ್ಣನನ್ನು ಸೇವಿಸುವರು. ಆ ಸಮಯದಲ್ಲಿ ಮೃದಂಗ, ವೀಣೆ, ಮುರಜ, ಕೊಳಲು, ತಾಳ ಮತ್ತು ಶಂಖ–ಇವೇ ಮುಂತಾದ ವಾದ್ಯಗಳೊಡನೆ ಸೂತ-ಮಾಗಧ-ವಂದಿಗಳು ಹಾಡುತ್ತಾ ಕುಣಿ ಯುತ್ತಾ ಭಗವಂತನನ್ನು ಸ್ತುತಿಸುವರು. ಆ ಸಭೆಯಲ್ಲಿದ್ದ ಕೆಲವು ವ್ಯಾಖ್ಯಾನ ಕುಶಲರಾದ ಬ್ರಾಹ್ಮಣರು ಬ್ರಹ್ಮತತ್ತ್ವವನ್ನು ಪ್ರತಿಪಾದಿಸುವರು. ಮತ್ತೆ ಕೆಲವರು ಪೂರ್ವಕಾಲದ ಪವಿತ್ರಕೀರ್ತಿಗಳಾದ ರಾಜರ ಕಥೆಗಳನ್ನು ಹೇಳುವರು. ಹೀಗೆಯೇ ಶ್ರೀಕೃಷ್ಣನ ದಿನಚರ್ಯೆಯು ಅನುದಿನವೂ ಸಾಗುತ್ತಿದ್ದಿತು.

ಹೀಗೆಯೇ ಒಂದು ದಿನ ಭಗವಂತನಾದ ಶ್ರೀಕೃಷ್ಣನು ಸುಧರ್ಮಾ ಎಂಬ ಸಭಾಮಂದಿರದಲ್ಲಿ ಸಿಂಹಾಸನಾರೂಢನಾಗಿ ಕುಳಿತಿದ್ದಾಗ ಸಭಾ ಮಂದಿರದ ಮಹಾದ್ವಾರದ ಬಳಿಗೆ ಅಪರಿಚಿತನಾದೊಬ್ಬ ಮನುಷ್ಯನು ಆಗಮಿಸಿದನು. ದ್ವಾರಪಾಲಕನು ಆ ಮನುಷ್ಯನ ಆಗಮನವನ್ನು ಶ್ರೀಕೃಷ್ಣನಿಗೆ ನಿವೇದಿಸಿ, ಆತನ ಅನುಮತಿಯನ್ನು ಪಡೆದು ಆ ಮನುಷ್ಯನನ್ನು ಶ್ರೀಕೃಷ್ಣನ ಬಳಿಗೆ ಕಳುಹಿಸಿಕೊಟ್ಟನು. ಸಭಾಭವನವನ್ನು ಪ್ರವೇಶಿಸುತ್ತಲೇ ಆ ಮನುಷ್ಯನು ಪರೇಶನಾದ ಶ್ರೀಕೃಷ್ಣನಿಗೆ ಕೈಜೋಡಿಸಿಕೊಂಡು ನಮಸ್ಕರಿಸಿ ಜರಾಸಂಧನಿಂದ ಸೆರೆಹಿಡಿಯಲ್ಪಟ್ಟ ರಾಜರಿಗೆ ಉಂಟಾಗಿರುವ ದುಃಖವನ್ನು ವಿವರಿಸಿ ಹೇಳಿದನು. ಜರಾಸಂಧನು ದಿಗ್ವಿಜಯದ ಸಮಯದಲ್ಲಿ ಆತನಿಗೆ ತಲೆಬಾಗದಿದ್ದ ರಾಜರನ್ನು ಯುದ್ಧದಲ್ಲಿ ಪರಾಜಯಗೊಳಿಸಿ ಬಲಾತ್ಕಾರವಾಗಿ ಅವರನ್ನು ಸೆರೆಹಿಡಿದು ಗಿರಿವ್ರಜದ ಸೆರೆಮನೆಯಲ್ಲಿಡುತ್ತಿದ್ದನು. ಅಂತಹವರ ಸಂಖ್ಯೆಯು ಇಪ್ಪತ್ತು ಸಾವಿರವಿದ್ದಿತು.

ಅಂತಹ ರಾಜರೆಲ್ಲರೂ ಸೇರಿ ತಮ್ಮ ಪ್ರಾರ್ಥನೆಯನ್ನು ದೂತನ ಮೂಲಕವಾಗಿ ಶ್ರೀಕೃಷ್ಣನಿಗೆ ಕಳುಹಿಸಿದ್ದರು :

ಕೃಷ್ಣ ಕೃಷ್ಣಾಪ್ರಮೇಯಾತ್ಮನ್ ಪ್ರಪನ್ನಭಯಭಞ್ಜನ ।
ವಯಂ ತ್ವಾಂ ಶರಣಂ ಯಾಮೋ ಭವಭೀತಾಃ ಪೃಥಗ್ಧಿಯಃ ॥೨೫॥

"ಕೃಷ್ಣ! ಕೃಷ್ಣ! ಅಪ್ರಮೇಯಾತ್ಮನೇ! ಶರಣಾಗತರಾದವರ ಭಯ

ವನ್ನು ಧ್ವಂಸಮಾಡುವವನೇ! ನಮ್ಮ ಭೇದಬುದ್ಧಿಯು ಹೋಗಿಲ್ಲ. ತಾದಾತ್ಮ್ಯವನ್ನು ಹೊಂದಿಲ್ಲ. ಆದುದರಿಂದಲೇ ನಾವು ಸಂಸಾರಚಕ್ರದಲ್ಲಿ ಸಿಕ್ಕಿ ಭಯಗೊಂಡಿದ್ದೇವೆ. ಈಗ ನಾವು ನಿನಗೆ ಶರಣಾಗತರಾಗಿದ್ದೇವೆ. ನಮ್ಮನ್ನು ರಕ್ಷಿಸು.

ಲೋಕೋ ವಿಕರ್ಮನಿರತಃ ಕುಶಲೇ ಪ್ರಮತ್ತಃ
ಕರ್ಮಣ್ಯಯಂ ತ್ವದುದಿತೇ ಭವದರ್ಚನೇ ಸ್ವೇ ।
ಯಸ್ತಾವದಸ್ಯ ಬಲವಾನಿಹ ಜೀವಿತಾಶಾಂ
ಸದ್ಯಶ್ಛಿನತ್ತ್ಯನಿಮಿಷಾಯ ನಮೋಽಸ್ತು ತಸ್ಮೈ ॥೨೬॥

ಭಗವಂತ! ಲೋಕದಲ್ಲಿ ಅಧಿಕಾಂಶ ಜನರು ಸಕಾಮಕರ್ಮಗಳಲ್ಲಿ ಮತ್ತು ನಿಷಿದ್ಧಕರ್ಮಗಳಲ್ಲಿ ತೊಡಗಿದ್ದು ಕ್ಷೇಮಕರವಾದ ಸ್ವಧರ್ಮಗಳಲ್ಲಿ ವಿಸ್ಮರಣೆಯನ್ನು ಹೊಂದಿದವರಾಗಿರುತ್ತಾರೆ. ಪಾಂಚರಾತ್ರಾದ್ಯಾಗಮಗಳಲ್ಲಿ ನಿನ್ನಿಂದಲೇ ಸಾಕ್ಷಾತ್ತಾಗಿ ಹೇಳಲ್ಪಟ್ಟಿರುವ ನಿನ್ನ ಪೂಜಾದ್ಯುಪಚಾರಗಳನ್ನು ಮಾಡುವ ಮನಸ್ಸುಳ್ಳವರಾಗಿರುವುದಿಲ್ಲ. ಆದರೆ ನೀನು ಮಹಾಬಲಿಷ್ಠನು. ನೀನು ಕಾಲರೂಪನಾಗಿ ಸದಾ ಸರ್ವದಾ ಸಾವಧಾನದಿಂದಿರುತ್ತಾ ಅಂತಹ ಕುಕರ್ಮಜೀವಿಗಳಾದ ಮನುಷ್ಯರ ಆಶಾಲತೆಯನ್ನು ಕ್ಷಣಮಾತ್ರದಲ್ಲಿ ಕತ್ತರಿಸಿಹಾಕುವೆ. ಅಂತಹ ಕಾಲರೂಪನಾದ ನಿನಗೆ ನಮಸ್ಕರಿಸುತ್ತೇವೆ.

ಲೋಕೇ ಭವಾನ್ಜಗದಿನಃ ಕಲಯಾವತೀರ್ಣಃ
ಸದ್ರಕ್ಷಣಾಯ ಖಲನಿಗ್ರಹಣಾಯ ಚಾನ್ಯಃ ।
ಕಶ್ಚಿತ್ತ್ವದೀಯಮತಿಯಾತಿ ನಿದೇಶಮೀಶ
ಕಿಂ ವಾ ಜನಃ ಸ್ವಕೃತಮೃಚ್ಛತಿ ತನ್ನ ವಿದ್ಮಃ ॥೨೭॥

ಪ್ರಭುವೇ! ನೀನು ಜಗದೀಶ್ವರನೇ ಆಗಿರುವೆ. ಸತ್ಪುರುಷರ ರಕ್ಷಣೆಗಾಗಿಯೂ ದುಷ್ಟರ ನಿಗ್ರಹಕ್ಕಾಗಿಯೂ ಜ್ಞಾನ-ಬಲ–ಇವೇ ಮುಂತಾದ ಕಲೆಗಳೊಡನೆ ಈ ಭೂಮಿಯಲ್ಲಿ ನೀನು ಅವತರಿಸಿರುವೆ. ಇಂತಹ ಸ್ಥಿತಿಯಲ್ಲಿ ಜರಾಸಂಧನೇ ಆಗಲೀ ಇತರ ಯಾವ ರಾಜರೇ ಆಗಲೀ ನಿನ್ನ ಇಚ್ಛೆಗೆ ಅಥವಾ ಆಜ್ಞೆಗೆ ವಿರುದ್ಧವಾಗಿ ನಮ್ಮನ್ನು ಹೇಗೆ ತೊಂದರೆಪಡಿಸುತ್ತಿದ್ದಾರೆ? ಇದಕ್ಕೆ ಕಾರಣವನ್ನು ನಾವು ಅರಿಯೆವು. ಒಂದು ವೇಳೆ–'ಜರಾಸಂಧನು

ಕಷ್ಟ ಕೊಡುತ್ತಿಲ್ಲ. ನಮ್ಮ-ನಮ್ಮ ಪ್ರಾರಬ್ಧಕರ್ಮಗಳ ಫಲವಾಗಿ ನಾವು ಕಷ್ಟಗಳನ್ನು ಅನುಭವಿಸುತ್ತಿದ್ದೇವೆ'-ಎಂದೂ ಭಾವಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ನಾವೆಲ್ಲರೂ ನಿನ್ನವರೇ ಆಗಿರುವಾಗ ; ನಿನಗೆ ಶರಣಾಗತ ರಾಗಿರುವಾಗ ನಮ್ಮಲ್ಲಿ ದುಷ್ಕರ್ಮದ ಫಲಗಳು ಹೇಗೆತಾನೇ ಉಳಿದಾವು? ದುಷ್ಫಲವನ್ನು ತಾನೇ ಹೇಗೆ ಕೊಟ್ಟಾವು? ಆದುದರಿಂದ ನೀನು ದಯಮಾಡಿ ನಮ್ಮನ್ನು ಈ ಕ್ಲೇಶದಿಂದ ಪಾರುಮಾಡಿ ಸಂರಕ್ಷಿಸು.

ಸ್ವಪ್ನಾಯಿತಂ ನೃಪಸುಖಂ ಪರತನ್ತ್ರಮೀಶ
ಶಶ್ವದ್ಭಯೇನ ಮೃತಕೇನ ಧುರಂ ವಹಾಮಃ ।
ಹಿತ್ವಾ ತದಾತ್ಮನಿ ಸುಖಂ ತ್ವದನೀಹಲಭ್ಯಂ
ಕ್ಲಿಶ್ಯಾಮಹೇಽತಿಕೃಪಣಾಸ್ತವ ಮಾಯಯೇಹ ॥೨೮॥

ಪ್ರಭುವೇ! ರಾಜಸೌಖ್ಯವೆಂಬುದು ಸ್ವಪ್ನಪ್ರಾಯವಾದುದು ಮತ್ತು ಪರಾಧೀನವಾದದ್ದು. ರಾಜಸುಖವನ್ನು ಉಪಭೋಗಿಸುವ ಈ ಶರೀರವು ಕೂಡ ಜೀವಚ್ಛವದಂತಿದೆ. ಸದಾ ಹೆದರಿಕೊಂಡೇ ಹೆಣದಂತಿರುವ ಈ ಶರೀರ ದಿಂದ ರಾಜ್ಯದ ಹೊರೆಯನ್ನು ಹೊರುತ್ತೇವೆ. ನಿನ್ನ ಕೃಪೆಯಿಂದ ನಿಷ್ಕಾಮಕರ್ಮಗಳಿಗೆ ಪ್ರಾಪ್ತವಾಗುವ ಸ್ವತಂತ್ರವಾದ ಆತ್ಮಸುಖವನ್ನು ಪರಿತ್ಯಜಿಸಿದ್ದೇವೆ. ಅಜ್ಞಾನಿಗಳಾಗಿರುವ ನಾವು ನಿನ್ನ ಮಾಯೆಯಿಂದ ವಿಮೋಹಿತರಾಗಿ ಬಹಳವಾಗಿ ಕ್ಲೇಶಗಳನ್ನು ಅನುಭವಿಸುತ್ತಿದ್ದೇವೆ.

ತನ್ನೋ ಭವಾನ್ಪ್ರಣತಶೋಕಹರಾಙ್ಘ್ರಿಯುಗ್ಮೋ
ಬದ್ಧಾನ್ವಿಯುಂಕ್ಷ್ವ ಮಗಧಾಹ್ವಯಕರ್ಮಪಾಶಾತ್ ।
ಯೋ ಭೂಭುಜೋಽಯುತಮತಙ್ಗಜವೀರ್ಯಮೇಕೋ
ಬಿಭ್ರದ್ರುರೋಧ ಭವನೇ ಮೃಗರಾಡಿವಾವೀಃ ॥೨೯॥

ಭಗವಂತ! ನಿನ್ನ ಚರಣಕಮಲಗಳು ಶರಣಾಗತರಾದವರ ಸಮಸ್ತ ಶೋಕಗಳನ್ನೂ ಮೋಹಗಳನ್ನೂ ನಾಶಗೊಳಿಸುತ್ತವೆ. ಆದುದರಿಂದ ಜರಾಸಂಧರೂಪವಾದ ಕರ್ಮಪಾಶಗಳ ಬಂಧನದಿಂದ ನಮ್ಮನ್ನು ವಿಮುಕ್ತಿ ಗೊಳಿಸು. ಪ್ರಭುವೇ! ಆ ಜರಾಸಂಧನು ಹತ್ತು ಸಾವಿರ ಆನೆಗಳ ಬಲವನ್ನು

ಒಬ್ಬನೇ ಹೊಂದಿರುತ್ತಾನೆ. ಸಿಂಹವು ಅಪಾರಸಂಖ್ಯೆಯ ಆಡುಗಳನ್ನು ತಡೆ ಹಿಡಿದು ನಿಲ್ಲುವಂತೆ ಜರಾಸಂಧನೊಬ್ಬನೇ ನಮ್ಮೆಲ್ಲರನ್ನೂ ಬಂಧನ ದಲ್ಲಿರಿಸಿದ್ದಾನೆ.

ಯೋ ವೈ ತ್ವಯಾ ದ್ವಿನವಕೃತ್ವ ಉದಾತ್ತಚಕ್ರ
ಭಗ್ನೋ ಮೃಧೇ ಖಲು ಭವನ್ತಮನನ್ತವೀರ್ಯಮ್ ।
ಜಿತ್ವಾ ನೃಲೋಕನಿರತಂ ಸಕೃದೂಢದರ್ಪೋ
ಯುಷ್ಮತ್ಪ್ರಜಾ ರುಜತಿ ನೋಽಜಿತ ತದ್ವಿಧೇಹಿ ॥೩೦॥

ಚಕ್ರಪಾಣಿಯೇ! ನಿನ್ನೊಡನೆ ಜರಾಸಂಧನು ಹದಿನೆಂಟು ಬಾರಿ ಯುದ್ಧಮಾಡಿದನು. ಹದಿನೇಳು ಬಾರಿ ನಿನ್ನಿಂದ ಪರಾಜಿತನಾಗಿ ಹದಿನೆಂಟ ನೆಯ ಬಾರಿ ಅನಂತವೀರ್ಯನಾದ ನಿನ್ನನ್ನು ಜಯಿಸಿದನು. 'ಜಯಿಸಿ ದನು'–ಎಂಬುವುದಕ್ಕಿಂತಲೂ–ನೀನು ಸೋತಂತೆ ಅಭಿನಯಿಸಿದೆ. ಆದರೆ ಇದರಿಂದಲೇ ಅವನ ಅಹಂಕಾರವು ಅಧಿಕವಾಗಿಬಿಟ್ಟಿದೆ. ಅಜಿತನೇ! ನಾವು ನಿನ್ನ ಭಕ್ತರೆಂದೂ ನಿನ್ನ ಪ್ರಜೆಗಳೆಂದೂ ತಿಳಿದಿರುವ ಅವನು ನಮಗೆ ಇನ್ನೂ ಹೆಚ್ಚು ಕಷ್ಟಗಳನ್ನು ಕೊಡುತ್ತಿದ್ದಾನೆ. ಈ ಸಮಯದಲ್ಲಿ ನಿನಗೆ ಯಾವುದು ಉಚಿತವಾಗಿ ಕಾಣುವುದೋ ಅದನ್ನು ಮಾಡು."

ರಾಜದೂತನು ಹೇಳುತ್ತಾನೆ :

"ಭಗವಂತ! ಜರಾಸಂಧನಿಗೆ ಸೆರೆಯಾಳುಗಳಾಗಿರುವ ರಾಜರು ಹೀಗೆ ನಿನಗೆ ಪ್ರಾರ್ಥನೆಯನ್ನು ಸಲ್ಲಿಸಿರುತ್ತಾರೆ. ಅವರು ನಿನ್ನ ಪಾದಕಮಲಗಳಲ್ಲಿ ಶರಣುಹೊಂದಿರುತ್ತಾರೆ ಮತ್ತು ನಿನ್ನನ್ನು ಸಂದರ್ಶಿಸುವ ಆಕಾಂಕ್ಷೆಯಿಂದಿರು ತ್ತಾರೆ. ನೀನು ಕೃಪೆದೋರಿ ದೀನರಾಗಿರುವ ಅವರಿಗೆ ಸುಖವನ್ನುಂಟು ಮಾಡು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ರಾಜದೂತನು ಹೀಗೆ ಹೇಳುತ್ತಿದ್ದಾಗಲೇ ಪರಮತೇಜಸ್ವಿಗಳಾದ, ಹೊಂಬಣ್ಣದ ಜಟಾಭಾರವನ್ನು ತಲೆಯಲ್ಲಿ ಧರಿಸಿದ್ದ ನಾರದರು ಸೂರ್ಯನಂತೆಯೇ ತೇಜಃಪುಂಜರಾಗಿ ಶ್ರೀಕೃಷ್ಣನ ಸಭೆಗೆ ಆಗಮಿಸಿದರು. ಬ್ರಹ್ಮನೇ ಮೊದಲಾದ ಸಮಸ್ತಲೋಕಪಾಲರಿಗೂ ಏಕಮಾತ್ರಸ್ವಾಮಿಯಾದ ಶ್ರೀಕೃಷ್ಣನು ನಾರದಮಹರ್ಷಿಗಳನ್ನು ನೋಡು

ತ್ತಲೇ ಸಂತೋಷಭರಿತನಾಗಿ ಸಭ್ಯರೊಡನೆಯೂ, ಸೇವಕರೊಡನೆಯೂ ಮಹರ್ಷಿಗಳಿಗೆ ನಮಸ್ಕರಿಸಿದನು. ನಾರದಮಹರ್ಷಿಗಳು ಆಸನವನ್ನು ಪರಿಗ್ರಹಿಸಿ ಆಸೀನರಾದನಂತರ ಶ್ರೀಕೃಷ್ಣನು ಆ ಭಕ್ತಶಿರೋಮಣಿಗಳನ್ನು ಶ್ರದ್ಧೆಯಿಂದ ಯಥಾವಿಧಿಯಾಗಿ ಸತ್ಕರಿಸಿ ಸಂತುಷ್ಟಗೊಳಿಸಿ ಈ ಸವಿ ಮಾತನ್ನು ಹೇಳಿದನು :

ಅಪಿ ಸ್ವಿದದ್ಯ ಲೋಕಾನಾಂ ತ್ರಯಾಣಾಮಕುತೋಭಯಮ್ ।
ನನು ಭೂಯಾನ್ ಭಗವತೋ ಲೋಕಾನ್ಪರ್ಯಟತೋ ಗುಣಃ ॥

"ದೇವರ್ಷಿಗಳೇ! ಈ ಸಮಯದಲ್ಲಿ ಯಾವ ಭಯವೂ ಇಲ್ಲದೇ ಮೂರು ಲೋಕಗಳೂ ಸಕುಶಲದಿಂದ ಇರುವುದಲ್ಲವೇ? ತಾವು ಮೂರು ಲೋಕಗಳಲ್ಲಿಯೂ ಸರ್ವದಾ ಸಂಚರಿಸುತ್ತಲೇ ಇರುವಿರಿ. ಇದು ನಮಗೆ ಅತ್ಯಂತಲಾಭದಾಯಕವಾಗಿದೆ. ಏಕೆಂದರೆ : ಮೂರು ಲೋಕಗಳ ಸಮಾಚಾರವನ್ನೂ ನಾವು ಅರಮನೆಯಲ್ಲಿಯೇ ಇದ್ದು ತಮ್ಮ ಮೂಲಕವಾಗಿ ತಿಳಿಯಬಹುದಾಗಿದೆ.

ನ ಹಿ ತೇಽವಿದಿತಂ ಕಿಂಚಿಲ್ಲೋಕೇಷ್ವೀಶ್ವರಕರ್ತೃಷು ।
ಅಥ ಪೃಚ್ಛಾಮಹೇ ಯುಷ್ಮಾನ್ ಪಾಣ್ಡವಾನಾಂ ಚಿಕೀರ್ಷಿತಮ್ ॥

ಈಶ್ವರನ ಮೂಲಕವಾಗಿ ಸೃಷ್ಟಿಸಲ್ಪಟ್ಟಿರುವ ಮೂರು ಲೋಕಗಳಲ್ಲಿ ತಮಗೆ ತಿಳಿಯದೇ ಇರುವ ವಿಷಯವು ಯಾವುದೂ ಇರುವುದಿಲ್ಲ. ಪ್ರಕೃತ ನಾನು, ಪಾಂಡವರು ಈಗ ಏನು ಮಾಡುತ್ತಿರುವರೆಂಬ ವಿಷಯವನ್ನು ತಮ್ಮಿಂದ ಕೇಳಿ ತಿಳಿಯಲು ಬಯಸಿದ್ದೇನೆ."

ಶ್ರೀನಾರದಮಹರ್ಷಿಗಳು ಹೇಳುತ್ತಾರೆ :

ದೃಷ್ಟಾ ಮಯಾ ತೇ ಬಹುಶೋ ದುರತ್ಯಯಾ
ಮಾಯಾ ವಿಭೋ ವಿಶ್ವಸೃಜಶ್ಚ ಮಾಯಿನಃ ।
ಭೂತೇಷು ಭೂಮಂಶ್ಚರತಃ ಸ್ವಶಕ್ತಿಭಿ-
ರ್ವಹ್ನೇರಿವಚ್ಛನ್ನರುಚೋ ನ ಮೇಽದ್ಭುತಮ್ ॥೩೭॥

"ಸರ್ವವ್ಯಾಪಕನೇ! ವಿಭುವೇ! ವಿಶ್ವಕರ್ತೃವಾದ ನೀನು ಮಹಾಮಾಯಾವಿಯು. ದೊಡ್ಡ-ದೊಡ್ಡ ಮಾಯಾವಿಗಳೆಂದು ಭಾವಿಸಲ್ಪಟ್ಟಿರುವ

ಬ್ರಹ್ಮಾದಿಗಳು ಕೂಡ ನಿನ್ನ ಮಾಯೆಯ ಪಾರವನ್ನು ಅರಿಯರು. ಕಟ್ಟಿಗೆಗಳಲ್ಲಿ ಅಡಗಿರುವ ಅಗ್ನಿಯಂತೆ–ನೀನು ಸಮಸ್ತಪ್ರಾಣಿಗಳ ಶರೀರಗಳಲ್ಲಿಯೂ ನಿನ್ನ ಅಚಿಂತ್ಯವಾದ ಶಕ್ತಿಯಿಂದ ವ್ಯಾಪ್ತನಾಗಿರುವೆ. ನೀನು ಪ್ರಾಣಿಗಳ ಹೃನ್ಮಂದಿರದಲ್ಲಿಯೇ ಇದ್ದರೂ ನಿನ್ನ ಮಾಯೆಯಿಂದ ವ್ಯಾಪ್ತರಾಗಿರುವ ಅವರು ನಿನ್ನನ್ನು ತಿಳಿಯಲಾರರು. ನೀನು ಸರ್ವಾಂತರ್ಯಾಮಿಯಾಗಿದ್ದು ಎಲ್ಲವನ್ನೂ ಬಲ್ಲವನಾಗಿದ್ದರೂ ಏನೂ ತಿಳಿಯದವನಂತೆ ಪಾಂಡವರ ಸಮಾಚಾರವನ್ನು ಕೇಳಿದುದರಲ್ಲಿ ನನಗೆ ಅದ್ಭುತವೇನೂ ಕಾಣುತ್ತಿಲ್ಲ.

ತವೇಹಿತಂ ಕೋಽರ್ಹತಿ ಸಾಧು ವೇದಿತುಂ
ಸ್ವಮಾಯಯೇದಂ ಸೃಜತೋ ನಿಯಚ್ಛತಃ ।
ಯದ್ವಿದ್ಯಮಾನಾತ್ಮತಯಾವಭಾಸತೇ
ತಸ್ಮೈ ನಮಸ್ತೇ ಸ್ವವಿಲಕ್ಷಣಾತ್ಮನೇ ॥೩೮॥

ಭಗವಂತ! ನೀನು ನಿನ್ನ ಮಾಯೆಯಿಂದ ಈ ಜಗತ್ತನ್ನು ಸೃಷ್ಟಿಸುವೆ ಮತ್ತು ಸಂಹರಿಸುವೆ. ನಿನ್ನ ಮಾಯೆಯ ಕಾರಣದಿಂದಲೇ ಅಸತ್ಯವಾದ ಈ ಜಗತ್ತು ಸತ್ಯಕ್ಕೆ ಸಮಾನವಾಗಿ ಕಾಣುತ್ತದೆ. ನೀನು ಯಾವಾಗ-ಏನು ಮಾಡುವೆಯೆಂಬುದು ಯಾರಿಗೂ ತಿಳಿಯದು. ನಿನ್ನ ಸ್ವರೂಪವು ಸರ್ವಥಾ ಅಚಿಂತನೀಯವಾದುದು. ಅಂತಹ ಸರ್ವವಿಲಕ್ಷಣವಾದ ಸ್ವಸ್ವರೂಪವುಳ್ಳ ನಿನಗೆ ನಮಸ್ಕರಿಸುತ್ತೇನೆ.

ಜೀವಸ್ಯ ಯಃ ಸಂಸರತೋ ವಿಮೋಕ್ಷಣಂ
ನ ಜಾನತೋಽನರ್ಥವಹಾಚ್ಛರೀರತಃ ।
ಲೀಲಾವತಾರೈಃ ಸ್ವಯಶಃ ಪ್ರದೀಪಕಂ
ಪ್ರಾಜ್ವಾಲಯತ್ವಾ ತಮಹಂ ಪ್ರಪದ್ಯೇ ॥೩೯॥

ಶರೀರ ಮತ್ತು ತತ್ಸಂಬಂಧವಾದ ಕರ್ಮಗಳ ವಾಸನೆಗಳಲ್ಲಿ ಸಿಕ್ಕಿಹಾಕಿ ಕೊಂಡಿರುವ ಜೀವವು ಹುಟ್ಟು-ಸಾವುಗಳೆಂಬ ಸಂಸಾರಚಕ್ರದಲ್ಲಿ ಸುತ್ತುತ್ತಿರು ತ್ತದೆ. ಇಂತಹ ಶರೀರದಿಂದ ಹೇಗೆ ಮುಕ್ತಿಹೊಂದಬೇಕೆನ್ನುವುದು ಅದಕ್ಕೆ ತಿಳಿದಿರುವುದಿಲ್ಲ. ವಾಸ್ತವವಾಗಿ ಅಂತಹ ಜೀವಗಳ ಹಿತಕ್ಕಾಗಿಯೇ ನೀನು ಹಲವಾರು ಲೀಲಾವತಾರಗಳಿಂದ ಯಶಸ್ಸೆಂಬ ಉಜ್ಜ್ವಲವಾದ ದೀಪವನ್ನು ಪ್ರಜ್ವಲಗೊಳಿಸುವೆ. ಅಂತಹ ನಿನಗೆ ಸರ್ವಾತ್ಮನಾ ಶರಣಾಗಿದ್ದೇನೆ.

ಪ್ರಭುವೇ! ನಿಶ್ಚಯವಾಗಿಯೂ ನೀನು ಸರ್ವಾತ್ಮನಾಗಿರುವ ಮತ್ತು ಸರ್ವಜ್ಞನಾಗಿರುವ ಪರಬ್ರಹ್ಮವೇ ಆಗಿರುವೆ. ಆದರೂ ಮನುಷ್ಯನಂತೆ ನಟನೆಮಾಡುತ್ತಾ ನನ್ನನ್ನು ಪಾಂಡವರ ವಿಷಯವಾಗಿ ಪ್ರಶ್ನಿಸುತ್ತಿರುವೆ. ನಿನ್ನ ಸೋದರಳಿಯನೂ, ಪರಮಭಕ್ತನೂ ಆಗಿರುವ ಯುಧಿಷ್ಠಿರಮಹಾರಾಜನು ಏನು ಮಾಡಲು ಬಯಸಿರುವನೆಂಬ ವಿಷಯವನ್ನು ಹೇಳುತ್ತೇನೆ. ರಾಜಮಂಡಲದಲ್ಲಿ ಹಿರಿಯ ಸ್ಥಾನವನ್ನು ಗಳಿಸಬೇಕೆಂಬ ಅಥವಾ ಬ್ರಹ್ಮ ಲೋಕವನ್ನು ಪಡೆಯುವ ಆಶಯದಿಂದ ಯುಧಿಷ್ಠಿರನು ಶ್ರೇಷ್ಠವಾದ ರಾಜಸೂಯಯಜ್ಞದ ಮೂಲಕವಾಗಿ ನಿನ್ನನ್ನು ಆರಾಧಿಸಲು ಇಚ್ಛೆಸಿದ್ದಾನೆ. ಅದನ್ನು ನೀನು ಅನುಮತಿಸು. ದೇವದೇವನೇ! ಅಂತಹ ಶ್ರೇಷ್ಠವಾದ ಯಜ್ಞವು ನಡೆಯುತ್ತಿರುವ ಸಮಯದಲ್ಲಿ ನಿನ್ನನ್ನು ಸಂದರ್ಶಿಸುವ ಸಲುವಾಗಿ ದೊಡ್ಡ-ದೊಡ್ಡ ದೇವತೆಗಳೂ ಮತ್ತು ಯಶೋವಂತರಾದ ನರಪತಿಗಳೂ ಆಗಮಿಸುತ್ತಾರೆ.

ಶ್ರವಣಾತ್ಕೀರ್ತನಾತ್ ಧ್ಯಾನಾತ್ಪೂಯನ್ತೇಽನ್ತೇಽವಸಾಯಿನಃ ।
ತವ ಬ್ರಹ್ಮಮಯಸ್ಯೇಶ ಕಿಮುತೇಕ್ಷಾಭಿಮರ್ಶಿನಃ ॥೪೩॥

ನೀನು ಸಾಕ್ಷಾತ್ ವಿಜ್ಞಾನಾನಂದಘನಬ್ರಹ್ಮನೇ ಆಗಿರುವೆ. ನಿನ್ನ ನಾಮಶ್ರವಣ, ನಾಮಸಂಕೀರ್ತನ ಮತ್ತು ಸ್ವರೂಪಧ್ಯಾನದಿಂದಲೇ ಅಂತ್ಯಜರು ಕೂಡ ಪವಿತ್ರರಾಗಿಬಿಡುತ್ತಾರೆ. ಹೀಗಿರುವಾಗ ಸಾಕ್ಷಾತ್ತಾಗಿ ನಿನ್ನ ದರ್ಶನ-ಸ್ಪರ್ಶಮಾಡುವ ಸತ್ಪುರುಷರ ವಿಷಯವಾಗಿ ಹೇಳುವುದೇನಿದೆ?

ಯಸ್ಯಾಮಲಂ ದಿವಿ ಯಶಃ ಪ್ರಥಿತಂ ರಸಾಯಾಂ
ಭೂಮೌ ಚ ತೇ ಭುವನಮಙ್ಗಲ ದಿಗ್ವಿತಾನಮ್ ।
ಮನ್ದಾಕಿನೀತಿ ದಿವಿ ಭೋಗವತೀತಿ ಚಾಧೋ
ಗಙ್ಗೇತಿ ಚೇಹ ಚರಣಾಮ್ಬು ಪುನಾತಿ ವಿಶ್ವಮ್ ॥೪೪॥

ತ್ರಿಭುವನಮಂಗಳನೇ! ನಿನ್ನ ನಿರ್ಮಲವಾದ ಕೀರ್ತಿಯು ಸಮಸ್ತ ದಿಕ್ಕುಗಳಲ್ಲಿಯೂ, ಅಂತೆಯೇ ಸ್ವರ್ಗ-ಮರ್ತ್ಯ-ಪಾತಾಳಲೋಕಗಳಲ್ಲಿಯೂ ಹರಡಿಕೊಂಡುಬಿಟ್ಟಿದೆ. ಇದೂ ಅಲ್ಲದೆ ನಿನ್ನ ಚರಣಾಮೃತತೀರ್ಥವು ದೇವ ಲೋಕದಲ್ಲಿ ಮಂದಾಕಿನಿಯೆಂಬ ಹೆಸರಿನಿಂದಲೂ, ಪಾತಾಳಲೋಕದಲ್ಲಿ

ಭೋಗವತೀ ಎಂಬ ಹೆಸರಿನಿಂದಲೂ, ಭೂಲೋಕದಲ್ಲಿ ಗಂಗಾ ಎಂಬ ಹೆಸರಿನಿಂದಲೂ ವ್ಯಾಪ್ತವಾಗಿ ಅಖಂಡವಿಶ್ವವನ್ನೇ ಸತತವಾಗಿ ಪಾವನ ಗೊಳಿಸುತ್ತಿದೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಸಭೆಯಲ್ಲಿ ಉಪಸ್ಥಿತರಾಗಿದ್ದ ಯದುವೀರ ರೆಲ್ಲರೂ ಮೊದಲು ಜರಾಸಂಧನೊಡನೆ ಯುದ್ಧಮಾಡಿ ಅವನನ್ನು ಜಯಿಸು ವುದರಲ್ಲಿ ಉತ್ಸುಕರಾಗಿದ್ದರು. ಆದುದರಿಂದ ಯುಧಿಷ್ಠಿರನು ಮಾಡಲಿರುವ ರಾಜಸೂಯಯಾಗದಲ್ಲಿ ಭಾಗವಹಿಸಬೇಕೆಂಬ ನಾರದರ ಮಾತು ಅವರಿಗೆ ಅಷ್ಟು ಸಮಂಜಸವಾಗಿ ಕಾಣಲಿಲ್ಲ. ಆಗ ಬ್ರಹ್ಮನೇ ಮೊದಲಾದವರಿಗೂ ಶಾಸಕನಾದ ಭಗವಾನ್ ಶ್ರೀಕೃಷ್ಣನು ಮಂದಹಾಸವನ್ನು ಬೀರುತ್ತಾ ಸುಮಧುರವಾದ ಮಾತಿನಿಂದ ತನ್ನ ಸೇವಕನಾದ ಉದ್ಧವನಿಗೆ ಹೇಳಿದನು :

"ಉದ್ಧವ! ನೀನು ನಮ್ಮ ಹಿತೈಷಿಯೂ, ಸುಹೃದನೂ ಆಗಿರುವೆ. ಮಂತ್ರಾಲೋಚನೆಗಳ ರಹಸ್ಯವನ್ನು ಬಲ್ಲವನಾಗಿರುವೆ. ಆದುದರಿಂದ ಇಂತಹ ವಿಷಯಗಳಲ್ಲಿ ನಾವು ನಿನ್ನನ್ನು ನಮ್ಮ ನೇತ್ರಗಳಿಗೆ ಸಮಾನನೆಂದು ಪರಿಗಣಿಸಿದ್ದೇವೆ. ಆದುದರಿಂದ ಈ ಸಂದರ್ಭದಲ್ಲಿ ನಾವು ಏನು ಮಾಡ ಬೇಕೆಂಬುದನ್ನು ಹೇಳು. ನಾವು ರಾಜರ ಪ್ರಾರ್ಥನೆಯಂತೆ ಜರಾಸಂಧನ ಮೇಲೆ ಯುದ್ಧಕ್ಕೆ ಹೋಗುವುದು ಉಚಿತವೇ? ಅಥವಾ ನಾರದರ ಸಲಹೆ ಯಂತೆ ಯುಧಿಷ್ಠಿರನು ಮಾಡಲಿರುವ ರಾಜಸೂಯಯಾಗಕ್ಕೆ ಹೋಗುವುದು ಉಚಿತವೇ? ನಿನ್ನ ಮಾತಿನಲ್ಲಿ ನಮಗೆ ಶ್ರದ್ಧೆಯಿದೆ. ನೀನು ಹೇಳಿದಂತೆಯೇ ನಾವು ನಡೆದುಕೊಳ್ಳುತ್ತೇವೆ."

ಪರೀಕ್ಷಿತಮಹಾರಾಜ! ಶ್ರೀಕೃಷ್ಣನು ಸರ್ವಜ್ಞನಾಗಿದ್ದರೂ ಏನೂ ತಿಳಿಯದವನಂತೆ ಉದ್ಧವನ ಸಲಹೆಯನ್ನು ಅಪೇಕ್ಷಿಸಿದನು. ಈ ವಿಷಯವು ಉದ್ಧವನಿಗೆ ತಿಳಿದಿದ್ದರೂ ಸ್ವಾಮಿಯ ಆಜ್ಞೆಯನ್ನು ಶಿರಸಾವಹಿಸಿ ಆತನು ಉತ್ತರಿಸತೊಡಗಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ೭೦ನೆಯ ಅಧ್ಯಾಯವು ಮುಗಿಯಿತು.

ಶ್ರೀಕೃಷ್ಣನ ಇಂದ್ರಪ್ರಸ್ಥಪ್ರಯಾಣ

ಶ್ರೀಶುಕಮುನಿಗಳು ಹೇಳುತ್ತಾರೆ :

ಇತ್ಯುದೀರಿತಮಾಕರ್ಣ್ಯ ದೇವರ್ಷೇರುದ್ಧವೋಽಬ್ರವೀತ್ ।
ಸಭ್ಯಾನಾಂ ಮತಮಾಜ್ಞಾಯ ಕೃಷ್ಣಸ್ಯ ಚ ಮಹಾಮತಿಃ ॥೧॥

ಪರೀಕ್ಷಿತಮಹಾರಾಜ! ಮಹಾಮತಿಯಾದ ಉದ್ಧವನು ಶ್ರೀಕೃಷ್ಣನ ಮಾತನ್ನು ಕೇಳಿ ಮಹರ್ಷಿಗಳಾದ ನಾರದರು, ಸಭಾಸದರು ಮತ್ತು ಶ್ರೀಕೃಷ್ಣ–ಇವರ ಅಭಿಪ್ರಾಯವೇನೆಂಬುದನ್ನು ವಿಚಾರಮಾಡಿ ತಿಳಿದು ಕೊಂಡು ತನ್ನ ಅಭಿಪ್ರಾಯವನ್ನು ಪ್ರತಿಪಾದಿಸತೊಡಗಿದನು :

"ಪ್ರಭುವೇ! ನಿನ್ನ ಸೋದರಳಿಯನು ಮಾಡಲಿರುವ ರಾಜಸೂಯ ಯಾಗದಲ್ಲಿ ಭಾಗವಹಿಸಿ ಅವನಿಗೆ ಸಹಾಯಮಾಡಬೇಕೆಂದು ಹೇಳಿರುವ ನಾರದರ ಸಲಹೆಯೂ ಅವಶ್ಯವಾಗಿ ಮಾಡಬೇಕಾದ್ದೇ ಆಗಿದೆ. ಅದರಂತೆಯೇ ಶರಣಾಗತರಾಗಿ ಬಂದಿರುವ ರಾಜರ ರಕ್ಷಣೆಯೂ ಅವಶ್ಯವಾದ ಕರ್ತವ್ಯವೇ ಆಗಿರುತ್ತದೆ. ಪ್ರಭುವೇ! ರಾಜಸೂಯಯಾಗಮಾಡತಕ್ಕವನು ಎಲ್ಲ ದಿಕ್ಕುಗಳನ್ನೂ (ಪ್ರಪಂಚದಲ್ಲಿರುವ ಸಮಸ್ತರಾಜರನ್ನೂ) ಜಯಿಸಲೇಬೇಕು. ಹೀಗಿರುವುದರಿಂದ ಯಾಗದ ಸಲುವಾಗಿ ಮತ್ತು ಶರಣಾಗತರ ರಕ್ಷಣೆಯ ಸಲುವಾಗಿ ಈ ಎರಡು ಕಾರಣಗಳಿಂದಲೂ ಜರಾಸಂಧನನ್ನು ಜಯಿಸುವುದು ಅನಿವಾರ್ಯವಾಗುತ್ತದೆ. ಹೀಗೆ ಮಾಡುವುದರಿಂದ ನಮಗೆ ಮಹಾ ಪ್ರಯೋಜನವೇ ಆಗುತ್ತದೆ. ವಿಶ್ವವನ್ನೇ ಜಯಿಸಿ ಇಪ್ಪತ್ತು ಸಾವಿರ ರಾಜರನ್ನು ಬಂದಿಗಳನ್ನಾಗಿಟ್ಟಿರುವ ಜರಾಸಂಧನನ್ನು ಜಯಿಸಿದರೆ ಬೇರೆ ಯಾರನ್ನೂ ನಾವು ಜಯಿಸಬೇಕಾಗಿಯೇ ಇಲ್ಲ. ಶರಣಾಗತರಾಗಿ ಬಂದಿರುವ ರಾಜರೆಲ್ಲರೂ ಸಾಮಂತರಾಜರಾಗಿ ನಮ್ಮ ಮಿತ್ರರೇ ಆಗುತ್ತಾರೆ. ಬಂಧನದಲ್ಲಿರುವ ರಾಜರನ್ನು ಮುಕ್ತಿಗೊಳಿಸುವುದರಿಂದ ನಿನಗೆ ನಿರ್ಮಲವಾದ ಕೀರ್ತಿಯೂ ಪ್ರಾಪ್ತವಾಗುತ್ತದೆ. ಬಲದಲ್ಲಿ ಹತ್ತು ಸಾವಿರ ಆನೆಗಳ ಬಲಕ್ಕೆ ಸಮಾನವಾದ ಬಲವಿರುವ ಜರಾಸಂಧನನ್ನು ಇತರ ಬಲಿಷ್ಠರಾದ ರಾಜರು ಜಯಿಸಲು ಶಕ್ಯವಿಲ್ಲ. ಅವನಿಗೆ ಸಮಾನಬಲವಿರುವ ಭೀಮನೊಬ್ಬನು

ಮಾತ್ರವೇ ಅವನನ್ನು ಜಯಿಸಬಲ್ಲನು. ಅವನೊಡನೆ ದ್ವಂದ್ವಯುದ್ಧವನ್ನೇ ಮಾಡಿ ಅವನನ್ನು ಜಯಿಸಬೇಕು. ಅವನು ನೂರು ಅಕ್ಷೌಹಿಣೀಸೈನ್ಯಗಳನ್ನು ತಂದು ಯುದ್ಧಕ್ಕೆ ಸಿದ್ಧನಾಗಿ ನಿಂತಾಗ ಅವನನ್ನು ಗೆಲ್ಲುವ ಸಾಧ್ಯತೆಯಿಲ್ಲ. ಬ್ರಾಹ್ಮಣರೇನಾದರೂ ಅವನನ್ನು ಪ್ರಾರ್ಥಿಸಿದ್ದೇ ಆದರೆ ಯಾವುದೇ ಕಾರಣದಿಂದಲೂ ಯಾವುದೇ ಕಾಲದಲ್ಲಿಯೂ ಅವನು ಇಲ್ಲವೆನ್ನುವುದಿಲ್ಲ. ಆದುದರಿಂದ ಭೀಮಸೇನನು ಬ್ರಾಹ್ಮಣನ ವೇಷವನ್ನು ಧರಿಸಿ ಜರಾಸಂಧನ ಬಳಿಗೆ ಹೋಗಿ ಯುದ್ಧದ ಭಿಕ್ಷೆಯನ್ನು ಬೇಡಬೇಕು. ಆಗ ಜರಾಸಂಧನು ಭೀಮನೊಡನೆ ದ್ವಂದ್ವಯುದ್ಧಮಾಡಲು ಸಿದ್ಧನಾಗುತ್ತಾನೆ. ನಿನ್ನ ಸನ್ನಿಧಾನದಲ್ಲಿ ನಡೆಯುವ ಆ ದ್ವಂದ್ವಯುದ್ಧದಲ್ಲಿ ಭೀಮಸೇನನು ಜರಾಸಂಧನನ್ನು ಸಂಹರಿಸಿಯೇ ತೀರುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಪ್ರಭುವೇ! ನೀನು ಮಹಾಶಕ್ತಿವಂತನು. ರೂಪರಹಿತನಾದ ಕಾಲ ಸ್ವರೂಪನಾಗಿರುವೆ. ವಿಶ್ವದ ಸೃಷ್ಟಿ ಮತ್ತು ಪ್ರಳಯಗಳು ನಿನ್ನ ಅಪಾರವಾದ ಶಕ್ತಿಯಿಂದಲೇ ನಡೆಯುತ್ತವೆ. ಈ ಕಾರ್ಯದಲ್ಲಿ ಬ್ರಹ್ಮಾ ಮತ್ತು ಶಂಕರರು ನಿಮಿತ್ತಮಾತ್ರರಾಗಿದ್ದಾರೆ. ಇದರಂತೆಯೇ ನಿನ್ನ ಪರಮಾದ್ಭುತವಾದ ಶಕ್ತಿಯಿಂದಲೇ ಜರಾಸಂಧನ ವಧೆಯಾಗುತ್ತದೆ. ಭೀಮಸೇನನು ನೆಪಮಾತ್ರಕ್ಕಿರುತ್ತಾನೆ.* ಶಂಖಚೂಡನಿಂದ ಮುಕ್ತರಾದ ಗೋಪಿಯರು

---

* ಉದ್ಧವನ ಈ ಮಾತುಗಳನ್ನು ಶ್ರೀಕೃಷ್ಣನೇ ಗೀತೆಯಲ್ಲಿ ಅರ್ಜುನನಿಗೆ ಹೇಳುತ್ತಾನೆ:

ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ ಲೋಕಾನ್ಸಮಾಹರ್ತುಮಿಹ ಪ್ರವೃತ್ತಃ ।
ಋತೇಽಪಿ ತ್ವಾಂ ನ ಭವಿಷ್ಯನ್ತಿ ಸರ್ವೇ ಯೇಽವಸ್ಥಿತಾಃ ಪ್ರತ್ಯನೀಕೇಷು ಯೋಧಾಃ ॥

ತಸ್ಮಾತ್ತ್ವಮುತ್ತಿಷ್ಠ ಯಶೋ ಲಭಸ್ವ
ಜಿತ್ವಾ ಶತ್ರೂನ್ ಭುಂಕ್ಷ್ವ ರಾಜ್ಯಂ ಸಮೃದ್ಧಮ್ ।
ಮಯೈವೈತೇ ನಿಹತಾಃ ಪೂರ್ವಮೇವ
ನಿಮಿತ್ತಮಾತ್ರಂ ಭವ ಸವ್ಯಸಾಚಿನ್ ॥೩೩॥

ದ್ರೋಣಂ ಚ ಭೀಷ್ಮಂ ಚ ಜಯದ್ರಥಂ ಚ
ಕರ್ಣಂ ತಥಾನ್ಯಾನಪಿ ಯೋಧವೀರಾನ್ ।
ಮಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾ
ಯುಧ್ಯಸ್ವ ಜೇತಾಸಿ ರಣೇ ಸಪತ್ನಾನ್ ॥೩೪॥ ಅಧ್ಯಾಯ ೧೧

ನಿನ್ನ ಕೀರ್ತಿಗಾನಮಾಡಿದಂತೆ, ಮೊಸಳೆಯಿಂದ ಮುಕ್ತನಾದ ಗಜೇಂದ್ರನು ನಿನ್ನ ಲೀಲಾಪ್ರಸಂಗಗಳನ್ನು ಹಾಡಿದಂತೆ, ರಾವಣನಿಂದ ಮುಕ್ತಳಾದ ಸೀತಾದೇವಿಯು ರಾಮಾವತಾರದಲ್ಲಿ ನಿನ್ನ ಸಾಹಸವನ್ನು ಗಾನಮಾಡಿದಂತೆ, ಕಂಸನಿಂದ ಮುಕ್ತರಾದಾಗ ನಿನ್ನ ತಂದೆ-ತಾಯಿಗಳು ನಿನ್ನನ್ನು ಭಗವಂತನೆಂದೇ ಭಾವಿಸಿ ನಿನ್ನ ಕೀರ್ತಿಯನ್ನು ಗಾನಮಾಡಿದಂತೆ, ನಿನ್ನ ಭಕ್ತರಾದ ಮುನಿಜನರೂ ಮತ್ತು ದಾಸರಾದ ನಾವೂ ನಿನ್ನ ಪರಮಾದ್ಭುತ ವಾದ ಗುಣಗಳನ್ನು ಅಡಿಗಡಿಗೂ ಗಾನಮಾಡುವಂತೆ, ಜರಾಸಂಧನ ವಧೆಯಾದನಂತರ ಅವರವರ ಅರಮನೆಗಳಲ್ಲಿ ರಾಜರ ಪಟ್ಟಮಹಿಷಿಯರು ಶತ್ರುವಿನ ವಧೆಯ ಪ್ರಸಂಗವನ್ನೂ, ಗಂಡಂದಿರು ಪ್ರಾಣಾಪತ್ತಿನಿಂದ ಬಿಡುಗಡೆಹೊಂದಿದ ಪ್ರಸಂಗವನ್ನೂ ಒಳಗೊಂಡ ನಿನ್ನ ಲೀಲಾಪ್ರಸಂಗ ಗಳನ್ನು ಕರ್ಣಾನಂದಕರವಾಗಿ ಗಾನಮಾಡುತ್ತಿರುತ್ತಾರೆ.

ಆದುದರಿಂದ, ಪ್ರಭುವೇ! ಜರಾಸಂಧನ ವಧೆಯು ಅತ್ಯಂತ ಪ್ರಯೋಜನಕಾರಿಯಾಗುತ್ತದೆ. ಸೆರೆಯಾಳುಗಳಾಗಿರುವ ರಾಜರ ಪುಣ್ಯದ ಪರಿಣಾಮದಿಂದಲೋ ಜರಾಸಂಧನ ಪಾಪದ ಪರಿಣಾಮದಿಂದಲೋ ರಾಜಸೂಯಯಾಗಮಾಡಲು ನಿನ್ನ ಒಪ್ಪಿಗೆಯೂ ಲಭಿಸುತ್ತದೆ. ಆದುದರಿಂದ ಜರಾಸಂಧನ ಸಂಹಾರದ ಪೂರ್ವಸಿದ್ಧತೆಗಾಗಿ ನೀನು ಇಂದ್ರಪ್ರಸ್ಥಕ್ಕೆ ಹೋಗುವುದು ಉಚಿತವಾಗಿ ಕಾಣುತ್ತದೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಉದ್ಧವನ ಈ ಸಲಹೆಯು ಸರ್ವಪ್ರಕಾರ

ಎಲ್ಲ ಲೋಕಗಳನ್ನೂ ಕ್ಷಯಗೊಳಿಸುವುದಕ್ಕಾಗಿ ಬೆಳೆದ ಕಾಲಪುರುಷನು ನಾನು. ಎಲ್ಲವನ್ನೂ ನುಂಗುವುದಕ್ಕೆ ಇದೀಗ ಸಿದ್ಧನಾಗಿದ್ದೇನೆ. ನೀನು ಯುದ್ಧವನ್ನು ಮಾಡದಿದ್ದರೂ ಎದುರಿಗಿರುವ ಯಾರೂ ಕೂಡ ಉಳಿಯಲಾರರು. ಆದುದರಿಂದ, ಏಳು! ಕೀರ್ತಿಯನ್ನು ಸಂಪಾದಿಸು. ಶತ್ರುಗಳನ್ನು ನಾಶಮಾಡಿ ಸಮೃದ್ಧವಾದ ರಾಜ್ಯವನ್ನು ಸ್ವೇಚ್ಛೆಯಾಗಿ ಅನುಭವಿಸು. ಕೌರವರೆಲ್ಲಾ ಮೊದಲೇ ನನ್ನಿಂದ ಹತರಾಗಿದ್ದಾರೆ. ನೀನು ನಿಮಿತ್ತಮಾತ್ರನಾಗಿ ನಿಲ್ಲು. ನನ್ನಿಂದ ಮೊದಲೇ ಹತರಾದ ಭೀಷ್ಮ-ದ್ರೋಣ-ಜಯದ್ರಥ-ಕರ್ಣ ಮೊದಲಾದ ವೀರರನ್ನು ಸಂಹರಿಸು. ಖಂಡಿತವಾಗಿಯೂ ನೀನು ಯುದ್ಧದಲ್ಲಿ ಜಯಿಸುವೆ. ಚಿಂತೆಮಾಡಬೇಡ.

ದಿಂದಲೂ ಹಿತಕರವೂ ಮತ್ತು ದೋಷರಹಿತವೂ ಆಗಿದ್ದಿತು. ಮಹರ್ಷಿಗಳಾದ ನಾರದರು, ಯದುವೃದ್ಧರು ಮತ್ತು ಶ್ರೀಕೃಷ್ಣನೂ ಕೂಡ ಉದ್ಧವನ ಸಲಹೆಯನ್ನು ಸಮರ್ಥಿಸಿ ಅವನ ಸಲಹೆಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಬಳಿಕ ಭಗವಾನ್ ಶ್ರೀಕೃಷ್ಣನು ವಸುದೇವನೇ ಮೊದಲಾದ ಗುರುಜನರ ಅನುಮತಿಯನ್ನು ಪಡೆದು ದಾರುಕ-ಚೈತ್ರರೇ ಮೊದಲಾದ ಸೇವಕರಿಗೆ ಇಂದ್ರಪ್ರಸ್ಥಕ್ಕೆ ಪ್ರಯಾಣಮಾಡಲು ರಥವನ್ನು ಸಿದ್ಧಗೊಳಿಸುವಂತೆ ಆಜ್ಞಾಪಿಸಿದನು. ಬಳಿಕ ಶತ್ರುಹಂತಕನಾದ ಶ್ರೀಕೃಷ್ಣನು ಯದುರಾಜನಾದ ಉಗ್ರಸೇನಮಹಾರಾಜನ ಮತ್ತು ಅಣ್ಣನಾದ ಬಲರಾಮನ ಅನುಜ್ಞೆಯನ್ನು ಪಡೆದು ಚಿಕ್ಕ ಮಕ್ಕಳನ್ನೂ, ಬಾಲಕರನ್ನೂ ಮತ್ತು ಹಲವಾರು ಸಾಮಗ್ರಿಗಳನ್ನೂ ರಾಣಿಯರೊಡನೆ ರಥಗಳಲ್ಲಿ ಮುಂದಾಗಿ ಕಳುಹಿಸಿಕೊಟ್ಟು ದಾರುಕನು ತಂದ ಗರುಡಧ್ವಜವಿದ್ದ ರಥದಲ್ಲಿ ತಾನು ಕುಳಿತುಕೊಂಡನು. ಬಳಿಕ ಶ್ರೀಕೃಷ್ಣನು ಗಜಾಶ್ವ-ರಥ-ಪದಾತಿಗಳಿಂದ ಕೂಡಿದ ಚತುರಂಗಸೇನಾಸಮೇತನಾಗಿ ಇಂದ್ರಪ್ರಸ್ಥಕ್ಕೆ ಪ್ರಸ್ಥಾನಮಾಡಿದನು. ಆ ಸಮಯದಲ್ಲಿ ಮೃದಂಗ-ಭೇರಿ-ಆನಕ-ಶಂಖ-ಗೋಮುಖವಾದ್ಯಗಳ ಧ್ವನಿಯು ಹತ್ತು ದಿಕ್ಕುಗಳಲ್ಲಿಯೂ ಪ್ರತಿಧ್ವನಿಸುತ್ತಿದ್ದಿತು. ಸತೀ-ಸಾಧ್ವಿಯರಾದ ರುಕ್ಮಿಣಿಯೇ ಮೊದಲಾದ ಶ್ರೀಕೃಷ್ಣನ ಸಾವಿರಾರು ವಲ್ಲಭೆಯರು ತಮ್ಮ-ತಮ್ಮ ಮಕ್ಕಳೊಡನೆ ಸುಂದರವಾದ ವಸ್ತ್ರಾಭರಣಗಳಿಂದಲೂ, ಪುಷ್ಪಹಾರಗಳಿಂದಲೂ ವಿಭೂಷಿತರಾಗಿ, ಚಂದನ-ಅಂಗರಾಗಗಳನ್ನು ಮೈಗೆ ಲೇಪಿಸಿಕೊಂಡು ಡೋಲಿಗಳಲ್ಲಿಯೂ, ರಥಗಳಲ್ಲಿಯೂ, ಚಿನ್ನದ ಪಲ್ಲಕ್ಕಿಗಳಲ್ಲಿಯೂ ಕುಳಿತು ಪತಿದೇವನಾದ ಶ್ರೀಕೃಷ್ಣಸ್ವಾಮಿಯ ಹಿಂದೆ ಹೋಗುತ್ತಿದ್ದರು. ಕಾಲಾಳುಗಳು ಕೈಗಳಲ್ಲಿ ಕತ್ತಿ-ಗುರಾಣಿಗಳನ್ನು ಹಿಡಿದು ಅವರನ್ನು ರಕ್ಷಿಸುತ್ತಾ ಅವರನ್ನು ಸುತ್ತುವರಿದು ಹೋಗುತ್ತಿದ್ದರು. ಹಾಗೆಯೇ ದಾಸ-ದಾಸಿಯರೂ, ವೇಶ್ಯೆಯರೂ ವಸ್ತ್ರಾಭರಣಗಳಿಂದ ಅಲಂಕೃತರಾಗಿ ಚಾಪೆಗಳು, ಗುಡಾರಗಳು, ಕಂಬಳಿಗಳು, ವಸ್ತ್ರಗಳು—ಇವೇ ಮೊದಲಾದ ಸಾಮಗ್ರಿಗಳನ್ನು ಆಳುಗಳ ಮೇಲೂ ಒಂಟೆ-ಎತ್ತು-ಕೋಣ-ಹೇಸರಗತ್ತೆ-ಆನೆ-ಗಾಡಿಗಳ ಮೇಲೂ ಹೇರಿಕೊಂಡು ತಾವು ಪಲ್ಲಕ್ಕಿಗಳ

ಲ್ಲಿಯೂ, ಒಂಟೆಗಳ ಮೇಲೂ, ಗಾಡಿಗಳಲ್ಲಿಯೂ, ಆನೆಗಳ ಮೇಲೂ ಕುಳಿತು ಪ್ರಯಾಣಮಾಡಿದರು. ತಿಮಿ-ತಿಮಿಂಗಿಲಾದಿಗಳಿಂದಲೂ, ದೊಡ್ಡ-ದೊಡ್ಡ ಮೀನುಗಳಿಂದಲೂ, ದೊಡ್ಡ-ದೊಡ್ಡ ಅಲೆಗಳಿಂದಲೂ ಕೂಡಿ ಭೋರ್ಗರೆ ಯುವ ಸಮುದ್ರವು ಶೋಭಾಯಮಾನವಾಗಿ ಕಾಣುವಂತೆ ಭಯಂಕರವಾದ ಶಬ್ದದಿಂದಲೂ, ಹಾರಾಡುತ್ತಿರುವ ದೊಡ್ಡ-ದೊಡ್ಡ ಪತಾಕೆಗಳಿಂದಲೂ, ಧ್ವಜಗಳಿಂದಲೂ, ಛತ್ರಗಳಿಂದಲೂ, ಚಾಮರಗಳಿಂದಲೂ, ಶ್ರೇಷ್ಠವಾದ ಅಸ್ತ್ರ-ಶಸ್ತ್ರಗಳಿಂದಲೂ, ವಸ್ತ್ರಾಭರಣಗಳಿಂದಲೂ, ಕಿರೀಟಗಳಿಂದಲೂ, ಕವಚ ಗಳಿಂದಲೂ ಕೂಡಿದ್ದ ಶ್ರೀಕೃಷ್ಣನ ಸೈನ್ಯದ ಮೇಲೆ ಸೂರ್ಯನ ಕಿರಣಗಳು ಬಿದ್ದು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದಿತು.

ಶ್ರೀಕೃಷ್ಣನಿಂದ ಸಮ್ಮಾನಿತರಾದ ನಾರದಮಹರ್ಷಿಗಳು ಶ್ರೀಕೃಷ್ಣನ ಉದ್ಯೋಗವನ್ನು ಕಂಡು ಆನಂದಭರಿತರಾದರು. ಭಗವಂತನ ದರ್ಶನ ದಿಂದಾಗಿ ಅವರ ಮನಸ್ಸು ಮತ್ತು ಇಂದ್ರಿಯಗಳು ಆನಂದದಲ್ಲಿ ಮುಳುಗಿ ಹೋದುವು. ನಾರದರನ್ನು ಕಳುಹಿಸಿಕೊಡುವ ಸಮಯದಲ್ಲಿಯೂ ಶ್ರೀಕೃಷ್ಣನು ಶ್ರೇಷ್ಠವಾದ ಪೂಜಾಸಾಮಗ್ರಿಗಳಿಂದ ಅವರನ್ನು ಸತ್ಕರಿಸಿದನು. ಬಳಿಕ ಮಹರ್ಷಿಗಳು ಶ್ರೀಕೃಷ್ಣನಿಗೆ ಮನಸ್ಸಿನಿಂದ ನಮಸ್ಕರಿಸುತ್ತಾ ಆತನ ದಿವ್ಯಶ್ರೀವಿಗ್ರಹವನ್ನು ಹೃದಯದಲ್ಲಿ ಧರಿಸಿ ಆಕಾಶಮಾರ್ಗವಾಗಿ ಪ್ರಯಾಣ ಮಾಡಿದರು.

ಬಳಿಕ ಶ್ರೀಕೃಷ್ಣನು ಜರಾಸಂಧನ ಸೆರೆಮನೆಯಲ್ಲಿದ್ದ ರಾಜದೂತನಿಗೆ ಮಧುರವಾದ ಮಾತಿನಿಂದ ಆಶ್ವಾಸನೆಯನ್ನು ನೀಡುತ್ತಾ ಹೇಳಿದನು :

ಮಾ ಭೈಷ್ಟ ದೂತ ಭದ್ರಂ ವೋ ಘಾತಯಿಷ್ಯಾಮಿ ಮಾಗಧಮ್ ॥

"ರಾಜದೂತನೇ! ನೀನೀಗಲೇ ನಿಮ್ಮ ರಾಜರ ಬಳಿಗೆ ಹೋಗಿ ಈ ಅಭಯದ ಮಾತನ್ನು ಅವರಿಗೆ ತಿಳಿಸು : "ರಾಜಸತ್ತಮರೇ! ಭಯಪಡ ಬೇಡಿರಿ. ನಿಮಗೆ ಮಂಗಳವಾಗಲಿ! ಮಗಧಾಧಿಪತಿಯಾದ ಜರಾಸಂಧನನ್ನು ಸಂಹರಿಸುತ್ತೇನೆ."

ಪರೀಕ್ಷಿತನೇ! ಶ್ರೀಕೃಷ್ಣನಿಂದ ಹೀಗೆ ನಿರ್ದೇಶಿಸಲ್ಪಟ್ಟ ದೂತನು ಶ್ರೀಕೃಷ್ಣನ ಅನುಮತಿಯನ್ನು ಪಡೆದು ಗಿರಿವ್ರಜಕ್ಕೆ ಹೋಗಿ ಸೆರೆಮನೆಯಲ್ಲಿದ್ದ

ರಾಜರನ್ನು ಕಂಡು ಶ್ರೀಕೃಷ್ಣನ ಸಂದೇಶವನ್ನು ಯಥಾವತ್ತಾಗಿ ಅವರಿಗೆ ಮುಟ್ಟಿಸಿದನು. ಕಾರಾಗೃಹವಾಸದಿಂದ ಬಿಡುಗಡೆಯನ್ನು ಬಯಸಿದ್ದ ಆ ರಾಜರು ಕೂಡ ಶ್ರೀಕೃಷ್ಣನ ದಿವ್ಯದರ್ಶನವನ್ನು ಕಾತರದಿಂದ ಪ್ರತೀಕ್ಷಿಸುತ್ತಿದ್ದರು.

ಪರೀಕ್ಷಿತಮಹಾರಾಜ! ಭಗವಾನ್ ಶ್ರೀಕೃಷ್ಣನು ಪರಿವಾರದೊಡನೆ ದ್ವಾರಕಾಪಟ್ಟಣದಿಂದ ಹೊರಟು ಆನರ್ತ-ಸೌವೀರ-ಮರು-ಕುರುಕ್ಷೇತ್ರಗಳನ್ನೂ, ಇವುಗಳ ಮಧ್ಯದಲ್ಲಿ ಸಿಕ್ಕಿದ ಪರ್ವತ-ನದೀ-ನಗರ-ಗ್ರಾಮ-ಹಳ್ಳಿ ಮತ್ತು ಗಣಿಗಳಿರುವ ಪ್ರದೇಶಗಳನ್ನೂ ದಾಟಿ ಮುಂದೆ ಹೋಗುತ್ತಾ ಧೃಷದ್ವತೀ ಮತ್ತು ಸರಸ್ವತೀನದಿಗಳನ್ನೂ ದಾಟಿ, ಪಾಂಚಾಲ ಮತ್ತು ಮತ್ಸ್ಯದೇಶಗಳ ಮೂಲಕವಾಗಿ ಇಂದ್ರಪ್ರಸ್ಥನಗರವನ್ನು ಸೇರಿದನು. ಮಾನವರಿಂದ ಸಂದರ್ಶಿಸಲು ಸುದುರ್ಲಭನಾದ ಶ್ರೀಕೃಷ್ಣನು ಪರಿವಾರ ಸಮೇತನಾಗಿ ತನ್ನ ರಾಜಧಾನಿಗೆ ಬರುತ್ತಿರುವನೆಂಬ ವಾರ್ತೆಯನ್ನು ಕೇಳಿ ಯುಧಿಷ್ಠಿರನು ಹಿರಿ-ಹಿಗ್ಗಿದನು. ಆತನು ತನ್ನ ಆಚಾರ್ಯರೊಡನೆಯೂ, ಬಂಧುವರ್ಗದವರೊಡನೆಯೂ ಕೂಡಿಕೊಂಡು ಭಗವಂತನಾದ ಶ್ರೀಕೃಷ್ಣನನ್ನು ಇದಿರ್ಗೊಳ್ಳಲು ಊರ ಹೊರಗಿನ ಮಹಾದ್ವಾರದ ಬಳಿಗೆ ಹೋದನು. ವಂದಿ-ಮಾಗಧರು ಸ್ತೋತ್ರಮಾಡುತ್ತಿರಲಾಗಿ, ಮಂಗಳವಾದ್ಯಗಳು ಮೊಳಗುತ್ತಿರಲಾಗಿ, ಬ್ರಾಹ್ಮಣರು ವೇದಘೋಷಮಾಡುತ್ತಿರಲಾಗಿ ಇಂದ್ರಿಯಗಳು ಮುಖ್ಯಪ್ರಾಣದೊಡನೆ ಸೇರುವಂತೆ ಯುಧಿಷ್ಠಿರನು ಹೃಷೀಕೇಶನನ್ನು ಸೇರಿದನು. ಭಗವಂತನಾದ ಶ್ರೀಕೃಷ್ಣನನ್ನು ನೋಡಿ ಯುಧಿಷ್ಠಿರನ ಹೃದಯವು ಸ್ನೇಹಾತಿರೇಕದಿಂದ ಗದ್ಗದವಾಯಿತು. ಬಹಳ ದಿವಸಗಳ ನಂತರ ತನಗೆ ಅತ್ಯಂತಪ್ರಿಯನಾದ ಶ್ರೀಕೃಷ್ಣನನ್ನು ನೋಡುವ ಭಾಗ್ಯವು ಯುಧಿಷ್ಠಿರನಿಗೆ ಲಭಿಸಿದ್ದು ಆತನು ತನ್ನ ಪ್ರಾಣಸಖನನ್ನು ಬಾರಿ-ಬಾರಿಗೂ ಆಲಿಂಗಿಸಿಕೊಂಡನು. ಲಕ್ಷ್ಮೀದೇವಿಗೆ ಪವಿತ್ರವೂ ಮತ್ತು ಏಕಮಾತ್ರ ನಿವಾಸಸ್ಥಾನವೂ ಆದ ಶ್ರೀಕೃಷ್ಣನ ಶ್ರೀವಿಗ್ರಹವನ್ನು ಯುಧಿಷ್ಠಿರನು ತನ್ನ ಎರಡು ತೋಳುಗಳಿಂದಲೂ ಗಾಢವಾಗಿ ಆಲಿಂಗಿಸಿಕೊಂಡು ಸಮಸ್ತವಾದ ಅಶುಭಗಳಿಂದಲೂ ಮುಕ್ತನಾದನು. ರೋಮಾಂಚನದಿಂದಾಗಿ ಯುಧಿಷ್ಠಿರನ ರೋಮಕೋಟಿಗಳು ನಿಮಿರಿನಿಂತುವು. ಕಣ್ಣುಗಳಿಂದ ಧಾರಾಕಾರವಾಗಿ

ಆನಂದಬಾಷ್ಪವು ಸುರಿಯತೊಡಗಿತು. ಸಂತೋಷಾಧಿಕ್ಯದಿಂದ ಆನಂದ ಸಮುದ್ರದಲ್ಲಿ ಮುಳುಗಿಹೋಗಿದ್ದ ಯುಧಿಷ್ಠಿರನು ಲೋಕವ್ಯವಹಾರವನ್ನೇ ಸಂಪೂರ್ಣವಾಗಿ ಮರೆತುಬಿಟ್ಟನು. ಅನಂತರ ಭೀಮಸೇನನು ನಸುನಗುತ್ತಾ ಸೋದರಮಾವನ ಮಗನಾದ ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡು ಆನಂದಿಸಿದನು. ಪ್ರೇಮಾತಿಶಯದಿಂದ ಪರವಶನಾಗಿದ್ದ ಆತನ ಇಂದ್ರಿಯ ಗಳು ಕ್ಷಣಕಾಲ ಸ್ತಬ್ಧವಾಗಿಬಿಟ್ಟಿದ್ದುವು. ಅರ್ಜುನ-ನಕುಲ-ಸಹದೇವರು ಕೂಡ ತಮಗೆ ಅತ್ಯಂತಪ್ರಿಯತಮನಾದ ಶ್ರೀಕೃಷ್ಣನನ್ನು ಆನಂದದಿಂದ ಆಲಿಂಗಿಸಿಕೊಂಡರು. ಆ ಸಮಯದಲ್ಲಿ ಅವರ ಕಣ್ಣುಗಳಿಂದಲೂ ಆನಂದ ಬಾಷ್ಪವು ಸುರಿಯುತ್ತಿದ್ದಿತು. ಸ್ಪರ್ಶಸುಖವನ್ನು ಮತ್ತಷ್ಟು ಅನುಭವಿಸ ಬೇಕೆಂಬ ಆಶಯದಿಂದಾಗಿ ಅರ್ಜುನನು ಪುನಃ ಶ್ರೀಕೃಷ್ಣನನ್ನು ಆಲಿಂಗಿಸಿ ಕೊಂಡು ಆನಂದಿಸಿದನು. ನಕುಲ-ಸಹದೇವರು ಶ್ರೀಕೃಷ್ಣನಿಗೆ ನಮಸ್ಕರಿ ಸಿದರು. ಬಳಿಕ ಶ್ರೀಕೃಷ್ಣನು ಬ್ರಾಹ್ಮಣರಿಗೂ ಮತ್ತು ಕುರುವಂಶೀಯ ವೃದ್ಧರಿಗೂ ಯಥಾಯೋಗ್ಯವಾಗಿ ನಮಸ್ಕರಿಸಿದನು. ಕುರು, ಸೃಂಜಯ ಮತ್ತು ಕೇಕಯದೇಶದ ರಾಜರು ಶ್ರೀಕೃಷ್ಣನನ್ನು ಸಮ್ಮಾನಿಸಿದರು. ಇದಕ್ಕೆ ಪ್ರತಿಯಾಗಿ ಶ್ರೀಕೃಷ್ಣನೂ ಅವರನ್ನು ಯಥಾಯೋಗ್ಯವಾಗಿ ಸತ್ಕರಿಸಿದನು. ಸೂತ-ಮಾಗಧ-ವಂದಿಗಳು ಮತ್ತು ಬ್ರಾಹ್ಮಣರು ಶ್ರೀಕೃಷ್ಣನನ್ನು ಸ್ತುತಿಸತೊಡಗಿದರು. ಗಂಧರ್ವ-ನಟ-ವಿದೂಷಕರೇ ಮೊದಲಾದವರು ಮೃದಂಗ-ಶಂಖ-ನಗಾರಿ-ವೀಣೆ-ಪಣವ-ಗೋಮುಖ–ಇವೇ ಮುಂತಾದ ವಾದ್ಯಗಳನ್ನು ಬಾರಿಸುತ್ತಾ ಕಮಲಾಕ್ಷನಾದ ಶ್ರೀಕೃಷ್ಣನನ್ನು ಪ್ರಸನ್ನ ಗೊಳಿಸುವ ಸಲುವಾಗಿ ನೃತ್ಯವಾಡುತ್ತಾ ಆತನ ಲೀಲಾಪ್ರಸಂಗಗಳನ್ನು ಕರ್ಣಾನಂದಕರವಾಗಿ ಹಾಡುತ್ತಿದ್ದರು. ಹೀಗೆ ಪುಣ್ಯಶ್ಲೋಕಶಿರೋಮಣಿ ಯಾದ ಶ್ರೀಕೃಷ್ಣನು ಸುಹೃದರಿಂದ ಪರಿವೃತನಾಗಿ ವಂದಿ-ಮಾಗಧರಿಂದ ಸ್ತುತಿಸಲ್ಪಡುತ್ತಾ ಸರ್ವಾಲಂಕಾರಶೋಭಿತವಾದ ಇಂದ್ರಪ್ರಸ್ಥನಗರಿಯನ್ನು ಪ್ರವೇಶಿಸಿದನು. ಆ ಸಮಯದಲ್ಲಿ ಇಂದ್ರಪ್ರಸ್ಥನಗರದ ಮಾರ್ಗಗಳು ಮದಿಸಿದ ಆನೆಗಳ ಸುಗಂಧಯುಕ್ತವಾದ ಮದೋದಕದಿಂದ ತೋಯಿಸ ಲ್ಪಟ್ಟಂತೆ ಕಾಣುತ್ತಿದ್ದುವು. ಚಿತ್ರಿತವಾದ ಧ್ವಜಗಳಿಂದಲೂ ಚಿನ್ನದ ತೋರಣ ಗಳಿಂದಲೂ ಬೀದಿಗಳು ಸಮಲಂಕೃತವಾಗಿದ್ದುವು. ಎಲ್ಲ ಮನೆಗಳ ಬಾಗಿಲು

ಗಳಲ್ಲಿಯೂ ಶ್ರೀಕೃಷ್ಣನನ್ನು ಸ್ವಾಗತಿಸುವ ಸಲುವಾಗಿ ಪೂರ್ಣಕುಂಭಗಳ ನ್ನಿಟ್ಟಿದ್ದರು. ಸ್ನಾನಮಾಡಿ, ನೂತನವಸ್ತ್ರಗಳನ್ನೂ, ಆಭರಣಗಳನ್ನೂ ತೊಟ್ಟು, ಪುಷ್ಪಮಾಲಿಕೆಗಳನ್ನು ಕಂಠದಲ್ಲಿ ಧರಿಸಿ, ಗಂಧವನ್ನು ಪೂಸಿಕೊಂಡು ಶ್ರೀಕೃಷ್ಣನನ್ನು ಸ್ವಾಗತಿಸುವ ಸಂಭ್ರಮದಲ್ಲಿದ್ದ ಯುವ-ಯುವತಿಯರಿಂದ ಇಂದ್ರಪ್ರಸ್ಥದ ಮಾರ್ಗಗಳು ವಿರಾಜಿಸುತ್ತಿದ್ದುವು. ಬೀದಿಯುದ್ದಕ್ಕೂ ಪ್ರತಿಯೊಬ್ಬರ ಮನೆಗಳಲ್ಲಿಯೂ ಹಗಲುದೀವಟಿಕೆಗಳು ಬೆಳಗುತ್ತಿದ್ದುವು. ಪ್ರತಿಯೊಂದು ಮನೆಯ ಗವಾಕ್ಷಿಗಳಿಂದಲೂ ಅಗುರುಧೂಪಗಳ ಸುವಾಸಿತ ವಾದ ಹೊಗೆಯು ಹೊರಹೊಮ್ಮುತ್ತಿದ್ದಿತು. ಪ್ರತಿಯೊಂದು ಮನೆಯ ಮೇಲೂ ಪತಾಕೆಗಳು ಹಾರಾಡುತ್ತಿದ್ದುವು. ಪ್ರತಿಯೊಂದು ಮನೆಯ ಮೇಲೂ ಬೆಳ್ಳಿಯ ಶಿಖರಗಳಿದ್ದು ಚಿನ್ನದಕಲಶಗಳಿಂದ ಸಮಲಂಕೃತ ವಾಗಿದ್ದುವು. ಶ್ರೀಕೃಷ್ಣನು ಮಾರ್ಗದ ಎರಡು ಕಡೆಗಳಲ್ಲಿಯೂ ಇಂತಹ ಸುಂದರವಾದ ಭವನಗಳಿಂದ ಕೂಡಿದ್ದ ಇಂದ್ರಪ್ರಸ್ಥನಗರಿಯ ಸೊಬಗನ್ನು ವೀಕ್ಷಿಸುತ್ತಾ ಮುನ್ನಡೆದನು. ಮನುಷ್ಯರ ಕಣ್ಣುಗಳಿಗೆ ಪಾನಪಾತ್ರೆಯಂತೆ ಸೌಂದರ್ಯವೆಂಬ ರಸದಿಂದ ಆನಂದವನ್ನುಂಟುಮಾಡುತ್ತಿದ್ದ ಅತ್ಯಂತದರ್ಶ ನೀಯನಾದ ಭಗವಾನ್ ಶ್ರೀಕೃಷ್ಣನು ರಾಜಮಾರ್ಗದಲ್ಲಿ ಆಗಮಿಸುತ್ತಿರುವ ನೆಂಬ ವಾರ್ತೆಯನ್ನು ಕೇಳಿದೊಡನೆಯೇ ಇಂದ್ರಪ್ರಸ್ಥದ ಯುವತಿಯರು ಶ್ರೀಕೃಷ್ಣನನ್ನು ನೋಡಬೇಕೆನ್ನುವ ಔತ್ಸುಕ್ಯದಿಂದ ಮನೆಗೆಲಸಗಳನ್ನೂ ಅಷ್ಟಕ್ಕೇ ನಿಲ್ಲಿಸಿ, ಮಲಗಿದ್ದ ಗಂಡಂದಿರನ್ನೂ ಪರಿತ್ಯಜಿಸಿ, ಅವರಿಗೂ ಹೇಳ ಹೋಗದೆ ಓಡಿಹೋಗುವ ಅವಸರದಲ್ಲಿ ಮುಡಿಯು ಬಿಚ್ಚಿಹೋಗಿರುವು ದನ್ನೂ, ಉಟ್ಟ ಸೀರೆಯು ಸಡಿಲಿರುವುದನ್ನೂ ಗಮನಿಸದೆ ಧಾವಿಸಿ ಬೀದಿಗೆ ಬಂದರು. ರಥಾಶ್ವ-ಗಜ-ಪದಾತಿಸೈನಿಕರಿಂದ ಸಮಾಕುಲವಾಗಿದ್ದ ರಾಜ ಮಾರ್ಗದಲ್ಲಿ ಪತ್ನಿಯರ ಸಮೇತನಾಗಿ ಬರುತ್ತಿದ್ದ ಶ್ರೀಕೃಷ್ಣನನ್ನು ಮನೆಗಳ ಉಪ್ಪರಿಗೆಗಳ ಮೇಲೆ ನಿಂತಿದ್ದ ಸ್ತ್ರೀಯರು ನೋಡಿ ಅವನ ಮೇಲೆ ಹೂ ಮಳೆಯನ್ನು ಸುರಿಸಿ ಮನಸ್ಸಿನಿಂದಲೇ ಜಗದಾನಂದಕಂದನನ್ನು ಆಲಿಂಗಿಸಿ ಕೊಂಡರು ಮತ್ತು ಪ್ರೇಮಪೂರ್ಣವಾದ ಮಂದಹಾಸದಿಂದಲೂ ಕಡೆಗಣ್ಣಿನ ನೋಟದಿಂದಲೂ ಶ್ರೀಕೃಷ್ಣನನ್ನು ಸ್ವಾಗತಿಸಿದರು. ನಗರದ ಆ ಸ್ತ್ರೀಯರು ಚಂದ್ರನೊಡನಿರುವ ನಕ್ಷತ್ರದೇವತೆಗಳಂತೆ ಶ್ರೀಕೃಷ್ಣನನ್ನು ಅನುಸರಿಸಿ

ಬರುತ್ತಿದ್ದ ಶ್ರೀಕೃಷ್ಣನ ಪ್ರೇಯಸಿಯರನ್ನು ನೋಡಿ ಹೀಗೆ ಮಾತನಾಡಿ ಕೊಂಡರು:

"ಪ್ರಿಯಸಖಿಯರೇ! ಪುರುಷಶ್ರೇಷ್ಠನಾದ ಶ್ರೀಕೃಷ್ಣನು ಉದಾರವಾದ ಹಾಸ್ಯದಿಂದಲೂ, ವಿಲಾಸಪೂರ್ಣವಾದ ಕಟಾಕ್ಷವೀಕ್ಷಣದಿಂದಲೂ, ತನ್ನ ಪತ್ನಿಯರ ಕಡೆಗೆ ನೋಡುತ್ತಾ ಅವರ ಕಣ್ಣುಗಳಿಗೆ ಪರಮಾನಂದ ಪ್ರದನಾಗಿದ್ದಾನೆ. ಇಂತಹ ಸೌಭಾಗ್ಯವನ್ನು ಪಡೆಯಲು ಅವರು ಎಂತಹ ಪುಣ್ಯಕರ್ಮವನ್ನು ಮಾಡಿದ್ದರು?"

ಹೀಗೆ ಶ್ರೀಕೃಷ್ಣನು ಸಪರಿವಾರನಾಗಿ ರಾಜಬೀದಿಯಲ್ಲಿ ಹೋಗುತ್ತಿದ್ದಾಗ ಅಲ್ಲಲ್ಲಿ ಮುಖ್ಯ-ಮುಖ್ಯರಾದ ವ್ಯಾಪಾರಿಗಳೂ ಮತ್ತು ಪಾಪರಹಿತ ರಾದ ಪೌರರೂ ಮಂಗಲದ್ರವ್ಯಗಳನ್ನು ಹಿಡಿದು ಶ್ರೀಕೃಷ್ಣನನ್ನು ಪೂಜಿಸಿ ಸ್ವಾಗತಿಸಿ ಸತ್ಕರಿಸುತ್ತಿದ್ದರು. ಹೀಗೆ ಶ್ರೀಕೃಷ್ಣನು ಪೌರರಿಂದಲೂ, ವಣಿಗ್ಜನರಿಂದಲೂ ಅಲ್ಲಲ್ಲಿ ಸತ್ಕಾರವನ್ನು ಸ್ವೀಕರಿಸುತ್ತಾ ಯುಧಿಷ್ಠಿರನ ಅರಮನೆಯನ್ನು ತಲುಪಿದನು. ಅರಮನೆಯ ಮಹಾದ್ವಾರಕ್ಕೆ ಬರುತ್ತಲೇ ಅರಳಿದ ಕಣ್ಣುಗಳಿಂದ ಕೂಡಿದ್ದ ಶ್ರೀಕೃಷ್ಣನನ್ನೂ ಅವನ ಪತ್ನಿಯರನ್ನೂ ನೋಡಬೇಕೆನ್ನುವ ಸಂಭ್ರಮದಿಂದ ಕೂಡಿದ್ದ ಅಂತಃಪುರದ ಸ್ತ್ರೀಯರು ಪ್ರೀತ್ಯಾದರಗಳಿಂದ ಮುಂದೆ ಬಂದು ಶ್ರೀಕೃಷ್ಣನನ್ನು ಸ್ವಾಗತಿಸಿದರು. ಅವರ ಹಾರ್ದಿಕವಾದ ಸ್ವಾಗತ-ಸತ್ಕಾರಗಳನ್ನು ಸ್ವೀಕರಿಸಿ ಶ್ರೀಕೃಷ್ಣನು ಅರಮನೆ ಯನ್ನು ಪ್ರವೇಶಿಸಿದನು.

ಕುಂತೀದೇವಿಯು ತ್ರಿಭುವನೇಶ್ವರನಾದ, ತನ್ನ ಅಣ್ಣನ ಮಗನಾದ ಶ್ರೀಕೃಷ್ಣನನ್ನು ನೋಡುತ್ತಲೇ ಪ್ರೀತಿಯಿಂದ ತುಂಬಿದ ಹೃದಯಳಾಗಿ ಮಂಚ ದಿಂದಿಳಿದು ಸೊಸೆಯಾದ ದ್ರೌಪದಿಯೊಡನೆ ಮುಂದೆ ಬಂದು ಶ್ರೀಕೃಷ್ಣ ನನ್ನು ಗಾಢವಾಗಿ ತಬ್ಬಿಕೊಂಡಳು. ದೇವದೇವೇಶನಾದ ಗೋವಿಂದನನ್ನು ಆದರಪೂರ್ವಕವಾಗಿ ಅರಮನೆಗೆ ಕರೆತಂದನಂತರ ಆನಂದೋದ್ರೇಕದಿಂದ ಮೂಢನಂತಾಗಿದ್ದ ಯುಧಿಷ್ಠಿರನಿಗೆ, ಶ್ರೀಕೃಷ್ಣನಿಗೆ ಸತ್ಕಾರವನ್ನು ಹೇಗೆ ಮಾಡಬೇಕೆಂಬುದೇ ತಿಳಿಯದೇ ಹೋಯಿತು. ಬಳಿಕ ಶ್ರೀಕೃಷ್ಣನು ತನ್ನ ಸೋದರತ್ತೆಯಾದ ಕುಂತಿಗೂ, ಗುರುಪತ್ನಿಯರಿಗೂ ನಮಸ್ಕರಿಸಿದನು. ಸುಭದ್ರಾ-ದ್ರೌಪದಿಯರು ಶ್ರೀಕೃಷ್ಣನಿಗೆ ನಮಸ್ಕರಿಸಿದರು. ಅತ್ತೆಯಾದ

ಕುಂತೀದೇವಿಯ ಪ್ರೇರಣೆಯಂತೆ ದ್ರೌಪದಿಯು ವಸ್ತ್ರಾಭರಣ-ಪುಷ್ಪಹಾರ ಗಳಿಂದ ಶ್ರೀಕೃಷ್ಣನ ಪಟ್ಟಮಹಿಷಿಯರಾದ ರುಕ್ಮಿಣೀ, ಸತ್ಯಭಾಮಾ, ಭದ್ರಾ, ಜಾಂಬವತೀ, ಕಾಲಿಂದೀ, ಮಿತ್ರವಿಂದಾ, ಲಕ್ಷ್ಮಣಾ, ಪರಮಸಾಧ್ವಿಯಾದ ಸತ್ಯಾ–ಇವರನ್ನೂ ಮತ್ತು ಶ್ರೀಕೃಷ್ಣನ ಇತರ ಪತ್ನಿಯರನ್ನೂ ಪೂಜಿಸಿ ಸತ್ಕರಿಸಿದಳು. ಧರ್ಮರಾಜನಾದ ಯುಧಿಷ್ಠಿರನು ಶ್ರೀಕೃಷ್ಣನ ಪತ್ನೀ-ಪುತ್ರರಿಗೂ, ಸೈನಿಕರಿಗೂ, ಸೇವಕರಿಗೂ, ಮಂತ್ರಿಗಳಿಗೂ, ಪರಿವಾರದ ವರಿಗೂ ಯಥಾಯೋಗ್ಯವಾದ ಸುಖಕರವಾದ ವಸತಿಗಳನ್ನೇರ್ಪಡಿಸಿಕೊಟ್ಟು ಅನುದಿನವೂ ಹೊಸ-ಹೊಸ ಬಗೆಯ ಸತ್ಕಾರಗಳಿಂದ ಅವರೆಲ್ಲರನ್ನೂ ಉಪಚರಿಸುತ್ತಿದ್ದನು. ಶ್ರೀಕೃಷ್ಣನು ಅರ್ಜುನನೊಡನೆ ಸೇರಿ ಖಾಂಡವವನ ವನ್ನು ದಹಿಸಲು ಅಗ್ನಿಗೆ ಅವಕಾಶ ಮಾಡಿಕೊಟ್ಟು, ಇದರಿಂದ ಅವನನ್ನು ತೃಪ್ತಿಪಡಿಸಿ ಆ ಸಮಯದಲ್ಲಿ ಅಗ್ನಿಯಿಂದ ದಗ್ಧನಾಗಿ ಹೋಗುತ್ತಿದ್ದ ಮಯಾಸುರನನ್ನು ವಿಮೋಚನೆಗೊಳಿಸಿದನು. ಭಗವಂತನ ಆಜ್ಞೆಯಂತೆ ಆ ಮಯಾಸುರನು ಯುಧಿಷ್ಠಿರನಿಗೆ ಒಂದು ಅದ್ಭುತವಾದ ಸಭಾಭವನವನ್ನು ನಿರ್ಮಿಸಿಕೊಟ್ಟನು. ಯುಧಿಷ್ಠಿರನಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಶ್ರೀಕೃಷ್ಣನು ಇಂದ್ರಪ್ರಸ್ಥನಗರದಲ್ಲಿಯೇ ಹಲವಾರು ಮಾಸಗಳನ್ನು ಕಳೆದನು. ಆ ಸಮಯದಲ್ಲವನು ಸೈನಿಕರಿಂದ ಸಮಾವೃತನಾಗಿ ಅರ್ಜುನನೊಡನೆ ರಥದಲ್ಲಿ ಕುಳಿತು ಅರಣ್ಯಗಳಲ್ಲಿ ಸಂಚರಿಸುತ್ತಿದ್ದನು.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೭೧ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೭೨ನೆಯ ಅಧ್ಯಾಯ

ಪಾಂಡವರಿಂದ ರಾಜಸೂಯಯಾಗದ ಉಪಕ್ರಮ : ಜರಾಸಂಧನ ಸಂಹಾರ

ಶ್ರೀಶುಕಮುನಿಗಳು ಹೇಳುತ್ತಾರೆ :

ಏಕದಾ ತು ಸಭಾಮಧ್ಯೇ ಆಸ್ಥಿತೋ ಮುನಿಭಿರ್ವೃತಃ ।
ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈರ್ಭ್ರಾತೃಭಿಶ್ಚ ಯುಧಿಷ್ಠಿರಃ ॥೧॥

ಆಚಾರ್ಯೈಃ ಕುಲವೃದ್ಧೈಶ್ಚ ಜ್ಞಾತಿಸಮ್ಬನ್ಧಿಬಾನ್ಧವೈಃ ।
ಶೃಣ್ವತಾಮೇವ ಚೈತೇಷಾಮಾಭಾಷ್ಯೇದಮುವಾಚ ಹ ॥೨॥

"ಪರೀಕ್ಷಿತಮಹಾರಾಜ! ಹೀಗೆಯೇ ಇರುತ್ತಿರಲಾಗಿ ಒಂದು ದಿನ ಹಲವಾರು ಮುನಿಗಳಿಂದಲೂ, ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಿಂದಲೂ, ಭೀಮಸೇನನೇ ಮೊದಲಾದ ಅನುಜರಿಂದಲೂ, ಆಚಾರ್ಯರಿಂದಲೂ, ಕುಲವೃದ್ಧರಿಂದಲೂ, ಜ್ಞಾತಿಬಾಂಧವರಿಂದಲೂ, ನೆಂಟರಿಷ್ಟರಿಂದಲೂ, ಕುಟುಂಬವರ್ಗದವರಿಂದಲೂ ಸಮಾವೃತನಾಗಿ ಮಹಾಸಭೆಯಲ್ಲಿ ಕುಳಿತಿದ್ದ ಯುಧಿಷ್ಠಿರ ಮಹಾರಾಜನು ಸಮಸ್ತರ ಸಮ್ಮುಖದಲ್ಲಿ ಮಹಾಮಹಿಮನಾದ ಶ್ರೀಕೃಷ್ಣನನ್ನು ಸಂಬೋಧಿಸಿ ಈ ಮಾತುಗಳನ್ನು ಹೇಳಿದನು :

ಕ್ರತುರಾಜೇನ ಗೋವಿನ್ದ ರಾಜಸೂಯೇನ ಪಾವನೀಃ ।
ಯಕ್ಷ್ಯೇ ವಿಭೂತೀರ್ಭವತಸ್ತತ್ಸಮ್ಪಾದಯ ನಃ ಪ್ರಭೋ ॥೩॥

"ಗೋವಿಂದ! ಸರ್ವಶ್ರೇಷ್ಠವಾದ ರಾಜಸೂಯಯಾಗದ ಮೂಲಕವಾಗಿ ನಿನ್ನ ಮತ್ತು ಪರಮಪಾವನರಾದ, ನಿನ್ನ ವಿಭೂತಿಸ್ವರೂಪರಾದ ದೇವತೆಗಳ ಪೂಜೆಯನ್ನು ಮಾಡಲು ಬಯಸಿದ್ದೇನೆ. ಪ್ರಭುವೇ! ಕೃಪೆಮಾಡಿ ಈ ನನ್ನ ಸಂಕಲ್ಪವನ್ನು ನಡೆಸಿಕೊಡು.

ತ್ವತ್ಪಾದುಕೇ ಅವಿರತಂ ಪರಿ ಯೇ ಚರನ್ತಿ
ಧ್ಯಾಯನ್ತ್ಯಭದ್ರನಶನೇ ಶುಚಯೋ ಗೃಣನ್ತಿ ।
ವಿನ್ದನ್ತಿ ತೇ ಕಮಲನಾಭ ಭವಾಪವರ್ಗ-
ಮಾಶಾಸತೇ ಯದಿ ತ ಆಶಿಷ ಈಶ ನಾನ್ಯೇ ॥೪॥

ಪದ್ಮನಾಭನೇ! ನಿನ್ನ ಚರಣಕಮಲಗಳ ಪಾದುಕೆಗಳು ಸಮಸ್ತವಾದ ಅಮಂಗಳವನ್ನೂ ಹೋಗಲಾಡಿಸುತ್ತವೆ. ಯಾರು ನಿರಂತರವಾಗಿ ನಿನ್ನ ಪಾದುಕೆಗಳ ಸೇವೆಮಾಡುವರೋ, ಧ್ಯಾನಮಾಡುವರೋ, ಸ್ತೋತ್ರಮಾಡುವರೋ ಅವರೇ ಪವಿತ್ರಾತ್ಮರು. ಅಂತಹವರು ಹುಟ್ಟು-ಸಾವುಗಳ ರೂಪವಾದ ಸಂಸಾರಚಕ್ರದಿಂದ ಮುಕ್ತರೂ ಆಗುತ್ತಾರೆ. ಒಂದು ವೇಳೆ ಅವರು ಸಾಂಸಾರಿಕವಾದ ಭೋಗಗಳನ್ನೇ ಅಪೇಕ್ಷಿಸಿದರೂ ಅವುಗಳನ್ನೂ ಅವರು ಪಡೆದುಕೊಳ್ಳುತ್ತಾರೆ. ಆದರೆ ಯಾರು ನಿನ್ನ ದಿವ್ಯವಾದ ಚರಣಕಮಲ

ಗಳಲ್ಲಿ ಆಶ್ರಯವನ್ನು ಪಡೆಯುವುದಿಲ್ಲವೋ ಅಂತಹವರಿಗೆ ಸಂಸಾರದಿಂದ ಬಿಡುಗಡೆಯೂ ಲಭಿಸುವುದಿಲ್ಲ ; ಸಾಂಸಾರಿಕಸುಖವೂ ಸಿಕ್ಕುವುದಿಲ್ಲ.

ತದ್ದೇವದೇವ ಭವತಶ್ಚರಣಾರವಿನ್ದ-
ಸೇವಾನುಭಾವಮಿಹ ಪಶ್ಯತು ಲೋಕ ಏಷಃ ।
ಯೇ ತ್ವಾಂ ಭಜನ್ತಿ ನ ಭಜನ್ತ್ಯುತ ವೋಭಯೇಷಾಂ
ನಿಷ್ಠಾಂ ಪ್ರದರ್ಶಯ ವಿಭೋ ಕುರುಸೃಞ್ಜಯಾನಾಮ್ ॥

ದೇವತೆಗಳಿಗೂ ಆರಾಧ್ಯದೇವನಾದ ಕೃಷ್ಣಸ್ವಾಮಿಯೇ! ಲೋಕದ ಜನರು ನಿನ್ನ ಚರಣಕಮಲಗಳನ್ನು ಸೇವಿಸುವುದರಿಂದ ದೊರೆಯುವ ಫಲವೆಂತಹುದೆಂಬುದನ್ನು ತಿಳಿಯುವಂತಾಗಬೇಕು. ಕುರು-ಸೃಂಜಯರಲ್ಲಿ ಯಾರು ನಿನ್ನನ್ನು ಭಜಿಸುವರೋ ಮತ್ತು ಯಾರು ನಿನ್ನನ್ನು ಭಜಿಸುವುದಿಲ್ಲವೋ–ಎರಡು ರೀತಿಯಲ್ಲಿಯೂ ಇರುವ ಅವರಿಗೆ ನಿನ್ನ ನೆಲೆಯೇನೆಂಬುದನ್ನು ತೋರಿಸಬೇಕಾಗಿದೆ.

ನ ಬ್ರಹ್ಮಣಃ ಸ್ವಪರಭೇದಮತಿಸ್ತವ ಸ್ಯಾತ್
ಸರ್ವಾತ್ಮನಃ ಸಮದೃಶಃ ಸ್ವಸುಖಾನುಭೂತೇಃ ।
ಸಂಸೇವತಾಂ ಸುರತರೋರಿವ ತೇ ಪ್ರಸಾದಃ
ಸೇವಾನುರೂಪಮುದಯೋ ನ ವಿಪರ್ಯಯೋಽತ್ರ ॥೬॥

ಪ್ರಭುವೇ! ನೀನು ಸಮಸ್ತರಿಗೂ ಆತ್ಮಸ್ವರೂಪನಾಗಿರುವೆ. ಆತ್ಮಾನಂದಪೂರ್ಣನಾಗಿರುವೆ. ಸ್ವಯಂ ಪರಬ್ರಹ್ಮನೇ ಆಗಿರುವೆ. ಆದುದರಿಂದ ನಿನಗೆ–'ಇವನು ನನ್ನವನು ಇವನು ನನ್ನವನಲ್ಲ'–ಎಂಬ ಯಾವ ವಿಧವಾದ ಭೇದಭಾವವೂ ಇಲ್ಲ. ಆದರೂ ಕಲ್ಪವೃಕ್ಷವು ಸೇವಿಸಿದವರಿಗೆ ಮಾತ್ರವೇ ಫಲವನ್ನು ನೀಡುವಂತೆ ಯಾರು ನಿನ್ನ ಸೇವೆಯನ್ನು ಮಾಡುವರೋ ಅಂತಹವರ ಭಾವನೆಗೆ ಮತ್ತು ಶ್ರದ್ಧೆಗೆ ಅನುರೂಪವಾಗಿ ಅವರಿಗೆ ಫಲವು ಲಭಿಸುತ್ತದೆ.* ಫಲದಲ್ಲಿ ನ್ಯೂನತೆಯಾಗಲೀ, ಆಧಿಕ್ಯವಾಗಲೀ

---

* ಶ್ರೀಕೃಷ್ಣನು ಗೀತೆಯಲ್ಲಿ ಇದನ್ನೇ ಹೇಳುತ್ತಾನೆ :

ಯೇ ಯಥಾ ಮಾಂ ಪ್ರಪದ್ಯನ್ತೇ ತಾಂಸ್ತಥೈವ ಭಜಾಮ್ಯಹಮ್ ।
ಮಮ ವರ್ತ್ಮಾನುವರ್ತನ್ತೇ ಮನುಷ್ಯಾಃ ಪಾರ್ಥ ಸರ್ವಶಃ ॥ (೪-೧೧)

ಉಂಟಾದರೆ ಅದು ಅವರ ಸೇವೆಗೆ ಅನುರೂಪವಾಗಿರುವುದೇ ಹೊರತು ನಿನ್ನ ಪಕ್ಷಪಾತಯುಕ್ತವಾದ ಅನುಕಂಪವಾಗಲೀ, ನಿರ್ದಯತೆಯಾಗಲೀ ಅದಕ್ಕೆ ಕಾರಣವಲ್ಲ. ನಿನ್ನಲ್ಲಿ ವಿಷಮತೆ, ನಿರ್ದಯತೆ, ಪಕ್ಷಪಾತ–ಇತ್ಯಾದಿ ಯಾವ ದೋಷಗಳೂ ಇರುವುದಿಲ್ಲ. ಆದುದರಿಂದ ನಿನ್ನನ್ನೇ ಆಶ್ರಯಿಸಿರುವ ಅನನ್ಯಶರಣರಾದ ಭಕ್ತರಿಗೆ ಎಂತಹ ಫಲವು ಸಿಕ್ಕುವುದೆಂಬುದನ್ನು ಜನರು ತಿಳಿಯಬೇಕಾಗಿದೆ.''

ಶ್ರೀಕೃಷ್ಣನು ಹೇಳುತ್ತಾನೆ :

“ಶತ್ರುಗಳನ್ನು ಸಂತಾಪಗೊಳಿಸುವ ಸಾಮರ್ಥ್ಯದಿಂದ ಸಂಪನ್ನನಾಗಿ ರುವ ಯುಧಿಷ್ಠಿರನೇ! ರಾಜಸೂಯಯಾಗಮಾಡಲು ಮಾಡಿರುವ ನಿನ್ನ ಸಂಕಲ್ಪವು ಶ್ಲಾಘ್ಯವಾಗಿದೆ. ನೀನು ರಾಜಸೂಯಯಜ್ಞವನ್ನು ಮಾಡು ವುದರಿಂದ ನಿನ್ನ ಮಂಗಳಮಯವಾದ ಕೀರ್ತಿಯು ಮೂರು ಲೋಕ ಗಳಲ್ಲಿಯೂ ಹರಡುತ್ತದೆ. ನಿನ್ನ ಈ ಮಹಾಯಜ್ಞವು ಸಮಸ್ತಋಷಿ-ಮುನಿಗಳಿಗೂ, ಪಿತೃದೇವತೆಗಳಿಗೂ, ದೇವತೆಗಳಿಗೂ, ಸುಹೃದರಿಗೂ, ನಮಗೂ ಮತ್ತು ಪ್ರಪಂಚದಲ್ಲಿರುವ ಸಮಸ್ತ ಪ್ರಾಣಿಗಳಿಗೂ ಇಷ್ಟವೇ ಆಗಿದೆ. ನೀನು ಶ್ರೇಷ್ಠವಾದ ಈ ಯಜ್ಞಮಾಡುವುದನ್ನು ಎಲ್ಲರೂ ಇಷ್ಟಪಡು ತ್ತಿದ್ದಾರೆ. ಮಹಾರಾಜ! ಪೃಥ್ವಿಯಲ್ಲಿರುವ ರಾಜರೆಲ್ಲರನ್ನೂ ಜಯಿಸಿ, ಅಖಂಡಭೂಮಂಡಲವನ್ನೇ ವಶಪಡಿಸಿಕೊಂಡು, ಯಜ್ಞೋಚಿತವಾದ ಸಮಸ್ತ ಸಾಮಗ್ರಿಗಳನ್ನೂ ಸಂಗ್ರಹಿಸಿ ನೀನು ಈ ಮಹಾಯಾಗವನ್ನು ಮಾಡು. ಯುಧಿಷ್ಠಿರ! ನಿನ್ನ ನಾಲ್ವರು ತಮ್ಮಂದಿರೂ ಇಂದ್ರನೇ ಮೊದಲಾದ ಲೋಕಪಾಲರ ಅಂಶದಿಂದ ಹುಟ್ಟಿದವರಾಗಿದ್ದಾರೆ. ಎಲ್ಲರೂ ಮಹಾವೀರ ರಾಗಿದ್ದಾರೆ. ನೀನಾದರೋ ಮಹಾಮನಸ್ವಿಯೂ, ಸಂಯಮಿಯೂ ಆಗಿರುವೆ. ನೀನು ಜಿತೇಂದ್ರಿಯನಾಗಿದ್ದು ನನ್ನನ್ನು ವಶಪಡಿಸಿಕೊಂಡು ಬಿಟ್ಟಿರುವೆ. ಯಾರು ತಮ್ಮ ಇಂದ್ರಿಯಗಳನ್ನು ವಶಪಡಿಸಿಕೊಂಡಿಲ್ಲವೋ ಅಂತಹವರು ಖಂಡಿತವಾಗಿಯೂ ನನ್ನನ್ನು ವಶಪಡಿಸಿಕೊಳ್ಳಲಾರರು.

ಯಾರು ನನ್ನನ್ನು ಹೇಗೆ ಶರಣುಹೋಗುವರೋ ನಾನು ಅವರಿಗೆ ಹಾಗೆಯೇ ಒಲಿಯುವೆನು. ಎಲ್ಲ ಮನುಷ್ಯರೂ ಎಲ್ಲ ರೀತಿಯಲ್ಲಿಯೂ ನನ್ನನ್ನೇ ಪಡೆಯಲು ಪ್ರಯತ್ನಿಸುತ್ತಿರುವರು.

ಪ್ರಪಂಚದಲ್ಲಿ ದೊಡ್ಡ-ದೊಡ್ಡ ದೇವತೆಗಳೂ ಕೂಡ ತೇಜಸ್ಸಿನಿಂದಾಗಲೀ, ಯಶಸ್ಸಿನಿಂದಾಗಲೀ, ಕಾಂತಿಯಿಂದಾಗಲೀ, ಐಶ್ವರ್ಯದಿಂದಾಗಲೀ ನನ್ನ ಭಕ್ತರನ್ನು ತಿರಸ್ಕರಿಸಲಾರರು. ಹೀಗಿರುವಾಗ ರಾಜರ ವಿಷಯವಾಗಿ ಹೇಳುವುದೇನಿದೆ? ನನ್ನ ಭಕ್ತರಾದ ನಿಮ್ಮನ್ನು ಪ್ರಪಂಚದಲ್ಲಿರುವ ಯಾವನೇ ರಾಜನು ಕೂಡ ತಿರಸ್ಕರಿಸಲಾರನು."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಭಗವಂತನ ಮಾತನ್ನು ಕೇಳಿ ಯುಧಿಷ್ಠಿರ ಮಹಾರಾಜನ ಹೃದಯವು ಆನಂದದಿಂದ ತುಂಬಿಹೋಯಿತು. ಅವನ ಮುಖಕಮಲವರಳಿತು. ವೈಷ್ಣವತೇಜಸ್ಸಿನ ಸಂಚಾರದಿಂದ ಅಧಿಕವಾದ ಶಕ್ತಿಯಿಂದ ಕೂಡಿದ್ದ ತನ್ನ ಸಹೋದರರನ್ನು ಯುಧಿಷ್ಠಿರನು ದಿಗ್ವಿಜಯಕ್ಕೆ ಹೊರಡುವಂತೆ ಆಜ್ಞಾಪಿಸಿದನು. ಧರ್ಮರಾಜನು ಸಹದೇವನನ್ನು ಸೃಂಜಯವೀರರೊಡನೆ ದಕ್ಷಿಣದಿಕ್ಕಿನ ವಿಜಯಕ್ಕಾಗಿ ಕಳುಹಿಸಿಕೊಟ್ಟನು. ನಕುಲನನ್ನು ಮತ್ಸ್ಯದೇಶೀಯವೀರರೊಡನೆ ಪಶ್ಚಿಮದಿಕ್ಕಿನ ವಿಜಯಕ್ಕೂ, ಅರ್ಜುನನನ್ನು ಕೇಕಯದೇಶೀಯವೀರರೊಡನೆ ಉತ್ತರದಿಕ್ಕಿನ ವಿಜ ಯಕ್ಕೂ, ಭೀಮಸೇನನನ್ನು ಮದ್ರದೇಶೀಯವೀರರೊಡನೆ ಪೂರ್ವದಿಕ್ಕಿನ ವಿಜಯಕ್ಕೂ ಕಳುಹಿಸಿಕೊಟ್ಟನು.

ಪರೀಕ್ಷಿತಮಹಾರಾಜ! ಯುಧಿಷ್ಠಿರನಿಂದ ಕಳುಹಿಸಲ್ಪಟ್ಟ ಭೀಮನೇ ಮೊದಲಾದ ವೀರರು ತಮ್ಮ ಬಲ-ಪೌರುಷಗಳಿಂದ ಎಲ್ಲ ದಿಕ್ಕುಗಳ ನರಪತಿ ಗಳನ್ನೂ ಗೆದ್ದು ಯಜ್ಞಾನುಷ್ಠಾನಮಾಡಲು ಉದ್ಯುಕ್ತನಾಗಿದ್ದ ಯುಧಿಷ್ಠಿರ ನಿಗೆ ಹೇರಳವಾದ ಐಶ್ವರ್ಯವನ್ನು ತಂದುಕೊಟ್ಟರು. ಇದುವರೆಗೂ ಜರಾಸಂಧನನ್ನು ಜಯಿಸಲು ಸಾಧ್ಯವಾಗಿಲ್ಲವೆಂಬ ವಾರ್ತೆಯನ್ನು ಕೇಳಿ ಯುಧಿಷ್ಠಿರನು ಚಿಂತಾಕ್ರಾಂತನಾದನು. ಆ ಸಮಯದಲ್ಲಿ ಶ್ರೀಕೃಷ್ಣನು ಹಿಂದೆ ಉದ್ಧವನು ಹೇಳಿದ್ದ ಉಪಾಯವನ್ನೇ ಯುಧಿಷ್ಠಿರನಿಗೆ ಸೂಚಿಸಿ ದನು. ಅದಕ್ಕೆ ಯುಧಿಷ್ಠಿರನ ಅನುಮತಿಯನ್ನು ಪಡೆದು ಭೀಮಾರ್ಜುನ-ಕೃಷ್ಣ—ಈ ಮೂವರೂ ಬ್ರಾಹ್ಮಣರ ವೇಷವನ್ನು ಧರಿಸಿ ಜರಾಸಂಧನ ರಾಜಧಾನಿಯಾದ ಗಿರಿವ್ರಜನಗರಕ್ಕೆ ಹೋದರು. ಜರಾಸಂಧನು ಬ್ರಾಹ್ಮಣರ ಭಕ್ತನಾಗಿದ್ದು ಗೃಹಸ್ಥಾಶ್ರಮೋಚಿತವಾದ ಕರ್ಮಗಳನ್ನು ಶ್ರದ್ಧೆಯಿಂದ

ಮಾಡುತ್ತಿದ್ದನು. ವಸ್ತುತಃ ಕ್ಷತ್ರಿಯರಾಗಿದ್ದು ಬ್ರಾಹ್ಮಣರ ವೇಷವನ್ನು ಧರಿಸಿದ್ದ ಭೀಮಾರ್ಜುನ-ಕೃಷ್ಣರು, ಜರಾಸಂಧನು ಅತಿಥಿಗಳಿಗೂ ಅಭ್ಯಾಗತರಿಗೂ ಸೇವೆಮಾಡುವ ಸಮಯದಲ್ಲಿ ಅವನ ಬಳಿಗೆ ಹೋದರು :

ರಾಜನ್ವಿದ್ಧ್ಯತಿಥೀನ್ ಪ್ರಾಪ್ತಾನರ್ಥಿನೋ ದೂರಮಾಗತಾನ್ ।
ತನ್ನಃ ಪ್ರಯಚ್ಛ ಭದ್ರಂ ತೇ ಯದ್ವಯಂ ಕಾಮಯಾಮಹೇ ॥೧೮॥

"ಮಹಾರಾಜ! ನಿನಗೆ ಮಂಗಳವಾಗಲಿ. ನಾವು ಮೂವರು ಅತಿಥಿಗಳೂ ಬಹಳ ದೂರದೇಶದಿಂದ ಇಲ್ಲಿಗೆ ಆಗಮಿಸಿರುತ್ತೇವೆ. ನಿಶ್ಚಯವಾಗಿಯೂ ನಾವು ನಿನ್ನಿಂದ ಒಂದು ವಿಶೇಷವಾದ ಪ್ರಯೋಜನವನ್ನು ಪಡೆದುಕೊಳ್ಳುವ ಸಲುವಾಗಿಯೇ ಇಲ್ಲಿಗೆ ಆಗಮಿಸಿದ್ದೇವೆ. ಆದುದರಿಂದ ನಾವು ಏನನ್ನು ನಿನ್ನಿಂದ ಅಪೇಕ್ಷಿಸುವೆವೋ ಅದನ್ನು ಅವಶ್ಯವಾಗಿ ನೀನು ನಮಗೆ ಕೊಡಬೇಕು.

ಕಿಂ ದುರ್ಮರ್ಷಂ ತಿತಿಕ್ಷೂಣಾಂ ಕಿಮಕಾರ್ಯಮಸಾಧುಭಿಃ ।
ಕಿಂ ನ ದೇಯಂ ವದಾನ್ಯಾನಾಂ ಕಃ ಪರಃ ಸಮದರ್ಶಿನಾಮ್ ॥೧೯॥

ಲೋಕದಲ್ಲಿ ಶಾಂತಾತ್ಮರಿಗೆ ಸೈರಿಸಲಾಗದೇ ಇರುವುದು ಯಾವು ದಿದೆ? ದುಷ್ಟರಿಗೆ ಅಕಾರ್ಯ ಎಂಬುದು ಯಾವುದಿದೆ? ಸಮದರ್ಶಿಗಳಿಗೆ 'ಬೇರೆಯವರು'–ಎಂಬುವರು ಯಾರಿದ್ದಾರೆ? ಅಂತೆಯೇ ಉದಾರಿಗಳಿಗೆ ಕೊಡಬಾರದ ವಸ್ತುವು ಯಾವುದಿದೆ?

ಯೋಽನಿತ್ಯೇನ ಶರೀರೇಣ ಸತಾಂ ಗೇಯಂ ಯಶೋ ಧ್ರುವಮ್ ।
ನಾಚಿನೋತಿ ಸ್ವಯಂ ಕಲ್ಪಃ ಸ ವಾಚ್ಯಃ ಶೋಚ್ಯ ಏವ ಸಃ ॥೨೦॥

ಯಾವ ಮನುಷ್ಯನು, ತಾನು ಸಮರ್ಥನಾಗಿದ್ದರೂ ಅನಿತ್ಯವಾದ ಈ ಶರೀರದಿಂದ ಸತ್ಪುರುಷರ ಹೊಗಳಿಕೆಗೂ ಪಾತ್ರವಾಗುವ ಅವಿನಾಶಿಯಾದ, ಶಾಶ್ವತವಾದ ಯಶಸ್ಸನ್ನು ಸಂಪಾದಿಸುವುದಿಲ್ಲವೋ ಅಂತಹವನನ್ನು ಎಷ್ಟು ನಿಂದಿಸಿದರೂ ಅಲ್ಪವೇ ಆಗುತ್ತದೆ. ಅವನ ಜೀವನವು ಅತ್ಯಂತ ದಯನೀಯವಾಗಿರುತ್ತದೆ.

ಹರಿಶ್ಚನ್ದ್ರೋ ರನ್ತಿದೇವ ಉಞ್ಛವೃತ್ತಿಃ ಶಿಬಿರ್ಬಲಿಃ ।
ವ್ಯಾಧಃ ಕಪೋತೋ ಬಹವೋ ಹ್ಯಧ್ರುವೇಣ ಧ್ರುವಂ ಗತಾಃ ॥೨೧॥

ಜರಾಸಂಧಮಹಾರಾಜ! ನಿನಗೆ ತಿಳಿದಿರುವಂತೆಯೇ ಹರಿಶ್ಚಂದ್ರ, ರಂತಿದೇವ, ಉಂಛವೃತ್ತಿಯಿಂದ ಜೀವಿಸುತ್ತಿದ್ದ ಮುದ್ಗಲ, ಶಿಬಿ, ಬಲಿ, ವ್ಯಾಧ, ಕಪೋತ–ಇವರೇ ಮೊದಲಾದವರು ಅನಿತ್ಯವಾದ ಶರೀರದ ಮೂಲಕವಾಗಿ ಅತಿಥಿಗಳಿಗೆ ತಮ್ಮಲ್ಲಿದ್ದ ಸರ್ವಸ್ವವನ್ನೂ ಕೊಟ್ಟು ಶಾಶ್ವತವಾದ ಕೀರ್ತಿಯನ್ನೂ ಮತ್ತು ಲೋಕಗಳನ್ನೂ ಪಡೆದುಕೊಂಡರು. ಆದುದರಿಂದ ನಾವು ಅಪೇಕ್ಷಿಸಿದುದನ್ನು ಕೊಡುವುದು ನಿನಗೆ ಯೋಗ್ಯವಾಗಿದೆ."*

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಜರಾಸಂಧನು ಅವರ ಮಾತಿನ ಧ್ವನಿಯನ್ನು ಕೇಳಿ, ದೇಹದ ಆಕೃತಿಯನ್ನೂ, ಬಿಲ್ಲಿನ ಹೆದೆಯನ್ನು ಬಾರಿ-ಬಾರಿಗೂ ಸೆಳೆದು ಜಡ್ಡುಕಟ್ಟಿರುವ ಮುಂಗೈಗಳನ್ನೂ ನೋಡಿ–ಇವರು ಬ್ರಾಹ್ಮಣರಲ್ಲವೆಂದೂ ಕ್ಷತ್ರಿಯರೇ ಆಗಿರುವರೆಂದೂ ನಿಶ್ಚಯಿಸಿದನು. ತಾನು ಇವರನ್ನು ಎಲ್ಲಿಯೋ ನೋಡಿರುವುದಾಗಿಯೂ ಜ್ಞಾಪಿಸಿಕೊಂಡು ಹೀಗೆ ನಿಶ್ಚಯಿಸಿದನು :

ರಾಜನ್ಯಬನ್ಧವೋ ಹ್ಯೇತೇ ಬ್ರಹ್ಮಲಿಙ್ಗಾನಿ ಬಿಭ್ರತಿ ।
ದದಾಮಿ ಭಿಕ್ಷಿತಂ ತೇಭ್ಯ ಆತ್ಮಾನಮಪಿ ದುಸ್ತ್ಯಜಮ್ ॥೨೩॥

---

* ೧) ಹರಿಶ್ಚಂದ್ರನು ಅತಿಥಿಯಾದ ವಿಶ್ವಾಮಿತ್ರನ ಸಾಲವನ್ನು ತೀರಿಸುವುದಕ್ಕಾಗಿ ಪತ್ನೀ-ಪುತ್ರರನ್ನೂ ಮಾರಿ ಚಂಡಾಲತ್ವವನ್ನು ಅನುಭವಿಸಿದರೂ ಕಡೆಗೆ ಬ್ರಹ್ಮಲೋಕವನ್ನು ಪಡೆದನು.

೨) ರಂತಿದೇವನು ಪತ್ನೀ-ಪುತ್ರರೊಡನೆ ನಲವತ್ತೆಂಟು ದಿವಸಗಳವರೆಗೆ ನೀರೂ ಕೂಡ ಇಲ್ಲದೆ ಅತಿಪ್ರಯಾಸದಿಂದ ದೊರೆತ ಕೊಂಚ ನೀರನ್ನು ಕೂಡ ಜಲಾರ್ಥಿಯಾಗಿ ಬಂದ ಪುಲ್ಕಸನಿಗಿತ್ತು ತಾನು ಉಪವಾಸಮಾಡಿ ಬ್ರಹ್ಮಲೋಕವನ್ನು ಹೊಂದಿದನು.

೩) ಮುದ್ಗಲನೆಂಬ ಋಷಿಯು ಆರು ತಿಂಗಳು ಅನ್ನೋದಕಗಳಿಲ್ಲದೆ ಕ್ಷೀಣನಾಗಿದ್ದರೂ, ಆತಿಥ್ಯವನ್ನು ಮಾಡಿದುದರಿಂದ ವೈಕುಂಠಲೋಕವನ್ನು ಸೇರಿದನು.

೪) ಕಪೋತವು ಅತಿಥಿಯಾಗಿ ಬಂದ ಕಿರಾತನಿಗೆ ಪತ್ನಿಯೊಡಗೂಡಿ ತನ್ನ ಮಾಂಸವನ್ನಿತ್ತು ಒಡನೆಯೇ ವಿಮಾನದ ಮೂಲಕವಾಗಿ ಸ್ವರ್ಗಕ್ಕೆ ಹೋಯಿತು.

೫) ಕಿರಾತನು ಸಹ ಅವುಗಳ ಸದ್ಗುಣವನ್ನು ಕಂಡು ಪಶ್ಚಾತ್ತಾಪದಿಂದ ಅಗ್ನಿಪ್ರವೇಶವನ್ನು ಮಾಡಿ ಪಾಪವನ್ನು ಕಳೆದುಕೊಂಡು ಪುಣ್ಯಲೋಕವನ್ನು ಪಡೆದನು.

“ನಿಶ್ಚಯವಾಗಿಯೂ ಈ ಮೂವರೂ ಕ್ಷತ್ರಿಯರೇ ಆಗಿದ್ದಾರೆ. ಆದರೂ ಬ್ರಾಹ್ಮಣರ ವೇಷವನ್ನು ಧರಿಸಿ ಬಂದಿರುತ್ತಾರೆ. ಆದ್ದರಿಂದ ಇವರು ಏನನ್ನು ಯಾಚಿಸುವರೋ ಅದನ್ನು ನಾನು ಕೊಟ್ಟುಬಿಡುತ್ತೇನೆ. ಅತ್ಯಂತಪ್ರಿಯಕರವಾದ ಮತ್ತು ತ್ಯಜಿಸಲು ಅತ್ಯಂತದುಸ್ತರವಾದ ಈ ಶರೀರವನ್ನೇ ಕೇಳಿದರೂ ಕೊಟ್ಟುಬಿಡುತ್ತೇನೆ.

ಬಲೇರ್ನು ಶ್ರೂಯತೇ ಕೀರ್ತಿರ್ವಿತತಾ ದಿಕ್ಷ್ವಕಲ್ಮಷಾ ।
ಐಶ್ವರ್ಯಾದ್ಭ್ರಂಶಿತಸ್ಯಾಪಿ ವಿಪ್ರವ್ಯಾಜೇನ ವಿಷ್ಣುನಾ ॥೨೪॥

ಭಗವಂತನಾದ ವಿಷ್ಣುವು ಬ್ರಾಹ್ಮಣನ ವೇಷವನ್ನು ಧರಿಸಿ ಬಲಿ ಚಕ್ರವರ್ತಿಯ ರಾಜ್ಯೈಶ್ವರ್ಯಗಳೆಲ್ಲವನ್ನೂ ಅಪಹರಿಸಿಬಿಟ್ಟನು. ಆದರೆ ಬಲಿಯ ಧವಳಕೀರ್ತಿಯು ಈಗಲೂ ಎಲ್ಲ ದಿಕ್ಕುಗಳಲ್ಲಿಯೂ ಕೇಳಿಬರುತ್ತಿದೆ. ಈಗಲೂ ಕೂಡ ಜನರು ಅವನ ಗುಣಗಾನಮಾಡುತ್ತಲೇ ಇರುತ್ತಾರೆ.

ಶ್ರಿಯಂ ಜಿಹೀರ್ಷತೇನ್ದ್ರಸ್ಯ ವಿಷ್ಣವೇ ದ್ವಿಜರೂಪಿಣೇ ।
ಜಾನನ್ನಪಿ ಮಹೀಂ ಪ್ರಾದಾದ್ವಾರ್ಯಮಾಣೋಽಪಿ ದೈತ್ಯರಾಟ್ ॥೨೫॥

ಬಲಿಚಕ್ರವರ್ತಿಯಿಂದ ಮೂರು ಲೋಕಗಳನ್ನು ಕಿತ್ತುಕೊಂಡು ಇಂದ್ರನಿಗೆ ಕೊಡುವ ಸಲುವಾಗಿಯೇ ಮಹಾವಿಷ್ಣುವು ಬ್ರಾಹ್ಮಣವಟುವಿನ ವೇಷವನ್ನು ಧರಿಸಿ ಬಲಿಚಕ್ರವರ್ತಿಯಿಂದ ಮೂರು ಹೆಜ್ಜೆಗಳಷ್ಟು ಭೂಮಿ ಯನ್ನು ಯಾಚಿಸಿದನು. ಬಲಿಚಕ್ರವರ್ತಿಗೂ ಈ ವಿಷಯವು ತಿಳಿದಿತ್ತು. ಮೇಲಾಗಿ ಅವನ ಆಚಾರ್ಯರೂ (ಶುಕ್ರಾಚಾರ್ಯರು) ದಾನಕೊಡದಂತೆ, ತಡೆಮಾಡಿದರು. ಇದಾವುದನ್ನೂ ಲೆಕ್ಕಿಸದೆ ಬಲಿಚಕ್ರವರ್ತಿಯು ತಾನು ವಚನವಿತ್ತಿದ್ದಂತೆ ವಾಮನನಿಗೆ ಭೂಮಿಯನ್ನು ದಾನಮಾಡಿದನು.

ಜೀವತಾ ಬ್ರಾಹ್ಮಣಾರ್ಥಾಯ ಕೋ ನ್ವರ್ಥಃ ಕ್ಷತ್ರಬನ್ಧುನಾ ।
ದೇಹೇನ ಪತಮಾನೇನ ನೇಹತಾ ವಿಪುಲಂ ಯಶಃ ॥೨೬॥

ಈ ಶರೀರವು ಯಾವಾಗಲೋ ಬಿದ್ದುಹೋಗುವುದಂತೂ ನಿಶ್ಚಯ. ಬ್ರಾಹ್ಮಣರ ಇಷ್ಟಾರ್ಥಗಳನ್ನು ನೆರವೇರಿಸುತ್ತಾ ಇಂತಹ ನಶ್ವರವಾದ ಶರೀರದಿಂದ ಗಳಿಸಬಹುದಾದ ಶಾಶ್ವತವಾದ ಕೀರ್ತಿಯನ್ನು ಯಾವನು ಗಳಿಸುವುದಿಲ್ಲವೋ ಅಂತಹವನು ಜೀವಿಸಿದ್ದೂ ಪ್ರಯೋಜನವೇನು?”

ಪರೀಕ್ಷಿತಮಹಾರಾಜ! ಜರಾಸಂಧನು ಹೀಗೆ ಯೋಚಿಸಿ ಬ್ರಾಹ್ಮಣ ವೇಷಧಾರಿಗಳಾಗಿದ್ದ ಭೀಮಾರ್ಜುನ-ಕೃಷ್ಣರಿಗೆ ಹೇಳಿದನು :

ಹೇ ವಿಪ್ರಾ ವ್ರಿಯತಾಂ ಕಾಮೋ ದದಾಮ್ಯಾತ್ಮಶಿರೋಽಪಿ ವಃ ॥೨೭॥

"ವಿಪ್ರರೇ! ನಿಮಗೆ ಬೇಕಾದ್ದನ್ನು ಕೇಳಿರಿ. ನನ್ನ ತಲೆಯನ್ನೇ ದಾನವಾಗಿ ಕೇಳಿದರೂ ಅದನ್ನೂ ನಿಮಗೆ ಕೊಟ್ಟುಬಿಡುತ್ತೇನೆ."

ಜರಾಸಂಧನ ಈ ಮಾತನ್ನು ಕೇಳಿ ಭಗವಂತನು ಹೇಳುತ್ತಾನೆ :

"ರಾಜೇಂದ್ರನೇ! ನಾವು ಅನ್ನಾಪೇಕ್ಷಿಗಳಾದ ಬ್ರಾಹ್ಮಣರಲ್ಲ. ನಿನ್ನೊಡನೆ ಯುದ್ಧವನ್ನು ಅಪೇಕ್ಷಿಸಿ ಬಂದಿರುವ ಕ್ಷತ್ರಿಯರು. ನಿನಗೆ ಉಚಿತವೆನಿಸಿದರೆ ದ್ವಂದ್ವಯುದ್ಧದ ಭಿಕ್ಷೆಯನ್ನು ನೀನು ನಮಗೆ ನೀಡುವವ ನಾಗು. ಇದೋ ಇವನು ವೃಕೋದರ. ಅವನು ಇವನ ತಮ್ಮನಾದ ಅರ್ಜುನ. ಇವರಿಬ್ಬರ ಸೋದರಮಾವನ ಮಗನಾದ, ನಿನ್ನ ಪರಮಶತ್ರುವಾದ ಶ್ರೀಕೃಷ್ಣನೇ ನಾನೆಂದು ತಿಳಿ."

ಶ್ರೀಕೃಷ್ಣನ ಈ ಮಾತನ್ನು ಕೇಳುತ್ತಲೇ ಜರಾಸಂಧನು ಗಟ್ಟಿಯಾಗಿ ಗಹ-ಗಹಿಸಿ ನಕ್ಕನು ಮತ್ತು ಕುಪಿತನಾಗಿ ಹೇಳಿದನು :

"ಮೂರ್ಖರೇ! ನಿಮಗೆ ಯುದ್ಧದ ಅಪೇಕ್ಷೆಯೇ ಇರುವುದಾದರೆ ಅದನ್ನೇ ಕೊಡುತ್ತೇನೆ. ಆದರೆ ಕೃಷ್ಣ! ಯುದ್ಧವೆಂದರೆ ಭಯಗೊಳ್ಳುವ, ಹೇಡಿಯಾದ ನಿನ್ನೊಡನೆ ನಾನು ಯುದ್ಧಮಾಡುವುದಿಲ್ಲ. ನಾನು ಯುದ್ಧಕ್ಕೆ ಬರುತ್ತಿರುವೆನೆಂಬ ಸಮಾಚಾರವು ತಿಳಿದ ಕೂಡಲೇ ಮಥುರಾಪಟ್ಟಣವನ್ನು ತ್ಯಜಿಸಿ ಸಮುದ್ರವನ್ನು ಆಶ್ರಯಿಸಿದೆ. ಅಂತಹ ಅಂಜುಬುರುಕನೊಡನೆ ಯುದ್ಧವೇ? ಅರ್ಜುನನೇನೋ ಸಮಾನವಯಸ್ಕನಾಗಿದ್ದಾನೆ. ಆದರೆ ನನ್ನಷ್ಟು ಬಲಶಾಲಿಯಲ್ಲ. ಆದುದರಿಂದ ಇವನು ನನಗೆ ಸಮಾನನಾಗ ಲಾರನು. ಆದುದರಿಂದ ಈ ಅರ್ಜುನನೊಡನೆಯೂ ನಾನು ಯುದ್ಧಮಾಡ ಲಾರೆನು. ಭೀಮನೊಬ್ಬನು ನನಗೆ ಸಮಾನಬಲನಾಗಿದ್ದಾನೆ. ಇವನೊಡನೆ ನಾನು ದ್ವಂದ್ವಯುದ್ಧವನ್ನು ಮಾಡುತ್ತೇನೆ"–ಎಂದೆನ್ನುತ್ತಾ ದ್ವಂದ್ವ ಯುದ್ಧಕ್ಕಾಗಿ ಭೀಮಸೇನನಿಗೆ ದೊಡ್ಡದಾಗಿದ್ದ ಗದೆಯನ್ನು ಕೊಟ್ಟು, ಎರಡನೆಯ ಗದೆಯನ್ನು ತಾನೂ ಹೆಗಲಮೇಲಿಟ್ಟುಕೊಂಡು ಯುದ್ಧ

ಮಾಡುವ ಸಲುವಾಗಿ ಪಟ್ಟಣದಿಂದ ಹೊರಕ್ಕೆ ಹೋದನು. ಬಳಿಕ ರಣೋನ್ಮತ್ತರಾಗಿದ್ದ ಭೀಮ-ಜರಾಸಂಧರು ಸಮರಭೂಮಿಯಲ್ಲಿ ಪರಸ್ಪರವಾಗಿ ಸೇರಿ ವಜ್ರಾಯುಧಸದೃಶವಾಗಿದ್ದ ಗದೆಗಳಿಂದ ಯುದ್ಧಮಾಡಲು ಉಪಕ್ರಮಿಸಿದರು. ರಂಗಮಂಟಪದಲ್ಲಿ ಇಬ್ಬರು ನಟರು ಯುದ್ಧದ ಅಭಿನಯವನ್ನು ತೋರಿಸುತ್ತಿರುವಂತೆ ಭೀಮ-ಜರಾಸಂಧರು ಎಡಕ್ಕೂ-ಬಲಕ್ಕೂ ಹೆಜ್ಜೆಗಳನ್ನಿಡುತ್ತಾ ವಿಚಿತ್ರವಾದ ರೀತಿಯಲ್ಲಿ ಮಂಡಲಾಕಾರವಾಗಿ ಸುತ್ತುತ್ತಾ ಗದಾಯುದ್ಧದ ವರಸೆಗಳನ್ನು ತೋರಿಸುತ್ತಾ ರಾರಾಜಿಸಿದರು. ಪರಸ್ಪರವಾಗಿ ಪ್ರಹರಿಸಿದ ಗದಾಪ್ರಹಾರಗಳಿಂದ ಹೊರಬರುತ್ತಿದ್ದ ಚಟ-ಚಟಾಶಬ್ದವು, ಸಿಡಿಲುಬಡಿದ ಶಬ್ದದಂತೆಯೂ, ಎರಡು ಆನೆಗಳು ಪರಸ್ಪರವಾಗಿ ದಂತಗಳಿಂದ ಪ್ರಹರಿಸುತ್ತಾ ಕಾದಾಡುವಾಗ ಉಂಟಾಗುವ ಘೋರ ಶಬ್ದದಂತೆಯೂ ಕೇಳಿಬರುತ್ತಿದ್ದಿತು. ಭೀಮ-ಜರಾಸಂಧರು ಭುಜಗಳಿಂದ ಗದೆಗಳನ್ನು ವೇಗವಾಗಿ ಅಪ್ಪಳಿಸಿದಾಗ ಆ ಗದೆಗಳು ಪರಸ್ಪರವಾಗಿ ಅವರ ಹೆಗಲು, ಸೊಂಟ, ಕೈ-ಕಾಲುಗಳು, ತೊಡೆ, ಕಂಕುಳುಗಳಲ್ಲಿ ಬಿದ್ದು–ಕೋಪದಿಂದ ಹೋರಾಡುವ ಎರಡು ಆನೆಗಳ ಮಧ್ಯದಲ್ಲಿ ಸಿಕ್ಕಿದ ಎಕ್ಕದ ಕೊಂಬೆಗಳಂತೆ ನುಚ್ಚುನೂರಾದುವು.

ಪರೀಕ್ಷಿತ! ಹೀಗೆ ಅವರ ಗದೆಗಳು ಪರಸ್ಪರ ಪ್ರಹಾರಗಳಿಂದ ಪುಡಿ-ಪುಡಿಯಾಗಲು, ಕ್ರುದ್ಧರಾಗಿದ್ದ ಅವರು ಉಕ್ಕಿಗೆ ಸಮಾನವಾದ ತಮ್ಮ ಮುಷ್ಟಿಗಳಿಂದಲೇ ಬಡಿದಾಡತೊಡಗಿದರು. ಮದಿಸಿದ ಎರಡು ಆನೆಗಳು ಕಾದಾಡುವಂತೆ ಮುಷ್ಟಿಯುದ್ಧವನ್ನು ಮಾಡುತ್ತಿದ್ದ ಭೀಮ-ಜರಾಸಂಧರ ಅಂಗೈಗಳ ಪ್ರಹಾರಗಳಿಂದ ಹುಟ್ಟಿದ ಶಬ್ದವು ಸಿಡಿದ ಸಿಡಿಲಿನ ಶಬ್ದದಂತೆ ಅತ್ಯಂತ ಕಠೋರವಾಗಿದ್ದಿತು.

ಪರೀಕ್ಷಿತ! ಜರಾಸಂಧ-ಭೀಮಸೇನರಿಬ್ಬರಿಗೂ ದ್ವಂದ್ವಯುದ್ಧದಲ್ಲಿ ಕೌಶಲ್ಯ, ಬಲ ಮತ್ತು ಉತ್ಸಾಹಗಳು ಸಮಾನವಾಗಿದ್ದುವು. ಅಷ್ಟು ಕಾಲ ಯುದ್ಧಮಾಡಿದರೂ ಅವರ ಬಲವು ಸ್ವಲ್ಪವಾದರೂ ಕುಂದಿರಲಿಲ್ಲ. ಆದುದರಿಂದ ಯುದ್ಧವು ಸಮವಾಯಿತು. ಯಾರೂ ಗೆಲ್ಲಲೂ ಇಲ್ಲ ; ಯಾರೂ ಸೋಲಲೂ ಇಲ್ಲ. ಅವರು ರಾತ್ರಿಯ ವೇಳೆಯಲ್ಲಿ ಸುಹೃದರಂತೆ ಪರಸ್ಪರ ವಿಶ್ವಾಸದಿಂದಲೇ ಇರುತ್ತಿದ್ದರು. ಬೆಳಗಾಗುತ್ತಲೇ ಯುದ್ಧದಲ್ಲಿ ತೊಡಗು


ತ್ತಿದ್ದರು. ಹೀಗೆಯೇ ಇಪ್ಪತ್ತೇಳು ದಿವಸಗಳು ಕಳೆದುಹೋದುವು. ಇಪ್ಪತ್ತೆಂಟನೆಯ ದಿವಸ ಭೀಮಸೇನನು ತನ್ನ ಸೋದರಮಾವನ ಮಗನಾದ ಶ್ರೀಕೃಷ್ಣನಿಗೆ ಹೇಳಿದನು :

ನ ಶಕ್ತೋऽಹಂ ಜರಾಸನ್ಧಂ ನಿರ್ಜೇತುಂ ಯುಧಿ ಮಾಧವ ॥೪೧॥

"ಮಾಧವ! ಯುದ್ಧದಲ್ಲಿ ಜರಾಸಂಧನನ್ನು ನಾನು ಜಯಿಸಲಾರೆನು."

ಭಗವಾನ್ ಶ್ರೀಕೃಷ್ಣನು ಜರಾಸಂಧನ ಹುಟ್ಟಿನ ಮತ್ತು ಮರಣದ ರಹಸ್ಯವನ್ನು ತಿಳಿದವನಾಗಿದ್ದನು. ಜರಾ ಎಂಬ ರಾಕ್ಷಸಿಯು ಎರಡು ಹೋಳುಗಳಾಗಿ ಬಿದ್ದಿದ್ದ ಶರೀರದ ಭಾಗಗಳನ್ನು ಜೋಡಿಸಿ ಜರಾಸಂಧನಿಗೆ ಜೀವದಾನಮಾಡಿದ್ದಳೆಂಬ ವಿಷಯವು ಅವನಿಗೆ ತಿಳಿದಿದ್ದಿತು.

ಭೀಮಸೇನನಲ್ಲಿ ತನ್ನ ಶಕ್ತಿಯನ್ನು ಹರಿಸಿ ಅವನನ್ನು ಮತ್ತಷ್ಟು ಬಲಿಷ್ಠನನ್ನಾಗಿ ಮಾಡಿ ಶ್ರೀಕೃಷ್ಣನು ಜರಾಸಂಧನ ವಧೋಪಾಯವನ್ನು ಯೋಚಿಸತೊಡಗಿದನು. ಬಳಿಕ ಅಮೋಘವಾದ ಜ್ಞಾನಶಕ್ತಿಯನ್ನು ಹೊಂದಿದ್ದ ಶ್ರೀಕೃಷ್ಣನು ಜರಾಸಂಧನ ವಧೋಪಾಯವನ್ನು ಚೆನ್ನಾಗಿ ಯೋಚಿಸಿದನಂತರ ಅದನ್ನು ಕಂಡುಕೊಂಡವನಾಗಿ ವೃಕ್ಷವನ್ನು ಸೀಳುವಂತೆ ಆತನನ್ನು ಸೀಳಲು ಸಂಜ್ಞೆಯ ಮೂಲಕವಾಗಿ ಭೀಮಸೇನನಿಗೆ ತೋರಿಸಿದನು. ಮಹಾಸತ್ತ್ವನಾದ, ಪ್ರಹರಿಸುವವರಲ್ಲಿ ಶ್ರೇಷ್ಠನಾದ



ಭೀಮಸೇನನು ಒಡನೆಯೇ ಶ್ರೀಕೃಷ್ಣನು ತೋರಿಸಿದ ಸಂಕೇತದ ಅರ್ಥ ವನ್ನು ಗ್ರಹಿಸಿ ತೊಡರುಗಾಲು ಕೊಟ್ಟು ಜರಾಸಂಧನನ್ನು ಕೆಳಕ್ಕೆ ಕೆಡವಿದನು.

ಬಳಿಕ ಜರಾಸಂಧನ ಒಂದು ಕಾಲನ್ನು ತನ್ನ ಕಾಲಿನಲ್ಲಿ ಮೆಟ್ಟಿಕೊಂಡು ಮತ್ತೊಂದು ಕಾಲನ್ನು ತೋಳುಗಳಿಂದ ಬಲವಾಗಿ ಹಿಡಿದು–ಸಲಗವು ವೃಕ್ಷದ ರೆಂಬೆಯನ್ನು ಸೀಳುವಂತೆ–ಅಪಾನದ್ವಾರದ ಕಡೆಯಿಂದ ಜರಾಸಂಧ ನನ್ನು ಸೀಳಿಬಿಟ್ಟನು. ನೆರೆದಿದ್ದ ಜನರು ಎರಡು ಸೀಳುಗಳಲ್ಲಿಯೂ ಒಂದೊಂದು ಕಾಲು-ತೊಡೆ-ಅಂಡಕೋಶ-ಕಟಿಭಾಗ-ಪೃಷ್ಠ-ಸ್ತನ-ಹೆಗಲು-ತೋಳು-ಕಣ್ಣು-ಹುಬ್ಬು ಮತ್ತು ಕಿವಿಗಳಿರುವುದನ್ನು ಕಂಡರು. ಮಗಧರಾಜ ನಾದ ಜರಾಸಂಧನು ಹೀಗೆ ಅಸುವನ್ನು ನೀಗಲು ಅವನ ಪ್ರಜೆಗಳು– 'ಅಯ್ಯೋ! ಅಯ್ಯೋ! ನಮ್ಮ ರಕ್ಷಕನಾದ ರಾಜನು ಸತ್ತುಹೋದನಲ್ಲವೇ! ಇನ್ನೇನು ಗತಿ?'–ಎಂದು ಗಟ್ಟಿಯಾಗಿ ಕೂಗಿಕೊಂಡರು. ಜರಾಸಂಧನನ್ನು ಸಂಹರಿಸಿದ್ದಕ್ಕಾಗಿ ಭೀಮಸೇನನನ್ನು ಕೃಷ್ಣಾರ್ಜುನರು ಗಾಢವಾಗಿ ಆಲಿಂಗಿಸಿ ಕೊಂಡು ಅವನನ್ನು ಪ್ರಶಂಸಿಸಿದರು.

ಸಕಲಪ್ರಾಣಿಗಳನ್ನೂ ಪರಿಪಾಲಿಸುವ, ಅಪ್ರಮೇಯಾತ್ಮನಾದ, ಪ್ರಭು ವಾದ ಶ್ರೀಕೃಷ್ಣನು ಜರಾಸಂಧನ ಮಗನಾದ ಸಹದೇವನನ್ನು ಮಗಧ ರಾಜ್ಯಕ್ಕೆ ರಾಜನನ್ನಾಗಿ ಮಾಡಿ ಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿದನು. ಬಳಿಕ ಈ ಹಿಂದೆ ರಾಜರಿಗೆ ಅಭಯವಿತ್ತಿದ್ದಂತೆ ಜರಾಸಂಧನ ಸೆರೆಮನೆಯಲ್ಲಿದ್ದ ಸಮಸ್ತರಾಜರನ್ನೂ ಬಿಡುಗಡೆಮಾಡಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ೭೨ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೭೩ನೆಯ ಅಧ್ಯಾಯ

ಜರಾಸಂಧನ ಸೆರೆಮನೆಯಲ್ಲಿದ್ದ ರಾಜರ ನಿರ್ಗಮನ : ಶ್ರೀಕೃಷ್ಣನು ಭೀಮಾರ್ಜುನರೊಡನೆ ಇಂದ್ರಪ್ರಸ್ಥಕ್ಕೆ ಹಿಂದಿರುಗಿದುದು

ಶ್ರೀಶುಕಮುನಿಗಳು ಹೇಳುತ್ತಾರೆ :

ಅಯುತೇ ದ್ವೇ ಶತಾನ್ಯಷ್ಟೌ ಲೀಲಯಾ ಯುಧಿ ನಿರ್ಜಿತಾಃ ।
ತೇ ನಿರ್ಗತಾ ಗಿರಿದ್ರೋಣ್ಯಾಂ ಮಲಿನಾ ಮಲವಾಸಸಃ ॥೧॥

ಪರೀಕ್ಷಿತಮಹಾರಾಜ! ಜರಾಸಂಧನು ಅನಾಯಾಸವಾಗಿ ಇಪ್ಪತ್ತು ಸಾವಿರದ ಎಂಟುನೂರು ರಾಜರನ್ನು ಜಯಿಸಿ ಸೆರೆಹಿಡಿದು ಪರ್ವತಗಳ

ಮಧ್ಯದಲ್ಲಿದ್ದ ಸೆರೆಮನೆಯಲ್ಲಿರಿಸಿದ್ದನು. ಶ್ರೀಕೃಷ್ಣನು ಮುಕ್ತಿಗೊಳಿಸಿದ ನಂತರ ಅವರೆಲ್ಲರೂ ಸೆರೆಮನೆಯಿಂದ ಹೊರಬಂದರು. ಆ ಸಮಯದಲ್ಲಿ ಅವರ ವಸ್ತ್ರಗಳೂ ಶರೀರಗಳೂ ಅತ್ಯಂತಮಲಿನವಾಗಿದ್ದುವು.

ಹಸಿವು-ಬಾಯಾರಿಕೆಗಳಿಂದಾಗಿ ಅವರೆಲ್ಲರೂ ಅತ್ಯಂತದುರ್ಬಲರಾಗಿದ್ದರು. ಅವರ ಮುಖಗಳೆಲ್ಲವೂ ಬಾಡಿಹೋಗಿದ್ದುವು. ಅತ್ಯಂತಕಷ್ಟಕರವಾದ ಸೆರೆಮನೆಯ ವಾಸದಿಂದಾಗಿ ಅವರ ಅಂಗಾಂಗಗಳೆಲ್ಲವೂ ಶಿಥಿಲವಾಗಿದ್ದುವು. ಅಂತಹ ಸ್ಥಿತಿಯಲ್ಲಿ ಸೆರೆಮನೆಯಿಂದ ಹೊರಹೊರಟ ಆ ರಾಜರು ತಮ್ಮ ಮುಂದೆ ಶ್ರೀಕೃಷ್ಣನು ನಿಂತಿರುವುದನ್ನು ನೋಡಿದರು. ಶ್ರೀಕೃಷ್ಣನು ಮೇಘಶ್ಯಾಮಲನಾಗಿದ್ದನು. ಪೀತಾಂಬರವನ್ನುಟ್ಟಿದ್ದನು. ಶ್ರೀವತ್ಸದ ಚಿಹ್ನೆಯನ್ನು ವಕ್ಷಃಸ್ಥಳದಲ್ಲಿ ಹೊಂದಿದ್ದನು. ಚತುರ್ಭುಜನಾಗಿದ್ದನು. ಕಮಲದ ದಳದಂತೆ ವಿಶಾಲವಾದ ಕಣ್ಣುಗಳನ್ನು ಹೊಂದಿದ್ದನು. ಸುಂದರವಾದ ಮತ್ತು ಪ್ರಸನ್ನವಾದ ಮುಖಾರವಿಂದದಿಂದ ಬೆಳಗುತ್ತಿದ್ದನು. ಥಳ-ಥಳಿಸುತ್ತಿದ್ದ ಮಕರಾಕೃತಿಯ ಕುಂಡಲಗಳನ್ನು ಧರಿಸಿದ್ದನು. ಕಿರೀಟದಿಂದಲೂ, ಮುತ್ತಿನಹಾರದಿಂದಲೂ, ಕೈಕಡಗಗಳಿಂದಲೂ, ಚಿನ್ನದ ಉಡಿದಾರದಿಂದಲೂ, ಭುಜಕೀರ್ತಿಗಳಿಂದಲೂ ಸಮಲಂಕೃತನಾಗಿದ್ದನು. ಕತ್ತಿನಲ್ಲಿ ಪ್ರಕಾಶಮಾನವಾಗಿದ್ದ ಕೌಸ್ತುಭಮಣಿಯನ್ನೂ ಮತ್ತು ವನಮಾಲೆಯನ್ನೂ ಧರಿಸಿದ್ದ ಶ್ರೀಕೃಷ್ಣನನ್ನು ಆ ರಾಜರು ಕಣ್ಣುಗಳನ್ನರಳಿಸಿಕೊಂಡು ಬಾಯಿಮುಚ್ಚಿಕೊಂಡು ಎವೆಯಿಕ್ಕದೇ ನೋಡುತ್ತಿರುವುದನ್ನು ನೋಡಿದರೆ ಆ ರಾಜರು ಕಣ್ಣಿನಿಂದಲೇ ಆತನ ರೂಪಮಾಧುರ್ಯವನ್ನು ಸವಿಯುತ್ತಿರುವಂತೆಯೂ, ನಾಲಿಗೆಯಿಂದ ಅವನ ಅಧರಾಮೃತವನ್ನು ಕುಡಿಯುತ್ತಿರುವಂತೆಯೂ, ತೋಳುಗಳಿಂದ ಆತನನ್ನು ಆಲಿಂಗಿಸಿಕೊಳ್ಳುತ್ತಿರುವಂತೆಯೂ ಕಾಣುತ್ತಿದ್ದರು. ಆತನ ದರ್ಶನಮಾತ್ರದಿಂದಲೇ ಸಮಸ್ತ ಪಾಪಗಳನ್ನೂ ಕಳೆದುಕೊಂಡ ಆ ರಾಜರು ಭಗವಂತನ ಚರಣಾರವಿಂದಗಳಲ್ಲಿ ತಮ್ಮ ಶಿರಸ್ಸುಗಳನ್ನಿಟ್ಟು ನಮಸ್ಕರಿಸಿದರು. ಶ್ರೀಕೃಷ್ಣಸಂದರ್ಶನದಿಂದಾದ ಆನಂದದಿಂದಾಗಿ ಅವರಿಗೆ ಸೆರೆವಾಸದ ಕಷ್ಟಗಳೆಲ್ಲವೂ ಕ್ಷಣಮಾತ್ರದಲ್ಲಿ ಮರೆತುಹೋದುವು. ಎರಡು ಕೈಗಳನ್ನೂ ಜೋಡಿಸಿಕೊಂಡು ವಿನಮ್ರವಾದ ವಚನಗಳಿಂದ ಅವರು ಶ್ರೀಕೃಷ್ಣನನ್ನು ಪ್ರಾರ್ಥಿಸಿದರು :

ನಮಸ್ತೇ ದೇವದೇವೇಶ ಪ್ರಪನ್ನಾರ್ತಿಹರಾವ್ಯಯ ।
ಪ್ರಪನ್ನಾನ್ಪಾಹಿ ನಃ ಕೃಷ್ಣ ನಿರ್ವಿಣ್ಣಾನ್ಘೋರಸಂಸೃತೇಃ ॥೮॥

"ಶರಣಾಗತರಾದವರ ಸಮಸ್ತದುಃಖಗಳನ್ನೂ ಭಯವನ್ನೂ ಹೋಗಲಾಡಿಸುವವನೇ! ದೇವದೇವೇಶ್ವರನೇ! ಸಚ್ಚಿದಾನಂದಸ್ವರೂಪನೇ! ಅವಿನಾಶಿಯೇ! ಕೃಷ್ಣ! ನಾವೆಲ್ಲರೂ ನಿನಗೆ ನಮಸ್ಕರಿಸುತ್ತೇವೆ. ನಮ್ಮನ್ನು ಜರಾಸಂಧನ ಕಾರಾಗೃಹದಿಂದ ಮುಕ್ತಿಗೊಳಿಸಿರುವೆ. ಇಷ್ಟು ಸಾಲದು. ಈಗ ನಮ್ಮನ್ನು ಜನ್ಮ-ಮೃತ್ಯುರೂಪವಾದ ಈ ಸಂಸಾರಚಕ್ರದಿಂದಲೂ ಮುಕ್ತಿಗೊಳಿಸುವ ಕೃಪೆಮಾಡು. ಸಂಸಾರದ ಕಟುವಾದ ದುಃಖವನ್ನು ಅನುಭವಿಸಿ ಬೇಸತ್ತಿದ್ದೇವೆ. ಶರಣಾಗತರಾಗಿರುವ ನಮ್ಮನ್ನು ಸಂರಕ್ಷಿಸು.

ನೈನಂ ನಾಥಾನ್ವಸೂಯಾಮೋ ಮಾಗಧಂ ಮಧುಸೂದನ ।
ಅನುಗ್ರಹೋ ಯದ್ಭವತೋ ರಾಜ್ಞಾಂ ರಾಜ್ಯಚ್ಯುತಿರ್ವಿಭೋ ॥೯॥

ನಮ್ಮ ರಾಜ್ಯಭ್ರಷ್ಟತೆಯು ನಿನ್ನ ಅನುಗ್ರಹವನ್ನು ಪಡೆಯಲು ಕಾರಣವಾದುದರಿಂದ ನಾವೀಗ ಜರಾಸಂಧನಲ್ಲಿಯೂ ದೋಷವನ್ನೆಣಿಸುವುದಿಲ್ಲ.

ರಾಜ್ಯೈಶ್ವರ್ಯಮದೋನ್ನದ್ಧೋ ನ ಶ್ರೇಯೋ ವಿನ್ದತೇ ನೃಪಃ ।
ತ್ವನ್ಮಾಯಾಮೋಹಿತೋಽನಿತ್ಯಾ ಮನ್ಯತೇ ಸಮ್ಪದೋಽಚಲಾಃ ॥೧೦॥

ರಾಜ್ಯೈಶ್ವರ್ಯಗಳಿಂದ ಮದೋನ್ಮತ್ತನಾದ ರಾಜನು ನಿನ್ನ ಚರಣ ಕಮಲಗಳ ದರ್ಶನದಿಂದ ಪ್ರಾಪ್ತವಾಗುವ ಶಾಶ್ವತವಾದ ಸುಖವನ್ನು ಎಂದಿಗೂ ಪಡೆದುಕೊಳ್ಳುವುದಿಲ್ಲ. ನಿನ್ನ ಮಾಯೆಯಿಂದಲೇ ವಿಮೋಹಿತನಾದ ಅವನು ಅನಿತ್ಯವಾದ ಸಂಪತ್ತನ್ನೇ ನಿತ್ಯವೆಂದು ಭಾವಿಸಿಕೊಂಡಿರುತ್ತಾನೆ.

ಮೃಗತೃಷ್ಣಾಂ ಯಥಾ ಬಾಲಾ ಮನ್ಯನ್ತ ಉದಕಾಶಯಮ್ ।
ಏವಂ ವೈಕಾರಿಕೀಂ ಮಾಯಾಮಯುಕ್ತಾ ವಸ್ತು ಚಕ್ಷತೇ ॥೧೧॥

ಮೂರ್ಖರಾದವರು ಬಿಸಿಲ್ಗುದುರೆಯನ್ನು ಜಲಾಶಯವೆಂದು ಭಾವಿಸುವಂತೆ ಇಂದ್ರಿಯಲೋಲುಪರಾದ ಅಜ್ಞಾನಿಗಳು ಸೃಷ್ಟಿಯೇ ಮೊದಲಾದ

ವಿಕಾರಗಳನ್ನು ಹೊಂದಿರುವ ನಿನ್ನ ಮಾಯೆಯನ್ನು ಸತ್ಯವಾದದ್ದೆಂದು ಭಾವಿಸುತ್ತಾರೆ.

ವಯಂ ಪುರಾ ಶ್ರೀಮದನಷ್ಟದೃಷ್ಟಯೋ
ಜಿಗೀಷಯಾಸ್ಯಾ ಇತರೇತರಸ್ಪೃಧಃ ।
ಘ್ನನ್ತಃ ಪ್ರಜಾಃ ಸ್ವಾ ಅತಿನಿರ್ಘೃಣಾಃ ಪ್ರಭೋ
ಮೃತ್ಯುಂ ಪುರಸ್ತ್ವಾವಿಗಣಯ್ಯ ದುರ್ಮದಾಃ ॥೧೨॥

ಹಿಂದೆ ನಾವೆಲ್ಲರೂ ಧನಮದ-ಅಧಿಕಾರಮದಗಳಿಂದ ಗರ್ವಿಷ್ಠರಾಗಿ ಕುರುಡರಂತಾಗಿಬಿಟ್ಟಿದ್ದೆವು. ಈ ಭೂಮಂಡಲವನ್ನು ಜಯಿಸಬೇಕೆಂಬ ಆಸೆಯಿಂದ ನಮ್ಮ-ನಮ್ಮಲ್ಲಿಯೇ ಪರಸ್ಪರವಾಗಿ ಸ್ಪರ್ಧಿಸುತ್ತಿದ್ದೆವು. ಕರಸಂಗ್ರಹಕ್ಕಾಗಿ ನಮ್ಮ ಪ್ರಜೆಗಳನ್ನೇ ನಾವು ಅತಿನಿರ್ದಯತೆಯಿಂದ ಹಿಂಸಿಸುತ್ತಿದ್ದೆವು. ನಮ್ಮ ಮುಂದೆ ನಿಂತಿರುವ ಕಾಲಸ್ವರೂಪನಾದ ನಿನ್ನನ್ನೇ ಲೆಕ್ಕಿಸದಿರುವಷ್ಟು ನಾವು ಗರ್ವಿಷ್ಠರಾಗಿದ್ದೆವು.

ತ ಏವ ಕೃಷ್ಣಾದ್ಯ ಗಭೀರರಂಹಸಾ
ದುರನ್ತವೀರ್ಯೇಣ ವಿಚಾಲಿತಾಃ ಶ್ರಿಯಃ ।
ಕಾಲೇನ ತನ್ವಾ ಭವತೋಽನುಕಮ್ಪಯಾ
ವಿನಷ್ಟದರ್ಪಾಶ್ಚರಣೌ ಸ್ಮರಾಮ ತೇ ॥೧೩॥

ಅದೇ ನಾವೀಗ ಅತ್ಯಂತವೇಗವುಳ್ಳದ್ದೂ, ಅಪಾರವಾದ ಪರಾಕ್ರಮ ವುಳ್ಳದ್ದೂ, ನಿನ್ನ ಮೂರ್ತಿಸ್ವರೂಪವೂ ಆದ ಕಾಲದಿಂದ ಶ್ರೀಹೀನರೂ ರಾಜ್ಯಹೀನರೂ ಆಗಿ ಮಾಡಲ್ಪಟ್ಟಿದ್ದೆವು. ನಿನ್ನ ಅಹೈತುಕವಾದ ಅನುಕಂಪ ದಿಂದಾಗಿ ನಮ್ಮ ಮದವೆಲ್ಲವೂ ನುಚ್ಚುನೂರಾಗಿದೆ. ಈಗ ನಾವು ನಿನ್ನ ಚರಣಕಮಲಗಳನ್ನು ಸ್ಮರಿಸುತ್ತಿದ್ದೇವೆ.

ಅಥೋ ನ ರಾಜ್ಯಂ ಮೃಗತೃಷ್ಣಿರೂಪಿತಂ
ದೇಹೇನ ಶಶ್ವತ್ ಪತತಾ ರುಜಾಂ ಭುವಾ ।
ಉಪಾಸಿತವ್ಯಂ ಸ್ಪೃಹಯಾಮಹೇ ವಿಭೋ
ಕ್ರಿಯಾಫಲಂ ಪ್ರೇತ್ಯ ಚ ಕರ್ಣರೋಚನಮ್ ॥೧೪॥

ಪ್ರಭುವೇ! ಈ ಶರೀರವು ದಿನ-ದಿನಕ್ಕೂ, ಕ್ಷಣ-ಕ್ಷಣಕ್ಕೂ ಕ್ಷೀಣಿಸು

ತ್ತಲೇ ಇರುತ್ತದೆ. ರೋಗ-ರುಜಿನಾದಿಗಳಿಗೆ ಇದು ಜನ್ಮಭೂಮಿಯೇ ಆಗಿದೆ. ಆದುದರಿಂದ ಮರೀಚಿಕೆಯಂತೆ ಸುಖಮಯವಾಗಿ ಕಾಣುವ ಈ ರಾಜ್ಯವು ನಮಗೆ ಬೇಡ. ಮರಣಾನಂತರದಲ್ಲಿ ಕರ್ಮಗಳ ಫಲರೂಪವಾಗಿ ಲಭಿಸುವ ಸ್ವರ್ಗಾದಿಗಳೂ ನಮಗೆ ಬೇಡ. ಏಕೆಂದರೆ ಇವೆಲ್ಲವೂ ನಿಸ್ಸಾರವಾದುವೆಂದೂ ಕೇಳಲು ಮಾತ್ರವೇ ರೋಚಕವಾಗಿರುವುದೆಂದೂ ನಾವು ತಿಳಿದಿದ್ದೇವೆ.

ತಂ ನಃ ಸಮಾದಿಶೋಪಾಯಂ ಯೇನ ತೇ ಚರಣಾಬ್ಜಯೋಃ ।
ಸ್ಮೃತಿರ್ಯಥಾ ನ ವಿರಮೇದಪಿ ಸಂಸರತಾಮಿಹ ॥೧೫॥

ನಿನ್ನ ಚರಣಾರವಿಂದಗಳ ಸ್ಮರಣೆಯು ನಮ್ಮ ಸ್ಮೃತಿಪಥದಲ್ಲಿ ನಿತ್ಯ ನಿರಂತರವಾಗಿರುವಂತೆ ಯಾವುದಾದರೂ ಉಪಾಯವನ್ನು ನಮಗೆ ಹೇಳು. ಸರ್ವದಾ ನಿನ್ನ ಚರಣಾರವಿಂದಗಳ ಸ್ಮರಣೆಯಾಗುತ್ತಲೇ ಇರಬೇಕು ಮತ್ತು ನಾವು ಪ್ರಪಂಚದ ಯಾವುದೇ ಯೋನಿಯಲ್ಲಿಯೂ ಪುನಃ ಜನ್ಮವನ್ನು ಪಡೆಯುವಂತಾಗಬಾರದು.

ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ ।
ಪ್ರಣತಕ್ಲೇಶನಾಶಾಯ ಗೋವಿನ್ದಾಯ ನಮೋ ನಮಃ ॥೧೬॥

ನಮಿಸಿದವರ ಕ್ಲೇಶಗಳನ್ನು ಹೋಗಲಾಡಿಸುವ ಶ್ರೀಕೃಷ್ಣನಿಗೆ, ವಾಸುದೇವನಿಗೆ, ಶ್ರೀಹರಿಗೆ, ಪರಮಾತ್ಮನಿಗೆ, ಗೋವಿಂದನಿಗೆ, ಪುನಃ ಪುನಃ ನಮಸ್ಕರಿಸುತ್ತೇವೆ.''

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಕಾರಾಗೃಹದಿಂದ ಮುಕ್ತರಾದ ರಾಜರು ಕರುಣಾಸಮುದ್ರನಾದ ಶ್ರೀಕೃಷ್ಣನನ್ನು ಕುರಿತು ಹೀಗೆ ಸ್ತೋತ್ರಮಾಡಲು ಶರಣಾಗತರಕ್ಷಕನಾದ ಪ್ರಭುವು ಮಧುರವಾದ ಮಾತಿನಿಂದ ಅವರಿಗೆ ಹೇಳಿದನು :

ಅದ್ಯಪ್ರಭೃತಿ ವೋ ಭೂಪಾ ಮಯ್ಯಾತ್ಮನ್ಯಖಿಲೇಶ್ವರೇ ।
ಸುದೃಢಾ ಜಾಯತೇ ಭಕ್ತಿರ್ಬಾಢಮಾಶಂಸಿತಂ ತಥಾ ॥೧೭॥

``ನರಪತಿಗಳೇ! ನಿಮ್ಮ ಅಪೇಕ್ಷೆಯಂತೆ ಇಂದಿನಿಂದ ನಿಮಗೆ ಆತ್ಮ

ಸ್ವರೂಪನಾದ ಮತ್ತು ಅಖಿಲೇಶ್ವರನಾದ ನನ್ನಲ್ಲಿ ದೃಢವಾದ ಭಕ್ತಿಯುಂಟಾಗುತ್ತದೆ.

ದಿಷ್ಟ್ಯಾ ವ್ಯವಸಿತಂ ಭೂಪಾ ಭವನ್ತಃ ಸತ್ಯಭಾಷಿಣಃ ।
ಶ್ರಿಯೈಶ್ವರ್ಯಮದೋನ್ನಾಹಂ ಪಶ್ಯ ಉನ್ಮಾದಕಂ ನೃಣಾಮ್ ॥೧೯॥

ನೀವು ಅದೃಷ್ಟವಶದಿಂದ ನನ್ನನ್ನು ಯಾವಾಗಲೂ ಸ್ಮರಿಸುತ್ತಿರ ಬೇಕೆಂಬ ನಿಶ್ಚಯವನ್ನು ಮಾಡಿರುವಿರಿ. ನೀವೆಲ್ಲರೂ ಸತ್ಯಭಾಷಿಗಳು. ಐಶ್ವರ್ಯಮದ ಮತ್ತು ಪ್ರಭುತ್ವಮದದಿಂದುಂಟಾಗುವ ಗರ್ವಾತಿರೇಕವು ಜನರಿಗೆ ಹುಚ್ಚುಹಿಡಿಸುವುದೆಂಬುದನ್ನು ನಾನು ನೋಡಿದ್ದೇನೆ.

ಹೈಹಯೋ ನಹುಷೋ ವೇನೋ ರಾವಣೋ ನರಕೋಽಪರೇ ।
ಶ್ರೀಮದಾದ್ಭ್ರಂಶಿತಾಃ ಸ್ಥಾನಾದ್ದೇವದೈತ್ಯನರೇಶ್ವರಾಃ ॥೨೦॥

ಹೈಹಯ, ನಹುಷ, ವೇನ, ರಾವಣ, ನರಕಾಸುರ–ಇವರೇ ಮೊದಲಾದ ಅನೇಕ ದೇವ-ದೈತ್ಯನರಪತಿಗಳು ಶ್ರೀಮದದ ಮತ್ತು ಅಧಿಕಾರ ಮದದ ಕಾರಣದಿಂದಲೇ ತಮ್ಮ ಸ್ಥಾನದಿಂದ ಜಾರಿದರು.

ಭವನ್ತ ಏತದ್ವಿಜ್ಞಾಯ ದೇಹಾದ್ಯುತ್ಪಾದ್ಯಮನ್ತವತ್ ।
ಮಾಂ ಯಜನ್ತೋಽಧ್ವರೈರ್ಯುಕ್ತಾಃ ಪ್ರಜಾ ಧರ್ಮೇಣ ರಕ್ಷಥ ॥೨೧॥

ನೀವೆಲ್ಲರೂ ಹಿಂದಿನ ಚರಿತ್ರೆಯನ್ನು ನೆನಪಿನಲ್ಲಿಟ್ಟುಕೊಂಡು ಯಾವುದು ಹುಟ್ಟುವುದೋ ಅದು ನಾಶವಾಗುವುದೆಂಬುದನ್ನು ತಿಳಿದು ಅದರಲ್ಲಿ ಅನಾಸಕ್ತರಾಗಿ, ಮನಸ್ಸನ್ನೂ ಮತ್ತು ಇಂದ್ರಿಯಗಳನ್ನೂ ವಶದಲ್ಲಿಟ್ಟುಕೊಂಡು ಯಜ್ಞಗಳ ಮೂಲಕವಾಗಿ ನನ್ನನ್ನು ಆರಾಧಿಸಿರಿ ಮತ್ತು ಧರ್ಮದಿಂದ ಪ್ರಜೆಗಳನ್ನು ಪರಿಪಾಲಿಸಿರಿ.

ಸನ್ತನ್ವನ್ತಃ ಪ್ರಜಾತನ್ತೂನ್ ಸುಖಂ ದುಃಖಂ ಭವಾಭವೌ ।
ಪ್ರಾಪ್ತಂ ಪ್ರಾಪ್ತಂ ಚ ಸೇವನ್ತೋ ಮಚ್ಚಿತ್ತಾ ವಿಚರಿಷ್ಯಥ ॥೨೨॥

ನೀವು ಪುತ್ರ-ಪೌತ್ರರನ್ನು ಪಡೆದು ವಂಶದ ಪರಂಪರೆಯನ್ನು ರಕ್ಷಿಸಿರಿ. ಪ್ರಾರಬ್ಧದ ಅನುಸಾರವಾಗಿ ಪ್ರಾಪ್ತವಾಗುವ ಸುಖ-ದುಃಖಗಳನ್ನೂ, ಹುಟ್ಟು-ಸಾವುಗಳನ್ನೂ, ಲಾಭ-ನಷ್ಟಗಳನ್ನೂ ಸಮಭಾವದಿಂದ ಕಾಣುತ್ತಾ

ನನ್ನ ಪ್ರಸಾದವೆಂದು ಭಾವಿಸಿ ಅನುಭವಿಸಿರಿ. ಯಾವಾಗಲೂ ನಿಮ್ಮ ಮನಸ್ಸನ್ನು ನನ್ನಲ್ಲಿಯೇ ನೆಲೆಗೊಳಿಸಿ ಜೀವನವನ್ನು ಸಾಗಿಸಿರಿ.

ಉದಾಸೀನಾಶ್ಚ ದೇಹಾದಾವಾತ್ಮಾರಾಮಾ ಧೃತವ್ರತಾಃ ।
ಮಯ್ಯಾವೇಶ್ಯ ಮನಃ ಸಮ್ಯಙ್ಮಾಮನ್ತೇ ಬ್ರಹ್ಮ ಯಾಸ್ಯಥ ॥೨೩॥

ದೇಹವೇ ಮೊದಲಾದುವುಗಳಲ್ಲಿ ವಿಮೋಹಿತರಾಗದೇ ಉದಾಸೀನ ರಾಗಿದ್ದು, ದೃಢವ್ರತರಾಗಿ, ಬ್ರಹ್ಮಜ್ಞಾನದಿಂದ ಸಂತೋಷಪಡುತ್ತಾ ಆತ್ಮಾ ರಾಮರಾಗಿ ನಿಮ್ಮ ಮನಸ್ಸನ್ನು ನನ್ನಲ್ಲಿಯೇ ಚೆನ್ನಾಗಿ ನೆಲೆಗೊಳಿಸುವ ನೀವು, ಕಡೆಯಲ್ಲಿ ಬ್ರಹ್ಮಸ್ವರೂಪನಾದ ನನ್ನನ್ನೇ ಸೇರುವಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ವಿಶ್ವೇಶ್ವರನಾದ ಭಗವಾನ್ ಶ್ರೀಕೃಷ್ಣನು ರಾಜರಿಗೆ ದಿವ್ಯವಾದ ಈ ಆದೇಶವನ್ನಿತ್ತು ಅವರಿಗೆ ಸ್ನಾನಮಾಡಿಸಲು ಹಲವಾರು ಪುರುಷರನ್ನೂ ಸ್ತ್ರೀಯರನ್ನೂ ನಿಯಮಿಸಿದನು. ಶ್ರೀಕೃಷ್ಣನ ಆದೇಶದಂತೆ ಜರಾಸಂಧನ ಮಗನಾದ ಸಹದೇವನು ಆ ಎಲ್ಲ ರಾಜರಿಗೂ ಕಾಲೋಚಿತವಾದ ವಸ್ತ್ರಾಭರಣಗಳನ್ನೂ, ಮಾಲೆಗಳನ್ನೂ, ಚಂದನಾಂಗ ರಾಗಗಳನ್ನೂ ಕೊಟ್ಟು ಸಮ್ಮಾನಿಸಿದನು.

ಸ್ನಾನಮಾಡಿ ವಸ್ತ್ರಾಭರಣಗಳಿಂದ ಸಮಲಂಕೃತರಾದ ರಾಜರಿಗೆ ನಾನಾವಿಧವಾದ ರಾಜಭೋಗಗಳಿಂದ ಕೂಡಿರುವ ಮೃಷ್ಟಾನ್ನದ ಭೋಜನ ವನ್ನೂ ಮಾಡಿಸಿ ರಾಜೋಚಿತವಾದ ಫಲ-ಪುಷ್ಪ-ತಾಂಬೂಲಗಳನ್ನು ಸಹದೇವನಿಂದ ಶ್ರೀಕೃಷ್ಣನು ಕೊಡಿಸಿದನು.

ಹೀಗೆ ಶ್ರೀಕೃಷ್ಣನು ಜರಾಸಂಧನ ಸೆರೆಮನೆಯಲ್ಲಿದ್ದ ರಾಜರಿಗೆ ವಿಧ-ವಿಧವಾದ ರಾಜೋಚಿತವಾದ ಸತ್ಕಾರಗಳನ್ನು ಮಾಡಿಸಿದನು. ಆ ರಾಜರು ಸಮಸ್ತಕ್ಲೇಶಗಳಿಂದಲೂ ಮುಕ್ತರಾಗಿ, ದಿವ್ಯವಾದ ಕುಂಡಲಗಳಿಂದ ಸಮ ಲಂಕೃತರಾಗಿ–ವರ್ಷಾಕಾಲವು ಕಳೆದನಂತರ ಮೋಡಗಳಿಲ್ಲದ ಆಕಾಶದಲ್ಲಿ ತಾರೆಗಳು ಬೆಳಗುವಂತೆ ರಾರಾಜಿಸಿದರು. ಬಳಿಕ ಶ್ರೀಕೃಷ್ಣನು ಮಣಿಕಾಂಚನ ಗಳಿಂದ ವಿಭೂಷಿತವಾಗಿದ್ದ ಮತ್ತು ಶ್ರೇಷ್ಠವಾದ ಕುದುರೆಗಳಿಂದ ಕೂಡಿದ್ದ

ರಥಗಳಲ್ಲಿ ಆ ರಾಜರನ್ನು ಕುಳ್ಳಿರಿಸಿ ಸುಮಧುರವಾದ ಮಾತುಗಳಿಂದ ಅವರನ್ನು ತೃಪ್ತಿಪಡಿಸಿ ಅವರವರ ದೇಶಗಳಿಗೆ ಕಳುಹಿಸಿಕೊಟ್ಟನು.

ಹೀಗೆ ಉದಾರಶಿರೋಮಣಿಯಾದ ಭಗವಾನ್ ಶ್ರೀಕೃಷ್ಣನು ಎಲ್ಲ ರಾಜರನ್ನೂ ಕಷ್ಟದಿಂದ ಪಾರುಮಾಡಿದನು. ಆ ರಾಜರೆಲ್ಲರೂ ಶ್ರೀಕೃಷ್ಣನನ್ನೇ ಚಿಂತಿಸುತ್ತಾ ಅವನು ಮಾಡಿದ ಮಹೋಪಕಾರವನ್ನು ಸ್ಮರಿಸುತ್ತಾ ತಮ್ಮ-ತಮ್ಮ ದೇಶಗಳಿಗೆ ಪ್ರಯಾಣಮಾಡಿದರು. ತಮ್ಮ ರಾಜಧಾನಿಗಳಿಗೆ ತೆರಳಿದನಂತರ ಆ ರಾಜರು ಮಹಾಪುರುಷನಾದ ಶ್ರೀಕೃಷ್ಣನು ತಮಗಾಗಿ ಮಾಡಿದ ಉಪಕಾರವನ್ನೂ ಮತ್ತು ಅವನ ಇತರ ಅದ್ಭುತವಾದ ಲೀಲಾ ಪ್ರಸಂಗಗಳನ್ನೂ ಪ್ರಜೆಗಳಲ್ಲಿ ಪ್ರಚುರಪಡಿಸಿದರು. ಭಗವಂತನು ಉಪದೇಶಿಸಿ ದ್ದಂತೆಯೇ ಎಲ್ಲ ಕಾರ್ಯಗಳನ್ನೂ ಸ್ವಲ್ಪವಾದರೂ ಅಲಸಿಕೆಯಿಲ್ಲದೇ ಮಾಡುತ್ತಾ ಜೀವನವನ್ನು ನಿರ್ವಹಿಸುತ್ತಿದ್ದರು.

ಪರೀಕ್ಷಿತಮಹಾರಾಜ! ಹೀಗೆ ಭಗವಾನ್ ಶ್ರೀಕೃಷ್ಣನು ಭೀಮನ ಮೂಲಕವಾಗಿ ಜರಾಸಂಧನ ವಧೆಯನ್ನು ಮಾಡಿಸಿ, ಭೀಮಾರ್ಜುನರೊಡನೆ ಜರಾಸಂಧನ ಮಗನಾದ ಸಹದೇವನಿಂದ ಸತ್ಕೃತನಾಗಿ ಇಂದ್ರಪ್ರಸ್ಥಕ್ಕೆ ಪ್ರಯಾಣಮಾಡಿದನು. ಶತ್ರುಗಳನ್ನು ಜಯಿಸಿ ಆಗಮಿಸಿದ ಕೃಷ್ಣಾರ್ಜುನ-ಭೀಮಸೇನರು ಇಂದ್ರಪ್ರಸ್ಥದ ಸಮೀಪಕ್ಕೆ ಬರುತ್ತಲೇ ಇಷ್ಟಮಿತ್ರರಿಗೂ-ಬಂಧುಗಳಿಗೂ ಸುಖವನ್ನೂ, ಶತ್ರುಗಳಿಗೆ ದುಃಖವನ್ನೂ ಉಂಟುಮಾಡುತ್ತಾ ತಮ್ಮ ತಮ್ಮ ಶಂಖಗಳನ್ನು ಗಟ್ಟಿಯಾಗಿ ಊದಿದರು. ಮೂವರ ಮಂಗಳ ಕರವಾದ ಶಂಖಧ್ವನಿಗಳನ್ನು ಕೇಳಿ ಇಂದ್ರಪ್ರಸ್ಥದ ನಾಗರಿಕರು ಜರಾಸಂಧನು ಮೃತನಾಗಿರುವನೆಂದು ತಿಳಿದು ಸಂತೋಷಭರಿತರಾದರು. ಇದರಿಂದ ಯುಧಿಷ್ಠಿರನ ಮನೋರಥವೂ ಪೂರ್ಣವಾಯಿತು. ರಾಜಸೂಯಯಾಗಕ್ಕಿದ್ದ ಅಡಚಣೆಗಳೆಲ್ಲವೂ ದೂರವಾದುವು. ಭೀಮಾರ್ಜುನ-ಕೃಷ್ಣರು ಅರಮನೆ ಯನ್ನು ಸೇರಿ ಯುಧಿಷ್ಠಿರನನ್ನು ವಂದಿಸಿ ಜರಾಸಂಧನ ವಧೆಗಾಗಿ ತಾವು ಮಾಡಿದ ತಂತ್ರಗಳೆಲ್ಲವನ್ನೂ ವಿವರಿಸಿ ರಾಜನಿಗೆ ಹೇಳಿದರು. ಯುಧಿಷ್ಠಿರನು ಶ್ರೀಕೃಷ್ಣನಿಂದ ಪರಮಾನುಗ್ರಹದ ಸಂತೋಷಸಮಾಚಾರವನ್ನು ಕೇಳಿ ಆನಂದ ಭರಿತನಾದನು. ಪ್ರೇಮಾತಿಶಯದಿಂದ ಆನಂದಬಾಷ್ಪಗಳನ್ನು ಸುರಿಸು

ತ್ತಿದ್ದನೇ ಹೊರತು ಯಾವ ಮಾತನ್ನೂ ಆಡಲಿಲ್ಲ. ಆನಂದದ ಉತ್ಕಂಠೆಯಿಂದಾಗಿ ಆತನ ಕಂಠವು ಬಿಗಿದುಬಂದಿದ್ದಿತು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೭೩ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೭೪ನೆಯ ಅಧ್ಯಾಯ

ಶ್ರೀಕೃಷ್ಣನಿಗೆ ಅಗ್ರಪೂಜೆ : ಶಿಶುಪಾಲನ ಸಂಹಾರ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ :

ಏವಂ ಯುಧಿಷ್ಠಿರೋ ರಾಜಾ ಜರಾಸನ್ಧವಧಂ ವಿಭೋಃ ।
ಕೃಷ್ಣಸ್ಯ ಚಾನುಭಾವಂ ತಂ ಶ್ರುತ್ವಾ ಪ್ರೀತಸ್ತಮಬ್ರವೀತ್ ॥೧॥

ಪರೀಕ್ಷಿತಮಹಾರಾಜ! ಯುಧಿಷ್ಠಿರಮಹಾರಾಜನು ಜರಾಸಂಧನ ವಧೆಯ ವೃತ್ತಾಂತವನ್ನೂ ಮತ್ತು ಸರ್ವಶಕ್ತನಾದ ಶ್ರೀಕೃಷ್ಣನ ಅದ್ಭುತವಾದ ಮಹಿಮೆಯನ್ನೂ ಕೇಳಿ ಸುಪ್ರೀತನಾಗಿ ಶ್ರೀಕೃಷ್ಣನಿಗೆ ಹೇಳಿದನು :

ಯೇ ಸ್ಯುಸ್ತ್ರೈಲೋಕ್ಯಗುರವಃ ಸರ್ವೇ ಲೋಕಮಹೇಶ್ವರಾಃ ।
ವಹನ್ತಿ ದುರ್ಲಭಂ ಲಬ್ಧ್ವಾ ಶಿರಸೈವಾನುಶಾಸನಮ್ ॥೨॥

“ಸಚ್ಚಿದಾನಂದಸ್ವರೂಪನೇ! ಕೃಷ್ಣ! ಮೂರು ಲೋಕಗಳಿಗೂ ಗುರುಗಳಾದ ಸನಕ-ಸನಂದನಾದಿಗಳೂ ಲೋಕಪಾಲಕರಾದ ಇಂದ್ರನೇ ಮೊದಲಾದವರೂ ದುರ್ಲಭವಾದ ನಿನ್ನ ಆಜ್ಞೆಯನ್ನು ನಡೆಸಿಕೊಡಲು ತವಕಿಸುತ್ತಿರುತ್ತಾರೆ. ದುರ್ಲಭವಾದ ಆ ಆಜ್ಞೆಯು ಲಭಿಸಿದೊಡನೆಯೇ ಅದನ್ನು ತಮ್ಮ ಶಿರಸ್ಸಿನಲ್ಲಿ ಧರಿಸಿ ಶ್ರದ್ಧೆಯಿಂದ ಪೂರ್ಣಗೊಳಿಸುತ್ತಾರೆ.

ಸ ಭವಾನರವಿನ್ದಾಕ್ಷೋ ದೀನಾನಾಮೀಶಮಾನಿನಾಮ್ ।
ಧತ್ತೇಽನುಶಾಸನಂ ಭೂಮಂಸ್ತದತ್ಯನ್ತವಿಡಮ್ಬನಮ್ ॥೩॥

ಅನಂತನೇ! ನಾವಾದರೋ ಅತ್ಯಂತದೀನರು. ಆದರೂ ನರಪತಿಗಳೆಂದು ಭಾವಿಸಿಕೊಂಡುಬಿಟ್ಟಿದ್ದೇವೆ. ದೀನರಾಗಿದ್ದು ಭೂಪತಿಗಳೆಂದು ಭಾವಿಸಿಕೊಂಡಿರುವ ನಾವು ಶಿಕ್ಷಾರ್ಹರೇ ಸರಿ. ಲೋಕಗುರುಗಳಿಗೂ ಲೋಕ

ಪಾಲಕರಿಗೂ ಆಜ್ಞೆಯನ್ನು ನೀಡುವ ಮಹಾಮಹಿಮನಾದ ನಿನ್ನ ಆಜ್ಞೆಯನ್ನು ನಾವು ಪರಿಪಾಲಿಸಬೇಕು. ಆದರೆ ಇಲ್ಲಿ ಅದರ ವೈಪರೀತ್ಯವಾಗಿದೆ. ನಮ್ಮ ಆಜ್ಞೆಯನ್ನು ನೀನು ಸ್ವೀಕಾರಮಾಡುತ್ತಿರುವೆ ಮತ್ತು ನಡೆಸಿಕೊಡುತ್ತಿರುವೆ. ಎಂತಹ ವಿಡಂಬನೆಯಿದು? ಸರ್ವಶಕ್ತನಾದ, ಕಮಲಾಕ್ಷನಾದ ಭಗವಂತನಿಗೆ ಇದು ಮನುಷ್ಯಲೀಲೆಯ ಅಭಿನಯಮಾತ್ರವಾಗಿದೆ.

ನ ಹ್ಯೇಕಸ್ಯಾದ್ವಿತೀಯಸ್ಯ ಬ್ರಹ್ಮಣಃ ಪರಮಾತ್ಮನಃ ।
ಕರ್ಮಭಿರ್ವರ್ಧತೇ ತೇಜೋ ಹ್ರಸತೇ ಚ ಯಥಾ ರವೇಃ ॥೪॥

ಉದಯಾಸ್ತಗಳಿಂದ ಸೂರ್ಯನ ತೇಜಸ್ಸು ಕುಂದುವುದೂ ಇಲ್ಲ; ಹೆಚ್ಚುವುದೂ ಇಲ್ಲ. ಅಂತೆಯೇ ಅದ್ವಿತೀಯನೂ, ಅಸದೃಶನೂ, ಸರ್ವಜೀವ ನಿಯಾಮಕನೂ, ಪರಿಪೂರ್ಣನೂ ಆದ ನೀನು ಮಾಡುವ ಯಾವುದೇ ಕರ್ಮದಿಂದಾಗಲೀ, ನಿನ್ನ ತೇಜಸ್ಸು ವರ್ಧಿಸುವುದೂ ಇಲ್ಲ; ಕ್ಷೀಣಿಸುವುದೂ ಇಲ್ಲ. ಆಜ್ಞೆಮಾಡುವುದರಿಂದಾಗಲೀ, ಆಜ್ಞೆ ಮಾಡಿಸಿಕೊಳ್ಳುವುದರಿಂದಾಗಲೀ ಬ್ರಹ್ಮಸ್ವರೂಪನಾದ ನಿನ್ನಲ್ಲಿ ಯಾವ ವ್ಯತ್ಯಾಸವೂ ಉಂಟಾಗುವುದಿಲ್ಲ.

ನ ವೈ ತೇಽಜಿತ ಭಕ್ತಾನಾಂ ಮಮಾಹಮಿತಿ ಮಾಧವ ।
ತ್ವಂ ತವೇತಿ ಚ ನಾನಾಧೀಃ ಪಶೂನಾಮಿವ ವೈಕೃತಾ ॥೫॥

ಯಾರಿಂದಲೂ ಜಯಿಸಲ್ಪಡದವನೇ! 'ನಾನು-ನನ್ನದು; ನೀನು-ನಿನ್ನದು'–ಎಂಬ ವಿಕಾರಯುಕ್ತವಾದ ಭೇದಬುದ್ಧಿಯು ಪಶುಸಮಾನರಾದ ಮನುಷ್ಯರಲ್ಲಿರುತ್ತದೆ. ನಿನ್ನ ಅನನ್ಯಭಕ್ತರಲ್ಲಿಯೂ ಇಂತಹ ಭೇದಬುದ್ಧಿಯಿರುವುದಿಲ್ಲ. ಹೀಗಿರುವಾಗ ನಿನ್ನ ವಿಷಯದಲ್ಲಿ ಹೇಳುವುದೇನಿದೆ? ಆದುದರಿಂದ ನೀನು ಮಾಡುತ್ತಿರುವುದೆಲ್ಲವೂ ಲೀಲಾಮಾತ್ರವಾಗಿದೆ."

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತಮಹಾರಾಜ! ಹೀಗೆ ಹೇಳಿ ಶ್ರೀಕೃಷ್ಣನಿಗೆ ತನ್ನ ಕೃತಜ್ಞತೆ ಯನ್ನು ವ್ಯಕ್ತಪಡಿಸಿದನಂತರ ಯಜ್ಞದ ಕಾಲವು ಸನ್ನಿಹಿತವಾಗಲಾಗಿ, ಯುಧಿಷ್ಠಿರನು ಶ್ರೀಕೃಷ್ಣನ ಅನುಮತಿಯನ್ನು ಪಡೆದು, ಯಜ್ಞಕರ್ಮಗಳಲ್ಲಿ ನಿಪುಣರಾದ ವೇದವಾದಿಗಳಾದ ಬ್ರಾಹ್ಮಣರನ್ನು ಋತ್ವಿಕ್-ಆಚಾರ್ಯ–ಇವರೇ ಮೊದಲಾದ ರೂಪದಲ್ಲಿ ವರಣಮಾಡಿದನು.

ಕೃಷ್ಣದ್ವೈಪಾಯನವ್ಯಾಸರು, ಭರದ್ವಾಜ, ಸುಮಂತು, ಗೌತಮ, ಅಸಿತ, ವಸಿಷ್ಠ, ಚ್ಯವನ, ಕಣ್ವ, ಮೈತ್ರೇಯ, ಕವಷ, ತ್ರಿತ, ವಿಶ್ವಾಮಿತ್ರ, ವಾಮದೇವ, ಸುಮತಿ, ಜೈಮಿನಿ, ಕ್ರತು, ಪೈಲ, ಪರಾಶರ, ಗರ್ಗ, ವೈಶಂಪಾಯನ, ಅಥರ್ವಾಣ, ಕಶ್ಯಪ, ಧೌಮ್ಯ, ಪರಶುರಾಮ, ಶುಕ್ರಾ ಚಾರ್ಯ, ಆಸುರಿ, ವೀತಿಹೋತ್ರ, ಮಧುಚ್ಛಂದಸ, ವೀರಸೇನ, ಅಕೃತವ್ರಣ–ಇವರೆಲ್ಲರೂ ಧರ್ಮರಾಜನ ರಾಜಸೂಯಯಾಗದಲ್ಲಿ ಋತ್ವಿಜರ ಸ್ಥಾನವನ್ನು ಹೊಂದಿದ್ದರು. ಇವರಲ್ಲದೇ ಧರ್ಮರಾಜನು– ದ್ರೋಣಾಚಾರ್ಯರು, ಭೀಷ್ಮಪಿತಾಮಹ, ಕೃಪಾಚಾರ್ಯರು, ಧೃತರಾಷ್ಟ್ರ, ದುರ್ಯೋಧನನೇ ಮೊದಲಾದ ಅವನ ಮಕ್ಕಳು, ಮಹಾಮತಿಯಾದ ವಿದುರ–ಇವರಿಗೂ ಆಹ್ವಾನವನ್ನು ಕಳುಹಿಸಿ ಕರೆಸಿಕೊಂಡಿದ್ದನು. ಪರೀಕ್ಷಿತ! ರಾಜಸೂಯಯಾಗವನ್ನು ನೋಡುವ ಸಲುವಾಗಿ ಭೂಮಂಡಲದ ಎಲ್ಲ ದೇಶಗಳ ರಾಜರೂ, ಅವರ ಮಂತ್ರಿಗಳೂ, ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರೂ, ಸಮಸ್ತಪ್ರಜೆಗಳೂ ಇಂದ್ರಪ್ರಸ್ಥಕ್ಕೆ ಆಗಮಿಸಿದರು.

ಅನಂತರ ಋತ್ವಿಜಬ್ರಾಹ್ಮಣರು ಶುಭಮುಹೂರ್ತದಲ್ಲಿ ಚಿನ್ನದ ನೇಗಿಲಿನಿಂದ ಯಾಗಭೂಮಿಯನ್ನು ಉತ್ತು ಯುಧಿಷ್ಠಿರನಿಗೆ ಶಾಸ್ತ್ರವಿಧಿಗೆ ಅನುಸಾರವಾಗಿ ಯಜ್ಞದೀಕ್ಷೆಯನ್ನಿತ್ತರು. ಹಿಂದೆ ವರುಣನು ಮಾಡಿದ್ದ ರಾಜ ಸೂಯಯಾಗದಲ್ಲಿ ಯಜ್ಞದ ಪಾತ್ರೆಗಳೆಲ್ಲವೂ ಸ್ವರ್ಣಮಯವಾಗಿದ್ದಂತೆ ಧರ್ಮರಾಜನ ರಾಜಸೂಯಯಾಗದಲ್ಲಿಯೂ ಯಜ್ಞಪಾತ್ರೆಗಳು ಸ್ವರ್ಣ ಮಯವಾಗಿದ್ದುವು. ರಾಜಸೂಯಯಜ್ಞಕ್ಕೆ ಯುಧಿಷ್ಠಿರನಿಂದ ಆಹ್ವಾನ ವನ್ನು ಸ್ವೀಕರಿಸಿ ಬ್ರಹ್ಮದೇವರು, ಶಂಕರ, ಇಂದ್ರನೇ ಮೊದಲಾದ ಲೋಕ ಪಾಲರು, ತಮ್ಮ-ತಮ್ಮ ಗಣಗಳೊಡನೆ ಸಿದ್ಧ-ಗಂಧರ್ವರು, ವಿದ್ಯಾಧರರು, ನಾಗರು, ಮುನಿಗಳು, ಯಕ್ಷರು, ರಾಕ್ಷಸರು, ಪಕ್ಷಿಗಳು, ಕಿನ್ನರ-ಚಾರಣರು, ದೊಡ್ಡ-ದೊಡ್ಡ ರಾಜರು, ರಾಜಪತ್ನಿಯರು–ಇವರೆಲ್ಲರೂ ಆಗಮಿಸಿದರು. ರಾಜಸೂಯಯಾಗದ ವೈಭವವನ್ನು ಕಂಡು ಯಾರೂ ಅಚ್ಚರಿಗೊಳ್ಳಲಿಲ್ಲ. ಮಹಾಮಹಿಮನಾದ ಶ್ರೀಕೃಷ್ಣನ ಪರಮಭಕ್ತನಾದ ಯುಧಿಷ್ಠಿರನಿಗೆ ಇದು ಅನುರೂಪವಾಗಿರುವುದೆಂದೇ ಎಲ್ಲರೂ ಭಾವಿಸಿದರು. ಹಿಂದಿನ ಕಾಲದಲ್ಲಿ ವರುಣನಿಂದ ದೇವತೆಗಳು ರಾಜಸೂಯಯಾಗವನ್ನು

ಮಾಡಿಸಿದ್ದಂತೆ–ದೇವತೆಗಳಂತೆಯೇ ಮಹಾತೇಜಸ್ವಿಗಳಾಗಿದ್ದ ಯಾಜಕರು ವಿಧಿವತ್ತಾಗಿ ಯುಧಿಷ್ಠಿರನಿಂದ ರಾಜಸೂಯಯಾಗವನ್ನು ಮಾಡಿಸಿದರು. ಸೋಮಲತೆಯಿಂದ ಸೋಮರಸವನ್ನು ಹಿಂಡುವ ದಿವಸದಲ್ಲಿ ಯುಧಿಷ್ಠಿರನು ತನ್ನ ಪರಮಭಾಗ್ಯಶಾಲಿಗಳಾದ ಯಾಜಕರನ್ನೂ ಮತ್ತು ಯಜ್ಞದ ನ್ಯೂನಾತಿರೇಕಗಳನ್ನು ನಿರೀಕ್ಷಿಸಲು ನಿಯುಕ್ತರಾಗಿದ್ದ ಸದಸಸ್ಪತಿಗಳನ್ನೂ ಸಾವಧಾನತೆಯಿಂದ ಏಕಾಗ್ರಚಿತ್ತನಾಗಿ ಪೂಜಿಸಿ ಸತ್ಕರಿಸಿದನು. ಬಳಿಕ ನೆರೆದಿರುವ ಸದಸ್ಯರಲ್ಲಿ ಅಗ್ರಪೂಜೆಗೆ ಯೋಗ್ಯರಾದವರಾರೆಂಬುದನ್ನು ಸಭಾಸದರು ಚರ್ಚಿಸಿದರು. ಅಗ್ರಪೂಜೆಗೆ ಯೋಗ್ಯರಾದವರು ಹಲವಾರು ಮಂದಿ ಇದ್ದ ಕಾರಣ ಅವರಿಗೆ ಯಾವ ನಿರ್ಣಯಕ್ಕೂ ಬರಲಾಗಲಿಲ್ಲ. ಆ ಸಮಯದಲ್ಲಿ ಸಹದೇವನು ಸಭಾಸದರಿಗೆ ಹೇಳಿದನು :

ಅರ್ಹತಿ ಹ್ಯಚ್ಯುತಃ ಶ್ರೈಷ್ಠ್ಯಂ ಭಗವಾನ್ ಸಾತ್ವತಾಂ ಪತಿಃ ।
ಏಷ ವೈ ದೇವತಾಃ ಸರ್ವಾ ದೇಶಕಾಲಧನಾದಯಃ ॥೧೯॥

"ಸಭ್ಯರೇ! ನನ್ನ ಅಭಿಪ್ರಾಯದಂತೆ ಇಲ್ಲಿ ಉಪಸ್ಥಿತರಾಗಿರುವ ಸದಸ್ಯರಲ್ಲಿ ಯದುಪತಿಯಾದ, ಭಕ್ತವತ್ಸಲನಾದ ಶ್ರೀಕೃಷ್ಣನೇ ಸರ್ವಶ್ರೇಷ್ಠವಾದ ಅಗ್ರಪೂಜೆಗೆ ಯೋಗ್ಯನಾಗಿದ್ದಾನೆ. ಏಕೆಂದರೆ : ಸಕಲದೇವತಾಸ್ವರೂಪನೂ ಇವನೇ ಆಗಿದ್ದಾನೆ ಮತ್ತು ದೇಶ-ಕಾಲ-ಧನ–ಇವೇ ಮುಂತಾದ ಎಷ್ಟು ವಸ್ತುಗಳಿವೆಯೋ ಆ ಎಲ್ಲ ವಸ್ತುಗಳ ಸ್ವರೂಪನೂ ಈ ಶ್ರೀಕೃಷ್ಣನೇ ಆಗಿರುತ್ತಾನೆ. ಆದುದರಿಂದ ಶ್ರೀಕೃಷ್ಣನೇ ಅಗ್ರಪೂಜೆಗೆ ಅರ್ಹನು.

ಯದಾತ್ಮಕಮಿದಂ ವಿಶ್ವಂ ಕ್ರತವಶ್ಚ ಯದಾತ್ಮಕಾಃ ।
ಅಗ್ನಿರಾಹುತಯೋ ಮನ್ತ್ರಾಃ ಸಾಙ್ಖ್ಯಂ ಯೋಗಶ್ಚ ಯತ್ಪರಃ ॥೨೦॥

ಈ ಅಖಂಡವಿಶ್ವವೂ ಕೃಷ್ಣಾತ್ಮಕವೇ ಆಗಿದೆ. ಸಮಸ್ತಯಜ್ಞಗಳೂ ಶ್ರೀಕೃಷ್ಣನ ಸ್ವರೂಪಗಳೇ ಆಗಿವೆ. ಭಗವಾನ್ ಶ್ರೀಕೃಷ್ಣನೇ ಅಗ್ನಿ, ಆಹುತಿ ಮತ್ತು ಮಂತ್ರಗಳ ರೂಪದಲ್ಲಿದ್ದಾನೆ. ಸಾಂಖ್ಯ-ಯೋಗಗಳೆರಡೂ (ಜ್ಞಾನಯೋಗ-ಕರ್ಮಯೋಗಗಳೆರಡೂ) ಶ್ರೀಕೃಷ್ಣಪ್ರಾಪ್ತಿಗೆ ಸಾಧಕಗಳಾಗಿವೆ.

ಏಕ ಏವಾದ್ವಿತೀಯೋಽಸಾವೈತದಾತ್ಮ್ಯಮಿದಂ ಜಗತ್ ।
ಆತ್ಮಾನಾತ್ಮಾಶ್ರಯಃ ಸಭ್ಯಾಃ ಸೃಜತ್ಯವತಿ ಹನ್ತ್ಯಜಃ ॥೨೧॥



ಸಭಾಸದರೇ! ಶ್ರೀಕೃಷ್ಣನು ಏಕಮೇವಾದ್ವಿತೀಯಬ್ರಹ್ಮನಾಗಿದ್ದಾನೆ. ಅಖಂಡಬ್ರಹ್ಮಾಂಡವೂ ಇವನ ಸ್ವರೂಪವೇ ಆಗಿದೆ. ಹುಟ್ಟು-ಸಾವುಗಳಿಲ್ಲದ ಈ ಶ್ರೀಕೃಷ್ಣನು ಜೀವರಿಗೂ ಅಜೀವರಿಗೂ ಆಶ್ರಯನಾಗಿ ವಿಶ್ವವನ್ನೇ ಸೃಷ್ಟಿಸಿ, ಸಂರಕ್ಷಿಸಿ, ಸಂಹರಿಸುತ್ತಾನೆ.

ವಿವಿಧಾನೀಹ ಕರ್ಮಾಣಿ ಜನಯನ್ಯದವೇಕ್ಷಯಾ ।
ಈಹತೇ ಯದಯಂ ಸರ್ವಃ ಶ್ರೇಯೋ ಧರ್ಮಾದಿಲಕ್ಷಣಮ್ ॥೨೨॥

ಸಮಸ್ತಜನರೂ ಶ್ರೀಕೃಷ್ಣನ ಅನುಗ್ರಹದಿಂದಲೇ ಅನೇಕಪ್ರಕಾರವಾದ ಕರ್ಮಗಳನ್ನು ಅನುಷ್ಠಾನಮಾಡುತ್ತಾ ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ವಿಧವಾದ ಪುರುಷಾರ್ಥಗಳನ್ನೂ ಸಾಧಿಸಿಕೊಳ್ಳುತ್ತಾರೆ.

ತಸ್ಮಾತ್ ಕೃಷ್ಣಾಯ ಮಹತೇ ದೀಯತಾಂ ಪರಮಾರ್ಹಣಮ್ ।
ಏವಂ ಚೇತ್ ಸರ್ವಭೂತಾನಾಮಾತ್ಮನಶ್ಚಾರ್ಹಣಂ ಭವೇತ್ ॥೨೩॥

ಆದುದರಿಂದ ಸರ್ವಶ್ರೇಷ್ಠನಾದ ಶ್ರೀಕೃಷ್ಣನಿಗೇ ಅಗ್ರಪೂಜೆಯು ಮಾಡಲ್ಪಡಲಿ. ಹೀಗೆ ಮಾಡಿದರೆ ಸಮಸ್ತಪ್ರಾಣಿಗಳಿಗೂ ಆತ್ಮನಾಗಿರುವವನಿಗೆ ಪೂಜೆಮಾಡಿದಂತಾಗುತ್ತದೆ. (ಸಮಸ್ತಪ್ರಾಣಿಗಳನ್ನೂ ಗೌರವಿಸಿದಂತಾಗುತ್ತದೆ.)

ಸರ್ವಭೂತಾತ್ಮಭೂತಾಯ ಕೃಷ್ಣಾಯಾನನ್ಯದರ್ಶಿನೇ ।
ದೇಯಂ ಶಾನ್ತಾಯ ಪೂರ್ಣಾಯ ದತ್ತಸ್ಯಾನನ್ತ್ಯಮಿಚ್ಛತಾ ॥೨೪॥

ದಾನಕೊಟ್ಟುದಕ್ಕೆ ಅನಂತವಾದ ಫಲವನ್ನೇ ಅಪೇಕ್ಷಿಸುವವನು ಸಮಸ್ತಪ್ರಾಣಿಗಳಿಗೂ ಆತ್ಮಸ್ವರೂಪನಾದ, ಭೇದಭಾವನಾರಹಿತನಾದ, ಪರಮಶಾಂತನಾದ, ಪರಿಪೂರ್ಣನಾದ, ಮಹಾತ್ಮನಾದ ಶ್ರೀಕೃಷ್ಣನಿಗೇ ಅಗ್ರಪೂಜೆಯನ್ನು ನೀಡಬೇಕು.”

ಪರೀಕ್ಷಿತಮಹಾರಾಜ! ಭಗವಂತನ ಮಹಿಮೆಯನ್ನೂ ಮತ್ತು ಪ್ರಭಾವವನ್ನೂ ಚೆನ್ನಾಗಿ ತಿಳಿದಿದ್ದ ಸಹದೇವನು ಹೀಗೆ ತನ್ನ ಅಭಿಪ್ರಾಯ ವನ್ನು ಸಭ್ಯರ ಮುಂದಿಟ್ಟು ಸುಮ್ಮನಾದನು. ಆ ಸಮಯದಲ್ಲಿ ಯುಧಿಷ್ಠಿ ರನ ಆ ಸಭೆಯಲ್ಲಿ ಕುಳಿತಿದ್ದ ಸತ್ಪುರುಷರೆಲ್ಲರೂ ಸಹದೇವನ ಮಾತು ಗಳನ್ನು ಕೇಳಿ ಏಕಕಂಠದಿಂದ–“ಸಾಧು! ಸಾಧು! ಸಹದೇವನು ಹೇಳಿದ್ದು ಸಮಂಜಸವಾಗಿದೆ”–ಎಂದು ಉದ್ಘೋಷಿಸಿದರು. ಯುಧಿಷ್ಠಿರನು ಬ್ರಾಹ್ಮಣರ ಸಾಧುವಾದವನ್ನು ಕೇಳಿ, ಸಭ್ಯರ ಅಭಿಪ್ರಾಯವನ್ನೂ ತಿಳಿದವನಾಗಿ, ಆನಂದಪೂರ್ವಕವಾಗಿ ಅಗ್ರಪೂಜೆಯನ್ನು ಸಲ್ಲಿಸಿದನು.

ತತ್ಪಾದಾವವನಿಜ್ಯಾಪಃ ಶಿರಸಾ ಲೋಕಪಾವನೀಃ ।
ಸಭಾರ್ಯಃ ಸಾನುಜಾಮಾತ್ಯಃ ಸಕುಟುಮ್ಬೋऽವಹನ್ಮುದಾ ॥೨೭॥

ಯುಧಿಷ್ಠಿರನು ತನ್ನ ಪತ್ನಿಯರು, ತಮ್ಮಂದಿರು, ಮಂತ್ರಿಗಳು ಮತ್ತು ಕುಟುಂಬವರ್ಗದವರೊಡನೆ ಅತ್ಯಂತಪ್ರೇಮದಿಂದಲೂ ಮತ್ತು ಆನಂದ ದಿಂದಲೂ ಭಗವಂತನ ಚರಣಾರವಿಂದಗಳನ್ನು ತೊಳೆದು ಲೋಕಪಾವನ ವಾದ ಆ ಚರಣತೀರ್ಥವನ್ನು ತಲೆಯಲ್ಲಿ ಧರಿಸಿದನು.

ಅಗ್ರಪೂಜೆಯ ಸಂದರ್ಭದಲ್ಲಿ ಯುಧಿಷ್ಠಿರನು ಭಗವಂತನಿಗೆ ರೇಷ್ಮೆಯ ಪೀತಾಂಬರಗಳನ್ನೂ, ಬಹುಮೂಲ್ಯವಾದ ಆಭರಣಗಳನ್ನೂ ಸಮರ್ಪಿಸಿದನು. ಆನಂದಸಾಗರದಲ್ಲಿ ಮುಳುಗಿಹೋಗಿದ್ದ ಯುಧಿಷ್ಠಿರನ ಕಣ್ಣುಗಳಿಂದ ಆನಂದಬಾಷ್ಪವು ಸತತವಾಗಿ ಉಕ್ಕಿಬರುತ್ತಿದ್ದಿತು. ಇದರಿಂದಾಗಿ ಪೀತಾಂಬರಗಳನ್ನೂ, ಅಮೂಲ್ಯವಾದ ಆಭರಣಗಳನ್ನೂ ಧರಿಸಿ ರಾರಾಜಿಸು ತ್ತಿದ್ದ ಶ್ರೀಕೃಷ್ಣನನ್ನು ನೋಡಲು ಯುಧಿಷ್ಠಿರನಿಗೆ ಸಾಧ್ಯವಾಗಲೇ ಇಲ್ಲ. ಹೀಗೆ ಅಗ್ರಪೂಜೆಯಿಂದ ಸಮ್ಮಾನಿತನಾದ ಶ್ರೀಕೃಷ್ಣನನ್ನು ನೋಡಿ ಆ ಸಭೆಯಲ್ಲಿ

ಕುಳಿತಿದ್ದವರೆಲ್ಲರೂ ಕೈಗಳನ್ನು ಜೋಡಿಸಿಕೊಂಡು 'ಶ್ರೀಕೃಷ್ಣಾಯ ನಮೋ ನಮಃ। ಜಯ-ಜಯ'–ಮುಂತಾಗಿ ಹೇಳಿಕೊಂಡು ಮಹಾ ಮಹಿಮನಾದ ಶ್ರೀಕೃಷ್ಣನಿಗೆ ನಮಸ್ಕರಿಸಿದರು. ಆಕಾಶದಿಂದ ಪುಷ್ಪವೃಷ್ಟಿ ಯಾಯಿತು.

ಪರೀಕ್ಷಿತಮಹಾರಾಜ! ತನ್ನ ಆಸನದಲ್ಲಿ ಕುಳಿತಿದ್ದ ಶಿಶುಪಾಲನು ಶ್ರೀಕೃಷ್ಣನಿಗೆ ಸಮರ್ಪಿತವಾದ ಅಗ್ರಪೂಜೆಯನ್ನು ನೋಡಿದನು. ಅವನ ಗುಣಗಾನವನ್ನೂ ಕೇಳಿದನು. ಪುನಃ ಪುನಃ ಶ್ರೀಕೃಷ್ಣನ ಗುಣಗಾನವನ್ನು ಸಭೆಯಲ್ಲಿ ಕೇಳುತ್ತಿದ್ದಂತೆ ಸುಪ್ತವಾಗಿದ್ದ ಅವನ ಕೋಪವು ಉಕ್ಕೇರಿ ಬಂದಿತು. ಒಡನೆಯೇ ಮೇಲೆದ್ದು ಕೈಗಳನ್ನು ಮೇಲೆತ್ತಿಕೊಂಡು ಅಸಹನೆ ಯಿಂದಲೂ, ನಿರ್ಭಯದಿಂದಲೂ ಭಗವಾನ್ ಶ್ರೀಕೃಷ್ಣನು ಕೇಳುತ್ತಿರು ವಂತೆಯೇ ಅತಿನಿಂದ್ಯವಾದ ಮತ್ತು ಕಠೋರವಾದ ಮಾತುಗಳನ್ನು ಹೇಳಿದನು :

ಈಶೋ ದುರತ್ಯಯಃ ಕಾಲ ಇತಿ ಸತ್ಯವತೀ ಶ್ರುತಿಃ ।
ವೃದ್ಧಾನಾಮಪಿ ಯದ್ಬುದ್ಧಿರ್ಬಾಲವಾಕ್ಯೈರ್ವಿಭಿದ್ಯತೇ ॥೩೧॥

"ಸಭ್ಯರೇ! ಕಾಲನೇ ಈಶ್ವರನೆಂಬ ಮತ್ತು 'ಕಾಲೋ ಹಿ ದುರತಿ ಕ್ರಮಃ' ಅಂತಹ ಕಾಲವನ್ನು ಅತಿಕ್ರಮಿಸಲು ಸಾಧ್ಯವಿಲ್ಲವೆಂಬ ನಾಣ್ ನುಡಿಯೂ ಸರ್ವಥಾ ಸತ್ಯವೇ ಆಗಿದೆ. ಏಕೆಂದರೆ : ವೃದ್ಧರಾದವರ ಬುದ್ಧಿಯು ಕೂಡ ಬಾಲಕರ ಮಾತುಗಳಿಂದ ಪಲ್ಲಟವಾಗುತ್ತಿದೆ.

ಯೂಯಂ ಪಾತ್ರವಿದಾಂ ಶ್ರೇಷ್ಠಾ ಮಾಮನ್ಧ್ವಂ ಬಾಲಭಾಷಿತಮ್ ।
ಸದಸಸ್ಪತಯಃ ಸರ್ವೇ ಕೃಷ್ಣೋ ಯತ್ಸಮ್ಮತೋಽರ್ಹಣೇ ॥೩೨॥

ಸಭಾಸದರೇ! ಅಗ್ರಪೂಜೆಗೆ ಅರ್ಹರಾರೆಂಬುದನ್ನು ನಿರ್ಣಯಿಸು ವುದರಲ್ಲಿ ನೀವು ಶ್ರೇಷ್ಠರಾಗಿರುವಿರಿ ; ಸಮರ್ಥರಾಗಿರುವಿರಿ. ಆದುದರಿಂದ ಬಾಲಕನಾದ ಸಹದೇವನು ಹೇಳಿದ, ಶ್ರೀಕೃಷ್ಣನೇ ಅಗ್ರಪೂಜೆಗೆ ಅರ್ಹನೆಂಬ ಅಭಿಪ್ರಾಯವನ್ನು ನೀವು ಅನುಮೋದಿಸಬೇಡಿರಿ.

ತಪೋವಿದ್ಯಾವ್ರತಧರಾನ್ ಜ್ಞಾನವಿಧ್ವಸ್ತಕಲ್ಮಷಾನ್ ।
ಪರಮರ್ಷೀನ್ ಬ್ರಹ್ಮನಿಷ್ಠಾನ್ಲೋಕಪಾಲೈಶ್ಚ ಪೂಜಿತಾನ್ ॥೩೩॥

ಸದಸ್ಪತೀನತಿಕ್ರಮ್ಯ ಗೋಪಾಲಃ ಕುಲಪಾಂಸನಃ ।
ಯಥಾ ಕಾಕಃ ಪುರೋಡಾಶಾಂ ಸಪರ್ಯಾಂ ಕಥಮರ್ಹತಿ ॥೩೪॥

ಕಾಗೆಯು ಯಜ್ಞದ ಪುರೋಡಾಶಕ್ಕೆ ಅರ್ಹವಾದೀತೆ? ಹಾಗೆಯೇ ತಪಸ್ವಿಗಳೂ, ವಿದ್ವಾಂಸರೂ, ವ್ರತನಿಷ್ಠರೂ, ಜ್ಞಾನಯೋಗದಿಂದ ಸಮಸ್ತ ಪಾಪಗಳಿಂದಲೂ ಬಿಡುಗಡೆ ಹೊಂದಿದವರೂ ಆಗಿರುವ, ಲೋಕಪಾಲ ರಿಂದಲೂ ಪೂಜಿತರಾಗಿರುವ ಸದಸಸ್ಪತಿಗಳಾದ ಬ್ರಹ್ಮರ್ಷಿಗಳನ್ನು ಬಿಟ್ಟು ಕುಲಪಾಂಸನನಾದ ಈ ಗೋಪಾಲನು ಅಗ್ರಪೂಜೆಗೆ ಹೇಗೆ ಅಧಿಕಾರಿ ಯಾಗುವನು?

ವರ್ಣಾಶ್ರಮಕುಲಾಪೇತಃ ಸರ್ವಧರ್ಮಬಹಿಷ್ಕೃತಃ ।
ಸ್ವೈರವರ್ತೀ ಗುಣೈರ್ಹೀನಃ ಸಪರ್ಯಾಂ ಕಥಮರ್ಹತಿ ॥೩೫॥

ಇವನಿಗೆ ಒಂದು ವರ್ಣವಿಲ್ಲ ; ಒಂದು ಆಶ್ರಮವಿಲ್ಲ. ಇವನ ಕುಲವೂ ಉಚ್ಚವಾದುದೇನೂ ಅಲ್ಲ. ಸಮಸ್ತಧರ್ಮಗಳಿಂದಲೂ ಇವನು ಬಹಿಷ್ಕೃತ ನಾಗಿದ್ದಾನೆ. ಲೋಕಮರ್ಯಾದೆಯನ್ನು ಉಲ್ಲಂಘಿಸುತ್ತಾ ಮನಬಂದಂತೆ ವರ್ತಿಸುತ್ತಾನೆ. ಮೇಲಾಗಿ ಇವನಲ್ಲಿ ಯಾವ ಒಳ್ಳೆಯ ಗುಣಗಳೂ ಇಲ್ಲ. ಇಂತಹವನು ಅಗ್ರಪೂಜೆಗೆ ಹೇಗೆ ಅರ್ಹನಾಗುತ್ತಾನೆ?

ಯಯಾತಿನೈಷಾಂ ಹಿ ಕುಲಂ ಶಪ್ತಂ ಸದ್ಭಿರ್ಬಹಿಷ್ಕೃತಮ್ ।
ವೃಥಾಪಾನರತಂ ಶಶ್ವತ್ಸಪರ್ಯಾಂ ಕಥಮರ್ಹತಿ ॥೩೬॥

ನಿಮ್ಮೆಲ್ಲರಿಗೂ ತಿಳಿದಿರುವಂತೆ ಇವರ ಪೂರ್ವಜನಾದ ಯಯಾ ತಿಯೇ ಇವರಿಗೆ ಶಾಪವನ್ನು ಕೊಟ್ಟಿದ್ದಾನೆ. ಆದುದರಿಂದಲೇ ಸತ್ಪುರುಷರು ಈ ವಂಶದವರನ್ನು ಬಹಿಷ್ಕರಿಸಿದ್ದಾರೆ. ವ್ಯರ್ಥವಾಗಿ ಕುಡಿತದಲ್ಲಿ ಆಸಕ್ತರಾಗಿರುವ ಆ ವಂಶದವರು ಅಗ್ರಪೂಜೆಗೆ ಹೇಗೆತಾನೇ ಯೋಗ್ಯರಾಗುತ್ತಾರೆ?

ಬ್ರಹ್ಮರ್ಷಿಸೇವಿತಾನ್ದೇಶಾನ್ ಹಿತ್ವೈತೇಽಬ್ರಹ್ಮವರ್ಚಸಮ್ ।
ಸಮುದ್ರಂ ದುರ್ಗಮಾಶ್ರಿತ್ಯ ಬಾಧನ್ತೇ ದಸ್ಯವಃ ಪ್ರಜಾಃ ॥೩೭॥

ಇವರೆಲ್ಲರೂ ಬ್ರಹ್ಮರ್ಷಿಗಳಿಂದ ಸೇವಿಸಲ್ಪಡುತ್ತಿದ್ದ ಮಥುರೆಯೇ ಮೊದಲಾದ ದೇಶಗಳನ್ನು ಪರಿತ್ಯಜಿಸಿ, ಬ್ರಹ್ಮವರ್ಚಸ್ಸಿಗೆ ವಿರೋಧಿಯಾದ

ಸಮುದ್ರದಲ್ಲಿಯೇ ಕೋಟೆಯನ್ನು ಕಟ್ಟಿಕೊಂಡು ವಾಸಮಾಡುತ್ತಾ, ಕೆಲವು ಸಮಯಗಳಲ್ಲಿ ಸಮುದ್ರದಿಂದ ಹೊರಬಂದು ದರೋಡೆಕೋರರಾಗಿ ಪ್ರಜೆಗಳನ್ನು ತೊಂದರೆಪಡಿಸುತ್ತಾರೆ. ಇಂತಹವರಿಗೆ ಅಗ್ರಪೂಜೆಯೇ?"

ಪರೀಕ್ಷಿತಮಹಾರಾಜ! ನಿರ್ಭಾಗ್ಯನಾದ ಶಿಶುಪಾಲನು ಇವೇ ಮುಂತಾಗಿ ಕರ್ಣಕಠೋರವಾದ ಮತ್ತು ಅಶುಭವಾದ ಮಾತುಗಳಿಂದ ಶ್ರೀಕೃಷ್ಣನನ್ನು ನಿಂದೆಮಾಡುತ್ತಿರಲು–ಸಿಂಹವು ನರಿಯ ಕೂಗನ್ನು ಅಲಕ್ಷಿಸುವಂತೆ–ಭಗವಂತನಾದ ಶ್ರೀಕೃಷ್ಣನು ಆತನೊಡನೆ ಯಾವುದೊಂದು ಮಾತನ್ನೂ ಆಡಲಿಲ್ಲ. ಅಲ್ಲಿ ಕುಳಿತಿದ್ದ ಸಭಾಸದರು ಸಹಿಸಲು ಅಸಾಧ್ಯವಾದ ಭಗವಂತನ ನಿಂದನೆಯನ್ನು ಕೇಳಿ ಕಿವಿಗಳನ್ನು ಮುಚ್ಚಿಕೊಂಡು–'ಶಾನ್ತಂ ಪಾಪಂ'–ಎಂದು ಹೇಳಿಕೊಳ್ಳುತ್ತಾ ಕ್ರುದ್ಧರಾಗಿ ಶಿಶುಪಾಲನನ್ನೇ ನಿಂದಿಸುತ್ತಾ ಸಭಾಭವನದಿಂದ ಹೊರಟುಹೋದರು.

ನಿನ್ದಾಂ ಭಗವತಃ ಶೃಣ್ವಂಸ್ತತ್ಪರಸ್ಯ ಜನಸ್ಯ ವಾ ।
ತತೋ ನಾಪೈತಿ ಯಃ ಸೋಽಪಿ ಯಾತ್ಯಧಃ ಸುಕೃತಾಚ್ಚ್ಯುತಃ ॥೪೦॥

ಪರೀಕ್ಷಿತಮಹಾರಾಜ! ಯಾವನು ಭಗವಂತನ ಅಥವಾ ಭಗವತ್ಪರಾಯಣನಾದ ಭಕ್ತನ ನಿಂದೆಯನ್ನು ಕೇಳುತ್ತಾ ಅಲ್ಲಿಯೇ ನಿಂತಿರುವನೋ, ಒಡನೆಯೇ ಅಲ್ಲಿಂದ ಹೊರಟುಹೋಗುವುದಿಲ್ಲವೋ, ಅಂತಹವನು ತನ್ನ ಶುಭಕರ್ಮಗಳಿಂದ ಚ್ಯುತನಾಗುತ್ತಾನೆ ಮತ್ತು ಅವನಿಗೆ ಅಧೋಗತಿಯು ಉಂಟಾಗುತ್ತದೆ.

ಬಳಿಕ ಶಿಶುಪಾಲನ ಶ್ರೀಕೃಷ್ಣನಿಂದಾವಾಕ್ಯಗಳಿಂದ ಅತಿಕ್ರುದ್ಧರಾದ ಪಾಂಡವ-ಮತ್ಸ್ಯ-ಕೇಕಯ ಮತ್ತು ಸೃಂಜಯನರಪತಿಗಳು ಶಿಶುಪಾಲನನ್ನು ಸಂಹರಿಸಿಬಿಡಬೇಕೆಂಬ ಇಚ್ಛೆಯಿಂದ ಆಯುಧಗಳನ್ನು ಹಿಡಿದು ಎದ್ದು ನಿಂತರು. ಆದರೆ ಇದರಿಂದ ಶಿಶುಪಾಲನೇನೂ ಗಾಬರಿಗೊಳ್ಳಲಿಲ್ಲ. ಧರ್ಮರಾಜನ ಆ ಸಭೆಯಲ್ಲಿ ಕೃಷ್ಣಪಕ್ಷೀಯರಾಗಿದ್ದ ರಾಜರೆಲ್ಲರನ್ನೂ ಭಯಪಡಿಸುತ್ತಾ ಕತ್ತಿ-ಗುರಾಣಿಗಳನ್ನು ಹಿಡಿದು ತಾನೂ ಯುದ್ಧಕ್ಕೆ ಸಿದ್ಧನಾದನು. ಅಷ್ಟರಲ್ಲಿಯೇ ಭಗವಂತನಾದ ಶ್ರೀಕೃಷ್ಣನು ಆಸನದಿಂದ ಮೇಲೆದ್ದು ತನ್ನ ಕಡೆಯವರೆಲ್ಲರಿಗೂ ಹಿಂದಕ್ಕೆ ಸರಿದು ನಿಲ್ಲುವಂತೆ ಹೇಳಿ ಪರಮಕ್ರುದ್ಧನಾಗಿ

ಕತ್ತಿಯಂತೆ ಹರಿತವಾದ ಅಲುಗಿನಿಂದ ಕೂಡಿದ್ದ ಚಕ್ರದ ಧಾರೆಯಿಂದ, ತನ್ನ ಕಡೆಗೆ ನುಗ್ಗಿಬರುತ್ತಿದ್ದ ಶತ್ರುವಾದ ಶಿಶುಪಾಲನ ಶಿರಸ್ಸನ್ನು ಕತ್ತರಿಸಿಬಿಟ್ಟನು. ಶಿಶುಪಾಲನ ಸಂಹಾರವಾದೊಡನೆಯೇ ಯುಧಿಷ್ಠಿರನ ಮಹಾಸಭೆಯಲ್ಲಿ ದೊಡ್ಡ ಕೋಲಾಹಲವುಂಟಾಯಿತು. ಶಿಶುಪಾಲನ



ಅನುಯಾಯಿಗಳಾದ ರಾಜರು ಜೀವಿಸಿರಬೇಕೆಂಬ ಆಸೆಯಿಂದ ಪಲಾಯನ ಮಾಡಿದರು.

ಚೈದ್ಯದೇಹೋತ್ಥಿತಂ ಜ್ಯೋತಿರ್ವಾಸುದೇವಮುಪಾವಿಶತ್ ।
ಪಶ್ಯತಾಂ ಸರ್ವಭೂತಾನಾಮುಲ್ಕೇವ ಭುವಿ ಖಾಚ್ಚ್ಯುತಾ ॥೪೫॥

ಉಲ್ಕೆಯು ಅಂತರಿಕ್ಷದಿಂದ ಭೂಮಿಗೆ ಬೀಳುವಂತೆ ಸಮಸ್ತರೂ ನೋಡುತ್ತಿದ್ದಂತೆಯೇ ಶಿಶುಪಾಲನ ದೇಹದಿಂದ ಹೊರಟ ಅವನ ಜೀವ ಜ್ಯೋತಿಯು ಶ್ರೀಕೃಷ್ಣನಲ್ಲಿ ಸೇರಿಹೋಯಿತು.

ಪರೀಕ್ಷಿತಮಹಾರಾಜ! ಶಿಶುಪಾಲನು ಶ್ರೀಕೃಷ್ಣನ ಪರಮದ್ವೇಷಿಯಾಗಿದ್ದನು. ಅದು ಕೇವಲ ಒಂದು ಜನ್ಮದ ದ್ವೇಷವಲ್ಲ. ಮೂರು ಜನ್ಮಗಳಿಂದಲೂ ಆ ದ್ವೇಷವು ವೃದ್ಧಿಹೊಂದುತ್ತಲೇ ಇದ್ದಿತು. ದ್ವೇಷಬುದ್ಧಿಯಿಂದಾದರೂ ಅವನು ಶ್ರೀಕೃಷ್ಣನನ್ನು ಸದಾ ಧ್ಯಾನಿಸುತ್ತಲೇ ಇದ್ದನು. ಈ ಕಾರಣದಿಂದಲೇ ಅವನು ವಿಷ್ಣುವಿನ ಪಾರ್ಷದರಲ್ಲಿ ಸೇರಿಹೋದನು. ಮರಣಾನಂತರ ಪ್ರಾಪ್ತವಾಗುವ ಗತಿಗೆ ಭಾವವೇ ಕಾರಣವಾಗುತ್ತದೆ. ಭಾವೋ ಹಿ ಭವಕಾರಣಮ್.

ಶಿಶುಪಾಲನಿಗೆ ಸದ್ಗತಿಯು ಲಭಿಸಿದನಂತರ ಚಕ್ರವರ್ತಿಯಾದ ಯುಧಿಷ್ಠಿರನು ಸದಸ್ಯರಿಗೂ, ಋತ್ವಿಜರಿಗೂ ಹೇರಳವಾದ ದಕ್ಷಿಣೆಗಳನ್ನು ಕೊಟ್ಟು ಸತ್ಕರಿಸಿ ವಿಧಿಪೂರ್ವಕವಾಗಿ ಯಜ್ಞಾಂತ್ಯದ ಅವಭೃಥಸ್ನಾನ ಮಾಡಿದನು.

ಮಹಾರಾಜ! ಹೀಗೆ ಯೋಗೇಶ್ವರನಾದ ಭಗವಂತನು ಯುಧಿಷ್ಠಿರನ ರಾಜಸೂಯಯಾಗವನ್ನು ಪೂರ್ಣಗೊಳಿಸಿಕೊಟ್ಟು ತನ್ನ ಸಂಬಂಧಿಗಳ ಮತ್ತು ಸುಹೃದರ ಪ್ರಾರ್ಥನೆಯಂತೆ ಕೆಲವು ತಿಂಗಳು ಇಂದ್ರಪ್ರಸ್ಥದಲ್ಲಿಯೇ ಇದ್ದನು. ನಾಲ್ಕಾರು ತಿಂಗಳುಗಳು ಕಳೆದನಂತರ ಯುಧಿಷ್ಠಿರನಿಗೆ ಕಳುಹಿಸಿ ಕೊಡುವ ಇಷ್ಟವಿಲ್ಲದಿದ್ದರೂ ಸರ್ವಶಕ್ತನಾದ ಶ್ರೀಕೃಷ್ಣನು ರಾಜನ ಅನುಮತಿಯನ್ನು ಪಡೆದು ತನ್ನ ಪತ್ನಿಯರೊಡನೆಯೂ ಮಂತ್ರಿಗಳೊಡನೆಯೂ ಇಂದ್ರಪ್ರಸ್ಥದಿಂದ ದ್ವಾರಕಾಪಟ್ಟಣಕ್ಕೆ ಪ್ರಯಾಣಮಾಡಿದನು.

ಪರೀಕ್ಷಿತ! ಈ ಉಪಾಖ್ಯಾನವನ್ನು ನಾನು ಹಿಂದೆ (ಏಳನೆಯ ಸ್ಕಂಧ ದಲ್ಲಿ) ಸವಿಸ್ತಾರವಾಗಿ ಹೇಳಿದ್ದೇನೆ. ವೈಕುಂಠವಾಸಿಗಳಾಗಿದ್ದ ಮಹಾವಿಷ್ಣುವಿನ ದ್ವಾರಪಾಲಕರಾಗಿದ್ದ ಜಯ-ವಿಜಯರು ಸನಕಾದಿಮಹರ್ಷಿಗಳ ಶಾಪದಿಂದ ಪುನಃ ಪುನಃ ಜನ್ಮಗಳನ್ನು ಪಡೆಯಬೇಕಾಯಿತು.

ರಾಜಸೂಯಯಾಗವನ್ನು ಮಾಡಿ ವಿಧಿವತ್ತಾಗಿ ಅವಭೃಥಸ್ನಾನವನ್ನು ಮಾಡಿದ ಯುಧಿಷ್ಠಿರನು ಬ್ರಾಹ್ಮಣ-ಕ್ಷತ್ರಿಯರ ಮಹಾಸಭೆಯಲ್ಲಿ ದೇವರಾಜ ನಾದ ಇಂದ್ರನಂತೆಯೇ ಪ್ರಕಾಶಿಸಿದನು. ಯುಧಿಷ್ಠಿರರಾಜನು ಮನುಷ್ಯ ರನ್ನೂ, ದೇವತೆಗಳನ್ನೂ, ಆಕಾಶಚಾರಿಗಳನ್ನೂ ಯಥಾಯೋಗ್ಯವಾಗಿ ಸತ್ಕರಿ ಸಿದನು. ರಾಜಸೂಯಮಹಾಕ್ರತುವನ್ನು ನೋಡಲು ಆಗಮಿಸಿದ್ದವರೆಲ್ಲರೂ ಶ್ರೀಕೃಷ್ಣನನ್ನೂ, ಪರಮಾದ್ಭುತವಾದ ರಾಜಸೂಯಯಾಗವನ್ನೂ ಪ್ರಶಂಸಿ ಸುತ್ತಾ ಸಂತೋಷಭರಿತರಾಗಿ ತಮ್ಮ ತಮ್ಮ ದೇಶಗಳಿಗೆ ಪ್ರಯಾಣಮಾಡಿ ದರು. ಸಮಸ್ತರೂ ಸಂತೋಷಿಸಿದರೂ ದುರ್ಯೋಧನನಿಗೆ ಮಾತ್ರ ಪಾಂಡವರ ಉಜ್ಜ್ವಲವಾದ ರಾಜ್ಯಲಕ್ಷ್ಮಿಯ ಉತ್ಕರ್ಷವನ್ನು ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಏಕೆಂದರೆ ಅವನು ಸ್ವಭಾವತಃ ಪಾಪಿಷ್ಠನಾಗಿದ್ದನು. ಕಲಹಪ್ರಿಯನಾಗಿದ್ದನು. ಕುರುಕುಲದ ವಿನಾಶಕ್ಕೆ ಒಂದು ಮಹಾರೋಗ ಪ್ರಾಯವಾಗಿದ್ದನು.

ಯ ಇದಂ ಕೀರ್ತಯೇದ್ವಿಷ್ಣೋಃ ಕರ್ಮ ಚೈದ್ಯವಧಾದಿಕಮ್ ।
ರಾಜಮೋಕ್ಷಂ ವಿತಾನಂ ಚ ಸರ್ವಪಾಪೈಃ ಪ್ರಮುಚ್ಯತೇ ॥೪೪॥

ಯಾವ ಮನುಷ್ಯನು ಭಗವಂತನಾದ ಶ್ರೀಕೃಷ್ಣನ ಲೀಲೆಗಳಾದ ಶಿಶುಪಾಲವಧೆ, ಜರಾಸಂಧವಧೆ, ರಾಜರ ಮುಕ್ತಿ, ರಾಜಸೂಯಯಾಗ–ಈ ಪ್ರಸಂಗಗಳನ್ನು ಕೀರ್ತನೆಮಾಡುವನೋ ಅಂತಹವನು ಸಮಸ್ತಪಾಪ ಗಳಿಂದಲೂ ಮುಕ್ತನಾಗುತ್ತಾನೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ೭೪ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೭೫ನೆಯ ಅಧ್ಯಾಯ

ರಾಜಸೂಯಯಾಗದ ಪರಿಸಮಾಪ್ತಿ: ದುರ್ಯೋಧನನಿಗಾದ ಅವಮಾನ

ಪರೀಕ್ಷಿತರಾಜನು ಹೇಳುತ್ತಾನೆ :

ಅಜಾತಶತ್ರೋಸ್ತಂ ದೃಷ್ಟ್ವಾ ರಾಜಸೂಯಮಹೋದಯಮ್ ।
ಸರ್ವೇ ಮುಮುದಿರೇ ಬ್ರಹ್ಮನ್ನೃದೇವಾ ಯೇ ಸಮಾಗತಾಃ ॥೧॥

ದುರ್ಯೋಧನಂ ವರ್ಜಯಿತ್ವಾ ರಾಜಾನಃ ಸರ್ಷಯಃ ಸುರಾಃ ।
ಇತಿ ಶ್ರುತಂ ನೋ ಭಗವಂಸ್ತತ್ರ ಕಾರಣಮುಚ್ಯತಾಮ್ ॥೨॥

"ಪೂಜ್ಯರೇ! ರಾಜಸೂಯಯಾಗದ ಮಹೋತ್ಸವವನ್ನು ನೋಡಿ, ಯಾಗವನ್ನು ನೋಡುವ ಸಲುವಾಗಿಯೇ ಆಗಮಿಸಿದ್ದ ರಾಜರೂ, ಋಷಿ-ಮುನಿಗಳೂ, ದೇವತೆಗಳೂ ಸಮಸ್ತರೂ ಸಂತೋಷಪಟ್ಟರೆಂದೂ ಆದರೆ ದುರ್ಯೋಧನನಿಗೆ ಮಾತ್ರ ಸಂತೋಷವಾಗಲಿಲ್ಲವೆಂದೂ ಅವನಿಗೆ ಪಾಂಡ ವರ ಉತ್ಕರ್ಷವನ್ನು ನೋಡಿ ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂದೂ ಹೇಳಿದಿರಿ. ಇದರ ಕಾರಣವನ್ನು ಹೇಳುವ ಕೃಪೆಮಾಡಿರಿ."

ಶ್ರೀಶುಕಮುನಿಗಳು ಹೇಳುತ್ತಾರೆ :

"ಮಹಾರಾಜ! ಅದಕ್ಕೂ ಕಾರಣಗಳಿವೆ. ಹೇಳುವೆನು ; ಕೇಳು.

ನಿನ್ನ ಪಿತಾಮಹನಾದ, ಮಹಾತ್ಮನಾದ ಯುಧಿಷ್ಠಿರನ ರಾಜಸೂಯಯಾಗ ದಲ್ಲಿ ಅವನ ಪ್ರೇಮದಿಂದ ಬಂಧಿಸಲ್ಪಟ್ಟಿದ್ದ ಬಾಂಧವರೆಲ್ಲರೂ ಸೇವಾ ಕಾರ್ಯಗಳನ್ನು ಮಾಡಲು ಸಿದ್ಧರಾಗಿ ನಿಂತಿದ್ದರು. ಭೀಮಸೇನನು ಪಾಕ ಶಾಲೆಗೆ ಅಧ್ಯಕ್ಷನಾಗಿದ್ದನು. ದುರ್ಯೋಧನನು ಧನಾಧ್ಯಕ್ಷನಾಗಿದ್ದನು. ಸಹ ದೇವನು ಅಭ್ಯಾಗತರ ಸ್ವಾಗತ-ಸತ್ಕಾರಗಳನ್ನು ನೋಡಿಕೊಳ್ಳಲು ನಿಯುಕ್ತ ನಾಗಿದ್ದನು. ನಕುಲನು ಸಾಮಗ್ರಿಗಳನ್ನು ಸಂಗ್ರಹಿಸಲು ನಿಯುಕ್ತನಾಗಿದ್ದನು. ಅರ್ಜುನನು ಗುರುಜನರ ಸೇವಾ-ಶುಶ್ರೂಷೆಗಳ ಹೊಣೆಯನ್ನು ಹೊತ್ತಿ ದ್ದನು. ಭಗವಂತನಾದ ಶ್ರೀಕೃಷ್ಣನು ಅತಿಥಿಗಳ ಕಾಲುಗಳನ್ನು ತೊಳೆಯುವ ಸೇವೆಮಾಡುತ್ತಿದ್ದನು. ದ್ರೌಪದೀದೇವಿಯು ಊಟಬಡಿಸುವ ಮೇಲ್ವಿಚಾರಣೆ ಯನ್ನು ನೋಡಿಕೊಳ್ಳುತ್ತಿದ್ದಳು. ಮಹಾತ್ಮನಾದ ಕರ್ಣನು ದಾನಮಾಡಲು ನಿಯುಕ್ತನಾಗಿದ್ದನು. ಹೀಗೆಯೇ ಸಾತ್ಯಕಿ, ವಿಕರ್ಣ, ಹಾರ್ದಿಕ್ಯ, ವಿದುರ, ಭೂರಿಶ್ರವಸನೇ ಮೊದಲಾದ ಬಾಹ್ಲೀಕನ ಮಕ್ಕಳು, ಸಂತರ್ದನ–ಇವರೇ ಮೊದಲಾದವರು ರಾಜಸೂಯಯಾಗದ ಬೇರೆ-ಬೇರೆ ಕಾರ್ಯಗಳಲ್ಲಿ ನಿಯುಕ್ತರಾಗಿದ್ದರು. ಎಲ್ಲರ ಆಶಯವೂ ಕೂಡ ಯುಧಿಷ್ಠಿರಮಹಾರಾಜ ನಿಗೆ ಪ್ರಿಯವನ್ನುಂಟುಮಾಡಬೇಕೆಂಬುದೇ ಆಗಿದ್ದಿತು. ಹೀಗೆ ಋತ್ವಿಜರು, ಸಭಾಸದರು, ವಿದ್ವಾಂಸರು, ಇಷ್ಟಮಿತ್ರರು, ಬಂಧು-ಬಾಂಧವರು ಸಮಸ್ತರೂ ಪ್ರಿಯವಚನಗಳಿಂದಲೂ, ಮರ್ಯಾದೆಯಿಂದಲೂ, ದಕ್ಷಿಣೆಗಳಿಂದಲೂ ಯಥಾಯೋಗ್ಯವಾಗಿ ಪೂಜಿಸಲ್ಪಟ್ಟರು. ಶಿಶುಪಾಲನೂ ಭಕ್ತವತ್ಸಲನಾದ ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಸೇರಿಹೋದನು. ಬಳಿಕ ಧರ್ಮರಾಜನೇ ಮೊದಲಾದವರು ದೇವಗಂಗೆಯಲ್ಲಿ ವೈಭವದಿಂದ ಅವಭೃಥಸ್ನಾನವನ್ನು ಮಾಡಿದರು.

ಅವಭೃಥಸ್ನಾನದ ಸಮಯದಲ್ಲಿ ಮೃದಂಗ, ಶಂಖ, ಪಣವ, ಆನಕ, ಗೋಮುಖ, ನಗಾರಿ, ಢಕ್ಕೆ–ಇವೇ ಮೊದಲಾದ ಮಂಗಳವಾದ್ಯಗಳು ಮೊಳಗಿದುವು. ಹೃಷ್ಟರಾದ ನರ್ತಕಿಯರು ನರ್ತನಮಾಡಿದರು. ಗಾಯಕರು ಗುಂಪು-ಗುಂಪಾಗಿ ಕುಳಿತು ಹಾಡುಗಳನ್ನು ಹಾಡಿದರು. ವಾದ್ಯಗಾರರು ಬಾರಿಸುತ್ತಿದ್ದ ವೀಣೆ-ಕೊಳಲು-ತಾಳಗಳ ಶಬ್ದವು ಆಕಾಶದಲ್ಲಿ ಪ್ರತಿಧ್ವನಿ ಸಿತು. ಸುವರ್ಣದ ಹಾರಗಳಿಂದ ಸಮಲಂಕೃತರಾಗಿದ್ದ ಯದು, ಸೃಂಜಯ,

ಕಾಂಬೋಜ, ಕುರು, ಕೇಕಯ ಮತ್ತು ಕೋಸಲದೇಶಗಳ ರಾಜರು ಬಣ್ಣ-ಬಣ್ಣದ ಧ್ವಜ-ಪತಾಕೆಗಳಿಂದ ಸಮಲಂಕೃತವಾಗಿದ್ದ ಮಹಾಗಜಗಳ ಮೇಲೂ, ಕುದುರೆಗಳ ಮೇಲೂ, ರಥಗಳಲ್ಲಿಯೂ ಕುಳಿತು ಪದಾತಿಸೈನಿಕರೊಡನೆ ಭೂಮಿಯನ್ನೇ ನಡುಗಿಸುತ್ತಾ ಯುಧಿಷ್ಠಿರಮಹಾರಾಜನನ್ನು ಮುಂದುಮಾಡಿಕೊಂಡು ಅವಭೃಥಸ್ನಾನಕ್ಕಾಗಿ ಹೋಗುತ್ತಿದ್ದರು. ಯಜ್ಞದ ಸದಸ್ಯರು, ಋತ್ವಿಜರು ಮತ್ತು ಹಲವಾರು ಮಂದಿ ಬ್ರಾಹ್ಮಣಶ್ರೇಷ್ಠರು ಉಚ್ಚಸ್ವರದಲ್ಲಿ ವೇದಪಾರಾಯಣವನ್ನು ಮಾಡುತ್ತಾ ಹೋಗುತ್ತಿದ್ದರು. ದೇವರ್ಷಿ-ಪಿತೃಗಳೂ, ಗಂಧರ್ವರೂ ಆಕಾಶದಿಂದ ಹೂಮಳೆಗರೆಯುತ್ತಾ ಯುಧಿಷ್ಠಿರನನ್ನು ಮುಕ್ತಕಂಠದಿಂದ ಹೊಗಳುತ್ತಿದ್ದರು. ಗಂಧಮಾಲ್ಯಾಭರಣ-ವಸ್ತ್ರಗಳಿಂದ ಸಮಲಂಕೃತರಾಗಿದ್ದ ಇಂದ್ರಪ್ರಸ್ಥದ ನರ-ನಾರಿಯರು ಓಕುಳಿಯ ನೀರು, ಹಾಲು, ಎಣ್ಣೆ, ಬೆಣ್ಣೆ ಮುಂತಾದು ವನ್ನು ಒಬ್ಬರ ಮೇಲೆ ಮತ್ತೊಬ್ಬರು ಎರಚಾಡುತ್ತಾ ಆಟವಾಡುತ್ತಾ ಯುಧಿಷ್ಠಿರನನ್ನು ಹಿಂಬಾಲಿಸಿ ಹೋಗುತ್ತಿದ್ದರು. ಅಂತೆಯೇ ವೇಶ್ಯೆಯರು ಕೂಡ ಎಣ್ಣೆ, ಹಾಲು, ತುಪ್ಪ, ಬೆಣ್ಣೆ, ಪನ್ನೀರು, ಅರಸಿನ–ಇವೇ ಮುಂತಾದುವನ್ನು ಬೆರೆಸಿದ ಕೇಸರಿಮಿಶ್ರವಾದ ಕೆಂಪುನೀರನ್ನು ಪುರುಷರ ಮೇಲೆ ಸುರಿಯುವರು ಮತ್ತು ಪುರುಷರಿಂದ ತಾವೂ ಸುರಿಸಿಕೊಂಡು ಓಕುಳಿಯ ಕ್ರೀಡೆಗಳನ್ನಾಡುತ್ತಿದ್ದರು.

ಪರೀಕ್ಷಿತಮಹಾರಾಜ! ಆ ಸಮಯದಲ್ಲಿ ಅವಭೃಥೋತ್ಸವವನ್ನು ನೋಡುವ ಸಲುವಾಗಿ ಶ್ರೇಷ್ಠವಾದ ವಿಮಾನಗಳಲ್ಲಿ ಕುಳಿತು ಆಕಾಶದಲ್ಲಿ ಅಸಂಖ್ಯಾತರಾದ ದೇವಿಯರು ಉಪಸ್ಥಿತರಾಗಿದ್ದಂತೆ ಇಂದ್ರಪ್ರಸ್ಥದ ರಾಜ ಮಹಿಷಿಯರೂ ಸೈನಿಕರಿಂದ ರಕ್ಷಿಸಲ್ಪಡುತ್ತಾ ಸುಂದರವಾದ ಪಲ್ಲಕ್ಕಿಗಳಲ್ಲಿ ಕುಳಿತು ಆಗಮಿಸಿದ್ದರು. ಪಾಂಡವರ ಸೋದರಮಾವನ ಮಗನಾದ ಶ್ರೀಕೃಷ್ಣ ಮತ್ತು ಅವನ ಪತ್ನಿಯರು ಪಲ್ಲಕ್ಕಿಗಳಲ್ಲಿ ಕುಳಿತಿದ್ದ ರಾಜಮಹಿಷಿಯರ ಮೇಲೆ ಓಕುಳಿಯನ್ನು ಚೆಲ್ಲಿದರು. ಇದರಿಂದ ರಾಜಮಹಿಷಿಯರ ಮುಖವು ನಾಚಿಕೆಯಿಂದಲೂ ಮತ್ತು ಮಂದಹಾಸದಿಂದಲೂ ಕೂಡಿ ವಿಕಸಿತವಾಗಿ ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಇದಕ್ಕೆ ಬದಲಾಗಿ ಪಲ್ಲಕ್ಕಿಗಳಲ್ಲಿ ಕುಳಿತಿದ್ದ ರಾಣಿಯರು ಕೂಡ ತಮ್ಮ

ಭಾವಮೈದುನರಿಗೂ, ಸಖಿಯರಿಗೂ ಜೀರ್ಕೊಳವೆಯಿಂದ ನೀರನ್ನೆರಚಿ ದರು. ಹೀಗೆ ಪರಸ್ಪರವಾಗಿ ಓಕುಳಿಯ ಆಟಗಳನ್ನು ಆಡುತ್ತಿದ್ದಾಗ ಸ್ತ್ರೀಯರ ಬಟ್ಟೆಗಳೆಲ್ಲವೂ ಒದ್ದೆಯಾಗಿ ಆ ತರುಣಿಯರ ದೇಹ-ಕುಚ-ತೊಡೆ-ನಡುವು-ಕಟಿಪ್ರದೇಶಗಳು ಸ್ಪಷ್ಟವಾಗಿ ಕಾಣುತ್ತಿದ್ದುವು. ಆಟವಾಡುವ ಸಂಭ್ರಮದಲ್ಲಿ ಅವರ ಮುಡಿಗಳು ಸಡಿಲವಾಗಿ ಮುಡಿಗಳಲ್ಲಿದ್ದ ಹೂವುಗಳು ನಕ್ಷತ್ರದಂತೆ ಉದುರುತ್ತಿದ್ದುವು. ಇಂತಹ ಸುಂದರವಾದ ಓಕುಳಿಯ ಆಟಗಳಿಂದ ಆ ಲಲನೆಯರು ಮಲಿನವಾದ ಅಂತಃಕರಣವುಳ್ಳ ಪುರುಷರ ಮನಸ್ಸನ್ನು ಕ್ಷೋಭೆಗೊಳಿಸಿಬಿಟ್ಟರು. ಯುಧಿಷ್ಠಿರಮಹಾರಾಜನು ದ್ರೌಪದಿಯೇ ಮೊದಲಾದ ತನ್ನ ಪತ್ನಿಯರೊಡನೆ ಸುಂದರವಾದ ಕುದುರೆಗಳಿಂದ ಹೂಡಲ್ಪಟ್ಟಿದ್ದ, ಸುವರ್ಣಮಯವಾದ ಮಾಲೆಗಳಿಂದ ಸಮಲಂಕೃತವಾಗಿದ್ದ, ದಿವ್ಯವಾದ ರಥದಲ್ಲಿ ಕುಳಿತು ಪ್ರಯಾಜವೇ ಮೊದಲಾದ ಯಜ್ಞಕ್ರಿಯೆಗಳಿಂದ ಕೂಡಿ ಮೂರ್ತಿಮತ್ತಾಗಿ ಆವಿರ್ಭವಿಸಿದ ರಾಜಸೂಯಯಾಗದಂತೆಯೇ ಪ್ರಕಾಶಿಸಿದನು. ಅನಂತರ ಋತ್ವಿಜರು ಪತ್ನೀಸಂಯಾಜವೆಂಬ ವಿಶೇಷಯಾಗವನ್ನೂ ಮತ್ತು ಅವಭೃಥಕ್ಕೆ ಸಂಬಂಧಿಸಿದ ಕರ್ಮಗಳನ್ನೂ ಯುಧಿಷ್ಠಿರನಿಂದ ಮಾಡಿಸಿ, ಆತನು ಶುದ್ಧಾಚಮನ ಮಾಡಿದನಂತರ ದ್ರೌಪದಿಯೊಡನೆ ಧರ್ಮರಾಜನಿಗೆ ಗಂಗಾಸ್ನಾನವನ್ನು ಮಾಡಿಸಿದರು. ಆ ಸಮಯದಲ್ಲಿ ರಾಜಭಟರು ಬಾರಿಸಿದ ದುಂದುಭಿಗಳೊಡನೆ ದೇವ ದುಂದುಭಿಗಳೂ ಮೊಳಗಿದುವು. ದೇವರ್ಷಿ-ಪಿತೃ-ಮಾನವರು ಪುಷ್ಪವೃಷ್ಟಿ ಯನ್ನು ಧರ್ಮರಾಜನ ಮೇಲೆ ಸುರಿಸಿದರು.

ಪರೀಕ್ಷಿತಮಹಾರಾಜ! ಯುಧಿಷ್ಠಿರನು ದ್ರೌಪದಿಯೊಡನೆ ಅವಭೃಥ ಸ್ನಾನವನ್ನು ಮಾಡಿದನಂತರ ಸಮಸ್ತವರ್ಣದವರೂ ಗಂಗಾನದಿಯಲ್ಲಿ ಸ್ನಾನಮಾಡಿದರು.

ಮಹಾಪಾತಕ್ಯಪಿ ಯತಃ ಸದ್ಯೋ ಮುಚ್ಯೇತ ಕಿಲ್ಬಿಷಾತ್ ॥೨೧॥

ಅವಭೃಥಸ್ನಾನವೆಂಬುದು ಪವಿತ್ರತಮವಾದ ಸ್ನಾನ. ಅದು ಮಹಾ ಪಾತಕಿಯನ್ನಾದರೂ ಸ್ನಾನಮಾಡಿದ ಕ್ಷಣದಲ್ಲಿಯೇ ಮಹಾಪಾಪದಿಂದ ವಿಮುಕ್ತಿಗೊಳಿಸಿಬಿಡುತ್ತದೆ.

ಬಳಿಕ ಯುಧಿಷ್ಠಿರನು ಪಟ್ಟೆವಸ್ತ್ರಗಳನ್ನುಟ್ಟು ವಿಧ-ವಿಧವಾದ ಆಭರಣಗಳಿಂದಲೂ ಸುವರ್ಣಮಾಲೆಗಳಿಂದಲೂ ಸಮಲಂಕೃತನಾಗಿ ಋತ್ವಿಜರಿಗೂ, ಸದಸ್ಯರಿಗೂ, ಬ್ರಾಹ್ಮಣರಿಗೂ ವಸ್ತ್ರಾಭರಣಗಳನ್ನು ಕೊಟ್ಟು ಅವರನ್ನು ಸತ್ಕರಿಸಿದನು. ನಾರಾಯಣಪರನಾದ, ಎಲ್ಲರಲ್ಲಿಯೂ ನಾರಾಯಣನನ್ನೇ ಕಾಣುತ್ತಿದ್ದ, ಶ್ರೀಕೃಷ್ಣನ ಪರಮಭಕ್ತನಾದ ಯುಧಿಷ್ಠಿರನು ಬಂಧುಗಳನ್ನೂ, ಜ್ಞಾತಿಗಳನ್ನೂ, ರಾಜರನ್ನೂ, ಸುಹೃದರನ್ನೂ, ಸಮಸ್ತ ರನ್ನೂ ಪುನಃ ಪುನಃ ಪೂಜಿಸುತ್ತಾ ಸತ್ಕರಿಸುತ್ತಿದ್ದನು. ಆ ಸಮಯದಲ್ಲಿ ಯುಧಿಷ್ಠಿರನಿಂದ ಸತ್ಕೃತರಾದ ಸಮಸ್ತಜನರೂ ಕುಂಡಲಗಳಿಂದಲೂ, ಪುಷ್ಪಹಾರಗಳಿಂದಲೂ, ಉಷ್ಣೀಶಗಳಿಂದಲೂ, ಕವಚಗಳಿಂದಲೂ, ಪಟ್ಟೆವಸ್ತ್ರಗಳಿಂದಲೂ, ಬಹುಮೂಲ್ಯವಾದ ರತ್ನಹಾರಗಳಿಂದಲೂ ಸಮಲಂಕೃತರಾಗಿ ದೇವತೆಗಳಂತೆಯೇ ಪ್ರಕಾಶಮಾನರಾಗಿ ಕಾಣುತ್ತಿದ್ದರು. ಸ್ತ್ರೀಯರು ಕೂಡ ಥಳ-ಥಳಿಸುವ ಓಲೆಗಳನ್ನು ಧರಿಸಿ ಗುಂಗುರುಕೂದಲುಗಳಿಂದ ಸಮಲಂಕೃತವಾದ ಮುಖಕಮಲದಿಂದಲೂ ಸುವರ್ಣಮಯವಾದ ಸೊಂಟ ಪಟ್ಟಿಯಿಂದ ಸಮಲಂಕೃತವಾದ ಕಟಿಪ್ರದೇಶದಿಂದಲೂ ಕೂಡಿ ಅತ್ಯಂತ ಶೋಭಾಯಮಾನರಾಗಿ ಕಾಣುತ್ತಿದ್ದರು.

ಪರೀಕ್ಷಿತಮಹಾರಾಜ! ರಾಜಸೂಯಯಜ್ಞಕ್ಕೆ ಆಗಮಿಸಿದ್ದ ಶೀಲ ವಂತರಾದ ಋತ್ವಿಜರು, ವೇದಪಾರಿಗಳಾದ ಸದಸ್ಯರು, ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರು, ರಾಜರು, ದೇವತೆಗಳು, ಮುನಿಗಳು, ಪಿತೃದೇವತೆಗಳು, ಇತರ ಪ್ರಾಣಿಗಳು, ತಮ್ಮ ತಮ್ಮ ಅನುಯಾಯಿಗಳೊಡನೆ ಆಗಮಿಸಿದ್ದ ಲೋಕಪಾಲರು–ಇವರೆಲ್ಲರನ್ನೂ ಧರ್ಮರಾಜನಾದ ಯುಧಿಷ್ಠಿರನು ಯಥೋಚಿತವಾಗಿ ಪೂಜಿಸಿ ಸತ್ಕರಿಸಿದನು. ಅನಂತರ ಅವರೆಲ್ಲರೂ ರಾಜನ ಅನುಮತಿಯನ್ನು ಪಡೆದು ತಮ್ಮ ತಮ್ಮ ನಿವಾಸಸ್ಥಾನಗಳಿಗೆ ಪ್ರಯಾಣ ಮಾಡಿದರು. ಯಾವ ರೀತಿಯಲ್ಲಿ ಮನುಷ್ಯನು ಎಷ್ಟು ಅಮೃತಪಾನಮಾಡಿ ದರೂ ತೃಪ್ತನಾಗುವುದಿಲ್ಲವೋ, ಇನ್ನೂ ಪಾನಮಾಡುತ್ತಲೇ ಇರಬೇಕೆಂದು ಬಯಸುವನೋ ಅದೇ ರೀತಿಯಲ್ಲಿ ಹರಿದಾಸನಾದ, ರಾಜರ್ಷಿಯಾದ ಯುಧಿಷ್ಠಿರನ ರಾಜಸೂಯಯಾಗವನ್ನು ಎಷ್ಟು ಹೊಗಳಿದರೂ ಜನರಿಗೆ ತೃಪ್ತಿಯೇ ಆಗುತ್ತಿರಲಿಲ್ಲ. ಬಳಿಕ ಯುಧಿಷ್ಠಿರನು ಪ್ರಯಾಣಹೊರಟಿದ್ದ ತನ್ನ

ಸುಹೃದರನ್ನೂ, ನೆಂಟರಿಷ್ಟರನ್ನೂ, ಸಂಬಂಧಿಗಳನ್ನೂ, ಬಂಧುಗಳನ್ನೂ ಮತ್ತು ಶ್ರೀಕೃಷ್ಣನನ್ನೂ ಅವರ ವಿಯೋಗವನ್ನು ಸಹಿಸಿಕೊಳ್ಳಲಾರದೆ, ಪ್ರೇಮಪೂರ್ವಕವಾದ ಪ್ರಾರ್ಥನೆಯಿಂದ ತಡೆಹಿಡಿದನು. ಯುಧಿಷ್ಠಿರನಿಗೆ ಪ್ರಿಯವಾದುದನ್ನೇ ಮಾಡುತ್ತಿದ್ದ ಶ್ರೀಕೃಷ್ಣನು ಯುಧಿಷ್ಠಿರನ ಪ್ರಾರ್ಥನೆಯಂತೆ ಸ್ವಲ್ಪಕಾಲದವರೆಗೆ ಇಂದ್ರಪ್ರಸ್ಥದಲ್ಲಿಯೇ ಇರಲು ಸಮ್ಮತಿಸಿ, ತನ್ನೊಡನೆ ಇಂದ್ರಪ್ರಸ್ಥಕ್ಕೆ ಆಗಮಿಸಿದ್ದ ಯದುವೀರರನ್ನೂ ಇತರ ಸಂಬಂಧಿಗಳನ್ನೂ ಕುಶಸ್ಥಲಿಗೆ (ದ್ವಾರಕೆಗೆ) ಕಳುಹಿಸಿಕೊಟ್ಟನು. ಹೀಗೆ ಧರ್ಮನಂದನನಾದ ಯುಧಿಷ್ಠಿರನು, ದಾಟಲು ಅತ್ಯಂತ ದುಸ್ತರವಾಗಿದ್ದ, ಮನೋರಥವೆಂಬ ಮಹಾಸಮುದ್ರವನ್ನು ಭಗವಾನ್ ಶ್ರೀಕೃಷ್ಣನ ಕೃಪಾವಿಶೇಷದಿಂದ ಅತ್ಯಂತಸುಲಭವಾಗಿ ದಾಟಿ ನಿಶ್ಚಿಂತನಾದನು.

ಪರೀಕ್ಷಿತಮಹಾರಾಜ! ಯುಧಿಷ್ಠಿರನ ಪ್ರಾರ್ಥನೆಯಂತೆ ಇಂದ್ರಪ್ರಸ್ಥದಲ್ಲಿಯೇ ಉಳಿದುಕೊಂಡಿದ್ದವರಲ್ಲಿ ದುರ್ಯೋಧನನೂ ಒಬ್ಬನು. ಹೀಗೆಯೇ ಇರುತ್ತಿರಲಾಗಿ ಒಂದು ದಿನ ದುರ್ಯೋಧನನು, ಅಚ್ಯುತನನ್ನೇ ಸದಾಕಾಲದಲ್ಲಿಯೂ ಧ್ಯಾನಿಸುತ್ತಿದ್ದ ಯುಧಿಷ್ಠಿರನ ಅಂತಃಪುರದ ಅದ್ಭುತವಾದ ಸೌಂದರ್ಯವನ್ನೂ, ಅಲ್ಲಿದ್ದ ಸಂಪತ್ತನ್ನೂ ನೋಡಿದನು. ರಾಜಸೂಯಯಾಗದ ವೈಭವದ ಚಿತ್ರವೂ ಅವನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದುಕೊಂಡಿದ್ದಿತು. ಆ ಯಾಗದ ವೈಭವವನ್ನು ಪುನಃ ನೆನೆಸಿಕೊಂಡು ಅಂತಃಪುರದ ಸೊಬಗನ್ನು ನೋಡುತ್ತಿದ್ದ ಅವನ ಹೃದಯವು ಅಸೂಯೆಯೆಂಬ ಬೆಂಕಿಯಿಂದ ಪರಿತಪಿಸತೊಡಗಿತು. ಮಯನಿಂದ ನಿರ್ಮಿಸಲ್ಪಟ್ಟಿದ್ದ ಆ ಸಭಾಭವನವು ಸಾಧಾರಣದ್ದಾಗಿರಲಿಲ್ಲ. ವಿಶ್ವಕರ್ಮನಿಂದ (ಮಯನಿಂದ) ರಚಿಸಲ್ಪಟ್ಟಿದ್ದ ಆ ಭವ್ಯಸಭಾಮಂದಿರದಲ್ಲಿ ನರೇಂದ್ರರ, ದೈತ್ಯೇಂದ್ರರ ಮತ್ತು ಸುರೇಂದ್ರರ ವೈಭವವೂ ಎದ್ದು ಕಾಣುತ್ತಿದ್ದಿತು. ನಾನಾಪ್ರಕಾರವಾದ ಭೋಗಸಾಮಗ್ರಿಗಳು ಆ ಸಭಾಭವನದಲ್ಲಿದ್ದು ಅತ್ಯಂತಪ್ರಕಾಶಮಾನವಾಗಿ ಕಾಣುತ್ತಿದ್ದುವು. ಅಂತಹ ಅಸಾಧಾರಣವಾದ ಸಾಮಗ್ರಿಗಳಿಂದಲೇ ದ್ರೌಪದಿಯು ತನ್ನ ಗಂಡಂದಿರನ್ನು ಉಪಚರಿಸುತ್ತಿದ್ದಳು. ಅಂತಹ ವೈಭವದಲ್ಲಿಯೇ ಆಸಕ್ತಚಿತ್ತನಾಗಿದ್ದ ದುರ್ಯೋಧನನು ಅಂತಹ ವೈಭವವು ತನಗಿಲ್ಲವೆಂದು ಬಹಳವಾಗಿ ಪರಿತಪಿಸಿದನು.

ಭವ್ಯವಾಗಿದ್ದ ಆ ಸಭಾಭವನದಲ್ಲಿ ಶ್ರೀಕೃಷ್ಣನ ಸಾವಿರಾರು ಪತ್ನಿಯರು ನಿತಂಬಗಳ ಭಾರದಿಂದಾಗಿ ಮೆಲ್ಲ-ಮೆಲ್ಲನೆ ನಡೆಯುತ್ತಿದ್ದರು. ಹಾಗೆ ಹೆಜ್ಜೆಗಳನ್ನಿಡುವಾಗ ಅವರ ಕಾಲುಗಳಲ್ಲಿದ್ದ ಕಾಲಂದುಗೆಗಳು ಝಣ-ಝಣ ಶಬ್ದಮಾಡುತ್ತಿದ್ದು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದುವು. ಅವರ ವಕ್ಷಃಸ್ಥಳಗಳಲ್ಲಿದ್ದ ಬಿಳಿಯ ಮುತ್ತಿನಹಾರಗಳು ಕೂಡ ಕುಚಗಳಲ್ಲಿ ಲೇಪಿಸಿದ್ದ ಕುಂಕುಮಕೇಸರಿಯಿಂದಾಗಿ ಕೆಂಪಾಗಿ ಕಾಣುತ್ತಿದ್ದುವು. ಕಾಂತಿಯಿಂದ ಕೂಡಿದ್ದ ಅವರ ಮುಖಗಳು, ಅಲ್ಲಾಡುತ್ತಿರುವ ಝುಮಕಿಗಳಿಂದಲೂ ಮತ್ತು ಗುಂಗುರುಕೂದಲುಗಳಿಂದಲೂ ಕೂಡಿದ್ದು ಮತ್ತಷ್ಟು ಶೋಭಾಯಮಾನವಾಗಿ ಕಾಣುತ್ತಿದ್ದುವು. ಅಂತಹ ಕಡುಚೆಲುವೆಯರಿಂದ ತುಂಬಿಹೋಗಿದ್ದ ಮಯನಿರ್ಮಿತವಾದ ಸಭಾಮಂದಿರದ ಸೊಬಗನ್ನು ವರ್ಣಿಸಲು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ದುರ್ಯೋಧನನ ಸಂತಾಪಕ್ಕೆ ಇದೂ ಕಾರಣವಾಗಿದ್ದಿತು.

ಪರೀಕ್ಷಿತಮಹಾರಾಜ! ಹೀಗೆಯೇ ಇರುತ್ತಿರಲಾಗಿ ಒಂದು ದಿನ ರಾಜಾಧಿರಾಜನಾದ ಯುಧಿಷ್ಠಿರಮಹಾರಾಜನು ತನ್ನ ಅನುಜರಿಂದಲೂ, ಸಂಬಂಧಿಗಳಿಂದಲೂ, ತನಗೆ ನೇತ್ರಪ್ರಾಯನಾಗಿದ್ದ, ಹಿತೈಷಿಯಾಗಿದ್ದ ಶ್ರೀಕೃಷ್ಣನೊಡನೆಯೂ ಮಯನಿರ್ಮಿತವಾಗಿದ್ದ ಭವ್ಯಸಭಾಭವನದಲ್ಲಿ ಸ್ವರ್ಣಮಯವಾದ ಸಿಂಹಾಸನದಲ್ಲಿ ಕುಳಿತು ದೇವರಾಜನಾದ ಇಂದ್ರ ನಂತೆಯೇ ವಿರಾಜಿಸುತ್ತಿದ್ದನು. ಅವನಲ್ಲಿದ್ದ ಭೋಗಸಾಮಗ್ರಿ ಮತ್ತು ಐಶ್ವರ್ಯಗಳು ಬ್ರಹ್ಮನ ಐಶ್ವರ್ಯಕ್ಕೆ ಸಮಾನವಾಗಿದ್ದುವು. ಹಾಗೆ ಯುಧಿಷ್ಠಿರನು ಸಿಂಹಾಸನದಲ್ಲಿ ಕುಳಿತಿರಲಾಗಿ ವಂದಿ-ಮಾಗಧರು ಆತನನ್ನು ಸ್ತುತಿಸುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ಮಾನಿಷ್ಠನಾದ ಕ್ರುದ್ಧನಾಗಿದ್ದ ದುರ್ಯೋಧನನು ತನ್ನ ಅನುಜರಿಂದ ಪರಿವೃತನಾಗಿ, ತಲೆಯಲ್ಲಿ ಕಿರೀಟವನ್ನೂ ಕತ್ತಿನಲ್ಲಿ ಮಾಲೆಯನ್ನೂ ಧರಿಸಿ, ಕೈಯಲ್ಲಿ ಕತ್ತಿಯನ್ನು ಹಿಡಿದು ದ್ವಾರಪಾಲಕರನ್ನೂ ಸೇವಕರನ್ನೂ ನಿಂದಿಸುತ್ತಾ ಸಭೆಯೊಳಗೆ ಪ್ರವೇಶಿಸಿದನು. ಮಯನಿರ್ಮಿತವಾಗಿದ್ದ, ಚಿತ್ರ-ವಿಚಿತ್ರವಾದ ವಿನ್ಯಾಸ ಗಳಿಂದ ಕೂಡಿದ್ದ ಆ ಸಭಾಮಂದಿರದಲ್ಲಿ ದುರ್ಯೋಧನನು ನೀರಿಲ್ಲದ ನೆಲ ವನ್ನು ನೀರೆಂದು ಭಾವಿಸಿ ಪಂಚೆಯನ್ನು ಮೇಲಕ್ಕೆತ್ತಿಕೊಂಡು ನೀರಿನಲ್ಲಿಳಿದು

ನಡೆದು ಹೋಗುವಂತೆ ನಿಧಾನವಾಗಿ ಕಾಲುಗಳನ್ನಿಟ್ಟನು. ನಾಲ್ಕು ಹೆಜ್ಜೆಗಳನ್ನಿಟ್ಟ ನಂತರವೇ ಅಲ್ಲಿ ನೀರಿಲ್ಲವೆಂಬ ಅರಿವು ಅವನಿಗಾಯಿತು. ಸ್ವಲ್ಪ ನಾಚಿಕೊಂಡು ಆತನು ಮುಂದೆಹೋದನು. ಅಲ್ಲೊಂದು ಕಡೆ ದುರ್ಯೋಧನನಿಗೆ ನೀರಿದ್ದುದು ನೆಲದಂತೆ ಕಂಡಿತು. ಪಂಚೆಯನ್ನು ಮೇಲಕ್ಕೆ ಕಟ್ಟದೆ ನೆಲವೆಂಬ ಭಾವನೆಯಿಂದಲೇ ಅಡಿಯನ್ನಿಟ್ಟು ಮುಗ್ಗರಿಸಿ ನೀರಿನೊಳಕ್ಕೆ ಬಿದ್ದುಬಿಟ್ಟನು. ಮಾನಿಷ್ಠನಾದ ದುರ್ಯೋಧನನು ಹಾಗೆ ನೀರನ್ನು ನೆಲ ವೆಂದು ಭಾವಿಸಿ ಮುಗ್ಗರಿಸಿ ಬಿದ್ದೊಡನೆಯೇ ಭೀಮಸೇನ, ಅಲ್ಲಿ ನೆರೆದಿದ್ದ ಸ್ತ್ರೀಯರು ಮತ್ತು ರಾಜರು ಘೊಳ್ಳನೆ ನಗತೊಡಗಿದರು. ಯುಧಿಷ್ಠಿರನು ನಗಕೂಡದೆಂದು ಹೇಳಲು ಹೋದರೂ ಶ್ರೀಕೃಷ್ಣನೂ ಅವರೊಡನೆ ನಗುತ್ತಿದ್ದುದರಿಂದ ನಗುವನ್ನು ನಿಲ್ಲಿಸಲು ಸಾಧ್ಯವಾಗಲೇ ಇಲ್ಲ. ಶ್ರೀಕೃಷ್ಣನಿಂದ ಅವರ ನಗಾಟಕ್ಕೆ ಪ್ರೋತ್ಸಾಹವೇ ಸಿಕ್ಕಿದಂತಾಯಿತು. ದುರ್ಯೋಧನನಿಗೆ ನಾಚಿಕೆಯಾಗಿ ತಲೆತಗ್ಗಿಸಿದನು. ಸಭ್ಯರೆಲ್ಲರೂ ಒಟ್ಟಾಗಿ ಸೇರಿ ನಗುತ್ತಿರುವುದನ್ನು ನೋಡಿದ ಅವನಿಗೆ ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕೋಪದಿಂದ ಕಿಡಿ-ಕಿಡಿಯಾದನು. ಆದರೆ ಆ ಸಮಯದಲ್ಲಿ ಅವನಿಗೆ ಏನು ಮಾಡಲೂ ಸಾಧ್ಯವಿರಲಿಲ್ಲ. ಯಾವ ಮಾತನ್ನೂ ಆಡದೆ ಸಭಾಭವನದಿಂದ ಹೊರ-ಹೊರಟು ನೇರವಾಗಿ ಹಸ್ತಿನಾಪಟ್ಟಣಕ್ಕೆ ಪ್ರಯಾಣಮಾಡಿದನು.

"ಅಯ್ಯೋ! ದುರ್ಯೋಧನನು ಕೋಪಗೊಂಡು ಹೊರಟು ಹೋದನೇ! ಹೀಗಾಗಬಾರದಾಗಿತ್ತು"–ಎಂಬ ಕಳವಳದ ಧ್ವನಿಯು ಸತ್ಪುರುಷರಿಂದ ಕೇಳಿಬರುತ್ತಿದ್ದಿತು. ಯುಧಿಷ್ಠಿರನೂ ಖಿನ್ನಮನಸ್ಕನಂತಾದನು. ಇಷ್ಟಾದರೂ ಶ್ರೀಕೃಷ್ಣನು ಯಾವ ಮಾತನ್ನೂ ಆಡದೆ ಸುಮ್ಮನೇ ಕುಳಿತಿದ್ದನು. ಯಾವುದಾದರೂ ರೀತಿಯಲ್ಲಿ ಭೂಮಿಯ ಭಾರವನ್ನು ಇಳುಹಬೇಕೆಂಬುದೇ ಭಗವಂತನ ಆಶಯವಾಗಿದ್ದಿತು. ಪರೀಕ್ಷಿತ! ನಿಜ ಹೇಳುವುದಾದರೆ ಶ್ರೀಕೃಷ್ಣನ ದೃಷ್ಟಿಪಾತದಿಂದಲೇ ದುರ್ಯೋಧನನಿಗೆ ನೆಲವು ನೀರಾಗಿಯೂ, ನೀರು ನೆಲವಾಗಿಯೂ ಕಾಣಿಸಿ ಅವನು ಭ್ರಾಂತಿಗೊಂಡನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದಶಮಸ್ಕಂಧದ ೭೫ನೆಯ ಅಧ್ಯಾಯವು ಮುಗಿಯಿತು.

ದಶಮಸ್ಕಂಧ ೭೬ನೆಯ ಅಧ್ಯಾಯ

ಶಾಲ್ವನೊಡನೆ ಯಾದವರ ಯುದ್ಧ

ಶ್ರೀಶುಕಮುನಿಗಳು ಹೇಳುತ್ತಾರೆ :

ಅಥಾನ್ಯದಪಿ ಕೃಷ್ಣಸ್ಯ ಶೃಣು ಕರ್ಮಾದ್ಭುತಂ ನೃಪ ।
ಕ್ರೀಡಾನರಶರೀರಸ್ಯ ಯಥಾ ಸೌಭಪತಿರ್ಹತಃ ॥೧॥

ಪರೀಕ್ಷಿತಮಹಾರಾಜ! ಲೀಲಾಮಾನುಷವಿಗ್ರಹನಾದ ಶ್ರೀಕೃಷ್ಣನ ಮತ್ತೊಂದು ಅದ್ಭುತವಾದ ಕಾರ್ಯವನ್ನು ಹೇಳುವೆನು ; ಕೇಳು. ಅವನ ಈ ಅದ್ಭುತವಾದ ಚರಿತ್ರೆಯಲ್ಲಿ ಸೌಭವೆಂಬ ವಿಮಾನಕ್ಕೆ ಅಧಿಪತಿಯಾದ ಶಾಲ್ವನನ್ನು ಶ್ರೀಕೃಷ್ಣನು ಹೇಗೆ ಸಂಹರಿಸಿದನೆಂಬುದನ್ನು ಹೇಳುತ್ತೇನೆ.

ಶಿಶುಪಾಲನ ಸ್ನೇಹಿತನಾದ ಈ ಶಾಲ್ವನು ರುಕ್ಮಿಣೀದೇವಿಯ ವಿವಾಹ ಸಮಯದಲ್ಲಿ ಕುಂಡಿನಪುರಕ್ಕೆ ಆಗಮಿಸಿದ್ದನು. ರುಕ್ಮಿಣಿಯ ಹರಣವಾದ ನಂತರ ಯಾದವರೊಡನೆ ನಡೆದ ಯುದ್ಧದಲ್ಲಿ ಜರಾಸಂಧನೇ ಮೊದಲಾದವರಂತೆ ಶಾಲ್ವನೂ ಪರಾಜಿತನಾದನು. ಆ ಸಮಯದಲ್ಲಿ ಪರಾಜಿತನಾದ ಶಾಲ್ವನು ಸಮಸ್ತರಾಜರೂ ಕೇಳಿಸಿಕೊಳ್ಳುವಂತೆ ಈ ಪ್ರತಿಜ್ಞೆಯನ್ನು ಮಾಡಿದನು:

ಅಯಾದವೀಂ ಕ್ಷ್ಮಾಂ ಕರಿಷ್ಯೇ ಪೌರುಷಂ ಮಮ ಪಶ್ಯತ ॥೩॥

"ಭೂಮಂಡಲದ ರಾಜರೇ! ನಾನು ಈ ಭೂಮಂಡಲವನ್ನು ಯಾದವರಿಂದ ರಹಿತವನ್ನಾಗಿ ಮಾಡಿಬಿಡುತ್ತೇನೆ. ಅಂತಹ ನನ್ನ ಪೌರುಷವನ್ನು ನೀವು ಕಾಣುವಿರಂತೆ."

ಪರೀಕ್ಷಿತ! ಮೂಢನಾದ ಶಾಲ್ವನು ಹೀಗೆ ಪ್ರತಿಜ್ಞೆಯನ್ನು ಮಾಡಿ ತನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸಿಕೊಳ್ಳಲು ದಿನಕ್ಕೆ ಒಂದು ಮುಷ್ಟಿಯಷ್ಟು ಧೂಳನ್ನೇ ಆಹಾರವನ್ನಾಗಿ ಸೇವಿಸುತ್ತಾ ಪ್ರಭುವಾದ ಪಶುಪತಿದೇವನನ್ನು ಆರಾಧಿಸತೊಡಗಿದನು. ಉಮಾಪತಿಯಾದ ಶಿವನು ಬಹಳ ಬೇಗ ಸಂತುಷ್ಟನಾಗುವವನಾದರೂ ಶಾಲ್ವನ ಮನಸ್ಸಿನಲ್ಲಿದ್ದ ದುರಭಿಪ್ರಾಯವನ್ನು ಗ್ರಹಿಸಿ ಒಂದು ವರ್ಷ ಕಳೆದನಂತರವೇ ಶರಣಾಗತನಾದ ಶಾಲ್ವನಿಗೆ ಬೇಕಾದ ವರವನ್ನು ಕೇಳಿಕೊಳ್ಳುವಂತೆ ಅನುಗ್ರಹಿಸಿದನು. ಸಂತುಷ್ಟನಾದ

ಶಾಲ್ವನು, ದೇವಾಸುರ-ಮನುಷ್ಯರಿಂದಲೂ ಗಂಧರ್ವೋರಗ-ರಾಕ್ಷಸರಿಂದಲೂ ಭೇದಿಸಲಾಗದ, ಇಚ್ಛೆಬಂದೆಡೆಗೆ ಹೋಗುವ, ವೃಷ್ಣಿವಂಶದವರಿಗೆ ಭಯವನ್ನುಂಟುಮಾಡುವ ವಿಮಾನವೊಂದನ್ನು ದಯಪಾಲಿಸುವಂತೆ ಪರಶಿವನನ್ನು ಕೇಳಿಕೊಂಡನು. ಹಾಗೆಯೇ ಆಗಲೆಂದು ಹೇಳಿದ ಭಕ್ತವತ್ಸಲನಾದ ಶಂಕರನು ಅಂತಹ ಅಪೂರ್ವವಾದ ವಿಮಾನವೊಂದನ್ನು ನಿರ್ಮಿಸಿ ಕೊಡುವಂತೆ ದಾನವಶಿಲ್ಪಿಯಾದ ಮಯನಿಗೆ ಆಜ್ಞಾಪಿಸಿದನು. ಈಶ್ವರನ ಆಜ್ಞೆಯನ್ನು ಶಿರಸಾವಹಿಸಿ ಶತ್ರುಗಳ ಪಟ್ಟಣವನ್ನು ಜಯಿಸುವ ಸಾಮರ್ಥ್ಯವನ್ನು ಹೊಂದಿದ್ದ ಮಯಾಸುರನು ಲೋಹಮಯವಾದ ಸೌಭವೆಂಬ ವಿಮಾನಪುರವನ್ನೇ ನಿರ್ಮಾಣಮಾಡಿ ಶಾಲ್ವನಿಗೆ ಕೊಟ್ಟನು. ಅದ್ಭುತವಾದ ನಗರದಂತೆಯೇ ಇದ್ದ ಆ ವಿಮಾನವು ಅಂಧಕಾರಮಯವಾಗಿತ್ತು. ಯಾರ ಕಣ್ಣಿಗೂ ಕಾಣಿಸುತ್ತಿರಲಿಲ್ಲ. ಆದುದರಿಂದ ಅದನ್ನು ಹಿಡಿಯಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ ಅಥವಾ ಮಾಯಾಮಯವಾಗಿದ್ದಿತು. ಇಚ್ಛೆಬಂದಲ್ಲಿಗೆ ಹೋಗುವ ಸಾಮರ್ಥ್ಯವನ್ನು ಹೊಂದಿದ್ದಿತು. ಶಾಲ್ವನು ವೃಷ್ಣಿಗಳೊಡನೆ ಅಥವಾ ಶ್ರೀಕೃಷ್ಣನೊಡನೆ ತನಗಿದ್ದ ವೈರವನ್ನು ಬಾರಿ-ಬಾರಿಗೂ ಸ್ಮರಿಸಿಕೊಳ್ಳುತ್ತಾ ಸೌಭವಿಮಾನಾರೂಢನಾಗಿ ಸೈನ್ಯಸಮೇತನಾಗಿ ದ್ವಾರಕಾ ಪಟ್ಟಣಕ್ಕೆ ತೆರಳಿದನು.

ಪರೀಕ್ಷಿತಮಹಾರಾಜ! ಸೇನಾಸಮೇತನಾಗಿದ್ದ ಶಾಲ್ವನು ದ್ವಾರಕಾ ಪಟ್ಟಣವನ್ನು ನಾಲ್ಕು ದಿಕ್ಕುಗಳಿಂದಲೂ ಮುತ್ತಿಗೆ ಹಾಕಿ ಫಲ-ಪುಷ್ಪಗಳಿಂದ ತುಂಬಿದ್ದ ಉಪವನಗಳನ್ನೂ,* ಉದ್ಯಾನಗಳನ್ನೂ ಧ್ವಂಸಮಾಡಿದನು. ಗೋಪುರಗಳಿಂದ ಕೂಡಿದ ಹೆಬ್ಬಾಗಿಲುಗಳನ್ನೂ, ಉಪ್ಪರಿಗೆಯ ಮನೆಗಳನ್ನೂ, ರಾಜಭವನಗಳನ್ನೂ, ಕ್ರೀಡಾಸ್ಥಳಗಳನ್ನೂ ಧ್ವಂಸಮಾಡಿದನು. ಶಾಲ್ವನ ಸೌಭವಿಮಾನದ ಅಗ್ರಭಾಗದಿಂದ ಶಸ್ತ್ರಾಸ್ತ್ರಗಳ ವೃಷ್ಟಿಯು ಸತತವಾಗಿ ಆಗುತ್ತಿದ್ದಿತು. ಕೇವಲ ಶಸ್ತ್ರಾಸ್ತ್ರಗಳು ಮಾತ್ರವಲ್ಲ. ಕಲ್ಲಿನ ಮಳೆಯು ಸುರಿಯುತ್ತಿದ್ದಿತು. ದೊಡ್ಡ ದೊಡ್ಡ ಮರಗಳು ವಿಮಾನದಿಂದ ದ್ವಾರಕಾ

* ಉಪವನ-ಗಿಡ-ಮರಗಳನ್ನು ಬೆಳೆಸಿರುವ ಚಿಕ್ಕವನ, ಉದ್ಯಾನ–ರಾಜವಿಹಾರ ಯೋಗ್ಯವಾದ ದೊಡ್ಡ ಕೃತಕವನ.

ಪಟ್ಟಣದ ಮೇಲೆ ಸತತವಾಗಿ ಬೀಳುತ್ತಿದ್ದುವು. ವಿಮಾನದಿಂದ ಸಿಡಿಲುಗಳೂ ಹೊರಬಂದು ದ್ವಾರಕಾಪಟ್ಟಣದ ಮೇಲೆ ಬಡಿಯುತ್ತಿದ್ದುವು. ಮರಳಿನ ಮಳೆಗರೆಯುತ್ತಿದ್ದಿತು. ಪ್ರಚಂಡವಾದ ಸುಂಟರಗಾಳಿಯು ಸೌಭವಿಮಾನದಿಂದ ಹೊರಬಂದು ದ್ವಾರಕಾಪಟ್ಟಣವನ್ನೇ ಅಲ್ಲೋಲ-ಕಲ್ಲೋಲಗೊಳಿಸುತ್ತಿದ್ದಿತು. ಹಲವು ವಿಧವಾದ ಸರ್ಪಗಳು ಸೌಭವಿಮಾನದಿಂದ ದ್ವಾರಕೆಯ ಮೇಲೆ ತೊಪತೊಪನೆ ಬೀಳುತ್ತಿದ್ದುವು. ನಾಲ್ಕು ದಿಕ್ಕುಗಳೂ ಧೂಳಿನಿಂದ ಮುಚ್ಚಿಹೋದುವು. ಹಿಂದೆ ತ್ರಿಪುರಾಸುರರಿಂದ ಭೂಮಿಯು ಕ್ಷೋಭೆಗೊಂಡಿದ್ದಂತೆ ಶಾಲ್ವನ ಸೌಭವಿಮಾನದಿಂದ ಪೀಡಿಸಲ್ಪಡುತ್ತಿದ್ದ ಶ್ರೀಕೃಷ್ಣನ ದ್ವಾರಕಾಪಟ್ಟಣವು ಆ ಸಮಯದಲ್ಲಿ ಸ್ವಲ್ಪವಾದರೂ ಸುಖವೆಂಬುದನ್ನು ಕಾಣಲಿಲ್ಲ. ಪ್ರಜೆಗಳೆಲ್ಲರೂ ತತ್ತರಿಸಿಹೋದರು. (ಆ ಸಮಯದಲ್ಲಿ ಶ್ರೀಕೃಷ್ಣನೂ ದ್ವಾರಕೆಯಲ್ಲಿರಲಿಲ್ಲ.) ಆಗ ಶ್ರೀಕೃಷ್ಣನ ಮಗನಾದ ಮಹಾವೀರನಾದ ಮತ್ತು ಯಶೋವಂತನಾದ ಪ್ರದ್ಯುಮ್ನನು ತನ್ನ ಪ್ರಜೆಗಳೆಲ್ಲರೂ ಬಾಧಿಸಲ್ಪಡುತ್ತಿರುವುದನ್ನು ಕಂಡು 'ಮಾಭೈಷ್ಟ'–'ಹೆದರಬೇಡಿರಿ'–ಎಂದು ಹೇಳುತ್ತಾ ರಥದಲ್ಲಿ ಕುಳಿತು ಯುದ್ಧಕ್ಕೆ ಹೊರಟೇಬಿಟ್ಟನು.

ಪ್ರದ್ಯುಮ್ನನನ್ನು ಅನುಸರಿಸಿ ಸಾತ್ಯಕಿ, ಚಾರುದೇಷ್ಣ, ಸಾಂಬ, ಸಹೋದರರೊಡಗೂಡಿದ ಅಕ್ರೂರ, ಕೃತವರ್ಮಾ, ಭಾನುವಿಂದ, ಗದ, ಶುಕ, ಸಾರಣ–ಇವರೇ ಮೊದಲಾದ ಯದುವೀರರು ಧನುರ್ಧಾರಿಗಳಾಗಿ ಯುದ್ಧಕ್ಕೆ ಹೊರಟರು. ಅವರೆಲ್ಲರೂ ಮಹಾರಥರಾಗಿದ್ದರು. ಎಲ್ಲರೂ ಅಭೇದ್ಯವಾದ ಕವಚಗಳನ್ನು ತೊಟ್ಟಿದ್ದರು. ಆ ಮಹಾರಥರ ರಕ್ಷಣೆಗಾಗಿ ರಥ-ಗಜಾಶ್ವ-ಪದಾತಿಸೈನಿಕರೂ ಜೊತೆಯಲ್ಲಿಯೇ ಹೊರಟರು. ಆ ಸಮಯದಲ್ಲಿ ಹಿಂದೆ ಅಸುರರಿಗೂ ದೇವತೆಗಳಿಗೂ ಯುದ್ಧವಾದಂತೆ–ಯದುವೀರರಿಗೂ ಶಾಲ್ವನಿಗೂ ಘೋರವಾದ ಮತ್ತು ರೋಮಾಂಚಕರವಾದ ಯುದ್ಧವು ಪ್ರಾರಂಭವಾಯಿತು. ರುಕ್ಮಿಣೀದೇವಿಯ ಮಗನಾದ ಪ್ರದ್ಯುಮ್ನನು ತನ್ನ ದಿವ್ಯಾಸ್ತ್ರಗಳಿಂದ–ಸೂರ್ಯನು ತನ್ನ ಪ್ರಖರವಾದ ಕಿರಣಗಳಿಂದ ರಾತ್ರಿಯ ಕತ್ತಲೆಯನ್ನು ಹೋಗಲಾಡಿಸುವಂತೆ–ಕ್ಷಣಮಾತ್ರದಲ್ಲಿ ಸೌಭಪತಿಯ ಮಾಯೆಯನ್ನು ನಾಶಗೊಳಿಸಿದನು. ಸುವರ್ಣಮಯವಾದ ರೆಕ್ಕೆಗಳನ್ನು

ಹೊಂದಿ ಲೋಹದ ಅಗ್ರಭಾಗವನ್ನು ಹೊಂದಿದ್ದ ಇಪ್ಪತ್ತೈದು ಬಾಣಗಳಿಂದ ಪ್ರದ್ಯುಮ್ನನು ಶಾಲ್ವನ ಸೇನಾಪತಿಯನ್ನು ಪ್ರಹರಿಸಿದನು. ಮಹಾವೀರನಾದ ಪ್ರದ್ಯುಮ್ನನು ಪುನಃ ಶಾಲ್ವನನ್ನು ನೂರು ಬಾಣಗಳಿಂದಲೂ, ಶಾಲ್ವನ ಒಬ್ಬೊಬ್ಬ ಸೈನಿಕನನ್ನೂ ಒಂದೊಂದು ಬಾಣದಿಂದಲೂ, ಸಾರಥಿಗಳನ್ನು ಹತ್ತು ಹತ್ತು ಬಾಣಗಳಿಂದಲೂ, ವಾಹನಗಳನ್ನು ಮೂರು-ಮೂರು ಬಾಣಗಳಿಂದಲೂ ಪ್ರಹರಿಸಿ ಗಾಯಗೊಳಿಸಿದನು. ಮಹಾತ್ಮನಾದ ಪ್ರದ್ಯುಮ್ನನ ಮಹಾಕಾರ್ಯವನ್ನು ನೋಡಿ ಅವನ ಕಡೆಯ ಸೈನಿಕರೂ ಮತ್ತು ಶತ್ರುಪಕ್ಷದ ಸೈನಿಕರು ಕೂಡ ಆತನನ್ನು ಬಹಳವಾಗಿ ಪ್ರಶಂಸಿಸಿದರು.

ಪರೀಕ್ಷಿತಮಹಾರಾಜ! ಆದರೆ ಮಯಾಸುರನಿಂದ ನಿರ್ಮಿಸಲ್ಪಟ್ಟಿದ್ದ ಸೌಭವಿಮಾನವು ಮಾಯಾಮಯವಾಗಿದ್ದಿತು. ಒಮ್ಮೆ ಅದು ಅನೇಕ ರೂಪ ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಿತು. ಮತ್ತೊಮ್ಮೆ ಒಂದೇ ರೂಪದಲ್ಲಿ ಕಾಣಿಸಿ ಕೊಳ್ಳುತ್ತಿದ್ದಿತು. ಮರುಕ್ಷಣದಲ್ಲಿ ಅದೃಶ್ಯವಾಗಿಬಿಡುತ್ತಿದ್ದಿತು. ಯದುವೀರ ರಿಗೆ ಆ ವಿಮಾನವು ಎಲ್ಲಿದೆ? ಯಾವಾಗ ಬರುತ್ತದೆ?–ಎಂಬುದೇ ತಿಳಿಯು ತ್ತಿರಲಿಲ್ಲ. ಕೆಲವೊಮ್ಮೆ ಆ ವಿಮಾನವು ಭೂಮಿಯಲ್ಲೇ ಓಡಾಡುತ್ತಿದ್ದಿತು. ಕೆಲವೊಮ್ಮೆ ಆಕಾಶದಲ್ಲಿ ಹಾರಾಡುತ್ತಿದ್ದಿತು. ಮತ್ತೆ ಕೆಲವು ಸಮಯಗಳಲ್ಲಿ ಹಡಗಿನಂತೆ ನೀರಿನಲ್ಲಿ ಹೋಗುತ್ತಿದ್ದಿತು. ಕೆಲವು ವೇಳೆ ಪರ್ವತಗಳ ಮೇಲೆ ಕುಳಿತಿರುತ್ತಿದ್ದಿತು. ಹೀಗೆ ಇಚ್ಛೆಬಂದೆಡೆಗೆ ಹೋಗುವ ಸಾಮರ್ಥ್ಯದಿಂದ ಕೂಡಿದ್ದ ಆ ಸೌಭವಿಮಾನವು ಕೊಳ್ಳಿಯ ಚಕ್ರದಂತೆ ಎಲ್ಲೆಂದರಲ್ಲಿ ಸಂಚರಿಸುತ್ತಾ ನಿಂತಲ್ಲಿ ನಿಲ್ಲದೆ ಯದುವೀರರಿಗೆ ಭ್ರಾಂತಿಯನ್ನುಂಟುಮಾಡು ತ್ತಿದ್ದಿತು. ಶಾಲ್ವನು ಸೈನಿಕರೊಡನೆ ಮತ್ತು ತನ್ನ ಅಭೇದ್ಯವಾದ ವಿಮಾನ ದೊಡನೆ ಎಲ್ಲೆಲ್ಲಿ ಕಾಣಿಸಿಕೊಳ್ಳುತ್ತಿದ್ದನೋ ಅತ್ತಕಡೆಗೆ ಗುರಿಯಿಟ್ಟು ಯದು ವೀರರು ಬಾಣಗಳನ್ನು ಬಿಡುತ್ತಿದ್ದರು. ಯದುವೀರರು ಬಿಡುತ್ತಿದ್ದ ಬಾಣಗಳು ಸೂರ್ಯಾಗ್ನಿಗಳ ತೇಜಸ್ಸಿನಂತೆ ಪ್ರಖರವಾದ ತೇಜಸ್ಸಿನಿಂದ ಕೂಡಿದ್ದು ವಿಷಸರ್ಪಗಳಂತೆ ಪ್ರಹಾರವನ್ನು ತಡೆದುಕೊಳ್ಳಲು ಅಸಾಧ್ಯವಾಗಿದ್ದುವು.

ಯದುವೀರರ ಅಂತಹ ಪ್ರಬಲವಾದ ಬಾಣಗಳ ಪ್ರಹಾರದಿಂದ ಶಾಲ್ವನ ನಗರೋಪಮವಾದ ವಿಮಾನಕ್ಕೂ ಹಾನಿಯುಂಟಾಯಿತು. ಸೈನಿಕರಿಗೂ ಗಾಯಗಳಾದುವು. ಶಾಲ್ವನೂ ವಿಮೋಹಿತನಾದನು. ಮರುಕ್ಷಣದಲ್ಲಿಯೇ

ಶಾಲ್ವನ ಕಡೆಯ ಸೈನಿಕರು ಯಾದವರ ಮೇಲೆ ಶಸ್ತ್ರಾಸ್ತ್ರಗಳನ್ನು ಮಳೆಯಂತೆ ಸುರಿಸತೊಡಗಿದರು. ಇದರಿಂದ ಯಾದವಸೈನಿಕರಿಗೂ ಬಹಳ ಗಾಯ ಗಳಾದುವು. ಆದರೂ ಇಹಲೋಕ-ಪರಲೋಕಗಳೆರಡನ್ನೂ ಜಯಿಸಲು ಇಚ್ಛಿಸಿದ್ದ 'ಜಯಿಸಿದರೆ ಭೋಗ ; ಸತ್ತರೆ ಸ್ವರ್ಗ'–ಎಂಬ ಧ್ಯೇಯವನ್ನಿಟ್ಟು ಕೊಂಡಿದ್ದ ಯದುವೀರರು ರಣಭೂಮಿಯನ್ನು ಬಿಟ್ಟುಹೋಗಲಿಲ್ಲ. ಶಾಲ್ವನ ದ್ಯುಮಂತನೆಂಬ ಮಂತ್ರಿಯು ಈ ಹಿಂದೆ ಪ್ರದ್ಯುಮ್ನನು ಪ್ರಯೋಗಿಸಿದ್ದ ಇಪ್ಪತ್ತೈದು ಬಾಣಗಳಿಂದ ಬಹಳವಾಗಿ ಗಾಯಗೊಂಡಿದ್ದನು. ಸ್ವಲ್ಪ ಹೊತ್ತು ಚೇತರಿಸಿಕೊಂಡನಂತರ ಪುನಃ ಪ್ರದ್ಯುಮ್ನನೊಡನೆ ಯುದ್ಧಮಾಡಲು ಬಂದು ಮಹಾಬಲಿಷ್ಠನಾಗಿದ್ದ ದ್ಯುಮಂತನು ಕಬ್ಬಿಣದ ಗದೆಯಿಂದ ಪ್ರದ್ಯುಮ್ನನನ್ನು ರಭಸದಿಂದ ಪ್ರಹರಿಸಿ ಗಟ್ಟಿಯಾಗಿ ಗರ್ಜಿಸಿದನು.

ಪರೀಕ್ಷಿತಮಹಾರಾಜ! ದ್ಯುಮಂತನ ಗದಾಪ್ರಹಾರದಿಂದ ಪ್ರದ್ಯುಮ್ನನ ಎದೆಯೊಡೆದು ಆತನು ಮೂರ್ಛಿತನಾದನು. ರಥವನ್ನು ನಡೆಸುತ್ತಿದ್ದ, ಸಾರಥಿಯ ಧರ್ಮವನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದ ದಾರುಕನ ಮಗನು ರಥವನ್ನು ರಣರಂಗದಿಂದ ಹೊರಕ್ಕೆ ಕೊಂಡೊಯ್ದನು.

ಮುಹೂರ್ತಕಾಲವು ಕಳೆದನಂತರ ಪ್ರದ್ಯುಮ್ನನಿಗೆ ಮೂರ್ಛೆಯು ತಿಳಿಯಿತು. ತನ್ನ ರಥವು ರಣರಂಗದಲ್ಲಿಲ್ಲವೆಂಬುದನ್ನು ಅರಿತು ಖಿನ್ನನಾಗಿ ಸಾರಥಿಗೆ ಹೇಳಿದನು :

"ಸೂತ! ನನ್ನನ್ನು ರಣರಂಗದಿಂದ ಹಿಂದಕ್ಕೆ ಕರೆತಂದು ಬಹಳ ತಪ್ಪು ಕೆಲಸವನ್ನು ಮಾಡಿಬಿಟ್ಟಿರುವೆ. ನೀನು ಹೀಗೆ ಮಾಡಬಾರದಾಗಿತ್ತು. ನಮ್ಮ ವಂಶದಲ್ಲಿ ಯಾವನೊಬ್ಬನೇ ಆಗಲೀ ರಣಾಂಗಣದಿಂದ ಪಲಾಯನಮಾಡಿದ ನೆಂಬ ವಾರ್ತೆಯನ್ನು ನಾನು ಇದುವರೆಗೂ ಕೇಳಿಯೇ ಇಲ್ಲ. ಹೇಡಿಯಾದ ಸಾರಥಿಯಿಂದಾಗಿ ನಾನೊಬ್ಬನು ಇಂತಹ ಕಳಂಕವನ್ನು ಹೊರಬೇಕಾಯಿತೇ ಹೊರತು ನನ್ನ ಕುಲದಲ್ಲಿ ಬೇರೆ ಯಾರೂ ಹೀಗೆ ಕಳಂಕಿತರಾಗಿಲ್ಲ.

ಸೂತ! ನಾನು ನನ್ನ ತಂದೆಯಾದ ಶ್ರೀಕೃಷ್ಣನನ್ನೂ ದೊಡ್ಡಪ್ಪನಾದ ಬಲರಾಮನನ್ನೂ ಸಂಧಿಸಿದಾಗ ಅವರೊಡನೆ ಏನೆಂದು ಹೇಳಲಿ? ರಾಮ-ಕೃಷ್ಣರೇನಾದರೂ ಪ್ರಶ್ನಿಸಿದರೆ ನನ್ನ ಶೌರ್ಯ-ಸಾಹಸಗಳಿಗೆ ಅನುರೂಪ

ವಾದ ಯಾವ ಉತ್ತರವನ್ನು ನಾನು ಅವರಿಗೆ ಕೊಡಲಿ? ಶಾಲ್ವನಿಗೆ ಹೆದರಿ ಪಲಾಯನಮಾಡಿದೆನೆಂದು ಹೇಳಲೇ? ನನ್ನ ನಾದಿನಿಯರು ನನ್ನ ಹೇಡಿತನ ವನ್ನು ಹಂಗಿಸುತ್ತಾ ಗಹ-ಗಹಿಸಿ ನಗುತ್ತಾ–'ವೀರಶೂರನೇ! ನೀನು ಶತ್ರುಗಳೊಡನೆ ರಣರಂಗದಲ್ಲಿ ಹೇಗೆ ಯುದ್ಧಮಾಡಿದೆ? ವಿವರಿಸಿ ಹೇಳು'– ಎಂದೇ ಪ್ರಶ್ನಿಸುತ್ತಾರೆ. ಅವರಿಗೆ ನಾನು ಏನೆಂದು ಉತ್ತರಿಸಲಿ?

ಸೂತ! ನಿಶ್ಚಯವಾಗಿಯೂ ನೀನು ಅಕ್ಷಮ್ಯವಾದ ಅಪರಾಧವನ್ನು ಮಾಡಿಬಿಟ್ಟೆ."

ಸಾರಥಿಯು ಹೇಳುತ್ತಾನೆ :

"ಆಯುಷ್ಮಂತನೇ! ಆಪತ್ಕಾಲದಲ್ಲಿ ಸಾರಥಿಯ ಧರ್ಮವೇನೆಂಬು ದನ್ನರಿತೇ ನಾನು ಈ ಕಾರ್ಯವನ್ನು ಮಾಡಿದ್ದೇನೆ.

ಸೂತಃ ಕೃಚ್ಛ್ರಗತಂ ರಕ್ಷೇದ್ರಥಿನಂ ಸಾರಥಿಂ ರಥೀ ॥೩೨॥

'ಪ್ರಾಣಾಪತ್ತಿನಲ್ಲಿ ಸಿಕ್ಕಿಬಿದ್ದಿರುವಾಗ ಸಾರಥಿಯು ರಥಿಯನ್ನು ರಕ್ಷಿಸಬೇಕು. ಅಂತೆಯೇ ಸಮಯಗಳಲ್ಲಿ ರಥಿಯು ಸಾರಥಿಯನ್ನೂ ರಕ್ಷಿಸ ಬೇಕು'–ಎಂಬುದು ಯುದ್ಧಸಮಯದಲ್ಲಿ ಆಪತ್ಕಾಲದ ಧರ್ಮವಾಗಿದೆ. ಈ ಧರ್ಮವನ್ನು ತಿಳಿದಿರುವ ನಾನು, ನೀನು ಮೂರ್ಛಿತನಾಗಿ ಅಪಾಯದ ಪರಿಸರದಲ್ಲಿದ್ದಾಗ ರಣರಂಗದಿಂದ ಹೊರಕ್ಕೆ ಕರೆತಂದೆನು. ಶತ್ರುವು ನಿನ್ನನ್ನು ಗದೆಯಿಂದ ಪ್ರಹರಿಸಿದನು. ಒಡನೆಯೇ ನೀನು ಮೂರ್ಛಿತನಾದೆ. ಆದುದರಿಂದ ನಾನು ಹೀಗೆ ಮಾಡಿದೆನು."

ಸೂತನ ಮಾತನ್ನು ಕೇಳಿ ಪ್ರದ್ಯುಮ್ನನಿಗೂ ಸಮಾಧಾನವಾಯಿತು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದಶಮಸ್ಕಂಧದ ೭೬ನೆಯ ಅಧ್ಯಾಯವು ಮುಗಿಯಿತು.

ಏಳನೆಯ ಸಂಪುಟವು ಮುಗಿಯಿತು.

ಹರಿಃ ಓಂ

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

|| ಶ್ರಿಯೈ ನಮಃ ||

|| ಶ್ರೀ ಗುರುಭ್ಯೋ ನಮಃ ||

ಶ್ರೀಕೃಷ್ಣಃ ಶರಣಂ ಮಮ

ಸರ್ವಸಾಧನಹೀನಸ್ಯ ಪರಾಧೀನಸ್ಯ ಸರ್ವತಃ ।
ಪಾಪಪೀನಸ್ಯ ದೀನಸ್ಯ ಶ್ರೀಕೃಷ್ಣಃ ಶರಣಂ ಮಮ ||೧||

ಸಂಸಾರಸುಖಸಮ್ಪ್ರಾಪ್ತಿಸಮ್ಮುಖಸ್ಯ ವಿಶೇಷತಃ ।
ಬಹಿರ್ಮುಖಸ್ಯ ಸತತಂ ಶ್ರೀಕೃಷ್ಣಃ ಶರಣಂ ಮಮ ||೨||

ಸದಾ ವಿಷಯಕಾಮಸ್ಯ ದೇಹಾರಾಮಸ್ಯ ಸರ್ವಥಾ ।
ದುಷ್ಟಸ್ವಭಾವಧಾಮಸ್ಯ ಶ್ರೀಕೃಷ್ಣಃ ಶರಣಂ ಮಮ ||೩||

ಸಂಸಾರಸರ್ಪದಷ್ಟಸ್ಯ ಧರ್ಮಭ್ರಷ್ಟಸ್ಯ ದುರ್ಮತೇಃ ।
ಲೌಕಿಕಪ್ರಾಪ್ತಿಕಷ್ಟಸ್ಯ ಶ್ರೀಕೃಷ್ಣಃ ಶರಣಂ ಮಮ ||೪||

ವಿಸ್ಮೃತಸ್ವೀಯಧರ್ಮಸ್ಯ ಕರ್ಮಮೋಹಿತಚೇತಸಃ ।
ಸ್ವರೂಪಜ್ಞಾನಶೂನ್ಯಸ್ಯ ಶ್ರೀಕೃಷ್ಣಃ ಶರಣಂ ಮಮ ||೫||

ಸಂಸಾರಸಿನ್ಧುಮಗ್ನಸ್ಯ ಭಗ್ನಭಾವಸ್ಯ ದುರ್ಮತೇಃ ।
ದುರ್ಭಾವಮಗ್ನಮನಸಃ ಶ್ರೀಕೃಷ್ಣಃ ಶರಣಂ ಮಮ ||೬||

ವಿವೇಕಧೈರ್ಯಭಕ್ತ್ಯಾದಿರಹಿತಸ್ಯ ನಿರನ್ತರಮ್ ।
ವಿರುದ್ಧಕರಣಾಸಕ್ತೇಃ ಶ್ರೀಕೃಷ್ಣಃ ಶರಣಂ ಮಮ ||೭||

ವಿಷಯಾಕ್ರಾನ್ತದೇಹಸ್ಯ ವೈಮುಖ್ಯಹೃತಸನ್ಮತೇಃ ।
ಇನ್ದ್ರಿಯಾಶ್ವಗೃಹೀತಸ್ಯ ಶ್ರೀಕೃಷ್ಣಃ ಶರಣಂ ಮಮ ||೮||

ಏತದಷ್ಟಕಪಾಠೇನ ಹ್ಯೇತದುಕ್ತಾರ್ಥಭಾವನಾತ್ ।
ನಿಜಾಚಾರ್ಯಪದಾಮ್ಭೋಜಸೇವಕೋ ದೈನ್ಯಮಾಪ್ನುಯಾತ್ ||೯||

ಇತಿ ಶ್ರೀಹರಿದಾಸಸ್ವಾಮಿವಿರಚಿತಂ ಶ್ರೀಕೃಷ್ಣಶರಣಾಷ್ಟಕಂ
ಸಂಪೂರ್ಣಮ್

ನಾಮ ಮಹಿಮೆ

ಸರ್ವಮಙ್ಗಲಮಾಙ್ಗಲ್ಯಮಾಯುಷ್ಯಂ ವ್ಯಾಧಿನಾಶನಮ್ ।
ಭಕ್ತಿಮುಕ್ತಿಪ್ರದಂ ದಿವ್ಯಂ ವಾಸುದೇವಸ್ಯ ಕೀರ್ತನಮ್ ॥೧॥

ಪರಿಹಾಸೋಪಹಾಸ್ಯಾದ್ಯೈರ್ವಿಷ್ಣೋರ್ಗೃಹ್ಣನ್ತಿ ನಾಮ ಯೇ ।
ಕೃತಾರ್ಥಾಸ್ತೇಽಪಿ ಮನುಜಾಸ್ತೇಭ್ಯೋಽಪೀಹ ನಮೋ ನಮಃ ॥೨॥

ಸರ್ವತ್ರ ಸರ್ವಕಾಲೇಷು ಯೇಽಪಿ ಕುರ್ವನ್ತಿ ಪಾತಕಮ್ ।
ನಾಮಸಂಕೀರ್ತನಂ ಕೃತ್ವಾ ಯಾನ್ತಿ ವಿಷ್ಣೋಃ ಪರಂ ಪದಮ್ ॥೩॥

ನಾರಾಯಣಾಚ್ಯುತಾನನ್ತ ವಾಸುದೇವೇತಿ ಯೋ ನರಃ ।
ಸತತಂ ಕೀರ್ತಯೇದ್ಭೂಮಿಂ ಯಾನ್ತಿ ಮಲ್ಲಯತಾಂ ಸ ಹಿ ॥೪॥

ಪ್ರಾಣಪ್ರಯಾಣಪಾಥೇಯಂ ಸಂಸಾರವ್ಯಾಧಿಭೇಷಜಮ್ ।
ದುಃಖಶೋಕಪರಿತ್ರಾಣಂ ಹರಿರಿತ್ಯಕ್ಷರದ್ವಯಮ್ ॥೫॥

ವಿಚೇಯಾನಿ ವಿಚಾರ್ಯಾಣಿ ವಿಚಿನ್ತ್ಯಾನಿ ಪುನಃ ಪುನಃ ।
ಕೃಪಣಸ್ಯ ಧನಾನೀವ ತ್ವನ್ನಾಮಾನಿ ಭವನ್ತು ನಃ ॥೬॥

ಸಹಸ್ರನಾಮ್ನಾಂ ಪುಣ್ಯಾನಾಂ ತ್ರಿರಾವೃತ್ತ್ಯಾ ತು ಯತ್ಫಲಮ್ ।
ಏಕವೃತ್ತ್ಯಾ ತು ಕೃಷ್ಣಸ್ಯ ನಾಮ್ಮೈಕಂ ತತ್ಪ್ರಯಚ್ಛತಿ ॥೭॥

ನಾಮಸ್ಮರಣಾದನ್ಯೋಪಾಯಂ ನ ಹಿ ಪಶ್ಯಾಮೋ ಭವತರಣೇ ।
ರಾಮ ಹರೇ ಕೃಷ್ಣ ಹರೇ ತವ ನಾಮ ಸ್ಮರಾಮಿ ಸದಾ ನೃಹರೇ ॥೮॥

|| ಶ್ರೀರಂಗಸದ್ಗುರವೇ ನಮಃ ||

ಪರಿಶಿಷ್ಟ

ಶ್ರೀಕೃಷ್ಣನ ಎರಡು ದಿವ್ಯಲೀಲೆಗಳು

ಶ್ರೀಕೃಷ್ಣಪರಮಾತ್ಮನ ದಿವ್ಯಾವತಾರದ ಕಥೆಗಳನ್ನು ಜ್ಞಾನಿಗಳೂ ಭಕ್ತರೂ, ಸಾಧಕರೂ, ಸಿದ್ಧರೂ, ಶುದ್ಧಿಯನ್ನು ಬಯಸುವವರೂ ಮತ್ತು ಶುದ್ಧಾತ್ಮರೇ ಆದ ಕೃತಕೃತ್ಯರೂ ಶ್ರವಣಮಾಡಿ, ಕೀರ್ತನೆಮಾಡಿ, ಧ್ಯಾನಮಾಡಿ ಪರಮಾನಂದವನ್ನು ಅನುಭವಿಸುತ್ತಾರೆ. "ಆತನ ಕಥಾಮೃತವು ಕಲ್ಮಷಗಳನ್ನು ಪರಿಹಾರಮಾಡುವುದು. ಸಂತಪ್ತರಾದ ಜೀವಿಗಳಿಗೆ ಜೀವನ ಸರ್ವಸ್ವವಾಗಿರುವುದು. ಜ್ಞಾನಿಗಳ ಸ್ತೋತ್ರಗಾನಗಳಿಗೆ ವಿಷಯವಾಗಿರುವುದು. ಅದನ್ನು ಕೇಳುವುದು ಕೂಡ ಮಂಗಳತಮವಾದುದು. ಅದರ ಪಾರಾಯಣ, ಕೀರ್ತನೆಗಳನ್ನು ಮಾಡುವವರು ಮಹಾದಾನಿಗಳು"–ಎಂದು ಜ್ಞಾನ-ಭಕ್ತಿ-ವೈರಾಗ್ಯಸಂಹಿತೆಯಾಗಿರುವ ಶ್ರೀಮದ್ಭಾಗವತವು ಸಾರುತ್ತದೆ.

ತವ ಕಥಾಮೃತಂ ತಪ್ತಜೀವನಂ ಕವಿಭಿರೀಡಿತಂ ಕಲ್ಮಷಾಪಹಮ್ ।
ಶ್ರವಣಮಙ್ಗಲಂ ಶ್ರೀಮದಾತತಂ ಭುವಿ ಗೃಣನ್ತಿ ಯೇ ಭೂರಿದಾ
ಜನಾಃ ll X 31-9

ಈ ದೃಷ್ಟಿಯಿಂದ ಶ್ರೀಕೃಷ್ಣನ ಅವತಾರಲೀಲೆಗಳನ್ನು ಅನುಸಂಧಾನ ಮಾಡುತ್ತಿರುವಾಗ ಅದರಲ್ಲಿ ಸೇರಿರುವ ಕೆಲವು ಪ್ರಸಂಗಗಳು ವಿಚಾರವಂತರ ಮತ್ತು ಸಾಮಾನ್ಯಜನರ ಮನಸ್ಸುಗಳನ್ನು ಕಲಕುತ್ತವೆ. ಸಂಶಯದ ಕೆಸರನ್ನು ಅಲ್ಲಿ ಎಬ್ಬಿಸುತ್ತವೆ. 'ಆ ಪ್ರಸಂಗಗಳನ್ನು ಹೇಳುವ ಅಧ್ಯಾಯಗಳು ಶ್ರೀಮದ್ಭಾಗವತದಲ್ಲಿ ಪ್ರಕ್ಷಿಪ್ತಭಾಗಗಳು ; ಇತ್ತೀಚೆಗೆ ಸೇರಿಸಲ್ಪಟ್ಟುವು'– ಎಂದು ಹೇಳುವವರೂ ಇದ್ದಾರೆ. ಆದರೆ ಶ್ರೀಮದ್ಭಾಗವತದ ಅತ್ಯಂತ ಪ್ರಾಚೀನಪ್ರತಿಗಳಲ್ಲಿಯೂ ಅವುಗಳ ಉಲ್ಲೇಖವಿದೆ. ಆದುದರಿಂದ ಅವುಗಳನ್ನು ಪ್ರಕ್ಷಿಪ್ತಭಾಗಗಳೆಂದು ತಳ್ಳಿಹಾಕಲು ಸಾಧ್ಯವಾಗುವುದಿಲ್ಲ.

ಅಂತಹ ಪ್ರಸಂಗಗಳಲ್ಲಿ ಶ್ರೀಮದ್ಭಾಗವತದ ದಶಮಸ್ಕಂಧದ ಪೂರ್ವಾರ್ಧದಲ್ಲಿ ಮಂಡಿಸಲ್ಪಟ್ಟಿರುವ ಎರಡು ಮುಖ್ಯವಾದ ಪ್ರಸಂಗಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವಿಮರ್ಶಿಸುತ್ತೇವೆ. ಇವುಗಳಲ್ಲಿ ಮೊದಲನೆಯದು

ಚೀರಹರಣದ ಅಂದರೆ ಗೋಪಿಕಾವಸ್ತ್ರಾಪಹರಣಪ್ರಸಂಗ ; ಎರಡನೆಯದು ಗೋಪಿಯರೊಡನೆ ಶ್ರೀಕೃಷ್ಣನು ನಡೆಸಿದ ರಾಸಲೀಲಾಪ್ರಸಂಗ.

(ಶ್ರೀಮದ್ಭಾಗವತ ದಶಮಸ್ಕಂಧ 22 ಮತ್ತು 29-33 ಅಧ್ಯಾಯಗಳು)

೧) ಚೀರಹರಣಪ್ರಸಂಗ : ಚೀರಹರಣದ ಕಥಾಪ್ರಸಂಗ ಹೀಗಿದೆ :

ಗೋಪಬಾಲಿಕೆಯರು ಹೇಮಂತಋತುವಿನ ಮೊದಲನೆಯ ಮಾಸ ದಲ್ಲಿ ಶ್ರೀಕೃಷ್ಣನನ್ನೇ ಪತಿಯನ್ನಾಗಿ ಪಡೆಯಬೇಕೆಂಬ ಪ್ರಾರ್ಥನೆಯಿಂದ ವ್ರತನಿಷ್ಠರಾಗಿ, ಹೊತ್ತುಹುಟ್ಟುವುದಕ್ಕೆ ಮೊದಲೇ ಯಮುನಾನದಿಯಲ್ಲಿ ಸ್ನಾನಮಾಡುತ್ತಾ ಕಾತ್ಯಾಯಿನೀದೇವಿಯನ್ನು ಪೂಜಿಸುತ್ತಿರುತ್ತಾರೆ.

ಹೇಮನ್ತೇ ಪ್ರಥಮೇ ಮಾಸಿ ನನ್ದವ್ರಜಕುಮಾರಿಕಾಃ ।
ಚೇರುರ್ಹವಿಷ್ಯಂ ಭುಞ್ಜಾನಾಃ ಕಾತ್ಯಾಯಿನ್ಯರ್ಚನವ್ರತಮ್ ॥

(X 22-1)

ಇದರಂತೆ ಒಂದು ದಿನ ಅವರು ಸ್ನಾನಕ್ಕಾಗಿ ನೀರಿಗೆ ಇಳಿಯುವುದಕ್ಕೆ ಮೊದಲು ತಮ್ಮ ತಮ್ಮ ವಸ್ತ್ರಗಳನ್ನು ನದಿಯ ತೀರದಲ್ಲಿಟ್ಟು ಶ್ರೀಕೃಷ್ಣನ ಗುಣಗಾನಮಾಡುತ್ತಾ ಜಲಕ್ರೀಡೆಯಾಡಲು ತೊಡಗುತ್ತಾರೆ. ಅವರ ಪ್ರಾರ್ಥನೆಯನ್ನು ಅರಿತ ಯೋಗೇಶ್ವರನಾದ ಗೋಪಬಾಲಕ ಶ್ರೀಕೃಷ್ಣನು ಅವರೆಲ್ಲರ ಬಟ್ಟೆಗಳನ್ನೂ ಎತ್ತಿಕೊಂಡು ತಟಕ್ಕನೆ ಬಂದು ಕದಂಬವೃಕ್ಷವನ್ನು ಹತ್ತಿ ಕುಳಿತುಕೊಂಡು–"ಎಲೈ ಕುಮಾರಿಯರೇ! ನಿಮಗೆ ವಸ್ತ್ರಗಳು ಬೇಕಾಗಿದ್ದರೆ ಪ್ರತಿಯೊಬ್ಬರೂ ಇಲ್ಲಿಗೆ ಒಂದು ನಿಮ್ಮ ನಿಮ್ಮ ವಸ್ತ್ರಗಳನ್ನು ತೆಗೆದುಕೊಳ್ಳಬಹುದು. ನಿಜವಾಗಿ ಹೇಳುತ್ತೇನೆ. ವಿನೋದ ಮಾಡುತ್ತಿಲ್ಲ. ಏಕೆಂದರೆ : ನೀವು ವ್ರತಾಚರಣೆಯಿಂದ ಕೃಶರಾಗಿದ್ದೀರಿ"–ಎನ್ನುತ್ತಾನೆ.

ಅತ್ರಾಗತ್ಯಾಬಲಾಃ ಕಾಮಂ ಸ್ವಂ ಸ್ವಂ ವಾಸಃ ಪ್ರಗೃಹ್ಯತಾಮ್ ।
ಸತ್ಯಂ ಬ್ರುವಾಣಿ ನೋ ನರ್ಮ ಯದ್ಯೂಯಂ ವ್ರತಕರ್ಶಿತಾಃ ॥

(X 22-10)

ಗೋಪಿಯರು : "ಶ್ಯಾಮಸುಂದರ! ಇಂತಹ ಅನೀತಿಯನ್ನು ಮಾಡಬೇಡ. ನೀನು ಧರ್ಮವನ್ನು ಬಲ್ಲವನು. ನಾವು ನಿನ್ನ ದಾಸಿಯರು.

ನೀನು ಹೇಳಿದಂತೆ ಕೇಳುತ್ತೇವೆ. ದಯೆಯಿಟ್ಟು ನಮ್ಮ ಬಟ್ಟೆಗಳನ್ನು ಕೊಟ್ಟು ಹೋಗು. ಇಲ್ಲದಿದ್ದರೆ ನಂದಮಹಾರಾಜರಿಗೆ ದೂರುಕೊಡುತ್ತೇವೆ."

ಶ್ರೀಕೃಷ್ಣ : "ನೀವು ನಿಜವಾಗಿಯೂ ನನ್ನ ದಾಸಿಯರಾಗಿ ನನ್ನ ಆಜ್ಞೆಯನ್ನು ಪಾಲನೆಮಾಡುವವರಾಗಿದ್ದರೆ ಇಲ್ಲಿ ಬಂದು ನಿಮ್ಮ ನಿಮ್ಮ ವಸ್ತ್ರಗಳನ್ನು ತೆಗೆದುಕೊಂಡು ಹೋಗಿರಿ."

ಚಳಿಯಿಂದ ನಡುಗುತ್ತಿದ್ದ ಬಾಲಿಕೆಯರು ತಮ್ಮ ಗೋಪ್ಯಾಂಗಗಳನ್ನು ಕೈಗಳಿಂದ ಮುಚ್ಚಿಕೊಂಡು ನೀರಿನಿಂದ ಮೇಲೆದ್ದು ಬಂದು ವಸ್ತ್ರಗಳನ್ನು ಯಾಚಿಸಿದರು.

ಶ್ರೀಕೃಷ್ಣ : "ನೀವು ವ್ರತವನ್ನು ಆಚರಿಸುತ್ತಿದ್ದೀರಿ. ಇದು ಸರಿಯೇ ಆಗಿದೆ. ಆದರೆ ಬೆತ್ತಲೆಯಾಗಿ ಈ ಪವಿತ್ರತೀರ್ಥದಲ್ಲಿ ಸ್ನಾನಮಾಡಿದ್ದೀರಿ. ಇದು ದೈವಾಪಚಾರ. ಪವಿತ್ರವಾದ ವ್ರತಸ್ನಾನಮಾಡುವುದರ ಬದಲು ಜಲಕ್ರೀಡೆ ಆಡಿದ್ದೀರಿ. ಇದೂ ಅಪಚಾರವೇ. ದೇವತೆಯಾದ ವರುಣದೇವರಲ್ಲಿ ನೀವು ಅಪರಾಧವೆಸಗಿದ್ದೀರಿ. ಇದಕ್ಕಾಗಿ ತಲೆಯ ಮೇಲೆ ಕೈಗಳನ್ನು ಜೋಡಿಸಿಕೊಂಡು ನಮಸ್ಕರಿಸಿ ಅನಂತರ ನಿಮ್ಮ ಬಟ್ಟೆಗಳನ್ನು ತೆಗೆದುಕೊಳ್ಳಿರಿ."

ತಮ್ಮಿಂದ ವ್ರತಭಂಗವಾಗಿದೆಯೆಂದು ತಿಳಿದುಕೊಂಡ ಗೋಪಬಾಲಿಕೆಯರು, ಪಾಪಪರಿಹಾರಕ್ಕಾಗಿ ಲಜ್ಜೆಯನ್ನು ತೊರೆದು, ಸರ್ವಕರ್ಮಸಾಕ್ಷಿಯಾದ ಸರ್ವದೇವತಾಂತರ್ಯಾಮಿಯಾದ ಶ್ರೀಕೃಷ್ಣನಿಗೆ ಅಂತೆಯೇ ನಮಸ್ಕಾರಮಾಡಿದರು. ಹೀಗೆ ಲಜ್ಜಾಭಂಗವನ್ನು ಮಾಡಿದ್ದಕ್ಕಾಗಿ ಶ್ರೀಕೃಷ್ಣನಲ್ಲಿ ಕೋಪಿಸಿಕೊಳ್ಳಲಿಲ್ಲ. ತಮ್ಮ ತಮ್ಮ ವಸ್ತ್ರಗಳನ್ನು ಧರಿಸಿ ಆತನಲ್ಲಿ ಪ್ರಸನ್ನರಾಗಿಯೇ ಇದ್ದರು.

ಶ್ರೀಕೃಷ್ಣ : "ಪ್ರಿಯರಾದ ಕುಮಾರಿಯರೇ! ನಿಮ್ಮ ವ್ರತದ ಉದ್ದೇಶ ನನಗೆ ತಿಳಿದಿದೆ. ಅದು ಶರದೃತುವಿನ ರಾತ್ರಿಗಳಲ್ಲಿ ಈಡೇರುವುದು. ನನ್ನಲ್ಲಿ ಯಾರು ಆತ್ಮಸಮರ್ಪಣೆಮಾಡಿಕೊಳ್ಳುತ್ತಾರೋ ಅವರ ಕಾಮವು ಇಂದ್ರಿಯಸಂಬಂಧವಾದ ಕಾಮದಂತೆ ಸಂಸಾರಕ್ಕೆ ತಳ್ಳುವುದಿಲ್ಲ. ಹುರಿಯ

ಲ್ಲಟ್ಟ ಅಥವಾ ಕುದಿಸಲ್ಪಟ್ಟ ಬೀಜಗಳು ಅಂಕುರವಾಗಿ ಬೆಳೆಯುವು ದಿಲ್ಲವಷ್ಟೆ!"

ನ ಮಯ್ಯಾವೇಶಿತಧಿಯಾಂ ಕಾಮಃ ಕಾಮಾಯ ಕಲ್ಪತೇ ।
ಭರ್ಜಿತಾಃ ಕ್ವಥಿತಾ ಧಾನಾಃ ಪ್ರಾಯೋ ಬೀಜಾಯ ನೇಷ್ಯತೇ ॥
ಇದು ಕಥಾಪ್ರಸಂಗದ ಸಾರ. (X 22/26)

ಸಾಮಾಜಿಕದೃಷ್ಟಿಯಿಂದ ನೋಡಿದಾಗಲೂ ಮತ್ತು ಧರ್ಮಶಾಸ್ತ್ರಗಳ ಮತ್ತು ಅಧ್ಯಾತ್ಮಶಾಸ್ತ್ರಗಳ ದೃಷ್ಟಿಯಿಂದ ವಿಚಾರಮಾಡಿದರೂ ಶ್ರೀಕೃಷ್ಣನ ಈ ವಸ್ತ್ರಾಪಹರಣವು ದೊಡ್ಡ ಅನೀತಿಯೆಂದೇ ಅನ್ನಿಸುತ್ತದೆಯಲ್ಲವೇ? ದುಶ್ಶಾಸನನ ದುರುಳತನದಿಂದ ದ್ರೌಪದೀದೇವಿಯ ವಸ್ತ್ರಾಪಹರಣದ ಪ್ರಸಂಗಬಂದಾಗ ಆಕೆಗೆ ಅಕ್ಷಯವಸ್ತ್ರಗಳನ್ನು ಅನುಗ್ರಹಿಸಿ ಆಕೆಯ ಮಾನವನ್ನು ಕಾಪಾಡಿದ ಶ್ರೀಕೃಷ್ಣನು ಹೀಗೆ ಗೋಪಾಲಬಾಲಿಕೆಯರ ವಸ್ತ್ರಾಪಹರಣವನ್ನು ತಾನೇ ಮಾಡಬಹುದೇ? ಧರ್ಮಸೇತುವಿನ ರಕ್ಷಣೆಗೋಸ್ಕರವೇ ಅವತಾರಮಾಡಿದ ಶ್ರೀಕೃಷ್ಣನು ತಾನೇ ದುಷ್ಟಕಾಮವನ್ನು ಉದ್ದೀಪನೆ ಮಾಡುವ ಈ ಅಧರ್ಮವನ್ನು ಆಚರಿಸಬಹುದೇ? ಎಂತಹ ಅನಾದರ್ಶದ, ಅನೀತಿಯ ಕಾರ್ಯವಿದು? ಧರ್ಮನೀತಿಯು ಶಿಥಿಲವಾಗುತ್ತಿರುವ ಈಗಿನ ಕಾಲದಲ್ಲೂ ಕೂಡ ಇಂತಹ ಕೆಲಸಮಾಡಿದವರು ಪೋಲೀಸು ಕಾವಲಪಡೆಯವರಿಂದ ಏಟುತಿನ್ನಬೇಕಾಗುತ್ತದೆ ಅಥವಾ ಸೆರೆಮನೆ ಸೇರಬೇಕಾಗುತ್ತದೆ. ಹೀಗೆ ಎಲ್ಲ ದೃಷ್ಟಿಗಳಿಂದಲೂ ನಿಂದ್ಯವಾಗಿರುವ ಶ್ರೀಕೃಷ್ಣನ ಈ ಕಾರ್ಯವನ್ನು ದಿವ್ಯಲೀಲೆಯೆಂದು ಕೊಂಡಾಡುವುದು ಮತ್ತು **'ಜಲಕ್ರೀಡಾಸಮಾಸಕ್ತ ಗೋಪೀವಸ್ತ್ರಾಪಹಾರಕಃ'**—ಎಂದು ಆತನನ್ನು ಅಷ್ಟೋತ್ತರಸ್ತೋತ್ರದಲ್ಲಿ ಸ್ತುತಿಸುವುದು ಹಾಸ್ಯಾಸ್ಪದವಲ್ಲವೇ? ಪುಂಡುತನದ ಕೆಲಸವನ್ನು ಪುಣ್ಯದ ಲೀಲೆಯೆಂದು ಹೊಗಳಬಹುದೇ? ಇತ್ಯಾದಿ ಪ್ರಶ್ನೆಗಳು ಏಳುವುದು ಸಹಜವಾಗಿದೆ. ಪೂರ್ವಾಗ್ರಹವಿಲ್ಲದೆ ಇವುಗಳನ್ನು ವಿಚಾರಮಾಡೋಣ.

ಗೋಪಾಲಬಾಲಕಿಯರ ವಸ್ತ್ರಾಪಹಾರಮಾಡಿ ಬೆತ್ತಲೆಯಾಗಿದ್ದ ಅವರಿಂದ ನಮಸ್ಕಾರಮಾಡಿಸಿಕೊಂಡ ಶ್ರೀಕೃಷ್ಣನು ಇಂದ್ರಿಯಗಳ ವಿಕಾರಕ್ಕೆ

ಒಳಗಾಗುವ ನರನೇ ಅಥವಾ "ನಿಷ್ಕಲೋ ನಿರಂಜನೋ ನಿರ್ವಿಕಲ್ಪಃ" "ಅವಿಕಾರಾಯ ಶುದ್ಧಾಯ" ಎಂದು ಶ್ರುತಿ-ಸ್ಮೃತಿಗಳಲ್ಲಿ ಸಂಸ್ತುತನಾಗಿರುವ ನಿರ್ವಿಕಾರನಾದ, ಜ್ಞಾನಾನಂದಸ್ವರೂಪನಾದ ಪರಮಾತ್ಮನೇ? ಎಂಬುದನ್ನು ಇಲ್ಲಿ ಮೊದಲು ನಿರ್ಣಯಿಸಿಕೊಳ್ಳಬೇಕು. ಶ್ರೀಕೃಷ್ಣನ ಈ ಲೀಲಾಪ್ರಸಂಗಕ್ಕೆ ಪ್ರಮಾಣಗ್ರಂಥವಾಗಿರುವುದು ಶ್ರೀಮದ್ಭಾಗವತ. ಅದನ್ನು ಪೂರ್ಣವಾಗಿ ನಂಬುವುದಾದರೆ ಶ್ರೀಕೃಷ್ಣನು **'ಕೃಷ್ಣಸ್ತು ಭಗವಾನ್ ಸ್ವಯಂ'**–ಎಂಬಂತೆ ಸಾಕ್ಷಾತ್ ಪರಮಾತ್ಮನೆಂದೇ ತಿಳಿಯಬೇಕಾಗುತ್ತದೆ. ಶ್ರೀಮದ್ಭಾಗವತವು ಪ್ರಾಮಾಣಿಕವಾದ ಗ್ರಂಥವಲ್ಲ–ಎನ್ನುವಿರಾದರೆ ಆಗ ಈ ಲೀಲಾಪ್ರಸಂಗವೂ ಅಪ್ರಾಮಾಣಿಕವಾಗುತ್ತದೆ. ಪ್ರಶ್ನೆಗಳಿಗಾಗಲೀ ಆಕ್ಷೇಪಗಳಿಗಾಗಲೀ ವಿಷಯವೇ ಇರುವುದಿಲ್ಲ.

ಹಾಗಲ್ಲದೆ 'ಶ್ರೀಮದ್ಭಾಗವತದ ಕಥೆಯನ್ನು ನಾವು ನಂಬುತ್ತೇವೆ. ಆದರೆ ಶ್ರೀಕೃಷ್ಣನು ಪರಮಾತ್ಮನೆಂಬುವುದನ್ನು ಮಾತ್ರ ನಂಬುವುದಿಲ್ಲ. ಆತನೂ ಒಬ್ಬ ಮನುಷ್ಯ'–ಎನ್ನುವುದಾದರೆ ಅದು 'ಅರ್ಧ ಜರತೀ ನ್ಯಾಯ'ದಂತೆ ಹಾಸ್ಯಾಸ್ಪದವಾಗುತ್ತದೆ. ಆದರೂ ತಾತ್ಕಾಲಿಕವಾಗಿ ಈ ಅಭಿಪ್ರಾಯವನ್ನು ಒಪ್ಪಿಕೊಂಡೇ ಮುಂದುವರಿಯೋಣ. ಗೋಪಾಲಬಾಲ ಶ್ರೀಕೃಷ್ಣನು ಈ ಲೀಲೆಯನ್ನು ಎಸಗಿದಾಗ ಆತನ ವಯಸ್ಸು **ಎಂಟು–ಒಂಭತ್ತು ವರ್ಷಗಳಿಗಿಂತ** ಹೆಚ್ಚಿಲ್ಲ. ಆತನು ಗೋಕುಲದಲ್ಲಿ ಇದ್ದುದು ತನ್ನ ಹನ್ನೊಂದನೇ ವಯಸ್ಸಿನವರೆಗೆ ಮಾತ್ರ. ಆತನ ರಾಸಲೀಲಾ ಪ್ರಸಂಗವು ಹತ್ತನೆಯ ವರ್ಷದಲ್ಲಿ ನಡೆಯಿತು–ಎಂದಿಟ್ಟುಕೊಂಡರೆ ಈ ವಸ್ತ್ರಾಪಹರಣ ಲೀಲೆಯು ನಡೆದುದು ಅದಕ್ಕೂ ಹಿಂದೆ ಎಂಟನೆಯ ಅಥವಾ ಒಂಭತ್ತನೆಯ ವಯಸ್ಸಿನಲ್ಲಿಯೇ. ಈ ಸಣ್ಣ ವಯಸ್ಸಿನ ಬಾಲಕನಲ್ಲಿ ದುಷ್ಟವಾದ ಇಂದ್ರಿಯಕಾಮವನ್ನು ಕೆರಳಿಸುವ ಮನಸ್ಸು ಇರಲು ಸಾಧ್ಯವೇ? ಗೋಪಾಲಬಾಲಿಕೆಯರು ಆತನಿಗಿಂತ ಕಡಿಮೆ ವಯಸ್ಸಿನವರು ಅಥವಾ ಆತನ ಸಮಾನವಯಸ್ಸಿನವರಾಗಿದ್ದರು. ಅವರಲ್ಲಿಯೂ ಇಂದ್ರಿಯಕಾಮದ ರಸವು ಇದ್ದಿತೆಂದು ಊಹಿಸಲು ಸಾಧ್ಯವಿಲ್ಲ. ಹೀಗೆ ಆ ರಸವೇ ಇಲ್ಲದ ಚಿಕ್ಕ ವಯಸ್ಸಿನ ಹುಡುಗಿಯರು ಆ ರಸಕ್ಕೆ ಆಲಂಬನವಾಗಲು ಸಾಧ್ಯವಿಲ್ಲದ ಬಾಲಕನಲ್ಲಿ ಆ ರಸವನ್ನು ಅಪೇಕ್ಷಿಸಿ ಅದಕ್ಕಾಗಿ ಕಾತ್ಯಾಯಿನೀದೇವಿಯ ವ್ರತ

ವನ್ನು ಆಚರಿಸಿದರೆಂದು ಅನುಮಾನಪಡುವುದೇಕೆ? ಕಾಲ ಮತ್ತು ಅಕಾಲ ಗಳಲ್ಲಿ ಇಂದ್ರಿಯಗಳನ್ನು ದುಷ್ಟವೃತ್ತಿಯಲ್ಲಿ ತೊಡಗಿಸುವಂತಹ ಕೊಳಕು ಚಿತ್ರಗಳ ಸಾಹಿತ್ಯವನ್ನು ಪ್ರಚಾರಮಾಧ್ಯಮಗಳ ಮೂಲಕ ಹರಡುತ್ತಿರುವ ಸಮಾಜದಲ್ಲಿ ನಾವು ವಾಸಮಾಡುತ್ತಿದ್ದೇವೆ. ನಮ್ಮ ಕಾಲದ ಈ ಸಾಮಾಜಿಕವಾದ ಕಾಲುಷ್ಯವನ್ನು ಒಳ್ಳೆಯ ಕಾಲದಲ್ಲಿದ್ದ ಮುಗ್ಧರಾದ ಆ ಗೋಪಬಾಲಿಕೆಯರಲ್ಲಿ ಏಕೆ ಆರೋಪಿಸಬೇಕು? ಕಾಮವಾಸನೆಯು ಆ ಗೋಪಾಲಬಾಲಕನಲ್ಲೂ ಇರಲಿಕ್ಕಿಲ್ಲ. ಬಾಲಿಕೆಯರಲ್ಲೂ ಇರಲಿಕ್ಕಿಲ್ಲ. ಬಾಲಿಕೆಯರು ಒಳ್ಳೆಯ ಪತಿಯು ತಮಗೆ ದೊರೆಯಲೆಂದು ವ್ರತವನ್ನು ಆಚರಿಸಿದುದು ಬಾಲ್ಯಸಹಜವಾಗಿದೆ. ದುಷ್ಟವಾದ ಕಾಮದ ರಸವೇ ಶ್ರೀಕೃಷ್ಣ ನಲ್ಲೂ ಗೋಪಬಾಲಿಕೆಯರಲ್ಲೂ ಇದ್ದಿದ್ದರೆ ಶ್ರೀಕೃಷ್ಣನು ಆ ಸಮಯದಲ್ಲಿ ಅವರಿಗೆ 'ವರುಣದೇವರಿಗೆ ಅಪಚಾರ ಮಾಡಬಾರದು'–ಎಂದು ತಿಳಿವಳಿಕೆ ನೀಡಿ ಅವರಿಗೆ ವಸ್ತ್ರಗಳನ್ನು ಹಿಂದಿರುಗಿಸುತ್ತಿದ್ದನೇಕೆ–ಎಂಬುದನ್ನು ವಿಚಾರ ಮಾಡಬೇಡವೇ? ಶ್ರೀಕೃಷ್ಣನು ಈ ಪ್ರಕರಣದಲ್ಲಿ ಲೋಕಮರ್ಯಾದೆ ಮತ್ತು ಶಾಸ್ತ್ರಮರ್ಯಾದೆ–ಎರಡನ್ನೂ ಕಾಪಾಡಿದ್ದಾನೆ–ಎಂಬುದನ್ನು ಗಮನಿಸಬೇಕು. ಲೋಕಮರ್ಯಾದೆಯನ್ನೂ ಮತ್ತು ಶಾಸ್ತ್ರಮರ್ಯಾದೆ ಯನ್ನೂ ಗೌರವಿಸುವುದಕ್ಕಾಗಿ ಆತನು ಅವರಿಗೆ ಒಡನೆಯೇ ಅವರವರ ವಸ್ತ್ರಗಳನ್ನು ಹಿಂದಿರುಗಿಸಿದ್ದಾನೆ ಮತ್ತು ನಗ್ನರಾಗಿ ನೀರಿನಲ್ಲಿ ಯಾವಾಗಲೂ ಸ್ನಾನಮಾಡ ಬಾರದು ಮತ್ತು ವ್ರತದ ಅಂಗವಾದ ಸ್ನಾನದಲ್ಲಿ ಹಾಗೆ ಸ್ನಾನಮಾಡು ವುದಂತೂ ಅತ್ಯಂತನಿಷಿದ್ಧ ('ನ ವಿವಸನಃ ಸ್ನಾಯಾತ್')–ಎಂಬ ತಿಳಿವಳಿಕೆಯನ್ನು ಅವರಿಗೆ ನೀಡಿ ಶಾಸ್ತ್ರದ ಕಟ್ಟಳೆಯನ್ನೂ ಮಾನ್ಯಮಾಡಿದ್ದಾನೆ.

'ಗೋಪಬಾಲಿಕೆಯರಿಗೆ ಮೇಲ್ಕಂಡ ವಿಷಯದ ಬಗೆಗೆ ತಿಳಿವಳಿಕೆ ನೀಡಲು ಇದೇ ಸಮಯವೇ? ಇದೇ ವಿಧಾನವೇ?' ಎಂದರೆ ಇದರಲ್ಲಿ ಗೋಪಬಾಲಕನ ಪರಿಹಾಸ್ಯದ ಅಂಶವೂ ಸೇರಿದೆಯೆಂಬುದನ್ನು ಗಮನಿಸ ಬೇಕು. ಅಂತೂ ಇದರಲ್ಲಿ ದುಷ್ಟವಾಸನೆಯ ಅಂಶದ ಲವಲೇಶವೂ ಕಂಡು ಬರುವುದಿಲ್ಲ. ಇದು ಆ ಪ್ರಸಂಗದಲ್ಲಿ ಸಂಗತವಾಗುವ ವಿಷಯವೇ ಹೊರತು

'ಬಾಲಕರು ಆಚರಿಸಬೇಕಾದ ಆದರ್ಶವ್ಯವಹಾರ' ಎಂಬ ಉಪದೇಶವು ಶ್ರೀಮದ್ಭಾಗವತದಲ್ಲಿ ಕಂಡುಬರುವುದಿಲ್ಲ.

ಶ್ರೀಕೃಷ್ಣನು ಮನುಷ್ಯಮಾತ್ರದವನು–ಎಂಬ ದೃಷ್ಟಿಯಿಂದ ಬಂದಿ ರುವ ಆಕ್ಷೇಪಣೆಗೆ ಮೇಲೆ ಸಮಾಧಾನವನ್ನು ಹೇಳಿಯಾಯಿತು. ಆದರೆ ವಾಸ್ತವವಾಗಿ ಆತನು ನಿರ್ವಿಕಾರನಾದ ಪರಮಾತ್ಮ–ಎಂಬುದನ್ನು ಶ್ರೀಮದ್ಭಾಗವತದಲ್ಲಿ ಮೊದಲಿನಿಂದ ಕೊನೆಯವರೆಗೂ ಸಾರಲಾಗಿದೆ. ಆತನು ಭಗವಂತ ಎನ್ನುವ ವಿಷಯ ಗೋಪಬಾಲಿಕೆಯರಿಗೂ ತಿಳಿದಿತ್ತು. ಅವರು ಹಾಡುವ 'ಗೋಪಿಕಾಗೀತೆ'ಯಲ್ಲಿ ಇದು ಅತ್ಯಂತಸ್ಪಷ್ಟವಾಗಿದೆ. 'ನೀನು ಯಶೋದೆಯ ಪುತ್ರನಾದ ಗೋಪಬಾಲಕನಲ್ಲ. ಮತ್ತೆ ಯಾರು?' ಎಂದರೆ ಎಲ್ಲ ಜೀವಿಗಳ ಹೃದಯದಲ್ಲಿ ಸಾಕ್ಷಿಯಾಗಿರುವ ಪರಮಾತ್ಮ. ಲಕ್ಷ್ಮೀಪತಿಯಾದ ನಾರಾಯಣ. ಬ್ರಹ್ಮದೇವರ ಪ್ರಾರ್ಥನೆಯಂತೆ ಲೋಕ ರಕ್ಷಣೆಗಾಗಿ ಯದುವಂಶದಲ್ಲಿ ಅವತಾರ ಮಾಡಿರುವ ಭಗವಂತ. '**ನ ಖಲು ಗೋಪಿಕಾನಂದನೋ ಭವಾನ್ । ಅಖಿಲದೇಹಿನಾಮನ್ತರಾತ್ಮದೃಕ್ । ವಿಖನಸಾರ್ಥಿತೋ ವಿಶ್ವಗುಪ್ತಯೇ । ಸಖ ಉದೇಯಿವಾನ್ ಸಾತ್ವತಾಂ ಕುಲೇ । ಶ್ರಯತ ಇಂದಿರಾ ಶಶ್ವದತ್ರಹಿ**'–ಎಂದು ಅವರು ಶ್ರೀಕೃಷ್ಣನ ವಿಷಯದಲ್ಲಿ ಉದ್ಘೋಷಿಸುತ್ತಾರೆ. ಈ ಸತ್ಯಾಂಶವನ್ನು ಅವರು ಕೆಲ ವೊಮ್ಮೆ ಸ್ಮರಿಸುತ್ತಾರೆ. ಕೆಲವೊಮ್ಮೆ ಮರೆಯುತ್ತಾರೆ. ಕೆಲವೊಮ್ಮೆ ಸಿತಾಸಿತವಾಗಿ ಹೇಳುತ್ತಾರೆ. ಭಗವಂತನು ಈ ಚೀರಹರಣಲೀಲೆಯ ಮೂಲಕ ತಾನೂ ಭಗವಂತ ಎಂಬ ಆ ಸತ್ಯಾಂಶವು ಅವರಲ್ಲಿ ನೆಲೆಸುವಂತೆ ಮಾಡುತ್ತಾನೆ.

ಗೋಪಬಾಲೆಯರು ಶ್ರೀಕೃಷ್ಣಪರಮಾತ್ಮನಿಗಾಗಿ ಉಳಿದ ಎಲ್ಲವನ್ನೂ ಮರೆತಿದ್ದರು. ಆದರೆ ಸಂಸ್ಕಾರಶೇಷದಿಂದ ತಮ್ಮ ದೇಹಭಾವವನ್ನು ಮರೆತಿರಲಿಲ್ಲ. ದೇಹದ ಕೆಲವು ಭಾಗಗಳನ್ನು ನದಿಯ ನೀರಿನಲ್ಲಿ ಇರಿಸಿ ಕೊಂಡಾಗಲೀ, ಕೈಗಳಿಂದ ಮುಚ್ಚಿಕೊಂಡಾಗಲೀ ಶ್ರೀಕೃಷ್ಣನಿಂದ ಮರೆ ಮಾಡಲು ಸಾಧ್ಯ–ಎಂಬ ಅಜ್ಞಾನದ ಆವರಣ ಅವರಲ್ಲಿತ್ತು. ಅವರು ನೀರಿ ನಿಂದ ಮೇಲಕ್ಕೆ ಬಂದು ಕೈಜೋಡಿಸಿ ನಮಸ್ಕರಿಸುವಂತೆ ಮಾಡಿದ ಭಗವಂತನು ಅವರ ಆ ಆವರಣವನ್ನು ಕಳೆದುಹಾಕಿ ಅವರು ಸಂಪೂರ್ಣ

ಭಗವದ್ಭಾವದಲ್ಲಿದ್ದು ಶರಣಾಗತರಾಗುವಂತೆ ಮಾಡಿದ. ಅವರಿಗೆ ಸಮಾಧಿಯ ಶುದ್ಧಭಾವವು ಬರುವಂತೆ ಮಾಡಿದ. ಸಮಾಧಿಯ ಸ್ಥಿತಿಯಲ್ಲಿ ಭಯ, ಲಜ್ಜೆ ಮುಂತಾದ ಯಾವ ಪಾಶವೂ ಇರುವುದಿಲ್ಲವೆಂದು ಯೋಗಿಗಳು ಹೇಳುತ್ತಾರೆ. ಇಂದ್ರಿಯಪ್ರಪಂಚದಲ್ಲೇ ರಮಿಸುವ ಪಶುಜೀವಿಗಳಿಗೆ ಇದನ್ನು ಊಹಿಸಲೂ ಸಾಧ್ಯವಾಗುವುದಿಲ್ಲ. ಅವರು ಅದರ ಬಗೆಗೆ ಕುಚೋದ್ಯಮಾಡದೆ ಮೌನವಾಗಿರುವುದು ವಿವೇಕ. ಶ್ರದ್ಧೆ ಇರುವವರು ಸಾಧನೆಮಾಡಿ ಆ ಸ್ಥಿತಿಯನ್ನು ಪಡೆದು ಅದರ ಸತ್ಯಾಂಶವನ್ನು ಅನುಭವಿಸಬಹುದು. 'ಶ್ರೀಕೃಷ್ಣನು ಸರ್ವವ್ಯಾಪಕನೂ ಸರ್ವಸಾಕ್ಷಿಯೂ ಆಗಿರುವ ಭಗವಂತ. ಆತನು ಗೋಪಿಯರು ಅಡಗಿಕೊಂಡಿದ್ದ ನದಿಯ ನೀರಿನಲ್ಲೂ ಇದ್ದಾನೆ. ಅವರ ದೇಹದ ಒಳಗೂ-ಹೊರಗೂ ತುಂಬಿಕೊಂಡಿದ್ದಾನೆ. ಆತನಿಗೆ ಯಾವುದೂ ಗೋಪ್ಯವಲ್ಲ'–ಎಂಬ ಸತ್ಯಾಂಶವು ಈ ಘಟನೆಯಿಂದ ಗೋಪಿಯರಿಗೆ ಮನವರಿಕೆಯಾಯಿತು. ಅವರು ಯಾವ ಉದ್ದೇಶದಿಂದ ವ್ರತವನ್ನು ಮಾಡುತ್ತಿದ್ದರು?–ಎಂಬುದನ್ನೂ ತಿಳಿದಿದ್ದ ಆ ಅಂತರ್ಯಾಮಿಯು ಅವರ ಇಷ್ಟಾರ್ಥವನ್ನು ಸಕಾಲದಲ್ಲಿ ಈಡೇರಿಸುವುದಾಗಿ ಅಭಯ ಪ್ರದಾನಮಾಡಿ ಅವರಿಗೆ ಸಮಾಧಾನವನ್ನುಂಟುಮಾಡಿದ. ಗೋಪಬಾಲೆಯರಿಗೆ ಅವನಲ್ಲಿದ್ದ ಭಾವವು ಅತ್ಯಂತ ಶುದ್ಧವಾಗಿತ್ತು. ಅದರಲ್ಲಿ ದುಷ್ಟ ಕಾಮದ ವಿಕಾರವು ಇರಲಿಲ್ಲ. ಆ ಪ್ರಕರಣದಲ್ಲಿ ಶ್ರೀಮದ್ಭಾಗವತವು ಬಳಸುವ 'ಕಾಮ, ರತಿ' ಮುಂತಾದ ಪದಗಳು 'ಆತ್ಮಕ್ರಾಮ' 'ಆತ್ಮಕ್ರೀಡೆ' 'ಆತ್ಮರತಿ' ಎಂದು ಉಪನಿಷತ್ತುಗಳು ಸಾರುವ ಶುದ್ಧವಾದ ಭಗವದ್ಭಾವನೆಯೇ ಆಗಿತ್ತು–ಎಂಬುದನ್ನು 'ಶುದ್ಧಭಾವಪ್ರಸಾದಿತಃ' ಎಂಬ ಶ್ರೀಮದ್ಭಾಗವತದ ಹೇಳಿಕೆಯು ಸ್ಪಷ್ಟಪಡಿಸುತ್ತದೆ.

ಶ್ರೀಕೃಷ್ಣನು ಗೋಪಬಾಲೆಯರ ವಸ್ತ್ರಗಳನ್ನು ತಾನು ಮುಟ್ಟಿ ಅನಂತರ ಅವರಿಗೆ ಹಿಂದಿರುಗಿಸಿದ್ದರಲ್ಲಿ ಭಕ್ತರಿಗೆ ಆಪ್ಯಾಯಮಾನವಾಗಿರುವ ಮತ್ತೊಂದು ಆಶಯವಿದೆ. ಅದು ಏನೆಂದರೆ : ಈ ಹಿಂದೆ ಗೋಪಬಾಲೆ ಯರು ಧರಿಸುತ್ತಿದ್ದ ವಸ್ತ್ರಗಳು ಕೇವಲ ಭೌತಿಕದ್ರವ್ಯಗಳಾಗಿದ್ದುವು. ಭಗವಂತನು ಅವುಗಳನ್ನು ಮುಟ್ಟಿ ಹಿಂದಿರುಗಿಸಿದ ಬಳಿಕ ಅವು 'ಮಹಾಪ್ರಸಾದ-ಶೇಷವಸ್ತ್ರ' ಎಂದು ಕರೆಯಲ್ಪಡುವ ಪವಿತ್ರದ್ರವ್ಯಗಳಾದುವು.

ಹೀಗೆ ಆಳವಾಗಿ ವಿಚಾರಮಾಡಿ ನೋಡಿದಾಗ ಭಗವಂತನಾದ ಶ್ರೀಕೃಷ್ಣನು ಮಾಡಿದ ಈ ಚೀರಹರಣವು ಒಂದು ದಿವ್ಯವಾದ ಲೀಲೆ. ಭಕ್ತರ ಅಜ್ಞಾನದ ಮುಸುಕನ್ನು ಕಳೆದುಹಾಕಿ ಅವರಿಗೆ ಶಾಸ್ತ್ರಮರ್ಯಾದೆಯನ್ನೂ ಲೋಕಮರ್ಯಾದೆಯನ್ನೂ ಉಪದೇಶಿಸುವ, ಅವರಿಗೆ ಮಹಾಪ್ರಸಾದವನ್ನು ಕರುಣಿಸುವ, ಅವರ ಇಷ್ಟಾರ್ಥವನ್ನು ಈಡೇರಿಸುವ ಮತ್ತು ಅಭಯಪ್ರದಾನಮಾಡುವ ದಿವ್ಯವಾದ ಯೋಜನೆ ಅದು. ಇತರರಿಗೆ ಅನುಕರಣೀಯವಾದ ತುಂಟತನದ ಆಟವಲ್ಲ–ಎಂಬುದು ನಮಗೆ ಮನವರಿಕೆಯಾಗುತ್ತದೆ.

2) ರಾಸಲೀಲೆ

ಭಗವಂತನಾದ ಶ್ರೀಕೃಷ್ಣನು ಗೋಪಬಾಲಿಕೆಯರೊಡನೆ ನಡೆಸಿದ ಈ ರಾಸಲೀಲಾಪ್ರಸಂಗವು ಶ್ರೀಮದ್ಭಾಗವತದ **'ರಾಸಪಂಚಾಧ್ಯಾಯೀ'** ಎಂದು ಕರೆಯಲ್ಪಡುವ ಐದು ಅಧ್ಯಾಯಗಳಲ್ಲಿ ಚಿತ್ರಿತವಾಗಿದೆ. ಈ ಐದು ಅಧ್ಯಾಯಗಳನ್ನು ಶ್ರೀಮದ್ಭಾಗವತದ ಪಂಚಪ್ರಾಣಗಳು–ಎಂದು ಕರೆಯುವುದುಂಟು. ಭೌತಿಕವಿಷಯಗಳಲ್ಲಿ ವಿರಕ್ತರಾಗಿ ಪರಮಾತ್ಮನಲ್ಲಿ ಮಾತ್ರ ಅನುರಕ್ತರಾಗಿರುವ ಭಕ್ತಿ-ಜ್ಞಾನ-ವೈರಾಗ್ಯನಿಧಿಗಳಾದ ಅನೇಕ ಮಹಾತ್ಮರು ಈ ರಾಸಲೀಲಾಪ್ರಸಂಗವನ್ನು ತಮ್ಮ ಅನುಭವವಾಣಿಯಿಂದಲೂ, ಶಾಸ್ತ್ರವ್ಯಾಖ್ಯಾನಗಳಿಂದಲೂ ಹಾಡಿ ಹೊಗಳಿದ್ದಾರೆ. ಆದರೆ ಈ ಹಿಂದೆ ವಿಚಾರಮಾಡಿದ ಚೀರಹರಣಪ್ರಸಂಗದಂತೆಯೇ ಈ ರಾಸಲೀಲಾಪ್ರಸಂಗವೂ ವಿವಾದಕ್ಕೆ ವಿಷಯವಾಗಿರುವುದರಿಂದ ಇದನ್ನು ಕುರಿತಾಗಿಯೂ ಇಲ್ಲಿ ಸಂಕ್ಷೇಪವಾಗಿ ವಿವೇಚನೆಮಾಡಿದೆ. ಶ್ರೀಮದ್ಭಾಗವತದಲ್ಲಿಯೂ ಪರೀಕ್ಷಿದ್ರಾಜನು ಈ ಬಗೆಗೆ ತನಗೆ ಉಂಟಾದ ಸಂಶಯವನ್ನು ಶ್ರೀಶುಕಮುನಿಗಳಲ್ಲಿ ನಿವೇದನೆ ಮಾಡಿ ಅವರು ಅನುಗ್ರಹಿಸಿದ ಉತ್ತರದಿಂದ ಸಮಾಧಾನ ಪಡೆಯುತ್ತಾನೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳುತ್ತೇವೆ.*

---

* ಸಂಸ್ಥಾಪನಾಯ ಧರ್ಮಸ್ಯ ಪ್ರಶಮಾಯೇತರಸ್ಯ ಚ ।
ಅವತೀರ್ಣೋ ಹಿ ಭಗವಾನಂಶೇನ ಜಗದೀಶ್ವರಃ ॥
ಸ ಕಥಂ ಧರ್ಮಸೇತೂನಾಂ ವಕ್ತಾ ಕರ್ತಾಭಿರಕ್ಷಿತಾ ।

ಆ ರಾಸಲೀಲಾಪ್ರಸಂಗವನ್ನು ಹೀಗೆ ಸಂಕ್ಷೇಪಿಸಬಹುದು : "ಭಗವಂತನಾದ ಶ್ರೀಕೃಷ್ಣನು ಕುಸುಮಗಳು ಅರಳಿ ಘಮಘಮಿಸುತ್ತಿದ್ದ, ಸುಂದರವಾದ ಬೆಳದಿಂಗಳು ಕಂಗೊಳಿಸುತ್ತಿದ್ದ, ಶರತ್ಕಾಲದ ನಿರ್ದಿಷ್ಟವಾದ ರಾತ್ರಿಗಳಲ್ಲಿ ಯಮುನಾತೀರದಲ್ಲಿ ತನ್ನ ಯೋಗಮಾಯೆಯನ್ನು ಹರಡಿ ಗೋಪಿಯರೊಡನೆ ರಮಿಸಲು ಬಯಸಿದನು. ತನ್ನ ಕೊಳಲನ್ನು ಬಾರಿಸುತ್ತಾ ಅದರ ಇಂಚರದಿಂದ ಗೋಪಿಯರ ಮನಸ್ಸನ್ನು ಸೆಳೆದು ಅವರು ತಮ್ಮ ಪತಿ ಶುಶ್ರೂಷೆ, ಪುತ್ರರ ಲಾಲನೆ ಮುಂತಾದ ಕರ್ತವ್ಯಗಳನ್ನೂ ತೊರೆದು ತನ್ನ ಬಳಿಗೆ ಬರುವಂತೆ ಮಾಡಿದನು. ಅವರೊಡನೆ ಮೋಹಕವಾದ ಮಾತುಗಳನ್ನು ಆಡಿ ಆ ಭುವನಮೋಹನನು ಅಂಗ-ಸಂಗಾದಿ ಸಹಿತ ಅವರೊಡನೆ ರಾಸಕ್ರೀಡೆಯನ್ನಾಡಿದನು. ಅವರ ಸೌಂದರ್ಯದ ಅಭಿಮಾನವನ್ನು ಮುರಿಯಲು ಧಿಡೀರನೆ ಮಾಯವಾಗಿ ಅವರು ವಿರಹಗೀತೆಯನ್ನು ಹಾಡುವಂತೆ ಮಾಡಿದನು. ಮತ್ತೆ ಅವರ ಮುಂದೆ ಕಾಣಿಸಿಕೊಂಡು ಅವರೊಡನೆ ರಮಿಸಿ, ಇಷ್ಟವಿಲ್ಲದ ಮನಸ್ಸುಳ್ಳ ಅವರನ್ನು ಅವರವರ ಮನೆಗಳಿಗೆ ಕಳುಹಿಸಿಬಿಟ್ಟನು"–ಎಂಬುದು ಕಥೆಯ ಸಾರ.

ಇದನ್ನು ಗಮನಿಸಿದಾಗ ಜನರಲ್ಲಿ ಹೀಗೆ ಆಕ್ಷೇಪ ಏಳುತ್ತದೆ :

"ಶ್ರೀಕೃಷ್ಣನು ಮಾಡಿದ ಈ ರಾಸಕ್ರೀಡಾವ್ಯಾಪಾರವು ಅನೀತಿಯ ಪರಮಾವಧಿ. ಈ ಹಿಂದೆ ಮಾಡಿದ ಚೀರಹರಣಕ್ಕಿಂತಲೂ ಜುಗುಪ್ಸಿತವಾದ ಕಾರ್ಯ. ಲೋಕನೀತಿ ಮತ್ತು ಧರ್ಮನೀತಿ ಎರಡು ದೃಷ್ಟಿಗಳಿಂದಲೂ ನಿಂದ್ಯವಾದ ಕೆಲಸ. ಇಲ್ಲಿ ಈ ಕೆಲಸವನ್ನು ಮಾಡಿದವನು ಮನುಷ್ಯನೋ ಅಥವಾ ದೇವರೋ? ಎಂದು ಕೇಳುತ್ತೇವೆ. ಮನುಷ್ಯನು ಎಂದು ಉತ್ತರ ನೀಡಿದರೆ ಇದು ಅತ್ಯಂತಹೇಯವಾದಕಾರ್ಯ ; ಪಶುಧರ್ಮದಿಂದ ಪ್ರೇರಿತವಾದ ಕಾರ್ಯ–ಎಂಬುದರಲ್ಲಿ ಸಂದೇಹವಿಲ್ಲ. ಇನ್ನು 'ಅವನು ಮನುಷ್ಯನಲ್ಲ ; ಸಾಕ್ಷಾತ್ ಪರಮಾತ್ಮನ ಅವತಾರ'–ಎಂದು ಭಾವಿಸಿದರೆ

ಪ್ರತೀಪಮಾಚರದ್ಬ್ರಹ್ಮನ್ ಪರದಾರಾಭಿಮರ್ಶನಮ್ ।
ಆಪ್ತಕಾಮೋ ಯದುಪತಿಃ ಕೃತವಾನ್ವೈ ಜುಗುಪ್ಸಿತಮ್ ।
ಕಿಮಭಿಪ್ರಾಯ ಏತನ್ನಃ ಸಂಶಯಂ ಛಿನ್ಧಿ ಸುವ್ರತ ॥

ಎಂಬುದು ರಾಜನ ಪ್ರಶ್ನೆ. (X 33-27-29)

ಅದು ಮೇಲಿನದಕ್ಕಿಂತಲೂ ದೊಡ್ಡ ಅನ್ಯಾಯ–ಅಧರ್ಮವಾಗುತ್ತದೆ. ಏಕೆಂದರೆ : ಭಗವಂತನು ಅವತಾರಮಾಡುವುದು ಧರ್ಮಸೇತುವನ್ನು ಸಂರಕ್ಷಿಸುವುದಕ್ಕಾಗಿ. ಹೀಗಿರುವಾಗ ಆತನೇ ಪರಸ್ತ್ರೀಗಮನರೂಪವಾದ ಅಧರ್ಮವನ್ನು ಆಚರಿಸಿದರೆ ಅದರಿಂದ ಧರ್ಮಮರ್ಯಾದೆಯ ರಕ್ಷಣೆಯಾಗುವುದರ ಬದಲು ಅದರ ಭಂಜನೆಯೇ ಆಗುತ್ತದೆ. ಲೋಕದ ಜನರಿಗೂ ಕೆಟ್ಟ ಆದರ್ಶವಾಗುತ್ತದೆ. ಆದುದರಿಂದ ಶ್ರೀಕೃಷ್ಣನ ಈ ರಾಸಕ್ರೀಡೆಯು ಹೇಗೂ ಸಮರ್ಥನೀಯವಲ್ಲ. ಈ ರೀತಿಯಲ್ಲಿ ರಾಸಕ್ರೀಡೆಯನ್ನಾಡಿದ ಪುರುಷ ಮತ್ತು ಅದರಲ್ಲಿ ಭಾಗವಹಿಸಿದ ಸ್ತ್ರೀಯರು–ಇಬ್ಬರೂ ಪತಿತರಾದರು"–ಎಂದು ಅನ್ನಿಸುವುದು ಸಹಜವಾಗಿದೆ.

ಈ ಆಕ್ಷೇಪಣೆಯು ಮೇಲುನೋಟಕ್ಕೆ ಸರಿಯಾಗಿ ಕಂಡುಬಂದರೂ ರಾಸಕ್ರೀಡೆಯಲ್ಲಿ ಪಾಲ್ಗೊಂಡವರ ಯೋಗ್ಯತೆ ಮತ್ತು ಸನ್ನಿವೇಶಗಳನ್ನು ಆಳವಾಗಿ ವಿಮರ್ಶಿಸಿದಾಗ ಅದು ಕುಸಿದುಬೀಳುತ್ತದೆ. ಇಲ್ಲಿಯೂ ರಾಸಕ್ರೀಡೆಗೆ ಆಕರ್ಷಣೆನೀಡಿ ಗೋಪಿಯರೊಡನೆ ರಮಿಸಿದ ಶ್ರೀಕೃಷ್ಣನು ಮನುಷ್ಯನೋ ಅಥವಾ ಅವತಾರಮಾಡಿದ್ದ ದೇವರೋ ಎಂದು ವಿಶ್ಲೇಷಣೆ ಮಾಡಿ ವಿಷಯವನ್ನು ವಿವೇಚನೆ ಮಾಡೋಣ.

ಆತನು ಮನುಷ್ಯ ಎಂದು ಭಾವಿಸುವುದಾದರೆ ರಾಸಕ್ರೀಡಾಸಮಯದಲ್ಲಿ ಆತನ ವಯಸ್ಸು ಎಷ್ಟಾಗಿತ್ತು? ಎಂಬುದನ್ನು ನೋಡಬೇಕಾಗುತ್ತದೆ. ಶ್ರೀಮದ್ಭಾಗವತದ ಪ್ರಕಾರ ಆಗ ಆತನ ವಯಸ್ಸು ಹತ್ತುವರ್ಷಗಳಿಗಿಂತಲೂ ಹೆಚ್ಚು ಆಗಿರಲು ಸಾಧ್ಯವಿಲ್ಲ. ಆ ಸಮಯದಲ್ಲಿ ಆತನು ಗೋಪಬಾಲಕಿಯರೊಡನೆ ಆಡಿದ ಆಟವು ವಿನೋದದ ಕ್ರೀಡೆಯಾಗುವುದೇ ಹೊರತು ಕಾಮಕೇಳಿಯಾಗುವುದಿಲ್ಲ. ಗೋಪಾಲ ಬಾಲಕ-ಬಾಲಕಿಯರು ವಿನೋದಕ್ಕಾಗಿ, ಮನರಂಜನೆಗಾಗಿ ಆಡುವ ಈ ಕ್ರೀಡೆಯನ್ನು 'ಹಲ್ಲೀಸಕ' ಎಂದು ಕರೆಯುತ್ತಾರೆ. ಇದರಲ್ಲಿ ಕಾಮಪ್ರವೃತ್ತಿ, ಬ್ರಹ್ಮಚರ್ಯಭಂಗ, ಶೀಲಭಂಗ, ಲೋಕಮರ್ಯಾದೆಯ ಭಂಗ, ಧರ್ಮಮರ್ಯಾದೆಯ ಭಂಗ–ಇತ್ಯಾದಿ ಪ್ರಶ್ನೆಗಳೇ ಏಳುವುದಿಲ್ಲ.

ಹೀಗಲ್ಲದೆ ಶ್ರೀಕೃಷ್ಣನು ಭಗವಂತನ ಅವತಾರ–ಎಂದು ಭಾವಿಸಿದಾಗಲೂ ಅವತಾರದಶೆಯಲ್ಲಿ ಈ ರಾಸಕ್ರೀಡೆಯನ್ನು ಆಡಿದಾಗ ಆತನು

ಸುಮಾರು ಹತ್ತು ವರ್ಷದ ಬಾಲಕನಾಗಿದ್ದ ಕಾರಣ ಅದರಲ್ಲಿ ಧರ್ಮಚ್ಯುತಿಯನ್ನು ಉಂಟುಮಾಡುವ ಮತ್ತು ಲೋಕಕ್ಕೆ ಅನಾದರ್ಶವಾದ ಧರ್ಮವು ಏನೂ ಕಂಡುಬರುವುದಿಲ್ಲ. ಏಕೆಂದರೆ : ಅದರಲ್ಲಿ ಇಂದ್ರಿಯಸಂಬಂಧವಾದ ಕಾಮದ ವ್ಯಾಪಾರ ಇರುವುದಿಲ್ಲ.

ಆದರೆ ಶ್ರೀಮದ್ಭಾಗವತದಲ್ಲಿ ಈ ಸಂದರ್ಭದಲ್ಲಿ ಸುರತ, ಹೃಚ್ಛಯ (ಕಾಮ), ಪರಸ್ತ್ರೀಗಮನ ಮುಂತಾದ ಪದಗಳನ್ನು ಬಳಸಿರುವುದು ಸಮಸ್ಯೆಗೆ ಎಡೆಯಾಗಿದೆ.

'ಸುರತವರ್ಧನಂ ಶೋಕನಾಶನಂ' 'ರಹಸಿ ಸಂವಿದಂ ಹೃಚ್ಛಯೋದಯಂ' (X 31/14, 17)

ಪ್ರತೀಪಮಾಚರದ್ಬ್ರಹ್ಮನ್ ಪರದಾರಾಭಿಮರ್ಶನಮ್'

(X 33/28)

'ಶ್ರೀಕೃಷ್ಣನಲ್ಲಿ ಗೋಪಿಕಾಸ್ತ್ರೀಯರಿಗೂ ಗೋಪಿಕಾಸ್ತ್ರೀಯರಲ್ಲಿ ಶ್ರೀಕೃಷ್ಣನಿಗೂ ಇದ್ದುದು ಬಾಲ-ಬಾಲಕಿಯರ ಪ್ರೇಮಭಾವವಲ್ಲ, ಪ್ರೌಢರಲ್ಲಿ ಇರುವ ಇಂದ್ರಿಯಸಂಬಂಧವಾದ ಕಾಮವೇ ಆಗಿತ್ತು'–ಎಂಬ ಅಭಿಪ್ರಾಯವೇ ಈ ಪದಗಳಿಂದ ಸೂಚಿತವಾಗುತ್ತದೆ. ಇಂತಹ ಕಾಮವು ಪತಿ-ಪತ್ನಿಯರಲ್ಲಿ ಒಂದು ಪ್ರಮಾಣದಲ್ಲಿದ್ದರೆ, ಸಕಾಲಿಕವಾಗಿದ್ದರೆ ಅದು ಧರ್ಮವೇ ಆಗುತ್ತದೆ–ಎಂದು ಶ್ರೀಗೀತೆಯು ಹೇಳುತ್ತದೆ. **'ಧರ್ಮಾವಿರುದ್ಧೋ ಭೂತೇಷು ಕಾಮೋऽಸ್ಮಿ ಭರತರ್ಷಭ'** ಆದರೆ ಶ್ರೀಕೃಷ್ಣ-ಗೋಪಿಕಾಸ್ತ್ರೀಯರಲ್ಲಿ ಕಂಡುಬರುವುದು ಇಂತಹ ಶುದ್ಧವಾದ, ಧರ್ಮಾನುಕೂಲವಾದ ಕಾಮವಲ್ಲ. ಶ್ರೀಕೃಷ್ಣನು ರಮಿಸಿದ ಸ್ತ್ರೀಯರಲ್ಲಿ ಪರಸ್ತ್ರೀಯರೂ ಇದ್ದರು. ಚೀರಹರಣಪ್ರಸಂಗದಲ್ಲಿ ಹೇಳಲ್ಪಟ್ಟಿರುವ ಬಾಲಿಕೆಯರು ಮಾತ್ರ ವಲ್ಲದೆ ಕೆಲವು ಪರಸ್ತ್ರೀಯರೂ ಇದ್ದರು–ಎಂಬುದು ಶ್ರೀಮದ್ಭಾಗವತದಲ್ಲಿ ಪರೀಕ್ಷಿದ್ರಾಜನ ಪ್ರಶ್ನೆಯಲ್ಲಿ ಬಂದಿರುವ ಶ್ರೀಕೃಷ್ಣನ ರಾಸಕ್ರೀಡೆಯ ಸುರತ ವ್ಯಾಪಾರವೂ ನಿಸ್ಸಂಶಯವಾಗಿಯೂ ಅಧರ್ಮಿಷ್ಟವಾದುದು. ಅನಾದರ್ಶವಾದುದು–ಎಂಬುದಾಗಿಯೇ ಸಾಮಾನ್ಯದೃಷ್ಟಿಗೆ ತೋರಿಬರುತ್ತದೆ. ಈ ಸಂದರ್ಭದಲ್ಲಿ ವಿಕಾರರಹಿತರಾದ ಸಮಾಧಿನಿಷ್ಠರಾದ ಬ್ರಹ್ಮಜ್ಞಾನಿಗಳ

ಮಾರ್ಗದರ್ಶನದ ಸಹಾಯವನ್ನೂ ಪಡೆಯಬೇಕಾಗುತ್ತದೆ. ಏಕೆಂದರೆ : ಅವರು ನಿರ್ಲಿಪ್ತರು. ಪೂರ್ವಾಗ್ರಹವಿಲ್ಲದೆ ಲೋಕಕಲ್ಯಾಣಕರವಾದ ಸತ್ಯವನ್ನೇ ನುಡಿಯುವವರು.

ಶ್ರೀಕೃಷ್ಣನ ಈ ರಾಸಕ್ರೀಡೆಯನ್ನು ಭಕ್ತಶ್ರೇಷ್ಠನಾದ ಪರೀಕ್ಷಿದ್ರಾಜನಿಗೆ ಕೀರ್ತನೆಮಾಡುತ್ತಿರುವ ಶ್ರೀಶುಕಮಹರ್ಷಿಗಳು ಯೋಗಿಸಾರ್ವಭೌಮರು. ಸ್ತ್ರೀ-ಪುರುಷಲಿಂಗಭೇದದ ಅನುಭವವೇ ಇಲ್ಲದೇ ಇದ್ದ ಪರಬ್ರಹ್ಮಸಮಾಧಿಯಲ್ಲಿ ಸದಾನಿಷ್ಠೆಯನ್ನು ಹೊಂದಿದ್ದವರು.

ನಿಮೇಷಾರ್ಧಂ ನ ತಿಷ್ಠನ್ತಿ ವೃತ್ತಿಂ ಬ್ರಹ್ಮಮಯೀಂ ವಿನಾ |
ಬ್ರಹ್ಮಾದ್ಯಾ ನಾರದಾದ್ಯಾಶ್ಚ ಸನಕಾದ್ಯಾಃ ಶುಕಾದಯಃ ||

ಅಂತಹವರು ಭಕ್ತಿಯಿಂದ ಕೀರ್ತನೆಮಾಡುತ್ತಿರುವ ರಾಸಕ್ರೀಡಾ ವ್ಯಾಪಾರದಲ್ಲಿ ದುಷ್ಟವಾದ ಇಂದ್ರಿಯಕಾಮದ ಸೋಂಕಾದರೂ ಎಲ್ಲಿ ಬಂದೀತು? ರಾಸಕ್ರೀಡೆಯ ಹಿಂದಿನ ಅಧ್ಯಾಯಗಳಲ್ಲಿಯೂ "ಜ್ಞಾನಿಯ ಹೃದಯದಂತೆ ನಿರ್ಮಲವಾಗಿದ್ದ ಶರತ್ಕಾಲದ ಆಕಾಶ." "ಶೋಕಮೋಹಗಳಿಂದ ಕದಲದೇ ಇರುವ ಯೋಗಿಯಂತೆ ಕದಲದೇ ಇದ್ದ ಪರ್ವತಗಳು"– ಎಂದು ಮೊದಲಾಗಿ ಯೋಗಭೂಮಿಗೆ ಸಂಬಂಧಪಟ್ಟ ವರ್ಣನೆಯೇ ಕಂಡುಬರುತ್ತದೆ. ಆದುದರಿಂದ ರಾಸಕ್ರೀಡೆಯಲ್ಲಿ ವರ್ಣಿತವಾಗಿರುವ ಕಾಮ, ಸುರತ ಮುಂತಾದ ಪದಗಳು ಇಂದ್ರಿಯಾತೀತವೂ ಪರಿಶುದ್ಧತಮವೂ ಆದ ಆತ್ಮಕ್ರೀಡೆ-ಆತ್ಮರತಿಗಳೇ ಹೊರತು ಭೌತಿಕವಾದ ಕಾಮವಲ್ಲ. ಈ ಭಗವಂತನ ರಾಸಕ್ರೀಡೆಯನ್ನು ಭಕ್ತಿ-ಶ್ರದ್ಧೆಗಳಿಂದ ಅನುಸಂಧಾನಮಾಡಿದರೆ ಭಗವಂತನಲ್ಲಿ ಶೀಘ್ರದಲ್ಲೇ ಪರಾಭಕ್ತಿಯುಂಟಾಗಿ ಕಾಮವೆಂಬ ರೋಗವು ಕಳೆದುಹೋಗುತ್ತದೆ.

ಭಕ್ತಿಂ ಪರಾಂ ಭಗವತಿ ಪ್ರತಿಲಭ್ಯ ಕಾಮಂ
ಹೃದ್ರೋಗಮಾಶ್ವಪಹಿನೋತ್ಯಚಿರೇಣ ಧೀರಃ ||

ಎಂದು ಶುಕಮಹರ್ಷಿಗಳು ಅಪ್ಪಣೆಕೊಡಿಸಿರುವ ಫಲಶ್ರುತಿಯೂ ಇದಕ್ಕೆ ಹೊಂದಿಕೆಯಾಗುತ್ತದೆ.

ರಾಸಕ್ರೀಡೆಗೆ ಬೇಕಾಗಿದ್ದ ವಾತಾವರಣ, ಸನ್ನಿವೇಶಗಳು ಭಗವಂತನ

ಯೋಗಮಾಯೆಯಿಂದ ನಿರ್ಮಿತವಾಗಿದ್ದುವು. ಗೋಪಬಾಲಿಕೆಯರು ಚಿಕ್ಕವಯಸ್ಸಿನವರಾಗಿದ್ದರೂ ಅವರಿಗೆ ಭಗವದ್ವಿಷಯವಾದ ಉತ್ಕಟವಾದ ಕಾಮವುಂಟಾಗುವಂತೆ ಮಾಡಿದುದೂ ಶ್ರೀಭಗವಂತನ ಸಂಕಲ್ಪಶಕ್ತಿಯೇ.

ವೀಕ್ಷ್ಯ ರನ್ತುಂ ಮನಶ್ಚಕ್ರೇ ಯೋಗಮಾಯಾಮುಪಾಶ್ರಿತಃ ।

(X 29-1)

ಭಗವಂತನು ಜ್ಞಾನಾಗ್ನಿಸ್ವರೂಪನಾದವನು. ಆತನಲ್ಲಿ ಗೋಪಿಯರು ಕಾಮವನ್ನು ಸಮರ್ಪಿಸಿದರೂ ಅದು ಇಂದ್ರಿಯದ ತೇವವನ್ನು ಕಳೆದು ಕೊಂಡ ಶುದ್ಧಭಕ್ತಿಯಾಗಿ ಜ್ಞಾನರೂಪವನ್ನೇ ತಾಳುವುದು. ಇದನ್ನೇ **'ಕಾಮಾದ್ಗೋಪ್ಯೋ ಭಯಾತ್ಕಂಸಃ'** ಎಂಬ ಶ್ಲೋಕವು ಸಾರುವುದು. **'ನ ಮಯ್ಯಾವೇಶಿತಧಿಯಾಂ ಕಾಮಃ ಕಾಮಾಯ ಕಲ್ಪತೇ'** ಎಂಬ ಭಗವದ್ವಾಣಿಗೂ ಇದೇ ಆಶಯ. ಚೀರಹರಣಪ್ರಸಂಗದನಂತರ ಈ ರಾಸ ಕ್ರೀಡಾಯೋಗವನ್ನು ಹೇಳಿರುವುದರಲ್ಲಿ ಒಂದು ಸುಂದರವಾದ ಆಧ್ಯಾತ್ಮಿಕ ಧ್ವನಿಯೂ ಇದೆಯೆಂಬುದನ್ನು ಗಮನಿಸಬೇಕು. ಅಜ್ಞಾನದ ಆವರಣ ಕಳೆದು ಹೋದನಂತರ ಪರಿಪೂರ್ಣವಾದ ಆತ್ಮಾನುಭವಲಾಭವುಂಟಾಗುವುದು– ಎಂಬುದೇ ಆ ರಹಸ್ಯವಾದ ಅರ್ಥ.

ಭಗವಂತನಾದ ಶ್ರೀಕೃಷ್ಣನು ಆತ್ಮಾರಾಮನು. ತನ್ನ ಆತ್ಮಸ್ವರೂಪದಲ್ಲೇ ರಮಿಸುವ ಮಹಾಯೋಗೇಶ್ವರನು. ಆತನಿಗೆ ಗೋಪಬಾಲೆಯರೊಡನೆ ರಮಿಸಿ ಆಗಬೇಕಾಗಿದ್ದ ಲಾಭವೇನು? ಎಂದರೆ ಅದರಲ್ಲಿ ಆತನ ಸ್ವಾರ್ಥವೇನೂ ಇರಲಿಲ್ಲ. ಗೋಪಬಾಲೆಯರನ್ನು ಅನುಗ್ರಹಿಸುವುದಕ್ಕಾಗಿ, ಅವರಿಗೆ ದಿವ್ಯವಾದ ಸ್ಥಿತಿಯನ್ನುಂಟುಮಾಡುವುದಕ್ಕಾಗಿ, ಅವನು ಅವ ರೊಡನೆ ರಾಸಕ್ರೀಡೆಯನ್ನು ಆಡಿದನು–ಎಂಬುದರಲ್ಲಿ ಸಂದೇಹವಿಲ್ಲ. ಅಂಗ ಸಂಗವನ್ನು ಮಾಡುವುದರಿಂದ ಅವರಿಗೆ ಬ್ರಾಹ್ಮೀಸ್ಥಿತಿಯು ಹೇಗೆ ಉಂಟಾ ದೀತು? ಎಂದರೆ : ಅಂಗಸಂಗವನ್ನು ಮಾಡಿದವನು ಮಹಾಯೋಗೇಶ್ವರ. ಆತನ ಅನನ್ಯಭಕ್ತೆಯರಾದ ಗೋಪಿಯರೂ ಆತನ ಅಂಗಸಂಗವನ್ನು ಮಾಡಿ ದರು. ಗೋಪಿಯರೊಡನೆ ಕ್ರೀಡಿಸಿದಾಗ ಶ್ರೀಕೃಷ್ಣನು ತುರೀಯಸ್ಥಿತಿ ಯಲ್ಲಿಯೇ ನೆಲೆಸಿದ್ದನು. ಆಗ ಅವನ ಸೌರತವು ಇಂದ್ರಿಯಗಳ ಭಾವವನ್ನು ಮುಟ್ಟದೆ ಆತ್ಮಸ್ವರೂಪದಲ್ಲಿಯೇ ಪ್ರತಿಷ್ಠಿತವಾಗಿತ್ತು–ಎಂದು ಶ್ರೀಮದ್ಭಾಗ

ವತವು ಸ್ಪಷ್ಟವಾಗಿ ಸಾರುತ್ತದೆ. 'ಆತ್ಮನ್ಯವರುದ್ಧ ಸೌರತಃ'. ತನ್ನ ಆ ಪರಮಾತ್ಮಭಾವದಲ್ಲಿ ಯೋಗೇಶ್ವರನು ನೆಲೆಗೊಂಡಿರುವಾಗ ಆತನ ದರ್ಶನ, ಸ್ಪರ್ಶನ, ಆಲಿಂಗನ ಮುಂತಾದುವುಗಳೆಲ್ಲವೂ ಆ ಪರಮಾತ್ಮ ಧಾಮಕ್ಕೆ ಏರಿಸುತ್ತವೆಯೇ ಹೊರತು ಇಂದ್ರಿಯಕ್ಷೇತ್ರಕ್ಕೆ ತಳ್ಳುವುದಿಲ್ಲ. ಗೋಪಿಯರು, ಶ್ರೀಕೃಷ್ಣನು ಪರಮಾತ್ಮನೆಂದು ಅರಿತೇ ಆತನೊಡನೆ ಹಾಗೆ ಕ್ರೀಡಿಸಿದರು–ಎಂದು ಭಕ್ತಿ-ಜ್ಞಾನಸಂಹಿತೆಯಾದ ಶ್ರೀಮದ್ಭಾಗವತವು ಸ್ಪಷ್ಟವಾಗಿ ನಿರೂಪಿಸುತ್ತದೆ. ಲೋಕದ ದೃಷ್ಟಿಯಿಂದ ಆತನು ಜಾರನೆಂದು ತಿಳಿದು ಆತನೊಡನೆ ರಮಿಸಿದರೂ ಅದು ಬ್ರಹ್ಮಭಾವಕ್ಕೆ ಏರಿಸುವ ಸುರತವೇ ಹೊರತು ಭೌತಿಕಕ್ಷೇತ್ರಕ್ಕೆ ಜಾರಿಸಿ ಗೋಳಾಡಿಸುವ ಇಂದ್ರಿಯಕ್ರೀಡೆ ಯಾಗುವುದಿಲ್ಲ.

ಶ್ರೀಕೃಷ್ಣನು ರಾಸಕ್ರೀಡೆಯಾಡಿದ್ದರಿಂದ ಏನು ಪರಿಣಾಮವಾಯಿತು?– ಎಂಬುದರಿಂದಲೂ ಆ ರಾಸಕ್ರೀಡೆಯು ಧರ್ಮವೇ? ಅಧರ್ಮವೇ? ಎಂಬುದನ್ನು ನಿರ್ಣಯಿಸಬಹುದು. ಆ ರಾಸಕ್ರೀಡೆಯ ಫಲವಾಗಿ ಶ್ರೀಕೃಷ್ಣ ನಾಗಲೀ, ಗೋಪಿಯರಾಗಲೀ ಇಂದ್ರಿಯಸ್ಖಲನಹೊಂದಿದರೆಂದು ಶ್ರೀಮದ್ಭಾಗ ವತವು ಹೇಳುವುದಿಲ್ಲ. ಅದರ ಬದಲಿಗೆ ಆ ಗೋಪಿಯರಿಗೆ ವಿಕಾರರಹಿತ ವಾದ, ಪುಣ್ಯ-ಪಾಪರಹಿತವಾದ, ಜೀವನ್ಮುಕ್ತಿಸದೃಶವಾದ ಸ್ಥಿತಿಯೇ ಉಂಟಾಯಿತೆಂದು ಪುರಾಣಗಳಲ್ಲಿ ಸಾರಲ್ಪಟ್ಟಿದೆ. ಮುಕ್ತಿಯ ಸ್ಥಿತಿಯಲ್ಲಿ ಪುಣ್ಯವಾಗಲೀ, ಪಾಪವಾಗಲೀ ಯಾವುದೂ ಇರುವುದಿಲ್ಲ. 'ಶ್ರೀಕೃಷ್ಣನು ಮಾಯವಾದನಲ್ಲಾ! ಆತನು ದೊರಕಲಿಲ್ಲವಲ್ಲಾ!'–ಎಂಬ ದುಃಖದಲ್ಲಿ ಅವರ ಪಾಪವೆಲ್ಲಾ ಕರಗಿಹೋಯಿತು. ಆತನ ಸಂಗವು ಸಿಕ್ಕಿದಾಗ ಉಂಟಾದ ಆನಂದದಲ್ಲಿ ಅವರ ಪುಣ್ಯವೆಲ್ಲಾ ಕರಗಿಹೋಯಿತು. ಪುಣ್ಯ-ಪಾಪಗಳೆರಡೂ ಕಳೆದುಹೋದಾಗ ದೊರೆಯುವ ಸ್ಥಿತಿಯೇ ಬ್ರಾಹ್ಮೀಸ್ಥಿತಿ.

ತಚ್ಚಿನ್ತಾ ವಿಪುಲಾಹ್ಲಾದಕ್ಷೀಣಪುಣ್ಯಚಯಾ ಸತೀ ।
ತದಪ್ರಾಪ್ತಿಮಹಾದುಃಖವಿಲೀನಾಶೇಷಪಾತಕಾ ॥

ಶ್ರೀಕೃಷ್ಣನ ಇಡೀ ದೇಹವು ಜ್ಞಾನಾನಂದಸ್ವರೂಪವಾದುದು. ಅದರಲ್ಲಿ ವೀರ್ಯಸ್ಖಲನದ ಪ್ರಶ್ನೆಯೇ ಬರುವುದಿಲ್ಲ. ಆತನ ಪುತ್ರ-ಪುತ್ರಿ

ಯರು ಮುಂತಾದವರೂ ಆತನ ಸಂಕಲ್ಪದಿಂದ ಸೃಷ್ಟಿಸಲ್ಪಟ್ಟವರು—ಎಂದು ಭಕ್ತರು ಹೇಳುತ್ತಾರೆ.

ಆ ಶ್ರೀಕೃಷ್ಣನ ಕೊಳಲಿನ ಕರೆಯು ಇಂದ್ರಿಯಕಾಮವನ್ನು ಕೆರಳಿಸುತ್ತಿತ್ತೇ ಅಥವಾ ಆತ್ಮಕಾಮವನ್ನು ಪ್ರಚೋದಿಸುತ್ತಿತ್ತೇ ಎಂಬುದನ್ನು ಗಮನಿಸಬೇಕು. ಆ ಗೋಪಾಲಬಾಲಕನ ಮುರಳಿಯು ಮುನಿಗಳಿಗೆ ಸಮಾಧಿಯನ್ನುಂಟುಮಾಡುತ್ತಿತ್ತು ಮತ್ತು ಪ್ರಣವದ ಅರ್ಥವನ್ನು ವಿವರಿಸುತ್ತಿತ್ತು—ಎಂದು ಅಧ್ಯಾತ್ಮಗ್ರಂಥಗಳು ಘೋಷಿಸುತ್ತವೆ. **'ಮುನೀನ್ಮುಕು-ಲಯನ್.... ಓಂಕಾರಾರ್ಥಮುದೀರಯನ್ವಿಜಯತೇ ವಂಶೀನಿನಾದ ಶ್ಶೈಶೋಃ।'**

ಶ್ರೀಭಗವಂತನ ಸಾಕ್ಷಾತ್ಕಾರವನ್ನು ಸಾಧಿಸುವುದಕ್ಕೆ ಆತನನ್ನು ತಂದೆ-ತಾಯಿಗಳೆಂದು ಪುತ್ರಭಾವದಿಂದ ಭಜಿಸುವ ಮಾರ್ಗವುಂಟು. ಸ್ವಾಮಿಯೆಂದು ಭಜಿಸುವ ಸೇವಕಭಾವವುಂಟು. ಪುತ್ರನೆಂದು ಪ್ರೀತಿಸುವ ವಾತ್ಸಲ್ಯಭಾವವುಂಟು. ಹಾಗೆಯೇ ಆತನನ್ನು ಪತಿಯೆಂದೂ, ಮನೋವಲ್ಲಭನೆಂದೂ ಆರಾಧಿಸುವ ಮಧುರಭಾವದ ಭಕ್ತಿಯೋಗವೂ ಉಂಟು. ಅವುಗಳಲ್ಲಿ ಮಧುರಭಕ್ತಿಯನ್ನು ಅನುಗ್ರಹಿಸಿ ಶ್ರೀಕೃಷ್ಣನು ಗೋಪಿಯರನ್ನು ಉದ್ಧಾರಮಾಡಿದನು. ಇತರ ಯೋಗಮಾರ್ಗಗಳನ್ನು ಏಕೆ ಅವರಿಗೆ ದಯಪಾಲಿಸಲಿಲ್ಲ?—ಎಂದರೆ ಅವರ ಇಷ್ಟಕ್ಕೆ ಅನುಗುಣವಾಗಿ ಅವರ ಪ್ರಕೃತಿಗೆ ಹೊಂದಿಕೊಳ್ಳುವ ಮಾರ್ಗವನ್ನು ತಾನೇ ಭಕ್ತಿಪ್ರಿಯನಾದ ಸ್ವಾಮಿಯು ಅವರಿಗೆ ಅನುಗ್ರಹಿಸಬೇಕು! ಗೋಪಿಯರು ತಮ್ಮ ಹಿಂದಿನ ಹುಟ್ಟಿನಲ್ಲಿ ಅರಣ್ಯವಾಸಿ ಮಹರ್ಷಿಗಳಾಗಿದ್ದರು. ಅವರು ಮೋಹನರಾಮನ ರೂಪ-ಲಾವಣ್ಯಗಳಿಗೆ ಮನಸೋತು ಆತನ ಆಲಿಂಗನೆಯ ವರವನ್ನು ಪ್ರಾರ್ಥಿಸಿದಾಗ ಶ್ರೀರಾಮನು—"ನೀವು ಮುಂದಿನ ಜನ್ಮದಲ್ಲಿ ಗೋಪಿಯರಾಗಿ ನನ್ನನ್ನು ಆಲಿಂಗಿಸಿರಿ"—ಎಂದು ಅನುಗ್ರಹಮಾಡಿದ್ದನು.

ಸಹೋವಾಚ ಭಗವಾನ್ ರಾಮಚಂದ್ರಃ । ಭವಾನ್ತರೇ
ಯೂಯಂ ಗೋಪಿಕಾ ಭೂತ್ವಾ ಮಾಮಾಲಿಂಗಥ ॥

ಎಂದು ಕೃಷ್ಣೋಪನಿಷತ್ತು ಹೇಳುತ್ತದೆ. ಅದರಂತೆ ಸ್ವಾಮಿಯು

ಶ್ರೀಕೃಷ್ಣಾವತಾರದಲ್ಲಿ ಅವರಿಗೆ ಮಧುರಭಕ್ತಿಯನ್ನನುಗ್ರಹಿಸಿ ತನ್ನ ಅಂಗ ಸಂಗದ ಭಾಗ್ಯವನ್ನು ಕರುಣಿಸಿದನು.

ಶ್ರೀಕೃಷ್ಣನು ಗೋಪಿಯರೊಡನೆ ರಾಸಕ್ರೀಡೆಯಾಡಿದ್ದರಿಂದ ಅವರ ಉದ್ಧಾರವಾಗಿರಬಹುದು. ಆತನಿಗೆ ಯೋಗಭಂಗವಾಗಲಿಲ್ಲವೇ? ಎಂದರೆ ಸ್ವಲ್ಪವೂ ಆಗಲಿಲ್ಲ. ಆತನ ಬ್ರಹ್ಮಚರ್ಯಕ್ಕೆ ಕಿಂಚಿತ್ತೂ ಕುಂದುಂಟಾಗಲಿಲ್ಲ. **'ವಿಮೋಹನೇ ವಲ್ಲವಮೋಹಿನೀನಾಂ ನ ಬ್ರಹ್ಮಚರ್ಯಂ ಸ್ಖಲಿತಂ ಹಿ ಯಸ್ಯ'**, ಶ್ರೀಮನ್ಮಹಾಭಾರತದಲ್ಲಿ ನಿರೂಪಿತವಾಗಿರುವ ಒಂದು ಅದ್ಭುತವಾದ ಘಟನೆಯೂ ಇದನ್ನು ಪ್ರಮಾಣಿಸುತ್ತದೆ. ಯಾವುದು ಆ ಘಟನೆ?–ಎಂದರೆ ಅಶ್ವತ್ಥಾಮನ ಅಸ್ತ್ರಬಲದಿಂದ ಶವರೂಪವನ್ನು ಹೊಂದಿ ಹುಟ್ಟಿದ್ದ ಶಿಶು ಪರೀಕ್ಷಿತನು ಬದುಕಿಕೊಂಡ ಪ್ರಸಂಗ. "ನನ್ನಲ್ಲಿ ಬ್ರಹ್ಮಚರ್ಯವಿದ್ದು ಸತ್ಯವು ನೆಲೆಗೊಂಡು ಅವ್ಯಾಹತವಾದ ಐಶ್ವರ್ಯವೂ ಪ್ರತಿಷ್ಠಿತವಾಗಿದ್ದರೆ ಅವುಗಳ ಬಲದಿಂದ ಈ ಮಗುವು ಬದುಕಿಕೊಳ್ಳಲಿ"– ಎಂದು ತನ್ನ ಪಾದಪದ್ಮವನ್ನು ಆ ಮೃತಶಿಶುವಿಗೆ ಸೋಕಿಸಿದಾಗ ಅದು ಜೀವಿತವಾಯಿತು–ಎಂದು ಶ್ರೀಮನ್ಮಹಾಭಾರತವು ಹೇಳುತ್ತದೆ.

ಯದಿ ಮೇ ಬ್ರಹ್ಮಚರ್ಯಂ ಸ್ಯಾತ್ ಸತ್ಯಂ ಚ ಮಯಿ ತಿಷ್ಠತಿ ।
ಅವ್ಯಾಹತಂ ಮಮೈಶ್ವರ್ಯಂ ತೇನ ಜೀವತು ಬಾಲಕಃ ॥

ಶ್ರೀಕೃಷ್ಣನೊಡನೆ ರಾಸಕ್ರೀಡೆಯಾಡಿ ತಮ್ಮ ತಮ್ಮ ಮನೆಗಳಿಗೆ ಗೋಪಿಯರು ಹಿಂದಿರುಗಿದಾಗ ಅವರ ಪತಿಗಳೇ ಮುಂತಾದ ಬಂಧುಗಳು ಅವರಲ್ಲಿ ಸ್ವಲ್ಪವೂ ಕೋಪಗೊಳ್ಳಲಿಲ್ಲ. ಅವರು ತಮ್ಮ ಜೊತೆಯಲ್ಲಿಯೇ ಇದ್ದಾರೆಂದು ಆ ಬಂಧುಗಳಿಗೆ ಅನುಭವವಾಗುತ್ತಿತ್ತು. ಶ್ರೀಕೃಷ್ಣನ ಬಳಿಗೆ ಹೋಗಲು ಸಾಧ್ಯವಾಗದೇ ಇದ್ದ ಗೋಪಿಯರು ಇದ್ದಲ್ಲಿಯೇ ಶ್ರೀಕೃಷ್ಣನನ್ನು ಧ್ಯಾನಮಾಡುತ್ತಾ ಬ್ರಾಹ್ಮೀಸ್ಥಿತಿಯನ್ನು ಪಡೆದರು–ಎಂದೂ ಶುಕಶಾಸ್ತ್ರ ಶ್ರೀಭಾಗವತವು ಹೇಳುತ್ತದೆ. ಇದಕ್ಕೆಲ್ಲಾ ಕಾರಣನಾದ ಮಹಾಯೋಗ ಪುರುಷನಿಗೆ ಪಾಪದ ಸೋಂಕಾದರೂ ಹೇಗೆ ಬಂದೀತು!

ಗೋಪಿಯರು ಶ್ರೀಕೃಷ್ಣನ ಪತ್ನಿಯರಲ್ಲ. ಅವರ ಅಂಗಸಂಗದಿಂದ ಶ್ರೀಕೃಷ್ಣನು ಪರಸ್ತ್ರೀಗಮನದ ದೋಷಕ್ಕೆ ತುತ್ತಾಗಲಿಲ್ಲವೇ?–ಎಂಬ ಪ್ರಶ್ನೆಗೆ

ಶುಕಮಹರ್ಷಿಗಳೇ ಉತ್ತರ ನೀಡುತ್ತಾರೆ : ಶ್ರೀಕೃಷ್ಣನು **'ಪತಿಂ ವಿಶ್ವಸ್ಯಾತ್ಮೇಶ್ವರಗ್ಂ ಶಾಶ್ವತಗ್ಂ ಶಿವಮಚ್ಯುತಮ್'**–ಎಂಬಂತೆ ವಿಶ್ವಕ್ಕೆಲ್ಲಾ ಪತಿಯಾದವನು. ಗೋಪಿಯರಿಗೆ ಮಾತ್ರವಲ್ಲದೆ ಅವರ ಪತಿಗಳಿಗೂ ಪತಿಯಾಗಿ ಅವರಲ್ಲಿ ಅಂತರ್ಯಾಮಿಯಾಗಿರುವ ಆತ್ಮ ಸ್ವರೂಪನು. ಹೀಗಿರುವಾಗ ಗೋಪಿಯರು ಆತನಿಗೆ ಪರಸ್ತ್ರೀಯರು ಹೇಗೆ ಆದಾರು?

ಗೋಪೀನಾಂ ತತ್ಪತೀನಾಂ ಚ ಸರ್ವೇಷಾಮೇವ ದೇಹಿನಾಮ್ ।
ಯೋಽನ್ತಶ್ಚರತಿ ಸೋಽಧ್ಯಕ್ಷಃ ಕ್ರೀಡನೇನೇಹ ದೇಹಭಾಕ್ ॥

X 33/36

ವಾಸ್ತವವಾಗಿ ಶ್ರೀಕೃಷ್ಣನು ಹೇಗೆ ದೇವದೇವನಾಗಿದ್ದನೋ ಹಾಗೆಯೇ ಗೋಪಿಯರೂ ತಪಃಸ್ಸಿದ್ಧರಾದ ಮಹರ್ಷಿಗಳ ಅವತಾರವಾಗಿದ್ದರು. ಅವರ ಸಂಗವು ಯೋಗಿ-ಯೋಗೇಶ್ವರರ ಸಂಗವಾಗಿತ್ತಾದ್ದರಿಂದ ಅದರಲ್ಲಿ ಪಾಪದ ಸಂಭಾವನೆಯನ್ನು ಮಾಡುವುದಕ್ಕೂ ಎಡೆಯಿಲ್ಲ.

ಕೊನೆಯದಾಗಿ ಇನ್ನೊಂದು ಆಕ್ಷೇಪ. ಈ ರಾಸಕ್ರೀಡಾಪ್ರಕರಣದಿಂದ ಶ್ರೀಕೃಷ್ಣನಿಗೆ ಯಾವ ಪಾಪವೂ ಅಂಟದಿರಬಹುದು. ಗೋಪಿಕಾ ಸ್ತ್ರೀಯರಿಗೂ ಪುಣ್ಯ-ಪಾಪಗಳ ನಿವೃತ್ತಿಯಾಗಿ ಪರಮಾತ್ಮಸಮಾಧಿ ಉಂಟಾಗಿರಬಹುದು. ಆದರೆ ಶ್ರೀಕೃಷ್ಣನ ಆಚರಣೆಯು ಲೋಕಮರ್ಯಾದೆಯ ಉಲ್ಲಂಘನೆಯಾಗುವುದಿಲ್ಲವೇ? ಲೋಕದ ಜನರೂ ಆತನಂತೆ ಆಚರಿಸಿ ಪತಿತರಾಗುವುದಿಲ್ಲವೇ? ಧರ್ಮಸೇತುವನ್ನು ರಕ್ಷಿಸಲು ಅವತರಿಸಿದ ಶ್ರೀಕೃಷ್ಣನು ಈ ಅನಾದರ್ಶದ ಕಾರ್ಯವನ್ನು ಮಾಡಬಹುದೇ? ಎಂಬುದು ಒಂದು ಮುಖ್ಯವಾದ ಪ್ರಶ್ನೆಯೇ ಆಗಿದೆ.

ಇದಕ್ಕೂ ಉತ್ತರವನ್ನು ಶ್ರೀಶುಕಮಹಾಮುನಿಗಳು ತಮ್ಮನ್ನು ಪ್ರಶ್ನೆ ಮಾಡಿದ ಪರೀಕ್ಷಿದ್ರಾಜನಿಗೆ ಹೇಳಿ ಆತನಿಗೆ ಸಮಾಧಾನವನ್ನು ತರುತ್ತಾರೆ. ತೇಜಸ್ಸು-ಬಲಗಳಿಂದ ಕೂಡಿದ ಪ್ರಭಾವಶಾಲಿಗಳಾದ ಮಹಾತ್ಮರು ಮಾಡಿದ ಎಲ್ಲ ಕಾರ್ಯಗಳೂ ಸಾಮಾನ್ಯಜನರಿಗೆ ಅನುಕರಣೀಯವಾಗುವುದಿಲ್ಲ.

ಅವರು ನಮಗೆ ಯಾವುದನ್ನು ಮಾಡಬೇಕೆಂದು ಉಪದೇಶಿಸುತ್ತಾರೋ ಅದನ್ನು ಮಾತ್ರವೇ ನಾವು ಮಾಡಬೇಕು.

ಪ್ರಭಾವಶಾಲಿಗಳಾದ ಮಹಾತ್ಮರು ಎಲ್ಲರೂ ಮಾಡಲು ಯೋಗ್ಯವಾಗಿರುವ ಮತ್ತು ಸಾಧ್ಯವಾಗಿರುವ ಕಾರ್ಯಗಳನ್ನೇ ಯಾವಾಗಲೂ ಮಾಡಬೇಕು–ಎಂಬ ನಿಯಮವೇನೂ ಇಲ್ಲ. ಕೆಲವೊಮ್ಮೆ ಅವರು ಧರ್ಮವಿರುದ್ಧವಾಗಿರುವಂತೆ ತೋರುವ ಕೆಲಸವನ್ನೇ ವಿಶೇಷಕಾರಣಗಳಿಂದ ಮಾಡಬಹುದು. ಅದರಿಂದ ಅವರಿಗೆ ದೋಷವು ಅಂಟಿಕೊಳ್ಳುವುದಿಲ್ಲ. ಉದಾಹರಣೆಗೆ : ಅಗ್ನಿಯು ಶುದ್ಧವಾದ ಅಥವಾ ಅಶುದ್ಧವಾದ ಎಲ್ಲಾ ಪದಾರ್ಥಗಳನ್ನೂ ಭಕ್ಷಿಸುತ್ತಾನೆ. ಇದರಿಂದ ಅವನಿಗೆ ಅಶುದ್ಧಿಯು ತಗುಲುವುದಿಲ್ಲ. ಆದರೆ ಇತರರು ಅವನನ್ನು ಅನುಕರಣೆಮಾಡಿ ಕಂಡ-ಕಂಡದ್ದನ್ನೆಲ್ಲಾ ತಿಂದರೆ ಅಪಾಯಕ್ಕೆ ಗುರಿಯಾಗುತ್ತಾರೆ. ಸರ್ವೇಶ್ವರನಾದ ರುದ್ರದೇವನು ಸಮುದ್ರದಿಂದ ಉದ್ಭವಿಸಿದ ಹಾಲಾಹಲವನ್ನು ಲೋಕಕಲ್ಯಾಣದೃಷ್ಟಿಯಿಂದ ಭಕ್ಷಣೆ ಮಾಡಿದನು. ಇದರಿಂದ ಆತನಿಗೆ ಯಾವ ತೊಂದರೆಯೂ ಆಗಲಿಲ್ಲ. ಇತರರು ಆತನನ್ನು ಅನುಕರಣೆಮಾಡಿದರೆ ಒಡನೆಯೇ ನಾಶಹೊಂದುತ್ತಾರೆ.

ಧರ್ಮವ್ಯತಿಕ್ರಮೋ ದೃಷ್ಟ ಈಶ್ವರಾಣಾಂ ಚ ಸಾಹಸಮ್ ।
ತೇಜೀಯಸಾಂ ನ ದೋಷಾಯ ವಹ್ನೇಃ ಸರ್ವಭುಜೋ ಯಥಾ ॥

ನೈತತ್ಸಮಾಚರೇಜ್ಜಾತು ಮನಸಾಪಿ ಹ್ಯನೀಶ್ವರಃ ।
ವಿನಶ್ಯತ್ಯಾಚರನ್ ಮೌಢ್ಯಾದ್ಯಥಾ ರುದ್ರೋಽಬ್ಧಿಜಂ ವಿಷಮ್ ॥

X 33/30-31

ಅಂತೆಯೇ ಶ್ರೀಕೃಷ್ಣನು ಗೋಪಿಕಾಸ್ತ್ರೀಯರೊಡನೆ ಮಾಡಿದ ರಾಸಕ್ರೀಡೆಯು ಆತನ ಅದ್ಭುತವಾದ ಯೋಗೈಶ್ವರ್ಯಬಲದಿಂದ ಸಂಪನ್ನವಾದುದು. ಗೋಪಿಕಾಸ್ತ್ರೀಯರ ಉದ್ಧಾರಕ್ಕಾಗಿ ಆತನು ಅದನ್ನು ಮಾಡಿದನು. ಇತರರು ಅದನ್ನು ಅನುಕರಿಸುವ ಸಾಹಸಮಾಡಿದರೆ ಯಾರ ಉದ್ಧಾರವೂ ಆಗದೆ ಉಭಯಪಕ್ಷದವರೂ ಪತಿತರಾಗುತ್ತಾರೆ. ಭಗವಂತನು ಗೀತಾದಿ ಶಾಸ್ತ್ರಗಳಲ್ಲಿ ನಮಗೆ ಯಾವುದನ್ನು ಹಿತವೆಂದು ಉಪದೇಶಮಾಡಿದ್ದಾನೆಯೋ ಅದನ್ನು ಮಾತ್ರವೇ ಆಚರಿಸಬೇಕು. ಉಪದೇಶಗಳಲ್ಲಿಯೂ

ಎಲ್ಲ ಉಪದೇಶಗಳೂ ಎಲ್ಲರಿಗೂ ಅನ್ವಯಿಸುವುದಿಲ್ಲ. ತಮ್ಮ ಅಧಿಕಾರ, ಯೋಗ್ಯತೆ ಮತ್ತು ಸಾಮರ್ಥ್ಯಗಳಿಗೆ ಹೊಂದಿಕೆಯಾಗುವ ಉಪದೇಶಗಳನ್ನು ಮಾತ್ರವೇ ಅನುಸರಿಸಬೇಕು. ಶ್ರೀರಂಗಗುರುದೇವರು ಈ ಸಂದರ್ಭದಲ್ಲಿ ಒಂದು ಸುಂದರವಾದ ಉದಾಹರಣೆಯನ್ನು ಕೊಡುತ್ತಿದ್ದರು. ಮಹಾ ಪ್ರವಾಹವುಳ್ಳ ಮಹಾನದಿಯನ್ನು ಕೈಗಳಿಂದ ಈಜಿಕೊಂಡು ಹೋಗಿ ದಡ ವನ್ನು ಮುಟ್ಟಬೇಕು–ಎಂಬ ಉಪದೇಶವು ಎಲ್ಲರಿಗೂ ಅನ್ವಯಿಸುವುದಿಲ್ಲ. ಈಜುವ ಸಾಮರ್ಥ್ಯವುಳ್ಳವನು ಮಾತ್ರ ಅದನ್ನು ಅನುಸರಿಸಬೇಕು. ಈಜುಬಾರದವನು ಆತನನ್ನು ಅನುಕರಣೆಮಾಡಲು ಹೋದರೆ ನದಿಯ ದಡವನ್ನು ಮುಟ್ಟುವುದರ ಬದಲು ಮೃತ್ಯುವಿನ ದವಡೆಯನ್ನು ಮುಟ್ಟ ಬೇಕಾಗುತ್ತದೆ. ಅಂತಹವನು ಸಮರ್ಥನಾದ ಅಂಬಿಗನು ನಡೆಸುವ ಒಳ್ಳೆಯ ದೋಣಿಯ ಮೂಲಕ ನದಿಯನ್ನು ದಾಟಬೇಕು–ಎಂಬ ಉಪದೇಶವನ್ನು ಅನುಸರಿಸಬೇಕು.

ಹೀಗೆ ನಾನಾದೃಷ್ಟಿಗಳಿಂದ ವಿಚಾರಮಾಡಿ ನೋಡಿದಾಗ ಶ್ರೀಕೃಷ್ಣನ ರಾಸಕ್ರೀಡೆಯು ಆತನ ಚೀರಹರಣಲೀಲೆಯಂತೆ ಪರಮಪವಿತ್ರವಾಗಿ ಭಕ್ತೋದ್ಧಾರಕವಾದ ದಿವ್ಯಲೀಲೆಯೇ ಆಗಿದೆ. ಅದರಲ್ಲಿ ದೋಷದ ಲವ ಲೇಶವೂ ಇಲ್ಲ.

ಶ್ರೀ ಶ್ರೀರಂಗಪ್ರಿಯ ಶ್ರೀಪಾದ ಶ್ರೀ ಶ್ರೀಃ

License No. WPP-13 Licensed to Post without pre-payment of postage
Posted at Thayagaraja Nagar Post Office
Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.